ಜಗನ್ಮಂಗಲಕರವಾದ ಆಧ್ಯಾತ್ಮಿಕ ಸಂಸ್ಕೃತಿಯೇ ಮಾನವ ಸಂಸ್ಕೃತಿ

ಶ್ರೀಮದಖಿಲ ಸುರಾಸುರ ಶಿರೋದೇಶ ಕಿರೀಟಮಣಿ ಪ್ರಭಾ ವಿರಾಜಿತ ಪಾದಾರವಿಂದ
ಪರಮೇಶ್ವರಾಸಕ್ತಚಿತ್ತರೂ ಸಮಸ್ತ ತತ್ತ್ವತಾತ್ತ್ವಿಕವಿಚಾರ ಪಾರೀಣ
ವೇದಾನ್ತ ಸುಪ್ರಸಿದ್ಧರೂ ಆಗಿದ್ದ

**ಶಾಲ್ಯ ಕ್ಷಿತಿಪಾಲ ಶ್ರೀಮತ್ಕೃಷ್ಣರಾಜಶೇಖರ ವಿರಚಿತ**

# ಶ್ರೀಮದ್ವಿವೇಕಾಭರಣ ಕಾವ್ಯಂ

(ಶ್ರೀ ಪರಮೇಶ್ವರ ಪ್ರಾಸಾದಿಕ ತತ್ತ್ವಾರ್ಥ ಸಂದರ್ಶಿನೀನಾಮಕ ಟೀಕೆ ಸಾರಗಳೊಡನೆ)

ನೂರೈವತ್ತು ವರ್ಷಗಳಿಂದಲೂ ಅಜ್ಞಾತವಾಗಿ '**ಜ್ಞಾನಸರ್ವಸ್ವ ಸಂಗ್ರಹ**'
ಎಂಬ ಸಂಸ್ಕೃತಗ್ರಂಥದ ಸಿರಿಗನ್ನಡರೂಪವಾದ ಈ ವೇದಾನ್ತಕಾವ್ಯವು
ಶ್ರೀಮತ್ಸಚ್ಚಿದಾನಂದ ಸಹಜಾನಂದ ಭಾರತೀ ಸ್ವಾಮಿಯವರು,
ಇತರ ಮಹಾತ್ಮರು, ಬಲ್ಲ ವಿದ್ವಾಂಸರು, ಕವಿಗಳು
ಎಲ್ಲರಿಂದಲೂ ಪರಿಶೋಧಿಸಲ್ಪಟ್ಟಿದೆ.

1956



ಪ್ರಕಾಶಕರು :

**ಪಂಡಿತ ಬಿ. ಎಚ್. ರಾಮನಾಥಸ್ವಾಮಿ, ಶಾಂಕರ ವೇದಾನ್ತ ಕುಟೀರ**

**2—0—0** ಜನರ ರೂಪದಿಂದಿರುವ ಜನಾರ್ದನನ ಸೇವೆಯೆಂದೆಣಿಸಿ **3—0—0**
ಎಲ್ಲರಿಗೂ ಸುಲಭವೂ ಉಪಯೋಗಕರವೂ ಆಗಿರಲೆಂದು ಕಡಿಮೆ ಬೆಲೆಯಿಟ್ಟಿದೆ

శ్రీ, ఎం. వి. కృష్ణమాచార్యులు గారికి.
చిరంజీవి ప్రేమతో.

సప్రేమోపహారము 20.1.1974

ఉషశ్రీ

ಜಗನ್ಮಂಗಲಕರವಾದ ಆಧ್ಯಾತ್ಮಿಕ ಸಂಸ್ಕೃತಿಯೇ ಮಾನವ ಸಂಸ್ಕೃತಿ

ಶ್ರೀಮದಖಿಲ ಸುರಾಸುರ ಶಿರೋದೇಶ ಕಿರೀಟಮಣಿ ಪ್ರಭಾ ವಿರಾಜಿತ ಪಾದಾರವಿಂದ
ಪರಮೇಶ್ವರಾಸಕ್ತಚಿತ್ತರೂ ಸಮಸ್ತ ತತ್ತ್ವತಾತ್ತ್ವಿಕವಿಚಾರ ಪಾರೀಣ
ವೇದಾನ್ತ ಸುಪ್ರಸಿದ್ಧರೂ ಆಗಿದ್ದ

**ಶಾಲ್ಯ ಕ್ಷಿತಿಪಾಲ ಶ್ರೀಮತ್ಕೃಷ್ಣರಾಜಶೇಖರ ವಿರಚಿತ**

# ಶ್ರೀಮದ್ವಿವೇಕಾಭರಣ ಕಾವ್ಯಂ

(ಶ್ರೀ ಪರಮೇಶ್ವರ ಪ್ರಾಸಾದಿಕ ತತ್ತ್ವಾರ್ಥ ಸಂದರ್ಶಿನೀನಾಮಕ ಟೀಕೆ ಸಾರಗಳೊಡನೆ)

ನೂರೈವತ್ತು ವರ್ಷಗಳಿಂದಲೂ ಅಜ್ಞಾತವಾಗಿ 'ಜ್ಞಾನಸರ್ವಸ್ವ ಸಂಗ್ರಹ'
ಎಂಬ ಸಂಸ್ಕೃತಗ್ರಂಥದ ಸಿರಿಗನ್ನಡರೂಪಮಾದ ಈ ವೇದಾನ್ತಕಾವ್ಯವು
ಶ್ರೀಮತ್ಸಚ್ಚಿದಾನಂದ ಸಹಜಾನಂದ ಭಾರತೀ ಸ್ವಾಮಿಯವರು,
ಇತರ ಮಹಾತ್ಮರು, ಬಲ್ಲ ವಿದ್ವಾಂಸರು, ಕವಿಗಳು
ಎಲ್ಲರಿಂದಲೂ ಪರಿಶೋಧಿಸಲ್ಪಟ್ಟಿದೆ.

1956

ಪ್ರಕಾಶಕರು :

**ಪಂಡಿತ ಬಿ. ಎಚ್. ರಾಮನಾಥಸ್ವಾಮಿ, ಶಾಂಕರ ವೇದಾನ್ತ ಕುಟೀರ**
ನಂಬರು 15/1, 9ನೆ ಕ್ರಾಸ್, ಕಬ್ಬನ್‌ಪೇಟೆ ಬೆಂಗಳೂರು-೨.

2—0—0 ಜನರ ರೂಪದಿಂದಿರುವ ಜನಾರ್ದನನ ಸೇವೆಯೆಂದೆಣಿಸಿ 3—0—0
ಎಲ್ಲರಿಗೂ ಸುಲಭವೂ ಉಪಯೋಗಕರವೂ ಆಗಿರಲೆಂದು ಕಡಿಮೆ ಬೆಲೆಯಿಟ್ಟಿದೆ

## ಓದುಗರು ತಾವು ನೊದಲೇ ಇಲ್ಲಿ ಬರೆದಿರುವಂತೆ ತಿದ್ದುಕೊಳ್ಳಬೇಕಾಗಿ ವಿನಂತಿ

ಸಾರದಲ್ಲಿ—ಪುಟ ೧೦, ಸಾಲು ೨ ಪಾಂಡಿತ್ಯವುಳ್ಳ ಈ ಮನಸ್ಸು; ಪು ೧೧, ಸಾ ೯ ಖಂಡ; ಪು ೨೧, ಸಾ ೩೦ ಪರಾಕ್ರಮು; ಪು ೨೨, ಸಾ ೨೬ ತಡೆಯಿಲ್ಲವೆಂಬು....; ಪು ೨೪, ಸಾ ೩, ದುರ್ಮಾನಪದ; ಪು ೨೭, ಸಾ೨೦ ತಿತಿಕ್ಷೆ; ಪು೩೮, ಸಾ೧೬ ಜೀವೇಶ್ವರ; ಪು೪೦, ಸಾ೧ ವಸ್ತುಸ್ಥಿತಿನಿರ್ಣಯ; ಪು೪೨, ಸಾ೭ ಕಡುದಾವಾನಲ.

| ಪುಟ | ಸಾಲು | ಹೀಗಿರಬೇಕು |
|---|---|---|
| ೯ | ೧೩ | ಕಡಿಮೆಯ |
| ೧೫ | ೧ | ದುಃಖಿಗಳಮೇಲೆ |
| ,, | ೧೪ | ಜ್ಞಾನಕಿಂ |
| ೨೩ | ೨೧ | ಸಂಚರಿಸುವವು ೧, |
| ೩೩ | ೧೨ | ನಾಂತರದರದರಗುಣ |
| ೪೬ | ೭ | ಕಾಡಿಕೊಲುವೀ |
| ೫೫ | ೨೨ | ದುಷ್ಪದ್ರವಮನುಂ– |
| ೫೮ | ೨೫ | ಆ ಗುಣದೋಷಗಳು |
| ೬೦ | ೧೦ | ಕಿತ್ತಲತ್ತಲಿರುವ |
| ೮೮ | ೫ | ಮಗನತಾನೆಂದರೇ ಆಮಗ–। |
| ,, | ೮ | ಕಾಯ ಕರಣಾ–। |
| ೧೦೨ | ೧೧ | ಇದುವೆ ವೃದ್ಧಾನುಕ್ರಮಂ |
| ೧೧೧ | ೧೫ | ಸಾರದಯೆಯಿಂಭೂತಿ, |
| ೧೧೨ | ೧೬ | ಕಾಲದೊಳಾಗನುಮೆಯಾಣ್ಮಂ |
| ೧೧೩ | ೨೦ | ೩೩–೩೪.... ಶಬ್ದ+ಏಕವಾಚ್ಯರು |
| ೧೧೯ | ೩೦ | ....ಗಳಲ್ಲೊಂದೂ ಅಲ್ಲವೆಂಬ ಅಭಿಪ್ರಾಯವನ್ನು ಕೈಯೆತ್ತಿ ಸಾರುವ |
| ೧೨೨ | ೨೨ | (ಭಾಗವತ ೧೧–೯–೧೪,೧೫) |
| ೧೨೩ | ೪ | ....ಸಿಕನೋ ನಿದರ್ಶ....ನೊಂದೆ ॥ |
| ೧೩೦ | ೧೬ | ....ಪೇಳಧೊಡನವನ ಕೊಲಲು॥ |
| ೧೩೮ | ೨೦ | ೩೩–೩೪, |
| ,, | ೨೨ | ೩೪–ಹೊಲಮನೆಗದ್ದೆಗಳ, |
| ೧೪೫ | ೮ | ಇಂತೆನುವದೆಶೆಯಿಂದ ತಜ್ಜ್ಞ–। |
| ೧೪೬ | ೬ | ....ಕೊಡಲು ತಕ್ಕುದು, |
| ,, | ೧೯ | ....ದಾತ್ಮಾನಾತ್ಮಸಂಖ್ಯಾನಂ ॥ |
| ೧೫೦ | ೧೫ | ಯುಕ್ತಿಕೃತವಾಗೆಸೆವುದವರಿಂ । |
| ೧೫೫ | ೮ | ಸುರರರವಟಿಗೆ ಪುಟ್ಟಿತದರಿಂ । |
| ,, | ೧೩ | ....ಘಟಚಷಕಗಳಲಿ ॥ |
| ೧೫೬ | ೬ | ದೇಹಾದಿಗಳು ತತ್ಪದದೆ ॥ |
| ೧೫೯ | ೧ | ಕರ್ಮಗತಿ ವಿಚಿತ್ರ ! |
| ೧೬೭ | ೧೭ | ನಿಚ್ಚಯಂ ಇದು ಗಾಜಿನಮಣಿಯು |
| ೧೬೮ | ೧೦ | ....ತೆತ್ತಿರುವ ಬಿಡುಗಣ್ಣ ರಾನನವಂ |
| ,, | ೧೮ | ನಾತಿಶಯದೊರಕೊಳ್ಳದದರಿಂ |
| ,, | ೩೧ | ಹಿಡಿದುಕೊಂಡಿದ್ದರೂ ಅವರು, |
| ೧೮೩ | ೨೪ | +ಎನಿಪ....ಲೌಕಿಕವು+ |
| ೧೯೫ | ೩೧ | ವೈಪ....ಕದು–ಈ ವಾಸನೆಯು |
| ೨೦೯ | ೧೫ | ಮುನ್ನಲರಿಯರು, |
| ೨೧೫ | ೭ | ....ಕುಲೋಭತೆಯಂ ॥ |
| ೨೧೮ | ೩ | ಸಮಾಹಿತವೃತ್ತಿಯೋ |
| ೨೨೦ | ೧೫ | ಪಜ್ಜಳಿಪುದಂ |
| ೨೨೧ | ೨ | ಧೀರಸಂಗಂ |
| ೨೨೩ | ೨ | ....ಬಹುದಖಿಲ ಪಾಪದ–। |
| ೨೩೧ | ೨೮ | –ಸೇರದಂತೆಅದನ್ನು ತಡಗಟ್ಟುವದೆ |
| ೨೩೨ | ೫ | ಯಮಾಧಿಕಾರಿಗ–। |
| ೨೩೯ | ೨೫ | ಪ್ರಾಗ್ಬೀತ್ವಸಂಭವಾತ್, |
| ೨೪೬ | ೫ | ಅಹುದು ಜೀವನ್ಮುಕ್ತಿ |
| ೨೫೨ | ೧೮ | ಪ್ರಚುರವಾದಂಶವುದು |
| ,, | ೩೨ | ಸ್ವಶನ–ವಾಯು, |
| ೨೬೧ | ೧೯ | ಬದುಕಿನಿಂದಿವರ–॥ |
| ೨೭೭ | ೩ | ಮೋರುಗುಡಿಪುದೊ |
| ೨೮೭ | ೪ | ಸುಖಾತ್ಮಕರು |
| ,, | ೨೦ | ಒಂದಾದಂತೆ |
| ೨೯೧ | ೧ | ಗುರೂಪದೇಶದಿಂದ |
| ೩೧೨ | ೨ | ಇಲ್ಲ ದೇಹವನುಳಿದಿರುವ.... |
| ೩೧೬ | ೪ | ಷಣ್ಮಾಸ ॥ |
| ೩೨೦ | ೨೨ | +ಆಗದು....; |
| ೩೨೨ | ೧೩ | ಪುಟ್ಟಲನಿವಾರ್ಯಂ–॥ |
| ೩೨೩ | ೬ | ಕ್ಷುಲ್ಲಕಾಂಹಸ್ಸಂಗವಿಸಾತೆರ–। |
| ೩೩೦ | ೬ | ಜಗಮಾವಸತ್ತಾ–। |
| ,, | ೧೬ | ಸಹಜಕ್ಕೆ ॥ |
| ೩೪೦ | ೧೭ | ....ಕಲೆಯಿಂದಿರದೆ |
| ೩೪೩ | ೧೩ | ಚಂದ್ರರೇಖೋತ್ತಂ |

# ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರ

## ಆಶೀರ್ವಾದ

" ಶ್ರೀಯುತ ಪಂಡಿತ. ಬಿ. ಎಚ್. ರಾಘುನಾಥಸ್ವಾಮಿ - ಇವರು ಸ್ವನಿರ್ಮಿತವಾದ ಟೀಕೆಯೊಡನೆ ಸುಪ್ರಸಿದ್ಧ ಶಾಲ್ಯದರಸಿನವರ '**ವಿವೇಕಾಭರಣ**'ವೆಂಬ ಕಾವ್ಯವನ್ನು ಪ್ರಕಾಶಗೊಳಿಸುವ ಮಹಾಕಾರ್ಯವನ್ನು ಯಶಸ್ವಿಯಾಗಿ ಪೂರ್ತಿಗೊಳಿಸಿರುತ್ತಾರೆ.

ಕಾವ್ಯವು ಪದ್ಯರೂಪವಾಗಿದ್ದರೂ ಶ್ರಾವ್ಯವಾಗಿ ಓದುವಂತೆ ಇದೆ. ಪ್ರಕಾಶಕರು ಅದಕ್ಕೆ ಉತ್ಕೃಷ್ಟವಾದ ಟಿಪ್ಪಣಿಯನ್ನೂ ಜೋಡಿಸಿರುವದರಿಂದ ಅರ್ಥದ ಕ್ಲೇಶವೂ ಆಗುವಂತಿಲ್ಲ. ವಿಷಯವು ಪರಮಪುರುಷಾರ್ಥಪ್ರದವಾದ ವೇದಾಂತವೇ ಆಗಿರುವದರಿಂದ ಜೀವನಕ್ಕೆ ಆನಂದದ ಪರಿಮಳವನ್ನು ತಂದುಕೊಳ್ಳಬೇಕೆಂದು ಹಂಬಲಿಸುವವರೆಲ್ಲರಿಗೂ ಇದೊಂದು ಅಮೋಘ ಸಾಧನವಾಗಿದೆ.

ಈ ಕಾವ್ಯದ ಸಾರವನ್ನು ಪ್ರಕಾಶಕರು ನಲವತ್ತೆಂಟು ಪುಟಗಳಲ್ಲಿ ಸಂಗ್ರಹಿಸಿ ಕೊಟ್ಟಿರುತ್ತಾರೆ. ಮುಮುಕ್ಷುಗಳಾದವರು ಇದನ್ನು ಪ್ರತಿದಿನವೂ ಓದಿ ವಿಷಯವನ್ನು ಅನುಸಂಧಾನಕ್ಕೆ ಇಟ್ಟುಕೊಳ್ಳುವಂತೆ ಇರುತ್ತದೆ. ವೇದಾಂತ ಶಾಸ್ತ್ರದ ಅಮೂಲ್ಯ ತತ್ತ್ವಗಳನ್ನು ಹೀಗೆ ಸಂಗ್ರಹಿಸಿಕೊಟ್ಟದ್ದಕ್ಕೆ ಪ್ರಕಾಶಕರಿಗೆ ತತ್ತ್ವಜಿಜ್ಞಾಸುಗಳೆಲ್ಲರೂ ಕೃತಜ್ಞರಾಗಿರಬೇಕು.

ಕನ್ನಡದಲ್ಲಿ 'ಅನುಭವಾಮೃತ'ವನ್ನು ಬಿಟ್ಟರೆ ಹೇಳಿಸಿಕೊಳ್ಳುವಂಥ ಮತ್ತೊಂದು ವೇದಾಂತ ಕಾವ್ಯವು ಇಲ್ಲ ಎಂದು ಜನರಿಗೆ ಈವರೆಗೆ ತೋರುತ್ತಿತ್ತು. ಆ ಮಾತನ್ನು ಹುಸಿಯೆಂದು ತೋರಿಸಿಕೊಟ್ಟಿರುವ ಈ ಉತ್ತಮ ಕಾವ್ಯವನ್ನು ಕನ್ನಡಿಗರೆಲ್ಲರೂ ಭಾಷಾಭಿಮಾನದಿಂದಲಾದರೂ ಓದಬೇಕು. ಅದರಿಂದ ಕಾವ್ಯರಸಾಸ್ವಾದದ ಜೊತೆಗೆ ಅಂತಃಕರಣದ ವಿಕಾಸವೂ ತತ್ತ್ವದ ಸ್ಫುರಣೆಯೂ ಓದುಗರಿಗೆ ದೊರೆಯುವದೆಂಬುದರಲ್ಲಿ ಸಂಶಯವಿಲ್ಲ.

ಶ್ರೀಯುತರ ಈ ಲೋಕೋಪಕಾರದ ಸತ್ಕಾರ್ಯಕ್ಕೆ ತಕ್ಕ ಪ್ರೋತ್ಸಾಹವು ಮಹಾಜನರಿಂದ ದೊರೆಯಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ."

ಶ್ರೀ ಶ್ರೀಗಳವರ ಆಜ್ಞೆಯಂತೆ ಅಧ್ಯಾತ್ಮ ವಿದ್ಯಾಲಯದ ಪಂಡಿತನಾದ,

| | |
|---|---|
| ಅಧ್ಯಾತ್ಮ ಪ್ರಕಾಶ ಕಾರ್ಯಾಲಯ,<br>ಹೊಳೆನರಸೀಪುರ<br>ತಾ॥ 22-10-1956. | **ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,**<br>ಅಧ್ಯಾತ್ಮ ವಿದ್ಯಾಪ್ರವೀಣ-<br>ಇವರು ಬರೆದದ್ದು. |

# ಮುನ್ನುಡಿಯು

**ಗ್ರಂಥಕಾರರು, ಇವರ ಕವಿತೆಯು ಕಾವ್ಯಪ್ರಬಂಧ ನಾಟಕಾದಿ ಕೃತಿಗಳು :—** **‘ವೇದಾನ್ತಾರ್ಥ ನಿರ್ಣಯ ಶಿಖಾಮಣಿ’** ಎಂಬ ಅಪರಾಭಿಧಾನವುಳ್ಳ ಈ **‘ವಿವೇಕಾಭರಣ’**ವೆಂಬ ವೇದಾನ್ತ ಕಾವ್ಯ ಬರೆದ ಶ್ರೀ ಶಾಲ್ಯದರಸಿನವರು ಮಾನವವರ್ಗದ ಆಧ್ಯಾತ್ಮಿಕ ಉನ್ನತಿಗಾಗಿಯೇ ತಮ್ಮ ಬಾಳನ್ನೆಲ್ಲ ವಿನಿಯೋಗಿಸಿರುವ ಉದಾರಜೀವಿಗಳ ಸಾಲಿನಲ್ಲೊಬ್ಬರು. ನೂರೈವತ್ತು ವರ್ಷಗಳಲ್ಲಿದ್ದವರಾದರು ಅವರ **‘ಜೀವನ ಚರಿತೆ’**ಯ ಬಗ್ಗೆ ಮಾಡಿದ ನನ್ನ ಪ್ರಯತ್ನಗಳೆಲ್ಲ ವಿಫಲವಾದವು! ಶಿವೋಪಾಸಕರು ಉತ್ತಮ ಶ್ರೇಣಿಯ ಭಕ್ತರು ಆಗಿದ್ದ ಇವರು ತಮ್ಮ ಗ್ರಂಥ – ಕಾವ್ಯ ಪ್ರಬಂಧಗಳಲ್ಲಿ ಶ್ರೀ ದಕ್ಷಿಣಾಮೂರ್ತಿ ಗುರುವಿನ ಅಂಕಿತ ಹಾಕಿ, ಆ ಗುರುವಿಗೇ ಅವುಗಳನ್ನು ನಮಸ್ಕಾರಪೂರ್ವಕ ಸಮರ್ಪಿಸಿರುತ್ತಾರೆ. ವೇದಾನ್ತದಲ್ಲಿ ಪರಮ ವಿಶ್ವಾಸಿಗಳಾಗಿದ್ದ ಇವರು ಮಿಕ್ಕ ದರ್ಶನಗಳು ಮತಮತಾಂತರಗಳು ಅಲ್ಲದೆ, ಜ್ಯೌತಿಷ ವೈದ್ಯ ಮುಂತಾದವುಗಳಲ್ಲಿಯೂ ಉತ್ತೀರ್ಣರಾಗಿದ್ದರಲ್ಲದೆ, ಕನ್ನಡ ಸಂಸ್ಕೃತ ಆಂಧ್ರಭಾಷೆಗಳಲ್ಲಿ ನುರಿತ ಸಾಹಿತಿಗಳೂ ಕವಿಗಳೂ ಆಗಿ, ಉತ್ತಮವರ್ಗದ ವಿರಕ್ತರ ಸಾಲಿನಲ್ಲಿ ಪರಮಗಣ್ಯರಾಗಿದ್ದರೆಂದೂ ಗೊತ್ತಾಗುತ್ತದೆ. ಮೈಸೂರಿಗೆ ಸೇರಿಡ ಶ್ರೀರಂಗಪಟ್ಟಣದಲ್ಲಿ ತಮ್ಮ ಗುರುಗಳೊಡನೆ ಅನೇಕ ವರ್ಷಗಳು ಶರೆಮನೆಯಲ್ಲಿದ್ದು, ಟೇಪುಸುಲ್ತಾನನಿಂದ ತಾನಾಗಿ ಬಿಡುಗಡೆಯನ್ನು ಹೊಂದಿದ ಬಳಿಕ ಮೈಸೂರಿನಲ್ಲಿ ದೊಡ್ಡ ಒಕ್ಕಲಗೇರಿಯಲ್ಲಿ ಕೆಲವು ಕಾಲವಿದ್ದು ದೊಡ್ಡ ಬಂಗಲೆಯ ಪಾರ್ಕಿನಲ್ಲಿ ಶಿವೈಕ್ಯರಾದರೆಂದು ಅವರಲ್ಲಿ ವಿಶ್ವಾಸವಿಟ್ಟವರ ಹೇಳಿಕೆ.

ಇವರು ಸಂಸ್ಕೃತಾಂಧ್ರ ಕನ್ನಡ ಭಾಷೆಗಳಲ್ಲಿ ಹತ್ತಾರು ಕಾವ್ಯ – ಗ್ರಂಥ ಕವಿತೆಗಳನ್ನು ಬರೆದಿದ್ದರೂ ‘ನಿಜದೀಪಿಕಾರತ್ನ’, ‘ಅನುಭವ ರಸಾಯನ’, ‘ಭಕ್ತಿಮಾರ್ಗ ಜ್ಞಾನಮಾರ್ಗ ಸರೋವರ ಕೀರ್ತನೆಗಳು’ ಮಾತ್ರ ೬೦–೭೦ ವರ್ಷಗಳ ಹಿಂದೆಯೆ ಬೆಳಕಿಗೆ ಬಂದ ಅವು ಈಗ ನಿಂತುಹೋಗಿಬಿಟ್ಟವೆ! ಇವರು ‘ನಿಜದೀಪಿಕಾರತ್ನ’ವನ್ನು ಬರೆದ ೫೨ ವರ್ಷಗಳ ಅನಂತರ (೧೦೫ ವರ್ಷಗಳ ಹಿಂದೆ) ಕನ್ನಡ ಸಂಸ್ಕೃತಾಂಧ್ರ ಕವಿಗಳಾಗಿದ್ದ ತಿರುಮಲ ಸೋಮನಗರದ **‘ಶ್ರೀಮದ್ವೇದಾನ್ತ ರಾಘವಾಚಾರ್ಯರು ಆಸ್ಥಾನ್ ವಿದ್ವಚ್ಚೂಡಾಮಣಿ’** ಎಂಬವರು ಅದಕ್ಕೆ ಟೀಕೆಯನ್ನು ಮಾಡಿರುತ್ತಾರೆ. ಅರಸಿನವರು ಸನ್ ೧೮೮೬ ರಲ್ಲಿ ತಾವು ಬರೆದ ಈ **‘ವಿವೇಕಾಭರಣ’** ಎಂಬ ತಮ್ಮ ಚರಮಕಾವ್ಯಕ್ಕಿಂತ ಹದಿನೇಳು ವರ್ಷಗಳ ಹಿಂದೆಯೆ ಆ ‘ನಿಜದೀಪಿಕಾರತ್ನ’ವನ್ನು ತಾವು ರಚಿಸಿರುತ್ತಾರೆ.

**ಮಾನವ ಸಂಸ್ಕೃತಿ :—** ಜಗತ್ತಿನ ಸೃಷ್ಟಿಯನ್ನು ಮಾಡಬೇಕೆಂಬ ಸಂಕಲ್ಪವುಳ್ಳ ಶ್ರೀ ವಿಷ್ಣುವಿನ ನಾಭೀಕಮಲದಿಂದ ಹೊರದೋರಿದ ಬ್ರಹ್ಮದೇವನು ಜಡಚೇತನ ಸೃಷ್ಟಿಯನ್ನು ಮೊದಲು ಮಾಡಿದ್ದರು ಅದು ತನ್ನಲ್ಲಿ ಹೆಚ್ಚದಿರುವದನ್ನು ಮನಗಂಡು ಪುನಃ ಸೃಷ್ಟಿಯ ವಿಸ್ತಾರಕ್ಕಾಗಿ ಅವನು ತನ್ನ ದೇಹದಲ್ಲಿ ಎರಡು ಶೀಳುಮಾಡಿ, ಸ್ತ್ರೀ ಪುರುಷರೆಂಬ ಮಿಥುನ ಸಮೂಹದ ಸೃಷ್ಟಿಯನ್ನು ಅದರಿಂದ ಮಾಡಿದನು. ಸ್ವಾಯಂಭುಮನುವು ಮತ್ತು ಶತರೂಪ ಎಂಬ ಕನ್ಯಾ ಎಂಬವರೆ ಅವರಿಬ್ಬರು (ಭಾಗವತ ೩–೧೨); ಆ ಸ್ವಾಯಂಭು ಮನುವಿನಿಂದ

ಹುಟ್ಟಿಬಂದವರೇ ಮಾನವರು. ಬೆಂಕಿಯ ಕಿಡಿಯು ಬೆಂಕಿಯನ್ನು, ಸುವರ್ಣದ ಕಟಕಮುಕುಟಾದಿಗಳು ಸುವರ್ಣವನ್ನು ಬಿಟ್ಟು ಅವಿರುವದಕ್ಕಿಲ್ಲದಂತೆ; ಮಾನವರು ಕೂಡ ತಮ್ಮ ಮೂಲ ಸ್ವರೂಪ - ಪರಮಾತ್ಮನನ್ನು ಬಿಟ್ಟಿರುವದಕ್ಕಿಲ್ಲವಾದರು ತಮ್ಮ ಹೃದಯದಲ್ಲಿಯೇ ಇರುವ ಅವನನ್ನು ವಿಷಯವ್ಯಾಪೃತಿಯಿಂದ ಮರತುಬಿಟ್ಟಿರುತ್ತಾರೆ. ಅವರೇ ತಮ್ಮ ಬುದ್ಧಿಯನ್ನು ಬ್ರಹ್ಮಚರ್ಯಾದಿ ತಪಸ್ಸುಗಳಿಂದ ಪ್ರಸನ್ನಗೊಳಿಸಿಕೊಂಡರೆ, ಅದರಿಂದ ಸಾರಾಸಾರಗಳನ್ನು ವಿವೇಕಿಸಿ, ಈ ಜಗತ್ತಿಗೆ ಪರಮಸಾರವಾಗಿರುವ ಪರಮಾತ್ಮನನ್ನು ಕಂಡು - ಆತ್ಮರೂಪದಿಂದ ತಮ್ಮ ಹೃದಯದಲ್ಲಿಯೇ ಸಾಕ್ಷಾತ್ಕರಿಸಿಕೊಂಡು ಸುಖದಿಂದ ವಿಶ್ರಮಿಸುವರು. ಈ ಸುಸಂಸ್ಕೃತಿಯು ಭಾರತಿಯರಾದ ನಮಗೆಲ್ಲ ಋಷಿಗಳ ಕಾಲದಿಂದಲೂ ರಕ್ತಗತವಾಗಿ ಬಂದಿರುತ್ತದೆ.

ನಮ್ಮ ದೇಶದ ಸಾಧುಸಂತರು ಪರಮಾತ್ಮನಲ್ಲಿ ಬೆರತ ಪ್ರೇಮಭಕ್ತರು, ಇಡಿಯ ಜಗತ್ತಿನಿಂದ ಹಿಂದಿರುಗಿದ ತ್ಯಾಗಿಗಳು ಅಲ್ಲದೆ, ಸತ್ಕರ್ಮನಿಷ್ಠರು. ಧರ್ಮಪರಾಯಣರು, ಉದಾರ ಚರಿತರು, ಧಾರ್ಮಿಕ ಜೀವಿಗಳು ಎಲ್ಲರೂ ಇದನ್ನವಲಂಬಿಸಿಯೇ ಜೀವಿಸಿಕೊಂಡಿದ್ದರು. ಶಮ ದಮಾದಿಗಳಿಂದ ಸಂಸ್ಕೃತರಾಗಿರುವದರ ಜತೆಗೆ - ಅವರು ಭೂತದಯೆ, ಆರ್ಜವ, ಆಸ್ತಿಕ್ಯ ಬ್ರಹ್ಮಚರ್ಯಾದಿ ತಪಸ್ಸು ಇವುಗಳಿಂದಲೂ ಕೂಡಿರುತ್ತಿದ್ದರು. ಆರ್ಥಿಕಸಂಪತ್ತು ಅವರನ್ನು ಬಿಟ್ಟುಹೋಗುತ್ತಿರಲಿಲ್ಲ. ಸಂಸಾರ ಭೋಗಗಳಲ್ಲಿ ಮಿತವಾಗಿರುತ್ತಿದ್ದ ಅವರೇ ಸಂಸಾರದಲ್ಲಿ ಸುಖಿಗಳಾಗಿರುತ್ತಿದ್ದರು! ಯಥಾಲಾಭ ಸಂತುಷ್ಟರಾಗಿರುತ್ತಿದ್ದ (ಭಾಗವತ ೧೨-೩೮) ಅವರು ಇಹಪರ ಸುಖಗಳನ್ನೂ ಸೂರೆಗೊಳ್ಳದೆಬಿಡುತ್ತಿರಲಿಲ್ಲ!

**ಮಾನವನು ಬುದ್ಧಿಜೀವಿಯು** :— ಬರಿಯ ಹೊಟ್ಟೆ ಬಟ್ಟೆಗಾಗಿ ಬದುಕುವ ಪಶುಜೀವಿಯಲ್ಲದ ಮನುಷ್ಯನು ಇಂದ್ರಿಯ ಭೋಗಗಳಿಂದಲೇ ತನ್ನನ್ನು ಕೃತಕೃತ್ಯನೆಂದು ಬಗೆಯುವ ತುಚ್ಛಸ್ವಭಾವದವನಾಗಿರುವದಿಲ್ಲ, ಐಹಿಕಸುಖದಲ್ಲಿ ತರತಮಾದಿಗಳ ದೃಷ್ಟಿಕೋಣವುಳ್ಳವನಾಗಿರುವನು. ದುಃಖ ಬೆರೆಯದ ನಿತ್ಯಸುಖದ ಕಡೆ ತನ್ನ ಗಮನವನ್ನಿಟ್ಟಿರುವನು. ಮುಂದಿನ ತನ್ನ ಸುಖಜೀವನಕ್ಕೂ ತನ್ನ ಕಾಲಾನಂತರದಲ್ಲಿ ತನ್ನವರ ಜೀವನಕ್ಕಾಗಿಯೂ ಪ್ರಯತ್ನಿಸುತ್ತಿರುವದನ್ನು ಮನಗಂಡರೆ ಪಶುಗಳಿಗಿಂತ ಮಾನವರಲ್ಲಿರುವ ವೈಶಿಷ್ಟ್ಯವೆದ್ದು ಕಾಣದೆ ಇಲ್ಲ. ವಿವೇಕಿಗಳು ಈ ಲೋಕದಲ್ಲಿ ಸುಖಿಸುವ ನಿರಾತಂಕಮಾರ್ಗವನ್ನಲ್ಲದೆ, ದೇಹಕ್ಕಿಂತ ಬೇರೆಣಿಸಿಕೊಂಡ ತಮ್ಮ ಆತ್ಮನ ಸುಖಕ್ಕಾಗಿ, ಪರಲೋಕಸಾಧನೆಯ ಮಾರ್ಗದಲ್ಲಿಯೂ ಹೆಜ್ಜೆಯನ್ನಿಡುತ್ತಿರುವರು. ಮೇಲಾಗಿ ತನ್ನ ನಿಜವೇನು? ತಾನು ಜನ್ಮಿಸುವದಕ್ಕೆ ಕಾರಣವೇನು? ಜಗತ್ತಿನ ಜಡಚೇತನ ಜೀವರಲ್ಲಿ ಕಾಣುವ ಈ ವೈಚಿತ್ರ್ಯಕ್ಕೂ ವಿಭಿನ್ನಭೋಗಗಳಿಗೂ ನಿಮಿತ್ತವೇನಿರಬಹುದು? ಎಂದು ಮುಂತಾಗಿ ತಮ್ಮೊಳಗೆ ಆಲೋಚಿಸಿಕೊಳ್ಳುತ್ತಲು ಇರುತ್ತಾರೆ. ಹೀಗಿರುವ ಮನುಷ್ಯನನ್ನು ಪಶುಜೀವಿಯೆನ್ನುವದು ಸರಿಯೆನ್ನುವದಕ್ಕಿರುವದಿಲ್ಲ. ಮಾನವನು ಹೀಗೆ ಆಲೋಚನೆಯಿಂದ ಕೂಡಿ ಜೀವಿಸುತ್ತಿರುವನು. ಆದ್ದರಿಂದ ಬುದ್ಧಿಜೀವಿಯಾದ ಮಾನವನು ಮನುಷ್ಯನು ಎನ್ನಿಸಿಕೊಂಡಿರುತ್ತಾನೆ.

ಈ ಬಗೆಯಿಂದಿರುವ ಮನುಷ್ಯರಿಗೆ ಪರಮ ಪುರುಷಾರ್ಥಸಾಧನವಾದ ವಿವೇಕವೆಂಬ ಮೇಲ್ತರದ ಕಣ್ಣು ತೆರೆಯಿಸುವದಕ್ಕೆಂದೇ 'ವಿವೇಕಾಭರಣ' ಎಂದು ಈ ವೇದಾಂತ ಕಾವ್ಯವು ಅವತರಿಸಿರುತ್ತದೆ. ಆತ್ಮಾನಾತ್ಮ ವಿವೇಕಬಾಹಿರರಾಗಿ, ಬರಿಯ ಸಂಸಾರದ ಪಶುಭೋಗ

ಕ್ಕಾಗಿಯೇ ತಾವು ಬಾಯ್ಬಾಯಿ ನೀರುಗರೆಯುತ್ತಿರುವ ಹೊರಗಿನ ಭೂಮಿಯ ದ್ವೀಪಾಂತರದವರ ಜೀವನವನ್ನು ಕಣ್ಣಿಟ್ಟು ನೋಡಿರಿ, ಅದು ಎಣಿಸುವದಕ್ಕಿಲ್ಲದಷ್ಟು ದುಃಖಮಯವಾಗಿ ಕ್ಷಣಕ್ಷಣವೂ ಹೇಗೆ ಗೋಳಾಡಿಸುತ್ತಲಿರುವದು? ಸಂಸಾರ ಸುಖದಲ್ಲಿ ತೃಪ್ತಿಗವಕಾಶವಿಲ್ಲದ ಅದು ರಾಗ ದ್ವೇಷಾದಿಗಳೆಂಬ ಶಸ್ತ್ರಾಸ್ತ್ರಗಳ ಅಂಜಿಕೆಯಿಂದೊಡಗೂಡಿ ರೂಪಾಂತರದಿಂದ ತನ್ನ ರೂಪನ್ನು ಮಾರ್ಪಡಿಸಿಕೊಳ್ಳುತ್ತ ನಿಲ್ಲುವದಕ್ಕಿಲ್ಲದೆ ಮಣ್ಣುಪಾಲಾಗುತ್ತಿರುವದು! ಹಗಲಿರುಳೆನ್ನದೆ ಯಂತ್ರಗಳಂತೆ ದುಡಿದುಡಿದು ಬೆಂಡಾಗುತ್ತಿರುವ ಅವರು ತಮ್ಮ ಶರೀರೇಂದ್ರಿಯಗಳಲ್ಲಿ ಕ್ಷಣವಾದರು ನಿಲ್ಲುವದಕ್ಕಿಲ್ಲದ ಭೋಗದ ತುರಿಗಜ್ಜಿಯಿಂದ ಪೀಡಿತರಾಗುತ್ತಿರುವದು ಅವರಿಗೆ ತಪ್ಪಿದ್ದಲ್ಲ! ಕನಸಿನಲ್ಲಾದರು ಸುಖದ ಗಂಧ ಕಾಣುವದಕ್ಕಿಲ್ಲದ ಅವರ ಭೋಗದಾಶೆಗಳು ಅರೆಭೋಗದಲ್ಲಿಯೇ ದುಃಖದ ಕಂಬನಿಗಳನ್ನು ಕೂಡಿಸಿದ ಅವರಲ್ಲಿ ಹೆಸರಿಸುವದಕ್ಕಿಲ್ಲದಂತೆ ತಮ್ಮಲ್ಲಿ ಕರಗಿಹೋಗುತ್ತಿರುವವು. ಈ ಬಗೆಯ ವಿಪತ್ತುಗಳಿಂದ ನಮ್ಮ ಭಾರತಿಯರನ್ನು ಪಾರುಗಾಣಿಸುವದರಲ್ಲಿ ಈ ಕಾವ್ಯವು ಹರಿಗೋಲುಳ್ಳ ದೋಣಿಯಾಗಿರುವದು. ಇಹಪರ ಸುಖಗಳ ಬೊಕ್ಕಸವೂ ತಿಳಿವಳಿಕೆಗಳೆಲ್ಲದರ ಸಿವುಡೂ ಆಗಿರುವ **ವಿವೇಕ** ಎಂಬುದು ಪಿತ್ರಾರ್ಜಿತ ಸ್ವತ್ತು ಅಥವಾ ಹೂತಿಟ್ಟಿರುವ ನಿಧಿಯು ಇವುಗಳಂತೆ ಭಾರತಿಯರಿಗೆಲ್ಲ ಆಪತ್ಕಾಲದ ಅಕ್ಷಯ ಭಂಡಾರವಾಗಿರುವದಲ್ಲದೆ, ತೊಡುಗೊರೆಯಂತೆ ಅತಿಶಯದಿಂದ ಶೋಭಿಸುವ **ಭೂಷಣ**ವೂ ಆಗಿರುವದರಿಂದಲೇ '**ವಿವೇಕಾಭರಣ**' ಎಂಬ ಅನ್ವರ್ಥನಾಮವು ಇದಕ್ಕುಂಟಾಗಿರುವದು. ಈ ಅಲಂಕಾರವು ದೇವಾಸುರರಿಗೂ ಅನಿತರ ಸಾಧಾರಣವೆಂದರೆ ಹೆಚ್ಚಲ್ಲ! ನಮ್ಮ ಕನ್ನಡನಾಡಿನ ಸಹಜಾತರಿಗೆಲ್ಲ ಪರಮಹಿತವನ್ನು ಬಯಸಲಿರುವ ಇದು ಓದುಗರಿಗೆ ಹಳೆಗನ್ನಡದಲ್ಲಿ ಉತ್ತಮ ಸಾಹಿತ್ಯದ ಪರಿಚಯವನ್ನು ಒದಗಿಸುವಂತಿರುವ ಈ ಹೊತ್ತಿಗೆಯನ್ನು ನಮ್ಮ ಘನ ಸರಕಾರವು ಮೇಲಿನ ಶಿಕ್ಷಣಶಾಲೆಗಳಲ್ಲಿ ಉತ್ತಮ ತರಗತಿಯ ಪಠ್ಯಪುಸ್ತಕಗಳ ಸಾಲಿನಲ್ಲಿ ಸೇರಿಸಿದರೆ ಅದರಿಂದ ನಮ್ಮ ದೇಶಕ್ಕೆ ಅನಿರೀಕ್ಷಿತವಾಗಿ ಒಂದೊಂದೂವರೇ ಶತಮಾನದಿಂದ ಬಂದಿರುವ '**ನವನಾಗರಿಕತೆ**'ಯ **ನಸರಾರು** ಸಾಂಕ್ರಮಿಕ ಜಾಡ್ಯಗಳಿಂದ ಈ ನಾಡು ಪಾರಾಗಿ, ಹಿಂದಿನ ನಮ್ಮ ಪೂಜ್ಯ ಋಷಿಗಳ ಸಂಸ್ಕೃತಿಗೆ ಏರಿ '**ಸ್ವತಂತ್ರಭಾರತ**' ಎಂಬ ತನ್ನ ಘನತೆಯ ಹೆಸರಿನಿಂದ ಒಪ್ಪುವದರಲ್ಲಿ ಸಂಶಯಕ್ಕೆಡೆಯಿಲ್ಲ.

**ಈ ವೇದಾಂತ ಕಾವ್ಯದ ವೈಶಿಷ್ಟ್ಯ** :—ಮೊದಲ ಗುರುಗಳಾದ ಶ್ರೀ ಶಂಕರ ಭಗವತ್ಪಾದರು ಬ್ರಹ್ಮಸೂತ್ರ ಭಾಷ್ಯದ ಭೂಮಿಕೆಯಾಗಿ ಉಪನಿಷತ್ತುಗಳ ಸಾರವೆಂದು ವಿದ್ಯಾವಿದ್ಯೆಗಳ ವಿವರವಾಗಿ '**ಅಧ್ಯಾಸ**'ವನ್ನು ನಿರೂಪಿಸಿರುವರಷ್ಟೆ?

(೧) ಆ ಅಧ್ಯಾಸ ವಿಚಾರವನ್ನೆ ಪುನಃ ಪುನಃ ಚೆನ್ನಾಗಿ ಬಿಡಿಸಿ ಸಂಪೂರ್ಣವಾಗಿ ಹೇಳಿಬಿಡಬೇಕೆಂದೇ ಈ ಗ್ರಂಥವು ಪ್ರಾರಂಭಿಸಿರುವಂತಿರುತ್ತದೆ. (೨) ಅದ್ವೈತ ಸಂಪ್ರದಾಯದ ಗುರುಪರಂಪರೆಯನ್ನು ಹೊಗಳಿ, ಶ್ರೀ ಶಂಕರ ಭಗವತ್ಪೂಜ್ಯಪಾದರನ್ನೇ ಪರಮಗುರುಗಳೆಂದು ಬಹುವಾಗಿ ಗೌರವಿಸಿರುತ್ತದೆ. (೩) ಶ್ರುತಿ ಸ್ಮೃತಿ ಪುರಾಣಗಳನ್ನಲ್ಲದೆ, ಶ್ರೀ ಶಾಂಕರ ಭಾಷ್ಯಾರ್ಥಗಳ ನೆರವಿನಲ್ಲಿಯೇ ತಾವು ಕಾವ್ಯವನ್ನು ಬರೆದಿರುವಂತೆ ಶಂಕರ ಗುರುಗಳನ್ನು ಅಲ್ಲಲ್ಲಿ ಉಲ್ಲೇಖಿಸಿ, ತಮ್ಮ ಕಾವ್ಯಕ್ಕೆ ಪ್ರಮಾಣೀಕರಿಸಿರುತ್ತದೆ. (೪) ತಾವು ತತ್ತ್ವೈಕ್ಯಕ ಪಕ್ಷಪಾತಿಗಳಾಗಿಯೇ ವಿಚಾರಗಳನ್ನು ನಡೆಸಿರುವದಲ್ಲದೆ, ಅವನ್ನು ಉಪನಿಷತ್ಸಂಪ್ರದಾಯದ ತಳಗಟ್ಟಿನ ಮೇಲೆಯೇ ಭದ್ರಪಡಿಸಿರುತ್ತದೆ.

ಬಿಡದಂತೆ ಎಲ್ಲರಿಗೂ ಸಂಸಾರಾನರ್ಥ ಹೇತುವಾಗಿರುವ ಅಧ್ಯಾಸವನ್ನು (೧-೧; ೫-೩೮) ಅಲ್ಲದೆ, ಇದರ ವಿವರವನ್ನು (೩-೪೦; ೪-೨೨, ೭೭; ೫-೩೬, ೪೪; ೧೩-೩೧, ೩೨, ೪೨, ೬೭....೭೧; ೧೪-೧೨, ೨೮;) ಹೇಳಿ, ಈ ಅಧ್ಯಾಸ ಹೋದರೆ ಅಜ್ಞಾನ ಹೋದಂತೆಯೇ ಎಂದೂ, ಅಜ್ಞಾನವು ಆ ಅಧ್ಯಾಸಕ್ಕಿಂತಲೂ ಬೇರಿರುವದಿಲ್ಲ (೧೩-೫೯) ಎಂದೂ, ಮಿಥ್ಯಾಜ್ಞಾನವೇ ಸಂಸಾರಕಾರಣ (೧೩-೪೪) ಎಂದೂ ಹೇಳಿರುತ್ತಾರೆ. ಮತ್ತು ಅವಿದ್ಯಾಕಾಮಕರ್ಮಗಳನ್ನೆ ಸಂಸಾರ ಕಾರಣವೆಂದಿರುವದಲ್ಲದೆ, ಅವು ಕರಣವಾದ ಬುದ್ಧಿಯ ದೋಷಗಳೆಂದೂ ಹೇಳಿರುತ್ತದೆ. ಸಂಶಯ ಮಿಥ್ಯಾ ಜ್ಞಾನಾಭಾವವೆಂಬ ಅಜ್ಞಾನತ್ರಯವನ್ನು (೧೩-೫೬) ಹೇಳಿರುವದಲ್ಲದೆ, ನೈಷ್ಕರ್ಮ್ಯಸಿದ್ಧಿಕಾರರಂತೆ ಅಜ್ಞಾನಕ್ಕಭಾವರೂಪನ್ನು (೧೩-೫೯), ಜ್ಞಾನಫಲವಾದ ಸದ್ಯೋಮುಕ್ತಿ (೧೬-೩೦, ೩೧, ೩೨) ಯನ್ನು ಹೇಳಿರುವ ಈ ವಿಚಾರಗಳು ವೇದಾಂತ ಪ್ರೇಮಿಗಳೆಲ್ಲರನ್ನು ಬಿಡದೆ ತಲೆದೂಗಿಸುವಂತಿರುತ್ತದೆ; ಈ ಗ್ರಂಥಕ್ಕೆ ಬರೆದಿರುವ ಟೀಕೆ ಮತ್ತು ಸಾರಗಳೂ '**ಶಾಂಕರ ವೇದಾಂತ ಪ್ರಕ್ರಿಯೆ**ಗಳಲ್ಲಿ ಯಾವರೀತಿಯಿಂದಲಾದರು ಮುಮುಕ್ಷುಗಳ ಪ್ರವೇಶಕ್ಕನುವಾದರೆ ಸರಿ' ಎಂಬ ಸಮುದ್ದೇಶದಿಂದ ಅಂತೆಯೇ ಸರಿಹೊಂದಿಸಿ ಬರೆದಿರುವದರಿಂದ ಸಂಪ್ರದಾಯ ವಿಶ್ವಾಸಿಗಳಾದ ತತ್ತ್ವಜಿಜ್ಞಾಸುಗಳಿಗೆ ಅವು "ಅಕಂಟಕ ವೇದಾಂತ ಪ್ರಕ್ರಿಯೆ"ಗಳ ಸವಿಯನ್ನು ಮನಗಾಣಿಸಿಕೊಟ್ಟು, ಅವರನ್ನು ಆನಂದಪಡಿಸುವಂತಿರುತ್ತದೆ.

ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕ ಎಂಬ ತಾಪತ್ರಯಗಳನ್ನು ಒಂದೊಂದು ಸಂಧಿಯಲ್ಲಿ ವಿಸ್ತಾರವಾಗಿ ವಿವರಿಸಿದ್ದರೂ ಅವುಗಳಲ್ಲಿ ಪುನಃ ಮೂರು ಮೂರಾಗಿ ವಿಂಗಡಿಸಿ, ಆ ಒಂದೊಂದು ಸಂಧಿಯಲ್ಲಿಯೂ ಬಿಡದೆ ಉತ್ತಮಖಂಡದ ದುಃಖ, ಮಧ್ಯಮಖಂಡದ ದುಃಖ ಮತ್ತು ಅಧಮಖಂಡದ ದುಃಖಗಳು ಎಂದು ತನ್ನದೇ ಒಂದು ಹೊಸಪರಿಯಲ್ಲಿ ಹೇಳಿರುವ ಆ ವಿಭಿನ್ನಪ್ರಕಾರಗಳು ಈ ಗ್ರಂಥಕ್ಕೇ ಮೀಸಲಾಗಿರುವಂತೆ ಕಾಣುತ್ತದೆ. ಇದರಲ್ಲಿ ವಿಚಾರಕ್ಕೆ ಕೊಟ್ಟಿರುವ ಗೌರವಸ್ಥಾನವನ್ನು (೧೩-೫), ವೇದಾಂತಗಳ ಉತ್ತಮ ಸಿದ್ಧಾಂತಗಳನ್ನು (೧೩-೯೨....೪೬) ಅಲ್ಲದೆ, ಮಾನವನ ಸಂಸ್ಕೃತಿಗನುಗುಣವಾಗಿರುವ ಧಾರ್ಮಿಕನೀತಿ ವಿಚಾರಗಳು, ತತ್ತ್ವಬೋಧೆಗಳು, ವಿಮರ್ಶನೀಯ ವಿಚಾರಗಳು (೧೦-೪೯....೫೩; ೧೩-೪೨; ೧೫-೪, ೧೬....೧೮) ಹೃದಯಂಗಮವಾಗಿ ರೂಪಕಮಾಡಿ ವರ್ಣಿಸಿರುತ್ತದೆ. ಮತ್ತು ಈ ಚಿನವರಲ್ಲಿ ಸಂಪ್ರದಾಯಾನುಸಾರವಾಗಿ ಬಂದಿರುವ ಸಪ್ತಭೂಮಿಕೆಗಳನ್ನು, ಜೀವನ್ಮುಕ್ತನ ಪ್ರೀಜಾಫಲಗಳನ್ನು ಅಲ್ಲದೆ, ಈ ವೇದಾಂತಗ್ರಂಥದ ಅನಿತರ ಸಾಧಾರಣ ಫಲಗಳನ್ನು (೧೮-೪೦....೪೫) ವಿವರಿಸಿರುವದರ ಜತೆಗೆ ವಸ್ತುನಿರ್ದೇಶರೂಪ ಅದ್ವೈತ ಬ್ರಹ್ಮಾತ್ಮನ ನಮಸ್ಕಾರರೂಪ ಮಂಗಲವನ್ನು (೧೮-೩ .....೧೪) ಮಾಡಿರುವದು 'ಸ್ವಸ್ವರೂಪಾನುಸಂಧಾನ'ಮಾಡುವ ಮುಮುಕ್ಷುಗಳಿಗೆ ಅತ್ಯಂತೋಪಯುಕ್ತವಾಗಿದೆ. ಸರ್ವ ಶಾಸ್ತ್ರಾರ್ಥರೂಪವಾಗಿ ತತ್ತ್ವವಿಚಾರವೊಂದಕ್ಕೇ ಒಲಿದಿರುವ (೧೩-೩) ಈ ಗ್ರಂಥವು ಹೊಸ ರೂಪುರೇಖೆಗಳಿಂದ ತನ್ನ ವಿಷಯಗಳನ್ನು ಚಿತ್ರಿಸಿ ಓದುಗರ ಮನಸ್ಸನ್ನು ತನ್ನ ಕಡೆ ಬರಸೆಳೆದಿರುವದಲ್ಲದೆ, ಅವರಿಗೆ ಉತ್ತಮ ಪರಿಣಾಮಕಾರಿಯೂ ಆಗಿರುವದು. ನಿರ್ದಿಷ್ಟಸ್ಥಳ-ಸಂಧಿಗಳಲ್ಲಿ ತನ್ನ ವಿಷಯಗಳನ್ನಿಟ್ಟು ಅವುಗಳನ್ನು ವಿಮರ್ಶಿಸಿರುವದು, ಅದಕ್ಕಾಗಿ ಹದಿನೆಂಟು ಸಂಧಿಗಳಾಗಿ ಗ್ರಂಥವನ್ನು ವಿಭಾಗಿಸಿರು

ವದು – ಓದುಗರು ತಮಗೆ ಬೇಕಾದ ವಿಷಯಗಳನ್ನು ಆರಿಸಿಕೊಂಡು, ಓದಿ, ಅದನ್ನು ಸವಿದಾನಂದಿಸಿ, ನಲಿದಾಡುವದಕ್ಕೆ ಅವರನ್ನು ಕಾತರಿಸುವಂತೆ ಮಾಡಿರುತ್ತದೆ ಎಂದರೆ ಅತ್ಯುಕ್ತಿ ಅಲ್ಲ. ಭಕ್ತಿಪೂರ್ವಕ ಸೇವಿಸುವ ಶ್ರೀ ಗುರುಪುತ್ರರಿಗೆ ಈ ಗ್ರಂಥವು ಆತ್ಮಜ್ಞಾನವನ್ನು ಕೊಟ್ಟು (೮-೪, ೧೦) ದ್ವಿತೀಯ ದರ್ಶನವನ್ನೆ ಇನ್ನಿಲ್ಲವೆಂಬಂತೆ ಕಡೆಗಣಿಸಿ (೧೩-೮೮, ೮೯) ಪ್ರಪಂಚ ವಿವರ್ಜಿತವಾದ ತನ್ನ ಅದ್ವೈತಾತ್ಮ ಸ್ವರೂಪದಲ್ಲಿಯೇ ಜಿಜ್ಞಾಸುಗಳನ್ನು ನೆಲೆಸಿಲ್ಲಿಸಿಬಿಡುವದರಿಂದ ಏಕಾತ್ಮವಾದಿಗಳೆಲ್ಲರಿಗೂ ಇದು ಉಪಾದೇಯವೆಂದು ಮತ್ತೆ ಹೇಳಬೇಕಿಲ್ಲ. ತನ್ನೊಡಲಿನಲ್ಲಿ ಕವಿತಾದೋಷ ಸೋಂಕದೆ ಸರ್ವಾಂಗ ಸುಂದರವಾಗಿಯೂ (೧೮-೪೩) ಇರುವದು.

**ಹಿನ್ನೆಲೆಯು** :—ಈ ಹೊತ್ತಿಗೆಯು ಬರಿಯ ಗನ್ನಡದ್ದಲ್ಲ. ನರಸಾಯರ್ಯರೆಂಬ ಪಂಡಿತೋತ್ತಮರು ಸಂಸ್ಕೃತದಲ್ಲಿ ಬರೆದ '**ಜ್ಞಾನಸರ್ವಸ್ವ ಸಂಗ್ರಹ**' (?) ದ (೨-೨, ೨೩....೨೮, ೩೨; ೧೮-೨೭, ೪೩) ಕನ್ನಡಕ್ಕೆ ಬಂದ ರೂಪಾಂತರವು. ಸಂಸ್ಕೃತ ಕನ್ನಡ ಭಾಷೆಗಳಲ್ಲಿಯು ಬರೆದದಿರುವ (೮-೨, ೩) ಇದು ತ್ರಿಯಂಬಕರು ಮತ್ತು ನರಸಾರ್ಯರು ಎಂಬ ಗುರುಶಿಷ್ಯರ ಸಂವಾದರೂಪದಲ್ಲಿರುವದಲ್ಲದೆ, ನೈಗಮ ಶಿರೋಘಟಿಕಾರ್ಥ ರೂಪವೂ (೩-೧೬, ೧೭; ೧೨-೮೨; ೧೬-೩೪; ೧೭-೩; ೧೮-೨೬) ತಾನಾಗಿದ್ದು ಉತ್ತಮ ತತ್ತ್ವವಿಚಾರಗಳೆಂಬ ಕುಸುಮಗಳಿಂದ ಕುಸುಮಿತವಾಗಿರುತ್ತ, ಪೂರ್ಣ ಸುಖಶಾಂತಿಕರವಾದ ಪರಿಮಳ ಭರಿತವೂ ತಾನಾಗಿರುವದರಿಂದ ಸಂಸಾರ ಬೆಂಗಾಡಿನಲ್ಲಿ ಬೆಂದು, ಆ ತಾಪದಿಂದ ಬಳಲಿ ಬೆಂಡಾಗಿರುವ ತತ್ತ್ವಜಿಜ್ಞಾಸುಗಳು ವಿಶ್ರಮಿಸಿಕೊಳ್ಳಲು ಯೋಗ್ಯವಾದ ಸುಖದ ನಂದನವನದಂತಿರುವುದು! ಆದ್ದರಿಂದ ತತ್ತ್ವವಿಚಾರದ ಹೆದ್ದಾರಿಯಲ್ಲಿ ತಮ್ಮ ಹೆಜ್ಜೆಯನ್ನಿಟ್ಟಿರುವ ವೇದಾಂತ ಪ್ರೇಮಿಗಳಿಗೆಲ್ಲರಿಗೂ "ಈ ವೇದಾಂತ ಕಾವ್ಯವು ಸಂಗ್ರಾಹ್ಯ"ವೆಂಬುದಕ್ಕಿನ್ನಡ್ಡಿಯಿರುವದಿಲ್ಲವು.

ಹೀಗೆ ಪ್ರಯೋಜನಕರವೂ ಘನತೆಯುಳ್ಳದ್ದೂ ಆಗಿರುವ ಈ ಕಾವ್ಯವು ಬರೆದು ನೂರು ನಲವತ್ತು ವರ್ಷಗಳಾಗಿದ್ದರೂ ಇಲ್ಲಿವರೆಗೆ ಗುಟುಕು ನೀರಿನಿಂದ ತಾನು ಅಜ್ಞಾತವಾಸವನ್ನನುಭವಿಸುತ್ತಿತ್ತೆಂಬುದು **ಸ್ವತಂತ್ರಭಾರತದ ನಮ್ಮ ಸಿರಿಗನ್ನಡನಾಡಿಗೂ ಕನ್ನಡ ವೇದಾಂತ ವಾಙ್ಮಯಕ್ಕೂ ಆತ್ಮವಿದ್ಯಾಪ್ರೇಮಿಗಳಿಗೂ ದೊಡ್ಡ ಕೊರತೆಯೆ!** ಎನ್ನುವಂತಿದೆ. ನಮ್ಮ ಈ ದೇಶದಲ್ಲಡಗಿರುವ ಪೂಜ್ಯ ಋಷಿಗಳ ಮತ್ತು ವೇದಗಳ ಜ್ಞಾನನಿಧಿಯ ಅಕ್ಷಯ ಭಂಡಾರವನ್ನು ದ್ವೀಪಾಂತರದವರು ಬಂದು ಕಣ್ಣಿಟ್ಟು ಹುಡುಕುವಂತಿದ್ದರೂ ನಮಗೆ ಮಾತ್ರ ಅದು 'ಹಿತ್ತಲ ಗಿಡ ಮದ್ದಲ್ಲ' ಎಂದು ಅಲಕ್ಷ್ಯವಾಗಿ ಹೋಗಿರುತ್ತದೆ! ಈ ದುಷ್ಪರಿಣಾಮದ ಫಲವಾಗಿ '**ಜ್ಞಾನಸರ್ವಸ್ವ ಸಂಗ್ರಹ**' ಎಂಬ ಮೂಲಗ್ರಂಥವೇನಾಯಿತೋ? ಈ ಕನ್ನಡ ಕಾವ್ಯಕಾರರ ಹತ್ತಾರು ಕಾವ್ಯ ಪ್ರಬಂಧಗಳೂ (೧೮-೩೦....೩೯) ನೋಡುವದಕ್ಕೂ ಕಣ್ಣಿಗಿಲ್ಲವಾಗಿವೆ! ಮೈಸೂರಿನ ಪುಸ್ತಕಗಳ ಭಂಡಾರದಲ್ಲಿ ತನ್ನ ಕೊನೆಯ ಉಸಿರನ್ನಾಡಿಸುತ್ತ ಕೆಲವು ನಿರ್ಜೀವ ಅವಸ್ಥೆಯಲ್ಲಿರುವವಂತೆ! ಭೂಮಿಯನ್ನಾಳುವ ಅರಸರ ಮನೆತನದಲ್ಲಿ ಬಂದು **ವಿರಕ್ತರಾದ ಉದಾರಿ ಪುಣ್ಯಜೀವಿಗಳಾದವರ ಪುಣ್ಯ ಗ್ರಂಥಗಳ ಪಾಡೇ ಹೀಗಾದರೆ!** ಉಳಿದವರ ಗ್ರಂಥಗಳು ಏನಾಗಬೇಕೊ ದೇವರೇ ಬಲ್ಲ! ಈ ವಿಷಯವನ್ನು ಇಡಿಯ ಸಿರಿಗನ್ನಡನಾಡಿನ ವೇದಾಂತ ಪ್ರೇಮಜೀವಿಗಳು, ಕನ್ನಡ ಸಾಹಿತಿಗಳು, ಹಿಂದಿನ ನಮ್ಮ ಪೂಜ್ಯ ಋಷಿಗಳ ಪವಿತ್ರ ಸಂಸ್ಕೃತಿಯನ್ನು ಕಾಣಬೇಕೆಂಬ ಆರ್ಯರು, ಗ್ರಂಥಶೋಧಕರು, ಐತಿಹಾಸಿಕರು ಈ ಎಲ್ಲರಿಗೂ ಗಮನಾರ್ಹವಾಗಿರುತ್ತವೆ.

**ಉಪಕಾರ ಸ್ಮರಣೆ ಮತ್ತು ಕೃತಜ್ಞತೆಯು** :—ಈ ಗ್ರಂಥವನ್ನು ಮೊದಲು ಗುರುಗಳಾಗಿ ಪಾಠವನ್ನು ಹೇಳಿ, ನನಗಿತ್ತ, ಬೆಂಗಳೂರು ಶ್ರೀ ಸಚ್ಚಿದಾನಂದ ಸಹಜಾನಂದ ಭಾರತೀ ಸ್ವಾಮಿಗಳ ಶಿಷ್ಯರಾದ ಮೈಸೂರು ವೇದಾನ್ತಿ ಶ್ರೀ ಚಿಕ್ಕಲಿಂಗಣ್ಣಸ್ವಾಮಿಯವರ **ಉಪಕಾರ**ವು ಇಲ್ಲಿ ಸ್ಮರಣೀಯವಾಗಿರುತ್ತದೆ. ಜ್ಯೌತಿಷದಲ್ಲುಪಕರಿಸಿದ ನರಹರಿಜ್ಯೋಯಿಸರ ಪುತ್ರರು ವೇ॥ ನರಸಿಂಹಮೂರ್ತಿಯವರು ಮೈಸೂರು, ಗ್ರಂಥಪ್ರಕಾಶಕ್ಕೆ ನೆರವಾದ ಮಧುಗಿರಿಗೆ ಸೇರಿದ ಬಡಕನಹಳ್ಳಿ ಸತ್ಸಂಗದವರು ಮತ್ತು ಬೆಂಗಳೂರು '**ಶಾಂಕರ ವೇದಾನ್ತ ಕುಟೀರ**'ದ ಜಿಜ್ಞಾಸು ಮತ್ತು ಗುರುಭಕ್ತ – ಮಂಡಲಿ ಇವರ ಉಪಕಾರವನ್ನಂತು ಅನಿತರ ಸಾಧಾರಣವೆಂದು ಹೇಳದೆ ಇಲ್ಲಿ ತೀರದು.

ಶ್ರೀ ಹರಿಹರಾನಂದ ಭಾರತೀಸ್ವಾಮಿಜಿಯವರು **ಅನಂತಾಶ್ರಮ**, ಶ್ರೀ ಮಹಾದೇವ ಚೈತನ್ಯಸ್ವಾಮಿಯವರು **ಶಿವಾಶ್ರಮ** ಮಲ್ಲೇಶ್ವರ, ಶ್ರೀ ಶಾಂತಾನಂದ ಸ್ವಾಮಿಯವರು **ಶಿವವಿಲಾಸ** ಗಾಂಧಿನಗರ ಇದರ ಪ್ರಕಾಶಕ್ಕೆ ಹೃತ್ಪೂರ್ವಕ ನೆರವಾದುದಲ್ಲದೆ, ಈ ಗ್ರಂಥವನ್ನೋದುವ ಮುಮುಕ್ಷುಗಳಿಗೆ ಆತ್ಮಜ್ಞಾನರೂಪ ಪರಮಶ್ರೇಯಸ್ಸನ್ನು ಹರಸಿರುತ್ತಾರೆ, **ಜನಪ್ರಿಯ, ಸರದಾರ್** ಶ್ರೀ ಟಿ. ಎಲ್. ಗಂಗೋಜಿರಾಯರು ಶ್ರಮಿಸಿರುತ್ತಾರೆ.

ತ್ಯಾಗಬುದ್ಧಿಯಿಂದ ಉದಾರಹಸ್ತವನ್ನೂ ವಾಕ್ಸಹಾಯವನ್ನೂ ಮಾಡಿದ ಪವಿತ್ರ ಪ್ರೇಮ ಹೃದಯದ ಸಜ್ಜನರು ಈ ಎಲ್ಲರಿಗೂ ಸರ್ವಾತ್ಮನು ಸಕಲಾಭೀಷ್ಟಗಳ ಸುರಿಮಳೆಯನ್ನು ಮಾಡಲಿ! ಭಕ್ತಿ ಜ್ಞಾನ ವೈರಾಗ್ಯ ಸಂಪತ್ತುಗಳಿಂದ ಇಹ ಪರಗಳಲ್ಲಿ ಅವರೆಲ್ಲರನ್ನೂ ಬಿಡದೆ ಶಾಶ್ವತ ಸುಖಿಗಳನ್ನಾಗಿ ಮಾಡಲಿ! ಎಂದು ಅಖಿಲಲೋಕಾತ್ಮಕನನ್ನು ಹೃದಯ ಪೂರ್ವಕ ಪ್ರಾರ್ಥಿಸುತ್ತೇನೆ. ಈ ಮೊದಲನೆಯ ಸಂಸ್ಕರಣವನ್ನು ಗುಣಗ್ರಹಣ ದೃಷ್ಟಿಯಿಂದ ನೋಡುವ ಸತ್ಪುರುಷರಿಗೂ ಮಹಾತ್ಮರಿಗೂ ನಾನು ಅತ್ಯಂತ ಕೃತಜ್ಞನಾಗಿರುತ್ತೇನೆ.

ಇತಿ, ತಮ್ಮೆಲ್ಲರ ಪ್ರೇಮಜೀವಿ. ಸಜ್ಜನವಿಧೇಯ

**ಪಂಡಿತ್ ಬಿ. ಎಚ್. ರಾಮನಾಥಸ್ವಾಮಿ**
**ಶಾಂಕರ ವೇದಾನ್ತ ಕುಟೀರ**
೭, ೯ನೆ ಕ್ರಾಸ್, ಕಬ್ಬನ್‌ಪೇಟೆ,
ಬೆಂಗಳೂರು ಸಿಟಿ.

ದುರ್ಮುಖಿ ಸಂವತ್ಸರ ಭಾದ್ರಪದ
ಬಹುಳ ದ್ವಾದಶಿ ಸೋಮವಾರ
೧–೧೦–೧೯೫೬.

# ವಿಷಯಾನುಕ್ರಮಣಿಕೆಯು

ನಮಃ ಪರಮಋಷಿಭ್ಯೋ ನಮಃ ಪರಮಋಷಿಭ್ಯಃ

# ಶ್ರೀ ವಿವೇಕಾಭರಣ ವೇದಾನ್ತಕಾವ್ಯದ ಸಾರವು

೧ **ಪೀಠಿಕಾ:**—(೧–೧೪) ನಮ್ಮ ಶರೀರದೊಳಗಿರುವಿಂದ್ರಿಯಾಂತಃಕರಣಗಳ ಅಭಿಮಾನದೇವತೆಗಳನ್ನು ಕುರಿತು ಮಂಗಳವನ್ನೀಯಲೆಂದು ಪ್ರಾರ್ಥಿಸಿರುವದು.

(೧೫—೧೮) ಜಗತ್ತಿನ ಜೀವರಿಗೆ ಬಂಧಮೋಕ್ಷಗಳನ್ನು ಕೊಡುವ ನಮ್ಮ ಕುಲದೇವತೆಗಳಿಂದಲೇ ಈ ಜಗತ್ತೆಲ್ಲವೂ ನಡೆಯುತ್ತಲಿರುವದು. ಮನುಷ್ಯನು ಇವರನ್ನೇ ಸೇವಿಸಬೇಕು. ಭಿನ್ನಭಾವನೆಯಿಂದ ಸೇವಿಸಿದರೆ ಅವರಿಂದ ತನಗೆ ಕೇಡು ತಪ್ಪುವಂತಿಲ್ಲ; ನಮ್ಮಲ್ಲಿ ನಿರಂತರವು ಅಂಟಿರುವ ಈ ಇಂದ್ರಿಯಾಂತಃಕರಣಗಳೇ ಕುಲವೆಂಬುದು; ಬೇರಲ್ಲ. ಇವರ ಒಟ್ಟಿನ ರಾಶಿಯೇ ಅಧ್ಯಾತ್ಮವು; ವಿಷಯಗಳೇ ಅಧಿಭೂತವು; ಈ ಹದಿನಾಲ್ಕು ಕರಣಗಳನ್ನೂ ನಡೆಯಿಸುವ ದಿವಿಜರೇ ಅಧಿದೇವತೆಗಳು; ಈ ಭುವನದ ಶರೀರಗಳನ್ನೆಲ್ಲ ನಡೆಯಿಸುತ್ತಿರುವ ಈ ದೇವತೆಗಳನ್ನು ನಡೆಯಿಸುವವನೇ ಗೌರೀಧವನು. ಅವನಿಗೆ ಈ ಕಾಲ ದೇಶಗಳ ಕಟ್ಟಿರುವದಿಲ್ಲವು; ವಸ್ತುವಿಕಾರಗಳೂ ಇಲ್ಲದ ಆ ಶಿವನು ನಮ್ಮ ಎಚ್ಚರಾದಿ ಸಕಲ ಅವಸ್ಥೆಗಳಲ್ಲಿಯೂ ಕೈಬಿಡದಂತೆ ನಮ್ಮನ್ನು ರಕ್ಷಿಸಲಿ !

೨ **ಕಾವ್ಯಾವತಾರ:**—(೧–೨೧) ಸಜ್ಜನರು ಈ ಗ್ರಂಥವನ್ನು ಬರಿಯುವದಕ್ಕೆ ತಮಗೆ ಸೂಚನೆಯನ್ನು ಕೊಡಲು, ಗ್ರಂಥಕರ್ತರು ಅವರನ್ನು ಕುರಿತು—ಪೂರ್ವಿಕರು ತಮ್ಮ ಕೃತಿಗಳಲ್ಲಿ ಸಕಲಾರ್ಥಗಳನ್ನು ಎತ್ತಿದರು. ಅನುಭವಿಗಳು ಅವುಗಳನ್ನು ನಿಗಮಕ್ಕೆ ಸರಿದೂಗಿ, ತಮ್ಮ ಹೃದಯಕ್ಕೆ ಅಳವಡಿಸಿಕೊಂಡರು. ಬ್ರಹ್ಮಾದಿ ದೇವತೆಗಳೂ ಒಪ್ಪಿದ ಅವುಗಳನ್ನು ಈ ಭೂಮಿಯಲ್ಲಿ ಹರಡಿದರು! ಹೀಗೆ ನಮ್ಮ ಪೂರ್ವಜರ ಕೀರ್ತಿಯು ಬಲ್ಲವರಲ್ಲಿರಲು, ನನ್ನ ನುಡಿಗೆ ಅವಕಾಶವೆಲ್ಲಿ? ನನ್ನ ಬುದ್ಧಿಯೆಷ್ಟುಮಾತ್ರದ್ದು? ಮೌನವೇ ನನಗೆ ಗೌರವದ ಭೂಷಣ! ಎನ್ನಲು, ಅದಕ್ಕೆ ಆ ಸಜ್ಜನರು—ತಿಳಿಗೊಳದ ನೀರಿನಲ್ಲಿ ನೋಡಿದ ಮನುಷ್ಯನಿಗೆ ಮತ್ತೊಬ್ಬರ ಮುಖ ಕಾಣಿಸದಿರುವಂತೆ; ನಿನ್ನ ಕಾವ್ಯದಿಂದಲೂ ತತ್ತ್ವಜಿಜ್ಞಾಸುಗಳಿಗೆ ತಮ್ಮ ಸ್ವರೂಪಲಾಭವಾಗುವದು. ಪರಶಿವನ ಉತ್ತರವೇ ವೇದಗಳು; ದೇವರ್ಷಿಗಳ ಕೃತಿಗಳೇ ಅದಕ್ಕನುವೃತ್ತಿಗಳು ; ಜಿಜ್ಞಾಸುಗಳಿಗೆ ಬರುವ ಸಂಶಯಗಳ ಪರಿಹಾರಕ್ಕೆ ಸಜ್ಜನರ ಅನುಭವವೇ ಪರಮ ಪ್ರಮಾಣವು. ತತ್ತ್ವಮಾರ್ಗವು ಅದರ ಫಲವು ಕಾಲದಿಂದ ಬದುಲುವದಲ್ಲ. ಎಲೈ ಅರಸನೆ ? ಶ್ರೀಗಂಧವು ಕಾಡುಭೂಮಿಯಲ್ಲಿ ಹುಟ್ಟಿದರು ತನ್ನ ಪರಿಮಳ ಬಿಟ್ಟಗಲದಿರುವಂತೆ ಸಾತ್ವಿಕತೆಯು ದುಸ್ಸಂಗದಿಂದಲೂ ಮರೆಮಾಜುವದಲ್ಲ; ಆ ಚಿತ್ರಪರಿಪಾಕದಲ್ಲಾಗಲಿ ಜ್ಞಾನಫಲಕದಲ್ಲಾಗಲಿ ಕಾಲಭೇದದಿಂದ ವಿಭಿನ್ನತೆಯಿರುವದಿಲ್ಲ ಚಂದ್ರನ ಅಮೃತಕಿರಣವನ್ನು ಸವಿಯಬಲ್ಲ ಚಕೋರಪಕ್ಷಿಗಳಿಗೆ ವಿಭಿನ್ನ ಋತುಗಳಿಂದ ಅದರ ಸವಿಯಲ್ಲಿ ಭೇದವುಂಟಾಗದಿರುವಂತೆ; ಪಕ್ವಕ್ಕೆ ಬಂದು ಮಾಗಿದ ಹಣ್ಣು ಹೀಚಾಗಲಿ ಕಾಯಾಗಲಿ ಪುನಃ ಆಗುವ

ದಕ್ಕಿಲ್ಲದಂತೆ; ಈಶ್ವರನ ಸೇವೆಯಿಂದ ಬಂದ ಮನಶ್ಶುದ್ಧಿಯೆಂಬುದು ಒಂದೇ ಪರಿಯಲ್ಲದೆ, ಅದರಲ್ಲಿ ಭೇದಕ್ಕೆಡೆಯಿರುವದಿಲ್ಲ. ಅಂತೆಯೆ ಯಾವ ಕಾಲದ ಅಥವಾ ಯಾವದೇ ಬಗೆಯ ಜನರೇ ಆಗಿದ್ದರೂ ತತ್ತ್ವಮಾರ್ಗದಲ್ಲಿ ಅವರಿಗೆಲ್ಲ ಮುಕ್ತಿಯು ಒಂದೇ ಬಗೆಯಲ್ಲಾಗುತ್ತಿರುವದು. ಹಿಂದಿನವರುತ್ತಮರು ಈಗಿನವರೇ ಮಧ್ಯಮರು ಮುಂದಿನ ಕಾಲದಲ್ಲಿ ಹುಟ್ಟುವ ಜನರಂತು ಅಧಮರು ಎನ್ನುವ ಮಂದಮತಿಗಳ ಮಾತನ್ನು ಲಕ್ಷಿಸಬೇಡ. ಗ್ರಂಥವನ್ನು ರಚಿಸುವವನಾಗು. ಇದು ನಿನಗೆ ನಗೆಯೂಳಿಗವೆಂದು ಎಣಿಸದಿರು. ಏಕೆಂದರೆ ತನ್ನಲ್ಲಪಾರಜಲವಿದ್ದರು ಸಮುದ್ರದ ನೀರು ಅಡಿಗೆಯ ಉಪಯೋಗಕ್ಕಿರುವುದಿಲ್ಲವಷ್ಟೆ? ಅಂಚಿನಲ್ಲಿ ತೋಡಿದ ಕೈಗುಂಡಿಯಲ್ಲೆರೆದರೆ ಆ ನೀರು ಅಡಿಗೆಯ ಉಪಯೋಗಕ್ಕೆ ಬರುವಂತೆ; ಪೂರ್ವಿಕರ ಶಾಸ್ತ್ರಗಳ ರಾಶಿಯಲ್ಲಿ ಒಂದೊಂದು ವಿಷಯವೂ ವಾಕ್ಯವೂ ಘನವಜ್ರದಂತಿರುತ್ತದೆ. ಮಂದಮತಿಗಳಾದ ಕನ್ನಡಿಗರಿಗೆ ಅವು ಅರಗಿಸಿಕೊಳ್ಳುವದಕ್ಕೆ ಸುಲಭವಲ್ಲ; ನಿನ್ನ ಬುದ್ಧಿಯ ಸಾಣೆಗಲ್ಲಿಗೆ ಕೊಟ್ಟು ಅವುಗಳನ್ನೇ ನಮ್ಮ ಹೃದಯದಲ್ಲಿ ಕೌಸ್ತುಭ ಭೂಷಣದಂತೆ ಧರಿಸಬೇಕೆಂದು ಬಯಸುತ್ತಲಿರುವೆವು. ಜೊನ್ನವಕ್ಕಿಗಳು ಇಂದುವಿನ ಕಿರಣವನ್ನು ಸ್ವಭಾವದಿಂದಲೇ ಹೀರಿ ತಾವು ಸವಿಯಬಲ್ಲವು; ಅದನ್ನು ಉಣ್ಣುವಲ್ಲಿ ಮನುಷ್ಯರಿಗೆ ಚಂದ್ರಕಾಂತ ಶಿಲೆಯ ಬಟ್ಟಲು ಬೇಕು. ಶರದೃತುವಿನ ಚಂದ್ರನ ಕಿರಣದಂತಿರುವ ಪೂರ್ವಿಕರ ವಾಕ್ಯಗಳಿಂದ ಜ್ಞಾನಾಮೃತವನ್ನು ಬುಧರು ಸವಿಯಬಲ್ಲರಾದರೂ, ಕನ್ನಡಿಗರು ಅದನ್ನು ಸವಿದೀಂಟುವಲ್ಲಿಯೂ ಆತ್ಮಸುಖ ಶಾಂತಿಗಳನ್ನು ಅವುಗಳಿಂದ ಹೊಂದುವಲ್ಲಿಯೂ ಅವರಿಗೆ ನಿನ್ನ ಬುದ್ಧಿಯ ಶಶಿತಾಂತಶಿಲೆಯ ಬಟ್ಟಲೊಂದು ಅವಶ್ಯಕವು. ಬುಧರ ಮರವೆಯನ್ನು ಕಳೆಯುವುದರಲ್ಲಿ ಆ ಪರಮರ್ಷಿಗಳ ಗ್ರಂಥಗಳು ಸೂರ್ಯನಂತೆಂಬುದು ನಿಜವಾದರು ಮಂದಾಧಿಕಾರಿಗಳ ಚಿತ್ತವನ್ನು ಬಿಡದಂತೆ ಆಶ್ರಯಿಸಿಕೊಂಡಿರುವ ಆ ಮರವೆಯನ್ನು ದುರುಳರ ಉಕ್ತಿಗಳು ಗುಹೆಯಂತೆ ಪೋಷಿಸುತ್ತಿರುವವು. ಅದನ್ನು ಕೆಡಿಸುವುದರಲ್ಲಿ ನಿನ್ನೀ ಕಾವ್ಯವು ಸಿಡಿಲಿನ ಕಿರುಕಿಡಿಗಳಂತೆ! ಎಂದರು.

(೨೨-೩೪)**ಸಂಸ್ಕೃತ ಮೂಲಕಾವ್ಯವು**—ಮುಕ್ತಿಸಿದಾನವು ಜ್ಞಾನವಲ್ಲದೆ, ಬೇರಿಲ್ಲ; ಆ ಜ್ಞಾನವು ಸದಸದ್ವಿಚಾರದಿಂದ ಬರುವದೆಂಬ ನಿಶ್ಚಯವುಳ್ಳ ನರಸಾರ್ಯರೆಂಬ ಪಂಡಿತರು ಶ್ರುತಿ ಸ್ಮೃತಿ ಪುರಾಣೇತಿಹಾಸಗಳ ಸಾರವನ್ನು ತೆಗೆದು '**ಜ್ಞಾನ ಸರ್ವಸ್ವ ಸಂಗ್ರಹ**' ಎಂದು ಹೆಸರಿಟ್ಟು ಮಾಡಿದ ಸಂಸ್ಕೃತದ ಕಾವ್ಯವನ್ನು ಜ್ಞಾನ ಸಂಪನ್ನರೆಲ್ಲರು ತಮ್ಮೊಳಗೆ ವಿಚಾರಮಾಡಿ ಅದಕ್ಕೆ ತಲೆದೂಗಿದರು! ಅದು ತ್ರಿಯಂಬಕರೆಂಬ ಗುರುವು ಮತ್ತು ನರಸಾರ್ಯರೆಂಬ ಶಿಷ್ಯರು ಇಬ್ಬರ ಸಂವಾದರೂಪದಲ್ಲಿರುವುದು.

ಸಿರಿಗನ್ನಡದ ಈ ಕಾವ್ಯವನ್ನು ಕೇಳಬಯಸಿದ ಸಾಧುಗಳು—ಅರಸರನ್ನು ಕುರಿತು ತಂದೆಯೆ? ಕನ್ನಡಿಸಿ, 'ಜ್ಞಾನಸಸರ್ವಸ್ವ ಸಂಗ್ರಹ' ಎಂಬ ಆ ಗ್ರಂಥವನ್ನು ನಮಗೆ ಅನುಗ್ರಹಿಸು, ಎಂದು ಪ್ರಾರ್ಥಿಸಿಕೊಂಡರು. ಶ್ರೀ ಶಂಕರ ಭಗವತ್ಪಾದರ ಪದ್ಧತಿಯನ್ನನುಸರಿಸಿ, ವಿವರಿಸುವಂತೆ ನರಸಾರ್ಯರೂ ಹೇಳಿದರು. ಗುರುಹಿರಿಯರ ಅನುಜ್ಞೆ

ಯನ್ನು ಹೀಗೆ ಶಿರಸಾವಹಿಸಿದ, ಅರಸರು ತಿಳಿವು ನೆಲೆಗೊಳ್ಳುವಂತೆ, ಅಧ್ಯಾತ್ಮ ಗ್ರಂಥಗಳ ಬಳಕೆ ತಲೆದೋರ್ಪಂತೆ, ತನ್ನ ಸಂಶಯಗಳೆಲ್ಲ ತೊಲಗುವಂತೆ, ತನ್ನ ನಿಜವನ್ನು ನೋಡಬೇಕೆಂಬವರಿಗೆ ಪರಮಾರ್ಥವೆದ್ದು ತೋರುವಂತೆ, ವಿಶ್ವಾಸವು ನೆಲೆಮುಟ್ಟುವಂತೆ ಲಲಿತಪದ ಗೌರವದ ಸಿರಿಗನ್ನಡ ರೂಪವಾದ 'ವಿವೇಕಾಭರಣ' ಎಂಬ ಈ ವೇದಾಂತ ಗ್ರಂಥರೂಪ ಕನ್ನಡಿಯೊಂದನ್ನು ಮಾಡಿದೆನು. ದೇವರಲ್ಲಿ ಭಕ್ತರಂತೆಯೂ ಗುರುಜನಸೇವೆಯಲ್ಲಿ ಸಚ್ಛಿಷ್ಯರಂತೆಯೂ ಯಾಗಾದಿ ಕ್ರಿಯೆಗಳಲ್ಲಿ ವೈದಿಕರಂತೆಯೂ ಈ ಕಾವ್ಯದಲ್ಲಿಯೂ ಭಕ್ತಿ ಶ್ರದ್ಧೆಗಳನ್ನಿಟ್ಟು, ವಿಚಾರಪ್ರೇಮಿಗಳಾದ ನೀವು ಗುರುಗಳಿಂದ ಇದನ್ನು ಸೇವಿಸಿದರೆ ನಿಮ್ಮ ಸ್ವರೂಪವು ತೋರುವದು. ನಿಮಗೆ ನಿತ್ಯಾನಂದವೂ ದೊರೆಯುವದು. ಇದರಲ್ಲಿ ಸಂಶಯವಿನ್ನಿಲ್ಲ. ಬಹು ಕಷ್ಟಪಟ್ಟು ಸಾಧಿಸಿದರು ಕೆಡುವದಾದರೆ ಅದು ಏಕೆ ಸಾಧಿಸುವದು ? ನಿತ್ಯಪದವಿಯೊಂದೇ ಈ ನರಜನ್ಮ ಪಡೆದುಕೊಂಡಿದ್ದಕ್ಕೆ ತನಗೆ ನೈಜವಾದ ಫಲ ಬೇರಲ್ಲ. ಈ ಮರ್ಮವನ್ನು ಬಲ್ಲ ಜಿಜ್ಞಾಸುಗಳು ವಿಚಾರ ಹೀನರಾಗದೆ ವಿವೇಕಿಗಳಾಗಿ ಕೃತಕೃತ್ಯರಾಗಬೇಕೆಂಬುದೇ ಪರಮಾಶಯವು!

**೩. ಅಧ್ಯಾತ್ಮ ತಾಪನಿರ್ಣಯ:**—(೨-೭) ಜಗದ್ಬೀಜವು ಪ್ರಕೃತಿಯು, ಇದು ಅವಿದ್ಯಾ ಕಲ್ಪಿತವು; ಅಂತೆಯೇ ಮಹದಾದಿ ಸಪ್ತಪ್ರಕೃತಿ ವಿಕೃತಿಗಳು ಅವಿದ್ಯಾಕಲ್ಪಿತವೇ. ಇವುಗಳ ವಿಕಾರವೇ ಬ್ರಹ್ಮಾಂಡವು. ಆತ್ಮನಲ್ಲಿ ನೀರುಗುಳ್ಳೆಯಂತಿರುವ ಇದೂ ಅವಿದ್ಯಾಕಲ್ಪಿತವೇ. ಅವುಗಳಲ್ಲೊಂದೊಂದರಲ್ಲಿಯೂ ಚತುರ್ದಶ ಭುವನಗಳೂ, ಇವುಗಳಲ್ಲಿ ಅಂಡಜಾದಿ ಚತುರ್ವಿಧ ಪ್ರಾಣಿಗಳೂ ಇರುವುವು. ಚೇತನಗಳಲ್ಲಿ ದೇವತೆಗಳು ೧೬ ಲಕ್ಷ, ಮಾನವರು ೯ ಲಕ್ಷ, ಜಲಚರ ೧೦ ಲಕ್ಷ, ಅಂಡಜ ೧೦ ಲಕ್ಷ, ಜರಾಯುಜ ೨೦ ಲಕ್ಷ, ಉರದಿಂದ ಸಂಚರಿಸುವ ಹಾವು ಮುಂತಾದವು ೧ ಲಕ್ಷ, ವನಸ್ಪತಿಗಳು ೧೮ ಲಕ್ಷ ಹೀಗೆ ೮೪ ಲಕ್ಷ ಭೇದದಿಂದಿರುವ ಸರ್ವ ಪ್ರಾಣಿಗಳಲ್ಲಿಯೂ ಒಂದು ಪರಮ ತತ್ತ್ವವೇ ತನ್ನಲ್ಲಿ ವಿಕಾರಗಳ ಸೋಂಕಿಲ್ಲದೆ ಜೀವರೂಪದಿಂದ ಇರುವದು.

(೮–೪೧) ಜೀವರು ಅನುಭವಿಸುತ್ತಿರುವ ಸುಖದುಃಖಗಳು ಜಂಗಮಶರೀರಗಳಲ್ಲಿ ಲಿಂಗಶರೀರವನ್ನು ಗುರ್ತಿಸುತ್ತ, ಅದನ್ನೇ ಹೊಂದಿರುವವು. ಆ ಲಿಂಗಶರೀರವಿಲ್ಲದ ಸ್ಥಾವರ ಶರೀರಗಳು ಸುಖದುಃಖಗಳ ಅನುಭವಕ್ಕೆ ಸಾಧನಗಳಲ್ಲ. ಸುಖವನ್ನು ಎಲ್ಲರೂ ಬಯಸುವರು; ದುಃಖವೆಂದರೆ ಭಯಪಡುವರು! ಆದ್ದರಿಂದ ಮೂಲವನ್ನು ಕಂಡು, ಆ ದುಃಖವನ್ನು ನಿರ್ಮೂಲಮಾಡುವ ಉಪಾಯವನ್ನು ಬಲ್ಲವರಿಂದ ಕಲಿತು ತಾನು ಸಾಧಿಸುತ್ತಿರುವದೇ ಪರಮ ಪುರುಷಾರ್ಥವು. ಅದರಲ್ಲಿ ಬೇರನ್ನು ಕಿತ್ತು ದುಃಖಕ್ಕೆ ಸ್ಥಳವನ್ನೆ ತಪ್ಪಿಸಿಬಿಡುವದು ಒಂದು, ಆ ಬೇರನ್ನುಳಿಸಿ ಕೊನೆಕೊಂಬೆಗಳನ್ನು ಮೇಲ್ಮೇಲೆ ತಲೆಸವರುತ್ತಿರುವದು ಮತ್ತೊಂದು;

ತ್ರಿಯಂಬಕರೆಂಬಗುರುಗಳು ತಮ್ಮಲ್ಲಿ ಬರುತ್ತಿದ್ದ ಶಿಷ್ಯರಿಗೆ ಜ್ಞಾನವನ್ನು ಬೋಧಿ

ಸುತ್ತ ಶ್ರೀರಂಗಧಾಮನ ನಗರದಲ್ಲಿದ್ದರು. ಅಲ್ಲಿಗೆ ಬಂದ ನರಸಾರ್ಯರು ಭಕ್ತಿಯಿಂದ ಫಲಪುಷ್ಪಗಳನ್ನವರಿಗೆ ಅರ್ಪಿಸಿ; ಜೀಯ! ಜಗದೊಳಗೆ ಉಳುವೆುಯಾವದು? ಉಳಿದವು ಗಳಲ್ಲಿ ಸಾರಾಸಾರಗಳು ಹೇಗೆ? ಎನಲು, ಗುರುವು ಶಿಷ್ಯನೆ? ಜನರಿಗೆ ಸಹಿಸುವು ದಕ್ಕಿಲ್ಲದ ದುಃಖವು ಅಂತಃಕರಣದಲ್ಲಿ ವರ್ತಿಸುತ್ತಿರುವದು. ವಾತ ಪಿತ್ತ ಶ್ಲೇಷ್ಮ ಧಾತು ಗಳು ತಮ್ಮೊಳಗೆ ವಿಷಮಿಸಲು, ಆ ದುಃಖವು ಸ್ಥೂಲಶರೀರದಲ್ಲಿಯೂ ಎಡೆಯಾಡು ವದು. ಕಾಮಾದಿಗಳಿಂದ ಸೂಕ್ಷ್ಮ ಶರೀರದಲ್ಲಿಯೂ ಎದ್ದುಕಾಣುವ ಅದು ಲಯ ವಿಕ್ಷೇಪಾದಿ ಚಿತ್ತವೃತ್ತಿಗಳಿಂದ ನಾಲ್ಕು ಬಗೆಯಾಗಿ ಭೇದಪಡೆದು ಧ್ಯಾನದಲ್ಲಿ ಹೊರಟ ವರಿಗೂ ಅಡ್ಡಲಾಗಿ ಬಂದು ಕಾಡಿಸುವದು. ಹತ್ತು ಇಂದ್ರಿಯಗಳು ಮನಬುದ್ಧಿ ಚಿತ್ತಾಹಂಕಾರಗಳು ಅಧ್ಯಾತ್ಮವೆನಿಸುವದು; ಇವುಗಳ ವಿಷಯಗಳೇ ಅಧಿಭೂತವು: ಇವುಗಳನ್ನು ಪ್ರೇರಿಸುವ ದೇವತೆಗಳೇ ಅಧಿದೇವತೆಗಳು; ಇವುಗಳ ಒಟ್ಟೀ ಸರ್ವ ದುಃಖಗಳಿಗೂ ಮೂಲವು. ಈ ಹದಿನಾಲ್ಕು ಕರಣಗಳು ಖಂಡತ್ರಯಗಳಾಗಿ ತಮ್ಮೊಳಗೆ ವಿಭಾಗಿಸಿಕೊಂಡಿರುವವು. ಜನರು ಸಂಸಾರದಲ್ಲಿ ಇವುಗಳಿಂದ ಕಷ್ಟನಷ್ಟ ಗಳನ್ನನುಭವಿಸುತ್ತಿರುತ್ತಾರೆ

ಈಶ್ವರನು ಜಗತ್ತಿನ ನಡೆವಳಿಗೆಂದು ರಚಿಸಿರುವ ವೇದಗಳಲ್ಲಿ ವಿಧಿನಿಷೇಧ ಕರ್ಮಗಳ ಮತ್ತು ಪುಣ್ಯಪಾಪಗಳ ಫಲಗಳಾದ ಸ್ವರ್ಗನರಕಾದಿಗಳ ಪ್ರಾಪ್ತಿಯ ಕ್ರಮ –ಇವುಗಳನ್ನು ಹೇಳಿರುವನು. ಆ ವೇದಗಳು ಯಾರಿಗೂ ಮೀರುವದಕ್ಕಿರುವದಿಲ್ಲ. ಅದಕ್ಕೆ ಬದಲು ಎಲ್ಲರೂ ಆ ವೇದವೆಂಬ ಕಡಿವಾಣಕ್ಕೊಳಗಾಗಿರುತ್ತಾರೆ. ವಿಷಯ ಗಳಲ್ಲನುರಾಗವುಳ್ಳ ಜನರಂತು ವಿಧಿನಿಷೇಧ ಕರ್ಮಗಳನ್ನಾಗಲಿ ಅವುಗಳ ಫಲಗಳ ನ್ನಾಗಲಿ ಬಿಟ್ಟು, ತಮ್ಮ ಹೆಜ್ಜೆ ಕದಲಿಸುವದಕ್ಕೂ ಅವರಿಗೆ ಸಾಧ್ಯವಿಲ್ಲವಾಗಿರುವದು. ವ್ಯವಹಾರದಲ್ಲಿ ನಡೆಯುವ ಮನುಷ್ಯನಿಗೆ ಬಿಡದಂತೆ ಪಾಪವು ಬಂದು ಆವರಿಸುವದು. ಅದರ ಫಲವಾಗಿ ತನಗೆ ಬರಲಿರುವ ದುಃಖಯೋನಿಗಳನ್ನೂ ಹೊಂದಬೇಕೆಂಬುದನಿ ವಾರ್ಯವು. ಜನರು ಆ ಪಾಪದ ಫಲಗಳಾಗಿಯೇ ಅನ್ನ ಬಟ್ಟೆ, ಚಿನ್ನ ಬಣ್ಣಗಳು; ಮನೆ ಮಠಗಳು, ಹೆಂಡಿರು ಮಕ್ಕಳು, ಇಷ್ಟಮಿತ್ರ ಬಂಧು ಇವುಗಳನ್ನು ಅಗಲುತ್ತ ಕೊಡುತ್ತ, ಆಗಾಗ್ಗೆ ಕಣ್ಣೀರನ್ನು ಇಡುತ್ತಿರುವರು! ತಮ್ಮ ಶರೀರದಲ್ಲಿಯೂ ಕೈ ಕಾಲು ಕಣ್ಣು ಮೂಗು ಮುಂತಾದ ಅವಯವಗಳಲ್ಲಿ ಹೆಚ್ಚುಗುಂದುಗಳಿಂದ ಕೂಡಿರುವ ಯೋನಿಗಳಲ್ಲಿ ಬಂದು ಕ್ರಿಮಿಕೀಟ ಪತಂಗಗಳಾಗಿ ಅನವರತ ಜನ್ಮಿಸುತ್ತಿರುವರು! ಒಂದಿದ್ದರೊಂದಿರದ ದೇಹದ ಅವಯವಗಳಿಂದಲೂ, ಸವೆದರೆ ಅಂಗದ ಪೂರ್ತಿಯಿಂ ದಲೂ ಹುಟ್ಟುತ್ತ,ಕೃಶಶರೀರದಿಂದಲೂ ಇಂದ್ರಿಯಗಳಲ್ಲಿ ಪೂರ್ಣತೆಯಿಲ್ಲದೆ.ಒಂದರಿಂದ ಎರಡರಿಂದ ಮೂರರಿಂದ ನಾಲ್ಕರಿಂದ ಹೀಗೆ ಕೂಡಿದ ಇಂದ್ರಿಯ ಕೊರತೆಯುಳ್ಳ ಜೀವಿ ಗಳು ಕಷ್ಟಪಡುತ್ತಿರುವವು. ಇಂದ್ರಿಯಗಳಿದ್ದರು ಪ್ರಯೋಜನವಿಲ್ಲದವು, ಚುರುಕಾ ಗಿಲ್ಲದವು ಕೆಲಕೆಲವು; ಧಾತುಗಳಲ್ಲಿಯೂ ಉಳ್ಳವು,ಕೆಲವಿಲ್ಲದವು,ಅಸ್ಥಿಸಂಧಿಗಳುಳ್ಳವು, ಕೆಲವಿಲ್ಲದವು; ಸೋರುವ ರಕ್ತವುಳ್ಳವು, ಕೆಲವು ರಕ್ತವಿಲ್ಲದ ಶರೀರವುಳ್ಳವು; ಗುಣ

ಗಳಲ್ಲಿಯೂ ತಾರತಮ್ಯದಿಂದಿರುವ ಜೀವರು–ಸುಖ, ದುಃಖ, ಸುಖದುಃಖ ಮಿಶ್ರ ಎಂಬ ಕರ್ಮಫಲಗಳನ್ನು ಹೊಂದಿ ಅವರು ಚಿತ್ರವಿಚಿತ್ರಾನುಭವಗಳನ್ನು ಬಿಡದೆ ಹೊಂದುತ್ತಲಿರುವರು. ಅನೇಕ ಶರೀರಗಳಲ್ಲಿ ಅನುಭವಿಸಿದ ವಿಷಯಗಳು ವಾಸನೆಯ ರೂಪ ತಳೆದು ಮನಸ್ಸಿನಲ್ಲುಳಿದುಕೊಂಡುಬಿಡುವವು. ಆ ವಿಷಯಗಳು,ಅವುಗಳ ಕಾಲ ಅಥವಾ ಅವುಳ್ಳ ಜನರ ಗೋಷ್ಠಿ-ತನಗೆ ಲಭಿಸಿದರು ಸರಿ; ಮನಸ್ಸು ತನ್ನ ವಶ ನಿಲ್ಲದೆ· ಕೂಡಲೆ ಆ ವಿಷಯಗಳಲ್ಲಿ ತಾನು ದಾಟುಗಾಲುಹಾಕಿಬಿಡುತ್ತಿರುವದು! ಸ್ವತಂತ್ರವಾಗಿರುವ ಬುದ್ಧಿಯು ತಾನು ಅಭಿಮಾನರಸದಿಂದ ಕೂಡಿರಲು, ಸತ್ವವು ಕುಗ್ಗಿದ ತನ್ನಲ್ಲಿ ತಮೋಗುಣದಿಂದ ಹಿಗ್ಗಿದ ಅಹಂಕಾರವು 'ನಾನು' ಎಂದು ಶರೀರೇಂದ್ರಿಯಗಳಲ್ಲಿ ಬೇರನ್ನು ಸರಾಗದಿಂದ ತಾನು ಬಿಟ್ಟುಕೊಂಡುಬಿಡುತ್ತಿರುವದು! ಈ ಬಗೆಯಿಂದ ಮನ ಬುದ್ಧಿ ಚಿತ್ತಾಹಂಕಾರಗಳಲ್ಲಿರುವ ಜಾಡ್ಯವೇ ಉತ್ತಮ ಖಂಡದ ದುಃಖವು.

(೪೧–೪೯) ಶಬ್ದವನ್ನು ಕೇಳದಿರುವದು. ಚೆನ್ನಾಗಿ ಕೇಳಿಸದಿರುವದು ಮುಂತಾದವು; ಉಂಡ ಆಹಾರವು ಪಚನವಿಲ್ಲದ್ದರಿಂದ ಕೆಟ್ಟ ಅನ್ನದ ರಸವು-ಶರೀರದ ಚರ್ಮದಲ್ಲೆಲ್ಲ ವ್ಯಾಪಿಸಿ ರಕ್ತ ಕೆಡುವದು. ಈ ರಕ್ತದೋಷವು ಸೋಕಿದ್ದರಿಂದ ತನ್ನ ಸ್ಪರ್ಶ ಗ್ರಹಣದಲ್ಲಿ ವಿಕಲತೆಯುಂಟಾಗಿ ಚರ್ಮವು ಬೆಂಡಾಗುವದು. ಪಿತ್ತನಾಡಿಯ ವಿಕಾಸದಿಂದ ಒತ್ತರಿಸಿದ ನೀರಿನ ದೋಷ ಬಂದು ಮೆದುಳು ಕೆಡುತ್ತಿರುವದು. ಇದರಿಂದ ಕಣ್ಣಿನ ನರವು ತನ್ನಲ್ಲಿ ಬಲವು ಕುಗ್ಗಿ ಕಣ್ಣಿಗೆ–ಕಾಣಿಸದಿರುವದು, ಚೆನ್ನಾಗಿ ಕಾಣಿಸದಿರುವದು, ರಾತ್ರಿ ಕಾಚ, ಪರೆಯು,ಗುಡ್ಡೆಗಳಲ್ಲೊತ್ತುವದು ಚುಚ್ಚುವದು, ಮುಂತಾದ ಕಣ್ಣು ಬೇನೆಗಳು, ಆಹಾರಮೂಲದಿಂದ ಬರುವ ಮುಳ್ಳಿನ ಗೆರೆಯ ದೋಷವಿಶೇಷಗಳು,ದುರ್ಮಾಂಸ ವೃದ್ಧಿಯು. ವಾತ ಪಿತ್ತ ಶೀತಗಳಿಂದ ನಾಲಿಗೆಯಲ್ಲಿ–ನೀರು ಊರುವದು ಉಪ್ಪು ಹುಳಿ ಸೀ ರಸವಿಶೇಷಗಳು ಎದ್ದು ತೋರುವದು ಮೊದಲಾದವು; ನೀರಿನ ಹನಿಯನ್ನು ತೊಟ್ಟಿಕ್ಕುವ ಪೀನ್ಯಾಸವು, ರಕ್ತದ ಹನಿ ತೊಟ್ಟಿಕ್ಕುವ ರಕ್ತಪಿತ್ತವು ಮೊದಲಾದವು; ಮೂಗು ಮತ್ತು ನಾಲಿಗೆ ಇವುಗಳ ಮೂಲವಾದ ಗಂಟಲು ಇವುಗಳಲ್ಲಿ ಜಲದೋಷದಿಂದ ಬರುವ ಶ್ಲೇಷ್ಮವಿಕಾರಗಳು, ಶಿರೋಭಾರವು ಇವುಗಳ ಒಟ್ಟೊಟ್ಟು ಜ್ಞಾನೇಂದ್ರಿಯವೆಂಬ ಮಧ್ಯಮಖಂಡದ ದುಃಖಗಳು.

(೫೦–೫೭) ಪುಣ್ಯಬಲಹೀನರಿಗೆ ನಾಲಿಗೆಯಿಂದ ಅಕ್ಷರಗಳ ಉಚ್ಚಾರವು ಶುದ್ಧವಾಗಿರುವದಿಲ್ಲ, ಕೈಯಲ್ಲಿನ ದಗ್ಧಹಸ್ತದ ರೇಖೆಗಳು, ಆ ಗೆರೆಗಳು ವಿಪರೀತವಾಗಿ ಪಾದಗಳಲ್ಲಿರುವದು, ಜನನೇಂದ್ರಿಯದ ಶುಕ್ಲ ಶೋಣಿತ ಮೂತ್ರಗಳ ವಿಕಾರಗಳು, ತನ್ನ ಪೂರ್ವ ಪಾಪಗಳನ್ನು ಲೆಕ್ಕಿಸುವಂತೆ ಬರುವ ಅಪಾನವಾಯುವಿಕಾರಗಳು, ಮೂಲದ ಮೊಳೆಗಳು, ಭಗಂಧರ, ಆಸನ ಪವಿತ್ರ ಎಂಬ ಘೋರ ವ್ರಣಗಳು ವಾಯುವಿನ ವಿಕಾರಗಳು ಎಲ್ಲವೂ ಸೇರಿ ಕರ್ಮೇಂದ್ರಿಯರೂಪ ನೀಚಖಂಡದ ದುಃಖಗಳು; ಅಂತಃಕರಣ ಚತುಷ್ಟಯ ಇಂದ್ರಿಯದಶಕ ಸೇರಿದ ಈ ಒಟ್ಟಿನ ಅಧ್ಯಾತ್ಮವನ್ನು ಅವಿದ್ಯೆಯಿಂದ ಈ ಜೀವನು ತನ್ನಲ್ಲಿ ಎಳೆದುಕೊಂಡು 'ನಾನು' ಎಂದು ವ್ಯವ

ಹರಿಸುತ್ತಿರುವನು. ಇವನೇ ಆತ್ಮಾಭಾಸನು. ಈ ಅಧ್ಯಾತ್ಮಗಳ. ಮತ್ತು ತನ್ನ ಸ್ಥೂಲ ಶರೀರ ಈ ಎರಡರಲ್ಲಿಯೂ ತೋರುವ ದುಃಖಗಳ ಪರಂಪರೆಯೇ ಆಧ್ಯಾತ್ಮಿಕತಾಪವು. ಈ ಖಂಡಗಳು–ಬರುವ ದುಃಖಗಳಿಗೆಲ್ಲ ಮನೆಯ ಬಾಗಿಲುಗಳಂತೆ ಸ್ಥೂಲ ಶರೀರ ದಲ್ಲಿ ತೆರೆದ ಬಾಗಿಲುಗಳಾಗಿರುವವು

೪ **ಆಧಿಭೌತಿಕತಾಪನಿರ್ಣಯ**—(೩–೧೩) ಹೊರಗಿನ ಪ್ರಾಣಿಗಳ ರೂಪು ತಳೆದಿರುವ 'ಅಧಿಭೂತ' ಎಂಬುದು ಶರೀರೇಂದ್ರಿಯಗಳ ಸಂಘಾತದ ರೂಪದಲ್ಲಿರು ವದು. ಅಲ್ಲದೆ ಆಕಾಶಾದಿ ಭೂತಗಳ ಕಾರ್ಯಗಳಾಗಿರುವ ಅದು ತನ್ನ ಸ್ತ್ರೀ ಪುತ್ರ, ಶತ್ರು ಮಿತ್ರಾದಿಗಳ ರೂಪದಿಂದ ಹೊರಗಡೆಯಲ್ಲೂ ಇರುವದು. ಇದನ್ನಧಿಕರಿಸಿ ಕೊಂಡು ತೋರುವ ತಾಪವು ಆಧಿಭೌತಿಕವು.

ತಾಮಸವಾದ ಈ ಮನಸ್ಸು ಕಾಮಿಸಿಯರಲ್ಲಿ ಕಾಮವನ್ನೂ, ತನ್ನ ಭೋಗ ಕ್ಕೆದುರುಬಂದವರಲ್ಲಿ ಸಿಟ್ಟನ್ನೂ ಹುಟ್ಟಿಸುತ್ತಿರುವದು. ಅನ್ನಪಾನಾದಿಗಳು, ಮಧು ಪಾನಕ ವಿಶೇಷಗಳು, ಹಣಕಾಸುಗಳು, ಪಟ್ಟೇಪೀತಾಂಬರಗಳು, ನೆಲ ಪುರ ಗ್ರಾಮ ಗಳು, ದಾಸದಾಸೀಯರು ತನಗೆ ದೊರೆತರೆ, ಮತ್ತೊಬ್ಬರಿಗೆ ಕೊಡಲಾಗದ ಲೋಭ ವನ್ನು ಹುಟ್ಟಿಸುವದು. ಲೇಶಮಾತ್ರ ಸುಖ ಕಾಣಿಕೆಗೆ ಬಂದರು ನಿಷಿದ್ಧ ವಿಷಯ ಗಳಾಗಿದ್ದರೂ ತಾನು ಬಿಡದೆ ಅವುಗಳನ್ನು ನಿರ್ದೋಷವೆಂದೂ ಸುಖದ ಕೇಂದ್ರವೆಂದೂ ಮೋಹಿಸಿಬಿಡುತ್ತಿರುವದು! ಜನರ ಹೊಗಳಿಕೆಗೆ ತನ್ನ ಕಿವಿ ಜೋತುಬಿದ್ದರೆ, ನಿಷ್ಪ್ರ ಯೋಜನನಾದ ಮನುಷ್ಯನನ್ನು ಕೂಡ ಉನ್ಮತ್ತನನ್ನಾಗಿ ಮಾಡುವ ಮದವನ್ನು ತಾನು ಹುಟ್ಟಿಸಿಬಿಡುತ್ತಿರುವದು. ಈ ಸ್ಥೂಲ ದೇಹವು–ಮರಣಸೂತಕಕ್ಕೆ ತವರು ಮನೆಯು, ರೋಗಗಳೆಂಬ ಕಡಲಿನಲ್ಲಿ ಬಿದ್ದು ತೇಲಾಡುತ್ತಿರುವ ಅಸ್ವತಂತ್ರದ ದುಃಖ ಪರಾಧೀನವು ಅನೃತಸ್ವರೂಪವುಳ್ಳದ್ದು; ಹೀಗಿದ್ದರು ಇದರ ಭೋಗ್ಯರಾಶಿಗಳಲ್ಲಿ ಯಾರಾದರು ಒಂದನ್ನು ಕಳಿದರು, ತನ್ನ ಕೈಯಿಂದ ಚದುರಿಸಿಬಿಟ್ಟರು ಸರಿ; ಅಷ್ಟಕ್ಕೆ ತಾನು ಜೀವಿಸಿಕೊಂಡಿರುವವರೆಗೂ ಕೇಡನ್ನು ಅವರಿಗೆ ಬಯಸುತ್ತ, ತಾನು ಜೀವಂತ ಶತ್ರುವಾಗಿರುವಂತೆ ತನ್ನನ್ನು ಮಾಡಿಡುವ ಮಾತ್ಸರ್ಯವನ್ನು ಹುಟ್ಟಿಸುವದು ಈ ರೀತಿಯಿಂದ ತಾಮಸಮನಸ್ಸಿನಿಂದ ಬಂದ ಈ ಅರಿಗಳಿಂದ ಮೂರುಲೋಕವೇ ಕಂಗೆ ಟ್ಟಿತು! ಮರವೆಯು ಬುದ್ಧಿಯಲ್ಲಿ ಬಲಿಯಿತು, ಈ ಅಜ್ಞಾನ ಜಾಡ್ಯಗಳು ಒಂದು ಗೂಡಿ ತನ್ನ ಸ್ವರ್ಗದ ಹಾದಿಯನ್ನೆ ಕಲ್ಲುಮುಳ್ಳುಗಳಿಂದ ತುಂಬಿದವು! ಉಂಡ ಭೋಗ ಗಳಿಂದಲೂ ಆ ಭೋಗವಾಸನೆಗಳಿಂದಲೂ ದುಃಖಗಳನ್ನೇ ಹಜ್ಜೆಹಜ್ಜೆಗೂ ಸಾಕೆನ್ನು ವಂತೆ ಅನುಭವಿಸಿದ್ದರೂ ಈ ಬುದ್ಧಿಯು ಮತ್ತೂ ಆ ಭೋಗಗಳನ್ನೆ ಬಿಡದೆ ಆಶಿಸು ತ್ತಿರುವದು ವಿಚಿತ್ರವು!

(೧೪–೩೧) ತತ್ತ್ವವಿಚಾರಕ್ಕೆಂದು ಹೊರಟವರು–ಇಹಪರಗಳಿಂದ ತಮ್ಮನ್ನು ವಂಚಿಸುವ ಸಾಂಖ್ಯಾದಿ ದುರ್ಮತಗಳನ್ನು ಬಿಟ್ಟು, ಉಪನಿಷನ್ಮತವನ್ನು ನಂಬಿದರೆ ಮಹಾ ಲಾಭವುಂಟು. ಸಾರಾಸಾರ ವಿವೇಕವು ಸಜ್ಜನಸಂಗವಿಲ್ಲದೆ ಬರುವದಿಲ್ಲ;

ವಿಷಯವಾಸನೆಗಳು ವಿಪತ್ಪರಂಪರೆಗೇ ಆಶ್ರಯುವು. ಅವುಗಳ ಭೋಗಗಳು ದುಃಖ ಮೂಲವು ಎಂದು ಬಗೆದು. ಅವುಗಳಲ್ಲಿ ಹೇಸಿಗೆ ಬುದ್ಧಿ ಬಂದವನ ಚಿತ್ತವು ಸನ್ಮಾರ್ಗ ದಲ್ಲಿ ನಿಲ್ಲುವದಕ್ಕೆ ತಾನು ಮೊದಲುಮಾಡಲು, ಎದುರುಬಿದ್ದ ಆ ಭೋಗವಾಸನೆಗಳು ಕೂಡಲೆ ಅದರಲ್ಲಿ ನಿಸ್ಸಾರತೆಯನ್ನು ತೋರಿಸುವದಕ್ಕೆ ಸಿದ್ಧವಾಗುವವು! ಸರಿಹೊಂ ದುವ ಈ ಮನಸ್ಸು ಕೂಡ ಅದನ್ನೆ ತಾನೂ ಊಗುಟ್ಟುವದಕ್ಕೆ ಆರಂಭಿಸುವದು. ಶರೀರೇಂದ್ರಿಯಮನ-ಆದಿ ಈ ಅನಾತ್ಮಗಳಲ್ಲಿ 'ನಾನು' ಎಂದು ತಲೆಯೆತ್ತಿದ ಈ ದುರ್ವಾಸನೆಗಳನ್ನು ಎಣ್ಣೆಯಲ್ಲಿನ ತುಪ್ಪದ ಜೊಟ್ಟಿನಂತೆ ಯಾರಿಂದಲೂ ಹೊರಕ್ಕೆತ್ತು ವದಕ್ಕಿರುವದೇ ಇಲ್ಲ. ಬಿದಿರಕಳಿತೆಯಂತೆ ಮೊದಮೊದಲು ಮೃದುವಾಗಿ ದೇಹಾದಿ ಗಳಲ್ಲಿ ಉದಿಸಿದರು ಬರಬರುತ್ತ ಬಿದಿರಿನ ಗಂಟಿನಂತೆ ತಮ್ಮೊಳಗೆ ಬಲಿತ ಅವುಗಳು ತೊಲಗಿಸುವದಕ್ಕಿಲ್ಲದಂತೆ ಗಟ್ಟಿಗೊಂಡುಬಿಡುತ್ತಿರುವವು. ಹೊತ್ತರೆ ಅಗಲದ ಹೊರೆ ಯನ್ನು ಹೊತ್ತವನಿಗೂ ಆ ಹೊರೆಗೂ ಭೇದ ತೋರದಿರುವಂತೆಯೇ ಆತ್ಮನು ಮತ್ತು ಅನಾತ್ಮವಾದ ದೇಹಾದಿಗಳು ತನಗೆ ವಿಚಾರವಿಲ್ಲದ್ದರಿಂದ ಒಂದರಲ್ಲೊಂದುಕಲೆಬೆರೆತು, ಒಂದಿನ್ನೊಂದಾಗಿ ಬಿಟ್ಟಿರುವವು. ಬೇರಾಗಿ ಅವುಗಳನ್ನು ವಿಂಗಡಿಸಿಕೊಂಡು ತಾನು ತಿಳಿಯುವದೇ ವಿದ್ಯೆಯು. 'ನಾನು' ಎಂದು ಸಂಚರಿಸುತ್ತಿರುವ ದೇಹಾದಿಗಳಲ್ಲಿನ ಈ ದುರಹಂಕಾರವು ಚೈತನ್ಯದ ಬೆಂಬಲದಿಂದ ತಾನು ಎಲ್ಲವನ್ನು ನಡೆಸುತ್ತಿರುವದು. ಸುಖ ದುಃಖಗಳ ಅನುಭವವು–ಸಂಸಾರದ ಜನರಿಗೆ ಕಾಲದ ದೀರ್ಘ ಹ್ರಸ್ವ ಧರ್ಮ ಗಳನ್ನು ಕೂಡ ತಾನು ವಿಪರೀತಮಾಡಿ ತೋರಿಸಿಕೊಡುತ್ತಿರುವದು. ದುಃಖಗಳನ್ನು ಇಸ್ನಿಲ್ಲವೆನ್ನುವಂತೆ ಸಂಸಾರದಲ್ಲಿ ಅನುಭವಿಸಿ ತಾವು ಗೋಳಾಡುತ್ತಿದ್ದರೂ ಜೀವರು ಪುನಃ ವಿಷಯಗಳಿಂದ ತಾತ್ಕಾಲಿಕ ಸುಖಗಳನ್ನೆ ಎದುರಿಸುತ್ತಿರುತ್ತಾರೆ! ಹೀಗೆ ಕಾಮಾದಿಗಳು, ಇವುಗಳಿಂದ ಬರುವ ದುಃಖಗಳು, ಚಿತ್ತದಲ್ಲಿ ನಿಂತ ಭೋಗವಾಸನೆ ಗಳು, ಇದೆಲ್ಲಕ್ಕೂ ಮೂಲವಾದ ಅನಾತ್ಮಾಭಿಮಾನವು ಸೇರಿದ ಇವುಗಳ ಒಟ್ಟೊ ಉತ್ತಮಖಂಡದ ದುಃಖವು.

(೩೨–೫೨) ಒಟ್ಟು ಜಗತ್ತಿನ ಸುಖವು ಯುವತಿ ಮತ್ತು ಉಳಿದ ಹಾಸಿಗೆ ಮೊದಲಾದ ಜಡಭೋಗ ಸಾಮಗ್ರಿಗಳು ಎಂದು ತನ್ನಲ್ಲಿ ಎರಡು ಬಗೆಗಳಿಂದಾಗುತ್ತಿ ರುವದು. ಇವುಗಳ ಭೋಗ ಕಾತುರತೆಯು ಜನ್ಮಜನ್ಮಾಂತರಗಳಲ್ಲಿಯೂ ಬಿಡದೆ ಜೀವರಿಗೆ ದುಃಖವನ್ನೇ ತಂದುಕೊಡುತ್ತಿರುತ್ತದೆ. ಇಂದ್ರಿಯಗಳಿಂದ ದೇಹದೊಳ ಹೊಕ್ಕ ಶಬ್ದಸ್ಪರ್ಶಾದಿ ವಿಷಯಗಳು ಸುಖ ದುಃಖಗಳೆಂಬ ವಿಕಾರಗಳನ್ನು ಬಿಡದೆ ಉಂಟುಮಾಡುವಂತಿದ್ದರು, ಜೀವರು ಬಿಟ್ಟುಬಿಡುವದಕ್ಕಿಲ್ಲದ ಆ ಭೋಗಗಳಲ್ಲಿಯೇ ಪಶುಗಳಂತೆ ಮನುಷ್ಯನು ಲೋಲನಾಗಿರದೆ, ಅವುಗಳ ಮಿತಭೋಗದಿಂದ ಜೀವಿಸಿ ಕೊಂಡಿರಬೇಕು. ಏಕೆಂದರೆ ತಮ್ಮನ್ನು ಸೇವಿಸಿದ ಜೀವರಲ್ಲಿ ತಮ್ಮ ಗುಣದೋಷ ಗಳಿಂದ ಅವರನ್ನು ವಿಕಾರಪಡಿಸುತ್ತಿರುವ ಇವು ಆ ಜೀವರ ಸದ್ಗತಿ ದುರ್ಗತಿಗಳಿಗೂ ಕಾರಣವಾಗುತ್ತಿರುವವು. ಇದೆಲ್ಲವೂ ಸೇರಿ ಮಧ್ಯಮಖಂಡದ ದುಃಖವೆನಿಸುವುದು.

(೫೩-೯೫) ಇಂದ್ರಿಯಗಳಲ್ಲೊಂದೊಂದೇ ಮಹಾ ಮಹಾ ಪಾತಕಗಳನ್ನು ತರುವಂತಿದ್ದರೂ ಒಂದು ಸಜ್ಜನರ ನಿಂದೆಯು ಬಿಡದೆ ಅವುಗಳ ರಾಶಿಯನ್ನೇ ತರಬಲ್ಲುದ.. ದಾನರಕ್ಷಣಗಳಿಂದ ತನ್ನ ಕೈಯನ್ನು ಸದುಪಯೋಗಕ್ಕೆ ಹಚ್ಚಬೇಕು. ಕೈಯಿಂದ ಮಾಡುವ ಜೀವಿಕಾಕೃತಿಯಿಂದ ಪುಣ್ಯಪಾಪಗಳಾಗುತ್ತಿರುವುವು ಮಿಕ್ಕ ಜನರನ್ನು ಪ್ರಾಣಿಗಳನ್ನು ಹಿಂಸೆಕೊಟ್ಟು ಜೀವಿಸುವದು ಕಾಡುಮೇಡಿನ ಗಿಡಮರಗಳಿಗಿಂತಲೂ ನಿಕೃಷ್ಟ! ಕೊಲ್ಲುವದು ನರಕಗಳ ಬೆಳೆಗೆ ಮಳಗಾಲವು, ಪುಣ್ಯದ ನಂದನ ವನಕ್ಕೆ ಅದು ದಾವಾನಲವು; ಪುಣ್ಯತೀರ್ಥ ಕ್ಷೇತ್ರ ಆಶ್ರಮಗಳ ಸಂಚಾರವು ಸದ್ಗತಿಯನ್ನು, ಹಾಗಿಲ್ಲದ ಕಾಲ್ನಡೆಯು ತನಗೆ ದುರ್ಗತಿಯನ್ನು ಕೊಡುವದಾಗುವದು. ಒಬ್ಬರನ್ನಾದರು ತಾನು ಬಿಡದಂತೆಲ್ಲರ ಸುಖಬಾಳನ್ನು ಮನ್ಮಥನು ಹಾಳುಮಾಡುತ್ತಿರುವನು, ದೇವಾಸುರನರರೆಲ್ಲರನ್ನು ಕಷ್ಟಪರಂಪರೆಗಳಿಗೆ ಸಿಗಿಸಿ ಗೋಳಾಡಿಸಿದನು! ಆಸನದ ಪಕ್ಕದಲ್ಲಿ ಭಗಂಧರವು, ಮಧ್ಯ ಮೂಲದ ನೊಳೆಗಳು, ಆಸನಪವಿತ್ರವು ಎಂಬುದೆಲ್ಲ ಪಾಯುವಿನ ನೆಪದಲ್ಲಿ ಬಂದು ಬಹು ಬಾಧೆಗೊಳಿಸುವವು ಇವೆಲ್ಲ ಸೇರಿ ನೀಚ ಖಂಡದ ದುಃಖಗಳು. ಈ ಮೂರು ಬಗೆಯ ಖಂಡಗಳ ದುಃಖಗಳೆಲ್ಲ ಒಟ್ಟುಗೂಡಿ ಆಧಿಭೌತಿಕ ದುಃಖವೆನಿಸುವದು. ಅಲ್ಲದೆ, ವ್ಯಾಘ್ರ ಚೋರ ಶತೃಗಳು ಸರ್ಪ ವೃಶ್ಚಿಕಾದಿಗಳು, ಕರಡಿ ಕೋತಿ ಮುಂತಾದವುಗಳು, ಅಡ್ಡಲಾಗಿ ಹಾದಿಯನ್ನು ಕಟ್ಟುವ ಮಸುಕು ಜನರು, ಚಾಡಿಕೋರರು, ದಯೆಯಿಲ್ಲದ ಅರಸುಗಳು, ಬಸುರ ಬೇಗೆಯುಳ್ಳ ದುರ್ಮತಿಗಳು ಸಹ ತನ್ನ ದುಃಖಕಾರಣರೇ ಆಗಿ ಪರಿಣಮಿಸುವರು. ವಿಷಯುಗಳನ್ನನುಭವಿಸುವ ಕಾಲವನ್ನು ಮರೆತರು ದುಃಖ! ತನ್ನ ಶರೀರೇಂದ್ರಿಯಗಳಲ್ಲಿ ಬಲಕುಗ್ಗಿದರು ದುಃಖ! ಮತ್ತೊಬ್ಬರು ಕೆಡಿಸಿವರು ದುಃಖ, ಅವುಗಳು ದೋಷದಿಂದ ಕೂಡಿದ್ದರು ದುಃಖ! ಬಿಡುವಿಲ್ಲದಂತೆ ರೋಗಗಳು ಒತ್ತರಿಸುತ್ತಿದ್ದರು ದುಃಖ, ಪ್ರತಿಕೂಲ ಸಂಪತ್ತಿದ್ದರು ತನಗೆ ದುಃಖ ತಪ್ಪುವಂತಿಲ್ಲ! ಹೀಗೆ ಎಲ್ಲಾ ವಿಧದಿಂದಲೂ ದುಃಖವನ್ನೇ ತನ್ನ ಕೈಸೇರಿಸಲಿರುವ ವಿಷಯುಗಳು ಕಾಲಕ್ಕೆ ಸಿಕ್ಕಿ ಕೆಡುವದೇ ತಮ್ಮ ಸ್ವಭಾವವಾಗಿರುವವು. ಸುರಶ್ರೇಷ್ಠರಲ್ಲಾದರು ನಿಂತು ಕಾಲೂರುವುದಕ್ಕಿಲ್ಲದೆ ಕಾಲ ವಶವನ್ನೈದಲಿರುವ ಈ ತುಚ್ಛ ವಿಷಯುಗಳು ಈ ಕಡುಪಾಮರರಿಗೆ ಸುಖವನ್ನು ಕೊಡುವದು ಎಲ್ಲಿ ಬಂತು? ಎಂಬುದನ್ನು ಮನಗಂಡ ಬುದ್ಧಿವಂತನು ಆ ಇಂದ್ರಿಯಾರ್ಥಗಳು-ಪುಣ್ಯದ ಯಾವುದೇ ಲೋಕಾಂತರದಲ್ಲಿ ಅಥವಾ ಜನ್ಮಾಂತರದಲ್ಲಿ ತನಗೆ ದೊರೆಯುವಂತಿದ್ದರು. ದುಃಖಮಯವೆಂಬುದನ್ನು ಮಾತ್ರ ಮರಿಯುವದಲ್ಲ! ಸುಖವೆಂದು ಪ್ರತ್ಯಕ್ಷಗಂಡರು, ಕಾಲಾಂತರದಲ್ಲಿ ದುಃಖವನ್ನು ಮುಟ್ಟಿಸುವ ವಿಷಯುಗಳನ್ನು ಸುಖದ ಬುದ್ಧಿಯಿಂದ ಹೊರಗಿಡುವದೇ ತನ್ನ ಜಾಣತನವಲ್ಲದೆ, ಬೇರೊಂದಲ್ಲ.

೫ **ಆಧಿದೈವಿಕತಾಪ ನಿರ್ಣಯ:**—(೪-೧೬) ಚಂದ್ರನ ಕಲೆಗಳು ಶುಕ್ಲ ಪಕ್ಷ ಮತ್ತು ಕೃಷ್ಣ ಪಕ್ಷಗಳಲ್ಲಿ ವೃದ್ಧಿಕ್ಷಯುಗಳನ್ನು ಹೊಂದುವವು. ಮನೋ ಚಂದ್ರನ ಕಲೆಗಳಾದ ಬಯಕೆಗಳೂ ಹಾಗೆಯೇ ಆಗುತ್ತಿರುವವು. ತನ್ನಿಷ್ಟಬಂದ ವಿಷಯುಗಳು

ಐದಾರು ಮುಖದಿಂದ ತಾನು ಚಿಂತಿಸಿದ ಕಾರ್ಯಗಳು ತನ್ನ ಗೈಗೂಡುವದು ಮತ್ತು ಕೂಡದಿರುವದು ಇವುಗಳಿಂದಲೂ ಈ ಮನಸ್ಸಿನ ಬಯಕೆಗಳ ಸಾಲಿನಲ್ಲಿ ವೃದ್ಧಿ ಕ್ಷಯ ಗಳು ತಪ್ಪುವದಿಲ್ಲ. ಚಂದ್ರನಲ್ಲಿ ಅಮೃತದಂತೆ; ಮನೋಚಂದ್ರನಲ್ಲಿ ಶಮವೇ ಅಮೃತವು. ಚಂದ್ರನಿಗೆ ದೇವಗಣದಂತೆ, ಈ ಮನೋಚಂದ್ರನಿಗೂ ಸಪ್ತಧಾತು ಗಳೇ ಆಶೀರ್ವದಿಸುತ್ತಿರುವ ದೇವಗಣ; ಇವುಗಳ ಬಲವಿದ್ದರೆ ಎಂಥ ವಿಪತ್ತಿನಲ್ಲಿಯೂ ಈ ಮನಸ್ಸು ನರಕದ ಹಾದಿಯನ್ನು ಮೆಟ್ಟುವದಿಲ್ಲ; ನಕ್ಷತ್ರಗಳಲ್ಲಿ–ಶತೃ, ಮಿತ್ರ, ಸಮ ಎಂದು ಚಂದ್ರನಿಗೆ ಬೇರ್ಬೇರೆಯ ಸ್ಥಾನಗಳಿರುವಂತೆ ಮತ್ತು ಅವುಗಳಲ್ಲಿ ಚಂದ್ರನು ಸಂಚರಿಸುತ್ತಿರುವಾಗ ಅವನಿಂದ ಜಗತ್ತಿನ ಜೀವರಿಗೆಲ್ಲ–ಸುಖ, ದುಃಖ, ಮಿಶ್ರ ಎಂಬ ಕರ್ಮಫಲಗಳೂ ಆಗುತ್ತಿರುವವು. ಆದರಂತೆ ಇಲ್ಲಿ ಮನೋರಾಜನಿಗೂ ಸತ್ವಾದಿ ಮೂರು ಗುಣಗಳ ಸಂಕಲ್ಪಾವಳಿಯೇ ವಧೂಕದಂಬಕವರ್ಗವ; ೨೭ ನಕ್ಷತ್ರ ಗಳ ಸಾಲಿನಲ್ಲಿ—ದೇವಗಣ, ರಾಕ್ಷಸಗಣ, ಮನುಷ್ಯಗಣ ಎಂದು ವಿಭಾಗವಿರುವಂತೆ; ಸಾತ್ವಿಕ ರಾಜಸ ತಾಮಸ ಎಂದು ವಿಭಾಗವಿರುವ ಆ ಸಂಕಲ್ಪಾವಳಿಯಲ್ಲಿ ಕಲೆತಿರುವ ಮನಸ್ಸಿನಿಂದಲೂ ಪುಣ್ಯ, ಪಾಪ, ಮಿಶ್ರ ಎಂಬ ಕರ್ಮಗಳಿಂದ ಜಗತ್ತಿನ ಜೀವರಿಗೂ ದೇವ. ನರಕ, ಮನುಷ್ಯ ಎಂಬ ಈ ಲೋಕತ್ರಯರೂಪವಾದ ಫಲಗಳು ಆಗುತ್ತಿರು ವವು. ಚಂದ್ರನ ತಿಂಗಳುಬೆಳುಕಿನಲ್ಲಿ ಗೂಬೆಗಳು ಮೃಗಗಳು ಸಂಚರಿಸುವವು. ಆ ಬೆಳಕು ಕ್ಷೀಣಿಸಿ ಬಂದಾಗ ಒಡನೆ ಜಾರ ಚೋರರಿಗೂ ಗಮನವುಂಟಾಗುವದು; ಹಾಗೆಯೇ ಅಜ್ಞಾನರಾತ್ರಿಯಲ್ಲಿ ಬೆಳೆದಿರುವ ಭೋಗವಾಸನೆಗಳಿರುವಲ್ಲಿ ಕಾಮಾದಿ ವೃತ್ತಿಗಳು ಅಂತಃಕರಣದಲ್ಲೆಡೆಯಾಡುತ್ತಿದ್ದರು, ವಿವೇಕಬಲವು ತನ್ನಲ್ಲಿ ಕುಗ್ಗಿ ಬಂದಾಗ ಜೀವರಲ್ಲಿ ಕಾಮ್ಯಕರ್ಮಗಳೇ ತಲೆಯೆತ್ತುತ್ತಿರುವವು; ೨,೫,೭,೮,೯,೧೨–ಈ ರಾಶಿ ಗಳಲ್ಲಿ ಚಂದ್ರನಿಗೆ ದುಷ್ಟಗ್ರಹಗಳ ದೃಷ್ಟಿಯುಂಟಾಗಲು, ಅವುಗಳಲ್ಲೊಂದನ್ನು ಜನ್ಮ ಲಗ್ನವಾಗಿ ಪಡೆದು, ಆಗ ಹುಟ್ಟಿರುವ ಮನುಷ್ಯನಿಗೆ—ಆ ಚಂದ್ರನು ಮರಣವನ್ನು. ಹಾಗಿಲ್ಲದವನಿಗೆ ಯೋಗವನ್ನು ಕೊಡುತ್ತಿರುವನು. ದುರ್ಲೋಭಾಭಿಲಾಷೆಗಳೇ ಇಲ್ಲಿ ಮನಸ್ಸಿಗೆ ದೃಷ್ಟಿದೋಷವು; ಈ ಮನಸ್ಸು—ದುಷ್ಟಸಂಗವನ್ನು ಮಾಡಿ, ಕಷ್ಟಪರಂಪರೆ ಗಳಲ್ಲಿ ತಾನು ಬಲವಾಗಿ ಸಿಕ್ಕಿಬಿದ್ದಿರುವದೇ ಅದಕ್ಕರಿಷ್ಟವಸತಿಯು; ಮನಸ್ಸಿಗೆ ಈ ಬಗೆಯ ದೃಷ್ಟಿದೋಷವಿಲ್ಲದಿರಲು, ಜೀವನಿಗೆ ಆಗ ಶುಭಫಲಗಳೇ ಲಭಿಸುತ್ತಿರುವವು; ಚಂದ್ರನು ಶರದೃತು ಹಿಮಂತರ್ತುಗಳಲ್ಲಿ ತಮ್ಮ ಕೈಕಾಲು ಅಲುಗಾಡದಿರುವಂತೆ ಜೀವ ರಿಗೆಲ್ಲ ಥಂಡಿಯು ಶೀತ ಜಡತ್ವ ಜಾಡ್ಯಗಳನ್ನುಂಟುಮಾಡುತ್ತಿರುವನು; ತಮೋಗುಣ ವನ್ನು ಹೊಕ್ಕ ಈ ಮನಸ್ಸು ಕೂಡ ದಶೇಂದ್ರಿಯಗಳಲ್ಲಿ ಅರಿವೇ ತಲೆಯೆತ್ತದಿರುವಂತೆ ಮೌಢ್ಯವನ್ನು ಜೀವರಲ್ಲೆಲ್ಲ ಚೆನ್ನಾಗಿ ಮೈಗೂಡಿಸಿಬಿಡುತ್ತಿರುವದು. ನಕ್ಷತ್ರಗಳಲ್ಲಿ ಮುನ್ನೋಟ ಚಂದ್ರನಿಗಿರುವಂತೆ, ಅಂತಃಕರಣಚತುಷ್ಟಯಗಳಲ್ಲಿಯೂ ದೃಶ್ಯವನ್ನು ಕುರಿ ತಿರುವ ಮುನ್ನೋಟ ಮನಸ್ಸಿಗೇ ಬಹು ಚುರುಕಾಗಿರುತ್ತದೆ. ಮನಸ್ಸನ್ನು ಯೋಗಿಗಳು ಲಕ್ಷಿಸದಿದ್ದರು, ವಿಷಯಾನುರಾಗಿಗಳು ಅದಕ್ಕೊಳಗಾಗುತ್ತಿರುವರು ! ಪಾಮರರಲ್ಲಿ ಘನ

ಪಾಂಡಿತ್ಯವುಳ್ಳೀಮನಸ್ಸುವಿವೇಕಿಗಳ ಸಭೆಯಲ್ಲಿ ತಲೆಯೆತ್ತುವದಕ್ಕುಮುಖವಿರುವದಿಲ್ಲ.

(೧೭–೭೪) ಅಗ್ನಿಯಂಶವು ಆಕಾಶದಲ್ಲಿ ಸೇರಿ ಹುಟ್ಟಿದ ಬುದ್ಧಿಯಿಂದ ವೇದ ವಿಭಾಗವು, ಋಷಿಗಳಲ್ಲಿ ಶಾಸ್ತ್ರಾರ್ಥಚರ್ಚೆಗಳು, ಜನರಿಗೆ ವ್ಯವಹಾರದಲ್ಲಿ ವಸ್ತುಗಳಲ್ಲಿ ಗುಣದೋಷಗಳ ಅರಿವುಗಳು ಎಲ್ಲವು ಆಗುತ್ತಿರುವದು. ಈ ಬುದ್ಧಿಗೆ ತಮೋಗುಣ ದಿಂದ ಮರವೆ, ಸಂಶಯ, ವಿಪರೀತಭಾವನೆ, ಸಂಭಾವನೆಯೆಂಬ ಈ ದೋಷಗಳು ಬಂದು ತಾಕುತ್ತಿರುವವು. ಇದರಿಂದ ಜನರು ಅನರ್ಥಗಳಿಗೆ ವಶರಾಗುತ್ತಿರುವರು. ಜಲದಂಶವು ಆಕಾಶದಲ್ಲಿ ಸೇರಿ ಜನ್ಮಿಸಿದ ಚಿತ್ತವು ತನಗೆ ಮುಂದಾಗುವ ಕರ್ಮಫಲಗ ಳೆಂಬ ಬಿತ್ತನೆಯ ಧಾನ್ಯಕ್ಕೆ ಕಣಜದಂತಿರುವದು; ಎಲ್ಲಾ ವಾಸನೆಗಳು ಇದರಲ್ಲಿಯೇ ಸೇರಿಕೊಂಡು ತಾವು ಜೀವಿಸಿಕೊಂಡಿರುವವು ಈ ಚಿತ್ತವೇ ಒಂದು ಬಟ್ಟೆಯು, ವಾಸನೆಗಳೇ ಇದರ ನೂಲುಗಳು, ಈ ನೂಲು–ಧಾರಗಳು ತಮ್ಮಲ್ಲಿ ಗಟ್ಟಿಯಿರುವ ವರೆಗೂ ಆ ಚಿತ್ತವೆಂಬ ಬಟ್ಟೆಯು ಹರಿಯುವದಕ್ಕಿಲ್ಲ; ಅವುಗಳನ್ನುಳಿದ ಚಿತ್ತವು ವಾಸನೆಯಿಲ್ಲದ ಕುಸುಮಗಳಂತಾಗಿ ತಾನು ಕಡ್ಡಿಗೂ ಕಡೆಯೆನಿಸುವದು. ಭೂಮಿ ಯಂಶವು ಆಕಾಶದಲ್ಲಿ ಸೇರಿ ಅಹಂಕಾರವಾಯಿತು ವಿಶ್ವತೈಜಸಪ್ರಾಜ್ಞರಲ್ಲಿಯೂ, ಸ್ಥೂಲ ಸೂಕ್ಷ್ಮ ಶರೀರಗಳಲ್ಲಿಯೂ 'ನಾನು' ಎನ್ನುತ್ತ ತಗುಲಿಕೊಂಡಿತು. ಅಲ್ಲದೆ ಹೆಂಡಿರು ಮಕ್ಕಳುಮರಿಗಳಲ್ಲಿಯೂ ಮನೆ ಮಠ ಮುಂತಾದವುಗಳಲ್ಲಿಯೂ ನನ್ನವೆಂದಭಿ ಮಾನಿಸಿ ಮೋಹದಿಂದ ಅಂಟಿಕೊಂಡಿರುತ್ತದೆ ಮಮತೆಯೆಂಬ ಹೆಂಡಿತಿ ಬಂದು ಇದಕ್ಕೆ ದಂಬ ದರ್ಪಶೆಂಬ ಮಕ್ಕಳನ್ನು ತಾನು ಹಡೆದಳು! ಈ ಬಗೆಯಿಂದ ತಾನಲ್ಲದ ದೇಹೇಂದ್ರಿಯಗಳನ್ನು ತಾನೆಂಬುದರಿಂದ ಈ ಸಂಸಾರ ದಂದುಗವೆಲ್ಲವೂ ತನಗೆ ಬಂದಿತು. ಇದರಿಂದ ಭವಮಾಲಿಕೆಗೂ ನಿಜತಂತು–ದಾರವೊಂದು ದೊರೆತಂತಾಗಿ ತನ್ನೊಳಗೆ ಅದು ಗಟ್ಟಿಗೊಂಡಿತು. ಜಗತ್ತಿನ ಭೋಗವೆಲ್ಲ ತನಗಿರಲೆಂದು ಬಯಸುವ ಈ ಅಹಂಕಾರಕ್ಕೆ–ಸಂಸಾರವು ತನ್ನ ಸುಖಭೋಗದ ಸವಿಯನ್ನೆಲ್ಲ ಮೆಲ್ಲಮೆಲ್ಲನೆ ನೆತ್ತಿ ಗೇರಿಸಿಬಿಟ್ಟಿತು. ಇದರಿಂದ ಬುದ್ಧಿಯು ವಿಕಾರವಾದದ್ದಲ್ಲದೆ, ವಾಸನೆಗಳೆಲ್ಲ ಚಿತ್ತದ ಲ್ಲೊಟ್ಟಾಯಿತು ದುಃಖಗಳು ಮೇಲಿಂದಮೇಲೆ ಬಂದು ತನ್ನಮೇಲೆ ಸವಾರಿ ಮಾಡು ತ್ತಿದ್ದರು ಎಚ್ಚರವಿಲ್ಲದ ಈ ಮನಸ್ಸು ತಾನು ಉಂಡ ದುಃಖಗಳನ್ನೆಲ್ಲ ಅಲ್ಲಿಗಲ್ಲಿಗೇ ಮರತು, ತನ್ನ ಕಲ್ಪನೆಯ ಸುಖದಲ್ಲಿ ಕಣ್ಣಲ್ಲಡೆ, ಬೇರೊಂದರಲ್ಲಿ ದೃಷ್ಟಿಯಿಲ್ಲ; ತನ್ನ ದಲ್ಲದ ಭೌತಿಕವಾಗಿರುವ ಶರೀರಾದಿಗಳನ್ನು 'ನಾನು' ಎಂದುಕೊಳ್ಳುತ್ತ, ಅವುಗಳಲ್ಲಿ ಸಿಕ್ಕಿಬಿದ್ದ ಈ ಜೀವನು ಮಂಕಾದನು! ಹೀಗೆ ತನಗೆ ದೃಶ್ಯವಾಗಿರುವ ದೇಹಾದಿಗ ಳನ್ನು 'ನಾನು' ಎಂದು ನಂಬಿ, ಅವುಗಳಲ್ಲಿ ತಾನು ನೇತುಬಿದ್ದು ಒಂದುಗೂಡಿರುವ ದೆಂಬುದೇ ಅಹಂಕಾರದೊಳಗಿರುವ ಮುಖ್ಯ ದೋಷ–ಕೇಡಲ್ಲದೆ ಬೇರಲ್ಲ; ಈ ರೀತಿ ಯಿಂದ ಚಂದ್ರ ಬ್ರಹ್ಮ ವಾಸುದೇವ ರುದ್ರ ಎಂಬ ಅಧಿದೇವತೆಗಳಿಂದ ಮನ ಬುದ್ಧಿ ಚಿತ್ತಾಹಂಕಾರಗಳಲ್ಲಿ ಆಗುತ್ತಿರುವ ದುಃಖವೇ ಉತ್ತಮುಖಂಡದ ದೈವಿಕತಾಪವು. ಹೀಗೆಯೇ ಪಂಚಜ್ಞಾನೇಂದ್ರಿಯಗಳಲ್ಲಿಯೂ ಅಧಿದೇವತೆಗಳಿಂದ ಶಬ್ದಾದಿ ವಿಷಯ

ಗಳನ್ನು ಗ್ರಹಿಸುವ ನೆವದಲ್ಲಾಗುವ ದುಃಖಗಳು ಮಧ್ಯಮಖಂಡದ ದೈವಿಕತಾಪವು; ಅಗ್ನೀಂದ್ರೋಪೇಂದ್ರ ಪ್ರಜಾಪತಿ ಮೃತ್ಯುಗಳಿಂದ ವಾಗಾದಿ ಕರ್ಮೇಂದ್ರಿಯಗಳ ಕ್ರಿಯೆಗಳ ಮೂಲಕ ಆಗುವ ದುಃಖಗಳೇ ತುದಿಯ ಖಂಡದ ದೈವಿಕತಾಪವು; ಬಿಡದೆಲ್ಲರಲ್ಲಿಯೂ ಹೀಗೆ ಮೂರು ಖಂಡಗಳಲ್ಲಾಗುವ ತಾಪಗಳೆ ಆಧಿದೈವಿಕ ತಾಪವು.

(೭೫–೮೮) ಪಂಚೀಕರಿಸಿದ ಭೂತಗಳ ೨೫ ತತ್ತ್ವಗಳಿಂದ ರೂಪುಗೊಂಡಿರುವ ಶರೀರೇಂದ್ರಿಯಗಳ ಸಂಘಾತದಲ್ಲಿ 'ನಾನು' ಎಂಬ ಈ ಜೀವರೂಪವು ಆನಂದಬ್ರಹ್ಮದಲ್ಲಿ ಹುಸಿದೋರಿಕೊಂಡಿತು. ಇಹನನ್ನಾದಿಗೊಂಡಿರುವ ನಮ್ಮ ಶರೀರದೊಳಗಿರುವ ಚತುರ್ದಶ ಕರಣಗಳೇ ಮೂರು ಖಂಖಗಳ ರೂಪಿನಿಂದ ಹೊರಹೊಮ್ಮಿಕೊಂಡವು. ಇವುಗಳೇ ಸಕಲ ದುಃಖಗಳಿಗೂ ಮೊದಲ ಬೀಜಗಳು; ವಿಷಯಗಳೇ ಅಂಕುರಗಳು; ಅಧಿದೇವತೆಗಳೇ ಬಿಟ್ಟಿರುವ ಫಲಗಳು; ಆದ್ದರಿಂದ ತತ್ತ್ವಜಿಜ್ಞಾಸುಗಳು ದುಃಖವೆಂದೇ ಇವುಗಳನ್ನು ಉಪೇಕ್ಷಿಸಬೇಕು. ಈ ಕರಣಗಳ ಉಪಟಳವು ಶಾಂತವಾದಲ್ಲದೆ, ನಿಜಸುಖವು ತನಗೆ ಕಾಣಿಕೆಗೂ ಬರುವಂತಿಲ್ಲ. ಆದರು ಮಂದಮತಿಗಳು ಈ ಕರಣಗಳಿರುವಾಗ ತೋರಿ ಕ್ಷಣಮಾತ್ರದಲ್ಲಿ ಮೈಗರೆಯುವ ಸುಖಾಭಾಸದ ಲೇಶಗಳ ತುಂತುರಗಳನ್ನಾಶ್ರಯಿಸಿ, ಮತವೈಶಿಷ್ಟ್ಯಗಳನ್ನು ಕಲ್ಪಿಸುತ್ತಿರುವದು—ನೀರಿನ ಗುಳ್ಳೆಯನ್ನು ಸುವರ್ಣಪಾಶಗಳಿಂದ ಬಿಗಿಮಾಡಿ ನಿಲಿಸುವದಕ್ಕೆ ಯತ್ನಿಸುವ ಧೀರರೆಂಬುದಕ್ಕಿನ್ನು ಸಂಶಯವಿಲ್ಲ. ಆದ್ದರಿಂದ ಜಿಜ್ಞಾಸುಗಳು–ವೇದಾಂತವನ್ನೇ ಬಿಡದೆ ಓದಬೇಕು; ಚಿಂತಿಸಿದರೆ ಅದರ ಅರ್ಥವನ್ನೆ ಚೆನ್ನಾಗಿ ತಿಳಿದುಕೊಳ್ಳಬೇಕು; ಬಿಡುವಂತಿದ್ದರೆ ವಿಷಯಾನುರಾಗವನ್ನೆ ಸಂಪೂರ್ಣ ಬಿಡಬೇಕು; ಹೊಂದುವದಕ್ಕಾದರೆ ಇಂದ್ರಿಯಾರ್ಥಗಳಲ್ಲಿ ಜುಗುಪ್ಸೆಯನ್ನೇ ಇನ್ನಿಲ್ಲವೆಂಬಷ್ಟು ಹೊಂದಬೇಕು. ಅರೆದರೆ ಪುನಃ ಮೊಳೆಯುವದಕ್ಕಿಲ್ಲದಂತೆ ದುಃಖಗಳನ್ನೆ ಸಮೂಲವಾಗಿ ಅರೆದುಬಿಡಬೇಕು; ಇದಕ್ಕಿಂತ ಹೆಚ್ಚಿನ ಗೈಮೆ ಮಾನವನಿಗಿರುವದಿಲ್ಲ. ನಿತ್ಯಸುಖವನ್ನು ಕಂಡದ್ದೇ ಅರಿವಲ್ಲದೆ, ಬೇರಲ್ಲ; ಬಂದಷ್ಟು ಸುಖಲೇಶದಲ್ಲಿಯೇ ಪೂರ್ಣ ತೃಪ್ತಿಗೊಳ್ಳುವ ಹೀನ ಮಾನವರಿಗೆ ಅದೆಲ್ಲಿ ಪೂರ್ಣಾನಂದ? ನಾಶವಿಲ್ಲದ ಆತ್ಮಾನಂದಲಾಭದ ತೃಪ್ತಿಯೇ ಮತಿ ಪುಷ್ಟಿಕಾರಕವೆಂಬುದಕ್ಕಿನ್ನು ಎರಡಿಲ್ಲ. ದೇವಪೂಜ್ಯರಾದ ಬ್ರಹ್ಮಾದಿಗಳು, ಇಂದ್ರಾದಿ ದೇವಶ್ರೇಷ್ಠರು, ಸರ್ವ ದೇವಾಸುರರ ಆಚಾರ್ಯಗರಿಷ್ಠರು, ವಸಿಷ್ಠಾದಿ ಸಕಲ ಮುನಿಪೂಜ್ಯರು ಎಲ್ಲರಿಗೂ ಅದ್ವೈತವೊಂದೇ ಸಾರತಮವೆಂದಾಗಿದ್ದರು, ಪಾಪಚಿತ್ತರಿಗೆ-ಹಲವು ಮತಗಳು, ಹತ್ತಾರು ದೇವತೆಗಳ ಉಪಾಸನೆಗಳು, ತಮಗೆ ವಾಂತಿ ಆಗುವಂತಿದ್ದರು ಸಾಕೆನದೆ ಹಲವುಸಾರಿ ಭೋಗಿಸಿದ ವಿಷಯಗಳನ್ನೇ ಮರಮರಳಿ ಬಯಸುವದು, ತನ್ನಲ್ಲಿ ದೀನತ್ವ, ಅಲ್ಪತ್ವ. ಸೇವಕತ್ವಾದಿಗಳನ್ನೆ ಒಪ್ಪಿಕೊಳ್ಳುತ್ತಿರುವದು ಇವುಗಳಾಗುತ್ತಿರುವವು. ಅಂಥವರಿಗೆ ಹೇಳಿಕೊಟ್ಟರು ತತ್ತ್ವಾರ್ಥವನ್ನು ತಮ್ಮ ಬುದ್ಧಿಗೆ ತಿಳಿಯದಿರುತ್ತದೆ!

೬ **ಗುರುವಿನ ಪ್ರಭಾವ ನಿರ್ಣಯ**—(೨–೨೨) ದುಃಖಮಯ ಶರೀರದ ಕಟ್ಟನ್ನು ಕಳಚಿ, ತನಗೆ ಪೂರ್ಣವಾದ ಸಚ್ಚಿದಾನಂದಬ್ರಹ್ಮವನ್ನನುಗ್ರಹಿಸಿದ ಆ ಗುರುಸಾರ್ವಭೌಮನಿಗೆ ನಮಸ್ಕಾರವು.

ಜ್ಞಾನಕಿಂತ ಹೆಚ್ಚು ಅಥವಾ ಸಮನಾದ್ದು ಲೋಕತ್ರಯಗಳಲ್ಲಿಯೇ ಇಲ್ಲ. ಆ ಜ್ಞಾನದಿಂದ ತನಗೆ ಬ್ರಹ್ಮಾತ್ಮಭಾವವೇ ಲಭಿಸುತ್ತದೆ. ದಾನ ತೀರ್ಥನಿಷೇವಣಾದಿಗಳಿಂದ ಅದಕ್ಕಿರುವ ವಿಘ್ನಗಳು ತೊಲಗುವವು. ಆ ಜ್ಞಾನವು-ಗುರುವನ್ನು ದೇವರೆಂದೇ ಭಾವಿಸಿ, ಭಕ್ತಿ ವಿಶ್ವಾಸಗಳಿಂದ ಸೇವಿಸುವವರಿಗೆ ಉಂಟಾಗುವದು. ಮರ್ತ್ಯಶರೀರದಿಂದಿದ್ದರೂ ಗುರುವನ್ನು ದೇವರೆಂದೇ ಮುಮುಕ್ಷುಗಳು ಪೂಜಿಸಬೇಕು. ಶಿಷ್ಯನು—ಶಿವನ ಶರೀರವು ನಿತ್ಯ, ವಿಶ್ವಮಯವು, ಅಲ್ಲದೆ, ಅವನು ಸರ್ವಜ್ಞನು, ಮಾಯೇಶನು; ಹಾಗಲ್ಲದ ಗುರುವನ್ನು ಶಿವನು ಎನ್ನುವದು ಗಾಜಿನ ಚೂರನ್ನು ಪಚ್ಚೆಯಹರಳೆನ್ನುವಂತೆ! ಗುರುವು-ಹಾಗಲ್ಲ, ಇಬ್ಬರ ಆ ಉಪಾಧಿಗಳು ಮಾಯೆಯ ವಿಕಾರಗಳು; ಆದ್ದರಿಂದ ಅವರಲ್ಲಿ ಪರ್ವತ ಶಷ್ಪ-ಹುಲ್ಲುಗಳಂತೆ ಭೇದ ಕಂಡರು ಸತ್ಯವಲ್ಲ; ಸರಿಯೆ, ಶಿವನು-ಇಡಿಯ ಜಗತ್ತಿಗೆ ಹೆಚ್ಚು, ಬರಿಯ ಜ್ಞಾನದಿಂದ ಗುರುವನ್ನು ಶಿವನಿಗೆ ಹೋಲಿಸಿದರೆ, ಕಿರುಸೊಳ್ಳೆಯನ್ನು ಇಂದ್ರನ ಆನೆ ಎಂದಂತೆ! ನಿಜ; ದೇಹವನ್ನು ಕಾಣುವ ಹೊರಗಣ್ಣಿಗೆ; ಆದರೆ ಜ್ಞಾನಗಣ್ಣಿನಿಂದ ಆ ಭೇದ ಕಾಣುವದಕ್ಕಿರುವದಿಲ್ಲ. ಶಿಷ್ಯ:—ಇದಿರಲಿ, ಶಿವನು-ಗುರುವಿಗೂ ಪೂಜ್ಯನಾಗಿರುವನು, ಗುರುವು—ಹಾಗಲ್ಲವಲ್ಲ? ಎಂದರೆ, ಗುರುವು-ಬ್ರಹ್ಮ,ವಿಷ್ಣು ನಮ್ಮೆಲ್ಲರಿಗೂ ಪರಮ ಪೂಜ್ಯನಾಗಿರುವನು. ಧನದ ನಿಧಿಯಿಂದ ಬಾಲಕನಂತೆ; ಗುರುವಿನಿಂದ ಮಹಾಪುಣ್ಯದ ಫಲಗಳನ್ನು ಹೊಂದದೆ ಈ ಮೂಢರು ಆ ಸದ್ಗುರುವನ್ನು ಕಡೆಗಣಿಸುತ್ತಿರುವರು! ಎಂದು ಶಿವನೇ ಹೇಳಿರುತ್ತಾನೆ. ಭೇದವನ್ನು ತೊಲಗಿಸುವದಕ್ಕಿಲ್ಲದ ಜ್ಞಾನವು ಅದನ್ನು ಪರಮಾರ್ಥವಲ್ಲ ಎಂದು ತಿಳಿಸುವದು. ಸರ್ವ ಜೀವರಲ್ಲಿಯೂ ಆತ್ಮರೂಪದಿಂದಿರುವ ಪರಮತತ್ವವೊಂದೇ-ಬ್ರಹ್ಮಾದಿದೇವತೆಗಳಲ್ಲಿ ಪೂಜ್ಯಭಾವದಿಂದಲೂ, ಮನುಷ್ಯರಲ್ಲಿ ಪೂಜಕ ಭಾವದಿಂದಲೂ ತೋರಿಕೊಳ್ಳುತ್ತಿರುವದಲ್ಲದೆ, ಆ ಭೇದವು ತತ್ತ್ವದಲ್ಲಿ ಶೀಳಾಗಿ ನಿಂತಿರುವದಿಲ್ಲ. ಮತ್ತು ಗುರುವನ್ನು ತ್ರಿಮೂರ್ತಿ ಸ್ವರೂಪನೆಂದು ಪುರಾಣಗಳು ಹೇಳುತ್ತಿರುವದರಿಂದಲೂ ಗುರುವಿನ ದಯಾರಸವಿಲ್ಲದೆ ಜ್ಞಾನವು ಒಬ್ಬರಿಗೂ ಹುಟ್ಟುವದಕ್ಕಿಲ್ಲದ್ದರಿಂದಲೂ, ತನಗೆ ಸಮನಿಲ್ಲದ ಆ ಗುರುವೇ ಗರೀಷ್ಠನೆಂದು ಸಿದ್ಧವಾಯ್ತು. ಸಕಲ ಪ್ರಾಣಿಗಳ ದಹರದೇಶದಲ್ಲಿರುವ ಶಿವನು ಭವವನ್ನು ತೊಲಗಿಸುವದಕ್ಕಿಲ್ಲವಾದರು, ಹೊರಗಡೆಯಲ್ಲಿ ಮಾಡುವ ಅವನ ಆರಾಧನೆಗಳಿಂದ– ಜ್ಞಾನಕ್ಕಧಿಕಾರ, ಹೃದಯಶುದ್ಧಿ, ಅದ್ವೈತವಾಸನೆ ಮೊದಲಾದವು ಪ್ರಾಪ್ತಿಯಾಗುತ್ತೆ ಎನ್ನುವದಕ್ಕಿನ್ನು ಸಂಶಯವಿರುವದಿಲ್ಲ. ಹೀಗಿದ್ದರು ಶಿವನು ಶರಧಿಯಂತಿರುವನು; ಗುರುವು ಕಲ್ಲೋಲದಂತಿರುವನಾದ್ದರಿಂದ ಸಮುದ್ರದ ನೀರೆ ತೆರೆಯಾಗಿ ಹೊರಗೆದ್ದು ಬರುವಂತೆ, ನರಮೂರ್ತಿ ಹಿಡಿದು ಜನನಾದಿ ಕೃತ್ಯಾತಂಕದಿಂದ ಆ ಶಿವನೇ ಮುಮುಕ್ಷುಗಳಿಗೆ ಗುರುವಾಗಿ ಮೈದೋರುತ್ತಿರುವನು. ಈ ಗುರುವಿನಿಂದಲೇ ಮುಕ್ತಿಯೆಂಬುದಕ್ಕೆ ಭಿನ್ನಾಭಿಪ್ರಾಯವಿಲ್ಲ. ಬ್ರಹ್ಮಾದಿ ದೇವತೆಗಳು ಚಿರಸಂಪೂಜಿತರು; ಮರೆಯಲ್ಲಿದ್ದು ಅದೃಷ್ಟಫಲವನ್ನು ಕೊಡುತ್ತಿರುವರು; ಬಯಕೆಯ ರೂಪದ ಮನಸ್ಸಿನ ದುಷ್ಟಸ್ವಭಾವ

ಚಾಳಿಯನ್ನು ಮಾತ್ರ ಬಿಡಿಸಲಾರರು! ರಚ್ಚೆಯಿಟ್ಟು ಅಳುತ್ತಿರುವ ಹಸುಳೆಯ ಮಕ್ಕಳಿಗೆ ಬೇವನ್ನು ಬೆಲ್ಲಮಾಡಿ ಕೊಡುತ್ತೇವೆ ಎಂದು ಸಮಾಧಾನಪಡಿಸುವ ತಾಯ್ತಂದೆಗಳಂತೆ! ದೇವತೆಗಳು ಕೂಡ ಕೊನೆಯಿಲ್ಲದ ದುಃಖದಿಂದ ಪೀಡಿತರಾಗಿ ಸಂಸಾರದಲ್ಲಿ ಅಳುತ್ತಿರುವ ಜೀವರಿಗೆ ಸುಖದ ಭ್ರಾಂತಿಯನ್ನೀಯುವ ದುಃಖಮಯ ವಿಷಯಗಳಿಂದ ತೃಪ್ತಿಯನ್ನು ಪಡಿಸುವದಕ್ಕಾರಂಭಿಸುತ್ತಿರುವರು! ಮಾಯೆಯಿಲ್ಲದ ಗುರುವು ಶಿವನ ಕೋಪದಿಂದ ರಕ್ಷಿಸಬಲ್ಲನು; ಗುರುವು ಕೋಪಿಸಿದರೆ ರಕ್ಷಕರೇ ಇರುವದಿಲ್ಲ.

(೨೩-೩೪) ಜನ್ಮಕೊಟ್ಟ ತಂದೆಯನ್ನು, ತನಗೆ ಕನ್ನಿಕೆಯನ್ನು ಧಾರೆಯೆರೆದು ಕೊಡುವ ಮಾವನನ್ನು ಲೋಕದಲ್ಲಿ ಗುರುವೆನ್ನುವರು. ತನ್ನ ಧನಧಾನ್ಯಾದಿಗಳನ್ನು ಕದಿಯುವವರೂ ತನಗೆ ಬಂಧಪ್ರದರೂ ಗುರುಗಳಾಗುವದಕ್ಕಿಲ್ಲದಂತೆ ಸಂಸಾರ ಮೋಹವನ್ನು ಬಲಪಡಿಸುವವರೂ ಯಂತ್ರ ಮಂತ್ರ ತಂತ್ರಗಳ ಕುಶಲವಿದ್ಯೆಗಳ ಸಂಪತ್ತುಗಳು, ಮತ್ತು ಧರ್ಮ ಅರ್ಥ ಕಾಮಗಳು ಇವನ್ನು ಕೊಡತಕ್ಕವರೂ ಎಂದಿಗೂ ತನಗೆ ಪರಮಗುರುಗಳಾಗುವದಕ್ಕಿರುವದಿಲ್ಲ. ಸಂಸಾರಫಲವನ್ನು ಕೊಡುವ ಗೋವಿಂದನಿಂದ ರಮೆಯವರೆಗಿನ ಮಿಕ್ಕ ದೇವತೆಗಳು ನಿಷ್ಕಾಮದಿಂದ ಅರ್ಚಿಸಲ್ಪಟ್ಟರೆ ಜೀವರನ್ನು ಈಶ್ವರಾನುಗ್ರಹಕ್ಕೆ ಕಳ್ಪಿಸುವರು.

ಗುರುವು ಎಂದರೆ ಸತ್ಯದಂತೆ ಕಂಡು ಮೋಹಪಡಿಸುತ್ತಿರುವ ಜಗತ್ತೆಲ್ಲವನ್ನು ಮಿಥ್ಯೆ ಮಾಡಿ ಆ ಜಗತ್ತಿನಲ್ಲೆಲ್ಲ ನಿಸ್ಸಾರತೆಯನ್ನು ತನಗೆ ಮನಗಾಣಿಸಿಕೊಟ್ಟು, ತನ್ನ ದೇಹೇಂದ್ರಿಯಅನಾತ್ಮವರ್ಗದಿಂದ ಪ್ರತ್ಯೇಕಿಸಿದ ಸಾರಸಾಕ್ಷಿಯನ್ನು ತನಗಿಂತ ಬೇರಿಡದೆ 'ಅದೇ ನೀನು' ಎಂಬ ಕಡುನಿಶ್ಚಯವು ತನ್ನ ಹೃದಯದಲ್ಲಿ ನಿಲ್ಲುವಂತೆ ಮಾಡಿ ವೇದಾಂತ ದೀಪದಿಂದ ತನ್ನ ಬ್ರಹ್ಮಾತ್ಮ ಭಾವವನ್ನು ಬೆಳಗಿ, ಹೃದಯದ ಕತ್ತಲೆಯನ್ನೆಲ್ಲ ಸುಟ್ಟು ಬೂದಿಯನ್ನಾಗಿ ಮಾಡಿ ಅದನ್ನು ಅನುಭವದಿಂದ ಊರುಬುವವನೇ ಗುರುವು; ಬೇರೊಬ್ಬನಲ್ಲ ಶಾಸ್ತ್ರರಾಶಿಯು ತನ್ನಲ್ಲಿ ಗಿರಿಯಂತಿದ್ದರೂ ಸ್ಥಿರಗೊಂಡಾತ್ಮಜ್ಞಾನ ಮಾತ್ರ ಆ ಮಹಾನುಭಾವನ ಸರಸಕರುಣಾಲಭ್ಯ ಎಂಬುದಕ್ಕೆಲ್ಲಿಯೂ ಬದಲಿರುವದಿಲ್ಲ. ಆದ್ದರಿಂದ ಮುಮುಕ್ಷುಗಳು-ಸರ್ವವು ಅನಂತವು ಅವ್ಯಯವು ಅಮಲವು ನಿಶ್ಚಲವು ನಿಖಿಲ ಲೋಕಾತ್ಮಕವು ಸಂತತಾನಂದೈಕವಿಗ್ರಹವು ತನ್ನಲ್ಲಿ ಕುರುಹಿಲ್ಲದ ಮರಹಿಲ್ಲದ ಸ್ಥಿರಪದವೇ ಶ್ರೀಗುರುದೇವನು ಎಂದು ತಮ್ಮಲ್ಲಿ ನಿಶ್ಚಯಿಸಿ ಕೃತಕೃತ್ಯರಾಗುವದು.

**೭ ಅದ್ವೈತ ಮುಕ್ತಿಸ್ಥಿತಿ ನಿರ್ಣಯ**:-(೨-೩೧) ತನ್ನನ್ನು ಸಂಸಾರದಿಂದ ಉದ್ಧರಿಸಿಕೊಳ್ಳಬೇಕೆಂಬ ಮನುಷ್ಯನು ಮೊದಲು ವೇದೋಕ್ತ ಕರ್ಮೋಪಾಸನೆಗಳನ್ನು ಮಾಡಬೇಕು. ಜ್ಞಾನಯೋಗ್ಯತೆ ಬಂದ ತಾನು ಶ್ರೀಗುರುವಿಗೆ ಶರಣುಹೋಗಬೇಕು. ತಪದಿಂದ ಉನ್ನತಿಯೆಂತೆಯೂ ಬುದ್ಧಿ ಬಲದಿಂದ ಭಯವು ತೊಲಗಲು, ಬರುವ ನಿಜಶಾಂತಿಯೆಂತೆಯು ಅವನಿಗೆ ಜ್ಞಾನದಿಂದ ಸಂಸಾರಭಯವೂ ತೊಲಗುವದು. ಸಿದ್ಧಿಸಿದ ತನ್ನ ಬ್ರಹ್ಮಾತ್ಮಭಾವದಿಂದ ಚಿತ್ತವು ನಿರ್ವಾಣಹೊಂದುವದು ಅವರನ್ನು ಬಿಟ್ಟು ಶೋಕಕಾರಣಗಳು ಅತ್ತ ಸರಿಯುವವು. ಸಾಭಿಮಾನಜನಕ್ಕಿದು ಎಟುಕುವದಲ್ಲ.

ಯಜ್ಞ ಯಾಗಾದಿ ಕರ್ಮಗಳು, ದಾನ ಧರ್ಮಗಳು, ಪುಣ್ಯತೀರ್ಥ ಕ್ಷೇತ್ರ

ಯಾತ್ರೆಗಳು, ಜಪ ತಪಾದಿಗಳು, ವ್ರತೋಪವಾಸಾದಿ ಸತ್ಕ್ರಿಯೆಗಳು ವ್ಯರ್ಥವೆನ್ನಬಾರದು. ಆಡುವ ಹುಡುಗರಿಗೆ ಗೆಜ್ಜುಗ ಸಿಕ್ಕಿದಂತೆ; ಅವುಗಳಿಂದ ಸಂಸಾರಫಲಗಳಿಗೇನೂ ಕಡಿಮೆಯಿಲ್ಲ. ಶರೀರವೇ ಕಾಶಿಯು; ಜ್ಞಾನವೇ ಪುಣ್ಯಗಂಗೆಯು, ಇಂದ್ರಿಯಗಳನ್ನು ವಿಷಯಗಳ ಮನೆಗಳಲ್ಲಾಡಿಸುತ್ತಿರುವ ತನ್ನ ಆತ್ಮನೇ ವಿಶ್ವೇಶನು ಎಂದು ಜ್ಞಾನವೃದ್ಧರು ಹೇಳುತ್ತಿದ್ದರು ಇದನ್ನು ನಂಬದೆ, ಭ್ರಾಂತರು ಹೊರಗಿನ ಕ್ರಿಯೆಗಳಲ್ಲಿಯೇ ಹಗಲಿರುಳೆನ್ನದೆ, ಪರಿತಪಿಸುತ್ತಿರುತ್ತಾರೆ! ಮರುಮರೀಚಿಕೆಯನ್ನು ನೀರೆಂದು ಭ್ರಮಿಸುವಂತೆ; ಕರ್ಮಾದಿ ಕ್ರಿಯೆಗಳನ್ನೇ ಮುಕ್ತಿಗೆ ಪರಮ ಸಾಧನವೆನ್ನುತ್ತಿರುವರು! ತುರಿಯಾಶ್ರಮ ಹೊಂದಿದವರು, ವೇದಗಳನ್ನು ಉಪನಿಷತ್ತುಗಳನ್ನು ಬಲ್ಲವರು, ಬುದ್ಧಿಬಲವುಳ್ಳವರು ಮೊದಲಾದ ಎಲ್ಲರೂ ಈ ಪರಿಯಿಂದಾಗಿ, ಅರಿವಿಲ್ಲದ ಸಾಮಾನ್ಯ ಜನರಿಗೆ ಮುಂದೆ ಮೋಕ್ಷದ ಮಾರ್ಗವನ್ನು ತೋರಿಸಿಕೊಡುವವರೇ ಇಲ್ಲ! ಎನ್ನುವಂತಾಗಿಬಿಡುತ್ತಿದೆ; ತನ್ನೆದೆಯಲ್ಲಿಯೇ ಇರುವ ಶಿಶುವನ್ನು ಕಾಣದೆ, ಊರೆಲ್ಲ ಹುಡುಕಿ ಬಸವಳಿದು ಕಳವಳಿಸುವ ತರುಣಿಯೆಂತೆ;"ನಿಮ್ಮ ಚಿತ್ತದಲ್ಲೇ ಬೆಳುಗುತ್ತಿರುವ ಸ್ವಯಂ ಪ್ರಕಾಶನಾದ ಆತ್ಮದೇವನನ್ನು ಎಚ್ಚರಾದಿ ತಮ್ಮ ಅವಸ್ಥೆಗಳ ವಿಮರ್ಶೆಯಿಂದ ಕಾಣದೆ ವ್ಯರ್ಥವಾಗಿಯೇ ಭ್ರಮಿಸುತ್ತಿರೂವಿರಿ ಏಕೆ?" ಎಂದೆಲ್ಲರನ್ನು ವೇದಮಾತೆಯೂ ಉಪದೇಶಿಸುತ್ತಿದ್ದರು ಅದನ್ನು ಕೇಳುತ್ತಿಲ್ಲ! ಈ ಜನರು–ತಮಗೆ ಬೇಕೆಂದೆಣಿಸಿದರೆ ದೇಹೇಂದ್ರಿಯಗಳನ್ನು ಬಸವಳಿದು ಆಯಾಸಗೊಳಿಸುವ ಕರ್ಮಗಳನ್ನಾದರು ಕಲಿತು ಮಾಡುತ್ತಿರುವರು! ಕೋವಿದರು ಮೊದಲಾಗಿ ತಮ್ಮ ನಿಜವನ್ನು ಕಾಣದಿರುವದು ವಿಚಿತ್ರವು! ಬೆಲೆ ಕಟ್ಟುವದಕ್ಕಿಲ್ಲದ ತಮ್ಮ ಕಾಲವು ಅನಿತ್ಯಫಲ ಕೊಡುವ ಕರ್ಮಕ್ಕಿರುವಂತೆ ತನ್ನ ಧನ್ಯತೆಯನ್ನು ಕುರಿತಿಲ್ಲ! ತತ್ತ್ವವನ್ನು ಮನಗಾಣುವದಕ್ಕೆಂದೇ ಇರುವ ತುರಿಯಾಶ್ರಮಿಗಳಿಗೆ ಇದನ್ನು ಹೇಳಬೇಕಿಲ್ಲ; ಬೇರೊಂದನ್ನು ಹಿಡಿದರೆ ಪತಿತರಾಗುವ ಅವರು ಮುಂದಿನ ಕಾಲದಲ್ಲಿ ಕಲಿಪುರುಷನ ಪ್ರಭಾವಕ್ಕೊಳಗಾಗಿ, ಬರಿಯ ವೇಷಬಣ್ಣಗಳಿಂದ ಭೂಷಣರಾಗಿ ಹೊರಗೆ ನಿಲ್ಲುವರು! ಉಸುರಾಡುವ ಪ್ರಾಣಿಗಳಲ್ಲೊಂದು ಜೀವನಾಗಿ ಬದುಕುವ ಅವರಿಂದ ಲೋಕಕ್ಕಾಗಲಿ ತಮಗಾಗಲಿ ಉಪಕಾರವಿಲ್ಲದಿರುವದನ್ನು ಕುರಿತು ಹಲವಾರು ಸ್ಮೃತಿಗಳು ಸಾರುತ್ತಿರುವವು. ಹೊರಗಿನ ಕಾಷಾಯವಸ್ತ್ರ ಮಾತ್ರದಿಂದ ಅಪುನರಾವೃತ್ತಿಯಿಲ್ಲವೆಂದೂ, ಹೊರಗಿನಲ್ಲಿ ಗುಂಪುಗಟ್ಟುವದಾಗಲಿ, ಒಂದೆಡೆಯಲ್ಲಿ ಹಲವು ರಾತ್ರಿಗಳಿರುವದಾಗಲಿ, ಜನರ-ಆಕರ್ಷಣೆ. ಒಲಿಮೆ ಮುಂತಾದವುಗಳಾಗಲಿ ತಮ್ಮ ಆಶ್ರಮಧರ್ಮಕ್ಕೆ ಬಾಹಿರವಾದವುಗಳೆಂದೂ ಇತಿಹಾಸ ಪೂರಾಣಗಳು ಹೇಳುತ್ತಿರುವವು ಹೊರಗಿನ ಕಾಷಾಯ ವೇಷಮಾತ್ರದಿಂದಲೇ ಮುಕ್ತಿ ದೊರಕುವಂತಿದ್ದರೆ ಶ್ರುತಿಗಳು ಜ್ಞಾನಸಾಧನಗಳನ್ನು ಎಂದಿಗೂ ವಿಧಿಸುತ್ತಿರಲಿಲ್ಲ. ಮತ್ತೆ ಕೆಲವರು ಕಾಶಿಯ ಸಾವು ತಮಗೆ ಮುಕ್ತಿಯನ್ನು ಕೊಡುತ್ತೆಂದು ಭ್ರಾಂತರಾಗಿರುತ್ತಾರೆ. ಕಾಶಿಯಲ್ಲಿ ಸಾಯಲಿದ್ದ 'ಹರಿಹರ' ಎಂಬ ವಿಷ್ಣುಭಕ್ತನನ್ನು ಕುರಿತು ಶಿವನು–ಬ್ರಹ್ಮ ವಿಷ್ಣುಮಹೇಶ್ವರರಾದ ನಾವುಗಳಾಗಲಿ, ಈ ಕಾಶಿ, ಇಲ್ಲಿಯ ದೇವಗಂಗೆ, ಆಕಾಶಾದಿ ಭೂತಗಳಾಗಲಿ ಕೈವಲ್ಯ ಕೊಡಲಾರೆವು. ಎಲೈ ಬ್ರಾಹ್ಮಣನೆ? ತೋರುವ ಈ ಜಗ

ತ್ರನ್ನು–ಸತ್ತು ಚಿತ್ತು ಆನಂದ ಮತ್ತು ನಾಮರೂಪ ಎಂದು ನಿನ್ನ ಬುದ್ಧಿಯಿಂದ ವಿಂಗಡಿಸು. ನಾಮರೂಪನ್ನು ಬಿಟ್ಟು–ಸಚ್ಚಿದಾನಂದಾದ್ವಿತೀಯ ತತ್ತ್ವವೇ 'ನಾನು' ಎಂದು ನಿನ್ನಲ್ಲಿ ನಿಶ್ಚಯಿಸಿ, ಈ ಜೀವರೂ ಜಗತ್ತೂ ಚಿದ್ರೂಪ ಬ್ರಹ್ಮಾತ್ಮವಾದ ನನ್ನ ಪರಮಾರ್ಥವೆಂದು ಚಿಂತಿಸುತ್ತ ಕೃತಕೃತ್ಯನಾಗೆಂದು ಉಪದೇಶಿಸಿರುವನು. ಆದ್ದರಿಂದ ಒಂದನ್ನೊಂದಗಲಿದ ಆತ್ಮಾನಾತ್ಮಗಳ ಸಂದು—ಅಧ್ಯಾಸ ಬಿಡುಗಡೆಯೇ ಮುಕ್ತಿಯು ಬೇರಲ್ಲ; ಆದ್ದರಿಂದ ಯಜ್ಞ ಯಾಗಾದಿ ಸಕಲ ಸತ್ಕ್ರಿಯೆಗಳು ಅವುಗಳ ಫಲಗಳು ಎಲ್ಲವೂ ಮೊದಲು ಗಣ್ಯವಲ್ಲದೆ, ತನಗೆ ಗುರುವು ದೊರತಮೇಲೆ ಗಣಿಸುವದಕ್ಕಿರುವ ದಿಲ್ಲ ಎಂಬ ಕಡುನಿಶ್ಚಯವುಳ್ಳ ತತ್ತ್ವಜಿಜ್ಞಾಸುಗಳು ಹೃದಯಪರಿಪಾಕದಿಂದ ಶ್ರುತಿ ಗುರುಗಳಿಂದ ತನ್ನನ್ನನವರತವೂ ವಿಚಾರಿಸುತ್ತಿರುವದೇ ಪರಮಾರ್ಥದ ಹೆದ್ದಾರಿಯು.

೮ **ಅಧಿಕಾರಿ ನಿರ್ಣಯ:**–(೨-೧೭) ಜೇನು-ಪುಷ್ಪಗಳಲ್ಲಿನ ಮಕರಂದವನ್ನು ತಂದು ಒಕ್ಕಡೆ ಕೂಡಿಸಿದ್ದರಿಂದ ಆದ ಜೇನು ಹುಟ್ಟಿಯು ಲೋಕದ ಜನರಿಗೆಲ್ಲ ಉಪ ಕರಿಸುವಂತೆ; ಸಂಸ್ಕೃತ ಕನ್ನಡ ಭಾಷೆಗಳಲ್ಲಿರುವ ಈ ಕಾವ್ಯವು ಜಿಜ್ಞಾಸುಗಳಿಗೆ ಲಾಭದಾಯಕವಾಗಿರುವದು. ಅಪರಿಮಿತ ಗ್ರಂಥರಾಶಿಗಳ ಪರಿಶೀಲನದಿಂದ ತನಗ್ಯೆ ಜ್ಞಾನವು ದೊರಕಬೇಕು ಎನ್ನುವದಕ್ಕಿಲ್ಲ, ಭವದಲ್ಲಿ ಬೆಂದು, ಸಂಸಾರತಾಪದಲ್ಲಿ ನೆರೆ ನೊಂದು ತತ್ತ್ವವನ್ನರಸುತ್ತಿರುವ ಕವಿಯು ಇದರಿಂದಲೇ ಧನ್ಯನಾಗಬಹುದು. ಮನು ಷ್ಯನು ಉರಿಬಿಸಿಲಿನ ಬೇಗೆಯಲ್ಲಿ ನಡೆದು ಬಂದದ್ದರಿಂದ ಆಯಾಸವಾಗಿ ಅರಿವುಗೆಟ್ಟಿರು ವಲ್ಲಿ, ನೆತ್ತಿಗೊತ್ತಿದ ಕೊಂಚ ನೀರಿನಿಂದಲೇ ಅವನಿಗೆ ಅರಿವು ಸರ್ವಾಂಗಗಳಲ್ಲಿಯೂ ಚಲಿಸಿಬಂದಂತೆ; ಈ ಗ್ರಂಥವು ತನ್ನ ಗಾತ್ರದಲ್ಲಿ ಅತಿ ದೊಡ್ಡದಾಗಿ ಕಾಣದಿದ್ದರೂ ಎಲ್ಲಾ ವೇದಾನ್ತಗಳ ಹೃದಯವನ್ನೊಳಗೊಂಡು, ಮನನೀಯವಾಗಿರುವ ಇದರಿಂದಲೇ ಸಚ್ಛಿಷ್ಯರಾದವರು ಹಂಸಕ್ಷೀರನೀರನ್ಯಾಯದಂತೆ ಸರ್ವ ಗ್ರಂಥಗಳ ಸಾರವನ್ನೇ ಮನ ಗಂಡು, ಮಿಕ್ಕ ಗ್ರಂಥಗಳ ಬರಿಯ ಶ್ರಮವನ್ನು ನೂಕಿ, ತನ್ನ ಬ್ರಹ್ಮಾತ್ಮನಲ್ಲಿ ಸುಖ ದಿಂದ ವಿಶ್ರಮಿಸುವರು! ಜನರನ್ನು ಕಾಮೋಪಭೋಗದ ಕ್ರೀಡಾಪಶುಗಳನ್ನಾಗಿ ಮಾಡುವ, ಮತ್ತು ಹೃದಯಂಗಮವಾಗಿ ಶೃಂಗಾರಾದಿ ರಸಗಳನ್ನು ವರ್ಣಿಸುವ ಕಾವ್ಯ ಕಾದಂಬರಿ ನಾಟಕಗಳು ಶುದ್ಧಕವಿತಾಶಬ್ದಗಳಿಂದ ಒಪ್ಪುತ್ತಿರಬಹುದು; ಅಪಶಬ್ದರಾಶಿ ಗಳಿದ್ದರೂ ಆಧ್ಯಾತ್ಮಗ್ರಂಥಗಳು ಮಾತ್ರ ಮುಮುಕ್ಷುಗಳಿಗೆ ಸಂಗ್ರಾಹ್ಯವು. ಹೆಚ್ಚೇನು? ಜ್ಞಾನಯೋಗ್ಯತೆ ಬಂದ ಅಧಿಕಾರಿಗೆ ಅಧ್ಯಾತ್ಮ ಗ್ರಂಥವನ್ನೊದಗಿಸಿಕೊಟ್ಟವನಿಗೂ ಕೂಡ ಜ್ಞಾನ ಸಿದ್ಧಿಸುತ್ತೆಂಬುದಕ್ಕಿನ್ನು ಎರಡಿಲ್ಲ ಇದಿರಲಿ, ತನ್ನ ಸುಗಂಧ ಪರಿಮಳ ದಿಂದ ಹಾವುಗಳನ್ನೆಲ್ಲ ಬರಸೆಳೆದ ಚಂದನಮರದಂತೆ; ಶಾಸ್ತ್ರಯುಕ್ತಿಗಳಿಗೂ ಬಲ್ಲವರ ಅನುಭವಕ್ಕೂ ಸರಿಹೊಂದುವ ಈ ಗ್ರಂಥವು ಸರ್ವಜೀವ ಜಗತ್ತುಗಳ ಪರಮಾರ್ಥವಾಗಿ ರುವ ತನ್ನ ಬ್ರಹ್ಮಾತ್ಮ ತತ್ತ್ವವನ್ನೇ ಬಹು ಸುಲಭದ ತಾಯ್ನುಡಿಯಾದ ಕನ್ನಡದಲ್ಲಿ ತಿಳಿಸಿಕೊಡುತ್ತಿರುವದರಿಂದ ತತ್ತ್ವಜಿಜ್ಞಾಸುಗಳನ್ನಲ್ಲದೆ, ಉಳಿದವರಿಗೂ ಮನಮೆಚ್ಚಿ ಸುವದೆಂಬುದು ಹುಸಿಯ ಮಾತಲ್ಲ; ವಿಷಯವಾದ ಬ್ರಹ್ಮವಂತು ಎಲ್ಲರ ಪರ ಮಾರ್ಥ ಸ್ವರೂಪವಾಗಿಯೂ ಇರುವದರಿಂದ ಅದರ ಜ್ಞಾನವು–ಕಾಲ, ವ್ಯಕ್ತಿ

**ಮುಂತಾದ ಭೇದನ್ನಪೇಕ್ಷಿಸದೆ ಬ್ರಹ್ಮದೇವರವರೆಗೆ ಎಲ್ಲರಿಗೂ ಒಂದೇಪರಿಯಲ್ಲಿ ಉಂಟಾಗುತ್ತಲಿರುವದು.**

ಸರಿಯೆ, ಜ್ಞಾನಬಂದವರಲ್ಲಿ ಸಂಸಾರದೋಷಕ್ಕೆ ಹೇಗೆ ಸಂಭವ? ನಿಜ; ಅದು ಅಧ್ಯಾಸವನ್ನು ಮಾಡಿಕೊಂಡವರಲ್ಲಿ ಕಾಣುವದು. ಕತ್ತಲೆ ಬೆಳಕುಗಳಂತಿರುವ ಅನಾತ್ಮವರ್ಗಗಳಾದ ದೇಹೇಂದ್ರಿಯಗಳ ಸಂಘಾತವು ಮತ್ತು ತನ್ನ ಪ್ರತ್ಯಗಾತ್ಮನು ಇವು ಒಂದಿನ್ನೊಂದರಲ್ಲಿ ಕಲೆಬೆರೆಯುವದೆಂಬುದು ಸರಿಹೊಂದುವದಿಲ್ಲ. ಆದರೂ ವಿಲಕ್ಷಣ ಸ್ವರೂಪದ ಅವುಗಳನ್ನು ಅವಿವೇಕಿಗಳು ಒಂದನ್ನೊಂದರಲ್ಲಿ ಕಲೆಬೆರಕೆ ಮಾಡಿಕೊಂಡಿರುವರು. ಹೀಗೆ ಅವಿವೇಕದಿಂದಾಗಿರುವ ಈ ಅಧ್ಯಾಸವನ್ನು ವಿವೇಕದಿಂದ ವಿಂಗಡಿಸಿ ತೊಲಗಿಸಿಕೊಂಡರೆ, ಆಗ ಎರಡರಲ್ಲಿ–ಹುಸಿತೋರಿಕೆಯ ಶರೀರಾ ಅನಾತ್ಮವು ತನ್ನನ್ನು ಬಿಟ್ಟಿರುವದಿಲ್ಲ–ಪರಮಾರ್ಥಸದ್ವಸ್ತುವಲ್ಲ ಎಂದು ಒಂದನ್ನಪೇಕ್ಷಿಸಿ, ಉಳಿದ ಶರೀರಾದಿಗಳ ಕಟ್ಟಿಲ್ಲದ, ದೇಶ ಕಾಲ ವಸ್ತುಗಳ ಮಿತಿಯಿಲ್ಲದ, ಅವಸ್ಥಾತ್ರಯಗಳ ಕಪ್ಪಿಲ್ಲದ, ಸರ್ವಕಲ್ಪನಾತೀತನಾದ, ಸಂಸಾರದುಃಖಶಾಂತನಾದ, ನಿತ್ಯಮಂಗಲಸ್ವರೂಪ–ತನ್ನ ಬ್ರಹ್ಮಾತ್ಮನೇ ಎಂದೆಂದಿಗೂ ಇರುವ '**ತನ್ನ ಪರಮಾರ್ಥ**' ಎಂಬ ನಿಶ್ಚಿತಾನುಭವದಲ್ಲಿ ವಿಶ್ರಮಿಸುತ್ತಿರುವ ಬ್ರಹ್ಮಿಷ್ಠನ ಅಂಚಿಗೂ ಸಂಸಾರ ಬರುವಂತಿಲ್ಲ.

(೧೮-೪೫) ಆತ್ಮಜ್ಞಾನವನ್ನು ಮತ್ತೊಬ್ಬರಿಗೆ ದೊರೆಯದಂತೆ ಮಾಡುವದಕ್ಕೆ ಯಾರೊಬ್ಬರಿಗೂ ಸಾಧ್ಯವಿಲ್ಲದಿದ್ದರು ಸಾಧನಗಳಿಲ್ಲದೆ ಅದು ಒಬ್ಬರಿಗೂ ಎಟಕುವದಕ್ಕಿರುವದಿಲ್ಲ. ಜನ್ಮಾಂತರ ಪುಣ್ಯಭೂಜ ಫಲಿಸಿದಲ್ಲದೆ ಆ ಸಾಧನಗಳು ತನಗೆ ಲಭಿಸುವದಕ್ಕಿಲ್ಲವು. ಸಾಧನಗಳಿದ್ದರು ಕೆಲವರಿಗೆ ಗುರೂಪಸತ್ತಿಯೇ ಮುಂತಾದ ತೀವ್ರಪ್ರಯತ್ನವಿಲ್ಲದಿದ್ದರೆ ಮುಕ್ತಿಯಿಲ್ಲ. ಕರ್ಮಯೋಗಫಲವಾದ ಚಿತ್ತಶುದ್ಧಿಗೆ ಮಿಕ್ಕೆಲ್ಲವೂ ಸಹಾಯವಾಗಿರುವವು. ನೀರಿನಿಂದ ತಿದ್ದುವದಕ್ಕಿಲ್ಲದ ನೊರಟುಕಲ್ಲಿನಂತೆ–ಚಿತ್ತಶುದ್ಧಿಯಿಲ್ಲದ ವಿಷಯಾಸಕ್ತರಿಗೆ ಆತ್ಮಜ್ಞಾನವಾಗುವದಕ್ಕಿಲ್ಲದ್ದರಿಂದ ಅಧಿಕಾರಿಯಲ್ಲಿ ನಿರ್ಮಲಚಿತ್ತವಿರುವದನಿವಾರ್ಯವು; ಜ್ಞಾನಸಾಧನಗಳು–ಪರರ ನಿಂದಾಸ್ತುತಿಗಳಿಂದ ತನ್ನ ಮನಸ್ಸಿನಲ್ಲೇರುಪೇರಿಲ್ಲದಿರುವದು, ಸತ್ಕರ್ಮಪರತೆಯು, ಭೋಗಾಭಿಲಾಷೆಗಳೇ ಚಿತ್ತದ ಬಹುಮುಖ್ಯವಾಗಿರುವ ಕೊಳೆಯೆಂತಲೂ ಇದಕ್ಕಿಂತ ಮತ್ತೊಂದು ಜ್ಞಾನಕ್ಕಡ್ಡಿಯಿರುವದೇಇಲ್ಲವೆಂತಲೂ ಸುವಿಚಾರದಿಂದ ಇದನ್ನು ತನ್ನ ಮನಸ್ಸಿನಲ್ಲಿ ಪದೆಪದೆ ಹೊರಳಾಡಿಸುತ್ತಿರುವದು, ಶುದ್ಧಮಕರಂದಕ್ಕಾಗಿ ತಾನು ಕೆಂದಾವರೆಯ ಕೇಸರಗಳನ್ನು ಹೊರಗುಳಿದು ಒಳಹೊಕ್ಕ ದುಂಬಿಯಂತೆ, ತನ್ನ ಶರೀರೇಂದ್ರಿಯಗಳನ್ನು ವಿಕಾರಪಡಿಸಿ ಅವುಗಳಲ್ಲಿ ಕಾನ್ತಿಬಲಗಳನ್ನು ಕುಗ್ಗಿಸುವ ಭೋಗರಾಶಿಗಳನ್ನು ಹಿಮ್ಮೆಟ್ಟಿ ಸದಾ ತನ್ನ ಪರಮಾರ್ಥವನ್ನೂ ಅರಸುತ್ತಿರುವದೇ ಮುಂತಾದವು; ಈ ಅಧಿಕಾರಗಳುಳ್ಳವನೇ ಮುಖ್ಯಾಧಿಕಾರಿಯು. ಏಕೆಂದರೆ ಕಪ್ಪೆಗಳಿಗಲ್ಲದೆ ಕೆಸರು ರಾಜಹಂಸಗಳಿಗೆ ರುಚಿಸುವದಿಲ್ಲ; ಅಧಮರಿಗಲ್ಲದೆ ಭೋಗಗಳು ಬಲ್ಲವರಲ್ಲಿ ಶೋಭಿಸುವದಕ್ಕಿಲ್ಲ; ಜನರು–ಮಿತ್ರಭಾವವರಿಸದ ಕಾಮಾದಿಗಳ ದಡಿವಲೆಯೊಳಗೆ ಸಿಕ್ಕಿ ಬರಿದೇ ದುಃಖಿಸುತ್ತಿರುವರು! ಆನೆಯನ್ನು ಮುಟ್ಟಿದ ಕುರುಡರು ತಮ್ಮೊಳಗೆ ಒಂದೊಂದು ಬಗೆಯಿಂದ ಅದನು

ಪರೀಕ್ಷಿಸಿಕೊಂಡಂತೆ! ಉಪಾಸನೆಗೆಂದು ಬಲ್ಲವರು ಹೇಳಿರುವ ಮೂರ್ತಿಗಳ ವಿಭಿನ್ನ ಆಕಾರಗಳಲ್ಲಿಯೆ ನೆಟ್ಟ ಬುದ್ಧಿಯ ಮಂದಪ್ರಜ್ಞರು ಭ್ರಾಂತರಾದರು! ಇಂಥವರನ್ನು ಕೈಬಿಟ್ಟ ಜಿಜ್ಞಾಸುವು-ಪೂಜ್ಯರುಗಳಲ್ಲಿ ವೇದಾಂತವಿಚಾರಾದಿಗಳನ್ನು ಮಾಡಬೇಕು. ತನ್ನನುಭವವನ್ನು ಅವರಲ್ಲಿ ವಿಜ್ಞಾಪಿಸಬೇಕು. ಪ್ರಾಚೀನರ ಹೃದಯವು ತನಗೆಳವಟ್ಟರೆ ತಾನು ವಿಶ್ರಮಿಸಿಕೊಳ್ಳುವದು, ಈ ಆತ್ಮನಿಷ್ಠೆಗೆ ಬುದ್ಧಿಬಲ ತನಗೆ ಅವಶ್ಯವೆಂಬುದು ನಿಜ. ಆದರು ರಾಗಾದಿ ದೋಷಗಳು ಬಂದಾವರಿಸಿಕೊಂಡರೆ ಬುದ್ಧಿಗೆ ಆ ಬಲವು ಬರುವದಕ್ಕಿಲ್ಲ. ದೈವವಶಾತ್ ಲಭಿಸಿದ ಸತ್ಸಂಗವು ಕೂಡ ಅಧಿಕಾರಿಗೆ ಕೈವಲ್ಯವನ್ನು ಕೊಡುವದು. ಅರಿವಿದ್ದರೂ ತನ್ನಲ್ಲನುಭವ ಬರುವದಕ್ಕಿಲ್ಲ; ಏಕೆಂದರೆ ಅದು ತನ್ನ ಘನತ್ವವನ್ನು ಳಿದು ವಿಷಯಗಳಲ್ಲೊಂದಾಗಿ ಹೋಗಿರುತ್ತದೆ. ಬೆಣ್ಣೆಯು ಮೊಸರಿನಲ್ಲ ಡಗಿದ್ದರೂ ಮಂಥನದಿಂದೆದ್ದಂತೆ ವಿಚಾರದಿಂದಲೇ ಆ ತನ್ನ ನಿತ್ಯಾನುಭವವು ತಲೆ ದೋರಿ ಬರುವದರಿಂದ ಅದನ್ನು ಹೊರಗಡೆ ತಾನು ಹುಡುಕಬೇಕಿಲ್ಲವಾದರೂ ಬಲ್ಲ ಗುರು ಗಳಿಂದಲೇ ಜ್ಞಾನವು ತನಗೆ ಬರಬೇಕೆಂಬುದಕ್ಕೆ ದೇವತೆಗಳಲ್ಲಿಯೂ ಬದುಲಿರುವದಿಲ್ಲ.

(೪೬-೫೫) ಕರ್ತೃತಂತ್ರ ಕ್ರಿಯೆಗಳನ್ನು ಸ್ವತಂತ್ರ ಜ್ಞಾನದೊಡನೆ ಸರಿದೂಗಿ ಸಮುಸ್ವಭಾವವೆನ್ನುವವರ ಮಾತು ನಂಬತಕ್ಕದ್ದಲ್ಲ. ಪ್ರಯಾಣದಲ್ಲಿ ಶುಭವನ್ನು ಸೂಚಿಸುವ ಕುದುರೆಯ ಶಕುನಕ್ಕಿಂತಲೂ ಅದು ನಿಕೃಷ್ಟವು. ಕರ್ಮಾದಿಗಳನ್ನು ವಿಧ್ಯುಕ್ತರೀತಿಯಿಂದ ಅನುಷ್ಠಿಸಿದ್ದ ಹಿಂದಿನಕಾಲದ-ನಹುಷ ನೃಗ ಯಯಾತಿ ನಿಮಿ ನಾಗಶುಂಡ ಈ ಚಕ್ರವರ್ತಿಗಳಿಗೆ ಕ್ರಮದಿಂದ ತಮ್ಮ ಕೈಸೇರಿದ ವಿಪರೀತ ಫಲಗಳು-ಅಜಗರಯೋನಿ, ಹೆಂಟೆಗೊದ್ದನ ಯೋನಿ, ತಡೆಗಟ್ಟುವದಕ್ಕಿಲ್ಲದ ಕಾಮದ ಬೆಂಬುರಿ, ವಿನಾಶಭಾವ, ಮೃತಿತ್ವ ಎಂಬ ಅನಿಷ್ಟಗತಿಗಳ ನಿದರ್ಶನಗಳೇ ಕರ್ಮಕ್ಕೆ ತನ್ನ ಫಲ ದಲ್ಲಿಯೂ ನಿಯತಿಯಿಲ್ಲದ್ದನ್ನು ಸೂಚಿಸುತ್ತಿರುವಲ್ಲಿ ಇನ್ನು ಅದರಿಂದ ಮುಕ್ತಿಯಿರುವ ದಿಲ್ಲವೆಂದು ಹೇಳಬೇಕಿಲ್ಲ. ಆದ್ದರಿಂದ ಜ್ಞಾನವೇ ಪರಮ ಸತ್ಯತರವು, ಕರ್ಮಗಳು ಕೀಳುಹೊನ್ನು, ಧರ್ಮಗಳು ತಿದ್ದುಮಾಡಿದ ಬೆಳ್ಳಿಯೊಡವೆಗಳು, ವ್ರತಶೀಲೋಪ ವಾಸಾದಿ ನಿಯಮಗಳು ಬಿಡಿಕಾಸುಗಳು, ಗುರುಮೂಲವಾದ ಸುಜ್ಞಾನವೊಂದೇ ನಿಲ್ಲುವ ಗಟ್ಟಿಯ ಅಪರಂಜಿಯು! ಹೀಗಿರುವದರಿಂದ ಜಿಜ್ಞಾಸುವ—ಶಮದಮಾದಿ ಸಂಪನ್ನನೂ ಶುಭಶ್ಲೋಕನೂ, ಪ್ರಮಾದವಿಲ್ಲದವನೂ ಆಗಿ, ಸಮೀಪದಲ್ಲಿದ್ದು ಗುರು ವನ್ನು ಸದಾ ಸೇವಿಸಿಕೊಂಡಿರಬೇಕು. ಇಂಥ ಅಧಿಕಾರಿಗಳಿಗೆ ಬ್ರಹ್ಮವಿದ್ಯೆಯ ರಹಸ್ಯ ವನ್ನೆಲ್ಲ ಮರೆಮಾಜದೆ ಬಲ್ಲವರು ಹೇಳಿಕೊಡಬೇಕೆಂಬುದು ಶಿಷ್ಟಮತವು.

೯ ನಿತ್ಯಾನಿತ್ಯ ನಿರ್ಣಯ:- (೨-೯೫) ಸಂಸಾರ ತಾಪದಿಂದ ನೊಂದು, ಅದರಲ್ಲಿ ಕಡುಬೆಂದವನು ಗುರುವನ್ನು ಮರೆಹೋಗಬೇಕು, ಆತ್ಮಾನಾತ್ಮಗಳನ್ನು ಕುರಿತು ಅವರಲ್ಲಿ ಜಿತಮನಸ್ಸಿನಿಂದ ವಿಚಾರಿಸುವದಕ್ಕಿಂತ ತನಗೆ ಬೇರೊಂದು ಶ್ರೇಯ ಸ್ಸಿರುವದಿಲ್ಲವು. ಅದು ನಿತ್ಯವೂ ತನ್ನ ಸ್ವರೂಪವಾಗಿರುವದು; ಮಿಕ್ಕೆಲ್ಲ ಕನಸಿನಂತೆ ತೋರಿಕೆಯ ಶರೀರದ್ದೆಂಬುದೇ ವೇದಾಂತಗಳ ಪರಮಸಾರವು. ಇದನ್ನು ತಿಳಿಸದಿರುವ ಶಾಸ್ತ್ರಗಳ ರಾಶಿಯು ದುರ್ಗಮದ ಮಾರ್ಗವೇ ಸರಿ; ಅವುಗಳಲ್ಲಿ ಕಾಲೂರಿ ನಿಲ್ಲುವುದ

ಕ್ಕಿಲ್ಲದ ಜ್ಞೇಯವೊಂದಾದರೂ ಇರುವದೇ ಇಲ್ಲವು. ತತ್ತ್ವವನ್ನು ಕುರಿತು ತನಗೆ
ಎಟುಕಿಸುದಕ್ಕಿಲ್ಲದ ತರ್ಕವು–ನರಕವನ್ನು ಮುಟ್ಟಿಸುವದಲ್ಲದೆ, ಆ ಬಳಿಕವೂ ತನಗೆ
ಬಿಡದಂತೆ ಕಾಡುಮೇಡುಗಳಲ್ಲಿನ ಕಡುನೀಚ ಯೋನಿಗಳನ್ನು ಕಾಣಿಸುವ ಆ ತರ್ಕದ
ತಳಗಟ್ಟಿನ ದರ್ಶನಗಳೂ ವಿಭಿನ್ನಮತಗಳೂ ಬಂಧಮೋಕ್ಷಗಳನ್ನು ಕುರಿತು ಒಂದಾಗಿ
ರವು. ಬರಿಯ ಯುಕ್ತಿಯನ್ನಾಶ್ರಯಿಸಿರುವ ಇವುಗಳಲ್ಲಿನ ಮೂಢವಿಶ್ವಾಸಗಳಿಂದ
ಮನುಷ್ಯನಿಗೆ ಲಕ್ಷಗಟ್ಟಲೆಯ ವರ್ಷಗಳಾದರೂ ಸ್ವತಸ್ಸಿದ್ಧವಾಗಿರುವ ತನ್ನ ಬ್ರಹ್ಮಾತ್ಮ
ತತ್ತ್ವದ ಅನುಭವವು ತನಗೆ ಬರುವುದಕ್ಕಿಲ್ಲವು. ಏಕೆಂದರೆ ಸಂಸಾರ ವಿಷಯಾಸಕ್ತ
ರಿಂದ ಹೊರಟಿರುವ ಅವು ನಮ್ಮನ್ನು ನಿಶ್ಯಸಿದ್ಧವಾದ ನಮ್ಮ ಆತ್ಮನಿಂದಲೇ ಹಿಮ್ಮೆಟ್ಟಿ
ಸುತ್ತಿರುವವು; ಅಲ್ಲದೆ, ತಾನಲ್ಲದ ದೇಹೇಂದ್ರಿಯಗಳಲ್ಲಿ **‘ನಾನು’** ಎಂಬ ಮಿಥ್ಯಾಭಿ
ಮಾನದ ಬುರುಕಿಯನ್ನು ತನ್ನಮೇಲೆ ಎಳೆದುಹಾಕಿಕೊಂಡಿರುವವರಿಂದಲೇ ಹೊರಟಿ
ರುವ ಈ ಶಾಸ್ತ್ರಗಳಲ್ಲಿ ಇನ್ನಿಲ್ಲವೆಂಬಷ್ಟು ದಕ್ಷತೆ ಪಡೆದುಕೊಂಡವನಾಗಿದ್ದರೂ ತನಗೆಂ
ದೆಂದಿಗೂ ಅವುಗಳಿಂದ ಅದ್ವೈತ ನಿರ್ವಾಣ ಗಂಧದಾಶೆಯೂ ಇರುವದಕ್ಕಿಲ್ಲವಾದ್ದ
ರಿಂದ **ಅಧ್ಯಾತ್ಮವಿದ್ಯಾಬಾಹ್ಯ ಶಾಸ್ತ್ರಪ್ರೇಮಿಗಳು ತಮಗೆತಾವೇ ಆತ್ಮವಂಚಕ**
ರಂತೆ ಆಗಿಬಿಡುತ್ತಿರುವರೆಂಬುದಿಲ್ಲಿ ಹೇಳುವದನಿವಾರ್ಯವು! ಮೊದಲೇ ಸಂಸಾರ
ತಾಪದಿಂದ ಕಾದಿದ್ದ ತನಗೆ ಶಾಸ್ತ್ರಾಭ್ಯಾಸಾದಿಗಳಿಂದ ಬಂದ **ಅನಾತ್ಮಭಾವನೆಗಳು
ತನ್ನ ಸುಖವನ್ನು ಕುರಿತು ಇರುವದೂ ಇಲ್ಲವು.**

ಆದ್ದರಿಂದ ಮನುಷ್ಯನು ಪ್ರಯತ್ನಿಸಿ, ತನಗೆ ಅಸ್ವಾಭಾವಿಕವಾದ ಕಿಂಕರತೆ
ಯನ್ನು ಮೆಟ್ಟಿ, ತನ್ನ ಶಂಕರತೆಯನ್ನು ಅನುಭವದಲ್ಲಿ ಮನಗಾಣಿಸಿಕೊಡುವ
ಅಧ್ಯಾತ್ಮಶಾಸ್ತ್ರವನ್ನೇ ಬಿಡದೆ ಗುರುಗಳಲ್ಲಿ ಕಲಿಯಬೇಕು. ಪೂರ್ಣತತ್ತ್ವವನ್ನು
ಗಳಿಸಿ,ತಾನು ನಿರಂಕುಶ ತೃಪ್ತಿಯನ್ನುಹೊಂದಬೇಕು. ಇಂಥ ಪುಣ್ಯಪುರುಷನ ಜೀವಿತ
ಕಾಲವು ಸ್ವಲ್ಪವೆಂದು ಕಂಡರೂ ಕಾಡುಹಂದಿಯೆಂತೆ ಕಲ್ಪಕಾಲ ಕಳಿಯುವುದಕ್ಕಿಂತ
ನಂದಿಯೆಂತೆ ಬದುಕುವ ಅವನ ಕ್ಷಣಕಾಲವೇ ಲೇಸೆಂಬುದಕ್ಕಿನ್ನೆರಡಿಲ್ಲ; ಕಲೆ ಬೆರ
ತಿರುವ ಆತ್ಮಾನಾತ್ಮಗಳನ್ನು ಒಂದನ್ನೊಂದರಿಂದ ವಿಂಗಡಿಸಿಕೊಂಡು,ಅವುಗಳ ಸ್ವರೂಪ
ಗಳನ್ನು ಹೀಗೆಯೇ ಸರಿಯೆಂದು ಕೂಲಂಕಷವಾಗಿ ವಿಚಾರದಿಂದ ವಿಮರ್ಶಿಸಿ ಮನವ
ರಿಕೆ ಮಾಡಿಕೊಳ್ಳಬೇಕು. ಅನಾತ್ಮದ ಸೋಂಕಿಲ್ಲದ ನಿರ್ವಿಕಾರವಾದ ಆತ್ಮತತ್ತ್ವವನ್ನು
ಮನಗಂಡು ತನ್ನಲ್ಲಿ ತಾನು ಸ್ವಸ್ಥನಾಗಬೇಕು ಇದರಿಂದಲೇ ಸಾಫಲ್ಯತೆಯಲ್ಲದೆ,
ನರಜನ್ಮಕ್ಕೆ ಬೇರೊಂದರಿಂದಲ್ಲ. ಶರೀರಾದಿಗಳು ನಿತ್ಯವಲ್ಲ; ಕರ್ಮ ತತ್ಫಲಗಳಲ್ಲಿ
ಶಾಸ್ತ್ರಗಳಿಗೆ ಹೃದಯವಿರುವದಿಲ್ಲ; ಭೋಗ್ಯರಾಶಿಗಳೆಲ್ಲ ಅನಿತ್ಯವು ಮಾಯಿಕವು; ಏತ
ರಿಂದಲೂ ಖಂಡಿಸದೆ ಕಾಲವನ್ನ ನುಂಗಿರುವ ಆತ್ಮನೊಬ್ಬನೇ ನಿತ್ಯನು; ಕಾಲಕರ್ಮಾ
ದಿಗಳು. ಇಂದ್ರಾದಿ ದಿಕ್ಪಾಲಕರು, ವಾಯುವನ್ನು ತಡೆಗಟ್ಟುವ ಯೋಗಿಗಳು, ಮನು
ಮುನಿಗಳು,ಸೂರ್ಯಾದಿಗ್ರಹಗಳು, ನಕ್ಷಾದಿ ತಾರೆಗಳು, ದೈತ್ಯದಾನವೇಂದ್ರರು ಎಲ್ಲರೂ
ಕಾಲಪುರುಷನಿಗೆ ವಶರಾಗತಕ್ಕವರೇ. ಶಸ್ತ್ರಾಸ್ತ್ರಾದಿ ಆಯುಧಗಳಿಂದ ಬೆಂಕಿ ನೀರು
ಗಾಳಿಗಳಿಂದ ನಾಶವಾಗುದಕ್ಕಿಲ್ಲದ ವಸ್ತುವಿಕಾರಗಳೆಲ್ಲವೂ ಈ ಕಾಲಕ್ಕೆ ಸಿಕ್ಕಿ ಕರಗಿ

ನೀರಾಗಿಬಿಡುತ್ತಿರುವವು! ಕ್ರಿಯಾತ್ಮಕ ಕರ್ಮವು ತನ್ನಲ್ಲಿ ಬದಲಾಯಿಸುತ್ತಿರುತ್ತದೆ. ನಿಯತ ಲಕ್ಷಣವೆಂಬುದು ಅದಕ್ಕಿಲ್ಲ ತಾನು ಮಾಡಿರುವ ಕರ್ಮವು ಎಷ್ಟೇ ಉನ್ನತವಾಗಿದ್ದರೂ ಅನಿತ್ಯಫಲ ಕೊಡುವದೆಂಬ ತನ್ನ ಸ್ವಭಾವ ಮಾತ್ರ ಆದಕ್ಕೆ ಬದಲುವಂತಿಲ್ಲ. ಹೀಗಿದ್ದರೂ ಕರ್ಮ ಮಾಡುವದರಲ್ಲಾಗಲಿ, ಫಲವನ್ನು ಭೋಗಿಸುವದರಲ್ಲಾಗಲಿ ನೂರಾರು ವಿಘ್ನಗಳು ಅಡ್ಡಬರುತ್ತಲಿರುವವು. ಕೇಳಿದ ಫಲವನ್ನು ಕೊಡುವದಲ್ಲದೆ ಕರ್ಮವು-ತನ್ನ ಫಲವನ್ನು ಭೋಗಿಸುವಾಗ ಬರುವ ವಿಘ್ನಗಳನ್ನು ತಾನು ಹೊಡೆದೋಡಿಸುವದಕ್ಕಿಲ್ಲ. ಕರ್ಮಫಲಗಳಾದ ವಿಷಯಗಳಿಂದ ತೃಪ್ತಿಯನ್ನು ಹೊಂದಿದವರು ಹಿಂದೊಬ್ಬರಾಗಿಲ್ಲ. ಮುಂದೆ ಆಗುವ ಸಂಭವವಿರುವದೇ ಇಲ್ಲ! ಎಲ್ಲರಿಗೂ ಪ್ರತ್ಯಕ್ಷವಾಗಿರುವ ಜನನ ಮರಣ ಶೋಕ ಮೋಹ ಹಸಿವು ತೃಷೆಗಳು-ದೇಹ ಪ್ರಾಣ ಮನಗಳನ್ನಾಶ್ರಯಿಸಿ ಜಗತ್ತಿನ ಜೀವವನ್ನು ಬಿಡದಂತೆ ಸದಾ ನೋಯಿಸುತ್ತಲಿರುವವು!

(೪೬-೫೯) ಕಾಲಚಕ್ರವು! ಬ್ರಹ್ಮಾದಿದೇವತೆಗಳಿಗಾದರು ಮೀರುವದಕ್ಕಿಲ್ಲವಾಗಿದೆ! ಪಾಪ! ಬಡಪಾಯಿಗಳಾದ ಪಾಮರಜನರು ಮಮತೆಯಿಂದ ಸ್ತ್ರೀಪುತ್ರಾದಿಗಳನ್ನು ಕಾಪಾಡುವದಕ್ಕೆಂದು **ಬ್ರಹ್ಮದೇವರಂತೆ ನಿತ್ಯಪ್ರಯತ್ನಶೀಲರಾಗಿರುವರು!** ಮಾಗೀಕಾಲದ ಕನಸುಗಳಂತೆ ಈ ಜೀವಕು-ಕ್ಷಣವಾದರು ತಮಗೆ ನಿಲ್ಲುವದಕ್ಕಿಲ್ಲದಂತೆ ಸುರನರೋರಗ ರೂಪವಾದ ಅಕ್ಷಗಟ್ಟಲೆಯ ಯೋನಿಗಳನ್ನು ಪಡಿಯುತ್ತಿದ್ದರೂ ವಿಷಯಸುಖಕ್ಕಾಗಿ ಬಾಯ್ದೆರನ್ನು ಗರೆಯುತ್ತಿರುವರು! ಈ ಮೌಢ್ಯ ಬಿಡಿಸುವದಕ್ಕೆ ದೇವಗುರುವಿಗಾದರೂ ಸಾಧ್ಯವಿಲ್ಲ! ಈ ಸಂಸಾರ ಭೋಗಗಳು ಮುಗಿಲಿನ ಹೊಳಪು! ವಿಷಯಗಳಲ್ಲಿನ ಅನುರಾಗವು ಮಿಂಚಿನೊಲವು! ಪತ್ನೀಪುತ್ರಾದಿಗಳ ಸುಯೋಗವೆಂಬುದು ನೀರು ಬುದ್ಬುದಪ್ರಾಯವಾಗಿರುವದು! ತನ್ನಾಯುಸ್ಯವು ತೂತು ಗಡಿಗೆಯ ಸೋರುನೀರಿನಂತೆ ಕಳಿದುಹೋಗುತ್ತಲೇ ಇರುತ್ತದೆ! ಹೀಗಿದ್ದರು ಭೋಗಗಳಲ್ಲಿ ಅನುರಾಗ ಮಾತ್ರ ಕ್ಷಣವೂ ಬಿಡದಂತೆ ಬೆಳೆಯುತ್ತಲಿರುವದು. ಆಹಾ! ಇದೇನು ಮೋಹದ ಮಹಾತ್ಮ್ಯವು! ಕೆಡುವದನ್ನು ಕಂಡರೂ ವಿಷಯಗಳ ಮಮತೆಯನ್ನು ಈ ಜೀವರು ಬಿಡುತ್ತಿಲ್ಲವಲ್ಲ! ದುಃಖವನ್ನು ಅನುಭವಿಸುತ್ತಿದ್ದರೂ ಆ ವಿಷಯವ್ಯಾಮೋಹವನ್ನು ತೊರೆಯರಲ್ಲ! ಸುಡುತ್ತಿದ್ದರೂ ತಾಪತ್ರಯಗಳನ್ನೆ ಅಡಿಗಡಿಗೂ ಜೀವರು ಕೈವಿಡಿಯುತ್ತಿರುವರಲ್ಲದೆ. ಅದರಿಂದ ಈ ದೃಶ್ಯ ಭ್ರಮೆಯೆಂಬುದು-ದುಃಖವೆಂಬ ಮಹಾಮೋಹಾರಣ್ಯದಲ್ಲಿ ತನ್ನನ್ನು ಓಯ್ದು ಹಾಳುಮಾಡುತ್ತಿರುವದು! ಇದೇನು ಪಾಪವೋ! ಮಹಾಮಾಯೆಯೋ! ಜನ್ಮಾಂತರದ ತನ್ನದೃಷ್ಟರಾಶಿಯೋ! ವಿಷಯಗಳಲ್ಲಿನ ಕಡುಪ್ರೇಮಪಾಶದ ತೊಡಕೋ! ಅಥವಾ ವಿಪತ್ತುಗಳಿಗೆಲ್ಲ ತವರುಮನೆಯಾಗಿರುವ ಈ ದೇಹಬಂಧವೋ ಹೇಳುವದಕ್ಕಿಲ್ಲವು!

ಅಂತಃಕರಣದಲ್ಲಿ ಹೊಳೆದಿರುವ ಚಿತ್ಕಳೆಯು—ದೇಹೇಂದ್ರಿಯ ಸಂಘಾತದ ಅಭಿಮಾನಿಯಾದ ಜೀವನು ವಸ್ತುಗತ್ಯ ತಾನು ಮನಸ್ಸು ಮುಂತಾದ ಕರಣಗಳಾಗಲಿ, ಕರ್ತೃತ್ವಭೋಕ್ತೃವೆಂಬ ವಿಕಾರವಾಗಲಿ ಇಲ್ಲದ ನಿರ್ವಿಕಾರ ಚೈತನ್ಯವೇ ತನ್ನ ಪರಮಾರ್ಥವೆಂಬುದು ತನಗೆ ತಾನೇ ಸಿದ್ಧವಾಗಿರುವದಾದರೂ ಮತಿವಿಹೀನರು ತಮ್ಮ

ಸ್ವರೂಪವಾಗಿರುವ ಆ ಸರ್ವಸಾಕ್ಷಿಯಲ್ಲಿ ಆ ವಿಕಾರಗಳನ್ನೆಲ್ಲ ಕಾಣುತ್ತಿರುತ್ತಾರೆ. ಪದ್ಮ ಪತ್ರವು ನೀರನ್ನಂಟದಿರುವಂತೆ, ವಿಷವನ್ನು ಧರಿಸಿದ್ದರೂ ಹಾವು ಅದರ ಭೀತಿಯು ತನಗಿಲ್ಲದಿರುವಂತೆ, ಕಾಯಿಸಿ ಶುದ್ಧಪಡಿಸಿದ ಅಪರಂಜಿಯು ಚಿನ್ನಕ್ಕೆ ಹೊರಗಾದ ಆ ಲೋಹಾದಿಗಳ ಕಳಂಕವಿಲ್ಲದಿರುವಂತೆ ಆ ನಮ್ಮ ಸ್ವರೂಪಕ್ಕೂ ಮಾಯೆಯ ಹುಸಿ ದೋಷಗಳ ಭಯವೆಂದೂ ಇರುವದಿಲ್ಲವು. ಅಳಿವದಕ್ಕುಳಿವಿಲ್ಲ; ಉಳಿವದಕ್ಕೆಂದಿಗೂ ಅಳಿವಿರುವುದಿಲ್ಲ; ತಿಳಿವು ಮತ್ತೊಂದರಿಂದ ತಿಳಿಯಲ್ಪಡುವದಿಲ್ಲ; ಆ ತಿಳಿವನ್ನು ಬಳಸಿ ಕೊಂಡಿರುವ ಜಡವು ಮತ್ತೊಂದನ್ನು ತಿಳಿಯುವದಿಲ್ಲವೆಂಬುದಲ್ಲದೆ, ಸುಖದುಃಖಗಳು ಕೂಡ ಒಂದರಲ್ಲೊಂದು ತೋರಿಕೊಳ್ಳುವದಿಲ್ಲವೆಂಬುದೂ ಹೀಗೆಯೆ ನಿರ್ವಿವಾದ ವಾಗಿರುತ್ತದೆ. ಅನಾತ್ಮವರ್ಗದಲ್ಲಿ ತೋರುವ ಇರವು ಅರಿವಿನಿಂದ ಬಂದದ್ದಲ್ಲದೆ, ಅದಕ್ಕೆ ಸ್ವತಂತ್ರವಿರುವದಿಲ್ಲ. ಮನಸ್ಸು ನಿರ್ಮಲವಾದಲ್ಲದೆ ಅದರಲ್ಲಿ ಅರಿವು ತೋರುವದಿಲ್ಲ. ಈ ದುಃಖವು ಅಜ್ಞಾತಾತ್ಮನಲ್ಲಿ ಹುಟ್ಟುಗಟ್ಟಿದ್ದಲ್ಲದೆ ನಿಜವಲ್ಲ. ಸುಖವು ನಿತ್ಯವೂ ತನ್ನಾತ್ಮಸ್ವರೂಪವಾಗಿದ್ದರೂ ದುಃಖದ ಮರೆಯಿದ್ದರೆ ಅದು ಹೊರಗೆದ್ದು ತೋರುವದಿಲ್ಲ. ಇಂದ್ರಿಯ ಪ್ರಜ್ಞೆಗಳು, ಇಂದ್ರಿಯಾರ್ಥಗಳು ಎಂಬ ಮಾಯೆಯೊಂದೇ ಸರ್ವದುಃಖಗಳೂ ಆ ದುಃಖಬೀಜವೂ ಆಗಿರುವದು. ಈ ಮರೆಯು ಡಗಲು ಸ್ವರೂಪವಾಗಿದ್ದ ತನ್ನಾತ್ಮಸುಖವೇ ಹೊರಗೆದ್ದು ಬೆಳಗುವದಕ್ಕಾರಂಭಿಸು ವದು. ಆತ್ಮಾನಾತ್ಮವೆಂಬುದು, ಸತ್ಯ ಮಿಥ್ಯಾ ಎಂಬುದು ಎಲ್ಲವೂ ಇದರಿಂದಲೇ ಆಗಿ ರುತ್ತದೆ. ಮಾಯೆಯ ಮನೆತನವು ಕನಸಿನಂತೆ! ಜನನ ಮರಣಗಳು ಅದರ ಸುಳಿದಾಟ ವಲ್ಲದೆ, ಬೇರಲ್ಲ. ಈ ಎಚ್ಚರದ ದೃಶ್ಯಗಳು ಎಚ್ಚರದಿಂದ ಕನಸಿನಂತೆ ಬರಿಯ ಮಾಯೆಯೇ ಎಂದು ತಿಳಿಯಲು ಕೆಟ್ಟುಹೋಗುವವು. ಗಾಜಿನ ಚೂರು ಪಚ್ಚೆಯು ಹರಳಾಗುವದಕ್ಕಿಲ್ಲದಂತೆ; ಸತ್ಯವಾಗುವದಕ್ಕಿಲ್ಲದ ದುಃಖಮಯವಾಗಿರುವ ಈ ವಿಷಯಭೋಗಗಳು ತಾತ್ಕಾಲಿಕ ಸುಖಲೇಶದಾಭಾಸವು, ಪರಿಣಾಮ ವೈರಸ್ಯವು, ಕೊನೆಯಲ್ಲಿ ವಿನಾಶ್ಯವೆಂಬುದೇ ನಿಶ್ಚಿತವು. ಎಲೈ ಸರಳಹೃದಯನೆ? ನೀನಾದರೋ ನಿತ್ಯಾತ್ಮಕನು, ಸಂದಿಲ್ಲದೆ ವ್ಯಾಪಿಸಿರುವ ವಿಭುವು, ಪೂರ್ಣಾನಂದೈಕ ವಿಗ್ರಹನು, ಸಂಸಾರದ ತುಚ್ಛವಿಕಾರಗಳು ಎಂದೆಂದಿಗೂ ನಿನಗಿರುವದಿಲ್ಲವೆಂಬುದೇ ಸದಾ ಚಿಂತ ನೀಯವಾದ ಪರಮ ವಿಶ್ವಾಸ್ಯವು.

೧೦ **ವೈರಾಗ್ಯ ನಿರ್ಣಯಃ**-(೧-೮) ಸಾವಿರಾರು ಹಸುಗಳಲ್ಲಿದ್ದರೂ ತನ್ನ ತಾಯನ್ನೇ ಹೊಕ್ಕ ಕರುವಿನಂತೆ; ತನ್ನ ಕರ್ತೃವಿಗೇ ಗುರಿಯಿಟ್ಟಂತೆ ಹೊಕ್ಕ ಕರ್ಮವೂ ಫಲಿಸುತ್ತಿರುತ್ತದೆ. ಆ ಕರ್ಮಫಲಗಳಲ್ಲಿ ಅನುರಾಗವನ್ನು ತೊಲಗಿಸಿಕೊಳ್ಳುವುದಕ್ಕೆ ಒಬ್ಬರಿಗಾದರು ಇಲ್ಲವಾದರೂ ವಿವೇಕವೊಂದೇ ಅದಕ್ಕೆ ನಿಯತ ಸಾಧನವಾಗಿರುವದು. ಭೋಗದಿಂದಲ್ಲದೆ ವಿವೇಕದಿಂದ ಅದಕ್ಕೆ ನಾಶ ಹೇಗೆ ಎಂದು ಶಂಕಿಸುವದಕ್ಕಿಲ್ಲ. ಏಕೆಂ ದರೆ ಇದು ಅಜ್ಞಾನಿಗಳಲ್ಲಿ ನಿಜ; ಆದರೆ ಅದು ಜ್ಞಾನಿಗಳಲ್ಲಿ ಮೂರಾಗಿರುವದು. ಸಂಚಿತಕರ್ಮವು ಜ್ಞಾನಾಗ್ನಿಯಿಂದ ಭಸ್ಮವಾಗುವದು; ವಂದಕನಿಂದಕರನ್ನು ಆಗಾ ಮಿಯು ಮರೆಹೊಕ್ಕುವದು; ಪ್ರಾರಬ್ಧವು ಭೋಗದಿಂದ ಕ್ಷಯಿಸಿಹೋಗುತ್ತಿರುವದು.

ಜೋಷದೃಷ್ಟಿಯುಳ್ಳ ಜ್ಞಾನಿಗೆ ವಿಷಯ ಭೋಗೇಚ್ಛೆಯಿರುವದಕ್ಕಿಲ್ಲವಾದರು ಬಲವತ್ತರ ಪ್ರಾರಬ್ಧ ಕರ್ಮವು ಇಚ್ಛೆಯನ್ನಾದರೂ ಕೊಟ್ಟು, ಆ ಜ್ಞಾನಿಯಲ್ಲಿ ಭೋಗದ ಬಳವಿಕೆಯನ್ನು ಮಾಡುತ್ತಿರುವದು. ಹಾಗಾದರೆ, ಇಚ್ಛೆ ಭೋಗವಾಸನೆಗಳೇ ಜನ್ಮಕ್ಕೆ ಹೇತುವಾಗಿರುವದು, ಜ್ಞಾನಿಯಲ್ಲಿ ಅದನ್ನಂಗೀಕರಿಸುವದಾದರೆ ಅವನಿಗೆ ಜನ್ಮವೂ ಬರಬೇಕಷ್ಟೆ? ಎಂದರೆ, ಹಾಗಲ್ಲ; ಹುರಿದಕಾಳು ಮೊದಲಿನಂತೆ ತನ್ನಾಕಾರದಲ್ಲಿ ಕಂಡರೂ ತಾನು ಮೊಳೆಯುವದಕ್ಕಿಲ್ಲದಿರುವಂತೆ; ಕರ್ಮದಿಂದ ಬಂದು ಭೋಗ ಮಾತ್ರದಲ್ಲಿ ಚರಿತಾರ್ಥವಾಗುವ ಬಾಧಿತ ಇಚ್ಛೆಗಳು ಹೇರಳವಾಗಿ ಕಂಡರೂ ಅವು ಜ್ಞಾನಿಯ ಜನ್ಮವನ್ನು ಕುರಿತಿರುವದಿಲ್ಲವು. ವೈರಾಗ್ಯವು ಅಭ್ಯಾಸಿಗೆ ಸಾಧನವಾಗಿದ್ದರು ಜ್ಞಾನಿಯಲ್ಲಿ ಸ್ವಭಾವದಿಂದಿರುವದು. ವಿವೇಕಕ್ಕೆ ಇಂಬೆನಿಸಿರುವ ಆ ವೈರಾಗ್ಯವು ಸ್ಥಿರಗೊಂಡರೆ ತನಗೆ ಜ್ಞಾನವೇ ಸಿದ್ಧಿಸುವದು. ವೈರಾಗ್ಯವನ್ನಗಲಿರುವ ವಿವೇಕದರಿವು ಕನಸಿನ ಕೈಗಂಟನಂತೆಯೇ! ಜ್ಞಾನ ಮತ್ತು ಭಕ್ತಿ ಎರಡೂ ತಮಗಾಶ್ರಯವಾಗಿ ವೈರಾಗ್ಯದ ಮನಸ್ಸನ್ನೇ ಬಯಸುತ್ತಿರುವವು. ವಿಷಯ ಭೋಗಗಳ ಬಳಕೆಯಿರುವವರೆಗೂ ತನ್ನಾತ್ಮನಿಗೆ ಜೀವತ್ವವು ತಪ್ಪುವಂತಿಲ್ಲ.

(೯–೩೪) ವಿಷಯಗಳೇ **ವಿಷ**ವಲ್ಲದೆ ಬೇರಲ್ಲ; ವಿಷವು ಒಂದು ದೇಹವನ್ನು ಕೊಲ್ಲುವದು. ಜನ್ಮ ಜನ್ಮಾಂತರಗಳಲ್ಲಿಯೂ ತನ್ನ ವಾಸನೆಗಳಿಂದ ಜೀವರನ್ನು ಗೋಳಾಡಿಸುವ ವಿಷಯಗಳು ಲೆಕ್ಕವಿಲ್ಲದಷ್ಟು ಶರೀರಗಳನ್ನು ಬಿಡದೆ ಕೊಲ್ಲುತ್ತಲೇ ಇರುವವು. ಈ ಬಗೆಯ ವಿಷಯಗಳನ್ನು ಗರ್ಭೀಕರಿಸಿಕೊಂಡಿರುವ ಭೂಮಿಯ ಪ್ರಾಪ್ತಿಯೇ ರಾಜ್ಯವೆನಿಸುವದು. ಇದರ ಪ್ರಾಪ್ತಿಯು ಜೀವನಿಗೆ ತನ್ನಭಿಮಾನರಸದ ಸವಿಯನ್ನು ಸರಿನೆತ್ತಿಗೇರಿಸಿ ಬಿಡುವದು. ರಾಜನಾಗಿ ನಿಂತ ಅರಸನಿಗೆ ನಿರಪರಾಧಿಗಳಾದ ಗೋಬ್ರಾಹ್ಮಣ ಮತ್ತು ಸಾಧುಸಂತರ, ಸ್ತ್ರೀಪುರುಷರ ವಧೆಗಳಾಗಲಿ, ದೇವಮಂದಿರ ಪುಣ್ಯಾಶ್ರಮಗಳು ಮತ್ತು ತುಂಬಿದ ಕೆರೆ ಕಟ್ಟೆಗಳು ಇವನ್ನು ಹೊಡೆದು ಹಾಕುವದಾಗಲಿ, ಪುರ ಗ್ರಾಮಗಳನ್ನು ಸುಡುವದಾಗಲಿ ಒಂದೂ ಪಾಪವೆಂತ ತನಗೆ ಕಾಣಿಸುವಂತಿಲ್ಲ. ಅವರು ನರಕರಾಶಿಗಳಲ್ಲನುಭವಿಸುವ ಪರಮ ದಾರುಣವಾದ ದುಷ್ಫಲಗಳು – ಬ್ರಹ್ಮಕಲ್ಪಗಳೇ ಬಂದು ಹೋದರು, ಲೆಕ್ಕವಿಲ್ಲದಷ್ಟು ಬಂದ ಹೊಸ ಹೊಸ ಎಮನಾಯಕರು ಅಲ್ಲಿನ ಅಧಿಕಾರವನ್ನುಳಿದರೂ ಮುಗಿಯುವಂತಿರುವದಿಲ್ಲ! ಶ್ರೇಯೋಮಾರ್ಗದಿಂದ ಜೀವರನ್ನೆಲ್ಲ ಹಾಳುಮಾಡುತ್ತಿರುವ ಮನ್ಮಥನು ಯಾವ ಜನ್ಮದ ಹಗೆಯೋ! ಸ್ತ್ರೀಯರೆಂದಮಾತ್ರಕ್ಕೆ ಕಾಮವನ್ನು ಹುಟ್ಟಿಸಿ ಅವರಲ್ಲಿ ವಿಜನಪದಕೃತ್ಯಕ್ಕೆಂದು ಜೀವರನ್ನು ಸಿದ್ಧಮಾಡಿಬಿಡುತ್ತಿರುವನು! ಬಲಿಷ್ಠನಾದವನು ತನ್ನ ಶಕ್ತಿ ಪರಕ್ರಮಗಳ ಎಲ್ಲೆಯನ್ನು ಮೀರಿ ಹಣಕ್ಕಾಗಿ ಅಬಲರನ್ನು ಕೊಲ್ಲುವನು. ಬಗ್ಗದಿರಲು ಅವರನ್ನು ವಂಚಿಸಿಯಾದರೂ ಹಾಳುಮಾಡುತ್ತಿರುವನು. ಅದಕ್ಕೂ ಇಲ್ಲದಿದ್ದರೆ, ಮೇಲಿನ ಅಧಿಕಾರಿಗಳಲ್ಲಿ ಚಾಡಿಯನ್ನಾದರೂ ಹೇಳಿ, ಜೀವಿತ ಅಥವಾ ಆ ಬಡಜನರ ಸರ್ವಸ್ವವನ್ನೂ ತಾನು ಸೂರೆಗೊಳ್ಳುತ್ತಲಿರುವನು. ನಿಷಿದ್ಧವಾದಾಹಾರ ಪಾನೀಯಗಳನ್ನೇ ಬಯಸಿ ತಿನ್ನುವದು, ಕುಡಿದು ತೇಗುವದು ರಸನೇಂದ್ರಿಯದ

ಲಾಂಪಟ್ಯವು. ಈ ರಸನ ಗುಹ್ಯೇಂದ್ರಿಯಗಳೆರಡೇ ಇಂದ್ರಿಯಗಳಲ್ಲೆಲ್ಲ ಅತಿ ಬಲಿಷ್ಠವಾದವುಗಳು! ನರಕಕೂಪಕ್ಕೆ ಸರಾಗದಿಂದ ಇಳಿಸಿಕೊಳ್ಳುವದಕ್ಕೆಂದೇ ಜೀವರನ್ನೆಲ್ಲ ಹೊಂಚುಹಾಕುತ್ತಲಿರುವವು. ಇವುಗಳಿಂದ ಹೆಚ್ಚಾದ ಆನಂದರಸವು ದೊರೆಯುವದೆಂದೇ ಬ್ರಹ್ಮನವರೆಗಿನ ಎಲ್ಲಾ ಜೀವರೂ ಭ್ರಮೆಗೆಪಕ್ಕಾಗಿ ಕಷ್ಟಕ್ಕೀಡಾಗುತ್ತಲಿರುವರು! ಮಾಂಸದ ಸವಿದೋರಿ ಮೀನನ್ನು ಹಿಡಿದುಕೊಂಡ ಕಿರಾತನಂತೆ; ಈ ಇಂದ್ರಿಯಗಳೆರಡು ಸುಖಲೇಶದ ಸವಿದೋರಿ ಜಗತ್ತಿನ ಜೀವರನ್ನೆಲ್ಲ ಹಾಳುಮಾಡಿ ಮೂಲೆಗೊರಗಿಸುತ್ತಲಿರುವವು. ಆದ್ದರಿಂದ ಆ ಜೀವರಿಗೆ ಶಾಂತಿ ಬರಬೇಕಾದರೆ ವಿಷಯರುಚಿಯನ್ನು ಮೊದಲು ಹದಗೆಡಿಸಿದಲ್ಲದೆ, ಬರುವದಕ್ಕಿಲ್ಲ ಎಂಬುದೇ ಸಿದ್ಧ.

ಭಕ್ತಿಯಿಂದ ಶಾಂತಿ ಬರುವದಿಲ್ಲವೆ? ಎಂದರೆ, ಪರತಂತ್ರ ರೂಪ ಭಕ್ತಿಯು ಕ್ರಿಯಾಸ್ವರೂಪಿಣಿಯು. ಜ್ಞಾನದೊಡನೆ ಒಂದಾಗಿರುವ ಅಭೇದಭಕ್ತಿಯೇ ಕೈವಲ್ಯಸ್ವರೂಪಿಣಿಯು. ಕೊರಳಿನ ಹಾರಕ್ಕೆ ದೀಪದಂತೆ ತನ್ನ ಬ್ರಹ್ಮಾತ್ಮಭಾವವನ್ನರಿಯುವದಕ್ಕೂ ಸುಜ್ಞಾನದೀಪವೇಬೇಕು. ಇದಕ್ಕೆ ವೈರಾಗ್ಯವೇ ತೈಲದಂತಿರುವದು. ಸತ್ಸಂಗವು ಸದ್ವಿಚಾರವು ಗುರುಪಾದಸೇವೆಯು ವಿವೇಕಾದಿ ಸಾಧನಗಳು, ಚಿತ್ತದ ಲವಲವಿಕೆ ಮತ್ತು ಸಾತ್ವಿಕತೆ, ಆತ್ಮಪರಾಯಣತೆ ಇವುಗಳನ್ನು ಮುಮುಕ್ಷುವು ನಿರಂತರ ಅಭ್ಯಾಸ ಮಾಡಬೇಕಾಗಿರುವದರಿಂದ ವೈರಾಗ್ಯ ಮನಸ್ಸಿನ ಲಯವಲ್ಲ; ವೈರಾಗ್ಯ ಪಕ್ವವಾದರೆ ತನಗೆ ಜ್ಞಾನ ಸಿದ್ಧಿಸುವದು. ಚಿತ್ತಮಯ ದುರ್ವ್ಯಾಘ್ರವನ್ನು ವೈರಾಗ್ಯ ಕತ್ತಿಯಿಲ್ಲದೆ ಸಂಹರಿಸುವದಕ್ಕೆ ಆಗುವದೇ ಇಲ್ಲ; ಈ ರಾಗವನ್ನು ಬಿಡುವದಕ್ಕೆ ಸಂನ್ಯಾಸ ಅವಶ್ಯಕ. ಫಲಾಕಾಂಕ್ಷೆಯನ್ನು ಬಿಟ್ಟು ಮಾಡುವ ಕರ್ಮವೇ ಸಂನ್ಯಾಸವು. ಏಕೆಂದರೆ ಫಲಾಕಾಂಕ್ಷೆಯನ್ನು ಬಿಟ್ಟಲ್ಲದೆ, ವಿರತಿಯಿಲ್ಲದ್ದರಿಂದ ಬರಲಿರುವ ಜ್ಞಾನಕ್ಕೆ ವೈರಾಗ್ಯವೇ ಪರಮಕಾರಣವೆಂಬ ಶ್ರುತಿಗಳು – 'ರಾಗಗಳೇ ಅಜ್ಞಾನದ ಗುರ್ತು' ಎಂಬುದರಿಂದ ಅವಿದ್ದರೆ ತನ್ನ ಹೃದಯದಲ್ಲಿ ಮರದ ಪೊಟರೆಯಲ್ಲಿ ಬೆಂಕಿಯಿದ್ದರೆ ಹುಲ್ಲು ಚಿಗುರುವದಕ್ಕಿಲ್ಲದಂತೆ ಜ್ಞಾನವೂ ಹುಟ್ಟುವದಕ್ಕಿರುವದಿಲ್ಲವು. ವಿರಕ್ತರಾದ ಶುಕಸನಕಾದಿಗಳು ಮತ್ತು ರಾಗವಿಲ್ಲವೆನ್ನುವದಕ್ಕಿಲ್ಲದ ಜನಕ ರಾಘವ ಕೃಷ್ಣಾದಿಗಳು ಜ್ಞಾನಿಗಳಾಗಿದ್ದರೆಂದು ಪ್ರಸಿದ್ಧಿ. ಜ್ಞಾನಿಗಳಿಗೆ ರಾಗಾದಿಗಳನ್ನು ಹೇಳುವ ಶ್ರುತಿಗಳಿಗೆ ಪ್ರಾರಬ್ಧ ಫಲಭೋಗದಲ್ಲಿ ತಡೆಯಿಲ್ಲವೆಂಬುದರಲ್ಲಿ ತಾತ್ಪರ್ಯವಲ್ಲದೆ, ಅವರಲ್ಲಿ ರಾಗಗಳಿರಬೇಕೆಂಬುದರಲ್ಲಿರುವದಿಲ್ಲ; ರಾಗಗೋಚರವೆಲ್ಲ ಮಹಾತ್ಮರಿಗೆ ವಿಟ್ಪ್ರಾಯವಾದ್ದರಿಂದ. ಈ ರೀತಿಯಿಂದ ವೈರಾಗ್ಯವು ಜ್ಞಾನಕ್ಕೆ ಅತ್ಯವಶ್ಯವೆಂದಾಯ್ತು. ವೈರಾಗ್ಯವೆಂದರೆ ಸ್ತ್ರೀಪುತ್ರಾದಿ ಇಷ್ಟಬಂಧು ಮಿತ್ರರ ವಿಯೋಗ, ತನಗೆ ಸಾಕೆನ್ನದಂತೆ ಜನರಿಂದ ಕಷ್ಟಸಹಿಸುವ ತಾಳ್ಮೆ, ಮೌನ, ಸಂನ್ಯಾಸ ಇವನ್ನು ಸಾಧಿಸುವಾಗ ಬರುವ ನೋವುಗಳನ್ನು ಉಸುರೆತ್ತದೆ ಸಹಿಸಿಕೊಳ್ಳುವ ಕಡುಧೀರತ್ವವಲ್ಲದೆ ಬೇರಲ್ಲ. ಈ ವಿರಾಗಕಾಷ್ಠಗಳನ್ನೆಲ್ಲ ಕೂಡಿಸಿ, ಜ್ಞಾನ ಬೆಂಕಿಯನ್ನು ಹೊತ್ತಿಸಿದರೆ, ಅದು ಸಂಸಾರ ಮಹಾಕಾಡನ್ನು ಸುಡುವದು ಖಂಡಿತ. ಈ ಮರ್ಮವನ್ನು ಬಲ್ಲ ಮುನಿಗಳು ವೈರಾಗ್ಯವನ್ನು ಸಂನ್ಯಾಸಕ್ಕೆ ಜತೆಗೂಡಿಸಿದರು. ಬ್ರಹ್ಮವ್ರತ

ವೆಂದೂ ಸಂನ್ಯಾಸಕ್ಕೆ ನೆಲೆಮನೆಯೆಂದೂ ಅವನ್ನು ಬಗೆದರು. ಈ ವೈರಾಗ್ಯ ಬಲಿತ ವಿಶಾಲಹೃದಯನು ಚತುರ್ಮುಖ ಬ್ರಹ್ಮನವರೆಗಿನ ಭೋಗ ಪದವಿಗಳಲ್ಲಿಯೂ ಔದಾಸೀನ್ಯವೆಂಬ ಅಮೃತವನ್ನು ಸವಿಯಬಲ್ಲನು! ಆ ಮಹಾತ್ಮನಿಗೆ ದೇವೇಂದ್ರನು ಕಾಡು ಮೃಗದಂತೆ! ಇನ್ನು ಮನುಷ್ಯ ರಾಜರೊಳಗೆ ವಿಶೇಷವೇನು? ಭುವನವೇ ತೃಣದಂತೆ! ಇನ್ನು ರಾಗವೆಲ್ಲಿ? ಬುದ್ಧಿಯಿಂದ ಆತ್ಮಾನಾತ್ಮಗಳನ್ನು ವಿಂಗಡಿಸಿ, ಅಳತೆಯ ಶರೀರದ ಕಟ್ಟನ್ನು ಕಳಚಿಕೊಂಡು ತಾನು ಜಗದೇಕ ಶರೀರನಾಗಲು, ಅವನಿಗೆ ತನ್ನ ದೇಹದಲ್ಲಿಯೇ ಸಂಗವಿರುವದಿಲ್ಲ, ಇನ್ನು ಯುವತಿಯಲ್ಲಿ ಹೇಗೆ?

(೩೫–೪೮) ವಿರಕ್ತಿಯಿಂದ ಬಿಟ್ಟು ಹೊರಟಿದ್ದವನು ಮನೆಯನ್ನು ಪುನಃ ಭೋಗಪರನಾಗಿ ಸೇರಿ, ಅವನು 'ನಾನು ಪರಮತತ್ತ್ವ' ಎನ್ನುವುದಾದರೆ, ಜ್ಞಾನ ಕರ್ಮಗಳಿಂದಲೂ ಜಾರಿದ ಆ ಹೊಲೆಯನನ್ನು ಬಲ್ಲವರು ಕನಿಕರವಿಲ್ಲದೆ ಕೈಬಿಟ್ಟು ಬಿಡಬೇಕು. ಯೋಗ್ಯರಲ್ಲದ ವರವರ್ಣರಿಗೂ ಹೆಂಗಸರಿಗೂ ರಹಸ್ಯವನ್ನು ಹೇಳಿ ಕೊಡುತ್ತೇನೆಂಬುವನು ಭೋಗಪರನು; ತತ್ತ್ವಪರನಲ್ಲ. ಅರಸುಗಳಿಗೆ ತಿಳಿಸುವವನಂತು ಊರುಹೊರಗಿನ ಅತ್ಯಂತ ಕೀಳುಪ್ರಾಣಿಗಳ ವರ್ಗಕ್ಕೆ ಸೇರಿದ ಅವನು ವಂಚಕರ ಗೋದಣಕ್ಕೆ ಮೊದಲನೆಯ ಗುರುವು. ತನ್ನ ಹೊಲೆಯೊಡಲಿಗೇ ಹೇಸದ ಆ ಕುನ್ನಿಗೆ ವಿರಾಗದ ಸುಳಿವಿನ್ನೆಲ್ಲಿ? ವಿಷಯಗಳಲ್ಲಿ ಸುಖದ ಗಂಧ ಕಾಣುವದಕ್ಕಿಲ್ಲದ ವಿವೇಕಿಯು ತನ್ನ ಮಾಂಸಮಯ ತನುವಿನಲ್ಲಿ '**ನಾನು**' ಎಂಬುದನ್ನು ಬಿಟ್ಟು, ಹೂವುಗಳಲ್ಲಿ ಧಾರದಂತೆ ತನ್ನಲ್ಲಿ ಆಕಾಶಾದಿ ಭೂತಗಳನ್ನು ಪೋಣಿಸಿಕೊಂಡು ಅವುಗಳಿಗೆ ವಿಲಕ್ಷಣವಾಗಿ ಆರನೆಯದಾಗಿ ಇರುವ ಇಡಿಯ ಜಗತ್ತಿನ ಚಿತ್ತತ್ತ್ವವನ್ನೇ 'ನಾನು' ಎಂದು ತಿಳಿದುಕೊಳ್ಳುವನು. ದೋಷವನ್ನು ಕಂಡಿದ್ದರೂ ವಿಷಯಗಳನ್ನು ಪುನಃ ಬಯಸಿದವನು ಗರ್ದಭಕುಲಜನಲ್ಲದೆ ನರನಲ್ಲ; ಕಾಮಾದಿಗಳನ್ನು ಸತ್ಕರಿಸಿ ತನ್ನೊಳಗೆ ಮಾಡಿಕೊಂಡು, ಅವರು ಮಾಡುತ್ತಿರುವದನ್ನೆಲ್ಲ ತಾನೇ ಮಾಡುತ್ತ, ಭೋಗೇಚ್ಛೆಗಳನ್ನು ಕಡೆಗೊಂದಿಸದವನು ಹುಳುವರ್ಗದವನಲ್ಲದೆ, ನರರೊಳಗಲ್ಲ;

ವಿವೇಕ ವೈರಾಗ್ಯಗಳನ್ನು ಕೆಳಮೇಲು ಕಲ್ಲುಗಳನ್ನಾಗಿಮಾಡಿ, ಅವುಗಳಲ್ಲಿ ವಿಷಯೇಂದ್ರಿಯಗಳನ್ನಿಟ್ಟು, ಧೂಳಾಗಿ ಅರೆದು ಸಣ್ಣಿಸಿ ಬಿಡುವದೇ ಜ್ಞಾನಕ್ಕೆ ಭದ್ರವಾದ ತಳಗಲ್ಲು. ಈ ಸಂಸಾರವೇ ಸಮುದ್ರವು; ದೇಹೇಂದ್ರಿಯಗಳನ್ನು ನಾನು ಎಂಬುದೇ ನೀರಿನ ಪಾಚಿಯು, ಗುರುವೇ ನಾವಿಕನು, ಬ್ರಹ್ಮವೇ ದಡ, ಅದಕ್ಕಿರುವ ದೋಣಿಯೇ '**ಸೋಹಂ**'ಭಾವವು. ಈ ಸಂಸಾರ ವೈತರಣಿಯ ನದಿಯಲ್ಲಿ ಬಿದ್ದಿರುವ ನಮಗೆ ಶ್ರುತಿಯು:—'ಎಲೈ ಅಮೃತ ಪುತ್ರರೆ! ಇನ್ನಾದರೂ ಶರೀರೇಂದ್ರಿಯಗಳಲ್ಲಿ 'ನಾನು, ಎಂಬುದನ್ನು ಬಿಟ್ಟು ಸುಖಿಸಿರಿ!' ಎಂದು ಪರಮ ಹಿತವನ್ನು ಸಾರುತ್ತಿರುವದು. ವಿರತಿಯಿಲ್ಲದೆ ಸುಖವಿಲ್ಲ, ಅವನಿಗೆ ಎಂದಿಗೂ ಮುಕ್ತಿಯಿರುವದೇ ಇಲ್ಲ. 'ತಾನಲ್ಲದ ಶರೀರೇಂದ್ರಿಯಗಳನ್ನು ನಾನು, ಎಂಬುದು ಮುಂದಿನ ಶರೀರಗಳ ಅಂಕುರೋತ್ಪತ್ತಿಗೆ ಹೈನಾಗಿ – ಅಚ್ಚ ಹೊಸ ಬಲಿತ ಬೀಜದಂತಿರುವಲ್ಲಿ ಇನ್ನು ಅಪುನರಾವೃತ್ತಿಯೆಲ್ಲಿ? ದೇವಗಂಧರ್ವರಾದಿ ಬ್ರಹ್ಮಲೋಕದವರೆಗಿನ ಭೋಗಪದವಿಗಳೆಲ್ಲವೂ

ಈ ಜೀವರ ಕರಣ ದೌರ್ಬಲ್ಯಾಂತರಂಗಾರ್ಜಿತ ಅನಿತ್ಯ ಫಲಗಳಲ್ಲದೆ, ಮತ್ತೆ ಬೇರಲ್ಲ. ಕರ್ಮೋಪಾಸನೆಗಳ ಫಲಗಳಾದ ಆ ಲೋಕಗಳು ದುರ್ಮಾನಪ ಭೋಗ್ಯಗಳಷ್ಟೆ? ದುಃಖಾನುಭವಕ್ಕಲ್ಲದೆ ಕ್ರಿಯೆಗಳಿಂದ ಬೆಳೆದ ಅವು ತನ್ನ ಸುಖವನ್ನು ಕುರಿತು ಎಂದಿಗೂ ಇರುವದಿಲ್ಲ. ದೈತ್ಯ, ದಾನವರು, ಅಂತಶ್ಶತೃಗಳು ಮತ್ತು ತನ್ನ ಪುಣ್ಯ ತೀರಲು – ಇವುಗಳಿಂದ ನಿಲ್ಲುವದಕ್ಕಿಲ್ಲದ ಅಲ್ಲಿ ಬರುವ ದುಃಖಗಳು ಒಬ್ಬರಿಗೂ ಮೀರುವದಕ್ಕಿರುವದಿಲ್ಲ. ಎಷ್ಟೋಕಷ್ಟದಿಂದ ಆ ಲೋಕ ಹೊಂದಿದ್ದರು ಹಿಂದಿರುಗುವದು ತಪ್ಪಿದ್ದಲ್ಲ. ಇಲ್ಲಿಯೂ ಕಷ್ಟದಿಂದ ವಿಷಯಗಳನ್ನು ಕೂಡಿಸಿ, ತಾನು ಉಣ್ಣಬೇಕೆನ್ನುವಷ್ಟರಲ್ಲಿಯೇ– ಕಾಲ, ಕರ್ಮ, ಜನರಾನುಸರಣಗಳಿಂದ ಬರುವ ನೂರಾರು ಭೋಗವಿಘ್ನಗಳು ಯಾರಿಗೆ ಪ್ರತ್ಯಕ್ಷವಲ್ಲ? ಸುಖವು ದುಃಖವಾಗಿ ಮಾರ್ಪಡುವ ಸನ್ನಿವೇಶವೇ ಸಂಸಾರದಲ್ಲಿ ಹೆಚ್ಚು. ಈ ರೀತಿಯಿಂದ ಜೀವರಿಗೆ ಮನಸ್ಸಿನ ಭ್ರಾಂತಿ ವಿನಃ ಈ ಸಂಸಾರದಲ್ಲಿ ಕನಸಿನಲ್ಲೂ ಸುಖ ಕಾಣಿಕೆಗಿರುವದಿಲ್ಲ.

(೪೯–೫೩) ತನಗೆ ಸಮನಿಲ್ಲದ ಬ್ರಹ್ಮವೇ ತಾನಾಗಿರುವ ಜ್ಞಾನಿಯೇ ಒಂದು ಸಮುದ್ರವು, ಕುಲಪರ್ವತಗಳೆ ಪೇರ್ನೊರೆಗಳು, ಸೂರ್ಯ ಚಂದ್ರರೆ ತನ್ನ ಬೆಳಕು, ಹಲವು ಲೋಕಲೋಕಾಂತರಗಳೇ ಕಿರುಸೊಳ್ಳಿಗಳ ನೊರಜುಗಳು, ಈ ಭುವನಗಳ ಶೋಭೆಯೇ ತಗ್ಗಿನಲ್ಲಿ ಸಾಲುಸಾಲಾಗಿ ಹರಿಯುವಂತೆ ತೋರುವ ಮರುಮರೀಚಿಕೆಯ ತೊರೆಗಳು, ಸ್ಥಾವರಜಂಗಮ ಪ್ರಾಣಿಗಳ ಹುಟ್ಟುಹೊಂದುಗಳ ವಿಕಾರಗಳೆ ಸಣ್ಣಪುಟ್ಟ ಅಲೆಗಳು, ಚೇತನ ಜೀವರೆ ಜಲಚರಗಳು, ಶಾಸ್ತ್ರಂಗಳಾಶಯವೇ ತನ್ನಲ್ಲಿ ಹಿಂಗದಿರುವ ಗಂಭೀರವಾದಾಳವು, ಜ್ಞಾನಚಿನ್ಹವೆ ನಿರ್ಮಲತೆಯು, ಶಾಂತಿಯೆ ಮೇಲಿನ ತಂಪು; ತಡಿಯಿಲ್ಲದ ಈ ಬ್ರಹ್ಮಸಾಗರದಲ್ಲಿ ಗಾಢಪ್ರವೇಶ ಮಾಡಿರುವ ಜ್ಞಾನಿಯು ಭೇದಿಸಿ ಅದರಿಂದ ತನಗೆ ಹೊರಮುಖನಾಗುವದಕ್ಕಿಲ್ಲದಂತಿರುವನು! ಹೀಗಿರುವ ಜ್ಞಾನಿಯು ಮಳೆಯ ನೀರು ಗುಳ್ಳೆಗಳಲ್ಲಿ ಹೊರದೋರಿ ಕ್ಷಣಮಾತ್ರದಲ್ಲಳಿಯುವ ಜಂತುಗಳಂತಿರುವ ಈ ಜೀವರ ತುಚ್ಛಪದವಿಗಳನ್ನು ಬಯಸುವನೆಂಬುದು ಎತ್ತಣಮಾತು? ಹಾಲಿನಲ್ಲೆ ತನ್ನ ಕಾಲ್ತೊಳೆಯಲಬಲುವ ಪುರುಷೋತ್ತಮನಿಗೆ ಕೆಸರಿನಲ್ಲಿಚ್ಛೆಯಾಗುವದಕ್ಕಿಲ್ಲದಿರುವಂತೆ; ಕಾಲಕರ್ಮಗಳ ತಲೆಯನ್ನು ತುಳಿದ ಮಹಾತ್ಮನಿಗೆ ಭೋಗಾಭಿಲಾಷೆಯು ಬಂಧಿಸುವದಕ್ಕಿನ್ನಿಲ್ಲ. ಹಸುಳೆಗಳನ್ನು ಬೆರಗುಮಾಡುವ ವಾಕ್ಯಪ್ರಸರವು ಪಂಡಿತರ ಗಣನೆಗಿಲ್ಲದಂತೆ; ರಾತ್ರಿಯಲ್ಲಿ ಸರಿಹೊಂದುವ ಗತ್ತಲೆಯು ಹಗಲಿನಲ್ಲಿ ಬೆಳಗುವದಕ್ಕಿಲ್ಲದಂತೆ; ಹೊಟ್ಟೆಯಿಂದ ಹೊರಗಾದ ಮಲದ ಕಸವನ್ನು ಗುಡಿಸಬಲ್ಲ ಕಸಬರಿಕೆಯು ಬಂಗಾರವನ್ನು ಸೋಕುವದಕ್ಕೆ ತಾನಿಲ್ಲದಂತೆ ಅಜ್ಞಾನಿಗಳ ಭೋಗಭ್ರಮೆಯು ಜ್ಞಾನಿಯನ್ನು ಮುಸುಕುವದಕ್ಕೂ ಇರುವದಿಲ್ಲವು.

೧೧. **ಶಮಾದಿಷಟ್ಕ ನಿರ್ಣಯ**:—(೨–೭೧) ಶಮಿಪುರುಷನಿಗೆ ಕ್ರೂರ ಮೃಗಗಳೂ ಪಶುಪಕ್ಷಿಗಳೂ ಹಸನ್ಮುಖವಾಗುವವು. ಇನ್ನಿಲ್ಲವೆಂಬಷ್ಟು ಸಂಪತ್ತಿದ್ದರೂ ಶಮಿಯಂತೆ ಮನುಷ್ಯನು ಆನಂದಿಸನು. ತಪಸ್ವಿಗಳು ಬಹು ಯಜ್ಞಕರ್ತರು ರಾಜರು ಕವಿಗಳು ಬಲ್ಲಿದರು ಬಲಿಷ್ಠರು ಎಲ್ಲರಲ್ಲಿಯೂ ಶಮಿಯೇ ವಿರಾಜಿಸುವನು! ಶಮಿ

ಎಂದರೆ ಸುಖದುಃಖಗಳನ್ನು ಬಯಸದವನು. ಮರಣ ಯುದ್ಧೋತ್ಸವಗಳಲ್ಲಿ ಪೂರ್ಣ ಚಂದ್ರೋದಯದಂತೆ ಪ್ರಶಾಂತ ಮನಸ್ಕನು. ಚಿತ್ತದ ಹರಿದಾಟಗಳನ್ನು ತಡೆಗಟ್ಟುವದೆಂಬ ಈ ಮನೋನಿಗ್ರಹವು – ಹೊತ್ತಿಕೊಂಡು ಉರಿಯುವ ಬೆಂಕಿಗಿಂತಲೂ ಬಿಸಿ; ಶರದೃತುವಿನ ಚಂದ್ರನಿಗಿಂತಲೂ ಶೀತಲವು; ಕಾಲ್ನಡೆಯಿಂದ ಸಂಚರಿಸಿ ಕುಲಪರ್ವತಗಳನ್ನು ಹೊಕ್ಕಾಡುವದಕ್ಕಿಂತಲೂ ದುಶ್ಚರವು; ಬಿದುರಿನ ಗಂಟುಗಳಿಗಿಂತಲೂ ಕರ್ಕಶವು; ಮೇರುವಿಗೂ ಮುಂಮಿಗಿಲೂ, ಸಮುದ್ರಪಾನಕ್ಕಿಂತಲೂ, ಸುಳಿದಾಡುವ ವಾಯುವನ್ನು ತಡೆದು ನಿಲ್ಲಿಸುವದಕ್ಕಿಂತಲೂ, ಮೇರುವನ್ನು ಕೀಳುವದಕ್ಕಿಂತಲೂ ಕಷ್ಟವಾಗಿರುವದು! ದೇವತೆಗಳಿಗೂ ಸುಲಭವಲ್ಲದ ಈ ಮನೋನಿಗ್ರಹವು ಜಡಮನುಜರಿಗೆ ಸಾಧ್ಯವೆಂಬುದು ಎಷ್ಟು ಮಾತ್ರ! ಹೀಗಿದ್ದರೂ ವಿರಕ್ತಿ, ಅಭ್ಯಾಸ ಎರಡರಿಂದ ಅದನ್ನು ಸಾಧಿಸಬಹುದು. ವಿರಕ್ತಿಯೆಂದರೇನೆಂಬುದನ್ನು ಹಿಂದೆಯೇ ವಿವರಿಸಿರುತ್ತದೆ. ತತ್ತ್ವಚಿಂತನೆಯು, ಅದರ ಕಥನವೂ, ಒಬ್ಬರಿಗೊಬ್ಬರು ಕಲಿತು ಮಾಡುವ ಮನನವೂ ಒಬ್ಬನೆ ಇದ್ದಲ್ಲಿ ತತ್ತ್ವದಲ್ಲಿಯೇ ನಿಷ್ಠನಾಗಿರುವದು ಅಭ್ಯಾಸವು. ನೆಲೆಮುಟ್ಟಿದ ವೈರಾಗ್ಯವುಳ್ಳವನೇ ಉತ್ತಮಾಧಿಕಾರಿಯು. ಅಷ್ಟಮದಗಳನ್ನಳಿಯದವರು ತತ್ತ್ವವಿಚಾರಕ್ಕೆ ಮಧ್ಯಮರು.

ಕೊಂಚ ಅವಕಾಶಕೊಟ್ಟರೂ ಸಾಕು, ಉಗ್ರಾಣದ ಮನೆಯಂತೆ ಈ ಮನಸ್ಸು ಎಲ್ಲವನ್ನೂ ತನ್ನೊಳಗೆ ತುಂಬಿಟ್ಟುಕೊಳ್ಳುವದು. ಹೊರಮುಖವಾದರೆ ಸರಿ, ನೂರಾರು ವಿಷಯಗಳಲ್ಲಿಯೇ ಸಂಚರಿಸುತ್ತ, ಶಾಖೆಯಿಂದ ಶಾಖೆಗಳಲ್ಲಿ ಹಾರಾಡುವ ಕಪಿಯಂತೆ, ಆ ವಿಷಯಗಳನ್ನು ಬಿಟ್ಟು ತಾನು ಹೊರಕ್ಕೆ ಬರದಂತಿರುವದು. ಶಾಸ್ತ್ರಯುಕ್ತ್ಯಾನುಭವಗಳಿಂದ ಸರ್ವ ಜಗತ್ತಿನಲ್ಲಿಯೂ ನಿಸ್ಸಾರತೆಯನ್ನು ಮನಗಂಡವರೇ ತನ್ನಾತ್ಮನಿಂದ ಹೊರಹೊಮ್ಮಿದ ಇದೆಲ್ಲ ಚಿನ್ಮಯವೆಂಬ ನಿಶ್ಚಯಹೊಂದಿ ದೃಶ್ಯೈಕ್ಯಸಂಭವ ಮಾಡುವರು. ಕೀವನ್ನು ಮುತ್ತುವ ನೊಣಗಳಂತೆ, ತನ್ನನ್ನು ಮುತ್ತಿದ ವಾಸನೆಗಳಿಂದ ಉಗ್ರರೂಪನ್ನು ಧರಿಸಿದ ಬುದ್ಧಿಯನ್ನು ನಿಗ್ರಹಿಸುವದಕ್ಕಿರುವದಿಲ್ಲ. ಆದರೂ ಹಿಂದಿನ ನೀಚ ಕರ್ಮ ಎಂಬ ದೈವವು ದೃಢಮೂಲವೆಂದೂ, ಅದೃಢಮೂಲವೆಂದೂ ಎರಡು ಬಗೆಯು. ಭೋಗದಿಂದಲೇ ಹೋಗುವ ದೃಢಮೂಲವು ಅಪರಿಹಾರ್ಯವಾಗಿದ್ದರೂ ಸತ್ಪ್ರಯತ್ನಗಳಿಂದ ಅದಕ್ಕೂ ನಾಶವುಂಟು. ಶಿಥಿಲವಾಗಿದ್ದಲ್ಲಿ ಈಶ್ವರ ಪೂಜಾದಿಗಳಿಂದ ಅದು ಹೋಗುವದು. ಹಿತೋಪದೇಶ ಮಾಡಿದಲ್ಲಿ ಮನಸ್ಸು ಸನ್ಮಾರ್ಗಕ್ಕೆ ಬರುವದು.

ಎಲೈ ಮನೋಮಿತ್ರನೆ? ವಿಷಮಯವಾದ ವಿಷಯಗಳೆಂಬ ಬರಿಯ ದುಷ್ಟ ಜಂತುಗಳಿಂದಲೇ ತುಂಬಿಕೊಂಡಿರುವ ಈ ಸಂಸಾರ ಕಾಡಿನಲ್ಲಿರುವ ಶೀಲವೇನು? ಜನನಮರಣ ಶೋಕಮೋಹ ಕ್ಷುಧಾ ತೃಷೆಗಳೆಂಬ ಹುಲಿ ಕರಡಿ ಚಿರತೆಗಳೆಂಬ ಕ್ರೂರ ಮೃಗಗಳೇ ಸಂಚರಿಸುತ್ತಿರುವ ಇದು ಧೀರ ಸೇವಿತವಲ್ಲ! ಕರಣತ್ರಯಗಳ ಕ್ರಿಯೆಯು ತನಗೆ ದುಃಖವನ್ನೇ ಕೊಡುತ್ತಿರುವದರಿಂದ ಆ ಆಯಾಸವನ್ನು ಬಿಟ್ಟು, ಶಮವೆಂಬ ನಂದನವನ್ನು ಸೇರಿ ಸುಖದಿಂದ ವಿಶ್ರಮಿಸು. ಮಾಯಾಗಿರಿಯಲ್ಲಿರುವ ಈ ಸಂಸಾರ ಗುಹೆಯು ದುರಿತಾಂಧಕಾರ ವಿಕಾರಗರ್ಭವೆನಿಸಿರುವದು. ಎಲೈ ಮರುಳೆ!

ಬ್ರಹ್ಮಲೋಕದವರೆಗೆ ಎಲ್ಲವೂ ಕಾಲಗ್ರಸ್ತವಾಗಿರುವದು. ಕೆಳ ಮೇಲಿನ ಅಂಡಗಳನ್ನು ಭೇದಿಸಿದರೂ ಬ್ರಹ್ಮಲೋಕವನ್ನು ಕಳಿದು ಮೇಲಕ್ಕೆ ಹೋದರು. ಕಾಲಬಾಧೆಯು ಬಿಡುವದಿಲ್ಲ. ಕೈವಲ್ಯವೂ ತನಗೆ ಸಿದ್ಧಿಸುವದಿಲ್ಲ. ಮನೋರಾಜೇಂದ್ರನೆ ಚಿತ್ತವಿಟ್ಟು ಅವಧರಿಸು? ಭೋಗಲಾಲಸವು ಕೊನೆಗಾಣುವ ತನಕ ಈ ಭುವನಕೇಳಿಗಳೆಲ್ಲ ದುಃಖಕ್ಕಲ್ಲದೆ, ನಿನ್ನ ಸುಖವನ್ನು ಕುರಿತಿರುವದಿಲ್ಲವು. ಬಗೆಬಗೆಯ ಕಾವ್ಯ ಕಾದಂಬರಿ ನಾಟಕ ಕಲೆಗಳು, ನವರಸಾಲಂಕಾರಗಳು, ಶಬ್ದ ಸ್ಪರ್ಶರೂಪ ರಸಗಂಧ ಭೋಗಗಳು, ಕಿಟ್ಕಿ ಬಾಗಿಲುಗಳಲ್ಲಿ ಕಂಗೊಳಿಸುವ ರಜತಸ್ವರ್ಣ ಬಿಂದುಗಳ ತೆರೆ ಮರೆಗಳಿಂದಲೂ ರತ್ನದಂಡದ ಚೌರಿ ಚಾಮರಗಳಿಂದಲೂ ಹಂಸತೂಲಿಕಾತಲ್ಪಗಳಿಂದಲೂ ಕೂಡಿ ರಂಜಿಸುವ ಮಂದಿರ ವಿಹಾರ ಭವನಗಳು, ಮಾಧವ ಲಸತ್ಪುಷ್ಪಗಳು, ಶುಕ್ಲಪಕ್ಷದ ಚಂದ್ರನಂತೆ ಗೌರಶರೀರವುಳ್ಳ ಹೃದಯ ಕಾಮುದುರಿಯನ್ನಾರಿಸುವ ಜಗತ್ತಿನ ಸುಖವನ್ನೆಲ್ಲ ಇಂತಿಷ್ಟೇ ಸರಿಯೆಂದು ಅಳಿಯುವಂತಿರುವ, ಕೋಮಲ ಶರೀರದ ನವಕನ್ನಿಕೆಯರ ನೇತ್ರೋತ್ಸವದ ರೂಪಗಳು, ಸುವರ್ಣದ ಕಮಲಗಳುಳ್ಳ ಸರೋವರಗಳು, ಹೂದೋಟಗಳು, ನಾಗಾವಲಿತ ಚಂದನಾದಿ ಪರಿಮಳ ದ್ರವ್ಯಗಳು, ದ್ರಾಕ್ಷಾದಿ ಮಧುರಸ ಪಾನೀಯ, ಭೋಜನ ವಸ್ತ್ರ ವಿಶೇಷಗಳು ನಿನಗೆ ಸುಖಪ್ರದಗಳಲ್ಲ. ಈ ಭೋಗ್ಯ ವಿಶೇಷಗಳಲ್ಲಿ ಯಾರಿಗೂ ಸುಖವನ್ನು ಹಾರು ಹೊಡೆಯುವದಕ್ಕಿಲ್ಲ. ಏಕೆಂದರೆ ಇವುಗಳು ಒಂದಕ್ಕಿಂತ ಇನ್ನೊಂದು ಶತಾಧಿಕವಾಗಿಯೂ ಸಹಸ್ರಾಧಿಕವಾಗಿಯೂ ದುಃಖ ಭೂಯಿಷ್ಠವಾಗಿರುವವು. ಅಲ್ಲದೆ, ಶಬ್ದಾದಿಗಳಲ್ಲಿ ಒಂದೊಂದು ವಿಷಯವನ್ನು ಸೇವಿಸಿ, ಕ್ರಮದಿಂದ – ಜಿಂಕೆ ಮತ್ತು ಹಾವು, ಆನೆ, ಶಲಭ, ಮೀನು, ಮಧುಕರ ಇವುಗಳು ಪರಮ ದುರ್ಗತಿಗಳನ್ನು ಹೊಂದಿರುವಲ್ಲಿ ಬಿಡದೆ ಎಲ್ಲವನ್ನು ಸೇವಿಸುತ್ತಿರುವ ಮಿತ್ರನೆ? ಆ ದುಷ್ಫಲಗಳೆಲ್ಲವೂ ನಿನ್ನ ಕೈಸೇರುವವೆಂಬಲ್ಲಿ ಸಂಶಯವೇನು? ಈ ಶರೀರವು – ಮಲ ಬೂದಿ ಹುಳುಗಳಲ್ಲೊಂದಾಗಿ ನಿಲ್ಲುವದೆಂಬುದು ಪ್ರತ್ಯಕ್ಷಸಿದ್ಧವಾಗಿರುವದು. ರೋಗರುಜಿನ ದುಃಖಗಳಿಗೆಲ್ಲಕ್ಕೂ ಪ್ರತ್ಯಕ್ಷ ಮನೆಯಾಗಿರುವ ಈ ಶರೀರದಿಂದ ಸುಖವನ್ನು ನಿರೀಕ್ಷಿಸುವದಕ್ಕೂ ನಿನಗಿರುವದಿಲ್ಲ, ಮೃತ್ಯುದೇವತೆಯೇ ಸ್ತ್ರೀರೂಪವಿಡಿದು ಇಲ್ಲಿಯೇ ದೊರೆತಿರುವಲ್ಲಿ ಆಕೆಯಿಂದ ಸುಖವನ್ನಂತು ಊಹಿಸುವದಕ್ಕೂ ಇಲ್ಲ; ಇಂದು ಗೌರಿಯ ಹಬ್ಬವು, ಇಂದು ಪುಣ್ಯದಿನವಿಂದು ಗುರುಗಳಾರಾಧನೆಯಿಂದು ಹರಿದಿನ ಎಂದು ದಿನಬೆಳಕು ಹರಿಯುತ್ತಲೂ ಲೊಟಗುಟ್ಟತ್ತಲಿರುವ ಆ ಸ್ತ್ರೀಯಳು ಚೇಳು ಮುಂತಾದ ವಿಷ ಜಂತುಗಳು ಒಂದೊಂದು ಸಲವೂ ಕುಟುಕುತ್ತಿರುವಂತೆಯೇ ಚಿತ್ತಕ್ಕೆ ವ್ಯಥೆಪಡಿಸುತ್ತಿರುವಳು! ತನ್ನ ಕರ್ಮಾನುಗುಣದಿಂದ ದೊರೆತಿರುವಷ್ಟರಲ್ಲಿಯೇ ತೃಪ್ತಿ ಹೊಂದುವ ಸ್ವಭಾವವು ಆಕೆಯಲ್ಲಿ ಇರುವದಿಲ್ಲವು. ಇದಿರ ಗರತಿಯರಲ್ಲಿ ತನ್ನ ಮೊದಲು ಎಲ್ಲವನ್ನೂ ಹಳಿಯುವ ಚಪಲ ಸ್ವಭಾವದ ಸ್ತ್ರೀಯಳಲ್ಲಿ ಸುಖವೋ, ಹುಲಿಯ ಉಗುರು ಗೊನೆಯಿಂದ ಶೀಳಿಸಿಕೊಂಡು ಸಾಯುವುದು ಲೇಸೋ? ನಿನ್ನ ಚಿತ್ತದಲ್ಲಿ ಆಲೋಚಿಸು? ಆ ಚಾಪಲ್ಯವನ್ನು ನಿನ್ನ ಚಿತ್ತದಿಂದ ಹೊರಕ್ಕೆ ತೆಗೆದುಹಾಕುವದು ಶ್ರೇಯಸ್ಸಾಧನವೆಂಬುದಕ್ಕೆರಡಿಲ್ಲ. ಭೋಗದ ದುರ್ವಾಸನೆಗಳು ಎಲ್ಲಾ ಬಗೆಯಿಂದಲೂ

ದುಃಖಕ್ಕೇ ಹೊರತು, ನಿನ್ನ ಸುಖವನ್ನು ಕುರಿತಿಲ್ಲ. ಬಲ್ಲ ಜ್ಞಾನಿಗಳು ಈ ಬಗೆಯ ಚಿತ್ತದಲ್ಲಿ ತನ್ನ ಬ್ರಹ್ಮಾತ್ಮವನ್ನು ಕುರಿತು ಅರಿಯುವಲ್ಲಿ ಬೇಕಾದ '**ಜ್ಞಾನಕರಣತ್ವ**' ವಿಲ್ಲವೆಂದಲ್ಲವೆ? ನಿರ್ಣಯಿಸಿರುತ್ತಾರೆ ಎಂದು ಹೇಳುವದರಿಂದಲೂ ತನ್ನನುಭವಕ್ಕೆ ಬಂದ ದುಃಖಶ್ರೇಣಿಯನ್ನು ಆ ಮನಸ್ಸಿಗೆ ನೆನಪಿಸಿಕೊಡುವದರಿಂದಲೂ, ವಿಷಯ ಲಂಪಟನಾಗಿಯೇ ಇದ್ದರೆ ಅದರಿಂದ ಬರುವ ನರಕದುಃಖಗಳು ತಪ್ಪುವದೇ ಇಲ್ಲವೆಂಬ ಭಯವನ್ನು ಮತ್ತು ಸನ್ಮಾರ್ಗದಲ್ಲಿ ನಡೆದರೆ ನಿತ್ಯಾನಂದವನ್ನೇ ಹೊಂದುವೆ ಎಂಬ ರುಚಿಯನ್ನು ಆ ಮನಸ್ಸಿಗೆ ಹುಟ್ಟಿಸಿಕೊಡುವದರಿಂದಲೂ ಕಲ್ಲಿನಂತೆ ಜಡವಲ್ಲದ ಅದು ಸನ್ಮಾರ್ಗಕ್ಕೆ ಬರುವದೆಂಬುದರಲ್ಲಿ ಸಂಶಯವಿಲ್ಲವು.

ಅನರ್ಥಗಳನ್ನು ಕೊಡುವ ಹೊರಗಿನ ವಿಷಯಗಳನ್ನು ಇಂದ್ರಿಯಗಳಿಗೆ ಕೊಡದಿರುವದೆಂಬ ಈ ದಮವು ಯಮಾದಿಗಳಿಂದ ಲಭಿಸುವದು. ಇಂದ್ರಿಯ ನಿಗ್ರಹವೇ ರೂಪಾಗುಳ್ಳ ಆ ದಮಕ್ಕೆ ಬಿಟ್ಟ ವಿಷಯಗಳನ್ನು ಪುನಃ ಸೇರದಿರುವದೇ ಫಲವು. ಪಥ್ಯೆದಿಂದ ಸಿಕ್ಕುವ ಚಿಂತಾಮಣಿ ಮಾತ್ರೆಯ ಗುಣದಂತೆ ಶಮಸುಖವು ದಮದಿಂದಲೇ ದೊರಕುವದು. ವಿಷಯಗಳಲ್ಲಿ ಹೊರಗಿನ ನಾಮರೂಪ ಪೊರೆಯನ್ನು ಬಿಟ್ಟು ಸತ್ತಿನಲ್ಲಿಯೇ ಇಂದ್ರಿಯಗಳನ್ನು ನಿಲ್ಲಿಸಿ, ಪುನಃ ಆ ಸತ್ತಿನಿಂದಲೇ ಹೊರಗೆ ಎಳೆಯುವದು ಹೀಗೆ ಮಾಡುವದರಿಂದ ಹುಟ್ಟುಬಂದ ಸ್ವಭಾವವು ಇಂದ್ರಿಯಗಳನ್ನು ಬಿಟ್ಟು ಹೋಗುವದು. ವಿಷಯಕರ್ಮಗಳನ್ನು ಬಿಟ್ಟಿರುವ ಉಪರತಿಯನ್ನೂ, ಬಂದ ದುಃಖಗಳನ್ನೆಲ್ಲ ಸಹಿಸುವ ಅಥವಾ ವಿಷಯವಾಸನೆಗಳನ್ನೆಲ್ಲ ಕಡೆಗೊತ್ತುವ ತಿತಿಕ್ಷೆಯನ್ನೂ, ಶ್ರದ್ಧೆ, ಚಿತ್ತ ಸಮಾಧಾನಗಳನ್ನೂ ಹೀಗೆಯೇ ಮನಗಾಣಬೇಕು. ಬಲ್ಲ ತತ್ತ್ವಜ್ಞರು – ದಮ ಉಪರತಿ ತಿತಿಷೆ ಶ್ರದ್ಧೆ ಸಮಾಧಾನಗಳನ್ನು ಶಮಪುರುಷನಿಗೆ ಅವಯವಗಳೆನ್ನುವರು. ಈ ಬಗೆಯ ಶಮಿಗೆ ಮುಕ್ತಿಯು ಸ್ವಯಂ ಸಿದ್ಧವು. ಜಗತ್ತಿನ ಭೋಗವಿಕಾರಗಳು ಅವನಿಗೆ ಸೋಕುವದಕ್ಕಿಲ್ಲವು. ಶಮಿಯು – ಪೂರ್ಣ ರಾಜ್ಯಾಂಗವುಳ್ಳ ಅರಸನಂತೆ ಗಳಿತಭಯ ಭೀಮನಾಗುವನು; ಸಂಸಾರ ತಾಪವು ಅವನನ್ನು ಬಿಟ್ಟು ಸಂಪೂರ್ಣ ತೊಲಗುವದು. ಶಮಾದಿಗಳಿಂದ ಕೂಡಿದ ಮನಸ್ಸೊಂದೇ ಬೇಕಾದುದನ್ನೆಲ್ಲವನ್ನೂ ಮುಮುಕ್ಷುವಿಗೆ ಒದಗಿಸಿ ಕೊಡುವದು. ಧಣಿಗೆ ಸೇವಕನಂತೆ ನೆನೆದುದನ್ನೆಲ್ಲ ತನಗೆ ಮಾಡಿಕೊಡುವದು; ರಾಜನಿಗೆ ಮಂತ್ರಿಯಂತೆ ಗುಣಾಗುಣಗಳನ್ನು ತರ್ಕಿಸಿ ಕೊಡುವದು; ರಾಜನಿಗೆ ಸಾಮಂತಿಕ ರಾಜರಂತೆ ಇಂದ್ರಿಯಗಣವನ್ನೇ ತನಗೆ ತಲೆ ಬಾಗಿಸುವಂತೆ ಮಾಡುವದು; ಶಿಷ್ಯನಿಗೆ ಗುರುವಿನಂತೆ ತನಗೆ ಜ್ಞಾನವನ್ನು ಬೋಧಿಸುವದು; ಗಂಡನಿಗೆ ಸುಖವನ್ನೀವ ಅಂಗನೆಯೆಂತೆ ಇಂಗಿತವನ್ನರಿತು ಸೇವಿಸುವದು; ಮಗನಿಗೆ ತಂದೆಯಂತೆ ತನ್ನನ್ನು ಲಾಲನೆಯಿಂದ ಪೊರೆಯುವದು; ನಿರ್ವಂಚನೆಯಿಂದ ಅರ್ಥಗೂಡಿಸುವ ಸನ್ಮಿತ್ರನಂತೆ ತನಗೆ ಇಹಪರ ಸುಖಸಾಧನವಾದ ಮಂಗಲ ಸ್ನೇಹವನ್ನೂ ಕೊಡುವದು. ಬೆಟ್ಟದ ಬಂಡೆಯ ಕಲ್ಲುಗಳು ತಮ್ಮ ಪದರಗಳಲ್ಲಿ ಒಂದಕ್ಕೊಂದು ಸಂದುಬಿಟ್ಟು ಶೀಳಾಗಬೇಕಾದರೆ ವಜ್ರದಿಂದಲ್ಲದೆ, ಕಲ್ಲುಳಿಯ ಪೆಟ್ಟಿನಿಂದಾಗುವದಕ್ಕಿಲ್ಲದಂತೆ ಕಾಮಾದಿಗಳ ಉಪಟಳವು ಶಮಾದಿಗಳಿಂದಲ್ಲದೆ, ಬರಿಯ ವೈರಾಗ್ಯದಿಂದ ಶಾಂತ

ವಾಗುವದಿಲ್ಲ. ಶರೀರಕ್ಕೆ ಅಂಗಿಯಂತೆಯೂ, ಕಣ್ಣಿಗೆ ಯವೆಯಂತೆಯೂ, ಕತ್ತಿಗೆ ವರೆಯೆಂತೆಯೂ, ವೀಣೆಗೆ ಗವಸಣಿಗೆಯೆಂತೆಯೂ, ಕವಿಯುವ ದೋಷಗಳಿಂದ ಚಿತ್ತ ವನ್ನು ರಕ್ಷಿಸುವಲ್ಲಿಯೂ ಈ ಶಮಾದಿಗಳು ಜ್ಞಾನಕ್ಕಾಗಿ ಮುಮುಕ್ಷುವಿಗೆ ಅವಶ್ಯವು.

ವಿವೇಕದಿಂದ ಅರಿವುದಲೆದೋರಿತು, ವೈರಾಗ್ಯದಿಂದ ದುರಿತವರ್ಗಕ್ಷಯವು, ಶಮಾದಿಗಳಿಂದ ಚಿತ್ತನಿರ್ಮಲವು ಆಗಿರುವಾಗ ಮೋಕ್ಷೇಚ್ಛೆಯೇಕೆ? ಎಂದರೆ ಹಾಗಿಲ್ಲ, ಕಾಯಿಸದ ಚಿನ್ನ ಬೆಸಿಯುವದಕ್ಕಿಲ್ಲದಿರುವಂತೆ; ಬೆಂದು ಸೊಗಡುಬಿಡದಿರುವ ಸಾರಿಗೆ ಒಗ್ಗರಣೆ ಹತ್ತುವದಕ್ಕಿಲ್ಲದಿರುವಂತೆ; ರೂಪು ಬಲ ಯೌವನ ಸೌಂದರ್ಯ ಐಶ್ವರ್ಯ ಗಳಿಂದಲೂ ಸ್ತ್ರೀ ಪುತ್ರಾನ್ನಗಳ ಆಡಂಬರದಿಂದಲೂ ಬೆರತಿರುವ ಚಿತ್ತಕ್ಕೆ ಭೋಗ ಕಾಂಕ್ಷೆಗಳೇ ಬಿಡದೆ ಒತ್ತರಿಸುವವು. ಪುಣ್ಯಹೀನನಿಗೆ ಪಾಪಯೋನಿಗಳು ತಪ್ಪುವ ದಾದರೆ, ಸಂಸಾರದಲ್ಲಿ ನೋಯದವನಿಗೂ ಅಷ್ಟಮದಗಳು ಕೆಡಬಹುದು. ಭೋಗ ಬಯಸಿದ ದೇವತೆಗಳೂ ಕಷ್ಟಪಟ್ಟಿರುವರಾದ್ದರಿಂದ ಹಾಗಿಲ್ಲ. ನುರಿತ ಬುದ್ಧಿವಂತರಲ್ಲಿ ವಿವೇಕ ವಿನಯಗಳು, ಬರುವ ರೋಗಾದಿಗಳಲ್ಲಿ ಜನರಿಗೆ ವೈರಾಗ್ಯವೂ, ಕರ್ಮಾಂಗ ಸಂನ್ಯಾಸ ಮಾಡಿದವರಲ್ಲಿ ಶಮ ದಮಾದಿಗಳು ಕಂಡರೂ ಮೋಕ್ಷವನ್ನು ಕುರಿತಿರುವ ದಿಲ್ಲ. ಬೆಂಕಿಯೊಳಗೆ ಸಿಕ್ಕಿಬಿದ್ದವನು ಚಟ್ಟನೆ ಹೊರಗೆದ್ದುಬರುವಂತೆ, ಭವದ ತಾಪ ದಲ್ಲಿಯೂ ಕಷ್ಟಗಳನ್ನು ಅನುಭವಿಸಿ ಸಾಕಾಗಿ, ಹೊರಗೆದ್ದು ಓಡುತ್ತಿರುವ ಮನುಷ್ಯ ನನ್ನು ಕಂಡ ಮೋಕ್ಷಾಂಗನೆಯು – ತಾನಾಗಿ ಬಂದು ಸತ್ಕರಿಸಿ, ತಕ್ಕೈಸುವಳು! ದುಃಖನಾಶ ಸುಖಪ್ರಾಪ್ತಿಗಳನ್ನು ಬಯಸದ ಜನರೇ ಜಗತ್ತಿನಲ್ಲಿರುವದಿಲ್ಲ. ಆದರು ತತ್ತ್ವಕ್ಕಾಗಿ ಹಂಬಲಿಸುವವರು ಕಾಣುವದು ಕಷ್ಟ! ಕೆಲವರು ಮುಕ್ತಿಯನ್ನು ಬಯಸಿದರೂ ಅದು ಜ್ಞಾನದಿಂದಾಗುವ ಕೈವಲ್ಯವನ್ನು ಕುರಿತಿರುವದಿಲ್ಲ. ವಿಷಯ ಗಳಲ್ಲಿಯೇ ನಿಂತು. ಭೋಗಗಳಲ್ಲಿಯೇ ದುರಂಧರತೆಯನ್ನು ವಹಿಸಿರುವ ಚಿತ್ತವನ್ನೇ ತಮಗೆ ಬಂಧವಾಗುಳ್ಳ ಆ ಜನರು ಕುರುಡರಂತೆ ಆತ್ಮಾನಾತ್ಮಗಳು ಬೇರ್ಬೇರೆ ಎಂಬ ತಿಳಿವಳಿಕೆಯ ಗಂಧವೂ ಇಲ್ಲದಿರುವರು! ಆತ್ಮನನ್ನು ಧರಿಸಿದ್ದರೂ ಆ ಹೊಲೆಯರಿಗೆ ಮೋಕ್ಷೇಚ್ಛೆಯುಂಟಾಗುವದಕ್ಕಿರುವದಿಲ್ಲ. ಠಕ್ಕು ಠೌಳಿಗಳಿಗೆ ಬೆರಗಾಗುವ ಈ ಲೋಕವು – ತತ್ತ್ವವೆಂದರೆ ಬೆದರುವದು! ತತ್ತ್ವಕ್ಕಾಗಿಯೇ ಒಲಿದು ನಿಂತ ರುಚಿಯೆ ಮೋಕ್ಷೇಚ್ಛೆಯು. ಆದ್ದರಿಂದ ಸಾಧನ ಸಂಪನ್ನನಿಗೇ ಕೈವಲ್ಯವಲ್ಲದೆ, ಮತ್ತೊಬ್ಬನಿಗಿಲ್ಲ.

೧೨. **ಅನುಬಂಧ ಚತುಷ್ಟಯ ನಿರ್ಣಯ** :—(೩–೫೨) ಮೇಲಿನ ಅಧಿ ಕಾರಿಗೆ ಲಭಿಸುವ ಜೀವಬ್ರಹ್ಮೈಕ್ಯವೇ ಇಲ್ಲಿನ ವಿಷಯವು. ಬಿಸಿಲಿನ ತಾಪಕ್ಕೆ ಪೂರ್ಣಚಂದ್ರನಂತೆ ಸಂಸಾರ ಹೃತ್ತಾಪವನ್ನು ಹೋಗಲಾಡಿಸುವಲ್ಲಿ ಸಾಧುಗಳೇ ಭೂಚಂದ್ರರು. ಸಂಸಾರವ್ಯಾಧಿಗೆ ಸಾಧುಸಂಗವೇ ಪೂರ್ಣ ಫಲಕಾರಿಯಾದ ಚಿಕಿತ್ಸೆಯು. ಅವರ ಬೋಧಾಮೃತವನ್ನು ಸೇವಿಸುವವರೇ ಅಮರರು. ಕತ್ತಲೆಗೆ ಸೂರ್ಯನಂತೆ ನರರ ಬಂಧಕ್ಕೆ ಸಜ್ಜನವರರ ದರ್ಶನವೇ ಕಡೆಗಾಲವಲ್ಲವೆ ಬೇರೊಂದಲ್ಲ. ಅವರ ಸಮಾಗಮದಲ್ಲಿ–ಮರಣವೇ ಉತ್ಸವವು, ಹುಟ್ಟುಬಂದ ತನ್ನ ದಾರಿದ್ರ್ಯವೇ ಧನ ತುಂಬಿದ ಭಂಡಾರವು. ವಿಪತ್ತುಗಳೇ ಸಂಪತ್ಪರಂಪರೆಯ ಸಾಲುಗಳು ಆಗಿಬಿಡುವದು.

ಪರರ ತಾಪಕ್ಕೆ ನೀರಾಗಿ ಕರಗುವ ಸತ್ಪುರುಷರ ಹೃದಯಕ್ಕೆ ಬೆಣ್ಣೆಯನ್ನು ಹೋಲಿಸುವದು ಹೇಗೆ? ಸತ್ಸಂಗವೆಂದರೆ ಸಂಸಾರ ದಾಟಿಸುವ ಹಡಗು. ದಾನಾಧ್ವರ ತಪಸ್ಸುಗಳು ಮುಮುಕ್ಷುಗಳಿಗಾಶ್ರಯವಾಗಲಾರವು. ಸಜ್ಜನರು-ಗಲಿತ ಹೃದಯಗ್ರಂಥಿಗಳು, ನಿರ್ಮಲರು, ಮೂರು ಗಳಿಗೆಯ ಈ ಸಂಸಾರದಲ್ಲಿ ಸಂಪಾದಿಸಲ್ತಕ್ಕದ್ದು ಸತ್ಸಂಗವೊಂದೇ ಎರಡನೆಯದಿರುವದಿಲ್ಲವು. ಜಗತ್ತಿನ ಜೀವರಿಗೆ ಸಜ್ಜನರ ಪಾದರಜವನ್ನು ಬಿಟ್ಟರೆ ಜನನಮರಣಗಳನ್ನು ದಾಟುವದಕ್ಕೆ ಗತ್ಯಂತರವೇ ಇರುವದಿಲ್ಲ. ಮದ ಮೋಹ ಮಾನಗಳೆಂಬ ಕಲ್ಲುಬಂಡೆಗಳನ್ನು ನಡುವಿಗೆ ಬಿಗಿದುಕೊಂಡು ಯಾರೊಬ್ಬರೂ ಸಂಸಾರ ದಾಟುವದಕ್ಕಿಲ್ಲ. ಕ್ಷಣಮಾತ್ರದ ಸಜ್ಜನರ ಸಂಗದಿಂದ ಸಿಗುವ ತತ್ತ್ವಮಾರ್ಗದ ಮಹಾಲಾಭವು, ನೂರಾರು ವರುಷಗಳ ತನ್ನ ಸ್ವಂತ ಅಭ್ಯಾಸವೂ ತನಗೆ ದೊರಕಿಸಿ ಕೊಡಲಾರದು. ಆದ್ದರಿಂದ ಜೀವನಕೊಟ್ಟು ಸಜ್ಜನರನ್ನು ಕಾಪಾಡಬೇಕು. ತಿರಸ್ಕಾರವೇ ಅವರ ಕೊಲೆಯು. ದುರ್ವಿಷಯಗಳಲ್ಲಿ ನುರಿತ ಈ ಜನರ ದುಷ್ಟಚಿತ್ತಕ್ಕೆ ಉಪಕರಿಸುವ ಅವರ ಸಂಗವು ಈ ನರಜನ್ಮಕ್ಕೇ ಜೀವನಪ್ರಾಯವು! ಚಿತ್ತಕ್ಕೇ ಸದ್ಗುಣ ಭಾವನವು. ಇವರು ಮಾಡುವ ಜ್ಞಾನಿಯ ದೇಹ ರಕ್ಷಣೆಯ ಕಾಲವು ನೂರು ವರುಷ ಮಾತ್ರದ್ದೆಂದು ಅಲ್ಪವಾಗಿದ್ದರೂ ಅದು ಬ್ರಹ್ಮನ ಕಲ್ಪದವರೆಗೂ ಬ್ರಹ್ಮಸ್ವರೂಪನಾದ ಆ ಜ್ಞಾನಿಯಲ್ಲಿದ್ದು ಇವರಿಗೆ ಅಕ್ಷಯ ಫಲವನ್ನು ಕೊಡುತ್ತಿರುತ್ತದೆ. ಇಂಥ ಲಾಭಗೊಳ್ಳದ ಮನುಷ್ಯಹೀನನಿಗೆ ಏನಿದ್ದರೇನು? ಅವನು ಸುರನರ ಭುಜಂಗರಲ್ಲೊಬ್ಬನಲ್ಲ. ಪುಣ್ಯ ನದೀನದಗಳು ತೀರ್ಥ ಸರಸ್ಸುಗಳು ದೇವಮೂರ್ತಿಗಳು - ಭಾವನೆಯಿಂದ ಪಾಪಹಾರಕವಾಗುವವು; ಈ ಜ್ಞಾನಿಗಳು ಸಂಚರಿಸುವ ಜಂಗಮತೀರ್ಥ ದೇವತೆಗಳಂತೆ ನೆಲದ ಮೇಲೆ ತಾವು ಓಡಾಡುತ್ತ, ಜೀವರಚಿತ್ತ ವಿಕಾರಗಳನ್ನೆಲ್ಲ ಕತ್ತರಿಸುತ್ತ, ಆ ಚಿತ್ತದಲ್ಲಿ ಆತ್ಮನಿಷ್ಠೆಯನ್ನು ಸ್ಥಾಪಿಸುವ ಆ ಪೂಜ್ಯರನ್ನು ಏನೆಂದು ಹೇಳಬೇಕು? ಅವರ ಆಗಮನಕ್ಕಿಂತ ಕುಶಲವಾಗಲಿ, ಹೆಚ್ಚಿನ ಶುಭಕಾಲವಾಗಲಿ ಈ ಜೀವರಿಗೆ ಮತ್ತೊಂದಿರುವದಿಲ್ಲ. ರಾಗದ್ವೇಷಗಳ ಮತ್ತು ಕಾಮಾದಿ ಅರಿಗಳ ದೆಶೆಯಿಂದ ಚಿತ್ತದಲ್ಲಿ ತಲ್ಲಣಗೊಳ್ಳದಿರುವದೇ ಬಲ್ಲವರ ಗುರ್ತು! ಕಾಮವು - ನಲಕೂಬರ ಮಣಿಗ್ರೀವರನ್ನೂ, ಕ್ರೋಧವು - ರಾವಣಾದಿ ದೈತ್ಯರನ್ನೂ, ದುರ್ಲೋಭವು-ಕೌರವಾದಿ ಉನ್ಮತ್ತ ರಾಜರನ್ನೂ, ಮೋಹವು - ಇಂದ್ರಾದಿ ದೇವತೆಗಳನ್ನೂ, ಮದವು - ದಕ್ಷಪ್ರಜಾಪತಿಯನ್ನೂ. ಮತ್ಸರದ ಬಸುರ ಬೇಗೆಯು - ದೇವಾಸುರರನ್ನೂ ಹಾಳುಮಾಡಿ, ಹದಗೆಡಿಸಿತು? ಬಿಚ್ಚಿದೆಯ ಎದೆಗೆಚ್ಚಿನಿಂದೆಸಗುವ ಈ ಖುಲ್ಲಕಾಮಾದಿಗಳ ಕೈಚಮತ್ಕಾರಗಳಿಂದ ಬೇಗುದಿಗೊಳ್ಳದೆ ಅವರಿಗೆ ಎದುರುನಿಲ್ಲಲು ಲೋಕತ್ರಯದಲ್ಲಿಯೂ ಒಬ್ಬರಿಲ್ಲ. ಜೀವರಿಗೆಲ್ಲ ಪರಮಶತೃಗಳಾಗಿದ್ದರೂ ಈ ಕಾಮಾದಿಗಳು ತಮ್ಮ ಒಳಹುಗೊಡದೆ ಹಿತಶತೃಗಳಾಗಿರುವರು. ಮನಸ್ಸನ್ನು ಹೊಕ್ಕು ಅವರೆಸಗುತ್ತಿರುವದನ್ನೆಲ್ಲ ಪಾಪ! ಬಡಪಾಯಿಗಳಾದ ಈ ಜನರು ತಾವೇ ಮಾಡುತ್ತಿರುವಂತೆ ಬಗೆಯುತ್ತ ಕಷ್ಟಕ್ಕೀಡಾಗುತ್ತಿರುವರು. ಪರಮ ಉತ್ಸಾಹದಿಂದ ವೈರಾಗ್ಯವೆಂಬ ಅಶ್ವವನ್ನೇರಿ, ವಿವೇಕವೆಂಬ ವಜ್ರಕವಚಾವರಿತನಾಗಿ, ಗುರೂಪದೇಶ ಕತ್ತಿಯಿಂದ ಈ ಅಂತಶ್ಶತೃ

ಗಳನ್ನು ವಿಭಾಡಿಪ ನರನು ಪುರಹರನು! ಅವನು ಸಾಕ್ಷಾತ್ಪರಮಶಿವನೇ ಆಗಿದ್ದರೂ ಪಾಮರರಿಗೆ ಹಾಗಂತ ತೋರಿಕೊಳ್ಳುವದಿಲ್ಲ. ಅಂಥ ಸತ್ಪುರುಷರು – ಬ್ರಹ್ಮದಲ್ಲಿ ನಿಂತ ಸಮಚಿತ್ತರು, ಅಭೋಗಲಂಪಟರು, ಏಷಣಾತ್ರಯದೂರರು, ಪ್ರಶಾಂತ ಹೃದಯರು, ಶಿವಪದಜ್ಞರು, ಬಯಕೆಗಳನ್ನೆಲ್ಲ ದೂರಬಿಟ್ಟವರು, ಬಂದ ಇಷ್ಟಾನಿಷ್ಟಗಳಲ್ಲಿ ಭವಣಿಗೊಳ್ಳರು, ತಮ್ಮ ಕಾಲವನ್ನೆಲ್ಲ ತತ್ತ್ವವಿಚಾರದಿಂದಲೇ ಕಳಿಯತಕ್ಕವರು, ಕರ್ಮಗಳನ್ನು ಮಾಡುತ್ತಿದ್ದರೂ ಫಲಗಳನ್ನು ಬಿಟ್ಟಿರುವ ಕಡು ಧೀರರು, ಸದಾ ಸಂತೋಷಚಿತ್ತರು, ಪರಮಸಾಧುಗಳು; ಅವರ ಅನುಗ್ರಹವೆನ್ನನುಗ್ರಹ; ಅವರ ಸಂಗವೆನ್ನಸಂಗ, ಅವರ ಸಂತೋಷ ನನ್ನ ಸಂತೋಷ; ಅವರ ದರ್ಶನವೇ ಭವಸಾಗರವನ್ನು ದಾಟಿಸುವ ಸರಿಯಾದ ದೋಣಿಯೆಂದು ಶಿವನು ಗೌರಿಗೆ ಹೇಳಿರುವನು.

(೫೩–೯೯) ಆತ್ಮನು ಭೇದ್ಯನಲ್ಲವೆಂಬುದೇ ಅಹಿಂಸೆಯು; ಎಲ್ಲದರಲ್ಲಿರುವ ಬ್ರಹ್ಮವೊಂದೇ ನಿತ್ಯವೆಂಬುದು ಸತ್ಯವು; ಅನಾತ್ಮನಾದ ಈ ಶರೀರೇಂದ್ರಿಯ ಸಂಘಾತದಲ್ಲಿ 'ನಾನು' ಎಂಬ ಮಿಥ್ಯಾಮತಿಯನ್ನು ಬಿಟ್ಟಗಲುವದೇ ಅಸ್ತೇಯವು; ಮನಸ್ಸನ್ನು ಸತ್ಯಕ್ಕೂ ಸತ್ಯವಾಗಿರುವ ಬ್ರಹ್ಮದಲ್ಲಿ ನೆಲೆ ನಿಲ್ಲಿಸುವದೇ ಬ್ರಹ್ಮಚರ್ಯವು; ಎಲ್ಲರನ್ನು ತನ್ನಂತೆ ನೋಡುತ್ತಿರುವದೇ ದಯೆಯು; ತನ್ನವರಲ್ಲಿಯೂ ಹೊರಗಿನವರಲ್ಲಿಯೂ ಸಮವರ್ತನೆಯೇ ಆರ್ಜವವು; ಅನ್ಯರು ಕೊಡುವ ಕಷ್ಟಗಳಿಂದ ಭಿನ್ನಿಸದ ಮತಿಯೇ ಕ್ಷಮೆಯು; ಬ್ರಹ್ಮವೇ ತಾನೆಂದು ಮೇರುವಿನಂತೆ ನಿಶ್ಚಲಗೊಂಡ ಸ್ಥಿತಿಯೇ ಧೃತಿಯು; ಮೃತ್ಯುವನ್ನು ಉಪ್ಪಿನ ಕಾಯಾಗುಳ್ಳ ಬ್ರಹ್ಮವು ನಾನೆನ್ನುವದೇ ಮಿತಾಹಾರವು; ದೇಹಾದಿ ಅನಾತ್ಮಗಳ ಸೋಂಕಿಲ್ಲದ ಪರಮಾರ್ಥ ಸತ್ಯಸ್ವರೂಪನಾದ ತನ್ನಲ್ಲಿ ಅನಾತ್ಮವೆಂಬ ಮಲವು ಎಂದಿಗೂ ಸೇರುವದಕ್ಕಿಲ್ಲ ಎಂಬುದೇ ನಿತ್ಯಶೌಚವು; ಇನ್ನು ನಾನು – ಯಾರು, ಸಂಸಾರ ಹೊಂದಿರುವ ಬಗೆ ಹೇಗೆ? ಇದನ್ನು ದಾಟುವದೆಂತು? ಎಂದು ತನ್ನಲ್ಲಿ ವಿಚಾರಿಸುತ್ತಿರುವದೇ ತಪವು; ಬ್ರಹ್ಮಾದಿ ಲೋಕಗಳಲ್ಲಿ ಆಸಕ್ತಿಯನ್ನು ಬಿಟ್ಟಿರುವ ತನಗೆ ಎಲ್ಲಾ ಕಡೆಯಿಂದಲೂ ಪರಮಾತ್ಮನಲ್ಲಿ ಸಂಜನಿಸಿದ ಪ್ರೀತಿಯೇ ಸಂತೋಷವು; ಗುರುಶಾಸ್ತ್ರಗಳಲ್ಲಿ ನಂಬಿಕೆಯೇ ಆಸ್ತಿಕ್ಯವು; ಸಾಧನ ಸಂಪನ್ನನಾದ ಅಧಿಕಾರಿಗೆ ವಿದ್ಯೆಯನ್ನು ಪ್ರೀತಿಯಿಂದ ಕೊಡುವದೇ ದಾನವು; ಮಿಕ್ಕ ದಾನಗಳು – ಕರ್ತೃ ಭೋಕ್ತೃಗಳ ರಾಶಿಯಲ್ಲಿ ವಿಕಾರರೂಪ ತನ್ನ ಭೋಗಪರಿಪಾಕವನ್ನು ಹೊಂದುತ್ತಿರುವ ಫಲವಿಶೇಷಗಳಿಗಲ್ಲದೆ, ನಿರ್ವಿಕಾರ ಆತ್ಮಸ್ವರೂಪವಲ್ಲಿ ತನ್ನನು ನೆಲೆ ನಿಲ್ಲಿಸುವ ನಿತ್ಯಫಲಕ್ಕಿರುವದಿಲ್ಲ. ವಿದ್ಯಾದಾನ ಮಾತ್ರ ಹಾಗಲ್ಲವು. ವಿದ್ಯಾದಾನದ ಫಲವು ಜ್ಞಾನವೇ. ಅದು ತನ್ನ ಸ್ವರೂಪವೇ ಆಗಿರುವದು. ನಿತ್ಯ ನಿರ್ವಿಕಾರವಾದ ಆತ್ಮನಿಷ್ಠೆಯೆಂಬ ಫಲವನ್ನು ಕೊಟ್ಟು ಮನುಷ್ಯನನ್ನು ಮುಕ್ತಿಭಾಜನನನ್ನಾಗಿ ಮಾಡುವ ತನಗೆ ಸಮನಿಲ್ಲದ ಬ್ರಹ್ಮ ವಿದ್ಯಾದಾನದ ಫಲವು ತ್ರಿಮೂರ್ತಿಗಳಿಗೂ ಬಣ್ಣಿಸುವದಕ್ಕಿರುವದಿಲ್ಲ. ಜೀವರ ಹಿಂಸೆಯನ್ನಾಗಲಿ ಕಾಮದ ಉರಿಯನ್ನಾಗಲಿ ಮರವೆ ಸಂಶಯಗಳನ್ನಾಗಲಿ ಇಲ್ಲದಿರುವ ಪ್ರಶಾಂತ ಮನಸ್ಸಿನ ಸ್ಥಿತಿಯೇ ಮಹೇಶ್ವರ ಪೂಜೆಯು; ಹೀಗೆ, ಅಥವಾ ಹೀಗಲ್ಲವೆಂದು ನಾಲಿಗೆಯಿಂದ ಹೇಳುವದಕ್ಕಿಲ್ಲದ,

ತನ್ನಲ್ಲೆಂದಿಗೂ ಅನಾತ್ಮಗಳ ವಿಕಾರ ಸೋಕುವದಕ್ಕಿಲ್ಲದ, ಚಲನಾದಿಗಳಿಲ್ಲದ ಪ್ರತ್ಯಗಾತ್ಮನೇ ವೇದಾಂತಗಳ ಪರಮತಾತ್ಪರ್ಯವೆಂಬ ನಿಶ್ಚಯವೇ ಶ್ರವಣವು; ಯೋಗ್ಯರಿಗೆ ಸಲ್ಲದ ಖುಲ್ಲರ ನಡತೆಯಲ್ಲಿ ನಾಚಿಕೆಯೇ ಮಹಾ ಲಜ್ಜೆಯು; ಪಾಷಂಡರನ್ನು ಅಲ್ಲಗಳೆದಿರುವ ವೈದಿಕರಲ್ಲಿ ವಿಶ್ವಾಸಾತಿಶಯವೇ ಮತಿಯು; ತನ್ನಲ್ಲಿ ಪರಿಪೂರ್ಣತ್ವ ಭಾವವೇ ಜಪವು; ಅವಿದ್ಯಾಕಲ್ಪಿತ ಮಾಯೆಯೊಳಗಿನ ಜಡಚೇತನವೆಲ್ಲದರ ಅತಿ ಮಿಥ್ಯಾತ್ವ ನಿಶ್ಚಯವೆಂಬ ಭಸ್ಮಧಾರಣೆಯೇ ವ್ರತವು; ಇದಕ್ಕಿ ತರವೆಲ್ಲವೂ ಸೂತನು ಲೋಕವಂಚನೆಯೆಂದಿರುವನು. ಸಿದ್ಧಪದ್ಮಾದಿ ಆಸನಗಳು ಸರಿಹೊಂದುವದಕ್ಕಿಲ್ಲದ ಜ್ಞಾನಿಗೆ ಸರ್ವಜಗತ್ತಿನಲ್ಲಿಯೂ ಉದಾಸೀನತ್ವವೇ ನಿತ್ಯಾಸನವು; ಅಸುರರ ಕೃತ್ಯವಾದ ಅಸುನಿರೋಧವು ಸಲ್ಲದ ಅವನಿಗೆ ಹುಸಿತೋರಿಕೆಯ ಜಗತ್ತಿನ ದೃಶ್ಯಗಳಲ್ಲಿ ಅಸತ್ಯವೆಂಬ ಮನಸ್ಸೇ ಪ್ರಾಣಾಯಾಮವು; ತನಗೂ ತಿಳಿಯದಂತೆ ತಂತಮ್ಮ ವಿಷಯಗಳಲ್ಲಿ ಹೋಗುತ್ತಿರುವ ಇಂದ್ರಿಯಗಳನ್ನು ಬಿಗಿಹಿಡಿದು ನಿಗ್ರಹಿಸುವದೇ ಪ್ರತ್ಯಾಹಾರವು; ಹೊರಗಿನ ವಿಷಯಗಳಲ್ಲಿ ಸಾರವಾದ ಜಗತ್ತಿನ ತತ್ತ್ವಾಗತಿಯೆಂಬಿದು ಧೀರಸಮ್ಮತ ಪ್ರತ್ಯಾಹಾರವು; ಒಳಹೊರಗುಗಳಲ್ಲಿ ಏನೇನು ತೋರುತ್ತಿರುವದೊ ಆ ದೃಶ್ಯಗಳ ವಿಕಾರಗಳೊಂದೂ ತನ್ನಲ್ಲಿ ಹೊಂದದಿರುವ ನಿರ್ವಿಕಾರಪರವಸ್ತುವೇ ನಾನು, ಉಳಿದ – ನರಸುರೋರಗಯಕ್ಷ ರಾಕ್ಷಸ ಕಿನ್ನರಾದಿಗಳಲ್ಲಿ ಒಂದೂ ನಾನಲ್ಲ, ಎಂಬುದೇ ಧಾರಣೆಯು; ಪರಬ್ರಹ್ಮವು ತಾನೆಂಬುದೇ ಧ್ಯಾನವು; ಈ ಜಗತ್ತಿನ ದೃಶ್ಯಗಳಲ್ಲಿ ತನ್ನ ಮನಸ್ಸು ಏನನ್ನೂ ಸೋಕದಿರುವದೇ ಸಮಾಧಿಯು; 'ನಾನು ಸಂಸಾರಿ ಎಂದಾಗಲಿ, ಸುರನರೋರಗರಲ್ಲಿ ಒಬ್ಬನೆಂದಾಗಲಿ – ಎಂದಿಗೂ ತನ್ನಲ್ಲಿ ಚರಿಸದಾಶಯ'ವೇ ಜ್ಞಾನಿಗಳ ಸಮಾಧಿಯು; ಬಲ್ಲವರಲ್ಲಿ ಬಲ್ಲಿದರಾದ ಇವರ ಸಂಗವಿದ್ದಲ್ಲಿಯೇ ಕೈವಲ್ಯ ಸಿದ್ಧಿಸುವದೆಂಬುದಕ್ಕೆರಡಿಲ್ಲ. ಪ್ರಾಪ್ತಾಪ್ರಾಪ್ತಗಳಲ್ಲಿ ಇಚ್ಛಾನಿಚ್ಛೆಗಳಿಲ್ಲದ ಸಂತೋಷ ಚಿತ್ತರೇ ಗುರುಗಳು; ತನ್ನ ಬ್ರಹ್ಮಾತ್ಮಭಾವವನ್ನು ಅವರಿಂದ ಅರಿಯಬೇಕು. ವೈಯಕ್ತಿಕವಲ್ಲದ ಇದು ಎಲ್ಲರಿಗೂ ಅನುಭವಕ್ಕೆ ಹೊಂದುವಂಥದ್ದು. ಈ ನಿಖಿಲ ಪ್ರಪಂಚದಲ್ಲಿದ್ದರೂ ಅದರ ವಿಕಾರಗಳಿಲ್ಲದ್ದು, ಪ್ರಿಯಾಪ್ರಿಯಗಳ ಹೊಡೆತವಿಲ್ಲದ್ದು, ನಾಶವಿಲ್ಲದ್ದು, ಶರೀರೇಂದ್ರಿಯಗಳ ದೋಷಗಳಿಲ್ಲದ್ದು, ಸರ್ವರ ಆತ್ಮನಾಗಿರುವ ಆ ಸಚ್ಚಿತ್ಸುಖ ಸ್ವರೂಪವಾದ ಬ್ರಹ್ಮವೇ 'ನಾನು' ಎಂಬುವ ತನ್ನನ್ನು ಪರಮನಲ್ಲೈಕ್ಯವೊಂದಲ್ಲದೆ, ಈ ನರಜನ್ಮದಲ್ಲಿ ಮತ್ತೊಂದು ಪಡಿಯತಕ್ಕದ್ದಿರುವದಿಲ್ಲ. ಇದು ಎರಡಿದ್ದು ಒಂದಾಗುವ ಐಕ್ಯವಲ್ಲ. ಎರಡೆಂಬುದು ಔಪಾಧಿಕವಷ್ಟೆ? ವಸ್ತುವು ಕೇವಲಾನಂದಘನ ಮಾತ್ರವು, ಇದೇ ವಿಷಯವು. ಇದಕ್ಕೂ ಈ ಗ್ರಂಥಕ್ಕೂ ಪ್ರತಿಪಾದ್ಯ ಪ್ರತಿಪಾದಕ ಭಾವಾದಿ ಸಂಬಂಧಗಳೇ ಮೂರನೆಯ ಅನುಬಂಧವು. ಇನ್ನು ಆತ್ಯಂತಿಕ ಅನರ್ಥ ನಿವೃತ್ತಿ ಪರಮಾನಂದ ಪ್ರಾಪ್ತಿಯೆಂಬುದೇ ಪ್ರಯೋಜನವು. 'ಇದೆಲ್ಲ ಆತ್ಮನೆ' ಎಂಬ ನಿಶ್ಚಯದಿಂದ ಸರ್ವಾತ್ಮೈಕ್ಯವನ್ನು ಮನಗಂಡ ನರನು ಸಂಸಾರಮೋಹವಾಗಲಿ, ಜನನಮರಣಗಳ ಭಯವಾಗಲಿ ಪುನಃ ಹೊಂದುವಂತಿಲ್ಲ. ಭೋಗ ಭೋಗ್ಯ ಭೋಕ್ತೃತ್ವಗಳು ಆಧ್ಯಾಸಿಕವೆಂಬುದನ್ನು ಮನ

ಗಂಡ ಧೀರನು! ಅವುಗಳಲ್ಲಿ ಪುನಃ ಲಿಪ್ತನಾಗಲಿ ಆರ್ತನಾಗಲಿ ಎಂದಿಗೂ ಆಗುವ ದಿಲ್ಲ. '**ದೇಹೇಂದ್ರಿಯ ಅನಾತ್ಮಗಳಲ್ಲಿ ನಾನೆಂಬ ಅನಾತ್ಮಮತಿಯಾದ ಮಿಥ್ಯಾಮತಿಯು**' ತನ್ನನ್ನು ಬಿಟ್ಟು ತೊಲಗಲು, ಸಂಸಾರಕ್ಕೆ ನೆಲೆಯಿರುವದಿಲ್ಲವು. ಸಂಸಾರ ಬೀಜಗಳಾದ ಕರ್ತೃತ್ವಾದಿಗಳು ಬಾಧಿತವಾಗಿ ಹೋಗುವವು. ಅವುಗಳಲ್ಲಿ ಸಿಕ್ಕಿಬಿದ್ದವನಿಗೆ ಮುಂದಿನ ಶುಭಾಶುಭ ದೇಹಗಳು ಅನಿವಾರ್ಯವು. ಒಂಟಿಗನಾಗಿ ಸಂಚರಿಸುತ್ತ ಆಕಾಶದಂತೆ ನಿರ್ವಿಕಾರನಾಗಿರುವ ನಿತ್ಯ ಶುದ್ಧಬುದ್ಧ ಜ್ಞಾನಿಗೆ ಆಕರ ಕರೆಯಾಗಲಿ, ಶೋಕಮೋಹಗಳಾಗಲಿ ಎಂದಿಗೂ ಆಗುವದಕ್ಕಿಲ್ಲ. ಆತ್ಮಸತ್ತೆಯಿಂದಲೇ ತೋರುತ್ತಿರುವ ಜಗತ್ತೆಲ್ಲವೂ ಬ್ರಹ್ಮಮಯವಾಗಿ ತೋರುತ್ತಿರುವದು. ಕಾರ್ಯವೆಂಬು ದೆಲ್ಲ ತನ್ನಕಾರಣಕ್ಕಿಂತ ವ್ಯತಿರಿಕ್ತವಿರುವದೇ ಇಲ್ಲ. ಕಾರ್ಯದ ಜ್ಞಾನವೆಲ್ಲವೂ ವಿಚಾರಿ ಸಿದರೆ ತನ್ನ ಕಾರಣದ ಜ್ಞಾನವೇ ಆಗಿರುವದು. ಅದರಂತೆಯೇ ಕಾರ್ಯವಾದ ಜಗ ತ್ತಾಗಲಿ, ಅದರ ಜ್ಞಾನವಾಗಲಿ ಬ್ರಹ್ಮವೆಂಬ ತನ್ನ ಕಾರಣಕ್ಕಿಂತ ಬೇರೆಯಿರುವದಿಲ್ಲ. ಮೃಲ್ಲೋಹ ಸುವರ್ಣಗಳ ಕಾರ್ಯಗಳೂ ಅವುಗಳ ಜ್ಞಾನಗಳೂ ಮೃಲ್ಲೋಹಾದಿ ಗಳನ್ನು ಬಿಟ್ಟು ಬೇರೆಯಿಲ್ಲದಿರುವಂತೆ; ಬ್ರಹ್ಮಕಾರ್ಯವಾದ ಜಗತ್ತೂ ಬ್ರಹ್ಮಕ್ಕೆ ಬೇರೆಯಿರುವದಿಲ್ಲ. ಬ್ರಹ್ಮಾನಂದವನ್ನು ಹೊಂದಿದ ದೇವಪ್ರಿಯನು ಪುನಃ ಭಯವನ್ನು ಹೊಂದನು. ಇದೆಲ್ಲ ಮಿಥ್ಯೆಯು, ತುಚ್ಛವು, ಸದಾವಮಾನಿತವು, ಬುದ್ಧಿಹೇಯವು; ಎಂದಿಗೂ ನಿಲ್ಲುವ ಗಟ್ಟಿಯು ಬ್ರಹ್ಮವೊಂದೇ ಎಂಬುದು ಶಾಸ್ತ್ರಾನುಭವಗಮ್ಯವು. ಆದ್ದರಿಂದ ತನ್ನಾತ್ಮನು ಸದಾನಂದನು, ನಿರಸ್ತಾಖಿಲಭೇದನು ಎಂದು ತನ್ನಲ್ಲೇ ನೆಲೆನಿಂತ ಜ್ಞಾನಿಯು ನುತಿಗೆ ಯೋಗ್ಯನಾದ ಪರಮಶಿವನೇ! ಬೇರಲ್ಲ. ನಾಶೋ ದಯವಿಲ್ಲದ ಚಿದಖಂಡನು, ಪೂರ್ಣತೃಪ್ತನು, ಸ್ಥಿಮಿತಚಿತ್ತನು ಆದ ಜ್ಞಾನಿಗೆ ಭೋಗೇಚ್ಛೆಯು ತನ್ನ ಹತ್ತಿರ ಸುಳಿಯುವದಕ್ಕೂ ಇಲ್ಲ. ಅಲ್ಲದೆ, ಶಾಸ್ತ್ರೀಯ ಕ್ರಿಯೆ ಗಳಾದರೂ ತನ್ನ ಫಲದಲ್ಲಿ ಅಜ್ಞರನ್ನು ಬಿಗಿದುಕಟ್ಟುವಂತೆ; ಅವು ಜ್ಞಾನಿಯನ್ನಾಗಲಿ ತತ್ತ್ವಜಿಜ್ಞಾಸುವನ್ನಾಗಲಿ ಹಿಡಿದು ಸಂಸಾರದಲ್ಲಿ ಬಂಧಿಸುವದಿಲ್ಲವು. '**ಆತ್ಮಾನಾತ್ಮ ಗಳನ್ನು ಒಂದರಲ್ಲೊಂದು ಕಲೆ ಬೆರಕೆಮಾಡುವದು ಜೀವರಿಗೆಲ್ಲ ತನಗೆ ತಾನೇ ಬಂದಿರುತ್ತದೆ. ಇದು ತೊಲಗಿದರೆ ಸರ್ವಾನರ್ಥನಿವೃತ್ತಿ ಮತ್ತು ಸುಖಾವಾಪ್ತಿಯು ತನಗೆತಾನೇ ಸಿದ್ಧಿಸುವದು. ಈ ಉಪನಿಷತ್ಸಾರ ಸಿದ್ಧಾಂತ**'ವನ್ನು ಬಲ್ಲವರು–ನಂಬಿ ಮನನಮಾಡಿದರೆ, ಅನುಭವ ಹೊಂದಿದ ನಿರ್ಮಲಾ ರಾಗುವರಲ್ಲದೆ, ಸಂಸಾರಬಂಧವನ್ನು ದಾಟಿದ ಜೀವನ್ಮುಕ್ತರೂ ಆಗಿಬಿಡುವರು.

೧೩. **ತತ್ತ್ವವಿಚಾರ ನಿರ್ಣಯ**:—(೨–೧೧) ಆತ್ಮಜ್ಞಾನವು ವಿಚಾರ ವೊಂದರಿಂದಲೇ ತನಗೆ ಕರತಲಾಮಲಕದಂತೆ ಸಿದ್ಧಿಸುವದು. ಅದಕ್ಕೆ ಅವಿಚಾರ ಕ್ಕಿಂತ ಹೆಚ್ಚಿನ ಅಡ್ಡಿಗಳಿರುವದೇ ಇಲ್ಲ. ಆತ್ಮನನ್ನು ತೋರಿಸಿಕೊಡುವ ವಿಚಾರ ನೇತ್ರ ಕ್ಕಿರುವ ಬಲವನ್ನು ಕುರಿತು ಬಣ್ಣಿಸುವದಕ್ಕೆ ಯಾರಿಗೂ ಶಕ್ಯವಿರುವದಿಲ್ಲ. ಅದು – ಕತ್ತಲೆಯಲ್ಲಿ ಕೆಡುವದಿಲ್ಲ, ಬೆಳಕಿನಲ್ಲಿ ಅಡಗುವದಲ್ಲ, ಎಷ್ಟು ನೋಡಿದರೂ ಕ್ಷೀಣಿಸುವ ಬಲವಲ್ಲ, ಅದಕ್ಕೊಂದು ತಡೆಯಿಲ್ಲ ಮರೆಯಿಲ್ಲ. ಸಮುದ್ರಕ್ಕಿಂತಲೂ ಗಂಭೀರವು,

ಮೇರುವಿಗಿಂತಲೂ ನಿಶ್ಚಲವು, ಚಂದ್ರನಿಗಿಂತಲೂ ಶೀತಲವು; ವಿಚಾರಧುರೀಣರಾದ ಸತ್ಪುರುಷರಲ್ಲಿ ಸಿಕ್ಕುವ ಇದಕ್ಕೆ ಮತ್ತೊಂದು ಸಮ ನಿಲ್ಲದಿರುವದು. ನಿತ್ಯತೃಪ್ತಿಯನ್ನು ತಂದುಕೊಡುವ ಈ ವಿಚಾರಕ್ಕಿಂತ ಜಿಜ್ಞಾಸುವಿಗೆ ಮತ್ತೊಂದನ್ನು ಆಶ್ರಯಿಸಬೇಕಿಲ್ಲ. ವಿಚಾರ ವಿರಕ್ತಿಗಳೆರಡೂ ಬೀಜಾಂಕುರಗಳಂತೆ ಒಂದರಿಂದೊಂದು ತನ್ಮೊಳಗೆ ಬೇರೂರಿ ಕೊಳ್ಳುತ್ತಿರುವವು. ಮೇಘ ಶರಧಿಗಳಂತೆ ಒಂದರಿಂದೊಂದು ವೃದ್ಧಿಗೊಳ್ಳುತ್ತಿರುವವು. ಈ ಶರೀರವು ಹುಟ್ಟುವದಕ್ಕೆ ಕಾರಣವೇನು? ಅದರಲ್ಲಿ ನಾನೆಂಬ ಅಭಿಮಾನವು ತಲೆ ಹಾಕಿದ್ದು ಹೇಗೆ? ನಾನು ಎಂಬುದರ ನಿಜವೇನು? ಎಂಬುದೇ ವಿಚಾರವು; ಸತ್ಸಂಗವು ಅಧ್ಯಾತ್ಮ ಶಾಸ್ತ್ರವು ವೈರಾಗ್ಯವು ಜಿತಲಾಲಸವು ಈ ವಿಚಾರಕ್ಕೆ ಅಂಗೋಪಾಂಗಗಳು; ತನ್ನ ನಿಜವೇನೆಂಬುದನ್ನೇ ಮನಸ್ಸಿನಲ್ಲಿ ಯಾವಾಗಲೂ ಹೊರಳಾಡಿಸುತ್ತಿರುವದು, ಭೋಗ ತೃಷ್ಣೆಗಳನ್ನು ಮಥಿಸಿ ಹುಟ್ಟಡಗಿಸುತ್ತಿರುವದು – ತತ್ತ್ವವನ್ನು ತೋರಿಸುವ ವಿಚಾರಕ್ಕೆ ಇದೆಲ್ಲ ಸಹಾಯವು; ಜೀವನ್ಮುಕ್ತಿಯೇ ಫಲವು; ದೇಹಾತ್ಮಭಾವನೆಯೆಂತೆ ತನ್ನಲ್ಲೂರಿದ ಬ್ರಹ್ಮಾತ್ಮಭಾವವೆ ಅವಧಿಯು; ಗುರುಹಿರಿಯರಿಂದ ಬಂದಿರುವ ಸದಾ ಚಾರ, ಬಂಧುಸಮ್ಮತಿ, ಧಾರ್ಮಿಕ ಜೀವನ ಜೀವನವೃತ್ತಿಯಿಂದ ಸಂಪಾದಿಸಿದ ಧನ ದಿಂದ ಗುರುಗಳನ್ನು ಸಂಪಾದಿಸಿ, ತನ್ನ ತನುಮನ ಧನಗಳಿಂದಲೂ ಸೇವಿಸಿ, ಜಿಜ್ಞಾಸುವು ಅವರನ್ನು ಪ್ರಸನ್ನಪಡಿಸಿಕೊಳ್ಳಬೇಕು. ಸೇವೆ. ಅವರ ಸಮಾಗಮಗಳಿಂದ ಭೋಗೇಚ್ಛೆಗಳೆಂಬ ಹೃದಯದ ಕೊಳೆಯನ್ನೆಲ್ಲವನ್ನೂ ಚೆನ್ನಾಗಿ ತೊಳೆದುಕೊಳ್ಳ ಬೇಕು. ಆಗ ಸುವಿಚಾರ ಬೆಳುದಿಂಗಳು ತನ್ನ ಶುದ್ಧಹೃದಯದಾಕಾಶದಲ್ಲಿ ತುಂಬಿ ಕೊಳ್ಳುವದು. ಬ್ರಹ್ಮಾತ್ಮಭಾವವು, ತೃಪ್ತಿದಶಾಪಟುತ್ವವು ಮೇರುವಿನಂತೆ ಆಗ ತನ್ನಲ್ಲಿ ಕಾಲೂರಿ ನಿಲ್ಲುವದೇ ಪರಮಪದವು; ಬೇರೊಂದಿರುವದಿಲ್ಲವು. ಈ ಕ್ರಮದಿಂದಲೇ ಮುಮುಕ್ಷುಗಳು – ತತ್ತ್ವವಿಚಾರ, ಆತ್ಮಜ್ಞಾನ, ನಿರಂಕುಶತೃಪ್ತಿ. ಜ್ಞಾನ ಸಮಕಾಲಿನ ವಾದ ಸದ್ಯೋಮುಕ್ತಿ ಇವುಗಳನ್ನು ಸಂಪಾದಿಸಬೇಕೆಂಬುದೇ ಇಲ್ಲಿನ ಆಶಯ.

(೧೨-೪೮) ಭುವನಮಯನು ತಾನಲ್ಲದಿದ್ದರೂ ಶರೀರದಲ್ಲಿ ನಾನೆಂಬ ಭ್ರಾಂತಿ ಯೆಲ್ಲರಿಗೂ ಇರುವದು, ಇದು ಸರಿಯಲ್ಲ: ಜಡವಾದ ಈ ಶರೀರಕ್ಕೆ ಋತುಕಾಲ ಸಂಬಂಧವಾದ ರಕ್ತದ ಹೊದ್ದಿಕೆಯುಳ್ಳ ಒಂದು ಹನಿ ಶುಕ್ಲವೇ ಬೀಜವಾಗಿರುವದು. ಸ್ತ್ರೀಯರ ಗರ್ಭದಲ್ಲಿ ಅನ್ನಾಹಾರಗಳ ಬೆಂಬಲವನ್ನು ಪಡೆದು. ಕಾಲಕ್ರಮದಿಂದ ಸಪ್ತ ಧಾತುಗಳ ವಿಕಾರವಾಗಿ ಅಲ್ಲಿ ಬೆಳೆದಿರುವದು. ಈ ದೇಹವು ತನ್ನಲ್ಲಿ ಬರಿಯ ಗಾಳಿ ತುಂಬಿ ಆಕಾಶ ಬುಟ್ಟಿಯೆಂತೆ ಸಂಚರಿಸುವ ನಿಸ್ಸಾರದ ಒಂದು ಯಂತ್ರ! ಹಿಂದು ಮುಂದಿನ ಕಾಲಗಳಲ್ಲಿಲ್ಲದ್ದು ಈ ಕಾಲದಲ್ಲಾದರೂ ನೆಲೆ ನಿಲ್ಲುವದಲ್ಲ. ಹುಟ್ಟು ಹೊಂದುಗಳ ವಿಕಾರಗಳನ್ನು ಹೊದ್ದಿರುವದು. ಅದು – ವರ್ಣಾಶ್ರಮ ಕರ್ಮಗಳ ನೆಂಟು; ತಾಪತ್ರಯಗಳೆಂಬ ಕೋಟಲೆಗಳ ಬಲವಾದ ಅಂಟು; ಮಲ ಮೂತ್ರ ಕೀವು ರಕ್ತ ಮುಂತಾದ ಕೊಚ್ಚೆಯ ಹಳೆಯ ದುರ್ನಾತದ ಬಚ್ಚಲು; ಭಯಗಳಿಗೆಲ್ಲ ನೆಲ ಮನೆ; ಶಿಶು ಬಾಲ್ಯ ಕೌಮಾರ ಪೌಗಂಡ ಕಿಶೋರ ಪ್ರಾಯ ಮುಪ್ಪು ಸಾವು ಎಂಬ ಅವಸ್ಥೆಗಳ ಸುತ್ತುವಳಯವುಳ್ಳದ್ದು; ಈ ಶರೀರೇಂದ್ರಿಯಗಳ ಸಂಘಾತವೆಂಬುದೊಂದು

ಸೋರೆಬುರುಡೆ! ಅದು ತನಗೆ ತಡೆಗಟ್ಟುವದಕ್ಕಿಲ್ಲದ ಜಗತ್ತಿನ ಕಾಮುಭೋಗ ರತಿ ವಿಲಾಸ ಮತ್ತು ರೋಗರುಜಿನಗಳ ಶರಧಿಯಲ್ಲಿ ಅನವರತವೂ ತಿರುಗುತ್ತಿರುವದು. ಸಂದು ತಪ್ಪಿದ ನೌಕೆಯಂತೆ ಬಾರಿಬಾರಿಗೂ ಅದರಲ್ಲಿ ತೇಲಾಡುತ್ತ ಆಟವಾಡುತ್ತಿರುವದು. ಉಪನಿಷತ್ತುಗಳು ಹೇಳುತ್ತಿರುವ ಸರ್ವಸುಖ ಶರಣವಾದ ತನ್ನ ಪರಮಾರ್ಥ ಸ್ವರೂಪಕ್ಕೆ ಹುಳು ಸಾಮಾನ್ಯದ ಈ ಲಕ್ಷಣವನ್ನು ಹೊಂದಿಸುವದಕ್ಕಿಲ್ಲವಾದ್ದರಿಂದ ಈ ತುಚ್ಛ ಶರೀರವೆಂದಿಗೂ ಆತ್ಮನಲ್ಲ. ಶಬ್ದಾದಿ ವಿಷಯಗಳಂತೆ ಅವುಗಳನ್ನು ಗ್ರಹಿಸುವ ಜ್ಞಾನೇಂದ್ರಿಯಗಳೂ, ಬಹು ರೂಪಾಗಿರುವ ಪ್ರಾಣವಾಯುಗಳೂ ಅಲ್ಲ. ನಿತ್ಯನಿರ್ಮಲನೂ ನಿಷ್ಕ್ರಿಯನೂ, ನಿಸ್ಸಂಗನೂ ಆದ ಆ ತನ್ನಾತ್ಮನು ಕರ್ಮೇಂದ್ರಿಯಗಳಂತು ಅಲ್ಲವೇ ಅಲ್ಲ. ವೃತ್ತಿಗಳಿಂದ ನಾಲ್ಕಾಗಿರುವ ಅಂತಃಕರಣವೂ ಅಲ್ಲ. ಆತ್ಮನನ್ನು ತಿಳಿದುಕೊಳ್ಳುವದಕ್ಕೆ ದ್ವಾರದಂತಿರುವ ಈ ಅಂತಃಕರಣದಲ್ಲಿಯೇ ಎಲ್ಲಾ ವಾದಿಗಳೂ ಆತ್ಮಭ್ರಾಂತಿಯನ್ನು ಹೊಂದಿರುತ್ತಾರೆ. ಆತ್ಮನಂತೆ ತೋರಿ ಎಲ್ಲರಿಗೂ ಮೋಹಪಡಿಸುತ್ತ, ಆತ್ಮನ ಸಾನ್ನಿಧ್ಯವನ್ನು ಹೊಂದಿರುವ ಈ ಬಳಿ – ಅಧ್ಯಾಸದಿಂದಲೇ ಜೀವರಿಗೆಲ್ಲ ಸಂಸಾರ ಪ್ರಾಪ್ತನಾಗಿರುತ್ತದೆ. ಜ್ಞಾನ ಬರುವವರೆಗೂ ಅಳಿಯುವದಕ್ಕಿಲ್ಲದ ಇದು ಕಾಯಿಸಿದ ಕಬ್ಬಿಣದ ಗುಂಡಿನಂತೆ ಆತ್ಮನನ್ನು ಪಡೆದುಕೊಂಡಿರುವ ಈ ಅಂತಃಕರಣವೇ ಅನವರತವೂ ಸಾವಿರಾರು ಶರೀರಗಳನ್ನು ಧರಿಸುತ್ತಲೂ, ಕರ್ಮಗಳನ್ನು ಮಾಡುತ್ತಲೂ, ಅವುಗಳ ಫಲಗಳನ್ನು ಅನುಭವಿಸುತ್ತಲೂ ವಿವೇಕಶೂನ್ಯವಾಗುತ್ತಿರುವದು! ಅಲ್ಲದೆ, ಒಮ್ಮೆ ಸುರನಾಗಿ ಮತ್ತೊಮ್ಮೆ ನರನಾಗಿ, ಒಮ್ಮೆ ದಿವಿಯಲ್ಲಿ ಮತ್ತೊಮ್ಮೆ ಭುವಿಯಲ್ಲಿ ಚಿತ್ರಶರೀರಗಳನ್ನು ಧರಿಸುತ್ತಲೂ, ತರುಪಾಷಾಣಾದಿಗಳಿಂದ ತನ್ನನ್ನು ರೂಪಿಸಿಕೊಳ್ಳಲೂ ಸಂಸಾರದಲ್ಲಿ ಬೇಗುದಿಗೊಳ್ಳುತ್ತಿರುವದು. ಕನವರಿಕೆಯಂತೆ ಅರ್ಥಲಾಭದಲ್ಲಿ ಸೊಕ್ಕುತ್ತಲಿರುವದು, ಪುಣ್ಯಬಲದಿಂದ ಮಿಕ್ಕೆಲ್ಲರಿಗೆ– ನಾನೇ ಶರಣ್ಯನೆಂದೂ, ವಿದ್ಯೆಯಿಂದ ಗಣ್ಯನೆಂದೂ, ತಪಸ್ಸಿನಿಂದ ಪೂಜ್ಯನೆಂದೂ, ಸ್ವಾಮಿತ್ವದಿಂದ ಸೇವ್ಯನೆಂದೂ ಗರಿಷ್ಠನೆಂದೂ ಈ ಅಂತಃಕರಣ ತನ್ನೊಳಗೆ ಉಬ್ಬಿ ಮೆರೆಯುವದು! ದೇವತೆಗಳನ್ನಾಶ್ರಯಿಸಿ ಮತ್ತೊಮ್ಮೆ– ನಾನು ದಾಸನೆಂದೂ, ನೀಚನೆಂದೂ, ಕಷ್ಟಿಯೆಂದೂ, ಅನಾಥನೆಂದೂ ನಾಯಿ ಹಂದಿ ನರಿ ಕಾಗೆ ಗೂಗೆ ರಾಸಭಗಳಲ್ಲೊಂದೆಂದೂ ಬಗೆಯುತ್ತ ತನ್ನನ್ನು ರಕ್ಷಿಸಬೇಕೆಂದು ಅವರನ್ನು ಮೊರೆ ಹೋಗುತ್ತಿರುವದು. ಜಗತ್ತಿನ ಭೋಗಗಳನ್ನೆಲ್ಲ ಉಣ್ಣಬೇಕೆಂಬ ಅಭಿಮಾನ ಇದ ಕ್ಕೊತ್ತರಿಸಲು – ಹುಚ್ಚನಂತೆ ವರ್ತಿಸುವದಕ್ಕೆ ಮೊದಲುಮಾಡುವದು. ಮಮತೆಯೆಂಬ ಉರಿಗಣ್ಣಿಯಿಂದ ಬಿಗಿವಡೆದು ವಿವೇಕಗಂಧವಿಲ್ಲದಂತೆ ಮಾಸಿರುವ ಇದು ಮನಬುದ್ಧಿಯೆಂದು ಪುನಃ ಇಬ್ಬಗೆಯನ್ನು ತಳೆದುಕೊಂಡಿರುವದು. ಮನಸ್ಸು– ಜ್ಞಾನೇಂದ್ರಿಯ ಕರ್ಮೇಂದ್ರಿಯಗಳನ್ನು ಸಹಕರಿಸುತ್ತಿರುವದು. ಜನನಮರಣಗಳ ಸಾಲುಗಳಿಂದಲೂ ಮೋಹಮಲದಿಂದಲೂ ಈ ಮನಸ್ಸು ಕೂಡಿ ಇಚ್ಛೆಯೆಂಬ ಬೆಂಕಿಯಿಂದ ದಗ್ಧಗೊಂಡಿರುವ ಸಂಕಲ್ಪಾತ್ಮಕವಾಗಿರುವದು. ನದಿಗಳೆಲ್ಲ ಸಮುದ್ರವನ್ನು ಹೊಕ್ಕಂತೆ ನಿಖಿಲಾರ್ಥಗಳೂ ಈ ಮನಸ್ಸಿನಲ್ಲಿ ಸಂಗಮವಾಗುತ್ತಿರುವವು. ಜಗತ್ತಿ

ಸುಖಸಾಧನಗಳನ್ನೆಲ್ಲ ಪಡೆದರು ಇದಕ್ಕೆ ತೃಪ್ತಿಯಿರುವದಿಲ್ಲ. ವಿಷಯಗಳ ಬೆಂಗಾಡಿನಲ್ಲಿ ಇನ್ನಿಲ್ಲವೆಂಬಂತೆ ಅಲೆದಲೆದು ನೊಂದು ಸಾಕಾಗಿದ್ದರೂ ವಿಶ್ರಮಿಸಲು ಬಯಸುವದಿಲ್ಲ. ಈ ಸಂಸಾರ ನದಿಯ – ಜನನಮರಣ ಸುಳಿಗಳಲ್ಲಿ ಇನ್ನಿಲ್ಲವೆಂಬಷ್ಟು ಕಷ್ಟಪಡುತ್ತಿದ್ದರೂ ಅಲ್ಲಿ ಕೂಡಿ ಅಗಲುವ ಬಂಧು ಮಿತ್ರರಲ್ಲಿ ಕಲೆತು ಹಲವುಬಾರಿ ಕಣ್ಣೀರಿಡುತ್ತ ದುಃಖಿಸಿ, ಅವುಗಳನ್ನೇ ಪುನಃ ಬಯಸುತ್ತ ದುಃಖವನ್ನೇ ಕೊಂಡುಕೊಳ್ಳಲೂ ಪ್ರಯತ್ನಮಾಡುತ್ತಿರುವದಲ್ಲದೆ, ತನ್ನ ತಲೆ ಬಾಗುತ್ತಿಲ್ಲ. ಈ ಚಿತ್ತವು – ಬೇಸರಿಲ್ಲದೆ ಮಾಡಿದ ಕರ್ಮವಾಸನೆಗಳ ಸಿವುಡೋ! ಬಂದು ಒಕ್ಕಡೆ ಕೂಡಿರುವ ಪಾಪಗಳೋ, ಪುಣ್ಯ ರಾಶಿಯೋ! ಭಯಂಕರ ನರಕವೋ! ತ್ರಿದಶಾಲಯವೋ! ಅಥವಾ ಪಾಮರರ ಸ್ನೇಹದ ನೀಚ ಸಂಸ್ಕಾರಗಳ ಒಟ್ಟಿನ ರೂಪವೋ! ಪಂಡಿತರ ಉಪಾಸ್ಯವೋ! ತಿಳಿಯುವದು ಕಡು ಕಷ್ಟ! ತನ್ನ ಕರ್ಮಾನುಗುಣವಾಗಿ ಬರುವ – ಶರೀರಗಳು, ಭೋಗ್ಯ ವಿಶೇಷಗಳು, ಬಂಧು ಮಿತ್ರ ಬಳಗಗಳು ಈ ಎಲ್ಲಕ್ಕೂ ಸರಿಹೊಂದುವ ನಡೆ ನುಡಿ ವರ್ತನಗಳನ್ನು ತನಗೆ ಸರಿಹೊಂದಿಸಿಕೊಳ್ಳುತ್ತಿರುವ ಈ ಚಿತ್ತವೆಂಬುದೇ ಚೆಂಬೊನ್ನು. ವಿಷಯಗಳ ಮೊತ್ತವೇ ಕರುವು, ಅವುಗಳ ನೆನಪೇ ಬೆಂಕಿಯು, ಅದನ್ನು ಮೋಹದಿಂದ ಎರೆಯಲು – ಆ ವಿಷಯಗಳ ರೂಪನ್ನು ಹೊಂದದೇ ಬೇರೊಂದಾಕೃತಿಯಾಗುವದಕ್ಕಿರುವದಿಲ್ಲವಷ್ಟೆ? ಆದ್ದರಿಂದ ಇದೆಲ್ಲವೂ ಚಿತ್ತವನ್ನು ಬಿಟ್ಟು ಬೇರೆಯಿರುವದಕ್ಕಿಲ್ಲವು. ಹೀಗೆಯೇ ಈ ಚಿತ್ತಕರ್ಮಗಳೂ ಫಲಕುಸುಮಗಳಂತೆ. ಒಂದಕ್ಕೊನ್ನೊಂದು ಬೇರೆ ನಿಲ್ಲುವದಕ್ಕಿರುವದಿಲ್ಲವಾದ್ದರಿಂದ ಅವುಗಳನ್ನು ಬೆಂಕಿ ಬಿಸಿಗಳಂತೆ ಒಂದರಿಂದೊಂದು ಬೇರೆಮಾಡಿ ಕಾಣುವದಕ್ಕೂ ಬರುವಂತಿಲ್ಲ. ಈ ಸಂಸಾರವೆಂಬುದು ಮನಸ್ಸೇ; ಕಲುಷಮಯವಾದ ಈ ಮನವೆಂಬುದೇ ಭವವು; ಕಾಮವು ಮನಸ್ಸನ್ನು ಬಿಟ್ಟು ಬೇರೆಯಿಲ್ಲವು; ಕಾಮವೆಂಬ ನೀರನ್ನು ಜಗತ್ತಿನ ಜೀವರು ಹಾಯಿಸುತ್ತಿರುವದರಿಂದಲೇ ಸಂಸಾರ ವಿಷವೃಕ್ಷವು ದೃಢಮೂಲವಾಗಿ ತನ್ನಲ್ಲಿ ಚಿಗುರುತ್ತಿರುವದು; ಈ ಜೀವರಿಗೆ 'ಆತ್ಮಾರಾಮನು ಕಾಮನಾ ಫಲಭೋಕ್ತೃ'ವೆಂಬ ಜ್ಞಾನದಿಂದಲೇ ಸಂಸಾರ ಮಹಾರೋಗವು ಬಂದಿದ್ದರೂ ತನ್ನಾತ್ಮನು ಮಾತ್ರ ನಿರ್ವಿಕಾರ ಸುಖಸ್ವರೂಪನೇ; ಸೃಷ್ಟಿ ಸ್ಥಿತಿ ಲಯಗಳು ಈ ಮನಸ್ಸಿಗಿಂತ ಬೇರೆಯಿರುವದಿಲ್ಲ. ಜಗತ್ತೆಂಬುದು ಎಳ್ಳಿನ ರಾಶಿಯು; ತೈಲವೇ ಈ ಮನಸ್ಸು; ಶುದ್ಧವಾದ ಮನಸ್ಸೆಂಬುದೇ ಪುನಃ ಎಳ್ಳಿನ ರಾಶಿಯು; ಅದರಲ್ಲಿ ವಿಚಾರವೆಂಬ ಕಡೆತದ ಗಾಣದಿಂದ ಹೊರಗೆದ್ದು ಬರುವ ಶುದ್ಧಾತ್ಮನ ಅನುಭವವೆಂಬುದೇ ತೈಲವು, ತಿಳಿನೀರಿನಲ್ಲಿ ಸೂರ್ಯನಂತೆ ಶುದ್ಧ ಮನಸ್ಸಿನಲ್ಲಿಯೇ ಆತ್ಮನನ್ನು ಕಾಣಬೇಕು. ಶುದ್ಧಾಶುದ್ಧ ಭಾವಗಳು ಆತ್ಮನಲ್ಲಿಲ್ಲದಿದ್ದರೂ ಮನಸ್ಸಿನಲ್ಲಿ ಕಾಣಬರುವವು; ಚಿತ್ತಿನ ಸಹಾಯವುಳ್ಳ ಮನಸ್ಸೇ ಜಗತ್ಸಮೂಹಕ್ಕೆ ಕರ್ತೃವು; ಕಾಮಾದಿ ದೋಷಗಳಿಂದ ಉಬ್ಬಿದ ಮನಸ್ಸು ವಿಪತ್ಪರಂಪರೆಗಳಿಗೆ ವಡಲಾಗಿ ಹಾ! ಎಂದು ತನ್ನೊಳಗೆ ನೋಯುತ್ತಿರುವದು; ಈ ವಿಧಿಕೋಶವು ಮನೋಮಾತ್ರವು; ಶರಧಿಯಲ್ಲಿ ಅಲೆ ನೊರೆಗುಳ್ಳೆಗಳಂತೆ ಈ ಮನಸ್ಸು ತನ್ನಲ್ಲಿ ಹುಟ್ಟಿ ಮೈಗರೆಯುತ್ತಿರುವದು. ಈ ಮನಸ್ಸೇ ಭವಸಿಂಧು; ಬೇರಲ್ಲ. ಕನಸಿನಲ್ಲಿ ಕಾಣುವ–

ನಗರ, ಭೂಪತಿ, ಅವನ ಚತುರ್ಬಲ ಅಲ್ಲದೆ, ನಾನಾ ಬಗೆಯ ಜನರು, ಬೀದಿಗಳು, ಅಂಗಡಿ, ಪೇಟೆಗಳು ಒಂದೂ ಅಲ್ಲಿರುವದಿಲ್ಲ. ಅದೆಲ್ಲವನ್ನು ಕಂಡಂತೆಯು, ಅವುಗಳಲ್ಲಿ ತಾನು ವ್ಯವಹರಿಸಿದಂತೆಯೂ ಬಗೆಬಗೆಯ ಕಣ್ಕಟ್ಟಿನ ಮಾಯೆಯನ್ನು ಕ್ಷಣಮಾತ್ರದಲ್ಲಿ ಈ ಮನಸ್ಸು ಅಲ್ಲಿ ತೋರಿಸುತ್ತಿರುವದು! ಆನೆಯಾಗಿ ಅಟ್ಟುವದು. ಕಣ್ಗೆಟ್ಟು ಭಯ ದಿಂದ ಓಡುತ್ತಿದ್ದರೆ ತನಗೊಂದು ಆಶ್ರಯ ಸಿಕ್ಕದಿರುವಂತೆಯೂ, ಸಿಕ್ಕಿದಂತೆಯೂ, ಅಷ್ಟರಲ್ಲಿಯೇ ಅದು ತನ್ನ ಕೈತಪ್ಪಿದಂತೆಯೂ, ತಾನು ಸತ್ತಂತೆಯೂ, ಅದನ್ನು ತಾನೇ ಕಣ್ಣಾರ ನೋಡುತ್ತಿರುವಂತೆಯೂ ಹೀಗೆ ಅನುವಲ್ಲದ್ದನ್ನೆಲ್ಲ ಸರಿಗಟ್ಟಿ ತೋರಿಸುತ್ತಿರುವ **ಈ ಮನಸ್ಸಿನ ಮಾಟವೇ ಈ ಎಚ್ಚರಾದಿ ಅವಸ್ಥೆಗಳೂ, ಅವುಗಳಲ್ಲಿನ ದೃಶ್ಯ ವಿಶೇಷಗಳೂ ಆಗಿರವದರಿಂದ ಈ ಮನಸ್ಸಿಗಿಂತ ಬೇರೊಂದಿಂದ್ರಜಾಲ ವಿರುವದಿಲ್ಲ.** ಈ ಮನಸ್ಸು–ಸಟೆಗೆ ಮೊದಲನೆಯ ಪಾದ, ಬರುವ ದುಃಖಗಳಿಗೆಲ್ಲ ಇಕ್ಕಿದ ತಾಯ್ಬೇರು, ಮೃತ್ಯುವಿನ ಗುಟುಕು, ವಿಪತ್ತುಗಳಿಗೆಲ್ಲ ಆಗರ, ವಂಚಿಸುವ ಜೂಜುಗಾರರ ಪಟಲವು. ಇದ್ದರೆ ಅದು ದುಃಖಗಳನ್ನೇ ತಂದು ಮೇಲಿಂದ ಮೇಲೆ ಒಡ್ಡುವದು. ಅವುಗಳನ್ನು ಇನ್ನು ಸಾಕೆಂಬಂತೆ ಉಂಡುಂಡು ತಾನು ತಲ್ಲಣಗೊಂಡಿ ದ್ದರೂ ಕ್ಷಣಮಾತ್ರದಲ್ಲಿಯೇ ಅದನ್ನೆಲ್ಲ ಮರೆತು ಹೊಸ ಆಳಿನಂತಾಗುತ್ತಿರುವದು! ಮೂಢರಿಗೆ ಗುರುವು; ಹೆಡ್ಡರನ್ನೆಲ್ಲ ಆಳುವ ಅರಸನು; ಒಬ್ಬನಲ್ಲಾದರೂ ನಿಲ್ಲದ ಕಡುಜಾರೆಯಂತೆ ಅಂಕೆಯಿಲ್ಲದ ಮಿಂಡಿಯು; ತನ್ನಾತ್ಮನನ್ನಪಹರಿಸಿ, ಜನನಮರಣ ಗಳ ಬೇಡಿಗೆ ಸಿಕ್ಕಿಬಿದ್ದಿರುವ ಮಹಾಚೋರನು; ಕಂಡುಬರುವದನ್ನೆಲ್ಲ ತಾನೊಂದೇ ನುಂಗಿಬಿಡಬೇಕೆಂಬ ಹೆಬ್ಬಾವು: ಕಪ್ಪೆಗಳಿಗೆ ಪಂಕಭೂಮಿಯೆಂತೆ, ಕಾಮಾದಿಗಳೆಂಬ ಜಗತ್ತಿನ ತಸ್ಕರರಿರುವ ಗುಪಿತದ ಸ್ಥಳವು; ಈ ಮನಸ್ಸಿಗೆ ಸದ್ಗುಣಯೆಂಬುದೆಳ್ಳಿನಷ್ಟಾ ದರೂ ಇರುವದಿಲ್ಲ. ನೆಲದ ಧೂಳು ಬಿರುಗಾಳಿಗೆದ್ದಂತೆ ರೋಷದಿಂದ ಚಟ್ಟನೇಳುವ ಈ ಮನಸ್ಸಿಗೆ ಏನಾದರೊಂದು ಸೋಕಿದರೆ ಮಿತಿಯಿಲ್ಲದ ಕೋಪ! ವಂಶಾನುಗತವಾಗಿ ಬಂದಿರುವ ಪೂಜ್ಯತೆ, ತನ್ನ ಪುಣ್ಯಫಲವಾದ ಸದ್ಗತಿ ಅಲ್ಲದೆ ತನ್ನ ಪ್ರಾಣವನ್ನಾದರೂ ಕೈಬಿಡಬೇಕಾಗಿ ಬರುವ ಮಹಾಸಂಕಟ ಇವುಗಳು ತನಗೆ ಬೇಕಿಲ್ಲವಾದರೂ ಕೋಪದ ಫಲವಾಗಿ ತಾನು ಅನುಭವಿಸಬೇಕಾಗುವದೆಂಬ ವಿವೇಕವಿಲ್ಲದಷ್ಟು ಅದು ಅವಿವೇಕ ಗಳ ಸಿವುಡಾಗಿರುವದು. ಅಹಂಕಾರ ರೂಪನ್ನು ತಾಳಿದ ಬುದ್ಧಿಯು ಚಿನ್ಮಯವು; ಅಹಂಕಾರವು ಆತ್ಮನನ್ನು ಹಿಡಿದುಕೊಂಡಿರುವದು. ಮರವೆಯ ಕಾರ್ಯವೇ ಲೋಕ ತ್ರಯಗಳು; ಅವುಗಳಲ್ಲಿನ ಸುಖದುಃಖ ಭೋಗಗಳು, ಆ ಭೋಗಕಾಂಕ್ಷೆಗಳು ಮರವೆ ಯನ್ನು ಬಿಟ್ಟಿರುವದಿಲ್ಲ. ಕಾಮಾದಿ ದೋಷಗಳು ಬಂದರೆ ಈ ಬುದ್ಧಿಗೆ ಸಂದೇಹ ವಿಪ ರೀತ – ಜ್ಞಾನಗಳೂ ಬಯಕೆಗಳೂ ಬಂದು ಅವು ಸಂಸಾರದ ಮಹಾತಾಪಕ್ಕೆ ಹೇತು ವಾಗುವವು. ಬ್ರಹ್ಮನ ಕಲ್ಪಗಳೇ ಕಳಿದರೂ ಅಂತವಿಲ್ಲದಷ್ಟು ಅವು ತನ್ನೊಳಗೆ ಬೇರು ಬಿಟ್ಟುಕೊಂಡುಬಿಡುವವು. ಆರ್ಜವವನ್ನೇ ಮುಂದುಮಾಡಿಕೊಂಡಿರುವ ಶಾಂತಿ ದಾಂತ್ಯಾದಿಗಳೆಂಬ ಜ್ಞಾನಸಾಧನಗಳಿಂದಲ್ಲದೆ, ಬೇರೊಂದರಿಂದ ಅವಕ್ಕೆ ಅಂತವಿರು ವದೇ ಇಲ್ಲವು.

ವಿಚಾರನೆಂಬ ಪತಿಯಿಂದ ಮತಿ ಸುಂದರಿಯಲ್ಲಿ ಸದ್ವಿವೇಕನೆಂಬ ಪುತ್ರನು ಅಮೃತ ಫಲಪ್ರದನಾಗಿ ಪುರುಷರಿಗೆ ಜನ್ಮಿಸುವನು. ನಿಶ್ಚಯವಿಲ್ಲದ ಬುದ್ಧಿಗೆ ಪರಿಪರಿಯ ಸಂಕಲ್ಪಗಳಿಂದ ಜ್ಞಾನವು ಕಾಲೂರುವದಕ್ಕಿರುವದಿಲ್ಲ. ತನ್ನ ಸೇರಿದ ದುರಿತ ವಾಸನೆಗಳು ಕೇಡನ್ನೇ ತರುತ್ತಿರುವವು. ಅದಿಲ್ಲದಿದ್ದರೆ ಉತ್ತಮರಿಂದ ಪರಮಾರ್ಥವೇ ತನಗೆ ಲಭಿಸುವದು, ಈ ಬುದ್ಧಿಯ ನಿಜವು ಅಹಂಕಾರವು ; ಆ ಮಹಾಹಂಕಾರ ಎಂಬುದು ಅನಾಮಯವಾದ ಪರಮಾತ್ಮ ಪದವೇ ; ಬೇರೊಂದಲ್ಲವು. ಈ ಎರಡಕ್ಕೂ ಅನುವಲ್ಲದ ಸಂಬಂಧವು ಹೇಗೆ ಬಂತೆಂಬುದನ್ನು **ತಿಳಿಯದಿರುವದೇ ಮರವೆಯು ;** ಬಲ್ಲ ಗುರುಗಳಲ್ಲಿ ಅದನ್ನು ವಿಚಾರಿಸಿ ತಿಳಿದರೆ ಹೃದಯ ಗ್ರಂಥಿಯು ಬಿಚ್ಚಿಕೊಳ್ಳುವದು. 'ನಾನು' 'ಇದು' ಎಂಬ ಆತ್ಮಾನಾತ್ಮಗಳನ್ನು ಬುದ್ಧಿಯಿಂದ ವಿಂಗಡಿಸಿದರೆ ತೇಜಸ್ತಿಮಿರದಂತೆ ಅವುಗಳಿಗೈಕ್ಯವಿಲ್ಲವೆಂದು ಮನದಟ್ಟಾಗುವದು. 'ನಾನು' ಎಂಬುದು ಆಂತರವು, ಗ್ರಹಿಸುವದು, ದ್ರಷ್ಟೃವು ; ಇದು ಎಂಬುದು ಅದಕ್ಕೆ ವಿಪರೀತವು. ಆದ್ದರಿಂದ ಒಂದರಲ್ಲೊಂದು ಸೇರುವದು ಹೊಂದುವದಿಲ್ಲ. 'ಇದು' ಎಂಬ ಅಹಂಕಾರಾದ್ಯನಾತ್ಮಗಳು ಘಟಾದಿಗಳಂತೆ ತನಗೆ ಹೊರಗಾಗಿರುವವು ; 'ನಾನು' ಎಂಬುದು ಎಲ್ಲರಲ್ಲಿಯೂ ಕಡಿವಡಿಯದಂತಿರುವ ಪರಮಾರ್ಥ ತತ್ತ್ವವು ; 'ಇದು' ಎಂಬುದು – ಜಡ ದೃಶ್ಯನಶ್ಯದ ಪ್ರಪಂಚವು ; 'ನಾನು'–ಎಂಬುದು ಚೇತನವು ದೃಕ್ಕು ನಾಶವಿಲ್ಲದ್ದು ; ಸ್ಥೂಲ ಶರೀರದಲ್ಲಿರುವ – ಅಸ್ಥಿ, ಮಾಂಸ. ಮಜ್ಜಾ, ಮೇದಸ್ಸು, ರಕ್ತ, ಶುಕ್ಲಗಳು ಕಿವಿ ಮುಂತಾದ ಜ್ಞಾನೇಂದ್ರಿಯ ನಾಲಿಗೆ ಮುಂತಾದ ಕರ್ಮೇಂದ್ರಿಯಗಳು – ಈ ಅನ್ನವಿಕಾರಗಳಲ್ಲೆಲ್ಲ 'ಇದು ಅಸ್ಥಿ....' ಎಂದು ತನಗೆ ಎದುರಿಟ್ಟಂತೆ ತೋರುವ ಅವುಗಳಲ್ಲಿ 'ನಾನು' ಎಂಬುದು ಹೊಂದುವದಿಲ್ಲ. ಮನೆಯಂತೆ ತನಗೆ ಬೇರಾಗಿರುವ ತನ್ನ ಮನ ಬುದ್ಧ್ಯಾದಿಗಳೂ ತಾನಲ್ಲ. ಹಾಗಾದರೆ 'ನಾನು' ಎಂಬುದಕ್ಕರ್ಥವೇನು ? ಎಂದರೆ 'ತಾನೇ' ಎಂದುತ್ತರ. ಆ 'ನಾನು' ಎಂಬುದು ಜನ್ಮಕ್ಕೇಕೆ ಕಾರಣವಾಯಿತು ? ಎಂದರೆ, **'ತಾನಲ್ಲದ ಶರೀರಾದ್ಯಹಂಕಾರದವರೆಗಿನ ಅನಾತ್ಮಗಳಲ್ಲಿ ನಾನು ಎಂದು'** ತಾನಭಿಮಾನಿಸಿಕೊಂಡದ್ದರಿಂದ ಸಂಸಾರ ನೋವು ಬಂತು. ಇದೆಲ್ಲವೂ – ಹುಟ್ಟಿ ತನ್ನಿಂದಲೇ ಜೀವಿಸಿಕೊಂಡಿರುವದಲ್ಲದೆ, ಬಂದು ತನ್ನಲ್ಲಿಯೇ ಸೇರಿ ಅಡಗುತ್ತಿರುವದಾದ್ದರಿಂದ ಸಕಲಕ್ಕೂ ತಾನೆ ಕಾರಣವೆಂಬುದೇ ಪೂರ್ಣಾಹಂಕಾರವು, ಇದೇ ಗ್ರಾಹ್ಯವು ; ಈ ಜಗವೆಲ್ಲ – ಕುಟೀಲ, ಮಾಯಿಕವು ; ನನಗೂ ಇದಕ್ಕೂ ಒಂದಾಗುವದು ಸರಿಯಲ್ಲ ಎಂಬ ಆತ್ಮಾನಾತ್ಮಗಳ ವಿವೇಕಜ್ಞಾನವೇ ಸಂಸಾರ ನಾಶಕವು. ಶರೀರೇಂದ್ರಿಯ ಸಂಘಾತದಲ್ಲಿ ನಾನೆಂಬ ದುರಹಂಕಾರವು ತುಚ್ಛವು, ವರ್ಜ್ಯವು ; ಅಭಿಮಾನವೇ ಇದಕ್ಕೆ–ಶರೀರ, ಮುಖವೇ ಸ್ಥಾನ, ಹೊರಗಿನ ವಿಷಯಗಳಲ್ಲಿ ಆಸಕ್ತಿಯೇ ಕಳತ್ರ, ಅವುಗಳಲ್ಲೊಂದಾಗಿರುವ ಮತಿಯೇ ಭೋಗ್ಯಗಳು, ಗುಣತ್ರಯವೇ ಭೋಗಸಾಧನಗಳು ; ಇದು ನೆಲೆಗೊಂಡಿರುವವರೆಗೂ ಜೀವರ ಸಂಸಾರಕ್ಕವಧಿಯಿರುವದಿಲ್ಲವೆಂಬುದು ಉಪನಿಷತ್ಸಿದ್ಧಾಂತವು. ಈ ಮಿಥ್ಯಾಭಿಮಾನವನ್ನುಳಿದು, ಮುಕ್ತಿಗಾಗಿ ಮಾಡುವ ಮಿಕ್ಕ ಪ್ರಯತ್ನಗಳು ಹಾವು ಸಾಯಿಸುವದಕ್ಕೆ ಹುತ್ತ ಒಡೆದಂತೆಯೇ.

ಅರೆದು ನೈತ್ತಿದ ಬೇವಿನ ಕಲ್ಕದಿಂದ ಕಾಲಕೂಟ ವಿಷದ ನಂಜೇರಿ ಸತ್ತವನ ದೇಹವು ಬದುಕದಿರುವಂತೆ ದೇಹಾದಿ ಹೊರಗಿನ ದೃಶ್ಯಗಳಲ್ಲಭಿಮಾನಿಸಿರುವ ಅಹಂಕಾರವು 'ನಾನು' ಎಂದು ಬಗೆದು ಅವುಗಳನ್ನು ನುಂಗಿ ತೇಗಿರುವಲ್ಲಿ ಸುರರ ಉಪಾಸನಾದಿಕ್ರಿಯೆಗಳು ತನ್ನ ಸಂಸಾರಹಾರಕವಾಗುತ್ತಿದ್ದರೆ ಇದಕ್ಕಿಂತ ಆಶ್ಚರ್ಯವಿರುವದಿಲ್ಲ! ಆತ್ಮಾನಾತ್ಮಗಳ ಜ್ಞಾನದಿಂದ ತಾನು ದೃಙ್ಮಾತ್ರನಾಗಿ ನಿಲ್ಲುವ ಪೂರ್ಣಾಹಂಕಾರವೊಂದೇ ಜನನಮರಣಗಳ ಸಾಲಿನ ಬಳ್ಳಿಗಳಿಗೆ ಕುಡುಗೋಲು. ದೇಹೇಂದ್ರಿಯಃಗಳಲ್ಲಿ ನಾನೆಂಬುದನ್ನು ಬಾಧಿಸಿಕೊಂಡು ನಿರ್ವಿಶೇಷ ಸುಖಸ್ವರೂಪದಿಂದ ಹಿಗ್ಗಿದ ಅಹಂಕಾರವು ಆ ಸುಖದಲ್ಲೊಂದಾಗಿ ಮುಳುಗಿದಲ್ಲದೆ, ಈ ಭವಸಿಂಧುವಿನ ಜನನಮರಣಗಳ ದುಃಖ ಪರಂಪರೆಯಡಗುವದಕ್ಕಿರುವದಿಲ್ಲವು. ನಿರ್ವಿಕಲ್ಪಾತ್ಮಾಂಬರದಲ್ಲಿ ಅಹಂಕಾರ ಮೋಡ ಕಂಡರೂ ಆ ಅನಾತ್ಮ ಸೋಂಕಿಲ್ಲದಾತ್ಮನಿಗೆ ಅದು ಮುಟ್ಟಲ್ಲ. ತಾನು – ಅನಂತನು, ಮನಸ್ಸಿಲ್ಲದವನು ; ಪರಮಾರ್ಥ ಸತ್ಯಸ್ವರೂಪನು ; ಹೀಗಲ್ಲದ್ದೇ ಅಹಂಕಾರ. ಹೀಗೆ ಆತ್ಮಾನಾತ್ಮಗಳನ್ನು ಒಂದರಿಂದೊಂದು ವಿವೇಕಿಸಿ, ಅಹಂಕಾರ ಸೋಂಕಿಲ್ಲದ ತಾನು – ಚಿನ್ಮಾತ್ರನೆಂಬನುಭವ ಬರಲು ಕೃತಕೃತ್ಯನು.

ಜಗತ್ಕಾರಣ ಪ್ರಕೃತಿಯೇ ಮಾಯೆಯು; ಇದು ಅವಿದ್ಯಾಪರಿಕಲ್ಪಿತವು ; ಜೀವೇಶ್ವರ್ಯ – ಭೇದ, ಅವರ ಧರ್ಮಗಳು ಆದರ ವಿಕಾರವೇ. ಬ್ರಹ್ಮವೊಂದೇ ಎಲ್ಲಾ ಜೀವ ರೂಪನ್ನು ಅಜ್ಞತ್ವಾದಿ ಅವರ ಧರ್ಮಗಳನ್ನು ಅದರಿಂದಲೇ ಹೊಂದಿರು-ದು. ಪಂಚ ತನ್ಮಾತ್ರೆಗಳು ಆಕಾಶಾದಿಗಳು, ಇಂದ್ರಿಯಾಂತಃಕರಣ ಪ್ರಾಣವರ್ಗಗಳ ಲಿಂಗಶರೀರಗಳೂ ಪಂಚೀಕರಣದಿಂದಾದ ಸ್ಥೂಲಶರೀರಗಳೂ ಜೀವರ ಭೋಗಾರ್ಥವಾಗಿ ಆ ಪ್ರಕೃತಿಯಿಂದ ಸೃಷ್ಟಿಯಾದದ್ದಲ್ಲದೆ, ವಿಶ್ವವೈಶ್ವಾನರಾದಿ ಭೇದವೂ ತೋರಿಕೊಳ್ಳುತ್ತಿರುವದು. ಭವಬೀಜವಾಗಿರುವ ಜೀವರ ಲಿಂಗಶರೀರದ ಕ್ರಿಯೆಗಳೆಲ್ಲವೂ ಈಶ್ವರನ ಲಿಂಗಶರೀರದಿಂದಲೇ ನಡೆಯುತ್ತಲಿರುವವು. ಜಗತ್ತಿನ ಭೋಗಗಳ ಸವಿಯನ್ನುಂಡ ಜೀವರು ಆ ಸಂಸಾರ ಭೋಗಕ್ಕೆಂದೇ ಪುನಃ ಪುನಃ ಕರ್ಮಗಳನ್ನು ಮಾಡುತ್ತಲೂ, ಹಲವುಸಾರಿ ಭೋಗಿಸಿದ ಅವನ್ನೇ ಮತ್ತೆ ಮತ್ತೆ ಬಯಸುತ್ತಲೂ ಇರುವರು. ಹೀಗಾಗಿ ಹೊಸ ಹೊಸ ದೇಹಗಳನ್ನು ಧರಿಸಿಕೊಳ್ಳುತ್ತಲಿರುವ ಅವರು ಅಲೆಯಿಂದಲೆಗೆ ಸಿಕ್ಕಿ ಸಾಗರದಲ್ಲಿ ತಿರುಗುತ್ತಲಿರುವ ಕೀಟಗಳಂತೆ ಸಂಸಾರದಲ್ಲಿ ಸುತ್ತುಗಟ್ಟುತ್ತಿರುವರು. ದೈವವಶಾತ್ ಜನ್ಮಾಂತರದ ಸತ್ಕರ್ಮ ಫಲವಾದ ವಿರಕ್ತಿಯೆಂಬ ಸಂಸಾರ ತೀರವನ್ನು ಹೊಂದಿ, ಪೂಜಾದಿಗಳಿಂದ ತತ್ತ್ವನಿಷ್ಠರಲ್ಲಿ ತನ್ನ ನಿಜವನ್ನು ಕಂಡುಕೊಂಡು ಆ ಜೀವರು ಪರಮಶಾಂತಿಯೆಂಬ ತೀರದಲ್ಲಿರುವ ವೃಕ್ಷಗಳ ನೆರಳಲ್ಲಿ ಸುಖದಿಂದ ವಿಶ್ರಮಿಸುತ್ತಾರೆ.

'ದೇಹೇಂದ್ರಿಯಗಳಲ್ಲಿ ನಾನೆಂಬ ಅವಿದ್ಯೆ'ಯಿಂದ ಭೇದ ಕಂಡರೂ ನಿರವಿದ್ಯನಾದಾತ್ಮನು – ಭೇದಗಂಧವಿದೂರನು. ನಿರ್ದ್ವಂದ್ವನು. ನಿತ್ಯಾತ್ಮಕನು. ಪುರುಷನು. ಒಬ್ಬನೇ ಆಗಿರುವನು. ಅವಿದ್ಯೆಯಿಂದ ಹುಟ್ಟುಗಟ್ಟಿದ ಆಕಾಶಾದಿ ಸರ್ವಕಾರ್ಯಗಳೂ ಹಗ್ಗದ ಹಾವಿನಂತೆ ಆತ್ಮನನ್ನು ಬಿಟ್ಟಿರುವವೇ ಇಲ್ಲವಾದ್ದರಿಂದ ಆತ್ಮನೊಬ್ಬನೇ ಪರಮ ಸತ್ಯನು ; ಮಿಕ್ಕೆಲ್ಲವೂ ತನ್ನಲ್ಲಿಲ್ಲದ ಅವಿದ್ಯಾಶರೀರವಾದ್ದರಿಂದ ತನ್ನ ಸ್ವರೂಪ

ದಲ್ಲೆಂದೂ ಹೆಜ್ಜೆಯಿಡುವದಕ್ಕಿಲ್ಲದ ಶೂನ್ಯವೇ. ಚಿನ್ನವೊಂದೇ ಬಹುರೂಪಾದಂತೆ, ಇರುವ ಸತ್ತೊಂದೇ ಈ ಬಗೆಬಗೆಯ ದೃಶ್ಯ ರಾಶಿಯಾಗಿ ತೋರುತ್ತಿದೆ. ಒಡವೆಗಳು ಕರಗಿಹೋದರು ಚಿನ್ನಕ್ಕಳಿವಿಲ್ಲದಂತೆ ಕಡೆಗೆಲ್ಲವನ್ನು ನುಂಗಿ ನಿಂತ ಜೇಡರ ಹುಳುವಿನಂತೆ ಭೋಕ್ತೃ ಭೋಗ್ಯಾದಿ ಜ್ಞಾತೃಜ್ಞೇಯಾದಿಯಾಗಿ ಬಗೆಬಗೆಯಿಂದ ತೋರುತ್ತಲಿದ್ದ ಜೀವೇಶ್ವರ ಜಗತ್ತೆಲ್ಲವು ತತ್ತ್ವಜ್ಞಾನದಿಂದ ಕರಗಿ ತನ್ನಲ್ಲಿಲ್ಲವಾದರೂ ಸ್ವರೂಪ ಜ್ಞಾನವೊಂದೇ ಗಟ್ಟಿಯಾಗಿ ನಿಲ್ಲುವದು. ಅದೇ ಆತ್ಮನು, ಇದೆಲ್ಲವೂ ಅದೇ, ಅದರ ವಿಸ್ತಾರರೂಪವೇ ಪ್ರಪಂಚವು; ತರ್ಕದಿಂದ ಹೊಂದುವದಕ್ಕಿಲ್ಲದ ಇದು ಶ್ರುತಿ ಗುರುಗಳ ಪ್ರಸಾದೈಕಲಭ್ಯವಾದ್ದರಿಂದ ನರಕ ಫಲಗಳಲ್ಲಿಯೇ ಕೊನೆಗಾಣಿಸುವ ಆ ತರ್ಕವನ್ನು ಜಿಜ್ಞಾಸುಗಳು ತಮ್ಮ ಕೈಬಿಟ್ಟು, ನೇರಾಗಿ ಪರಮತತ್ತ್ವವನ್ನು ಮನಗಾಣಿಸುವ ಸಾರ್ವತ್ರಿಕಾನುಭವವನ್ನು ಆಶ್ರಯಿಸುವದೇ ಯುಕ್ತ.

ಎರಡನೆಯದಿದ್ದರೆ ಇಚ್ಛೆಯು; ಅದಿಲ್ಲವಾದರೆ ಇಚ್ಛೆಯಿಲ್ಲ; ಆ ಇಚ್ಛೆಯೆ ಮನಸ್ಸಿನ ಕೊಳೆಯು; ಅದಿಲ್ಲದ ಮನಸ್ಸು ಆತ್ಮನಾಗಿ ನಿಲ್ಲುವದು. ಇಷ್ಟೇ ಹೊರತು, ಮೊದಲು ತಾನೇ ಇಲ್ಲದ ಮನಸ್ಸಿನಲ್ಲಿ ಶುದ್ಧ ಅಶುದ್ಧ ಎಂದಿರುವದೇ ಇಲ್ಲ. ಲೋಕತ್ರಯವೇ ನಿಸ್ಸಾರವಾಗುಳ್ಳ ಜ್ಞಾನಿಯು – ಎಲ್ಲರ ಕಾಮುಗಳನ್ನು ಹೊಂದಿ, ತಾನು ನಿತ್ಯಚಿದ್ರಸನು, ನಿರ್ದುಷ್ಟನು, ಆಗಿ ಇಡಿಯಲೋಕಕ್ಕೇ ಪರಮ ಪೂಜ್ಯನಾಗಿರುತ್ತಾನೆ. ಶಾಂತಿಸಾಗರದಂತೆ ಅಲುಗಾಟವಿಲ್ಲದ ಆ ಪ್ರಶಾಂತ ಚಿತ್ತನಿಗೆ ಶ್ರೀ ಗುರುದಕ್ಷಿಣಾಮೂರ್ತಿಯ ಅನುಗ್ರಹದಿಂದ ಚಿದಾನಂದವು ಸಾಕ್ಷಾತ್ಕರಿಸಿರುತ್ತದೆ. ಮಿಥ್ಯಾತ್ವ ನಿಶ್ಚಯದಿಂದ ಅಜ್ಞಾನ ತತ್ಕಾರ್ಯಗಳನ್ನು ಅರೆದು ನಾಶಮಾಡಿಕೊಂಡು, ಅದರ ಹುಟ್ಟನ್ನೇ ಕೆಡಿಸಿಕೊಂಡಿರುವದರಿಂದ ಅವನಿಗೆ ಅಮರತ್ವವೂ ತಾನಾಗಿ ದೊರಕಿರುತ್ತದೆ. ಶಿವನೇ ಗುರುವು; ಗುರುವೇ ಸಾಕ್ಷಾತ್ಪರಮಶಿವನು; ಅವನ ಕಾರುಣ್ಯ ಚಂದ್ರಿಕೆಯ ಲೇಶಮಾತ್ರದಿಂದ ಸೂರ್ಯನ ಕಿರಣಕ್ಕೆ ಮೈಗರೆಯುವ ಮಂಜಿನಂತೆ ಸಂಸಾರ ಕಾರಣಗಳಾದ ಅವಿದ್ಯಾ ಕಾಮಕರ್ಮಗಳೆಲ್ಲ ನಾಶವಾಗಿ ಹೋಗುವವೆಂದು ಬ್ರಹ್ಮದೇವನು ಇಂದ್ರನಿಗೆ ಗುರುಪೂಜಾದಿಗಳ ಫಲವನ್ನು ವಿವರಿಸಿರುತ್ತಾನೆ.

**೧೪. ಜೀವನ್ಮುಕ್ತಿ ಪುರಸ್ಸರ ವಸ್ತುಸ್ಥಿತಿ ನಿರ್ಣಯ** :—(೨-೩೯) ಗರುಡ ಮಂತ್ರದಿಂದ ವಿಷದ ಮಾರಕಶಕ್ತಿಯು ಭರವಡಗಿದಂತೆ, ಸೂರ್ಯಾಂಜನದಿಂದ ರಾತ್ರಿಯ ಕತ್ತಲೆಯಲ್ಲಿ ಕಣ್ಣುದೃಷ್ಟಿಯ ತೆರೆ ಹರಿದಂತೆ ಮರಳಿ ದೇಹಾದಿಗಳ ಅಂಕುರೋತ್ಪತ್ತಿಗಿಲ್ಲದಂತೆ ಅವಿದ್ಯಾ ಬೀಜವೇ ತತ್ತ್ವಜ್ಞಾನದಿಂದ ಕೆಟ್ಟಿತಲ್ಲದೆ, ತೋರುವದಕ್ಕಿಲ್ಲದಂತೆ ಆ ದೇಹಾದಿ ಪ್ರಪಂಚವನ್ನೇನೂ ಜ್ಞಾನವು ಹಾಳುಮಾಡಲಿಲ್ಲ. ಅವುಗಳಲ್ಲಾಸ್ಥೆಯು ಬಗೆಗಿಲ್ಲವಾಯ್ತಷ್ಟೆ? ಇದ್ದ ಸ್ವರೂಪಾನಂದವು ಲಭಿಸಿತು. ಹೀಗೆ ತನ್ನಲ್ಲಿ ತಾನು ಪರಮಾತ್ಮನಾಗಿ ನಿಂತ ನಿರ್ವಿಷಯಾನಂದದ ನೆಲೆಯೇ ಸುಜೀವನ್ಮುಕ್ತಿಯು. ಇಂಥ ನಿರಂಜನ ಲಾಭವಿಲ್ಲದ ಮನುಷ್ಯನ ಬಾಳು, ಬಾಳಲ್ಲ! ಬರಿಯ ಹೊಟ್ಟೆಗಾಗಿ ಕಷ್ಟಪಡುತ್ತಿರುವ ಕಾಡಿನ ಮೃಗ ಪಕ್ಷಿಗಳು, ನಾಯಿ ನರಿ ಹಂದಿ ಕಾಗೆ ಗೂಗೆಗಳು, ಕುರಿ ಕೋಳಿ ಮುಂತಾದ ಮೂಕಪ್ರಾಣಿಗಳು ಬದುಕಿಲ್ಲವೇ? ತಮ್ಮ ಜೀವಿತಕಾಲದಲ್ಲಿ

ಸಂಸಾರ ತಾಪ ಪುನಃ ತಲೆಯೆತ್ತದಂತೆ ಮಾಡಿಕೊಂಡವರೇ ಸಫಲ ಜೀವಿಗಳು! ಹಿಂದಿನ ಮುಂದಿನ ಇಂದಿನಕಾಲದ ಎಲ್ಲಾ ಜನರಿಗೂ ನಿಜ ನಿರ್ವಾಣ ಮಾತ್ರ ಒಂದೇ ಅಲ್ಲದೆ, ಕಾಲಭೇದದಿಂದ ಅದು ತನ್ನಲ್ಲಿ ಬದುಲುವದಲ್ಲ. ಆತ್ಮಾನಾತ್ಮರೂಪವಾದ ಸತ್ಯ ಮಿಥ್ಯೆಗಳ ಬೆರಕೆಯುಳಿದ ರೂಪವೇ ಪರಮುಕ್ತಿ; ಶರೀರವಳಿಯುವದಲ್ಲ. ಪ್ರಾಕೃತರು ತಮ್ಮ ವಾಸನೆಯನ್ನನುಸರಿಸಿ ಜನ್ಮಿಸುತ್ತಿರುವಂತೆ, ಬ್ರಹ್ಮಾತ್ಮನಲ್ಲಿ ನಿಂತ ಜ್ಞಾನಿಯು ಬ್ರಹ್ಮಸ್ವರೂಪ ಹೊಂದುವನು. ಅಂತರಂಗಾತ್ಮರಿಗೆ ಭೇದ ಕಾಣದ ಎಲ್ಲರೂ ಪ್ರಾಕೃತರೇ, ಕರ್ಮೋಪಾಸನಾದಿಕ್ರಿಯೆಗಳಿಂದ ತಮಗೆಂದಿಗೂ ಬಂಧ ತೊಲಗುವದಕ್ಕಿಲ್ಲ. ಅದಕ್ಕೆ ಬದಲು ಆ ಕ್ರಿಯೆಗಳಿಂದ ಪುಣ್ಯಲೋಕವನ್ನು ಪಡೆದವರೂ ಪುನಃ ಹುಟ್ಟಬಂದರೆಂಬಲ್ಲಿ ಪುರಾಣಗಳುಂಟು. ಆದ್ದರಿಂದ ವಿಷಯಗಳೆಂಬ ಹಾವಿನ ವಿಷದ ನಂಜೇರಿ ಮದಿಸಿರುವ ಜನರಿಗೆ – ತಮ್ಮ ಶರೀರೇಂದ್ರಿಯಗಳ ಬಲ, ದೀರ್ಘಾಯು, ಶಿರಿಸಂಪತ್ತು ವಾರ್ತಾಲಾಪಗೋಷ್ಠಿ ಮುಂತಾದ ಪುಣ್ಯಫಲಗಳೆಲ್ಲ ಮುಂದಿನ ಜನ್ಮವನ್ನು ಕುರಿತಾಗುವದರಿಂದ ಆಯಾಸಕಾರಣೆಗಳೇ ಆಯಿತು!

ತಾನಾಗಿ ಭೋಗಕಾಂಕ್ಷೆಗಳು ಎಲ್ಲಡಗಿರುವವೋ, ಹೊರಗೆ ವ್ಯವಹರಿಸುತ್ತಿದ್ದರೂ ಸಕಲ ಪ್ರಾಣಿಗಳ ನಿಜವೇ ಯಾರ ಚಿತ್ತದಲ್ಲಿ ಮಾರು ಹೊಳೆಯುತ್ತಿರುವದೋ, ಬರುವ ಲಾಭ ನಷ್ಟಗಳಿಂದ ಯಾರ ಮುಖವು ವಿಕಾರಹೊಂದುವದಿಲ್ಲವೋ, ಶರದೃತು ವಿನಾಕಾಶದಂತೆ ರಾಗ ದ್ವೇಷ ಭಯ ಕಾಲೂಷಗಳು ಯಾರ ಮನಸ್ಸನ್ನು ಹೊಂದಿಲ್ಲವೋ ಅವರು ಜೀವನ್ಮುಕ್ತರು. ಲೋಕವನ್ನೆಲ್ಲ ಮರೆತವರು; ಎಲ್ಲರ ಎಚ್ಚರದೊಳಗೆ ತಮಗೆಚ್ಚರವಿಲ್ಲದವರು; ಇಡಿಯ ಲೋಕವನ್ನೇ ಅರೆದು ಮಿಥ್ಯೆಮಾಡಿ ಬ್ರಹ್ಮವನ್ನಾಗಿ ಮಾಡಿಕೊಂಡವರು. ಮೋಹದ ತಿರುಳನ್ನೇ ಸುಟ್ಟು ಬೂದಿಮಾಡಿದವರು, ಅಹಂಕಾರವಿಲ್ಲದೆ, ಮನಸ್ಸು ಅಮನಸ್ಸಾಗಿರುವವರೇ ಜೀವನ್ಮುಕ್ತರು! ಜ್ಞಾನಿಗಳಿಗೆ ಜಗತ್ತು ಅಂಜುವದಿಲ್ಲ, ಅವರು ಜಗತ್ತಿಗೂ ಅಂಜುವದಿಲ್ಲ. ಮಂಜು ಮತ್ತು ಉರಿ – ಒಂದರಲ್ಲೊಂದು ಕಂಡರೂ ವಿಸ್ಮಯವಿಲ್ಲದ ಧೀರರು! ನಷ್ಟ ಸಂಸಾರಾಂಕುರನು, ಜ್ಞಾನಿಯು ಶರೀರವಿದ್ದರೂ ಅಶರೀರನು, ನಿಶ್ಚಿಂತನು, ವ್ಯವಹಾರವಿದ್ದರು ಅದರ ತಾಪವಿಲ್ಲದವನು, ಪ್ರಾರಬ್ಧವೇಗದಿಂದ ಜೀವಿಸಿರುವ ಶರೀರೇಂದ್ರಿಯನು, ಕಂಡರೂ ಭೇದವನ್ನು ಹೊರಗಿಟ್ಟು, ಸರ್ವರಲ್ಲಿಯೂ ತತ್ತ್ವಾಭೇದ ದೃಷ್ಟಿಯುಳ್ಳವನೇ ಜೀವನ್ಮುಕ್ತನು. ಅವರಲ್ಲಿ ಆಶೆಗಳು ಸಮಾರಂಭಗಳು ಕಾಣಿಕೆಗಿದ್ದರು ಒಳಗಿರುವದಿಲ್ಲ. ಯೋಚನೆಯಿಲ್ಲದೆ ದೊರೆತಷ್ಟರಲ್ಲಿಯೇ ಅಶನ ವಸನ ವಸತಿಗಳಲ್ಲಿ ತೃಪ್ತರಾಗಿರುವ ಅವರು ಎಲ್ಲವನ್ನು ಪ್ರೀತಿಸುವಂತೆ ಕಂಡರೂ ಅವರ ಹೃದ್ಯವನ್ನು ತಿಳಿಯುವದಕ್ಕೊಬ್ಬರಿಗೂ ಇರುವದಿಲ್ಲ. ರಸಗಳನ್ನೆಲ್ಲ ಹೀರಿದರು ಸೂರ್ಯನು, ಎಲ್ಲವನ್ನು ಸುಟ್ಟರು ಬೆಂಕಿಯು, ಎಲ್ಲವನ್ನು ಮುಟ್ಟುತ್ತಿದ್ದರು ವಾಯುವು ಶುದ್ಧವಾಗಿಯೇ ಇರುವಂತೆ; ವ್ಯವಹಾರಗಳನ್ನೆಲ್ಲ ಬಿಡದೆ ನಡಸುತ್ತಿದ್ದರು ಜ್ಞಾನಿಗಳು ಪುಣ್ಯ ಪಾಪಗಳಂಟಿಲ್ಲದೆ ಶುದ್ಧರು ನಿರ್ಲೇಪರು ಸಂಗವಿಲ್ಲದವರೂ ಆಗಿರುವ ಅವರ ಕೃತಿ ದುಷ್ಟವಲ್ಲ. ಸರ್ವಲೋಕ ಹಿತವೇ ಜೀವನದ ಉಸುರಾಗಿರುವ ಅವರ ಆಚಾರವು ಲೋಕವೇದಬಾಹ್ಯವೂ ಆಗುವದಿಲ್ಲ. ಅಜ್ಞಾನಿ

ಗಳಿಗೆ ಶರೀರದೊಡನೆ ಓಡಾಡುತ್ತಿದ್ದಂತೆ ಕಾಣುತ್ತಿದ್ದ ಅವರು ಆ ಶರೀರ ಮರೆಯಾಗಲು ಸುಳಿದಾಡುವದನ್ನು ಬಿಟ್ಟು ವಾಯು ವಿಶಾಲವಾದಾಕಾಶದಲ್ಲೊಂದಾದಂತೆ ಮೊದಲೇ ಬ್ರಹ್ಮಸ್ವರೂಪರಾಗಿದ್ದ ಅವರೂ ಪೂರ್ಣ ಬ್ರಹ್ಮದಲ್ಲೊಂದಾಗಿ ನಿಲ್ಲುವರೆಂಬ ಗೌಣಮುಕ್ತಿಯು ಅವಿದ್ಯಾಯುಳ್ಳವರ ದೃಷ್ಟಿಯಲ್ಲಿ ಕಲ್ಪಿಸಿ ಹೇಳಿರುತ್ತದೆ.

ವಿಷಯಗಳಲ್ಲಿ ಓಡಾಡುತ್ತಿದ್ದ ಮನವು ಹೀಗೆ ಅಡಗಿಹೋದದ್ದರಿಂದ ಜಗತ್ಕಾರಣವಾದ ಪ್ರಕೃತಿಯೆಂಬ ಮುದುಕಿಯ ಕೈಯಲ್ಲಿದ್ದ ಕೋಲು ಮುರಿಯಿತು! ನಾಮರೂಪಿನ ಕಾಲುಗಳೆರಡಕ್ಕೂ ಬಲವಿಲ್ಲವಾಯಿತು! ಸದ್ಗುರುವು ತನಗಾತ್ಮತತ್ತ್ವವನ್ನು ಹೇಳಿದಾಕ್ಷಣ ಆ ಕಾಲುಗಳೆರಡರ ಕೀಲುಗಳು ತಮ್ಮ ಕೊಂಡಿಯನ್ನು ಕಳಚಿಕೊಂಡವು; ಕಳಚಿಕೊಂಡ ಆ ಕೀಲುಗಳಿಗೆ ಪುನಃ ಬಲವೆಲ್ಲಿಂದ ಬರಬೇಕು? ಪ್ರಾಯ ಕಳೆದು ಹಣ್ಣಾದ ಮುದುಕಿಗೆ ಇನ್ನು ಹರೆಯವಾಗುವದುಂಟೆ! ಎಲ್ಲರಿಗೂ ತಮ್ಮ ಪರಮಾರ್ಥ ವಿಷಯಕ್ಕೇ ಸೊನ್ನೆ ಸುತ್ತುತ್ತಿದ್ದ ಮಾಯೆಗೇ ಇನ್ನು ಸೊನ್ನೆ ಬಿತ್ತು! ಸೊನ್ನೆಯ ರೂಪಾದ ಮಾಯೆಗೆ – ಮೊದಲಿನಲ್ಲಿ ಒಂದುಗೆರೆ (೧) ಯನ್ನಿಟ್ಟರೆ – ಏಕ, ದಶಕ, ಶತಕ, ಸಹಸ್ರ, ದಶಸಹಸ್ರ, ಲಕ್ಷ, ದಶಲಕ್ಷ, ಕೋಟಿ, ದಶಕೋಟಿ, ಅರ್ಬುದ.... ಎಂದು ಮೊದಲಾಗಿ, ಅನಂತ, ಮಹಾನಂತ, ಊರ್ಧ್ವ, ಪರಾರ್ಧದವರೆಗಿನ ೩೨ ದ್ವಾತ್ರಿಂಶತಿಯ ಸಂಖ್ಯಾಸ್ಥಾನದವರೆಗೂ ಗಣಿತ ಸಂಖ್ಯೆಯ ರೂಪುಗೊಂಡು ಆ ಮಾಯೆಯು ಎಣಿಕೆಗಳವಡದಂತೆ ತನ್ನೊಳಗೆ ವಿಸ್ತರಿಸಿಕೊಳ್ಳುವದು. ಇನ್ನು ಸೊನ್ನೆಯ ಎರಡನೆಯ ಗೆರೆ (౮) ಯಾದ ಮತ್ತೊಂದರ್ಧವೇ ಈಶ್ವರನಾಗುಳಿಯುವಲ್ಲಿ ಆ ಕಪಟರೂಪದ ಮಾಯೆಯ ವಿಕಾರಗಳ ಬೆಳವಿಗೆಗಿನ್ನವಕಾಶವೆಲ್ಲಿ?

**೧೫. ಬ್ರಹ್ಮವಿಶ್ರಾಂತಿ ನಿರ್ಣಯ**:—(೨–೧೭) ಶುದ್ಧವೆಂದೂ ಮಲಿನವೆಂದೂ ವಾಸನೆ ಎರಡು ಬಗೆ; ಮಲಿನವು ತನ್ನ ಸಂಸಾರಕ್ಕಿದ್ದರೂ ಶುದ್ಧ ವಾಸನೆಯು ಹುರಿದ ಹಸುರು ಕಾಳಿನಂತೆ ಭೋಗದಲ್ಲಿ ಚರಿತಾರ್ಥವಾಗುವ ಅದು ಸಂಸಾರ ಬೀಜವಲ್ಲ. ಮಲಿನ ವಾಸನೆಯ ಹೆಮ್ಮರಕ್ಕೆ – ಅನಾತ್ಮಾಭಿಮಾನವೇ ಹೊಯ್ಬೇರು, ಕಳೆದ ಶರೀರಗಳೆ ಉದುರಿದ ಹಣ್ಣೆಲೆ, ಬರುವ ಸಾವಿರಾರು ಜನ್ಮಗಳೆ ಶಾಖೋಪಶಾಖೆಗಳು, ಸುಖದುಃಖಗಳೆ ಹೂಗಾಯಿ ಹಣ್ಣುಗಳ ಗೊಂಚಲುಗಳು; ಸಾರವನ್ನೆಲ್ಲ ಹೀರಿ ಈ ಮರವನ್ನು ಒಣಗಿಸಿ ನಾಶಮಾಡುವಲ್ಲಿ ಶುದ್ಧ ವಾಸನೆಯು ಶಿಶಿರಋತುವಿನ ಸೂರ್ಯಾತಪದಂತೆ, ಜ್ಞಾನಿಗಳಲ್ಲಿ ಮನಸ್ಸಿದ್ದರೆ ಜೀವನ್ಮುಕ್ತಿ; ಅದು ಬ್ರಹ್ಮದಲ್ಲೊಂದಾದರೆ ಗೌಣವಾದ ವಿದೇಹಮುಕ್ತಿ. ಅಜ್ಞರಿಗೆ ಕೋಟಿಗಟ್ಟಲೆಯ ಜನ್ಮಗಳಲ್ಲಾದರು ಸವಿಯುವದಕ್ಕಿಲ್ಲದ ವಾಸನೆಗಳು – ಜ್ಞಾನಿಯಲ್ಲಿ ವಿಷಯ ವ್ಯಾಮೋಹವಿಲ್ಲದ್ದರಿಂದ ತಮಗೆ ತಾವೇ ಕ್ಷೀಣಿಸಿ ಹೋಗುತ್ತಿರುವವು. ಶುಭವಾಸನೆ–ತನ್ನೊಳಗೆ ಬ್ರಹ್ಮವಾಗಿ ನಿಲ್ಲುವವು. ಸಮುದ್ರದ ಜಲಚರಗಳು ಮರುಮರೀಚಿಕೆಯಲ್ಲಿ ತೋರುವದಕ್ಕಿಲ್ಲದಿರುವಂತೆ ಸಂಸಾರ ವಾಸನೆಗಳು ಜ್ಞಾನಿಯಲ್ಲಂಕುರಿಸುವದಕ್ಕೂ ಇರುವದಿಲ್ಲ. ವಾಸನೆಗಳಿಗೆಲ್ಲ ಆಸರೆಯಾಗಿರುವ ಚಿತ್ತತ್ಯಾಗವೇ ಸರ್ವತ್ಯಾಗವು; ಭೋಗಪ್ರದವಾದ ಮಿಕ್ಕ ತ್ಯಾಗವೆಂದಿಗೂ ಸರ್ವತ್ಯಾಗವಾಗುವದಿಲ್ಲ.

ಚಿತ್ತ ಭೂಮಿಯ ಭೇದವೆಂಬ ವಿಷವೃಕ್ಷಕ್ಕೆ ಶರೀರಾದಿಗಳ ಅಭಿಮಾನವೇ ಬೀಜ, ಭೇದಮತಿಯೆ ಅಂಕುರ, ವಾಸನೆಗಳೆ ಶರೀರ, ರಾಗಾದಿಗಳೆ ಶಾಖೋಪಶಾಖೆಗಳು, ಆತ್ಮಾನಾತ್ಮಗಳ ಅಧ್ಯಾಸವೆ ತನ್ನ ತಾಯ್ಬೇರು; ಇದರ ಮೂಲವನ್ನುಳಿಸಿ ಕೊನೆ ಕೋಡುಗಳನ್ನು ಸವರಿದರೆ, ರಾಗಾದಿ ಶಾಖೆಗಳೆಂದಿನಂತೆ ತನ್ನೊಳಗೆ ಚಿಗುರದೆ ಬಿಡುವದಿಲ್ಲ. ಮೂಲವನ್ನೆ ಕಡಿದು ಬಿಸುಟಲ್ಲಿ ಅವು ಮತ್ತೆ ಚಿಗುರುವದಕ್ಕಿರುವದೇ ಇಲ್ಲ. 'ನಾನು' ಯಾರೆಂಬ ಆತ್ಮ ವಿಚಾರವೇ ಸಂಸಾರ ಕಾಡಿಗೆ ಕಡುದಾವಾವಲ.

(೧೮–೩೩) ಈ ಸಂಸಾರವು ಬರಡು ನಿಷ್ಪ್ರಯೋಜನ ಕರವು! ಸತ್ಯವೊಂದೇ ಸಾರ. ವೇದಗಳು, ಅಂತರಿಕ್ಷ ಮಂಡಲವು ಬ್ರಹ್ಮನ ಸೃಷ್ಟಿಯೆಲ್ಲ ಸತ್ಯದಿಂದಲೇ ಇರುವದು. ಸೂರ್ಯ ಚಂದ್ರಾಗ್ನಿಗಳೂ ಅದಕ್ಕಂಜುವವು. ಸರ್ವಶರೀರಗಳಲ್ಲೂ ಅದೇ ಪುರುಷನಾಗಿರುವದು. ಅವನಲ್ಲಿ ಅಧ್ಯಾಸದಿಂದ – ಶರೀರೇಂದ್ರಿಯಗಳ ವಿಕಾರಗಳು, ಕರ್ಮೋಪಾಸನಾದಿಕ್ರಿಯೆಗಳು ಸಂಸಾರದಂದುಗವೆಲ್ಲವೂ ಹುಟ್ಟುಗಟ್ಟಿರುತ್ತದೆ. ಶರೀರಾದ್ಯನಾತ್ಮಗಳಲ್ಲಿ 'ನಾನು' ಎನ್ನುವದರಿಂದ ಜನರಿಗೆ ಬಂದಿರುವ ಈ ಸಂಸಾರ ಭಯವು ಜ್ಞಾನಿಗೆ ಸಂಭವಿಸುವದಿಲ್ಲ. ಮನಸ್ಸಿನ ಸಂಕಲ್ಪ ಶರೀರದ ಈ ಜಗತ್ತಿನಿಂದ ಸತ್ಯಕ್ಕೆಂದಿಗೂ ಬಾಧೆಯಿರುವದಿಲ್ಲ. ಹಗ್ಗವೇ ಹಾವಾಗಿ ತೋರಿದಂತೆ ಚತುರ್ಮುಖನಾದಿಯಾಗೆಲ್ಲವೂ ಆಗಿ ಬ್ರಹ್ಮವೇ ಭಾಸಿಸುತ್ತಿರುವದು. ದೇಹಾದಿಗಳಿಲ್ಲದ್ದರಿಂದ ತನ್ನಲ್ಲಿ ಕರ್ತೃತ್ವವು, ವಿಕಾರಗಳಿಲ್ಲದ್ದರಿಂದ ಭೋಕ್ತೃತ್ವವೂ ತನಗಿರುವದಿಲ್ಲ. ದೃಶ್ಯೋನ್ಮುಖವಾಗಿರುವ ಅಂತಃಕರಣವು ತನ್ನ ಮುಖವಾಗುವದಕ್ಕಿರುವದಿಲ್ಲ. ಶ್ರುತ್ಯುಕ್ತ ಸದ್ಬ್ರಹ್ಮವೊಂದೇ ಸರ್ವಜಗತ್ತಿನ ಕೊನೆಮೊದಲು ನಡುವೆಗಳಲ್ಲಿಯೂ ಕಡಿವಡೆಯದೆ ವಿವಾದ ದೋಷಗಳಂಟಿಲ್ಲದೆ, ಪರಿಶುದ್ಧವಾಗಿ, ಸರ್ವಾತ್ಮವಾಗಿ ಹೊಳೆಯುತ್ತಿರುವದು. ಬೆಲ್ಲದ ಪದಾರ್ಥಗಳು ಅದಕ್ಕೆ ಬೇರಿಲ್ಲದಂತೆ, ಸತ್ತಿನಿಂದ ಬಂದಿರುವ ಇದೆಲ್ಲ ಆ ಸತ್ತಿಗಿಂತ ಬೇರಿರುವದಿಲ್ಲ; ಅದು ಸದಖಂಡವು. ಚಿತ್ತವೆಂಬ ಗೋಡೆಯಲ್ಲಿ ಹೊಳೆಯುವ ಈ ಜಗಚ್ಚಿತ್ರವೆಲ್ಲವೂ ಆ ಚಿತ್ತವನ್ನು ಬಿಟ್ಟಿರುವದಿಲ್ಲ. ಭೇದವು ಜೀವನಲ್ಲಿ ಕಂಡರೂ ಜ್ಞಾನದಿಂದ ಬಾಧಿಸಿಕೊಂಡವನು ಸಂಸಾರದೋಷ ಶೂನ್ಯನು. ಮನೋಮಾತ್ರವಾದ ಈ ಜಗತ್ತೆಲ್ಲವೂ ಮಾಯಾವಿಕಾರವು; ಹುಲ್ಲಿನಂತೆ ನಿಸ್ಸಾರವು ಎಂಬ ಜ್ಞಾನ ಬಂದವನು – ಬಲ್ಲವರಲ್ಲಿ ಮತ್ತು ದಾನಿಗಳಲ್ಲಿ ಪೂಜ್ಯನು. ತನ್ನಲ್ಲಿಲ್ಲದ ಮಾಯಾವಿಕಾರವನ್ನು ತಂದಿರಿಸಿದ ಚಿತ್ತವನ್ನು ಕಡೆಗೊಂದಿಸಿದವನು ಪರಮ ಉದಾರಿಯು! ತನ್ನಲ್ಲಿ ತೋರಿದರೂ ತನಗಿಂತ ಬೇರಾಗಿರುವ ದೇಹಾದಿಗಳನ್ನು 'ನಾನಲ್ಲ' ಎಂದುಬಿಟ್ಟವನು ಮಹಾದಾನಿಯು. ಹೀಗೆ ತನ್ನಾತ್ಮಪದದಲ್ಲಿ ವಿಶ್ರಾಂತಿಯುಳ್ಳವನೇ ಸರ್ವತ್ಯಾಗ ಫಲಭಾಜನನು.

**೧೬. ಸಪ್ತಭೂಮಿಕಾ ನಿರ್ಣಯ**:—(೪–೩೦) ಚಿತ್ತದ ವೃತ್ತ್ಯಾತ್ಮಕವಾಗಿರುವ ಅಜ್ಞಾನದ ಸಪ್ತಭೂಮಿಕೆಗಳನ್ನು ತಿಳಿದವನು ಚರಾಚರ ಪ್ರಪಂಚವೆಲ್ಲವನ್ನು ಮರುಮರೀಚಿಕೆಯಂತೆ ಕಂಡು ಉಪೇಕ್ಷಿಸುವನು. ಉದಯಾಸ್ತಗಳಿಲ್ಲದ ಅದರ ಸಾಕ್ಷಿಯಲ್ಲಿ ನಿಲ್ಲುವನು. ಶುಭೇಚ್ಛಾದಿ ಸಪ್ತವಿಜ್ಞಾನ ಭೂಮಿಕೆಗಳು ಪುಣ್ಯದಿಂದ

ಸಿಗುವವು. ಗುರುಗಳಿಂದ ತಿಳಿದು ಅವುಗಳಲ್ಲಿ ನಿಂತವನಿಗೆ ಸಂಸಾರ ಕಾಡಿನ ಶೋಕ ಮೋಹ ಲತೆಗಳು ಪುನಃ ಚಿಗುರುವದಿಲ್ಲ.

(೩೧–೩೯) ದೇಹವಿರುವಾಗಲೇ '**ಅಜ್ಞಾನ ಹೋಗಿ ಬಂದ ಜ್ಞಾನವೇ ವಿದೇಹಾಮೃತವು**' ದೇಹವಳಿಯುವದಲ್ಲ. ಏಕೆಂದರೆ ತಾನೇ ಮೊದಲಿಲ್ಲದ ದೇಹವು ಬಂಧವಾಗುವದಕ್ಕಿಲ್ಲದ ಮೇಲೆ, ಅದರ ವಿಯೋಗವು ಮುಕ್ತಿಯೂ ಅಲ್ಲ. ಹರಿದಾಟ ವಿಲ್ಲದಿದ್ದಾಗ ಚಿತ್ತದಲ್ಲಿ ತೋರುವ ಆನಂದವು ಲೋಕಾತಿಶಯವೆಂದಾಗಿದ್ದರು ನೆಲೆ ನಿಲ್ಲುವುದಕ್ಕಿಲ್ಲದ ಅದಕ್ಕೆ ಬಾಯಿನೀರು ಕರಿಯದೆ, ತನ್ನ ಪರಮಾರ್ಥ ಸಾಕ್ಷಿಯಲ್ಲಿ ಕಾಲೂರಿ ನಿಂತ ಬ್ರಹ್ಮಾತ್ಮ ಸ್ಥಿತಿಯೇ ಜ್ಞಾನನಿಷ್ಠೆಯು. ಪ್ರಪಂಚವಾಗಲಿ, ತನ್ನ ಮನಸ್ಸಿನಲ್ಲಿ ಕಾಮಾದಿವೃತ್ತಿಗಳಾಗಲಿ ತನ್ನಿಷ್ಟಬಂದಂತೆ ತೋರುತ್ತಿರಲಿ ತನಗೆ ಬಾಧಕ ವಿರುವದಿಲ್ಲ. ಬ್ರಹ್ಮಲೋಕದವರೆಗಿನ ಭೋಗವಿಕಾರಗಳಲ್ಲೊಂದೂ ತನಗಿರುವದಿಲ್ಲ. ತನ್ನ ಬ್ರಹ್ಮಾತ್ಮಭಾವವನ್ನು ಬಿಟ್ಟು ಆ ವಿಕಾರಗಳಲ್ಲೊಂದೂ ಇರುವದಿಲ್ಲವೆಂಬುದೇ ಪದಾರ್ಥಾಭಾವಿನಿ, ತುರಿಯಗೆ ಎಂಬ ಭೂಮಿಕೆಗಳು. ಅಲ್ಲಿ ಕಾಮಾದಿಗಳಿದ್ದರೂ ಹುರಿದ ಬೀಜ ಧಾನ್ಯದಂತಿರುವ ಅವು ಪ್ರಾರಬ್ಧಫಲ ಭೋಗಮಾತ್ರದಲ್ಲಿ ಕೊನೆಗಾಣು ತ್ತಿರುವವು. ಈ ರೀತಿಯಿಂದ ತಮ್ಮ ಸ್ವರೂಪದಲ್ಲಿ ನಿಂತು ಚಿತ್ತವಿಕಾರಗಳನ್ನಡಗಿ ಸಿರುವ ಜಗತ್ಪೂಜ್ಯರೂ ವಂದನೀಯರೂ ಆದ ಜ್ಞಾನಿಗಳೇ ಮಹಾಪುರುಷರು!

**೧೭. ಜೀವನ್ಮುಕ್ತ ಪೂಜಾಫಲ ನಿರ್ಣಯ** :—(೨–೨೧) ತನ್ನ ಪಾಪದ ಕಾಡನ್ನು ಸುಡುವಲ್ಲಿ ಜ್ಞಾನಕ್ಕಿಂತ ಬೇರೆ ದಾವಾನಲವಿಲ್ಲ. ಜ್ಞಾನಶಾಸ್ತ್ರವನ್ನು–ಒಂದು ವರುಷ ಅಥವಾ ಆರು ತಿಂಗಳು; ಮೂರು ತಿಂಗಳು, ಕೊನೆಗೆ ಒಂದು ತಿಂಗಳಾದರು ಅಭ್ಯಾಸವನ್ನು ಮಾಡಿದರೆ ಸಮಸ್ತ ಪಾಪಗಳೂ ಬಂದ ದಾರಿಯನ್ನು ಹಿಡಿದು ಅವನಿಗೆ ತೊಲಗುವವು. ವಿಶ್ವಾಸವಿಟ್ಟು ಜ್ಞಾನಕ್ಕಾಗಿ ತತ್ತ್ವವಿಚಾರದಲ್ಲಿ ಹೆಜ್ಜೆಯಿಟ್ಟವನನ್ನು ಸಂಸಾರಭಯವು ಬಿಡುವದು. ಉಪನಿಷತ್ತುಗಳ ನಿಶ್ಚಿತಾರ್ಥವಾದ ಜ್ಞಾನವನ್ನು ತನ್ನ ಕೈಬಿಟ್ಟರೆ, ನೆಲೆಯಿಲ್ಲದ ಮಿಕ್ಕವು ಸಾಂಶಯಿಕವು ನಿರರ್ಥಕವು ಎಂಬುದು ಅಧ್ಯಾತ್ಮನಿಷ್ಠರ ಹೃದಯವು. ಅತ್ಯಲ್ಪಕಾಲದ ಬೆಳಕಾದರು ಬಹುಕಾಲದ ಕತ್ತಲೆ ಯನ್ನು ಕೆಡಿಸಿಬಿಡುವಂತೆ; ನಿಮಿಷಾರ್ಧದ ಜ್ಞಾನವು ಸಾವಿರಾರು ಜನ್ಮಗಳ ಪಾಪ ಗಳನ್ನಾದರು ಸಮೂಲವಾಗಿ ನಾಶಮಾಡುವದು.

ಈ ನಿರ್ಮಲ ಜ್ಞಾನವನ್ನು ಹೊಂದಿದವನು ಸಾಕ್ಷಾಚ್ಛಿವನು. ಅವನನ್ನು ದೂಷಿಸುವರು ಕಲ್ಪನಿರಯವಾಸಿಗಳು; ಸುಕೃತಿಯು, ದುಷ್ಕೃತಿಯು, ಕಠಿನನು, ಕೋಮಲಹೃದಯನು – ಹೇಗಿದ್ದರು ಅಧ್ಯಾತ್ಮ ಶಾಸ್ತ್ರಾಭ್ಯಾಸಿಯು ಪೂಜ್ಯನೆಂಬು ದಕ್ಕಿನ್ನೆರಡಿರುವದಿಲ್ಲ. ಅಧಿಕ ಮಾತೇನು? ತತ್ತ್ವವನ್ನು ನಂಬಿ, ತನ್ನ ಹೃದಯ ಪೂರ್ವಕ ಅದರಲ್ಲಿ ವಿಶ್ವಾಸವನ್ನಿಟ್ಟವನ ಪಾದಧೂಳೂ ಈ ಚರಾಚರ ಜಗತ್ತನ್ನೆಲ್ಲ ಪವಿತ್ರಗೊಳಿಸುತ್ತೆಂಬುದಕ್ಕಿನ್ನು ಸಂಶಯವಿಲ್ಲ! ಆಕಸ್ಮಿಕವಾಗಿ ಜ್ಞಾನಿಯು ಮನೆಗೆ ಬಂದವನ – ಪಿತೃದೇವತೆಗಳು ಆನಂದಿಸುವರು! ಭಕ್ತಿಯಿಂದ ಜ್ಞಾನಿಯನ್ನು ಹೊಗಳಿ ದವನು ಅಮರರಲ್ಲಿ ಸೇರುವನು; ಎಲ್ಲೆಲ್ಲಿಯೂ ಪರಮಾತ್ಮನನ್ನು ಕಾಣುವ ಸ್ವಭಾವ

ವುಳ್ಳವನ ಕಣ್ಣಿಗೆ ಗೋಚರಿಸಿದ್ದೆಲ್ಲವೂ ಪಾಪಗಳಿಂದ ಬಿಡುಗಡೆ ಹೊಂದುವದು. **'ಆತ್ಮನೊಬ್ಬನೇ ಪರಮ ಸತ್ಯನು'** ಎಂಬ ಜ್ಞಾನಸಮುದ್ರದಲ್ಲಿ ಮುಳುಗಿದವನ – ಕುಲವು ಪವಿತ್ರ, ಆತನ ತಾಯ್ತಂದೆಗಳು ಧನ್ಯರು! ಕ್ಷಣಕಾಲ ಆತನಿದ್ದ ನೆಲವು ಪುಣ್ಯಕ್ಷೇತ್ರವಾಗಿಬಿಡುವದು. ದೃಷ್ಟಿಗೆ ಗೋಚರಿಸಿದವನು ದೇವಶ್ರೇಷ್ಠರಲ್ಲೊಬ್ಬ ನಾಗುವನು. ಅವರನ್ನು ಕಂಡು – ನಮಸ್ಕಾರ ಪೂಜೆ ಸೇವೆಗಳನ್ನು ಭಕ್ತಿಭಾವಗಳಿಂದ ಮಾಡದೆ ಬಿಟ್ಟವರು ಪುಣ್ಯ ಪುರುಷಾರ್ಥಗಳನ್ನು ಕಳದುಕೊಂಡವರು! ಮಲಮೂತ್ರ ಗಳಿಂದ ತುಂಬಿ ಅಶುಚಿಯಾಗಿ, ಹೆಣದಂತಿರುವ ಈ ತುಚ್ಛ ಶರೀರ ಭೋಗದ ವಸ್ತು ಗಳಲ್ಲಿ ಪಶುಗಳಂತೆ ನಿರಂತರ ನಿಂತ ಶುಂಡರು – ಸೊಕ್ಕಿದ ಗರ್ವಿಷ್ಠರೂ ಆಗಿರುವ ನರಾಧಮರಲ್ಲದೆ, ಅವರು ಅಮೃತವನ್ನು ಕೊಟ್ಟು ಹಾಲಾಹಲ ವಿಷವನ್ನು ಕೊಂಡ ಭಾಗ್ಯಹೀನರು! ಯವೆಹಳಚುವಷ್ಟಲ್ಪಕಾಲವಾದರು ಆತ್ಮಜ್ಞಾನಿಗೆ ವಾಸದ ಸ್ಥಳ ವಾಗಿದ್ದ ಆ ಮನೆಯೂ ಜಗತ್ತಿನೊಳಗಿರುವ ಮೂರುವರೆ ಕೋಟಿ ಪುಣ್ಯತೀರ್ಥಗಳಿ ಗೆಲ್ಲಕ್ಕು ತಾನಾಶ್ರಯವಾಗಿ ನಿಲ್ಲುವದು! ಶ್ರೀಗಿರಿ ಕೇದಾರ ಕಾಶಿ ಕುರುಕ್ಷೇತ್ರ ಪ್ರಯಾಗ ಚಿದಂಬರ ಕೊಲ್ಹಾಪುರ ಈ ಕ್ಷೇತ್ರಗಳು ಕೂಡ ಜ್ಞಾನಿಗೆ ತನ್ನ ಶರೀರದಲ್ಲಿ – ಮಸ್ತಕ ಹಣೆ ಕಣ್ಣುಬ್ಬು ಕಂಠ ಸ್ತನ – ಎದೆಗಳು, ಹೃದಯ ನಾಭಿಯಾಗಿ ನಿಲ್ಲುವವು. ಹೀಗೆ ವಿಶ್ವಮಯನು ಪರಮೇಶ್ವರನು ಸರ್ವತೀರ್ಥಾತ್ಮಕನಾಗಿರುವ ಜ್ಞಾನಿಯನ್ನು ಮುಂಕೊಂಡು ಸೇವಿಸದ ಪುಣ್ಯಹೀನರಿಗೆ ಹೋಲುವ ಪಾಪಾತ್ಮರು ಜಗತ್ರಯದೊಳಿಲ್ಲ! ಅವರನ್ನು ಕಡೆಗಣಿಸಿ ಜಡತೀರ್ಥಗಳನ್ನರಸುವ ಕುಶಲರು ಮಾಣಿಕ್ಯವನ್ನು ಬಿಟ್ಟು ಗಾಜಿನ ಚೂರನ್ನರಸುತ್ತಿರುವ ಮೂಢರು. ತತ್ತ್ವನಿಷ್ಠರನ್ನು ಕುರಿತಿಲ್ಲದ ಆತ್ಮನ ಮಹಿಮೆಯನ್ನು ಕಳೆಗುಂದಿಸುವ ಹೊರಗಿನ ಜಡತೀರ್ಥಗಳಿಗಾಗಿ ಬರಿದೇ ಜಿಜ್ಞಾಸು ಗಳು ಬಳಲುವದಲ್ಲ. ಶಿವನು – **'ಆತ್ಮನೇ ತೀರ್ಥ'** ಎಂದಿರುತ್ತಾನೆ. ಭಕ್ತಿಯಿಂದ ಮಾಡಿದ – ಜ್ಞಾನಿಯ ಪಾದಪೂಜೆ – ನಮಸ್ಕಾರ ತೀರ್ಥಧಾರಣೆ, ಸೇವೆ, ಸತ್ಕಾರಾದಿ ಗಳು ಜನರನ್ನು ಇಹಪರ ಸುಖಭಾಜನರನ್ನಾಗಿಸುವದು (ಮುಂ, ೩-೧-೧೦, ೩-೨-೧).

**'ಸರ್ವರಲ್ಲೊಂದಾಗಿರುವ ಆತ್ಮತತ್ತ್ವವನ್ನು ನಾನೇ'** ಎಂದು ಮನ ಗಂಡು, ನಿಶ್ಚಿಂತನಾಗಿರುವ ಜ್ಞಾನಿಯು – ಒಂದು ನದಿ; ನಿಯಮವೆ – ನೀರು, ಸತ್ಯವೆ – ಆಳವು, ಶೀಲವೆ – ದಡವು; ಜ್ಞಾನಿಯ ಪವಿತ್ರದಯೆಯೆ – ಅಲೆಗಳು, ಆತ್ಮನೆ – ಸಮುದ್ರವೆಂದೂ; ಆತ್ಮನಲ್ಲಿ ಮುಳುಗಿರುವ ಚಿತ್ತವೇ ನದಿಯೆಂದೂ ಶ್ರೀಕೃಷ್ಣನು ಧರ್ಮರಾಜನಿಗೆ ಹೇಳಿರುವನು. ಜ್ಞಾನಕ್ಕಿಂತ ಹೆಚ್ಚಿನ ಪುಣ್ಯಸ್ಥಲವು ಲೋಕತ್ರಯಗಳಲ್ಲಿಯೇ ಇರುವದಿಲ್ಲ. ಜ್ಞಾನವಿರುವ ಬಳಿಯೇ ಬ್ರಹ್ಮ ವಿಷ್ಣು ಮಹೇಶ್ವರರ ದಿವ್ಯಲೋಕಗಳೆಲ್ಲವೂ ಇರುವವೆಂಬುದಕಿನ್ನು ಸಂಶಯವಿಲ್ಲ. ಗಂಗಾದಿ ನದಿಗಳು ಕಾಶ್ಯಾದಿ ಪುಣ್ಯಕ್ಷೇತ್ರಗಳು ಸಾಲುಸಾಲಾಗಿ ಅಲ್ಲಿರುತ್ತಿರುವವು. ಈ ಸಂಸಾರ ವಿಕಾರವು ಮೊದಲಿರುವದಿಲ್ಲ. ಜ್ಞಾನವು ಬಂದ ಮೇಲೆ ಉಳಿಯುವದೇ ಇಲ್ಲ. ಆದ್ದ ರಿಂದ ಜ್ಞಾನಿಗೆ ಸಂಸಾರ ಭಯವಿನ್ನು ಮುಂದಿಲ್ಲ. ಈಗ ತೋರುವಂತಿದ್ದರು ಪರ ಮಾರ್ಥದಲ್ಲಿ ಎಂದೆಂದಿಗೂ ಇರುವದೇ ಇಲ್ಲವೆಂದು ತನ್ನ ಮನಗಂಡು, ಆತ್ಮನಲ್ಲಿ

ಪೂರ್ಣ ವಿಶ್ರಾಂತಿಗೊಂಡವನಿಗೆ ಮುಕ್ತಿಯು ಕರತಲಾಶ್ರಿತವು. ವಾಸನೆಗಳು ಶಿಥಿಲ ಅಥವಾ ಸ್ಥಿರವಾಗಿರುವಂತೆ ಜ್ಞಾನಿಗಳಲ್ಲಿ ಕಂಡರು ಅವರಿಗೆ ಬಾಧಕವಾಗಲಿ, ಮುಕ್ತಿಯಲ್ಲಿ ಭೇದವಾಗಲಿ ಆಗುವದೇ ಇಲ್ಲ. ತತ್ತ್ವಜಿಜ್ಞಾಸುಗಳಿಗೆಲ್ಲರೂ ಸಮಪೂಜ್ಯರೇ. ಶಿವ ವಿಷ್ಣು ಸೂರ್ಯನೇ ಮುಂತಾದ ದೇವಶ್ರೇಷ್ಠರಿಂದಲೂ ನನ್ನಿಂದಲೂ ಪೂಜ್ಯರಾದ ಜ್ಞಾನಿಗಳಿದ್ದಲ್ಲಿಯೇ ಮುಕ್ತಿಫಲಗೋಚರಿಸುವದು, ಅವರನ್ನು ನಮಸ್ಕಾರಾದಿಗಳಿಂದ ಸತ್ಕರಿಸಿ ಪೂಜಿಸಿದವರ ಪಾದುಕೆಗಳನ್ನು ನಾನು ತಲೆಯಲ್ಲಿ ಧರಿಸಿರುತ್ತೇನೆಂದು ಬ್ರಹ್ಮನು ಸುರರಿಗೆ ನುಡಿದನು. ತಾನು ಬದುಕಿರುವವರೆಗೂ ತನ್ನ-ದೇಹ, ಶಿರಿ ಸಂಪತ್ತು ಮೊದಲಾದ್ದನ್ನು ಭಕ್ತಿ ಶ್ರದ್ಧೆಗಳಿಂದರ್ಪಿಸಿ ಜ್ಞಾನಿಗಳನ್ನು ಸೇವಿಸುವವರು, ಧನಲೋಭವನ್ನು ಬಿಟ್ಟು ಹಣಕಾಸುಗಳಿಂದ ಸಮಯವರಿತು ಅವರನ್ನು ಸೇವಿಸುವ ಪರಮ ಗುರುಭಕ್ತರು ದೇವತೆಗಳಿಗೂ ಪೂಜ್ಯರು; ಅವರು ಅಲ್ಪಮನುಷ್ಯರಲ್ಲೊಬ್ಬರಾಗಿ ಸೇರತಕ್ಕವರಲ್ಲ. ಬ್ರಹ್ಮದೇವನು ದೇವತೆಗಳನ್ನು ಕುರಿತು ಪರಮ ತತ್ತ್ವಜ್ಞಾನಿಯ ಸೇವೆಯೊಂದನ್ನೇ ನೇರಾದ ಜ್ಞಾನಸಾಧನವೆಂದನು.

(೨೨-೩೭) ಶ್ರೀಗುರು ಮೂಲಕ ಬಂದ ಜ್ಞಾನದಿಂದ ಸಮೂಲವಾಗಿ ತನ್ನ ಪಾಪಗಳನ್ನೆಲ್ಲ ತೊಲಗಿಸಿಕೊಂಡ ಮುಮುಕ್ಷುವು ನಿರಾಯಾಸದಿಂದ ಈ ಭವವನ್ನು ತರಿಸುವನು. ಪಾಪನಾಶಕ್ಕೆಂದು ಪ್ರಾಯಶ್ಚಿತ್ತಗಳನ್ನು ಶಾಸ್ತ್ರಗಳಲ್ಲಿ ವಿಧಿಸಿದ್ದರು ಸ್ಥಿರಗೊಂಡ ಪರೋಕ್ಷಜ್ಞಾನದಿಂದ ತೋಱುವ ಜ್ಞಾತಾಜ್ಞಾತ ಪಾಪಗಳನ್ನು ಒಟ್ಟಿಗೆ ಸೇರಿದ ನೂರಾರು ಪ್ರಾಯಶ್ಚಿತ್ತಗಳಿಗೂ ಕಳಿಯುವದಕ್ಕಿರುವದಿಲ್ಲ ಎಂದ ಮೇಲೆ ಪಾಪಗಳ ಭೀತಿಯು ಜ್ಞಾನಿಗಿನ್ನೆಲ್ಲಿ? '**ಈ ಮಹಾದೇವನೇ ಸಮಸ್ತವು, ಆವನು ಅನಾಮಯನು**' ಎಂದು ಗುರುಶಾಸ್ತ್ರ ಯುಕ್ತ್ಯನುಭವಗಳಿಂದ ಬಂದ ಉದ್ದಾಮ ಭಾವನೆಯೇ **ಮಹಾಶಾಂತಿಯು;** ಘಟಿಕಾ ಮಾತ್ರದಲ್ಲಿ ಬಂದರು ಇದರಿಂದ ದುರಿತ ಕೋಟಿಗಳು ಉರಿದುಹೋಗುವವು. ಉಪಾಸನೆಯಿಂದಲೇ ಪಾಪಗಳು ತೊಲಗುವಲ್ಲಿ ಇನ್ನು ನಿರ್ವಿಕಾರಾತ್ಮ ಜ್ಞಾನದಿಂದ ಪಾಪಮೂಲವಾದ ಭವಭೀತಿಯಿರುವದಕ್ಕಿಲ್ಲವೆಂದು ಹೇಳಬೇಕಿಲ್ಲ. ಹೆಚ್ಚು ಹೇಳುವದೇನು? ಶುಭಸಂಸ್ಕಾರಗಳಿಂದ ಚಿತ್ತದ ಅಶುಭ ಸಂಸ್ಕಾರ ತೊಲಗುವಂತೆ, ವಿಚಾರಬುದ್ಧಿಯು ತನಗಿಲ್ಲದೆ ಭಕ್ತಿ ವಿಶ್ವಾಸಗಳಿಂದ ವೇದಾಂತ ವೋದುತ್ತಿದ್ದರು ಪುನಃ ತಲೆಯೆತ್ತುವದಕ್ಕಿಲ್ಲದಂತೆ ಪಾಪಗಳು ಸಮೂಲವಾಗಿ ಕೆಡುತ್ತಿರುವವು. ಅಖಿಲ ವಿಷಯಗಳಲ್ಲಿ ಲೋಲನು, ವಿಶಾಲಭೋಗಗಳಲ್ಲಾಸಕ್ತನಾಗಿದ್ದರೂ ಜ್ಞಾನಬಂದವನು ಮುಕ್ತನೇ. ನುರವನ್ನೇರಿದವನು ನಿಂತ ಕೊನೆ ಮುರಿದರೆ ತನಗಿಚ್ಛೆಯಿಲ್ಲದಿದ್ದರು ಬೀಳುವಂತೆ; ಅಭ್ಯಾಸಾದಿಗಳಿಲ್ಲದ ಸಮ್ಯಗ್ಜ್ಞಾನಿಯು ಮುಕ್ತನೇ ಆಗಿರುವನು.

ಆದ್ದರಿಂದ ಬುದ್ಧಿವಂತನು ವೇದಾಂತವನ್ನೇ ಓದಬೇಕು. ತನ್ನ ಮನಸ್ಸಿಗೆ ಒಗ್ಗಿಸಿಕೊಂಡು ಅದನ್ನೇ ಸೇವಿಸುತ್ತಿದ್ದರೆ, ಶರತ್ಕಾಲದ ಸರೋವರದ ನೀರಿನಂತೆ ಆ ಮನಸ್ಸು ನಿರ್ಮಲತ್ವ ಹೊಂದುವದು. **ಸ್ವತಸ್ಸಿದ್ಧವೂ ತನ್ನ ಪರಮಾರ್ಥವೂ ಆಗಿರುವ ಬ್ರಹ್ಮಾತ್ಮಭಾವವನ್ನು ಕುರಿತಿರುವ ಪೂಜ್ಯ ಅಧ್ಯಾತ್ಮ ಶಾಸ್ತ್ರವು**

ತನಗೆ ಅಪರಿಮಿತ ಪುಣ್ಯಭೂಜವು ಫಲಿಸಿದಲ್ಲದೆ, ಎಲ್ಲರಿಗೂ ಲಭಿಸುವದಕ್ಕಿಲ್ಲವಾದ್ದರಿಂದ ಅದನ್ನು ಬಿಟ್ಟು ಕಾಲವನ್ನು ಕಳೆಯುವದಲ್ಲ! ಲೆಕ್ಕಿಸುವದಕ್ಕಿಲ್ಲದ ವೇದಾಂತ ಗ್ರಂಥಗಳೆಲ್ಲದರ **ಸಾರಸಂಗ್ರಹ ರೂಪದಲ್ಲಿರುವ ವಿವೇಕಾಭರಣವು – ತನ್ನಾತ್ಮ ನಿಧಿಯನ್ನು ಕಾಣಿಸುವ ಸಿದ್ಧಾಂಜನವು;** ಇದರಿಂದ ಜ್ಞಾನಾಮೃತವನ್ನು ಸವಿಯಬಲ್ಲ ಧೀರನು – ತನ್ನ ಹೃದಯದಾಕಾಶದಲ್ಲಿ ಪೂರ್ಣ ಚಂದ್ರನಂತೆ ಪ್ರಶಾಂತನಾಗಿರುವನು. ಅಲ್ಲದೆ, ವಿಮಲಪಾದನು, ಜ್ಞಾನಾಮೃತ ಶರೀರನು, ಸಂಸಾರತಾಪ ಸಂಹರಣನು, ಪ್ರಮಾಣಗಳಿಗೆಲ್ಲ ಪರಮಪ್ರಮಾಣನು, ಭೂಮ್ಯಾಕಾಶಗಳೆ ಅವಯವವಾಗುಳ್ಳ ವಿಭುಶರೀರನು ಆಗಿ, ಒಳಹೊರಗುಗಳಿಲ್ಲದೆ, ಉದಯಾಸ್ತಗಳಿಲ್ಲದೆ, ತನಗೆ ಸಮನಿಲ್ಲದೆ ಮೆರೆಯುವನು. ಈ ಗ್ರಂಥೋಕ್ತ ವಿಚಾರವೆಂಬ ತಿಂಗಳ ಬೆಳಕಿನಲ್ಲಿ ಶಾಂತವಾದ ಸಂಸಾರ ತಾಪದ ಉರಿಬೇಗೆಯಿಂದ ಮುಕ್ತ್ಯಂಗನೆಯೊಡನೆ ಸಮರಸ ಸುಖದಿಂದಿರುವನು. **ಆತನ ಆತ್ಮ ಸುಖದ ಬಾಳಿನ ಮುಂದೆ** ಬ್ರಹ್ಮಾದಿ ದಿವಿಜರ ಭೋಗಗಳೂ ನೀರುಗುಳ್ಳೆಯೆಂತಿರುವವು. ಭೋಗೇಚ್ಛಾ ಜ್ವಾಲೆಯು – ಭುವನ ಪ್ರಾಪ್ತ ಸಕಲ ಭೋಗಕಾಷ್ಠಗಳನ್ನು ತಾನು ಸುಟ್ಟು, ದೇವಾಸುರರಲ್ಲಿಯೂ ನಿಲ್ಲುವದಕ್ಕಿಲ್ಲದ ಅದು ತನ್ನ ಉರಿನಾಲಿಗೆಯನ್ನು ಮುಂದುಮುಂದಕ್ಕೇ ಚಾಚುತ್ತಿರುವದೇ ಕಾಣುತ್ತಿದ್ದರು. ಅದು ತಾನಾಗಿ ನಿಂತಿರುವ ಜ್ಞಾನಿಗಳೇ ನಿತ್ಯಾನಂದರು, ಪರಮೇಶ್ವರರು, ಸುರನರ ದಾನವರಿಗೆಲ್ಲ ಪೂಜ್ಯಪಾದರು! ಪೂರ್ಣ ಕಾಮರು. ಅವರಿಗೆ ಮಾಡಿದ ಸತ್ಕಾರಾದಿಗಳು ವೇದೋಕ್ತ ಕ್ರಿಯೆಗಳ ಪರಮ ಸಾರವು. ದೇವನು ವಿನಯಶೀಲನು ಸಹನಸ್ವಭಾವನು ಶ್ರೋತ್ರಿಯನು ಉಪಾಸಕನು ಪಿತೃದೇವನು ಕೃತಕೃತ್ಯನು ಎಲ್ಲವೂ ಜ್ಞಾನಿಯಲ್ಲದೆ ಬೇರೊಬ್ಬರಲ್ಲ.

೧೮. **ವಸ್ತು ನಮಸ್ಕೃತಿ ನಿರ್ಣಯ** :—(೧–೧೬) ತತ್ತ್ವಜಿಜ್ಞಾಸುಗಳಿಗೆ ವಿವೇಕ ವೈರಾಗ್ಯ ಶಮ ದಮಾದಿ ಷಟ್ಸಂಪತ್ತು ಮುಮುಕ್ಷುತ್ವಗಳಲ್ಲದೆ, ಅಮಾನಾಸ್ತಿಕ್ಯಾದಿ ಗುರುಭಕ್ತಿಗಳೂ, ನಿಷ್ಕಪಟದೊಡನೆ ಸದ್ಗುರು ಸೇವಾದಿಗಳೂ ಅತ್ಯವಶ್ಯವು. ಇಂಥ ಉತ್ತಮಾಧಿಕಾರಿಗಳಿಗೆ ಮೋಕ್ಷ ಶಾಸ್ತ್ರವಲ್ಲದೆ, ಬೇರೊಬ್ಬರಿಗಿರುವದಿಲ್ಲ.

ತನ್ನ ಸ್ವರೂಪಾನುಸಂಧಾನವೆಂಬ ವಸ್ತುನಿರ್ದೇಶಮಂಗಲ ವ್ಯಾಸೋಕ್ತಿಯೆಂತೆ ನಿರೂಪಿಸಲಾಗುವದು. ಯಾವದು ಸಚ್ಚಿದಾನಂದವು, ಸರ್ವಾತ್ಮಕವು, ಜಡಚೇತನ ರೂಪ ಈ ಜಗತ್ತಿಗೆ ಏಕಮಾತ್ರ ಪ್ರಾಣವು, ಮನಯಿಂದ್ರಿಯಗಳ ವ್ಯಾಪಾರಕ್ಕೆ ಹೊರಗಿರುವದು, ದೇಶಕಾಲ ವಸ್ತುಗಳ ಎಲ್ಲೆಕಟ್ಟುಯಿಲ್ಲದ್ದು ತನಗೆ ತೆರೆಮರೆಗಳಿಲ್ಲದ್ದು, ಅನಾತ್ಮ ಧರ್ಮಗಳಾದ ತ್ರಿಗುಣಕ್ಕೂ ಅಜ್ಞಾನ ಕಲ್ಪನೆಗಳಿಗೆಲ್ಲಕ್ಕೂ ಇಂಬೆನಿಸಿದ್ದರು ಅವನ್ನು ಕಡೆಗೊತ್ತಿ ನಿಂತಿರುವದು, ಜೀವಜಗತ್ತುಗಳ ಸಹಜವು, ಯೋಗಸಾಂಖ್ಯಾದಿ ದರ್ಶನಗಳಿಗೆ ತಾನು ಸಿಗದೆ, ಬರಿಯ ಶಬ್ದಶಾಸ್ತ್ರಮಾಡಿ ಅವುಗಳನ್ನು ಹೊರಕ್ಕೆ ದೊಬ್ಬಿ ನಿಂತ ಚಿದಂಬರವು, ಜ್ಞಾನಮಾತ್ರದಿಂದ ಎಲ್ಲವನ್ನು ನುಂಗಿನಿಲ್ಲುವ ಪೂರ್ಣ ಚೈತನ್ಯವು, ಭಾವಸಾಕ್ಷಿಯು, ನಿತ್ಯದ ನಮ್ಮ ಎಚ್ಚರಾದಿ ಅವಸ್ಥೆಗಳೇ ತನ್ನ ಜ್ಞಾನ ದ್ವಾರವಾಗಿರುವದು, ತನ್ನಲ್ಲಿ ಕಲ್ಪಿತವಾದ ಆ ಅವಸ್ಥೆಗಳೊಳಗಿನ ದೃಶ್ಯಗಳ ಗುಣ

ದೋಷಗಳಂಟಿಲ್ಲದ್ದು, ಎಲ್ಲದರ ಇರವು ಅರಿವು ಆನಂದಗಳ ಪರಮಾರ್ಥವಾಗಿರುವ ಆ ಅದ್ವೈತ ತತ್ತ್ವಕ್ಕೆ ನಮಸ್ಕಾರವು. ಜೀವ ಜಗದ್ರೂಪವಾಗಿ ಭೇದದಿಂದ ತೋರುತ್ತಿದ್ದರು ತನ್ನಲ್ಲಿ ಭೇದಗಂಧವಿಲ್ಲದ ನಿರ್ಮಲಚಿತ್ತು, ದುಃಖವಿಲ್ಲದ ಶಿವನು. ಮನಸ್ಸಿಗೆ 'ಇದು' ಎಂದು ಗೋಚರವಿಲ್ಲದ್ದು, 'ನಾನು' ಎಂಬುದರ ಪರಮಾರ್ಥವು, ಭವಾಂಬುಧಿಗೆ ಉತ್ತಾರಕವು, ತನಗೆರಡನೆಯದಿಲ್ಲದ, ಗುರ್ತಿಲ್ಲದ, ಎಲ್ಲದರ ವಾಸ್ತವವು, ವಿಭುವು, ಸ್ವರೂಪದಲ್ಲಿರುವ ನಿಶ್ಚಲಸುಖವು, ತ್ರಿಪುಟಿಗಾಶ್ರಯವು, ಇಂದ್ರಿಯಾಂತಃಕರಣಗಳ ವಿಕಾರವಿಲ್ಲದ ಚಿನ್ಮಾತ್ರವು, ದೃಶ್ಯಕೋಟಿಗಳನ್ನೆಲ್ಲ ಕಡೆಗೊತ್ತಿರುವ ಆತ್ಮತತ್ತ್ವಕ್ಕೆ ನಮಸ್ಕಾರವು. ಇರುವದರಿಂದ ಸತ್ತು, ತನ್ನಲ್ಲಿ ರೂಪಿಲ್ಲದ್ದರಿಂದ ಶೂನ್ಯ, ಭಾಸಕಗಳಿಗೆಲ್ಲ ಪರಮ ಭಾಸಕ, ಸುರನರಾದಿಗಳಲ್ಲಿ ಹಂಸಾಕ್ಷರವನ್ನು ಉಚ್ಚರಿಸುತ್ತ ಜೀವನು, ನಿರ್ಮಲಾಂತಃಕರಣದಲ್ಲಿ ವಿಚಾರದ ಕಡೆತದಿಂದ ಮೇಲೆದ್ದು ತೇಲುವ ಅನುಭವದಲ್ಲಿ 'ನಾನೇ ನೀನು' 'ನೀನೇ ನಾನು' ಎಂದು ತನ್ನಾತ್ಮನಲ್ಲಿ ಸಮರಸದಿಂದ ಬೆಳಗುವ ಅನಾದಿ ನಿತ್ಯಾದ್ವೈತ ಸ್ವರೂಪಕ್ಕೆ ಹೃದಯಪೂರ್ವಕ ನಮಸ್ಕಾರವಾಗುತ್ತಿರಲಿ. ಯಾವದರ ಜ್ಞಾನಬಂದರೆ ತಮ್ಮ ಶರೀರೇಂದ್ರಿಯ ಮನಬುದ್ಧ್ಯಾದಿ ಅನಾತ್ಮವರ್ಗಗಳೂ ಕೂಡ ಚೈತನ್ಯಮೂರ್ತಿಯ ದೇವರೆಂದೆ ಮನಗಾಣುವರೋ, ಎಚ್ಚರಾದಿ ಅವಸ್ಥೆಗಳೂ ಅವುಗಳಲ್ಲಿನ ದೃಶ್ಯಗಳೂ ಜೀವಜಡಗಳೂ ಭೋಕ್ತೃಭೋಗ ಸಾಧನಗಳೂ ಎಲ್ಲವೂ ಆಗಿ ತೋರಿಕೊಳ್ಳುತ್ತಿದ್ದರೂ ತನ್ನ ಜ್ಞಾನಮಾತ್ರದಿಂದ ಎಲ್ಲವನ್ನೂ ನುಂಗಿ ನಿಮಿಷಾರ್ಧದಲ್ಲಿ ತಾನಾಗಿಯೇ ನಿಲ್ಲುವ ಅನಾತ್ಮ ಮಲವರ್ಜಿತವಾದ ಆ ನಿಷ್ಪ್ರಪಂಚ ಬ್ರಹ್ಮಾತ್ಮ ತತ್ತ್ವಕ್ಕೆ ಮರಮರಳಿಯೂ ನಮಸ್ಕಾರವು ಹೊಂದಲಿ. ಜ್ಞಾನದ ಅನನ್ಯ ಪ್ರೇಮ ಭಕ್ತಿಪೂರ್ವಕದಿಂದ ತನ್ನ ಸ್ವರೂಪಕ್ಕೆ ಮಾಡುವ ನಮಸ್ಕಾರಾದಿ ಪೂಜೋಪಚಾರಗಳಿಂದ ತನ್ನಾತ್ಮನನ್ನು ಸೇವಿಸುವದನ್ನೇ ಕೆಲರು – ಶಿವ, ನಮಃ ಎಂಬ ಪದಗಳಿಂದಲೂ ಉಪಾಸಿಸಿ ಭಕ್ತಿಯಿಂದ ಅವನನ್ನು ಭಜಿಸಲು ಇಚ್ಛಿಸುತ್ತಿರುವರು.

(೧೭–೨೩) ಜ್ಞಾನಿಯ ನಮಸ್ಕಾರಾದಿ ಪೂಜೆಗಳು ಹೊರಗಡೆ ಹೊಂದುವದಕ್ಕಿರುವದಿಲ್ಲವಾದ್ದರಿಂದಲೂ, ತನಗೆ ತಾನು ಆಚರಿಸುವದಕ್ಕಿಲ್ಲದ್ದರಿಂದಲೂ ಅದು ಹೊಂದುವದಿಲ್ಲವಲ್ಲ? ಎಂದರೆ, ನಿಜ; ಆ ಜ್ಞಾನಿಯಲ್ಲಿರುವ ಚಿತ್ತಕ್ಕೆ ಹೊರಗಡೆಯಲ್ಲಿನ ವಿಗ್ರಹಾದಿಗಳನ್ನು ಸೇವಿಸುವದಕ್ಕಿರುವದಿಲ್ಲವಾದರು ತನ್ನ ಶರೀರದೊಳಗೆ ದೇವರಿಲ್ಲದೆ ಇಲ್ಲ; ಆದ್ದರಿಂದ ಅವರ ಆರಾಧನೆಯಲ್ಲಿ ಅನೌಚಿತ್ಯವೇನೂ ಕಾಣುವದಿಲ್ಲ. ಕಾಷ್ಠ ಶಿಲಾ ಮೃಲ್ಲೋಹಾದಿಗಳ ವಿಕಾರಗಳಲ್ಲಿಯೂ ಸೂರ್ಯವಹ್ನಿ ಜಲಾದಿಗಳಲ್ಲಿಯೂ ಮೂಢರಿಗೆ ದೇವರಿರುವದು ನಿಜವಾದರೆ, ಪರಿಚ್ಛಿನ್ನತ್ವದ ಅಳತೆಯಿಲ್ಲದ ಅವನು ಜ್ಞಾನ ಬಂದವರಿಗೆ ತಮ್ಮ ಶರೀರದಲ್ಲಿಯೂ ಇರುವನೆಂಬುದು ಅಸಮಂಜಸವೇನೂ ಆಗುವದಿಲ್ಲ. '**ಜೀವರೂಪದಿಂದ ಎಲ್ಲರ ಶರೀರಗಳಲ್ಲಿಯೂ ಹೃದಯದೇಶದಲ್ಲಿ ಸ್ವಯಂಪ್ರಕಾಶದಿಂದಿದ್ದು, ಆ ಶರೀರೇಂದ್ರಿಯಾಂತಃಕರಣಗಳನ್ನು ಚೇತನ ಪಡಿಸುತ್ತಿರುವ ತನ್ನಾತ್ಮನೇ ಮಹಾದೇವನು**' ಎಂಬುದು ಶ್ರುತ್ಯನುಭವ ಸಮ್ಮತವು ತಾನು ಪರಮಾತ್ಮ ಸ್ವರೂಪದಲ್ಲಿ ನಿಂತು, ಜಡಚೇತನರೂಪ ಜಗತ್ತನ್ನು ಚಿನ್ಮಯ ಬ್ರಹ್ಮವನ್ನಾಗಿ ಜ್ಞಾನದಿಂದ ಮಾಡಿಕೊಂಡು ತನ್ನ ಸಹಿತ ಸರ್ವವನ್ನು

ಬ್ರಹ್ಮವೆಂದು ಕಾಣುವ ಜಗನ್ಮಂಗಲಕರವಾದ ಶುಭದೃಷ್ಟಿಯುಳ್ಳ ಜ್ಞಾನಿಗಳಿಗೆ– ಅಸತ್ತು ಜಡದುಃಖಗಳ ಹೊದಿಕೆಯುಳ್ಳ ವಿಗ್ರಹಾದಿಗಳಲ್ಲಿ **ಸ್ವಯಂಪ್ರಕಾಶರೂಪ ವಾದ ದೇವರ ಚೇತನತ್ವ ತೋರದಿದ್ದರೂ ಆತ್ಮರೂಪದಿಂದ ಸಾಕ್ಷಾತ್ಪರಮ ಶಿವನೇ ತಮ್ಮ ಹೃದಯದಲ್ಲಿ ಸದಾ ಆರಾಧ್ಯನಾಗಿರುವನು.** ಇದು ನಿಜವಾದರೂ ಎಲ್ಲರಿಗೂ ಎಟುಕುವದಲ್ಲ. ಆದ್ದರಿಂದ ತಂತಮ್ಮ ಅಂತಸ್ತನ್ನನುಸರಿಸಿದ ಶ್ರೇಯ ಸ್ಕಾಮಿಗಳಿಗೆ ಹೊರಗಿನ ಆರಾಧನಾದಿ ಸಾಧನಗಳು ಅತ್ಯವಶ್ಯವೆಂದು ಹೇಳಬೇಕಿಲ್ಲ.

'ನಿರಾಕಾರನು ದಿಕ್‌ದೇಶಕಾಲ ವಸ್ತುಗಳ ಪರಿಚ್ಛೇದವಿಲ್ಲದವನು, ಕಡಿವಡಿಯ ದಂತೆ ಜಡಚೇತನಗಳಲ್ಲೆಲ್ಲ ಇರುವವನು ಒಬ್ಬನೇ ದೇವನು' ಎಂಬುದಕ್ಕೆ ಸಂಶಯವೇ ಇರುವದಿಲ್ಲ. ಕೃತಯುಗದಲ್ಲಿ ಮನುಷ್ಯರು ತಮ್ಮನ್ನು ಬಿಟ್ಟು ಬೇರೆ ದೇವರನ್ನು ಆರಾಧಿ ಸುತ್ತಲೂ ಇರಲಿಲ್ಲ. ದೇವರನ್ನು ಬಿಟ್ಟು ಬೇರೊಂದು ಕಾಣುವದಕ್ಕೆ ನಮಗಿರುವದೂ ಇಲ್ಲ. ಇದೆಲ್ಲ ನಿಜವಾಗಿದ್ದರೂ ನಮ್ಮ ಪಾಲಿಗೆ ಅದು ದೂರವಾಗಿಬಿಟ್ಟರುತ್ತದೆ! ಭೋಗವಾಸನೆಗಳೂ ರಾಗದ್ವೇಷಾದಿ ಬಗೆಬಗೆಯ ಚಿತ್ತದೋಷಗಳೂ ನಮ್ಮಲ್ಲಿ ಬಂದು ನೆಲಸಿದ್ದರಿಂದ ಸ್ವಭಾವದಿಂದ ನಮಗೆಲ್ಲ ಇದ್ದ ಆರಾಧ್ಯದ ಮೇಲ್ಮಟ್ಟವು ನಮ್ಮನ್ನು ಬಿಟ್ಟುಹೋಗಿರುತ್ತದೆ. ಜಗತ್ತಿನ ಜೀವರನ್ನೆಲ್ಲ ಪಶುಗಳಿಗೆ ಸರಿಹೋಲಿಸಿ ಮಾನವತ್ವ ವನ್ನು ಹಾಳುಮಾಡುವ ಭೋಗವಾಸನೆಗಳಿಗೆ ಸಿಕ್ಕಿ ತೂಗುಬಿದ್ದಿರುವ ನಾವು ಸ್ವಭಾವ ಸಿದ್ಧ ನಮ್ಮ ದೈವತ್ವದಿಂದ ಕೆಳಕ್ಕೆ ಇಳಿದುಬಿಟ್ಟರುತ್ತೇವೆ ಎಂಬುದಕ್ಕಿನ್ನು ಸಂಶಯ ವಿರುವದೇ ಇಲ್ಲ. **ಕತ್ತಲೆ ಬೆಳಕುಗಳಂತೆ ತೀರ ವಿಲಕ್ಷಣ ಸ್ವಭಾವದ ಆತ್ಮಾ ನಾತ್ಮಗಳನ್ನು ಒಂದರೊಳಗೊಂದು ಅವಿವೇಕದಿಂದ ಮಾಡಿಕೊಂಡಿರುವ ಅಧ್ಯಾಸದ ಕೋಡಿಯನ್ನು** ಪೂಜ್ಯರಾದ ಸದ್ಗುರುಗಳಲ್ಲಿ ಗುರು ಶುಶ್ರೂಷಾದಿಗಳಿಂದ ತಾನು ಪ್ರಯತ್ನಿಸಿದ್ದರಿಂದ ಕಳಚಿಕೊಂಡಲ್ಲದೆ, ಆ ದುಷ್ಟವಾದ ಭೋಗವಾಸನೆಗಳು ತನ್ನನ್ನು ಬೆಂಬಿಡುವದಕ್ಕಿರುವದಿಲ್ಲವಾದ್ದರಿಂದ ಮೊದಲು ಜಿಜ್ಞಾಸುವು ಅವನ್ನು ಪರಿ ಹರಿಸಿಕೊಂಡು ನಿಗ್ರಹಿಸಿದ ತನುಕರಣ ಚಿತ್ತಾದಿಗಳ ಉಪಶಾಂತಿಯಿಂದ ಹೊರಗಡೆ ಯಲ್ಲಿ ಎಲ್ಲೂ ಹುಡುಕುವದಕ್ಕಿಲ್ಲದ '**ತನ್ನ ಪರಮಾರ್ಥ**'ವನ್ನು ತನ್ನ ಹೃದಯ ದಲ್ಲಿಯೇ ವಿಚಾರಾನುಭವಗಳಿಂದ ಮನಗಂಡು ಸುಖದಿಂದಿರಬಹುದು.

(೨೪–೪೫) ಈ ರೀತಿಯಿಂದ ವಿನೀತನಾಗಿ ಗುರುಗಳಿಂದ ತನ್ನಾತ್ಮ ತತ್ತ್ವವನ್ನು ತಿಳಿದು ತನ್ನ ಹೃದಯಕ್ಕಿಳವಡಿಸಿಕೊಂಡ ಮನುಷ್ಯನು ಕೃತಾರ್ಥನು. ಚೇತನಬ್ರಹ್ಮ ಶರೀರರಾದ ಗುರುಗಳು ಕೈವಿಡಿದ ತಮ್ಮ ಶಿಷ್ಯರ ಹೃದಯದಲ್ಲಿಯೂ ತಮ್ಮ ಸ್ವರೂಪ ವನ್ನು ಸ್ಥಾಪಿಸಿಕೊಟ್ಟು, ತಮ್ಮಂತೆ ಮಾಡಿಕೊಳ್ಳದೆ ಎಂದಿಗೂ ಅವರನ್ನು ವಂಚಿಸು ವವರಲ್ಲ. '**ಜ್ಞಾನಸರ್ವಸ್ವ ಸಂಗ್ರಹ**' ಎಂಬ ಗ್ರಂಥವನ್ನು ಪರಹಿತಮತಿಯಿಂದ ಕನ್ನಡಿಸಿ ಬರೆದ '**ಕೃಷ್ಣ ರಾಜಶೇಖರನು**' ಸತ್ಯಕ್ಕಾಗಿ ತನ್ನ ಪ್ರಾಣಗಳನ್ನು ಧರಿಸಿ ಜೀವಿಸಿಕೊಂಡಿರುವ ಶಿವಭಕ್ತನು. ಈ ಅಧ್ಯಾತ್ಮ ಗ್ರಂಥವನ್ನು ನೋಡುವವರಿಗೆ ಪುಣ್ಯ ಕರ್ಮಗಳ ಎಲ್ಲಾ ಫಲಗಳೂ ದೊರೆಯುವವು, ಶಿವಂಕರನಾದ ಶ್ರೀ ಶಂಕರನು ಆತ್ಮ ಜ್ಞಾನವನ್ನನುಗ್ರಹಿಸುವನು.

ಓಂ ತತ್ ಸತ್

ಓಂ ತತ್ ಸತ್

॥ ಶ್ರೀ ಗಣಪತಿ ಶಾರದಾ ಗುರುಭ್ಯೋ ನಮಃ ॥

# ವಿವೇಕಾಭರಣ ಕಾವ್ಯಂ

## ಪೀಠಿಕಾ ಒಂದನೆಯ ಸಂಧಿಯು.

ಶ್ರೀಕರಂ ಭಕ್ತರ್ಗೆನಿಪುದಂ ।
ಸ್ವೀಕರಿಸಲಧ್ಯಾಸದಿಂದೇ ।
ಲೋಕದೊಳ್ಜೀವರಿಗೆ ಬಂದುದು ಬಂಧ ವೆಂತೆಂದು ॥
ಶೋಕ ಮೋಹಂ ಗಳಿಗಹಂಕೃತಿ ।
ಯಾಕರ ಮದಕ್ಕೊಡೆಯ ನಾಗಿ ವಿ ।
ವೇಕಿ ಗಳಿಗಿದ ನೈದಿಸದ ಶಿವ ನೆಮ್ಮ ರಕ್ಷಿಸುಗೆ ॥೧॥

---

### ಶ್ರೀ ಚಂದ್ರಮೌಳೀಶ್ವರಸ್ವಾಮಿ ಪ್ರಸನ್ನ

ಶ್ರೀ ಪರಮೇಶ್ವರ ಪ್ರಾಸಾದಿಕ ತತ್ತ್ವಾರ್ಥ ಸಂದರ್ಶಿನಿ ಎಂಬ ಟೀಕೆಯು :—

೧. ಶ್ರೀಕರಂ—ಶುಭಮಂಗಳವನ್ನು ಭಕ್ತರಿಗೆ ಉಂಟುಮಾಡುವವನು ಎನಿಪುದಂ—ಎಂಬುದನ್ನು ಶಿವನು ಸ್ವೀಕರಿಸಲ್—ಸ್ವೀಕರಿಸಿದರೆ ಈ ಮೊದಲೆ ಜೀವರಲ್ಲಿ ಸಂಸಾರವೆಂಬ ಅನರ್ಥವು ಅಧ್ಯಾಸದಿಂದೇ—ತಾನಲ್ಲದ ದೇಹೇಂದ್ರಿಯಗಳೆಂಬ ಅನಾತ್ಮ ರಾಶಿಯನ್ನೆಲ್ಲ ತಾನೆಂದು, ತನ್ನ ಮೈಮೇಲೆ ಎಳೆದುಕೊಂಡಿರುವುದರಿಂದಲೇ ಬಂದುದು.—ಸಂಸಾರ ಬಂಧವು ಬಂದಿರುವುದು ಎಂತೆಂದು—ಅದು ಹೇಗೆಂದರೆ ಶೋಕಮೋಹಂಗಳಿಗೆ—ಶೋಕಮೋಹಗಳೆಂಬ ಸಂಸಾರ ಅನರ್ಥಗಳಿಗೆಲ್ಲ ಅಹಂಕೃತಿ ಯಾಕರಂ—ಮೇಲೆ ಹೇಳಿದ ಅನಾತ್ಮಾಭಿಮಾನ ವೊಂದೇ ಬಂದು ಆಗರ—ಉತ್ಪತ್ತಿಯ ಮೂಲಸ್ಥಾನವು, ವಿವೇಕಿಗಳಿಗೆ+ಇದನು+ಐದಿಸದ–ಈ ಅಹಂಕಾರವನ್ನು ಸಂಬಂಧ ಪಡಿಸದ ಅದಕ್ಕೊಡೆಯನಾಗಿರುವ ಶಿವ—ನಿತ್ಯಮಂಗಳ ಸ್ವರೂಪನಾದ ಪರಮಾತ್ಮನು ಎಮ್ಮನು—ನಮ್ಮನ್ನು ರಕ್ಷಿಸುಗೆ—ಕಾಪಾಡಲಿ. ಭವ, ಮೃಡ, ಹರ–ಎಂಬ ನಾಮಗಳು ಸತ್ತ್ವಾದಿ ಗುಣಗಳನ್ನೂ ಸೃಷ್ಟ್ಯಾದಿ ಕರ್ಮಗಳನ್ನೂ ಹೇಳಿದರು, ಶಿವ–ಎಂಬುದು ಮಾತ್ರ ಶುದ್ಧ ಸ್ವರೂಪವನ್ನೇ ಕುರಿತು ಹೇಳುವುದು.

ತಾತ್ಪರ್ಯ:— ಶ್ರೀ ಶಿವನು ಭಕ್ತರಿಗೆ ಶ್ರೀಕರ–ಶುಭಕರನೆಂಬ ಬಿರುದನ್ನು ಸ್ವೀಕರಿಸಲಾಗಿ ತನ್ನ ಭಕ್ತರಲ್ಲಿರುವ ಸಂಸಾರ ಬಂಧವೆಂಬ ಅಶುಭತ್ವವು ಕೇವಲಾಧ್ಯಾಸ ದಿಂದಲೇ ಮೈಗಟ್ಟಿದ ಹುಸಿತೋರಿಕೆಯ ಸ್ವರೂಪವು. ಈ ಶೋಕ ಮೋಹ ರೂಪ ಸಂಸಾರ ದುಃಖವಾದರೂ ತಾನಲ್ಲದ ಶರೀರೇಂದ್ರಿಯಗಳಲ್ಲಿ "ನಾನು" ಎಂಬ

ಏಸು ಸಂಸೃತಿಯೊಳಗೆ ತೊಳಲಿದ ।
ರೈಸು ಕೈಯೆಣ್ಣೆಯ ತೆರದಿ ದು।
ರ್ವಾಸನೆಗಳಂಟುವವು ಬಿಡದಂತಃಕರಣ ಕದರಿಂ ॥
ಮೋಸ ಮಪ್ಪುದು ಚಿತ್ತಮೆಂದದ।
ನೋಸರಿಸದಧಿಕರಿಸಿ ಮೆರೆವಾ ।
ವಾಸುದೇವಂ ತತ್ಪರಿ ಪಾಕವನು ನೆರೆ ಗೈಗೆ ॥ ೨ ॥

ತಿಳಿದ ರುಂಟಖಿಲಾರ್ಥ ಸಿದ್ಧಿಯ ।
ದುಳಿದುಮಿರೆ ಕೈಸೇರ ದೊಂದದ ।
ರೊಳಗೆ ಫಲ ವದಕಾಲಯಂ ಮತಿ ನೋಡಲದರೊಳಗೆ ॥
ಮಲಿನವೇ ಸಂದೇಹ ವದನೇ ।
ತುಳಿಯೆ ಸದ್ಗತಿ ಯೆಂದದಂ ಸ।
ದ್ಬಲದಿ ನಾಳಿದ ಜಲಜಭವ ನೆಮಗೀಗೆ ನಿಶ್ಚಯವಂ ॥ ೩ ॥

---

ಅಧ್ಯಾಸರೂಪ ಅಹಂಕಾರವನ್ನವಲಂಬಿಸಿಕೊಂಡಿರುವುದು. ಆಯಿಾಯಹಂಕಾರ ಕ್ಕೊಡೆಯನಾದ ಶಿವನು—ಆತ್ಮನನ್ನು, ಅಹಂಕಾರರೂಪ ಅನಾತ್ಮವನ್ನೂ ಒಂದರಿಂ ದೊಂದು ವಿಚಾರದಿಂದ ವಿವೇಕಿಸಿ ವಿಂಗಡಿಸಿಕೊಂಡು ತಿಳಿದುಕೊಂಡಿರುವ ವಿವೇಕಿ ಗಳಿಗೆ ಮಾತ್ರ ಈ ಅನಾತ್ಮದ ಒಟ್ಟಿನ ರಾಶಿಯಾದ ಅಹಂಕಾರವನ್ನು ಪುನಃ ತನ್ನಲ್ಲಿ ತಲೆಯೆತ್ತದಂತೆ ಸಂಪೂರ್ಣ ತೊಲಗಿಸುವ ಶಿವನು ನಮ್ಮನ್ನು ರಕ್ಷಣೆ ಮಾಡಲಿ.

೨ ಏಸುಸಂ....ಐಸು—ಸಂಸಾರದಲ್ಲಿ ತೊಳಲಿದಷ್ಟೂ ಹರಳೆಣ್ಣೆಯಲ್ಲಿ ಕೈಬಳಸಿ ದಂತೆ ಮೋಸಂ+ಅಪ್ಪುದು—ಆತ್ಮ ವಂಚನೆಯೆ ಆಗುವುದು, ಓಸರಿಸದೆ—ಪಕ್ಕಕೆ ಸರಿಯದೆ ಅಧಿಕರಿಸಿ—ಬಿಡದಂತೆ ಹಿಡಿದುಕೊಂಡು ಮೆರೆವ—ಅಧಿದೇವತೆಯಾಗಿ ಶೋಭಿಸುವ ತತ್—ಆ ಚಿತ್ತಕ್ಕೆ ಪರಿಪಾಕವನು ಆತ್ಮ ವಿಚಾರದಲ್ಲಿ ನಿಪುಣತೆಯನ್ನು ನೆರೆಗೈಗೆ—ಚೆನ್ನಾಗಿ ಮಾಡಿ ಕೊಡುವವನಾಗಲಿ.

೩ ತಿಳಿದರೆ....ಸಿದ್ಧಿಯು—ಬುದ್ಧಿಯು ಗುರು ಶಾಸ್ತ್ರಗಳಿಂದ ತಿಳುವಳಿಕೆಯನ್ನು ಮಾಡಿಕೊಂಡರೆ, ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ಫಲಗಳೆಲ್ಲವುಂಟು. ಅದು+ ಉಳಿದು ಮಿರೆ—ತಿಳಿಯುವುದನ್ನು ಬಿಟ್ಟಿರಲು ಅದಕೆ+ಆಲಯಂ ಮತಿ—ಬುದ್ಧಿಯು ಅವುಗಳೆಲ್ಲಕ್ಕೂ ನೆಲೆಮನೆಯಂತಿರುವುದು ಮಲಿನವೆ—ಬುದ್ಧಿಯಲ್ಲಿರುವ ಕೊಳೆ ಯೆಂಬುದೆ ಜಲಜಭವ—ಚತುರ್ಮುಖನು ಎಮಗೆ+ಈಗೆ—ನಮ್ಮ ಬುದ್ಧಿಗೆ ನಿಶ್ಚಯ ವನ್ನು ಕೊಡಲಿ.

ಎತ್ತಲೀ ಮನ ಪೆಳಸುವುದು ಬಿಡ।
ದತ್ತಲಖಿಲೇಂದ್ರಿಯ ಚಯಂ ಗಳಿ।
ವೊತ್ತರಿಸುವವು ಮೇಣಿದರ ದೆಸೆಯಿಂದ ವಿಷಯ ರುಚಿ॥
ಪತ್ತುವುದು ಜಂತುಗಳಿಗೆಂದದ।
ನೊತ್ತಿಯಾಳ್ದಮೃತಾಂಶು ವಮೃತವ।
ನಿತ್ತು ಸಂರಕ್ಷಿಸುಗೆ ನಮ್ಮನು ಪೂರ್ಣಭಾವದಲಿ ॥೪॥

ಕಾಣದಿದೊರ್ಡ ಪೈದುವುದು ಮನ।
ದೇಣಿಕೆಗೆ ವಿಷಯಂಗಳೀ ಘನ।
ವಾಣಿಯಿಂ ಲೌಕಿಕರ ನದ ನೊಳ ಕೊಂಬುದೀ ಕರ್ಣಂ॥
ಮಾಣದೀ ಕರ್ಣಂಗಳಂ ಸ।
ಪ್ರಾಣಿಸುವ ದಿಗ್ದೇವಿ ಯರ್ಸಂ।
ತ್ರಾಣನಂ ಮಾಳ್ಕೆಮ್ಮ ವಿಶ್ರುತ ಗುರು ವಚನ ತತಿಯಂ ॥೫॥

ಅನುಭವಿಸಿದನುಕೂಲ ವಿಷಯದ।
ನೆನಹಿನಿಂ ಪೊಣ್ಮುವುದು ಹರುಷವ।
ದನುಸರಿಸ ಲಾಗುವುದು ರೋಮಾಂಚನ ವದಂ ಬಿಡದೆ॥

---

೪ ಎತ್ತಲೀ....ಸುವುದು—ಈ ಮನಸ್ಸು ಬಯಸಿದ ವಿಷಯವನ್ನೆ ಕುರಿತು ಬಿಡದೆ+ಅತ್ತ+ಅಖಿಲೇಂ....ಗಳು+ಇವು+ಒತ್ತರಿಸುವವು—ಇಂದ್ರಿಯಗಳೆಲ್ಲವೂ ನೂಕುತ್ತ ಹೋಗಿ ಸೇರಿಕೊಳ್ಳುತ್ತಿರುವವು ಮೇಣ್+ಮತ್ತು, ಪತ್ತು (ಹತ್ತು) ವದು—ಅಂಟು, ಹಿಡಿದುಕೊಳ್ಳುವುದು. ಜಂತು—ಜೀವರುಗಳಿಗೆ, ಅದನು—ಮನಸ್ಸನ್ನು ಒತ್ತಿ—ಅಮುಕಿ ಹಿಡಿದು ಆಳ್ದ—ಆಳುತ್ತಿರುವ ಅಮೃತಾಂಶು—ಚಂದ್ರನು ಅಮೃತ ವನು—ನಿತ್ಯಸುಖದಕಡೆ ನಮಗೆ ಮನಸ್ಸು ತಿರುಗುವಂತೆ ಮಾಡಲಿ.

೫ ಕಾಣದೆ+ಇದೊರ್ಡಂ+ಐದುವುದು—ಬಂದು ಸೇರಿ ಹೊಂದಿಕೊಳ್ಳುವುದು ಮನದ ಏಣಿಕೆಗೆ—ಆಲೋಚನೆಗೆ ವಿಷಯಂಗಳು+ಈ ಘನವಾಣಿಯಿಂ—ಮಾತು ಗಳಿಂದ, ಲೌಕಿಕರನದನು+ಒಳಗೊಂಬುದು+ಈ ಕರ್ಣಂ—ಜನರಿಗೆ ಬಿಡದೆ ಕೇಳಿಸು ವುದು ಮಾಣದೆ—ಬಿಡದೆ ಈ ಕರ್ಣಗಳನ್ನು ಸಪ್ರಾಣಿಸುವ—ಚೇತನ ಕೊಟ್ಟು ಪ್ರೇರಿಸುವ ದಿಗ್ದೇವಿಯರ್—ದಿಗ್ದೇವತೆಗಳು ಸಂತ್ರಾಣನಂ+ಮಾಳ್ಕೆ—ಒಳ್ಳೆಯ ನೆನಪಿನ ಬಲವನ್ನು ಕೊಡಲಿ ಎಮ್ಮ ವಿಶ್ರುತ—ನಾವು ಗುರುಗಳಿಂದ ಕೇಳಿದ ಉಪ ದೇಶ ವಚನಗಳ ತತಿಯಂ—ಸಮೂಹವನ್ನು

೬ ಪೊಣ್ಮುವುದು—ಹೊಮ್ಮು, ಉಂಟಾಗುವುದು. ಸಮ್ಮುಕ್ಕು+ಇನನೆನಿಪ–

ತನ ತೆನಗೆ ವರ್ತಿಸುವ ಸಮ್ಮ್ರ ।
ಕ್ಕಿನ ನೆನಿಪ ವಾತೂಲ ದೇವಂ ।
ಜನ ಕೊಡರ್ಚುಗೆ ದುಷ್ಟ ಸಂಸರ್ಗದ ವಿಯೋಗವನು ॥ ೬ ॥

ಆಲಿ ಯಾಡಿದ ರಾಡುವುದು ಮನ ।
ದೇಳಿಗೆಯು ಮೇಣೀ ಶರೀರದೆ ।
ಕಾಲ ಚಕ್ರ ಭ್ರಮಣಮೇ ಮಾನಸದ ಸಂಚಾರಂ ॥
ಆಲಿಯಂ ಬಿಡದಾಳಿದ ನ ಹ ಸು ।
ರಾಲಯೋತ್ತಮ ರತ್ನ ಮಸ್ತಕ ।
ಮೌಳಿ ಮಣಿ ದಿನ ಮಣಿ ಯೊಡರ್ಚುಗೆ ನಮಗೆ ಸುಸ್ಥಿತಿಯಂ ॥ ೭ ॥

ಕಾರ ಕೈಯ್ಯುಪ್ಪೊಗರು ಸೀಯ್ಪುಳಿ ।
ಯಾರ ದಿಪ್ಪ ಪದಾರ್ಥಗಳ ಬಿಡ ।
ದೋರು ಗುಡಿಸುವ ರುಚಿಯು ನೆನಹಿಗೆ ತರುವ ರಸನೆಯನು ॥
ಮೀರ ದಾಳುವ ವರುಣ ನೆಮ್ಮ ಶ ।
ರೀರ ಪೋಷಣ ಕಾಗ ಬೇಕೆಂ ।
ದೀ ರುಚಿಗಳಂ ಬಯಸದಂತೆ ಪೊರೆವುದು ದಯೆಯಿಂದ ॥ ೮ ॥

---

ಚರ್ಮಕ್ಕೊಡೆಯನಾದ ವಾತೂಲ—ವಾಯುದೇವನು, ಜನಕೆ ಒಡರ್ಚುಗೆ—ತಗಲುವಂತೆ, ಕೈ ಕೂಡುವಂತೆ ಮಾಡಲಿ ದುಷ್ಟ—ದುರ್ವಿಷಯಗಳ ಸಂಸರ್ಗದ+ ವಿಯೋಗ—ಸಂಬಂಧನ್ನು ನಮಗೆ ತಪ್ಪಿಸಲಿ.

೭ ಆಲಿ—ಕಣ್ಣುಬಿಟ್ಟು ಆಡಿದರೆ—ತಾನು ಚಲಿಸಿದರೆ ಮನದ+ಏಳಿಗೆ—ಮನಸ್ಸಿನ ಚಲನೆಯು ಆಡುವುದು—ನಡೆಯುವುದು ಮೇಣ್+ಈ ಶರೀರದೆ–ಮತ್ತು ಈ ಶರೀರದಲ್ಲಿ ನಡೆಯುವ ಮನಸ್ಸಿನ ಚಲನೆಯೆಂಬುದೆ ಕಾಲಚಕ್ರದ ಭ್ರಮಣವೇ—ತಿರುಗಾಟವಾಗಿರುವುದು. ಆಲಿಯಂ+ಬಿಡದೆ+ಆಳಿದ—ಬಿಡದಂತೆ ಕಣ್ಣುಗಳಿಗೆ ಒಡೆಯನಾಗಿರುವ ಸುರಾ....ರತ್ನ—ದೇವತೆಗಳ ವಾಸಸ್ಥಾನವಾದ ಆಕಾಶಕ್ಕೆ ಶ್ರೇಷ್ಠವಾದ ಒಡವೆಯಂತೆ ಒಪ್ಪುತ್ತಿರುವ. ಮಸ್ತಕಮೌಳಿಮಣಿ—ಮುಕುಟದ, ಕಿರೀಟದ ರತ್ನಪ್ರಾಯನು. ದಿನಮಣಿ—ಹಗಲಿನ ರತ್ನನೂ ಆಗಿರುವ ಸೂರ್ಯನು ನಮಗೆ ಒಡರ್ಚುಗೆ—ಕುಶಲವನ್ನು ಮಾಡಲಿ.

೮. ಕಾರ ಕಹಿ ಉಪ್ಪು ಒಗರು ಸೀ ಹುಳಿ ಎಂಬೀ ರಸಗಳಲ್ಲಿ ಓರು–ಕ್ರಮದಿಂದ ಅಥವಾ ಇದ್ದಕ್ಕಿದ್ದಂತೆ ಅವುಗಳ ಸವಿಯನ್ನು ಕುಡಿಸುವ ನೆನಹಿಗೆ–ನೆನಪಿಗೆ ರಸನೆ–ನಾಲಿಗೆಯನ್ನು ಮೀರದೆ—ಬಿಡದಂತೆ ಆಳುವ

ಪರಿಮಳವ ದೆಶೆಯಿಂದ ತೋಷಿಪು ।
ದಿರದೆ ದುರ್ಗಂಧವಲಿ ದೂಷಿಪು ।
ದುರವಣಿಸಿ ನಾನಾ ಪದಾರ್ಥಂಗಳ ನವರ ದೆಶೆಯಿಂ ॥
ಅರಿವಿಗೈದುವುದೊಡನೆ ಮಾಂದ್ಯಂ ।
ಭರದಿ ಘ್ರಾಣವಿದಕ್ಕೆ ಪತಿಯಾ ।
ದುರು ನಿಲಿಂಪ ಭಿಷಗ್ವರರ್ಪಾಲಿಸುಗೆ ನಮ್ಮಿಂದು ॥ ೯ ॥

ನುಡಿಗೆ ಸತ್ವಂ ಬೆರಸಲಖಿಲ ।
ಕ್ಕೊಡಲಹುದು ಸುಖ ಕದುವೆ ತಾಮಸ ।
ವೊಡ ವೆರೆಯೆ ದುಃಖಕ್ಕೆ ಕಾರಣಮಹುದಿದಂ ಬಿಡದೆ ॥
ನಡೆಸುವೊಡೆ ಯುಸಿರಿದಕೆ ಸತ್ವವೆ ।
ಪೊಡೆಯೊಳಿರು ವಿಂಗಳ ನಿವ ಕ್ಕುರೆ ।
ಯೊಡೆಯನಾದೀ ವಹ್ನಿಯಾಲಸ್ಯವಸು ಖಂಡಿಸಲಿ ॥ ೧೦ ॥

ಜಂತು ರಾಶಿಗೆ ಪುಣ್ಯದಿಂದೇ ।
ಸಂತ ತಾರ್ತರ ಪೊರೆವ ಸಾಮು ।
ರ್ಥ್ಯಂ ತೊಲಗದೈದುವದದಕ್ಕುಪಕರಣವೀ ಪಾಣಿ ॥
ಇಂತಿದಂ ತಾನಾಳಿದೊಡ ಮು ।
ತ್ಯಂತ ದಯೆಯಿಂ ಜೀವನವ ನಿ ।
ತ್ತುಂ ತಳುವದಾರೈವ ಶಕ್ರಂ ನಮ್ಮ ರಕ್ಷಿಸುಗೆ ॥೧೧॥

---

೯ ತೋಷಿಪುದು—ಸಂತೋಷಿಸುವುದು ಉರವಣಿಸಿ—ವೇಗವಾಗಿ, ಸಂಭ್ರಮಗೊಂಡು. ಅರಿವಿಗೆ—ಬುದ್ಧಿಗೆ ಬಂದು, ಐದುವುದು—ಸೇರುವುದು, ಭರದಿ—ಹೆಚ್ಚುಗಾರಿಕೆಯಿಂದ ಉರು—ಶ್ರೇಷ್ಠರಾದ ನಿಲಿಂಪ—ದೇವತೆಗಳ ಭಿಷಗ್—ವೈದ್ಯರಾದ ಅಶ್ವಿನಿಕುಮಾರರು

೧೦ ನುಡಿಗೆ ಸತ್ವಂ—ಮಾತುಗಳು ಸಾತ್ವಿಕ, ಮೃದುಮಧುರಗಳಾದರೆ ಸಮಸ್ತ ಸುಖಗಳಿಗೂ, ಒಡಲ್—ಅದು ಮುಖ್ಯ ಕಾರಣವಾಗುವುದು. ತಾಮಸವು+ಒಡವೆರೆಯೆ—ಅದಕ್ಕೆ ಬದಲು ತಮೋಗುಣವು ಜತೆಗೂಡಿದರೆ, ಬಿರುನುಡಿಗಳಾಗಿ ಪರಿಣಮಿಸಿದರೆ. ಇದಕೆ—ಈ ನುಡಿಗೆ ಉಸಿರು—ಪ್ರಾಣಬಂಧುವಾಗಿ ಜೀವಿಸುವುದಕ್ಕೆ, ಸತ್ವ—ಬಲವಾಗಿರುವ, ಪೊಡೆಯೊಳಿರುವಿಂಗಳನು—ವಹ್ನಿ—ಅಗ್ನಿದೇವತೆಯೂ ಉರೆ—ಹೆಚ್ಚಾಗಿ

೧೧ ತೊಲಗದೆ+ಐದುವುದು—ತಪ್ಪದಂತೆ ಬಂದು ಸೇರುವುದು ಈ ಪಾಣಿ—ಈ ಹಸ್ತ ಇತ್ತುಂ—ಕೊಟ್ಟು ತಳುವದೆ—ಸಾವಕಾಶ ಮಾಡದೆ. ಆರೈವ—ಕಾಪಾಡುವ ಶಕ್ರಂ—ಇಂದ್ರನು ರಕ್ಷಿಸುಗೆ—ರಕ್ಷಣೆ ಮಾಡಲಿ.

ಯೋಗಿಗಳಿ ಗೆರಡೇ ಗತಿಗಳೆಂ।
ದಾಗಮದೊಳುಚ್ಚರಿಪುದದು ಬೆಳ।
ಕಾಗಿ ಕತ್ತಲೆಯಾಗಿಹುದು ಮತ್ತಲ್ಲಿ ನಡೆಯಲ್ಕೆ॥
ಸಾಗದೀ ಪದ ಶಕ್ತಿ ತತ್ಪದ।
ವಾಗಬೇಕಾ ಪದವ ರಕ್ಷಿಪ।
ಭಾಗ ಧೇಯವನುಳ್ಳ ಹರಿ ರಕ್ಷಿಸಲಿ ದಯೆಯಿಂದ ॥೧೨॥

ರಜವ ತಾ ಬಿಡದೈದಿ ಪ್ರಾಣಿ।
ವ್ರಜವ ನಾನಾ ಕರ್ಮ ಶೇಷ ಸ।
ಹಜ ಫಲ ಪ್ರಾಪ್ತಿಗೆ ನಿಯುಕ್ತವ ಮಾಡಿ ನಟಿಸುವುದ.॥
ನಿಜ ಸುಖವೆ ಯಾಭಾಸದಿಂದೀ।
ಭಜಿಪುದು ಸ್ಥಲ ಮೆಂದಿದರ ಧೀ।
ರಜಯ ಮಾಂತಿರುವ ಪ್ರಜೇಶಂ ಪೊರೆಯಲನವರತಂ ॥೧೩॥

ಕೊಲೆಗೆ ತಾಂ ಮೊಗ ವಿಕ್ಕದಿರ್ಪುದೆ।
ತಿಳಿದವರ ಚಾರಿತ್ರ ಮೆಂಬುದ।
ನೊಳಗರಿದು ಮವರವರ ಪಾತಕ ಜಾಲವುಂ ನೋಡಿ॥
ಜ್ವಲಿಸುತಿಹ ಮೃತ್ಯುವಿಗೆ ಸತ್ಯದೊ।
ಳೊಲುಮೆಯೆಂತೋ ಸತ್ಯ ಸಾಕ್ಷಿಗ।
ಳಲಿ ದೃಢ ಪ್ರಿಯಮೆಂತೊ ಮೇಣಾತಂ ಪೊರೆಯಲೆಮ್ಮಂ ॥೧೪॥

---

೧೨ ಆಗಮ–ವೇದ, ಶಾಸ್ತ್ರ. ಎರಡೇಗತಿ–ಅರ್ಚಿರಾದಿಮಾರ್ಗ, ಧೂಮಾದಿ ಮಾರ್ಗ –ಎಂಬ ಗತಿಗಳು ಉಚ್ಚರಿಪುದು-ಹೇಳುವದು. ತತ್+ಪದ–ಆ ದಾರಿಯನ್ನು ನಡೆಯುವುದಕ್ಕೆ ಬೇಕಾಗುವ ಬಲವನ್ನು ಕೊಟ್ಟು, ಭಾಗಧೇಯ–ಅಖಿಲ ಭಾಗ್ಯ ಸಂಪತ್ತುಳ್ಳ.

೧೩ ರಜವ–ರಜೋಗುಣವು, ತಾ–ಅದು, ಬಿಡದೆ+ಐದಿ–ಪ್ರಾಪ್ತವಾಗಿ ವ್ರಜ–ಪ್ರಾಣಿ ಸಮೂಹವನ್ನು, ನಿಯುಕ್ತ–ಜತೆಗೂಡಿಸಿ ಭಜಿಪುದು–ಸೇವಿಸುವುದಕ್ಕೆ ತಕ್ಕ, ಸ್ಥಲ–ಸಾಧನ ವೆಂದು ಧೀರಜಯಂ+ಆಂತಿರುವ–ಒಡೆಯನಾಗಿರುವ ಪ್ರಜೇಶಂ–ಬ್ರಹ್ಮ ದೇವನು

೧೪ ಕೊಲೆಗೆ...ಇಕ್ಕದೆ+ಇರ್ಪುದೆ–ಜೀವರನ್ನು ಕೊಲ್ಲುವುದರ ಕಡೆ ಮುಖ ಹಾಕ ದಿರುವುದೆ. ಚಾರಿತ್ರಂ—ಸದ್ವರ್ತನೆ. ಜ್ವಲಿಸುತಿಹ—ಕೋಪದಿಂದ ಪ್ರಜ್ವಲಿಸುತ್ತಿರುವ. ಮೃತ್ಯುವಿಗೆ–ಯಮನಿಗೆ ಸತ್ಯದಲ್ಲಿಯೂ ಸತ್ಯಸಾಕ್ಷಿಗಳಲ್ಲಿಯೂ ಒಲುಮೆಯಿರುವಂತೆ ಆತನು ಎಮ್ಮಂ–ನಮ್ಮನ್ನು ಪೊರೆಯಲಿ.

ಇವರ ಬಲದಿಂದಿರ್ಪುದೀ ಜಗ।
ಮಿವರೆ ಕುಲದೇವತೆಗಳೆಮ ಗೀ।
ಭುವನ ಮಧ್ಯದೆ ಜಂಗಮ ಸ್ಥಾವರ ಶರೀರಗಳಂ॥
ಭವಕೆ ತರುವರು, ತಮ್ಮ ಚರಣಾ।
ಬ್ಜವನುಪಾಸ್ತಿಯ ಗೈವವರ ಬಂ।
ಧವ ಪಳಿವರೆಮಗಾಗಲೀ ಸುರ ಮುಖ್ಯರನವರತಂ ॥೧೫॥

ತನ್ನ ಕುಲ ದೈವಂಗಳನು ಬಿ।
ಟ್ಟನ್ನಿಗರ ನೆರೆ ಭಜಿಸಲಾಗದು।
ಭಿನ್ನ ಭಾವನೆಯಿಂದ ಭಜಿಸಲ್ಕೇಡು ಬಹುದೆಂದು॥
ಮುನ್ನಲರ್ಜುನಗುಸಿರಿದಂ ಸಂ।
ಪನ್ನ ಯಾದವ ಮೌಳಿಮಣಿ ಯಿದ।
ರಿಂ ನಿರಂತರ ಮಂಟಿಹುದೆ ತನ್ನಲಿ ಕುಲಂಗಳಲ! ॥೧೬॥

ಕುಲಗಳೇ ಹದಿನಾಲ್ಕು ಕರಣಂ।
ಗಳಿದರೀ ಸಮುದಾಯಕಾಖ್ಯೆಯ।
ಬಳಸುತಿಹರಧ್ಯಾತ್ಮವೆಂದನಿಮಿಷ ಮುನೀಶ್ವರರು॥
ಬಳಸಲಿದಕಾಗಿರುವ ವಿಷಯಂ।
ಗಳ ಚಯಕ್ಕಧಿಭೂತ ವೆಂದಿದ।
ರೊಳಗೆ ನಡೆಸುವರಪ್ಪರಧಿದೈವಂಗಳಾವಾಗ ॥೧೭॥

---

೧೫ ಇವರ–ಈ ಹದಿನಾಲ್ಕು ಕರಣ ದೇವತೆಗಳ, ಶರೀರಗಳಂ–ಜೀವರನ್ನೆಲ್ಲ. ಭವಕೆ–ಸಂಸಾರಕ್ಕೆ. ಪಳಿವರು–ತಿರಸ್ಕರಿಸಿ ಕಾಪಾಡುವರು. ಎಮಗೆ+ಆಗಲಿ–ನಮಗೆ ಶುಭಪ್ರದರಾಗಲಿ.

೧೬ ತನ್ನ–ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಶರೀರದಲ್ಲಿದ್ದುಕೊಂಡಿರುವ, ಅನ್ನಿಗರ–ಬೇರೆ ದೇವತೆಗಳನ್ನು, ನೆರೆಭಜಿಸಲಾಗದು–ಎಂದಿಗೂ ಭಜಿಸತಕ್ಕದ್ದಲ್ಲ, ಕೇಡು–ಸಂಸಾರ ದುಃಖವೇ ತಪ್ಪದಂತೆ, ಬಹುದು–ಬರುವುದು ಎಂದು, ಮುನ್ನಲೆ–ಈ ಮೊದಲೆ, ಉಸಿರಿದಂ–ಕೃಷ್ಣನು ಹೇಳಿರುವನು ಯಾದ...ಮಣಿ–ಯಾದವ ಶ್ರೇಷ್ಠನು ಕೃಷ್ಣನು. ಅಂಟಿಹುದೆ–ತನ್ನಲ್ಲಿ ಸೇರಿಕೊಂಡಿರುವುದೇ.

೧೭ ಸಮುದಾಯಕಾಖ್ಯೆ–ಈ ಕರಣಗಳ ಒಟ್ಟನ್ನೆ ಅಧ್ಯಾತ್ಮವೆಂದು, ಅನಿಮಿಷ–ದೇವ ಮುನೀಶ್ವರರು, ಚಯಕ್ಕೆ–ರಾಶಿಗೆ ಅಧಿಭೂತ–ಜಡ ಮತ್ತು ಚೇತನವೆಂಬ ಜೀವರ ಒಟ್ಟು

ಭುವನ ದೇಹಂಗಳನು ನಡೆಸುವ।
ರಿವರಿವರ ನಡೆಸುವನೆ ಗೌರೀ।
ಧವ ನವನಿಗೀ ಕಾಲದುಪಹತಿ ಯಿಲ್ಲವಸ್ತುವಿ ನಿಂ॥
ಸುವಿಕೃತಿಯು ವರ್ತಿಸದು ದೇಶ।
ವ್ಯವಹರಣದಿಂ ಭಿನ್ನನಲ್ಲಾ।
ಶಿವನೆ ಸಕಲಾವಸ್ಥೆಗಳ ಲಾರೈದು ರಕ್ಷಿಸುಗೇ ॥೧೮॥

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೊಳ್ಮೊದಲನೆಯ ದೇವತಾ ಸ್ತುತಿ ರೂಪಮಾದ ಪೀಠಿಕಾ ಸಂಧಿ ಸಮಾಪ್ತಂ. (ಪದ ೧೮)

## ಕಾವ್ಯಾವತಾರ—ಎರಡನೆಯ ಸಂಧಿಯು

ಶ್ರೀ ವಿಲಾಸಂ ಕಂಠ ಲಗ್ನಕ।
ಳೇವರದೊಳುಪ್ಪುತಿರೆ ಚಂದ್ರಕ।
ಲಾವತಂ ಸಂಮಸ್ತಕದೊಳಿರುತಿರೆ, ಮನೋಹರೆಯಂ॥
ದೇವಿಯಂ ವಾಮಾಂಕದೊಳಗಿ।
ಟ್ಟೋವಿ ನೋಡುತ್ತಿರುವ ದೇವರ।
ದೇವ ನೆಮಗೀಗಮಲಮತಿ ಸೌಭಾಗ್ಯಮಂ ಕೊಡುಗೆ ॥೧॥

---

(ಳ. ಸಂ. ವಿವರಿಸಿರುತ್ತೆ.). ಇದರೊಳಗೆ-ಈ ಹದಿನಾಲ್ಕು ಕರಣಗಳಲ್ಲಿದ್ದುಕೊಂಡು, ಅವುಗಳನ್ನು ನಡೆಸುವರು-ಅಧಿದೇವತೆಗಳೆಂದು ಅಪ್ಪರ-ಆಗುವರು.

೧೮ ಜಗತ್ತಿನ ಜೀವರನ್ನೆಲ್ಲ ನಡೆಸುವ ಈ ಕರಣದೇವತೆಗಳಿಗೂ ಚೇತನ ಕೊಟ್ಟು, ಅವರನ್ನು ನಡೆಸುವವನು ಗೌರೀಧವನು. ಇವನಿಗೆ ಕಾಲ ದೇಶಗಳಿಂದ ಯಾವ ವಿಕಾರವೂ ಇಲ್ಲ. ಅವುಗಳ ಕಟ್ಟಂತು ಇಲ್ಲವೇ ಇಲ್ಲವೆಂಬುದನ್ನು ಜಿಜ್ಞಾಸುವು–ತನ್ನ ನಿತ್ಯದ ಎಚ್ಚರ ಕನಸು ತನಿ ನಿದ್ರೆಗಳ ವಿಚಾರದಿಂದ ಚೆನ್ನಾಗಿ ಪರಿಶೀಲಿಸಿ ಮನಗಂಡಿರುವ ನಿರ್ವಿಕಾರನೂ ನಿತ್ಯಮಂಗಳ ಸ್ವರೂಪನೂ ಆಗಿರುವ ಶಿವನು ನಮ್ಮನ್ನು ರಕ್ಷಿಸಲಿ.

೧ ಶ್ರೀ-ವಿಷಧರನಾಗಿ ಲೋಕವನ್ನು ಕಾಪಾಡಿದ ಕೀರ್ತಿಯಿಂದ ವಿಲಾಸಂ-ಥಳಥಳನೆ ಹೊಳೆಯುವ, ಕಂಠಲಗ್ನ–ಕಂಠದೊಡನೆ ಕೂಡಿರುವ, ಕಲೇವರ-ಶರೀರದೊಳು, ಚಂದ್ರಕಲಾವತಂ–ಚಂದ್ರನೂ ಮತ್ತು ಮನೋಹರೆಯುಂ–ದೇವಗಂಗೆಯು ಮಸ್ತಕದಲ್ಲಿ ಸೊಗಸಿನಿಂದ ಒಪ್ಪುತ್ತಿರಲು, ದೇವಿಯಂ—ಪಾರ್ವತಿಯನ್ನು, ವಾಮಾಂಕ—ಶರೀರದ ಎಡಭಾಗದ, ಉತ್ಸಂಗ-ತೊಡೆಯಮೇಲೆ ಕುಳ್ಳಿರಿಸಿಕೊಂಡು, ಓವಿ-ಒಲಿದು ನೋಡುತ್ತಿರುವ ದೇವರದೇವನು ಅಮಲಮತಿ ಸೌಭಾಗ್ಯವನ್ನು ಎಮಗೆ–ನಮಗೆ ಕೊಡುಗೆ–ಕೊಟ್ಟು–ಮಂಗಳಪ್ರದನಾಗಲಿ.

ಹೇಳ ಹೇಳಿದರೆನ್ನ ಸುಜನರ ।
ನೌಳಿ ಮಾಣಿಕ್ಯಂಗಳೆನಿಪ ವಿ ।
ಶಾಲ ಮತಿಮಂತರು ಜನಾನುಗ್ರಹ ಪರಾಯಣರು ॥
ತಾಳಲಾರರು ತಮ್ಮ ಮುಂದೆ ಭ ।
ವಾಳಿಯೋಳ್ಬೇಗುದಿ ಗೊಳುಪ, ನರ ।
ಜಾಲಮಂ ನೆರನೋಡಿ ತತ್ವಸ್ಥಿತಿಯ ಚನ್ನಾಗಿ ॥೨॥

ಅವರ ನುಡಿಯಂಕೇಳಿ ಪೇಳಿದೆ ।
ನವರೊಡನೆ ನೀವ್ ಕೇಳಿರೈ ನೀ ।
ವವತರಿಸಿದುದೆ ಕಲ್ಪವೃಕ್ಷದ ತೆರದಿ; ಪೆರಗಿಹರಂ ॥
ಸವೆಯದಿಹ ಸುಖವಿತ್ತು ಪೊರೆಯ ।
ಲ್ಕೆ ವಚನಮುದಂತಿರಲಿ ಮುನ್ನಿನ ।
ಕವಿಗಳೇನಂ ಪೇಳುವಲ್ಲಿ ಕಡಮೆಯ ಮಾಡಿದರು ? ॥ ೩ ॥

ಎತ್ತಿದರು ಸಕಲಾರ್ಥ ತತ್ತ್ವದ ।
ವೊತ್ತಗಳ ನದರೊಳಗೆ ಬೇರ್ಪಡಿ ।
ಸುತ್ತ ವೊಂದೊಂದಂ ತೆಗೆದು ಶೋಧಿಸಿದರೊಳಿತಾಗಿ ।
ಇತ್ತರರಿತವ ರಕ್ಷಿಪಥಕದ ।
ನುತ್ತಮರು ಬಿಡದಾಂತು ನಿಗಮದ ।
ಬಿತ್ತರದ ನುಡಿಗಳಿಗೆ ಸರಿದಾಗಿಸಿದರಾಗಿರಲು ॥ ೪ ॥

---

೨ ಹೇಳ ಹೇಳಿದರು–ತತ್ವಸ್ಥಿತಿಯನ್ನು ಕುರಿತು ಚೆನ್ನಾಗಿ ಹೇಳೆಂದರು ಎನ್ನ–ನನ್ನನ್ನು ಕುರಿತು, ಭವಾಳಿ–ಹುಟ್ಟುಹೊಂದುಗಳ ಸಾಲುಸಾಲಾಗಿರುವ ಸಂಸಾರದಲ್ಲಿ, ಬೇಗುದಿ–ಬಗೆಬಗೆಯಿಂದ ದುಃಖಗಳೆಂಬ ಉರಿಯಲ್ಲಿ, ಕತಕತನೆ ಬೇಯುತ್ತ ಕುದಿಗೊಂಡಿರುವ, ಜಾಲ–ಸಮೂಹವನ್ನು, ನೆರೆ–ಚೆನ್ನಾಗಿ

೩ ಪೆರಗಿಹರಂ–ಆತ್ಮಸುಖದಿಂದ ಹೊರಗಿರುವ ದುಃಖಿಗಳನ್ನು, ಸವೆಯದಿಹ–ಅವ್ಯಯ, ಕುಂದುಕೊರತೆಗಳಿಲ್ಲದ, ಸುಖವು+ಇತ್ತು–ಅನುಗ್ರಹಿಸಿ, ಮುನ್ನಿನ–ಮೊದಲಿನ

೪ ಸಕಲ+ಅರ್ಥ+ತತ್ವದ ವೊತ್ತಗಳಂ—ವೇದಶಾಸ್ತ್ರಗಳೆಲ್ಲದರ ತತ್ವಾರ್ಥವನ್ನೆಲ್ಲವನ್ನೂ, ಶೋಧಿಸಿದರು+ಒಳಿತಾಗಿ—ಚೆನ್ನಾಗಿ ಪರಿಶೀಲಿಸಿರುವರು, ಇತ್ತರು—ಇಟ್ಟರು, ಕೊಟ್ಟರು. ಅಕ್ಷಿಪಥಕೆ—ತತ್ವಜ್ಞರ ಎದುರಿನಲ್ಲಿ, ಬಿಡದೆ+ಅಂತು–ಆದರಿಸಿ, ನಿಗಮ—ಶ್ರುತಿಗಳ, ಬಿತ್ತರದ—ವಿಸ್ತರದ ನುಡಿಗಳಿಗೆ ಸರಿದೂಗಿಸಿರುವಲ್ಲಿ.

ಸಮ್ಮತಿಯಿಂತೆ ವಿಸರ್ಜಿಸದೆ ತ |
ಮ್ಮ ಮತಿ ಎಂಬುರ್ವರೆಯೊಳೂರಿದ |
ರಮಲವಾಗಿಹ ಮೋಣವರ ಘನಸೂಕ್ತಿ ಬೀಜಗಳಂ ||
ಕ್ರಮದಿ ಬೆಳೆಯಲ್ಕದರ ಫಲ ದು |
ತ್ತಮ ರಸವನೆಡೆ ಮಾಡಿದರು ಸ |
ತ್ಕಮಲ ಭವ ಹರಿ ರುದ್ರರಿಂಗವರೊಪ್ಪಿ ತಲೆದೂಗೆ || ೫ ||

ಆಗಲದ ನೀಧರೆಗೆ ತಂದು ಸ |
ರಾಗದಿಂ ಹರಹಿದರು ಹರಹಿರು |
ವಾಗ ಮಂಗಳಿರಲ್ಕೆ ಮೋಣದನುಸಿರಿದುತ್ತಮರ ||
ಈ ಗಗನಮಣಿ ಚಂದ್ರತಾರಾ |
ಪೂಗ ವಿರುವನ್ನಬರ ಕೀರ್ತಿ ಕ |
ಲಾ ಗುರು ತ್ವಂ ಬುಧ ಚಕೋರಂಗಳೊಳಗಿರುತಿರಲು || ೬ ||

ನನ್ನ ನುಡಿಗವಕಾಶ ವಾವೆಡೆ |
ನನ್ನ ಮತಿ ಯೆಷ್ಟರದು ಜಡದೇ |
ನನ್ನ ತಿಳಿವಿಂಗಡರಿ ರಾಜಿಸುತಿರುವ ವೆಷ್ಟುಂಟು ||
ಸನ್ನುತ ಪದಾರ್ಥಂಗಳಿದರಿಂ |
ನನ್ನಿಯಿಂ ಕಾಡದಿರಿ ನುಡಿಯದ |
ಮುನ್ನ ಮೌನದೊಳಿರ್ಪುದೊಂದಾಭರಣ ವೆನಗೆನಲು || ೭ ||

---

೫ ಸಮ್ಮತಿಯಿಂದ ವಿಸರ್ಜಿಸದೆ—ಕೈಬಿಡದೆ, ಸ್ವೀಕರಿಸಿ. ಮತಿಯೆಂಬ+ಉರ್ವರೆಯೊಳು+ಊರಿದರು—ತಮ್ಮ ಹೃದಯ ಭೂಮಿಯಲ್ಲಿ ಬಿತ್ತಿದರು, ಅಮಲ–ನಿರ್ಮಲ, ಮೋಣ್+ಅವರ, ಘನಸೂಕ್ತಿ—ಅತಿಶಯದಿಂದ ಘನತೆಯುಳ್ಳ ಹಿಂದಿನವರ ವಾಕ್ಯಗಳೆಂಬ ಬೀಜಗಳನ್ನು.

೬ ಹರಹಿದರು—ಹರಡಿದರು ಆಗಮಂ—ಹೀಗೆ ಸಂಪ್ರದಾಯಾಗತವಾದ ಶಾಸ್ತ್ರಗಳು, ಮೋಣದನು+ಉಸಿರಿದ—ಹೇಳಿರುವ, ಈ ಗಗನಮಣಿ—ಸೂರ್ಯ ತಾರಾಪೂಗ—ನಕ್ಷತ್ರಮಂಡಲ, ಇರುವನ್ನಬರ—ಇರುವವರೆಗೂ, ಬುಧಚಕೋರ–ಜ್ಞಾನಿಗಳೆಂಬ ಜೋನ್ನವಕ್ಕಿಗಳಲ್ಲಿ.

೭ ನುಡಿಗೆ+ಅವಕಾಶವು+ಆವೆಡೆ—ಯಾವಬಳಿಯಲ್ಲಿರುವುದು? ತಿಳಿವಿಂಗೆ+ಅಡರಿ—ಹುದುಗಿ, ಸೇರಿಕೊಂಡು; ರಾಜಿಸುವ—ಶೋಭಿಸುತ್ತಿರುವ, ನನ್ನಿಯಿಂ—ಸತ್ಯವಾಗಿ, ಪ್ರೀತಿಯಿಂದ; ನನಗೆ ಕಾಡದಿರಿ—ಕಾಡಿಸದೆ ಗಮ್ಮನಿರಿ.

ಬೆದರದಿರು ಬೆದರದಿರು ಕೊಡುವೆವು ।
ಹೃದಯದೊಳಗುಜ್ಜುಗವ ನಿನಗೆಂ ।
ದೊದಗಿ ಬಂದಾಡಿದರು ಸಜ್ಜನರೆನ್ನ ಸಮ್ಮುಖದೆ ॥
ಕದಡದೇ ನಿರ್ಮಲವೆನಿಸುತಿರು ।
ವುದಕದೊಳಗೀಕ್ಷಿಸಲು ಮೊಗವನು ।
ಬದುಲುಮೊಗವೊಂದಲ್ಲಿ ತೋರುವುದುಂಟೆ ಲೋಕದಲಿ? ॥ ೮ ॥

ಸತ್ಯರೂಪನೆನಿಪ್ಪ ಪರಶಿವ ।
ನುತ್ತರವೆ ವೇದಂಗಳದಕನು ।
ವೃತ್ತಿಯೇ ದೇವರ್ಷಿಗಳ ವಚನಂಗಳದರಿಂದ ॥
ಎತ್ತಲಾನೊಂದಾದ ಸಂದೆಗ ।
ವೊತ್ತರಿಸ ಲದ ಪಳಿಯೆ ಸಜ್ಜನ ।
ಚಿತ್ತವೃತ್ತಿಯೆ ಮುಖ್ಯವಾಗಿರುವ ಪ್ರಮಾಣವಲ? ॥ ೯ ॥

ಅನುಚಿತದ ಕಾರ್ಯದೆ ಮಹಾತ್ಮರ ।
ಮನಕೆ ತೊರದು ಬಯಕೆ ಬಯಕೆಯ ।
ನನುಸರಿಸಿ ಸತ್ಯವನು ಕಡೆಗೊತ್ತರಿಸದವರ ಮನಂ ॥
ವನದೊಳುರ್ವರೆಯೊಳಗೊಗೆದ ಚಂ ।
ದನಕೆ ಸಕಲಾಂಗದಲಿ ಶುಭ ವಾ ।
ಸನೆಯದಲ್ಲದೆ ತೋರುವುದೆ ದುರ್ಗಂಧವೆಂದೆಂದು? ॥ ೧೦ ॥

ಕಡಿದರಗಲುವುದುಂಟೆ? ತೇಯ ।
ಲ್ಕಡಗುವುದೆ? ದಾವಾನಲಂ ಬಂ ।
ದಡಸಲೋಡುವುದೆ? ಸುಗಂಧಂ ಮೇಣದಕೆ ಸಹಜಂ ॥

---

೮ ಉಜ್ಜುಗ—ಉದ್ಯೋಗ, ಒದಗಿ—ಹತ್ತಿರಕ್ಕೆ ಬಂದು ಹೇಳಿದರು. ಕದಡದೆ—ಕಲಕದೆ, ಚಲಿಸದೆ; ಈಕ್ಷಿಸಲು—ಮುಖವನ್ನು ನೋಡಲು, ಬದುಲು—ಮತ್ತೊಂದು ಮುಖ ಕಾಣುವದೇನು?

೯ ಸಂದೆಗ—ಸಂದೇಹ, ಒತ್ತರಿಸಲು—ನೂಕುತ್ತ ಬರಲು, ಪಳಿಯೆ—ತಿರಸ್ಕರಿಸಬೇಕಾದರೆ, ಸಜ್ಜನ ಚಿತ್ತವೃತ್ತಿ—ಸತ್ಪುರುಷರ ಅನುಭವವೊಂದೇ.

೧೦ ಅನುಚಿತ—ಉಚಿತವಲ್ಲದ, ಕಡೆಗೆ+ಒತ್ತರಿಸದು—ನೂಕುವುದಿಲ್ಲ, ವನದ+ಉರ್ವರೆಯೊಳು—ಕಾಡಿನ ನೆಲದಲ್ಲಿ, ಒಗೆದ—ಹುಟ್ಟಿದ್ದರು.

೧೧ ದವಾನಲಂ—ದಾವಾನಲ, ಕಾಡುಗಿಚ್ಚು. ಬಂದು+ಅಡಸಲ್—ಪ್ರವೇಶಿಸಿದರೆ.

ಎಡರಿನಲಿ ಹಿಂಗುವುದೆ? ವಾಸನೆ ।
ಯಡಸಲಿನ್ನೊಂದಾಗುವುದೆ? ಬೆಂ ।
ಬಿಡದ ದುಸ್ಸಂಗದಲಿ ಮಾಜುವದುಂಟೆ ಸಾತ್ವಿಕತೆ? ॥ ೧೧ ॥

ಹಿಂದಣವರುತ್ತಮರು ನೋಡ ।
ಲ್ಕಿಂದಿನವರೇ ಮಧ್ಯಮರು ನೆರೆ ।
ಮುಂದಣವರಧಮ ವಿಚಾರಿಸಲೀ ಕಲಿಯೊಳೆಂಬ ॥
ಮಂದಮತಿಗಳ ಮಾತದಂತಿರ ।
ಲಿಂದುವಿನ ಕಿರಣಕ್ಕೆ ಗ್ರೀಷ್ಮದೊ ।
ಳೊಂದು ವರ್ಷದೊಳೊಂದು ಹಿಮದೊಳಗೊಂದು ರುಚಿಯುಂಟೆ? ॥೧೨॥

ಉಣ್ಣಬಲ್ಲ ಚಕೋರ ಗಣಕೇ ।
ಕಣ್ಣು ಮೂರುಳ್ಳವನ ನೆನಹಿಂ ।
ಹಣ್ಣಗಾದ ಮನಸ್ಸಿಗೊಂದೇ ಪಾಕವಲ್ಲದಲೆ ॥
ಬಣ್ಣದೊಳ್ಪಸುರೇರದದರಿಂ ।
ದಣ್ಣುಗಳಿಗಂ ಮುಂದೆ ಸಾಧಿಪ ।
ಸಣ್ಣವರಿಗಂ ತತ್ತ್ವಮಾರ್ಗದೊಳೊಂದೆ ಗತಿಯಕ್ಕುಂ! ॥ ೧೩ ॥

ಇಂತೆನುತ್ತಿರಲವರ ಬಳಿಯೋ ।
ಳ್ನಿಂತು ನಾನಾಡಿದೆನು ಸುರಸೀ ।
ಮಂತಿನೀ ವಕ್ಷೋಜ ಕುಂಕುಮ ಗಂಧ ವಾಸಿತೆಯ ॥

---

ಎಡರಿನಲಿ—ಕಷ್ಟದ ವಿಪತ್ತಿನಲ್ಲಿ, ವಾಸನೆಯು+ಅಡಸಲ್—ಬಂದು ಸೇರಿದರೆ ಬೇರೊಂದಿತೆಯೇನು? ಇಲ್ಲ ಹಾಗೆಯೇ ಸಾತ್ವಿಕತೆಯೂ ಬದಲುವುದಿಲ್ಲ.

೧೨ ಇಂದು—ಚಂದ್ರನ ಅಮೃತಕಿರಣಗಳನ್ನು ಉಣ್ಣಬಲ್ಲ ಚಕೋರ ಪಕ್ಷಿಗಳಿಗೆ, ಗ್ರೀಷ್ಮ, ವರ್ಷ, ಹಿಮ—ಗಾಳಿ ಮಳೆ ಮಂಜು ಈ ಕಾಲಗಳಲ್ಲಿ ಸವಿಯು ಮಾತ್ರ ಬೇರೆಬೇರೆಯಾಗಿ ಬದಲಾಯಿಸದಿರುವಂತೆ.

೧೩ ಕಣ್ಣು ಮೂರುಳ್ಳವನ–ಶಿವನ, ನೆನಹಿನಿಂ–ಧ್ಯಾನ ಸೇವೆಗಳಿಂದ, ಹಣ್ಣಾದ–ಪರಿಪಕ್ವ–ನಾಶನಾದಪಾಪಗಳುಳ್ಳ ಶುದ್ಧ ಮನಸ್ಸಿಗೂ, ಒಂದೇಪಾಕ–ಶುದ್ಧಿಯೊಂದೆ ಬಗೆಯಲ್ಲದೆ, ಮಾಗಿ ಪಕ್ವಗೊಂಡ ಹಣ್ಣಿನಲ್ಲಿ ಹಸುರೇರುವದಕ್ಕಿಲ್ಲದಂತೆ, ಕಾಲಭೇದದಿಂದಲೂ ಮನಸ್ಸಿನಲ್ಲಿ ಶುದ್ಧಿ ಬದಲುಗೊಳ್ಳುವುದಿಲ್ಲ.

೧೪ ಸುರಸೀಮಂತಿನಿ—ದೇವತಾ ಸ್ತ್ರೀಯರು ನುಂತಿರುವ—ಮುಳುಗಿ ಸ್ನಾನ

ಎಲೆ ಮಹೀಧವ ವಂಶ ಮುಕ್ತಾ।
ಫಲವೆ ಕೃಷ್ಣ ನರೇಂದ್ರ ಬಾ ನಿ।
ರ್ಮಲ ಸಮಸ್ತಾರ್ಯರ ನಿಬಂಧನ ಮಂದಿರ ಧ್ವಜವೆ! ||
ಲಲಿತ ಕರುಣಾದ್ಯಮರ ಸಂಪ।
ತ್ಫಲಿತ ಚಿತ್ತ ಸುರದ್ರುಮವೆ! ನಿ।
ಶ್ಚಲತೆಯಿಂ ಕುಳ್ಳಿರು, ಮುಮುಕ್ಷುಗಳಾಗಿಹೆವು ನಾವು || ೨೬ ||

ಆದೊಡಂ ಮಂದಾಧಿಕಾರಿ ಗ।
ಳೀ ದಿವಿಜ ವಾಣಿಯಲಿ ರಚಿಸಿದ।
ಸಾಧು ಕಬ್ಬಂ ತಿಳಿಯರಿದ ಕನ್ನಡಿಸಿ ತಿಳಿವಂತೆ ||
ಮೇದಿನಿಯೊಳಿದ ನಿಲಿಸು, ನಿಲಿಸಿದ।
ರಾದರಂ ನರಸಾರ್ಯರಿಗೆ ಬಿಡ।
ದೈದುವುದು ನಿಜವೆಂದನುಜ್ಞೆಯನಾಂತು ಮುದದಿಂದ || ೨೭ ||

ಬಂದು ಸಾಧುಗಳೆನ್ನ ಕರದಿದ।
ರಿಂದಲೇ ಕೃತಕೃತ್ಯರಹೆ ವಿ।
ನ್ನೊಂದ ನೋಡೆವು ತತ್ತ್ವ ವಿದ್ಯಾಶಾಸ್ತ್ರ ರಾಶಿಯಲಿ ||
ತಂದೆ ತಿಳಿವಂತುಸುರು ಕನ್ನಡ।
ದಿಂದ 'ಭಾಮಿನಿ' ಎಂಬ ಷಟ್ಪದಿ।
ಯಿಂದ ಸೊಗಸಾಗಿದನೆ ಬಿಡದಾಸ್ತೆಯಲಿ ನೋಡುವೆವು || ೨೮ ||

---

೨೬ ಶ್ರೋತೃಗಳ ಪ್ರಾರ್ಥನೆಯು :—ಮಹೀಧವ–ಅರಸರ ವಂಶವೆಂಬ ವೃಕ್ಷದಲ್ಲಿ, ಮುಕ್ತಾ–ಬಿಟ್ಟಿರುವ, ಆರ್ಯರ–ಪೂಜ್ಯರ ನಿಬಂ....ಜವೆ–ಗ್ರಂಥಗಳ ಮಂದಿರದ ಎತ್ತಿದ ಬಾವುಟವೆ ಲಲಿತ–ಸುಂದರ, ಕರುಣಾದಿ+ಅಮರ+ಸಂಪತ್+ಫಲಿತ–ಸಮಸ್ತ ದೈವೀ ಸಂಪತ್ತುಗಳೆಲ್ಲ ಫಲಗೊಂಡಿರುವ ಚಿತ್ತವೆಂಬ ಕಲ್ಪವೃಕ್ಷವೆ?

೨೭ ದಿವಿಜವಾಣಿ–ದೇವವಾಣಿ—ಸಂಸ್ಕೃತದ ಭಾಷೆಯಲ್ಲಿ, ಸಾಧುಕಬ್ಬಂ–ಸುಂದರ ಕವಿತೆಯು, ತಿಳಿಯರು–ಕನ್ನಡಿಗರು ತಿಳಿಯಲಾರರು ಮೇದಿನಿ–ಭೂಮಿಯಲ್ಲಿ ಕನ್ನಡ ಮಾಡಿ, ನಿಲಿಸು. ಆದರಂ–ಪ್ರೀತಿಯು

೨೮ ಸಾಧು–ಸತ್ಪುರುಷರು ತಿಳಿವಂತೆ+ಉಸುರು–ಹೇಳು ಸೊಗಸಾಗಿ–ಆನಂದವಾಗಿ ಆಸ್ತೆ–ಶ್ರದ್ಧೆ, ವಿಶ್ವಾಸದಿಂದ.

ಎನುತ ನಿರ್ಣಯಿಸಾಸ್ತೆಯಿಂ ಕುಳಿ ।
ತನುನಯದಿ ಬೆಸಗೊಂಡ ರವದಿರ ।
ಮನದ ತವಕವ ನೋಡಿ ನರಸಾರ್ಯರಿಗೆ ಬಿನ್ನವಿಸೆ ॥
ಅನುಮತಿಯ ನೊಲಿದಿತ್ತರೆಲೆ ಭೂ ।
ವನಿತೆಯಾಣ್ಮನೆ, ಪೇಳು ನಾನಾ ।
ಮುಸಿಮತವ ನಾರೈದು ಭಗವತ್ಪಾದ ಪದ್ಧತಿಯಂ ॥ ೨೯ ॥

ಅವಧರಿಸಿ, ತಚ್ಛಾಸ್ತ್ರ ನಾಮಾ ।
ರ್ಥವನು ಪಂಡಿತರಹುದೆನಲ್ಕಿಂ ।
ದು ವಿವರವಾಗಿ ಯನುಗ್ರಹಿಸಲಾ ಯಾಜ್ಞೆಯಂ ವರಿಸಿ ॥
ಭುವನದೊಳಗೀ ಕಾವ್ಯಕೊಡ ನೊ ।
ಪ್ಪುವ 'ವಿವೇಕಾಭರಣ' ವೆಂದೇ ।
ಕವಿಗಳಾಲಿಸೆ ನಾಮವಿಟ್ಟಿದ ಮಾಡಿದೆನು ಭರದಿಂ ॥ ೩೦ ॥

ತಿಳಿವು ನೆಲೆಗೊಳುವಂತೆ ಶಾಸ್ತ್ರದ ।
ಬಳಕೆ ತಲೆದೋರ್ಪಂತೆ ಸಂದೆಗ ।
ವೊಳವಿ ಪಸರಿಸದಂತೆ ವಿಶ್ವಾಸಂ ಘಟಿಸುವಂತೆ ॥
ಲಲಿತಪದ ಗೌರವದ ದರ್ಪಣ ।
ಫಲಕವಿದ ಮಾಡಿದೆನು ಮೇಣಿದ ।
ರೊಳಗೆ ತನ್ನಂ ನೋಳ್ಪರಿಗೆ ಕಾಣಿಪುದು ನಿಜ ಭಾವಂ ॥ ೩೧ ॥

---

೨೯ ಎನುತ—ಎನ್ನುತ್ತ, ನಿರ್ಣಯಿಸಿ+ಆಸ್ತೆಯಿಂ—ವಿಶ್ವಾಸದಿಂದ ಅನುನಯ—ವಿನಯದಿಂದ, ಬೆಸಗೊಂಡರು—ಬಿನ್ನವಿಸಿಕೊಂಡರು, ಅವದಿರ—ಅವರುಗಳ ತವಕ—ಕುತೂಹಲವನ್ನು, ಒಲಿದು+ಇತ್ತರು-ಕೊಟ್ಟರು. ಭೂವ..ಣ್ಮನೆ—ಅರಸನೆ? ಆರೈದು-ಪರಿಶೀಲಿಸಿ, ಭಗ....ತಿಯಂ—ಶ್ರೀ ಶಂಕರಭಗವತ್ಪಾದರ ಸಂಪ್ರದಾಯವನ್ನನುಸರಿಸಿ.

೩೦ ಅವಧರಿಸಿ—ಮನಸ್ಸಿನಲ್ಲಿಟ್ಟುಕೊಂಡು ಹೇಳು, ತತ್+ಶಾಸ್ತ್ರ—ಆ ಸಂಸ್ಕೃತದ, 'ಜ್ಞಾನ ಸರ್ವಸ್ವ ಸಂಗ್ರಹ' ಎಂಬ ಶಾಸ್ತ್ರದ, ನಾಮಾರ್ಥ—ಅನ್ವರ್ಥನಾಮ ಎಂಬ, ಒಪ್ಪುವ—ಸಲ್ಲುವ ವರಿಸಿ—ಶಿರಸಾವಹಿಸಿ ಸ್ವೀಕರಿಸಿ, ಕವಿ—ಜ್ಞಾನಿಗಳು ಭರದಿ—ಹೆಚ್ಚಿನ ಸಂಭ್ರಮದಿಂದ.

೩೧ ಶಾಸ್ತ್ರದ ಬಳಕೆ—ಶಾಸ್ತ್ರ ಸಂಕೇತಗಳು, ಸಂದೆಗ—ಸಂದೇಹಗಳು, ಮೊಳವಿ—ಹುಟ್ಟಿ, ಪುನಃ ಅಂಕುರಿಸಿ. ಘಟಿಸು—ಕೈಸೇರುವಂತೆ, ಲಲಿತ....ಲಕವು—ಸುಂದರ ಪದಗಳುಳ್ಳ ಕಾವ್ಯವೆಂಬ ಕನ್ನಡಿ ರೂಪ, ಫಲಕವು—ಹಲಗೆಯೊಂದನ್ನು ನಿಜಭಾವಂ—ತನ್ನ ಬ್ರಹ್ಮಾತ್ಮ ಸ್ವರೂಪವು.

ಧನ್ಯರಾಗಲೆನುತ್ತ ತತ್ತ್ವವ ।
ದಾನ್ಯಮಕುಟೀ ಮಧ್ಯಗತ ಪ ।
ರ್ಜನ್ಯ ಕಾಂಕ್ಷೇಯಕ ನುಸುರ್ದ ನೃಸಿಂಹ ಸೂರಿವರ ॥
ಮಾನ್ಯರಾದ ಜನರ್ಗದುವೆ ಸಾ ।
ಮಾನ್ಯವೇ ಶಶಿಮೌಳಿ ಕರುಣಾ ।
ಜನ್ಯ ನಿತ್ಯ ವಿಭೂತಿಯಲ್ತೆ ವಿಚಾರ ಶೀಲರಿಗೆ ! ॥ ೩೨ ॥

ದೇವರಲಿ ಭಕ್ತರಿಗೆ, ಗುರು ಜನ ।
ಸೇವೆಯಲಿ ಸತ್ಪುತ್ರರಿಗೆ, ವರ ।
ಯೌವತದೆ ದಕ್ಷಿಣರಿಗೆಂತೆಸೆವುದು ಕ್ರಮಂ ಬಿಡದೆ ॥
ಭಾವಪೂರ್ವಕ ಭಕ್ತಿ, ನಂಬಿಗೆ, ।
ತೀವಿದಭಿರತಿ ಯಿದರ ತೆರದಿಂ ।
ನೀವಿದರೊಳಾಸಕ್ತ ರಾದರೆ ನಿಜಸುಖಂ ಬಹುದು ॥ ೩೩ ॥

ಕೆಡದ ಪದವಿಯ ಪಡೆದುದೇ ಫಲ ।
ಮೊಡಲ ಧರಿಸಿದುದಕ್ಕೆ ಕಷ್ಟದಿ ।
ಪಡೆದು ಸೌಖ್ಯವ ಕೆಡುವುದಾದರದೇಕೆ ಸಾಧಿಪುದು ? ॥
ಜಡಮತಿಗಳಾಗದೆ ವಿವೇಕವ ।
ನೊಡವೆರದು ನೀವೀಗ ತತ್ವವ ।
ನೆಡಬಿಡದೆ ಕೃತಕೃತ್ಯರಾಗೆಂತೆಂಬುದಾಂತರ್ಯಂ ॥ ೩೪ ॥

---

೩೨ ತತ್ತ್ವವ...ಗತ—ತತ್ತ್ವವನ್ನು ಅನುಗ್ರಹಿಸುವ ಜ್ಞಾನಿಗಳೆಂಬ ಕಿರೀಟದ ರತ್ನದಂತಿರುವ, ಪರ್ಜನ್ಯಕಾಂಕ್ಷೇಯಕನು—ಶ್ರೇಷ್ಠ ಜ್ಞಾನಿಗಳಿಂದ ಬಯಸಲ್ತಕ್ಕ, ನೃಸಿಂಹ ಸೂರಿವರ—ನರಸಾರ್ಯ ಪಂಡಿತೋತ್ತಮನು, ಉಸುರ್ದ—ಈ ಕನ್ನಡ ಗ್ರಂಥವನ್ನು ಬರೆಯುವು ದಕ್ಕಾಗಿ ನನಗೆ ಹೇಳಿದನು. ಅದು, ಶಶಿಮೌಳಿ—ಚಂದ್ರನಿಂದ ಶೋಭಿಸುವ ಜಟೆ ಯುಳ್ಳ ಶಿವನ—ಜಿಜ್ಞಾಸುಗಳಲ್ಲುಂಟಾದ ನಿತ್ಯ ವಿಭೂತಿಯ ಅನುಗ್ರಹವೆಂಬುದೆ ಸರಿ.

೩೩ ಯೌವತದೆ ?–ಯಜ್ಞಾದಿಗಳಲ್ಲಿ ದಕ್ಷಿಣರಿಗೆ—ಇತರರ ಮನಸ್ಸಿಗನುಸಾರವಾಗಿ ನಡೆಯುವ ಋತ್ವಿಕ್ಕರೆ? ಯಜ್ಞಮಾಡತಕ್ಕವರಿರಬಹುದೆ? ಎಂತು+ಎಸೆವುದು+ತೀವಿದ–ತುಂಬಿದ, ಅಭಿರತಿ—ವಿಶ್ವಾಸ.

೩೪ ಪದವಿ-ನಿತ್ಯ ಮುಕ್ತಿಯನ್ನು, ಒಡಲ-ದುರ್ಲಭವಾದ ಈ ನರಜನ್ಮವನ್ನು ಹೊಂದಿ ದ್ದಕ್ಕೆ ಒಡವೆರೆದು—ಜತೆಯಾಗಿ ಕೂಡಿದವರಾಗಿ ಎಡಬಿಡದೆ—ಸಂಪೂರ್ಣ ತತ್ತ್ವನಿಷ್ಠ ರಾಗಿರಿ ಎಂಬುದೆ, ಆಂತರ್ಯಂ—ನಮ್ಮ ಆಶಯ.

ಪುರದ ಮೂರರ ಕೋಟಲೆಯ ಸು।
ಟ್ಟುರುಹಿ ವಿಬುಧಾವಳಿಗೆ ನಿತ್ಯ।
ಸ್ಫುರಿತ ಸೌಖ್ಯವ ನಿತ್ತಲಿಕ ದೃಗ್ಧರ್ಮದಿಂ ಲೋಕಂ॥
ಸರಿ ಸುಖಾಸುಖಗಳಲಿ ಯೆಂಬುದ।
ನೆರಡು ಕಣ್ಣಿಂ ತೋರ್ಪನಂತಾ।
ಮರ ಶಿರೋರತ್ನಂ ತ್ರಿಯಂಬಕ ನೀಗೆ ಶಿವಪದಮಂ ॥ ೩೫ ॥

ಇದು ಶ್ರೀಮದ್ವಿವೇಕಾಭರಣ ವೆಂಬ ಕಾವ್ಯದೊಳ್ಕಾವ್ಯಾವತಾರಮುಳ್ಳ
ಎರಡನೆಯ ಸಂಧಿ ಸಮಾಪ್ತಂ. (ಪದ ೫೩)

# ಆಧ್ಯಾತ್ಮಿಕ ತಾಪ ನಿರ್ಣಯು—ಮೂರನೆಯು ಸಂಧಿಯು

ಸೂ॥ ಯಾತಕಂಜುವ ಚೆಂದರೀ ಜಗ।
ಘಾತಕಂಜುವ ದದನು ತಪ್ಪಿಪ।
ನೀತಿಯೇ ಘನ ವೆಂದಿದರೊಳಾರೈದು ಪೇಳಿಹುದು॥

ಶ್ರೀವಿಲಾಸಾನ್ವಿತ ಸಕಲ ಲೋ।
ಕಾವಳಿಯ ತಾನಾಳ್ದುದಿಲ್ಲಿ ನಿ।
ಜಾನ ಬೋಧತೆ ಯಾನಲಪ್ಪುದು ದೇಶಿಕತ್ವವಲಿ॥

---

೩೫ ಪುರರ ಮೂರರ—ತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿ ಎಂಬ ತ್ರಿಪುರಾಸುರರ, ಕೋಟಲೆ—ಸರ್ವ ಜಗತ್ತಿಗೂ ಉಂಟಾಗುತ್ತಿದ್ದ ಉಪದ್ರವವನ್ನು, ಸುಟ್ಟುರುಹಿ–ಸುಟ್ಟ ಬೂದಿಗೈದು, ಉರುಬಿ. ವಿಬುಧಾವಳಿಗೆ—ದೇವಸಮೂಹಕ್ಕೆಲ್ಲ, ಅಲಿಕದೃಗ್ಧರ್ಮದಿಂ—ತನ್ನ ನಿತ್ಯ ಜ್ಞಾನದಿಂದ ನೋಡಿ, ಲೋಕಂ....ಳಲಿ—ಸುಖ ದುಃಖಗಳಲ್ಲಿ ಜಗತ್ತು ಸಮವಾಗಿರುವದೆಂಬುದನ್ನು ತನ್ನ ಎರಡು ಕಣ್ಣುಗಳಿಂದ ತೋರಿಸುತ್ತಿರುವವನಂತೆ, ಅಥವಾ ಮನುಷ್ಯನಿಗೆ ಎರಡು ಕಣ್ಣುಗಳು ಅಗಲದಿರುವಂತೆ ಜಗತ್ತು ಸುಖ ದುಃಖಗಳೆಂಬ ಎರಡು ಕಣ್ಣುಗಳುಳ್ಳದ್ದೆಂಬ ಸಮದೃಷ್ಟಿಯು ತತ್ತ್ವಜ್ಞಾನ ಬಂದರೇ ಬರುತ್ತದೆ ಎಂಬುದನ್ನು ತಿಳಿಸುವವನಂತೆ ಇರುವ, ಅಮರ ಶಿರೋರತ್ನಂ–ದೇವತೆಗಳೆಲ್ಲರ ಪರನು ಪೂಜ್ಯನಾಗಿರುವ, ತ್ರಿಯಂಬಕ–ಮುಕ್ಕಣ್ಣನು, ಶಿವನು- ಮಂಗಲಪದವನ್ನೀಯಲಿ.

—o—

ಸೂ॥ ಯಾತಕೆ+ಅಂಜುವದು+ಎಂದರೆ+ಈಜಗ–ಈ ಜನರು, ಘಾತಕೆ–ಸಾವಿಗೆ ಎಂದು ಉತ್ತರ. ಅದನು—ಆ ಸಾವನ್ನು ತಪ್ಪಿಸುವ, ನೀತಿ—ಜಾಣ್ಮೆಯೇ ಘನ—ಅಧಿಕ. ಎಂದು+ಇದರೊಳು—ಈ ಸಂಧಿಯಲ್ಲಿ ಆರಯಿದು—ವಿಚಾರಮಾಡಿ ಹೇಳಿರುವನು.

ಮುಂತಿರುವ ಗಂಗಾನದಿಯ ಸೀ।
ಮಾಂತದಲಿ ಬಾವಿಯನು ತೆಗೆಯ।
ಲ್ಚಿಂತಿಸಿದನಂತೆ ನಗೆಯಾಳಿಗ ವಿತ್ತಿರಿದನೆನಲು ॥ ೧೪ ॥

ಅಹಹ! ನೀನಿಂತಾಡುವರೆ ಕೇ।
ಳ್ಬಹುಲ ಜಲಮಾಂತಿರುವ ಸಾಗರ।
ವಹುದೆ ಶಾಕದ ಯೋಗಕದರಲ್ಲಿಯು ಜಲಂ ತೆಗೆದು॥
ವಿಹಿತರುಮೆಯೊಳಗೆರದೊಡಲ್ಲದೆ।
ಬಹುದೆ ಕೆಲಸಕ್ಕದರ ತೆರದಿಂ।
ವಿಹರಿಸೈ ಕಾವ್ಯ ಪ್ರವೃತ್ತಿಯೊಳೆಂದರಾ ಬುಧರು ॥ ೧೫ ॥

ಹಿಂದೆ ಪಲತೆರದಿಂ ಪುರಾತನ।
ರೆಂದ ನುಡಿ ರತ್ನಾಕರದೊಳೊಂ।
ದೊಂದು ಘನತೆಯ ನಾಂತ ವಜ್ರಂಗಳ ತೆರದೊಳಿಹುದು॥
ಇಂದಿವನೆ ನಿನ್ನಯ ಮತಿಯ ಶಾ।
ಣಂದರು ಬಲದಿಕೊಂಡು ಹೃದಯ ದೊ।
ಳೊಂದಿಸಲ್ಕೆಳಸುವೆವು ಕೌಸ್ತುಭ ಭೂಷಣಂ ಗೈಮ ॥ ೧೬ ॥

ಸಕಲ ಲೋಕವ ಬಳಸಿ ತಾಪ।
ಪ್ರಕರಮುಂ ನಂದಿಸುವ ಚಂದ್ರಮ।
ನ ಕರಮುಂ ಸವಿದೀಂಟಬಲ್ಲ ವಮರ್ದುವಕ್ಕಿಗಳು॥

---

ಮಾಡಿರುವ ಆ ಗಂಗಾನದಿಯ, ಸೀಮಾಂತದಲಿ—ತಡಿಯಲ್ಲಿ, ನಗೆಯಾಳಿಗ—ನಗೆಗೇಡಿನ ಉದ್ಯೋಗವನ್ನು, ಇತ್ತಿರಿ—ಕೊಟ್ಟಿರುವಿರಿ, ಇದನು+ಎನಲು.

೧೫ ನೀನು+ಇಂತು+ಆಡುವರೆ–ಹೀಗಾಡಬಹುದೆ? ಬಹುಲ—ಬಹಳ, ಜಲಂ+ಆಂತಿರುವ—ಹೊಂದಿ ಕೂಡಿರುವ ಬಹುದೆ—ಅಡಿಗೆಗೆ ಬಂದೀತೆ, ಶಾಕದ ಯೋಗಕೆ—ಅಡುಗೆಗೆ. ವಿಹಿತರುಮೆ–ಮಳಲೊಟ್ಟಲಿನಲ್ಲಿ ತೋಡಿದ ಗುಂಡಿಯಲ್ಲಿ, ಎರದೊಡಲ್ಲದೆ–ಹಾಕಿದಲ್ಲದೆ, ಕಾವ್ಯಪ್ರವೃತ್ತಿ—ಕಾವ್ಯರಚನೆಯಲ್ಲಿ, ವಿಹರಿಸೈ–ತೊಡಗುವವನಾಗಯ್ಯ.

೧೬ ಹಿಂದೆ ಬರೆದವರ ಗ್ರಂಥಗಳ ಸಮುದ್ರ ರತ್ನಾಕರದಲ್ಲಿ ಘನತೆಯೊಂದಿದ ಮಾತುಗಳನ್ನೆ ಕೊಂಡು, ನಾವು ನಿನ್ನ ಬುದ್ಧಿಯ ಶಾಣೆ—ಒರೆಕಲ್ಲಿಗೆ ತಿಕ್ಕಿ ನೋಡಿಕೊಂಡು, ಅದನ್ನು ನಮ್ಮ ಹೃದಯಕ್ಕೆ ಕೌಸ್ತುಭಮಣಿಯ ಒಡವೆಯನ್ನಾಗಿ ಧರಿಸಬೇಕೆಂದಿರುವೆವು.

೧೭ ಬಳಸಿ–ವ್ಯಾಪಿಸಿಕೊಂಡು, ತಾಪಪ್ರಕರಮುಂ–ಬಿಸಿಲಿನ ತಾಪವನ್ನು ನಂದಿಸುವ–ನಾಶಪಡಿಸುವ, ಚಂದ್ರಮನ–ಚಂದ್ರನ ಕರಮುಂ–ಬೆಳುದಿಂಗಳಿನ ಕಿರಣಗಳನ್ನು, ಸವಿದು+

ವಿಕಲರಿದ ನಾಸ್ವಾದಿಸಲು ಲೌ।
ಕಿಕರದಕೆ ಶಶಿಕಾಂತ ನಿರ್ಮಿತ।
ಶಕಲ ಮೊಂದಿರಬೇಕು ಸಾರಗ್ರಹಣಮಂ ಮಾಡೆ ॥ ೧೭ ॥

ಶಾರದ ವರಾಕೆಯ ಶಶಾಂಕನ।
ಸಾರ ರುಚಿಯಂತಿರ್ಪ ಪೂರ್ವ ವಿ।
ಶಾರದರ ವಾಕ್ಯಂಗಳೊಳಗಮೃತವನು ನೆರೆ ಪಡೆದು ॥
ಪೀರಲಾಗಿಯೆ ಮೇಣುಳಿದರಿಗೆ।
ಬೀರಲಾಗಿಯೆ ಶಾಂತಿಸುಖ ಮೊಡ।
ನೇರಲಾಗಿಯೆ ಬೇಕು ನಿನ್ನಯ ಮತಿಯ ಶಶಿಕಾಂತಂ ॥ ೧೮ ॥

ತಿವಿ ತಿವಿದು ಗಾಢಾಂಧಕಾರವ।
ರವಿಯ ಕಿರಣಂ ದೊಬ್ಬುವ ವೊಲೀ।
ಪ್ರವಚನಂ ಪರಮರ್ಷಿಗಳ ಕೋವಿದರ ಮರವೆಗಳಂ॥
ಕವಿಕವಿದು ಕತ್ತರಿಸುತಿರ್ದೊಡ।
ಅವನಿಯಲಿ ಮಂದಾಧಿಕಾರಿಗ।
ಳ ವಿವಿಧದ ಚಿತ್ತವನು ಮರೆಗೊಂಡಿರ್ಪುದೆಡೆಬಿಡದೆ ॥ ೧೯ ॥

---

ಈಂಟಬಲ್ಲವು–ನಾಲಿಗೆಯಿಂದ ಸೆಳೆದು ಕುಡಿಯಬಲ್ಲವು. ಅಮರ್ದುಣ್ಬಕ್ಕಿ–ಚಕೋರ ಪಕ್ಷಿಗಳು, ವಿಕಲರು+ಇದನು–ಅದರಲ್ಲಿ ಕೊರತೆಯುಳ್ಳವರು ಇದನ್ನು ಸವಿಯುವಲ್ಲಿ; ಶಶಿಕಾ... ಶಕಲ–ಚಂದ್ರಕಾಂತ ಶಿಲೆಯ ಬಟ್ಟಲಿನ ಸಾಧನ ಬೇಕಾಗುತ್ತದೆ. ಸಾರ–ಕಿರಣಾಮೃತ, ಮಾಡೆ–ಮಾಡುವಲ್ಲಿ.

೧೮ ಶಾರದ...ಂಕನ–ಶರದೃತುವಿನ ಪೂರ್ಣ ಚಂದ್ರನ ಸಾರರುಚಿ–ಕಿರಣಾಮೃತದ ಸವಿಯಂತಿರುವ, ಅಮೃತವನು–ತತ್ತ್ವಾರ್ಥವನ್ನು, ನೆರೆ–ಚೆನ್ನಾಗಿ, ಪೀರಲಾಗಿಯೆ–ತಾನು ಕುಡಿಯಬೇಕಾದರು ಮೇಣ್+ಉಳಿದರಿಗೆ–ಮಿಕ್ಕವರಿಗೆ ಅದನ್ನು, ಬೀರಲಾಗಿಯೆ–ಹರಡಬೇಕಾದರು, ಒಡನೆ+ಏರಲಾಗಿಯೆ–ಈಗಲೆ ಹೊಂದಬೇಕಾದರು, ನಿನ್ನಯ ಮತಿಯ–ನಿನ್ನ ಬುದ್ಧಿಯೆಂಬ, ಶಶಿಕಾಂತಂ–ಚಂದ್ರಕಾಂತ ಶಿಲೆಯ ಬಟ್ಟಲು ಅವಶ್ಯಬೇಕು.

೧೯ ರವಿ–ಸೂರ್ಯನ ಈಪ್ರವ...ರ್ಷಿಗಳ–ಋಷಿ ಪ್ರೋಕ್ತ ಶಾಸ್ತ್ರಗಳೆಂಬ ಈ ಸೂರ್ಯನ ಕಿರಣಗಳೂ, ಕೋವಿದರ–ಬಲ್ಲವರ ಕತ್ತರಿಸುತ+ಇರ್ದೊಡಂ–ಇದ್ದರೂ ಅವನಿ–ಭೂಮಿಯಲ್ಲಿ, ವಿವಿಧ–ವಿಷಯ ವಾಸನೆಗಳಿಂದ ಚಂಚಲಗೊಂಡಿರುವ ಮರೆ–ಆಶ್ರಯಿಸಿಕೊಂಡಿರುವುದು, ಎಡೆ–ಸಂದು ಬಿಡದಂತೆ.

ಮರವೆ ಯೆಂತೆಂಬಂಧಕಾರಂ ।
ದುರುಳರುಕ್ತಿಗಳೆಂಬ ಗುಹೆಗಳ ।
ವರ ನಿರಾಲೋಕನತೆಯಂ ಕೆಡದಂತೆ ಪೋಷಿಪವು ॥
ನರಪತಿಯೆ ತನ್ನುಕ್ತಿಯದ ನೊ ।
ತ್ತರಿಸಿ ಕತ್ತಲಿಸಲ್ಕೆ ಸಿಡಿಲಿನ ।
ಕಿರು ಕಿಡಿಗಳೆಂದಾಡಿದೆವು ಬೇಡಿದೆವು ಮಾಡಿದೆವು ॥ ೨೦ ॥

ಇಲ್ಲ ಲೋಕತ್ರಯದೆ ತತ್ತ್ವವ ।
ಬಲ್ಲವರಿಗಭಿಲಾಷ ಯೋಗ್ಯವ ।
ದೆಲ್ಲಿ ದೊರಕಿತೊ ಪರಮ ಕರುಣಾಂಗನೆಯ ಸಂಸರ್ಗ ॥
ನಿಲ್ಲದೈದಲಿ ನಿಜಪದವ ಭವ ।
ದಲ್ಲಿ ಬೇಗುದಿಗೊಂಡ ಜನರಿಂ ।
ದುಲ್ಲಸದನುಗ್ರಹದ ಕಾರಣಮಲ್ತೆ ಶಂಭುವಿನ ॥ ೨೧ ॥

ಜ್ಞಾನದಿಂ ಪೆರತಿಲ್ಲ ಮೋಕ್ಷ ನಿ ।
ದಾನಮದು ಸದ ಸದ್ವಿಚಾರ ।
ಸ್ಥಾನದೊಳ್ಘಟಿಸುವುದು ನಿಜಮೆಂದೊಡನೆ ನಿಶ್ಚಯಿಸಿ ॥
ಭಾನುವಿನ ಪಾಂಗಿನಲಿ ವಿವಿಧಾ ।
ಜ್ಞಾನ ದೋಷೋದಯವಡಂಗಿಸೆ ।
ಮಾನವಾಕೃತಿಯಾಗಿ ಸಜ್ಜನರಿಂಗೆ ಮೈದೋರ್ದಂ ॥ ೨೨ ॥

---

೨೦ ದುರುಳರ+ಉಕ್ತಿ–ನೀಚರ ಮಿಥ್ಯಾವಚನ ಗುಹೆಗಳು, ಅವರ–ಮಂಧಾಧಿಕಾರಿಗಳ, ನಿರಾಲೋಕನತೆ–ಮರವೆಯ ಕತ್ತಲೆಯನ್ನು, ತನ್ನ+ಉಕ್ತಿ+ಅದನು–ನಿನ್ನ ಗ್ರಂಥವು ಆ ಕತ್ತಲೆಯನ್ನು, ಒತ್ತರಿಸಿ—ಒತ್ತಿ, ನೂಕಿ ಕೆಡಿಸುವುದರಲ್ಲಿ ಸಿಡಿಲಿನ ಕಿರು ಕಿಡಿಗಳಂತಿರುವುದು.

೨೧ ಅಂಗನೆಯ—ಕರುಣೆಯೆಂಬ ಸ್ತ್ರೀಯುಳ, ಸಂಸರ್ಗ—ಸಂಬಂಧ, ನಿಲ್ಲದೆ+ಐದಲಿ—ಕೂಡಲೆ ಹೊಂದುಬಿಡಲಿ ಭವದಲ್ಲಿ—ಸಂಸಾರದಲ್ಲಿ ಬೇಗುದಿ—ಕತಕತಿಸುವಂತೆ ದುಃಖದಿಂದ ಕುದಿಯುತ್ತಿರುವ ಜನರು; ಎಂದು+ಉಲ್ಲಸದ—ಸಂತೋಷಪೂರ್ವಕದ, ಕಾರಣಂ+ಅಲ್ತೆ—ಅಲ್ಲವೇನು ?

೨೨ ಪೆರತಿಲ್ಲ—ಬೇರೆಯಿರುವುದಿಲ್ಲ, ನಿದಾನಂ—ಮೂಲಕಾರಣ, ಅದು—ಆ ಜ್ಞಾನವು ಘಟಿಸುವುದು—ಕೂಡುವುದು;....ಪಾಂಗಿನಲಿ–ಸೂರ್ಯನಂತೆ, ವಿವಿಧ—ವಿಧವಿಧ–ಅಜ್ಞಾನ, ಮಿಥ್ಯಾಜ್ಞಾನ, ಸಂಶಯಜ್ಞಾನ ಎಂಬ, ಅಜ್ಞಾನ....ಡಂಗಿಸೆ—ಅಜ್ಞಾನ ದೋಷಗಳೆಲ್ಲವನ್ನೂ ಸಂಪೂರ್ಣ ತೊಲಗಿಸಿಬಿಡುವುದಕ್ಕೆಂದೆ, ಆಕೃತಿ—ಆಕಾರದಿಂದ ಮೈದೋರ್ದಂ—ಮೈದೋರಿದನು.

ಪರನು ಕರುಣಾ ಶರಧಿ ಶಾಂತಿಯ।
ಸುರಭಿಯಿಂದೊಗೆದಮೃತ ಭಕ್ತರ।
ನಿರುಪಮಾನ ಸುಧಾ ಸಮುದ್ರಕೆ ಪೂರ್ಣ ಶೀತಕರ॥
ಧರಣಿಯಲಿ ನರಸಾರ್ಯನಾತಂ।
ವಿರಚಿಸಿದ ನಮರೋಕ್ತಿಯಲಿ ಪೂ।
ರ್ವರ ಪುರಾಣೋಕ್ತಿಗಳ ಘನ ಸಾರವನು ನೆರೆತೆಗೆದು ॥ ೨೩ ॥

ಜ್ಞಾನ ಸರ್ವಸ್ವಕ್ಕೆ ಸಂಗ್ರಹ।
ಮಾನಯದೊಳಿರುತಿರ್ಪ ದೆಶೆಯಿಂ।
ಜ್ಞಾನ ಸರ್ವಸ್ವಕ್ಕೆ ಸಂಗ್ರಹವೆಂದು ಪೆಸರಿಟ್ಟು॥
ಸ್ವಾನುಭವಿಗಳ್ಮೆಚ್ಚುವಂತ।
ನ್ಯೂನ ಕಾವ್ಯವನದನು ಘನ ವಿ।
ಜ್ಞಾನ ಸಂಪನ್ನರ್ವಿಚಾರಿಸಿ ತಲೆಯ ದೂಗಿದರು ॥ ೨೪ ॥

ಉದಯ ಶಿಖರದೆ ಪಚ್ಚೆ ವಣ್ಣದ।
ಕುದುರೆಯವ ನೈದೋರೆ ತಾವರೆ।
ಗೊದಗದೇ ವಿಕಸನದೊಳುಪ್ಪುವ ಶೋಭೆ ಯದರಂತೆ॥
ಸದಯ ನರಸಿಂಹಾರ್ಕವಾಣೀ।
ಮೃದುಲ ಶೋಣಾಂಶುವಿಗೆ ಸಜ್ಜನ।
ವದನ ಸರಸೀರುಹಗಳೇಂ ಪರಿಶೋಭಿಸುತ್ತಿರವೆ ॥ ೨೫ ॥

---

೨೩ ಸುರಭಿ–ಕಾಮಧೇನು, ಒಗೆದ–ಉಂಟಾದ, ಅಮೃತ–ಹಾಲು, ಸುಧಾ–ಅಮೃತ ಪೂರ್ಣ ಶೀತಕರ–ಪೂರ್ಣಚಂದ್ರ ಅಮರೋಕ್ತಿ–ದೇವತಾಭಾಷೆಯಲ್ಲಿ ಘನ–ಅಧಿಕವಾಗಿ.

೨೪ ಈನಯದೊಳು–ಬರಟು ಕಳೆದು, ಹದ–ತಿರುಳುಮಾತ್ರವಾಗಿ ನಿಂತಿರುವಂತೆ; ಪೆಸರು–ಹೆಸರು, ಅನ್ಯೂನ–ಕುಂದಿಲ್ಲದ.

೨೫ ಉದ....ರದೆ–ಉದಯಾಚಲದ ನೆತ್ತಿಯಮೇಲೆ; ಪಚ್ಚೆವಣ್ಣದ–ಹಸುರು ಕುದುರೆಯ ರಥವುಳ್ಳ ಸೂರ್ಯನು, ನೈದೋರೆ–ಹುಟ್ಟಿಬರಲು, ತಾವರೆಗೆ+ಒದಗದೆ–ಒದವು ಉಂಟಾಗದೆ ಏನು, ವಿಕಸನ-ಅರಳುವ ಸೊಬಗು, ಸದಯ....ಶುವಿಗೆ-ದಯೆಯುಳ್ಳ ನರಸಾರ್ಯ ರೆಂಬ ಸೂರ್ಯನ ವಾಣಿ–ಸಂಸ್ಕೃತ ಗ್ರಂಥದ ಅರುಣೋದಯಕ್ಕೂ ಸಜ್ಜನ ಮುಖದಾವರೆ ಗಳು ಸಂತೋಷದಿಂದ ಶೋಭಿಸವೆ ಏನು?

ಭಾವನಾ ಕ್ಷಯ ಭಕ್ತ ತತಿಗೆನು।
ತೇ ವಿಚಾರಿಸಿ ಮುನಿಸಭಾ ರಾ।
ಜೀವ ರವಿಯುಹ ದಕ್ಷಿಣಾಮೂರ್ತಿಯ ಮುದದಿ ನೆನವೆ ॥ ೧ ॥

ಎಣಿಕೆ ಗಳವಡದಿರ್ಪ ವಸ್ತು ವಿ।
ನಣಿಯುರದ ಶಕ್ತಿಯ ದೆಶೆಯೊಳೀ।
ಗುಣಮಯ ಪ್ರಕೃತಿಯು ಸಮುದ್ಭವಿಸಿತ್ತು ಮತ್ತದರಿಂ॥
ಗಣನೆಗಾಯ್ತು ಮಹತ್ತು ಮೇಣದ।
ರಣುಕಳೆಯ ದೆಶೆಯಿಂದ ಗಗನಂ।
ದಣಿಯ ದಾಯ್ತುದರಿಂದ ವಾತಂ ದೋರಿತದರಿಂದ ॥ ೨ ॥

ಅನಲ ನನಲನ ಮುಖದಿ ಸಲಿಲಂ।
ಜನಿಸಿ ತದರಿಂದಾಯ್ತುವನಿ ತದ।
ವನಿಯೆ ಕಡೆಯಾ ಪ್ರಕೃತಿಯೇ ಮೊದಲಾದ ಸಪ್ತಕವೆ॥
ತನತನಗೆ ಸಾಗರದೆ ವಾಯುವಿ।
ನನುಸರಣದಿಂ ಬುದ್ಬುದಂ ಸಂ।
ಜನಿಸು ವಂದದಿ ಪುಟ್ಟದುದು ಕಮಲಾಸನಾಂಡತತಿ ॥ ೩ ॥

---

೧. ಶ್ರೀವಿಲಾಸಾನ್ವಿತ–ಸಕಲ ಸಂಪತ್ಭರಿತ, ಸರ್ವಾಲಂಕಾರ ಭೂಷಿತಳಾದ ಪಾರ್ವತಿಯಿಂದ ಕೂಡಿ, ಸಕಲಲೋಕ+ಆವಳಿಯ–ಸಮೂಹವನ್ನೆಲ್ಲ ಒಡೆಯತನದಿಂದ ಶಿವನು ಮೊದಲು, ಆಳ್ದಂ–ಆಳಿದವನಾಗಿ, ಅನಂತರ ಸ್ವೀಕರಿಸಿದ ದೇಶಿಕತ್ವ–ದಕ್ಷಿಣಾಮೂರ್ತಿಯೆಂಬ ಗುರುವಿನ, ಇಲ್ಲಿ–ಈ ಅವತಾರದಲ್ಲಿ, ನಿಜಾ....ಅನಲಪ್ಪುದು–ಆತ್ಮ ಜ್ಞಾನವನ್ನು ಉಪದೇಶಿಸುವುದಕ್ಕೆ ಬರುವದೆಂತಲೂ ಭಾವ....ಎನುತೆ–ಭಕ್ತರಿಗೆ ತನ್ನಲ್ಲಿ ಸಂಸಾರಿತ್ವದ ಭಾವನೆ ತೊಲಗುವುದೆಂತಲೂ ವಿಚಾರಿಸಿ, ಎಲ್ಲರಿಗೂ ವೃದ್ಧರಾದ ಸನಕ, ಸನಂದನ, ಸನತ್ಸುಜಾತ, ಸನತ್ಕುಮಾರರಿಗೆ ತತ್ತ್ವ ಜ್ಞಾನವನ್ನು ಉಪದೇಶ ಮಾಡುತ್ತ, ಮುನಿ... ಯುಹ–ತತ್ತ್ವನಿಷ್ಠರಾದ ಮುನಿಗಳ ಸಭೆಯೆಂಬ ಕಮಲಗಳನ್ನೆಲ್ಲ ಅರಳಿಸುವ ಸೂರ್ಯನಾಗಿರುವ, ದಕ್ಷಿಣಾಮೂರ್ತಿ ಗುರುವನ್ನು, ಮುದದಿಂದ—ಸಂತೋಷದಿಂದ, ನೆನವೇ—ಸ್ಮರಿಸಿಕೊಳ್ಳುತ್ತೇನೆ.

೨–೩ ಎಣಿಕೆಗೆ+ಅಳವಡದಿರ್ಪ—ಇಂದ್ರಿಯ ಮನಗಳ ಯೋಚನೆಗೆ ಎಟುಕದ, ವಸ್ತು–ಬ್ರಹ್ಮದಲ್ಲಿ ಅಣಿಯುರದ–ಅತಿಶಯದಿಂದ, ಅಧ್ಯಾಸದಿಂದ ಹುಸಿಗಟ್ಟಿರುವ. ಶಕ್ತಿ–ಮಾಯೆಯಾದ ಪ್ರಕೃತಿಯಿಂದ, ಮಹತ್ತು ಅಣುಕಳೆ-ಅಹಂಕಾರ, ಗಗನ-ಆಕಾಶ, ವಾತಂ-ವಾಯು, ಅನಲ–ಅಗ್ನಿ, ಸಲಿಲ–ನೀರು, ಅವನಿ–ಭೂಮಿಯವರೆಗಿನ, ಈ ಸಪ್ತಕ–ಏಳೂ ಸಮುದ್ರದಲ್ಲಿ ಗುಳ್ಳೆಗಳಂತೆ, ಕಮ....ತತಿ–ಬ್ರಹ್ಮಾಂಡ ಸಮೂಹಗಳಾಯಿತು.

ಆವರೊಳಗೆ ಹದಿನಾಲ್ಕರೆಣಿಕೆಯ ।
ಭುವನತತಿ ಪುಟ್ಟಿದುದು ಪುಟ್ಟಿದ ।
ಭುವನದೊಳಗಾದುದು ಚತುರ್ವಿಧ ಭೂತಸಂದೋಹ ॥
ದಿವಿಜರೇ ಹದಿನಾರು ಲಕ್ಷದ ।
ಭವಣಿಯಿಂದುದಿಸಿದರು ಮಾನವ ।
ನಿವಹ ವೊಂಬತ್ತೆಂಬ ಲಕ್ಷದ ಭೇದದಿಂದಾಯ್ತು ॥ ೪ ॥

ಹತ್ತು ಲಕ್ಷದ ಭೇದದಿಂ ಜಲ ।
ದತ್ತಲುದಿಸಿದ ವಂಡಮಂ ನೊಡ ।
ದುತ್ತರಿಸಿದವು ತರುಗಳಲಿ ಭೂಮಿಯಲಿ ಜಂತುಗಳು ॥
ಹತ್ತು ಲಕ್ಷದ ಭೇದದಿಂ ದಿ ।
ದಿಪ್ಪತ್ತು ಲಕ್ಷದ ಭೇವದಿಂ ತೊಗ ।
ಲತ್ತೆಸೆದ ಚೀಲದೊಳಗಾದವು ಮೃಗದ ರೂಪದಲಿ ॥ ೫ ॥

ಉರದಿ ಚರಿಸುವ ಜಂತು ಲಕ್ಷದ ।
ಪರಿಮಿತಿಯೊಳಾಯಿತ್ತು ಮತ್ತಾ ।
ತರುಚಯಂ ಪದಿನೆಂಟು ಲಕ್ಷದ ಭೇದದಿಂದಾಯ್ತು ॥
ಪರಿಗಣಿಸ ಲೆಂಬತ್ತು ನಾಲ್ಕೆಂ ।
ಬರಿಕೆಯುಳ್ಳಾ ಲಕ್ಷ ಭೇದದೆ ।
**ಪರಮ ತತ್ವ ಮದೊಂದೆ** ಜೀವಸ್ಥಿತಿಯ ತಾಳಿದುದು ॥ ೬ ॥

---

೪ ಭುವನತತಿ–ಲೋಕಸಮೂಹ ಹುಟ್ಟಿತು. ಚತುರ್ವಿ....ದೋಹ–ಒಂದೊಂದು ಲೋಕದಲ್ಲಿಯೂ ತಕ್ಕಂತೆ ಅಂಡಜ, ಉದ್ಭಿಜ್ಜ, ಸ್ವೇದಜ, ಜರಾಯುಜವೆಂಬ ಪ್ರಾಣಿ ಸಮೂಹಗಳುಂಟಾದವು. ದಿವಿಜರೆ–ದೇವತೆಗಳೆ ೧೬ಲಕ್ಷ, ಭವಣಿ–ಕ್ರಮದಿಂದ ಹುಟ್ಟಿದವುಗಳಲ್ಲಿ ಮಾನ...ಬತ್ತು–ಮನುಷ್ಯರು ೯ಲಕ್ಷ.

೫ ಜಲದತ್ತ—ನೀರಿನಿಂದ ಹುಟ್ಟಿದವು ೧೦ಲಕ್ಷ, ಅಂಡಮಂ–ಗಿಡ ಮರ ಬಳ್ಳಿ ನೆಲಗಳಲ್ಲಿ ಮೊಟ್ಟೆಹೊಡೆದು ಉತ್ತರಿಸಿದವು–೧೦ಲಕ್ಷ ಹುಟ್ಟಿದವು, ತೊಗಲತ್ತ–ಜರಾಯುವೆಂಬ ಗರ್ಭದ ಚೀಲ ಶೀಳಿಕೊಂಡು ಮೃಗಗಳು ಆದವು–೨೦ಲಕ್ಷ ಹುಟ್ಟಿದವು, ಮನುಷ್ಯನರೂ ಜರಾಯುಜರಾಗಿದ್ದರು ಈ ೨೦ಲಕ್ಷಕ್ಕಿಂತ ಅವರು ೯ಲಕ್ಷ ಬೇರೆಯೆಂದು ಈ ಮೊದಲೇ ಹೇಳಿರುವರು.

೬ ಉರದಿ–ಎದೆಯಿಂದ ಹರಿಯುವ ಹಾವು, ಚೇಳು, ಸಾವಿರ ಕಾಲು ಮುಂತಾದ ಹುಳುವರ್ಗ ೧ಲಕ್ಷ, ತರುಚಯಂ–ಗಿಡ ಮರ ಬಳ್ಳಿ ವನಸ್ಪತಿ ವರ್ಗ ೧೮ಲಕ್ಷ, ದೇವತೆಗಳನ್ನು

ಚೇತನಾತ್ಮಕವಾದ ತನುಗಳ ।
ಜಾತಿ ಯರುವತ್ತಾರು ಲಕ್ಷ ವಿ ।
ದೀ ತೆರವ ನುಳಿದಿರುವ ದೇಹದಿ ಪದಿನೆಂಟು ಲಕ್ಷಂ ॥
ನೀತಿಮಂತ ಸ್ಥಾವರ ಮೆನು ।
ತ್ತ್ಪೋತು ಪೇಳ್ದರು, ಮೊದಲನೆಯದಂ ।
ಸಾತಿಶಯ ವೊಪ್ಪಲ್ಕೆ ಜಂಗಮ ಮೆಂದು ಪೇಳುವರು ॥ ೭ ॥

ಜಂಗಮ ಶರೀರಂಗಳಲಿ ದುಃ ।
ಖಂ ಗಮಿಪುದುಂ ಸುಖಮೆಸೆವುದುಂ ।
ಲಿಂಗ ದೇಹದೊಳೆಣಿಕೆ ಗೊಡಲಾಗುವದು, ಸ್ಥಾವರದೆ ॥
ಲಿಂಗದೇಹ ವಿದಿಲ್ಲವಾಗಿ ಯ ।
ದಂಗವಾಗದು, ಮೇಣಿದರ ದೆಶೆ ।
ಯಿಂ ಗುರುತುಯ್ಯೆದುವದು ಲಿಂಗದೊಳೆಸೆವ ಸುಖದುಃಖಂ ॥ ೮ ॥

ಎಲ್ಲಿ ಯಂತಃಕರಣ ಮಿರುತಿಹು ।
ದಲ್ಲಿ ವೇದನೆಯಿಹುದು, ವೇದನೆ ।
ಗಿಲ್ಲಿ ಯರ್ಥವದೇನೆನಲ್ಕನುಭವ ವದೆನಿಸುವದು ॥
ಅಲ್ಲಿಯನುಕೂಲಾನುಭವಮೆ ಸ ।
ಮುಲ್ಲಸತ್ಸುಖ ಮೆನಿಪುದೀ ಬಳಿ ।
ಯಲ್ಲಿ ಪ್ರತಿಕೂಲಾನುಭವಮೇ ದುಃಖಮೆನಿಸುವದು ॥ ೯ ॥

---

ಜಲಚರಗಳನ್ನು ಎತ್ತಿರುವುದು ಇಲ್ಲಿನ ಒಂದು ವಿಶೇಷ. ಒಟ್ಟಿನಲ್ಲಿ ಜೀವರ ಸಂಖ್ಯೆ–ದೇವತೆಗಳು ೧೩, ನರರು ೯, ಜಲಚರ ೧೦, ಅಂಡಜ ೧೦, ಮೃಗಗಳು ೨೦, ಎದೆಯಿಂದ ಸಂಚರಿಸುವವು ೧೦, ವನಸ್ಪತಿಗಳು ೧೮ ಎಂದು ಕೂಡಿ ೮೪ ಲಕ್ಷವು. ಈ ಪ್ರಾಣಿಗಳಲ್ಲೆಲ್ಲ ಪರಮ ತತ್ತ್ವಂ+ಅದು+ಒಂದೇ–ಒಂದು ಪರಮ ತತ್ತ್ವವೇ ಜೀವರೂಪವನ್ನು ತಳೆದಿರುವುದು.

೭ ಚೇತನಾತ್ಮಕ....ಅರುವತ್ತಾರುಲಕ್ಷ–ಜಂಗಮ ಪ್ರಾಣಿಗಳು ಒಟ್ಟು ೬೬ ಲಕ್ಷ, ಈ ತೆರವನು+ಉಳಿದಿರುವ–ಚೇತನವಲ್ಲದ ಮಿಕ್ಕ, ದೇಹದಿ–ದೇಹ ಧರಿಸಿರುವ, ಸ್ಥಾವರ–೧೮ ಲಕ್ಷ, ನೀತಿಮಂತರು–ಜ್ಞಾಣರು. ಓತು-ಪ್ರೀತಿಯಿಟ್ಟು

೮ ಎಣಿಕೆಗೆ+ಒಡಲಾಗುವುದು–ಜಂಗಮ ಶರೀರದಲ್ಲಿ ಕಾಣಲಿರುವ ಸುಖದುಃಖಗಳು ಲಿಂಗದೇಹವನ್ನು ಸೂಚಿಸುವವು. ಸ್ಥಾವರದೆ--ಸ್ಥಾವರಗಳಲ್ಲಿ ಲಿಂಗದೇಹವು+ಇದಿಲ್ಲವಾಗಿ, ಅದು-ಆ ಶರೀರಗಳು, ಅಂಗ-ಸುಖದುಃಖಗಳ ಅನುಭವಕ್ಕೆ ಸಾಧನವಾಗುವುದಿಲ್ಲ. ಮೇಣ್+ಇದರ ದೆಶೆಯಿಂ–ಜಂಗಮ ಶರೀರದಲ್ಲಿನ ಸುಖದುಃಖಗಳು ಲಿಂಗ ದೇಹವನ್ನೆ ಬೆಟ್ಟುಟ್ಟಂತೆ ಗುರತು-ಗುರುತಿಸುವವು.

ಬಯಸುವರಾವುದನು ಸುಖವನು।
ಭಯ ಪಡುವರಾವುದನು ಕಂಡೀ।
ಲಯವ ಕೊಡುತಿಹ ದುಃಖವನು ಜಂತುಗಳು ಲೋಕದಲಿ॥
ಭಯದ ಮಾಗಿಹ ದುಃಖವನು ನಿ।
ರ್ಣಯಿಸಿ ಬಲ್ಲವರಿಂದ ಖಂಡಿಪ।
ನಯವನೇ ಸಾಧಿಸುತಿರುವದೇ ಪರಮ ಪುರುಷಾರ್ಥಂ ॥ ೧೦ ॥

ನೋವ ನಗಲಿಸುವಲ್ಲಿ ಎರಡುಂ।
ಟೋವಿ ಮಾಡುವ ಕೃತ್ಯ ಬೇರಿಗೆ।
ತಾವು ತಪ್ಪಿಪುದೊಂದು ಕೊನೆ ಕೊಂಬುಗಳ ಸವರುವದು॥
ಸಾವಕಾಶದೊಳೊಂದಿದರ ಸುಕ।
ಲಾ ವಿಶೇಷವ ನರಿವರಾ ನತ।
ಜೀವ ರಕ್ಷಾಮಣಿ ಮಹಾಗುರು ವಿಲ್ಲದಾಗುವದೆ ॥ ೧೧ ॥

ಕೇಳುವರ ಗೊಂದಣಕೆ ಶಿಷ್ಯನ।
ಮೇಲುಮಾತಿನ ಕೇಳ್ಕೆ ಗೊಡನನು।
ಕೂಲವಾದುತ್ತರವ ಕೊಡುವ ಗುರೂಕ್ತಿ ಯಿಲ್ಲದಿರೆ॥
ತಾಳವಿಲ್ಲದ ಗಾಯಕನ ನೆರೆ।
ಕೇಳಿಕೆಯ ರೀತಿಯನು ಬಿಡದೇ।
ತಾಳುವದು ಮೇಣದರ ದೆಶೆಯಿಂ ಕವಿಯಿದಂ ಪೇಳ್ದಂ ॥ ೧೨ ॥

---

೧೦ ಕಂಡು+ಈ ಲಯವ-ಕೇಡು, ನಾಶವನ್ನು, ಜಂತು-ಜನರು, ಭಯ+ದ-ಅಂಜಿಕೆಯನ್ನೀಯುವ, ನಯ-ಜಾಣ್ಮೆಯನ್ನೆ.

೧೧ ನೋವನು+ಅಗಲಿಸುವಲ್ಲಿ-ತಪ್ಪಿಸಿಕೊಳ್ಳುವಲ್ಲಿ, ಎರಡು+ಉಂಟು+ಓವಿ-ವಿಶ್ವಾಸವಿಟ್ಟು, ಕೃತ್ಯ-ಕೆಲಸ, ಪ್ರಯತ್ನ. ಬೇರಿಗೆ...ಪ್ಪಿಪುದು-ತಾಯಿ ಬೇರನ್ನೇ ಕತ್ತರಿಸಿ ಬಿಡುವದು ಮೊದಲನೆಯದು. ಒಂದಿ-ಸೇರಿ, ಹೊಂದಿ, ಸುಕಲಾ-ಮರ್ಮವಿಶೇಷವನ್ನು ಅರಿವಡೆ-ತಿಳಿಯಬೇಕಾದರೆ, ನತಜೀವ-ನಮಸ್ಕರಿಸಿದ ಜೀವರನ್ನು, ರಕ್ಷಾಮಣಿ-ಕಾಪಾಡುವವರಲ್ಲಿ ಶ್ರೇಷ್ಠರಾದ.

೧೨ ಗೊಂದಣ-ಗುಂಪಿಗೆ, ಮೇಲುಮಾತಿನ ಕೇಳ್ಕೆಗೆ-ಉತ್ತಮದರ್ಜೆಯ ಪ್ರಶ್ನೆಗಳಿಗೆ, ಒಡನೆ+ಅನುಕೂಲವಾದ+ಉತ್ತರವ, ಗುರು+ಉಕ್ತಿ-ಸಮಾಧಾನದ ಮಾತು, ಕವಿ-ನರಸಾರ್ಯ ಪಂಡಿತನು ಇದಂ-ಈ ಉದಾಹರಣೆಯನ್ನು ಪೇಳ್ದಂ-ಹೇಳಿದನು.

ಭರತ ಖಂಡದೊಳುಂಟು ನಾನಾ ।
ಪುರವರಂಗಳು ತತ್ಪ್ರದೇಶ ದೊ ।
ಳಿರುತಿಹರು ಸಾಧುಗಳು ಶಾಸ್ತ್ರಜ್ಞಾನ ಕೋವಿದರು ॥
ಸುರತರುಗಳಂದದಲಿ ದೇವರ ।
ಸುರಭಿ ಪಂಚಕದಂತೆ ಚಿಂತಾ ।
ವರ ಮಣಿಗಳಂದದಲಿ ಭಜಕೇಷ್ಟಾರ್ಥದದರಾಗಿ ॥ ೧೩ ॥

ಅಂತವರು ತಾರಗೆಗಳಂತೆ ಸ ।
ಮಂತು ಸೇವಿಸುತಿರಲು ತಾರಾ ।
ಕಾಂತನಂದದಿ ಸಕಲವಾದ ಮುಮುಕ್ಷು ಸುರತತಿಗೆ ॥
ಅಂತಿಂತಿದೆಂತೆನ್ನ ದಮೃತವ ।
ತಾಂ ತಳುವದೇ ಬೀರುತಿಹ ನ ।
ತ್ಯಂತ ದಯೆಯಿಂದಂ ತ್ರಿಯಂಬಕನೆಂಬ ಗುರುವರ್ಯಂ ॥ ೧೪ ॥

ಜಗದೊಡೆಯ ತನ್ನುರದ ಮೇಲೆ ಮ ।
ಲಗಿರಲ್ಕತ್ಯಂತ ಹರುಷದಿ ।
ಬಗೆಯ ತಾವರೆ ಯರಳಲದರೊಳು ಗಂಟಿನುಸುರಿಂದ ॥
ಅಗಲದಿರುತಿರೆ ಯೋಗ ನಿದ್ರೆ ಯೊ ।
ಳಗೆ ಮೆರೆವ ಶ್ರೀ ರಂಗಧಾಮನ ।
ನಗರದಲಿ ನಿರವಧಿಕ ಫಲದಾನಂದ ಪೀಠದಲಿ ॥ ೧೫ ॥

---

೧೩ ಕೋವಿದ—ಬಲ್ಲವರು, ಸುರತರು—ಮಂದಾರ, ಪಾರಿಜಾತ, ಸಂತಾನ, ಕಲ್ಪವೃಕ್ಷ, ಹರಿಚಂದನ, ದೇವರ ಸುರಭಿ–ಕಾಮಧೇನುವಿನಲ್ಲಿಯೂ, ಚಿಂತಾಮಣಿಗಳಲ್ಲಿಯೂ ಹೀಗೆಯೆ ತಿಳಿಯಬೇಕು. ತಂತಮ್ಮ ಭಜಕರ+ಇಷ್ಟಾರ್ಥಗಳನ್ನು, ದದರಾಗಿ–ಕೊಡುವವರಾಗಿರುವರು.

೧೪ ತಾರಗೆ–ನಕ್ಷತ್ರಗಳಂತೆ, ಸಮಂತು–ಚೆನ್ನಾಗಿ ತಾರಾ....ದದಿ–ಚಂದ್ರನೋಪಾದಿಯಲ್ಲಿ, ಸುರತತಿ–ದೇವಸಮೂಹಕ್ಕೆ, ಅಂ....ದೆನ್ನದ–ವಾಣಿಗೆ ಅಗೋಚರವಾದ, ಅಮೃತ–ಜ್ಞಾನಾಮೃತ, ತಾಂ-ಅದನ್ನು, ತಳುವದೆ-ಸಾವಕಾಶವಿಲ್ಲದೆ, ಬೀರುತಿಹನು-ಚೆಲ್ಲುತ್ತಿರುವನು.

೧೫ ಜಗದೊಡೆಯ-ರಂಗಧಾಮನು, ತನ್ನುರದ-ಭೂದೇವಿಯ ಎದೆಯ ಮೇಲೆ, ಅದರಿಂದ ಭೂದೇವಿಗೆ. ಬಗೆಯ ತಾವರೆ—ಹೃದಯದಾವರೆ ಅರಳಿದರು, ಗಂಟಿನ+ಉಸುರು—ಪ್ರಾಣವ್ಯಾಪಾರದಿಂದಲಾದರು, ಅಗಲದೆ+ಇರುತಿರೆ ಮೆರೆವ—ಶೋಭಿಸುವ ಶ್ರೀರಂಗಪಟ್ಟಣದಲ್ಲಿ ಸುಖಾಸನದಲ್ಲಿ.

ಕುಳಿತಿರಲ್ನರಸಾರ್ಯರೊಡ ನಾ।
ಬಳಿಗೆ ಪೋಗಿ ಸುಪುಷ್ಪ ಸುಫಲಾ।
ವಳೀ ಸಮೇತ ಕರಂಜರಂ ಬಂಧಿಸಿಯದನಿಟ್ಟು॥
ತಿಳುಹ ಬೇಹುದು ಜೀಯ, ಜಗದೊಳ।
ಗುಳುಮೆ ಯಾವುದು, ಕಡೆಗದಕ್ಕಿಂ।
ದಿಳಿದ ತತ್ತ್ವಂಗಳಲಿ ಸಾರಾಸಾರ ಮೆಂತಿಹುದು ॥ ೧೬ ॥

ಅರುಹಿ ಭವದಿಂದೆನ್ನ ನೀನು।
ದ್ಧರಿಸ ಬೇಹುದು ನಿನ್ನನುಳಿದೀ।
ನರರೊಳಗೆ ಸುರರೊಳಗದೆಲ್ಲಿ ತ್ರಿಯಂಬಕಾಭಿಖ್ಯೆ॥
ಮೆರೆವುದಾ ವಿಬ್ಬರಲಿ ನೆರದು।
ತ್ತರಕೆ ಪ್ರತ್ಯುತ್ತರಕೆ ನೆರೆ ವಿ।
ಸ್ತರಿಸಿದರ್ಥವೆ ಸಕಲ ಸಾಧು ಜನಕ್ಕೆ ಮುಂದಕ್ಕೆ ॥ ೧೭ ॥

ಉಪಕರಿಸುವುದು, ದೈತ್ಯಗುರುವಿನ।
ವಿಪುಲ ಶಕ್ತಿಯ ಪಡೆದ ಜಲರಾ।
ಶಿ ಪದಯೋಗಂ ಹಿಮಕರಂಗಾಗಲ್ಕದರ ದೆಶೆಯಿಂ॥
ವಿಪುಲೆಯೊಳ್ಪರಿ ವಂಬುಗಳ್ಕ್ಷೇ।
ತ್ರ ಪರರಾದ ಜನರ್ಗೆ ಜೀವನ।
ವ ಪರಿಪೋಷಿಸುವಂತೆ ಮೋಕ್ಷಾರ್ಥಿಗಳಿಗೀ ವಾದಂ ॥ ೧೮ ॥

---

೧೬ ಕುಳಿತಿರಲ್—ತ್ರಿಯಂಬಕಗುರುಗಳು ಕುಳಿತಿರುವಲ್ಲಿ, ಆ ಬಳಿಗೆ–ಅಲ್ಲಿಗೆ ಫಲ ಪುಷ್ಪಗಳೊಡನೆ ಶಿಷ್ಯರಾಗಿ ಬಂದ ನರಸಾರ್ಯರು, ಕರಂಜರಂ ಬಂಧಿಸಿ—ಭಕ್ತಿಯಿಂದ ಕೈಮುಗಿದು, ತಿಳುಹಬೇಹುದು ಜೀಯ–ಸ್ವಾಮಿಯೇ ತಿಳಿಸಬೇಕು, ಅದಕ್ಕಿಂದ+ಇಳಿದ–ಕಡೆಯದಾದ ಪ್ರಪಂಚದಲ್ಲಿ.

೧೭ ಅರುಹಿ-ತಿಳಿಸಿಕೊಟ್ಟು, ಭವದಿಂದ-ಸಂಸಾರದಿಂದ, ಎನ್ನ-ನನ್ನನ್ನು, ನಿನ್ನನು+ಉಳಿದ—ನಿನಗಿಂತ ಬೇರಾದ, ಅದೆಲ್ಲಿ...ಭಿಖ್ಯೇ—ತ್ರಿಯಂಬಕರೆಂಬ ಹೆಸರು ಯಾರಿಗೆ ತಾನೆ. ಮೆರೆವುದು+ಆವು+ಇಬ್ಬರಲಿ—ನಮ್ಮಿಬ್ಬರಲ್ಲಿ ನೆರದ—ರಹಸ್ಯವಾದ ಉತ್ತ... ರಕೆ—ಪ್ರಶ್ನೋತ್ತರಗಳಿಗೆ ನೆರೆ—ಚೆನ್ನಾಗಿ ಸಾಧು—ಮುಂದಿನಕಾಲದ ಸತ್ಪುರುಷರಿಗೆಲ್ಲ, ಉಪಕರಿಸುವದು—ಉಪಕಾರಮಾಡುವುದು ಹೇಗೆಂದರೆ—

೧೮ ದೈತ್ಯಗು...ಯೋಗಂ—ತನ್ನ ಉಚ್ಚಸ್ಥಾನವಾದ ಮೀನರಾಶಿಯಲ್ಲಿ ಶುಕ್ರನಿದ್ದಾಗ ಅದರ, ಹಿಮಕರಂಗೆ—ಚಂದ್ರನಿಗೂ ಯೋಗವಾಗಿ ಹೀಗೆ ಶುಕ್ರಚಂದ್ರರ ಸಮಾಯೋಗವು, ಆಗಲ್ಕೆ–ಆಗುವದರಿಂದ, ವಿಪುಲೆ...ಪರಿವ+ಅಂಬುಗಳ್–ಭೂಮಿಯಲ್ಲಿ ಬಿದ್ದು

ಆಡರುತ್ತಮರಾದವರು ಶ್ರುತಿ ।
ಗೂಡದಿಹ ಸಂವಾದವನು ಬಿಡ ।
ದಾಡಿದರೊ ಸುಸ್ವಾತಿಯುದಕದ ಹನಿಯು ಕೆಸರಳಿದು ॥
ನೋಡೆ ಡೊಂಕಿಲ್ಲದೆ ಸುಕಾಂತಿಯ ।
ಕೂಡಿ ಸುಪ್ಪಾಣಿಗಳೆನಿಸಿ ಕೊಂ ।
ಡಾಡಿಸಿ ಕೊಳುತ್ತಿರುವ ಮುತ್ತುಗಳಾದ ಪಾಂಗಿನಲಿ　　॥ ೧೯ ॥

ನುಡಿವ ರವದಿರ ಸೂಕ್ತಿಗಳ ಬೆಂ ।
ಬಿಡದೆ ಮೌಕ್ತಿಕಗಳ ನೊಡರ್ಚ ।
ಲ್ಕೊಡನೆ ಸಜ್ಜನ ಕರ್ಣಶುಕ್ತಿಗಳಿರುತಲಿರಬೇಕು ॥
ಬಿಡದಿದರ ಯೋಗದೊಳೊಗೆದುದಂ ।
ಪಡೆದು ರಾಜಿಪ ರಾರೆನಲ್ಕೀ ।
ಕಡಲ ನಡುವಣ ನೆಲದೆ ಗುರುಪಾದಾಂಬುಜಾರ್ಚಕರು　　॥ ೨೦ ॥

ಸುರತರುವಿನಿಂದೊಗೆದ ಫಲವಾ ।
ದರು ಸುಕೃತ ಶಾಲಿಗಳುಣಲ್ಕೊಡ ।
ನರಗುವದು; ಮೇಣೀ ಮಹಾ ಸಂವಾದ ದಿವ್ಯಫಲಂ ॥

---

ಹರಿದ ಮಳೆಯನೀರು, ಕ್ಷೇತ್ರಪರ—ವ್ಯವಸಾಯಗಾರರಿಗೆ ಬೆಳೆಯನ್ನು ಕೊಟ್ಟು ಸುಖ ಜೀವನದಿಂದ ಕಾಪಾಡುವಂತೆ, ಈ ವಾದಂ– ನಮ್ಮ ಸಂವಾದವು, ಈ ಗ್ರಂಥವೂ ಮುಮುಕ್ಷು ಗಳನ್ನೆಲ್ಲ ಆತ್ಮಜ್ಞಾನವನ್ನು ಕೊಟ್ಟು ಕಾಪಾಡುವುದು.

೧೯ ಸುಸ್ವಾತಿಯ+ ಉದಕ—ಮುತ್ತಿನ ಚಿಪ್ಪಿನಲ್ಲಿ ಬಿದ್ದ ಸ್ವಾತಿ ನಕ್ಷತ್ರದ ಮಳೆಯ ಹನಿಯು, ಸುಪ್ಪಾಣಿಗಳಾದ ಪಾಂಗಿನಲಿ— ಹೊಳಪುಳ್ಳ ಮುತ್ತುಗಳಾದಂತೆ.

೨೦ ನುಡಿವರ+ ಅವದಿರ+ ಸೂಕ್ತಿ— ಹೇಳುವ ಅವರ ಘನತೆಯುಳ್ಳ ಒಳ್ಳೆಯ ಮಾತುಗಳು, ಬೆಂಬಿಡದೆ–ಬಿಡದಂತೆಯೆ, ಮೌಕ್ತಿಕಗಳನು+ ಒಡರ್ಚಲ್ಕೆ–ಮುತ್ತುಗಳಾಗಿ ಮಾಡುವಲ್ಲಿ ಸತ್ಪುರುಷರಕಿವಿಯು ಮುತ್ತಿನಚಿಪ್ಪಗಳೇ ಅವಶ್ಯವು. ಬಿಡದಿದರ.... ಹೀಗೆ ಶ್ರುತಿಗೂಡಿದ ಗುರುವಿನ ಸೂಕ್ತಿಗಳನ್ನು ಬಿಡದಂತೆ ಮುತ್ತುಗಳನ್ನಾಗಿ ಮಾಡಿ ಕೊಂಡು ಶೋಭಿಸುವ ಕರ್ಣಗಳ ಒಂದು ಭಾಗ್ಯವು ಮನುಷ್ಯಮಾತ್ರರಿಗಿಂತಲೂ ಭರತ ಖಂಡದ ಜನರಿಗೇ ಹೆಚ್ಚು ದೊಸಲೆನ್ನುವಂತಿರುವುದು! ಏತಕ್ಕೆಂದರೆ ಕರ್ಮಭೂಮಿಯಾದ ಇಲ್ಲಿನ ಜನರಲ್ಲಿಯೆ–ಗುರುಪಾದಾಂಬುಜಾರ್ಚನೆಯೂ ಗುರುಶಿಷ್ಯರೆಂಬ ಸತ್ಸಂಪ್ರದಾಯವೂ ಕಂಡು ಬರುತ್ತಿರುವದರಿಂದ ಈ ಕ್ರಮವನ್ನೆ ಬಹಳವಾಗಿ ಬ್ರಹ್ಮವಿದ್ಯೆಯು ಅನುಸರಿಸಿರು ವಂತೆ ಕಾಣಲಿರುವದು.

ಅರಗದನುಭವಿಸಿದರು; ಹಿಂದಣ ।
ನರರು ಮಿಂದಿನ ನರರು ಮುಂದಣ ।
ನರರು ಮಿದರಿಂ ನರರಮರ ರಾಗುವರಿದೇನಳವೊ ! || ೨೧ ||

ಎಂದು ಸಂತೋಷಿಸಿ ಯೊಸರುವಾ ।
ನಂದ ಬಾಷ್ಪ ಜಲಂಗಳಿಂ ಬುಧ ।
ವೃಂದ ಪೂಜಿತವಾದ ಗುರುಪಾದಾರವಿಂದಗಳಂ ||
ಅಂದಿಗಂದಿಗೆ ತೊಳೆದು, ಕೇಳಿದ ।
ನೊಂದು ಸಂದೇಹಕ್ಕೆ ಬೀಜ ಮಿ ।
ದೆಂದೆನಿಪ ವಾಕ್ಯವನು ನರಸಾರ್ಯಂ ಸಮೇತಾರ್ಯಂ || ೨೨ ||

ತಾಳಲಾರದು ಯಾವುದನು ಭುವ ।
ನಾಳಿ? ಹಾಗಾದರೆ ಸುಮತಿಯಿಂ ।
ಕೇಳು ದುಃಖಮುದೊಂದೆ ಯದು ತಾನೆಲ್ಲಿ ವರ್ತಿಪುದು ||
ಖೂಳರಂತಃಕರಣ ದಲ್ಲಿದು ।
ಮೇಳವಿಪುದೇ ದಿಕ್ಕಿನಿಂ ದದ ।
ಪೇಳಲೆಂ? ದೇಹದಲಿ ಸುಸ್ಥೂಲದಲಿ ದೃಢವಾಗಿ || ೨೩ ||

ವಾತ ಪಿತ್ಥ ಶ್ಲೇಷ್ಮ ವೆಂತೆಂ ।
ಬಾ ತತಸ್ಥಿತಿ ವೆತ್ತ ದೋಷ ।
ವ್ರಾತ ಮಿಪ್ಪುದು ಮೂರು ತೆರದಿಂದದಕೆ ವೈಷಮ್ಯಂ ||

---

೨೧ ಸುರತ....ದ+ಒಗೆದ—ಕಲ್ಪವೃಕ್ಷದ ಫಲವೂ, ಸುಕೃತಶಾಲಿ—ದೇವತೆಗಳು, ಉಣಲ್ಕೆ+ಒಡನೆ+ಅರಗುವುದು, ದಿವ್ಯಫಲಂ—ಜ್ಞಾನಫಲವಾದ ಈ ಬ್ರಹ್ಮಾತ್ಮಭಾವ, ನಿತ್ಯ ಮುಕ್ತತ್ವವು. ಅರಗದು—ಯಾರಿಗೂ ಜೀರ್ಣಿಸಿ, ಮುಗಿದು ಹೋಗುವಂತಿಲ್ಲ. ಅಮರರು—ಸಾವಿಲ್ಲದವರು, ಇದೇನು+ಅಳವೊ—ಆಶ್ಚರ್ಯವೊ !

೨೨ ಒಸರುವ—ಸುರಿಯುವ, ಬುಧವೃಂದ—ಬಲ್ಲವರ ಸಮೂಹದಿಂದ, ಅರವಿಂದ—ಪಾದಕಮಲಗಳನ್ನು, ನರಸಾರ್ಯರು ಸಮೇತ+ಆರ್ಯಂ-ಪೂಜ್ಯರಾದ ಗುರುಗಳನ್ನು ಕುರಿತು.

೨೩ ಭುವನಾಳಿ—ಲೋಕದ ಜನರು, ಖೂಳರ—ನೀಚರ ಮನಸ್ಸಿನಲ್ಲಿ, ಇದು ಮೇಳವಿಪುದು+ಏದಿಕ್ಕಿನಿಂದ—ಹೇಗೆ ಬಂದು ಕೂಡುವದು?

೨೪ ವಾತ ಪಿತ್ತ ಶ್ಲೇಷ್ಮ ಎಂದು ಧಾತುಗಳು ಮೂರಾಗಿ, ಈ ಸ್ಥೂಲಶರೀರದಲ್ಲಿದ್ದು ಎಲ್ಲಾ ಕಡೆಯಲ್ಲಿಯೂ ಚೆನ್ನಾಗಿ, ತತ—ವಿಸ್ತಾರವಾಗಿ, ಸ್ಥಿತಿವೆತ್ತ—ದೇಹದಲ್ಲಿ ಪ್ರಸಿದ್ಧಿಯನ್ನು ಪಡೆದುಕೊಂಡಿರುವ, ದೋಷವ್ರಾತಂ+ಇಪ್ಪುದು—ಗುಂಪು ಒಂದಕ್ಕೊಂದು

ಓತಿರುವ ಕಾಲದಲಿ ಬಪ್ಪುದು ।
ತಾ ತಳುವದೇ ದುಃಖವದು ಸಂ ।
ಘಾತ ವಾಗಿಯೆ ಪೂರ್ವಕೃತ ಕರ್ಮಾನುಗುಣವಾಗಿ ॥ ೨೪ ॥

ಮತ್ತೆ ದುಃಖವೆ ಸೂಕ್ಷ್ಮ ತನುವಿ ನೊ ।
ಳೊತ್ತರಿಸುವುದು ಕಾಮದಿಂ ದು ।
ರ್ವೃತ್ತವಾದ ಕ್ರೋಧದಿಂ, ಕಡು ಲೋಭದಿಂ ಬಿಡದೆ ॥
ಮತ್ತೆ ಮೋಹದ ಮೂಲದಿಂದಂ ।
ಮತ್ತತೆಯ ದೆಶೆಯಿಂದ, ಮತ್ಸರ ।
ದೊತ್ತರದ ಬಗೆಯಿಂದಲುದಿಪುದು–ನಾಲ್ಕು ತೆರನಾಗಿ; ॥ ೨೫ ॥

ಲಯವೆನುತ ವಿಕ್ಷೇಪವೆನುತಂ ।
ಶ್ರಯಿಸುತಿರುವ ಕಷಾಯ ವೆನುತಂ ।
ಲಯಿಸದ ರಸಾಸ್ವಾದ ವೆನುತಂ ಚಿತ್ತವೃತ್ತಿಯಲಿ ॥
ಅಯಿವರಯಿವರ ಲೆಕ್ಕ ವಡೆದಿಂ ।
ದ್ರಿಯ ದಶಕಮುಂ ಲಿಂಗದ ಚತು ।
ಷ್ಟಯಮು ನೊಡಗೂಡಿರುತಿರಲ್ಕಧ್ಯಾತ್ಮವೆನಿಸುವದು ॥ ೨೬ ॥

---

ಬಿಟ್ಟು ಅಗಲದಂತೆ, ಸೇರಿಕೊಂಡಿರುವದು. ವೈಷಮ್ಯಂ—ತಮ್ಮೊಳಗೆ ಹೆಚ್ಚು ಕುಂದುಗಳಿಗೆ, ಓತಿರುವ–ತಾವು ಒಲಿದಿರುವ, ಬಪ್ಪುದು.... ಸಂಘಾತಂ–ದೇಹೇಂದ್ರಿಯುಗಳಲ್ಲಿಯೆ ರೂಪುಗೊಂಡು, ಕರ್ಮಕ್ಕೆ ತಕ್ಕಂತೆಯೆ ತಳುವದೆ ದುಃಖಂ—ಈ ಶರೀರದಲ್ಲಿ ತಡೆಯಿಲ್ಲದಂತೆ ದುಃಖಗಳು ಬರುವವು.

೨೫ ಒತ್ತರಿಸುವದು–ಒತ್ತುತ್ತಾ, ದಟ್ಟವಾಗಿ ಬರುವದು, ದುರ್ವೃತ್ತ—ಕೆಟ್ಟ ನಡೆವಳಿಯ, ಮೋಹ–ಕಾರ್ಯಾಕಾರ್ಯ ವಿವೇಕವಿಲ್ಲದ, ಮತ್ತತೆಯ-ಸ್ತ್ರೀಪುತ್ರ ಹಣಕಾಸು, ವಿದ್ಯಾ ಐಶ್ವರ್ಯ, ರೂಪು ಯೌವನ—ಇವುಗಳಿಂದ ಮದವೇರಿದ ದೆಶೆಯಿಂದಲೂ.

೨೬ ಮನಸ್ಸು—ಆಯಾಸದ ಬಳಲಿಕೆಯಿಂದ ಲಯವಾಗುವದು, ಕ್ಷಣವೂ ನಿಲ್ಲದಂತೆ ವಿಷಯುಗಳಲ್ಲೆ ಹರಿದಾಡುವುದು, ಚಿತ್ತದಲ್ಲೊಂದಾಗಿ ಕೂಡಿದ್ದ ಭುಕ್ತಭೋಗವಾಸನೆಗಳು ಜುಮ್ಮನೇಳುವದು, ಏಕಾಗ್ರತೆಯುಸವಿಯನ್ನುಣ್ಣುತ್ತ ಎಚ್ಚರದಪ್ಪುವದು ಎಂಬ—ಲಯ ವಿಕ್ಷೇಪ ಕಷಾಯ ರಸಾಸ್ವಾದಗಳೆಂಬ ಯೋಗದ ವಿಘ್ನಗಳು—ಧ್ಯಾನದಲ್ಲಿ ಹೊರಟವನಿಗೆ ಹಾನಿಮಾಡುವವು ಅಯಿವರ+ಅಯಿವರ—ಐದೈದರ ಸಂಖ್ಯೆಯ ಇಂದ್ರಿಯದಶಕವು, ಲಿಂ....ಷ್ಟಯ—ಮನ ಬುದ್ಧಿ ಚಿತ್ತ ಅಹಂಕಾರವೆಂಬ ಅಂತಃಕರಣ ಚತುಷ್ಟಯವು, ಒಡಿಗೂಡಿ+ಇರುತಿರಲ್ಕೆ—ಇವುಗಳ ಒಟ್ಟಿನ ರಾಶಿಯೆ ಅಧ್ಯಾತ್ಮವು.

ಇವರ ವಿಷಯಂ ಸ್ಮೃತಿ ತತಿಗಳೊ।
ಳ್ವ್ಯವಹರಿಸಲಧಿಭೂತ ವೆಂದೊಡ।
ನವತರಿಸುವುದು, ಕಾಲ ಕಾಲದೊಳಿದ್ದು ವಿಾ ಬಳಿಯೊಳ್ ॥
ಇವರ ವಿಷಯವ ನಡೆಸುತಿರುತಿಹ।
ದಿವಿಜ ರಧಿದೈವತ್ವ ವೈದುವ।
ರವಧರಿಯಿಸಧ್ಯಾತ್ಮ ತತ್ತ್ವ ಸ್ಥಿತಿಯ ಪೇ಼ಳುವೆವು ॥ ೨೭ ॥

ಮೊದಲು ಜಗವಾಗುವದಕೀಶನ।
ಹೃದಯದಿಚ್ಛೆಯೆ ಕಾರಣಂ, ಮೇ।
ಣಿದರ ನಡೆವಳಿಗಾತನೇ ರಚಿಸಿದನು ವೇದಗಳಂ ॥
ಅದರೊಳಿಟ್ಟನು ಪುಣ್ಯ ಪಾಪವ।
ಹದನ ನದ ನಡೆಸಿದರೆ ನಿಮಗೀ।
ಗೊದಗುವುದು ನಾಕಿಗಳ ನಗರಂ ಯಮನ ಪುರವೆಂದು ॥ ೨೮ ॥

ಹೇಗೆ ಶರಧಿಯ ಕಾಲ್ನಡೆ ಯೊಳೊಂ।
ದಾಗಿ ನಡೆಯಲ್ಕಾಡದೊಲು, ನಿಗ।
ಮಾಗಮಂಗಳ ವೀಶ್ವರಾಜ್ಞಾಪಾಶ ವೆನಿಸುವವು ॥
ರಾಗವಂತರೆನಿಸುವ ಪ್ರಾಣಿ ಗ।
ಳೀ ಗುರು ನಿಬಂಧನವ ಪಳಿಯ।
ಲ್ಕಾಗ ರುದ್ಧತ ಶಕ್ತರಿಂದೀ ದ್ವಿವಿಧ ಮನ್ನುಳಿದು ॥ ೨೯ ॥

---

೨೭ ಇವರ—ಮೇಲಿನ ೧೪ಕರಣಗಳ ವಿಷಯಗಳನ್ನೆ, ಸ್ಮೃತಿತತಿ—ವೇದಾಂತಗ್ರಂಥಗಳಲ್ಲಿ ಅಧಿಭೂತವೆಂದು, ಅವತರಿಸುವದು—ಹೇಳಲ್ಪಡುವದು, ಇದ್ದು ವಿಾಬಳಿ—ಈ ಕರಣಗಳಲ್ಲಿದ್ದುಕೊಂಡು, ದಿವಿಜರೆ—ದೇವತೆಗಳೇ ೧ನೆಯ ಸಂಧಿಯಲ್ಲಿ ವಿಸ್ತರಿಸಿರುವ ಅಧಿದೇವತೆಗಳಾಗುವರು.

೨೮ ಜಗವು+ಆಗುವದಕೆ+ಈಶನ....ಇಚ್ಛೆಯೆ—ನಾನೊಬ್ಬನೆ ಬಹುರೂಪನಾಗುವೆನೆಂಬ ಸಂಕಲ್ಪವೆ, ಮೇಣ್—ಮತ್ತು, ಇದರ—ಈ ಜಗತ್ತಿನ ನಡವಳಿಗೆ—ಕ್ಷೇಮಕ್ಕಾಗಿ, ಹದನನು—ಸಂಗತಿ. ನೂಡುವರೀತಿ ಅದ—ಅದನ್ನು, ನಿಮಗೆ+ಈಗ+ಒದಗುವದು—ಅನುಕೂಲಿಸುವದು, ನಾಕಿಗಳನಗರಂ—ಸ್ವರ್ಗವು.

೨೯ ಶರಧಿ·ಸಮುದ್ರವನ್ನು ನಿಗ...ಂಗಳು—ವಿಧಿನಿಷೇಧಶಾಸ್ತ್ರಗಳು ರಾಗವಂತರು—ರಾಗದ್ವೇಷಗಳುಳ್ಳ ಜನರು, ಈಗುರು ನಿಬಂಧನ-ಈ ಪೂಜ್ಯ ವಿಧಿನಿಷೇದ ಶಾಸ್ತ್ರಗಳಕಟ್ಟನ್ನು, ಪಳಿಯಲ್ಕೆ+ಆಗರು—ತಿರಸ್ಕರಿಸುವದಕ್ಕಾಗುವದಿಲ್ಲ, ಉದ್ಧತ-ಸೊಕ್ಕಿನಡೆಯುವ ಶಕ್ತರಿಂದಲೂ, ಈ ದ್ವಿವಿಧಮನ್ನು+ಉಳಿದು—ಈವಿಧಿನಿಷೇದಶಾಸ್ತ್ರ, ಪುಣ್ಯ ಪಾಪಕರ್ಮಗಳನ್ನು ಬಿಟ್ಟು ಇರುವದಕ್ಕಿಲ್ಲ.

ಚರಿಸುತಿಹ ಜಂತುಗಳನೊಡನಾ।
ವರಿಸುವದು ಪಾಪೌಘ ವದರಿಂ।
ದೊರಕುವದು ಕಡು ನೀಚಯೋನಿಗಳಲ್ಲಿ ನೀಚಾಂಗಂ॥
ಇರ ದದರ ದೆಶೆಯಿಂ ವಸ್ತ್ರಾ।
ಭರಣ ಭೋಜನ ದಾರ ಸುತ ಮಂ।
ದಿರ ಸಹಾಯ ವಿಯೋಗ ಮುಂಟಾಗುವದು ನಿಜವಾಗಿ ॥ ೩೦ ॥

ಕರಗಳುಳ್ಳವು ಕೆಲವು ಪಾದಗ।
ಳಿರುತಿರುವವವು ಕೆಲವು, ಪಾದವು।
ಕರಗಳಿಲ್ಲದ ಜಂತುಗಳು ಕೆಲ ಕೆಲವು, ಮೂಗಿರಲು॥
ಇರದು ಕಣ್ಣುಗಳೊಡನೆ, ಕಣ್ಣುಗ।
ಳಿರಲು ಮೂಗಿಲ್ಲದ ಶರೀರ ಗ।
ಳಿರುತಿಹವು ಕೆಲ ಕೆಲವು ತಿರ್ಯಗ್ಜಂತುಜಾಲವಲಿ ॥ ೩೧ ॥

ಅವಯವದೊಳೊಂದಿದ್ದರೊಂದಿರ।
ದಿವರುಪಾಂಗಗಳಲ್ಲಿ ವೈಕ।
ಲ್ಯವ ಪಡೆದು ಕೊಂಡಿಹವು ಕೆಲ ವಿಲ್ಲದವು ಕೆಲ ಕೆಲವು॥
ಸವೆದರಂಗದ ಪೂರ್ತಿ, ಪೂರ್ತಿಯು।
ಭವಿಸಲಂಗದ ಕೃಶತೆ ಯಿಲ್ಲದಿ।
ರುವವು ಕೆಲ ಕೆಲ ವೀ ಪ್ರಕಾರದ ಜಂತು ಜಾಲದಲಿ ॥ ೩೨ ॥

---

೩೦ ಚರಿಸುತಿಹ—ಜೀವನವ್ಯಾಪಾರವನ್ನು ಕೈಕೊಂಡಿರುವ ಪ್ರತಿಯೊಬ್ಬ, ಜಂತು—ಜೀವನನ್ನು, ಆವರಿಸುವದು—ಮುಚ್ಚಿಕೊಳ್ಳುವದು, ಪಾಪಗಳ+ಓಘ—ರಾಶಿ. ಕಡು—ತೀರ ನೀಚವಾದ, ಯೋನಿ—ಜನ್ಮಗಳಲ್ಲಿ, ಅಂಗಂ—ದೇಹ, ದಾರ—ಹೆಂಡತಿ ಸುತ—ಮಕ್ಕಳು ಮರಿಗಳು, ಮಂದಿರ—ಮನೆಮಠಗಳ ಸಹಾಯವು ಇರದು, ಒಂದುವೇಳೆ ಬದಗಿ ಬಂದರೂ ಕೂಡಲೆ, ವಿಯೋಗ—ನಿಲ್ಲದೆ ಅಗಲಿಹೋಗಿಬಿಡುವವು.

೩೧ ತಿರ್ಯಕ್ಕು-ಅಡ್ಡಲಾಗಿ ಸಂಚರಿಸುವ ಏಡಿ, ಎಸಡಿ, ನಳ್ಳಿ ಮುಂತಾದ, ಜಂತು-ಪ್ರಾಣಿಗಳ, ಜಾಲ—ಸಮೂಹದಲ್ಲಿ.

೩೨ ಉಪಾಂಗ—ದೇಹದ ಒಳ ಅವಯವಗಳು ಕೈ ಕಾಲು ಕಣ್ಣು ಮೂಗು ಕಿವಿಗಳಲ್ಲಿ ಒಂದಿದ್ದರೊಂದಿಲ್ಲದವು, ಇದ್ದರೂ ಎಲ್ಲವೂ ಪೂರಾ ಇಲ್ಲದವುಗಳೂ ಹೀಗೆ ಅವುಗಳಲ್ಲಿ, ವೈಕಲ್ಯ—ಕುಂದುಕೊರತೆಯುಳ್ಳವು, ಸವೆದರೆ—ಅವಯುವಗಳು ಕ್ಷೀಣಿಸಿದರೆ, ಅಂಗದಪೂರ್ತಿ—ದೇಹವೇ ಕ್ಷೀಣಿಸುವದು, ಮತ್ತೆಕೆಲವು ಪೂರ್ತಿಯುಭವಿಸಲು—ಪೂರಾ ಅವಯುವಗಳು ವೃದ್ಧಿಗೂಡಿಕೊಳ್ಳುವಷ್ಟರಲ್ಲೇ ಅಂಗದಕೃಶತೆ-ದೇಹವೇ ಕೃಶವಾಗಿ ಹೋಗಿಯೇಬಿಡುವವು. ಜಂತುಜಾಲ—ಪ್ರಾಣಿಗಳ ಗುಂಪಿನಲ್ಲಿ.

ಒಂದರಿಂ ನೋಣೆರಡೆರಿಂ ಮೂ ।
ರಂದದಿಂ ನಾಲ್ಕಂದದಿಂ ದಿರು ।
ವಿಂದ್ರಿಯಗಳಿಂ ಜೀವಿಸುವ ಜಂತುಗಳು ಕೆಲವುಂಟು ॥
ಹೊಂದಿರುತ್ತಿರು ವಿಂದ್ರಿಯಂಗಳೊ ।
ಳಿಂದ್ರಿಯಾರ್ಥಂ ತೋರದಿರು ತಂ ।
ಮಾಂದ್ಯ ಮಾಗಿರುತಂ ಚರಿಸುತಿಹ ಕೆಲವು ಜಂತುಗಳು ॥ ೩೩ ॥

ಧಾತು ಸಪ್ತಕದಿಂದ ಬೆರೆದಿಹ ।
ಚೇತನಂಗಳ ಪಂಙ್ತಿಯಲಿ ಕೆಲ ।
ವೋತಿರುತ್ತಿಹ ವದರೊಳಗೆ ಕೆಲವಿದರ ಸಂಚಯದಿ ॥
ಓತಿರವು, ಕೆಲವಸ್ತಿ ಸಂಧಿ ಗ ।
ಳಾತಿರವು, ಕೆಲವೆಡಯೊಳಸೃ ಗು ।
ತ್ಪಾತ ಮುಂಟಿಲ್ಲದ ಬಳಿಗಳಿರುತಿಹವು ಕೆಲ ಕೆಲವು ॥ ೩೪ ॥

ಕೆಲವೆಡೆಯೊಳುದ್ರೇಕ ಮುಂಟು ।
ಜ್ವಲಿಪ ಸತ್ವಗುಣಕ್ಕೆ ಕೆಲವೆಡೆ ।
ಯೊಳಗೆ ರಾಜಸ ಗುಣಕೆ, ತಾಮಸ ಗುಣಕೆ ದೃಢವಾಗಿ ॥
ಬಲವಳಿದು ಸತ್ವಕ್ಕೆ ರಾಜಸ ।
ದುಳುವೆ ಯುಂಟಾದಲ್ಲಿ ಸುಖವೆಂ ।
ದೊಳಸರಿದು ವರ್ತಿಪುದು ದುಃಖಮುದಾಗಿ ಪರಿಣತಿಯಿಂ ॥ ೩೫ ॥

---

೩೪ **ಧಾತುಸಪ್ತಕ**—ಅಸ್ಥಿ ಮಾಂಸ ಮಜ್ಜಾ ಮೇದಸ್ಸು ಸ್ನಾಯು ರಕ್ತ ಶುಕ್ಲಗಳು **ಪೂರ್ತಿ**ಯಿರುವ, ಚೇತ....ಯಲಿ-ಜೀವರಸಾಲಿನಲ್ಲಿ, ಕೆಲವು+ಓತಿರವು—ಒಲಿದಿರುವುದಿಲ್ಲ, **ಸಂಚಯದಿ**--ರಾಶಿಯಲ್ಲಿ, ಓತಿರವು—ಇನ್ನು ಕೆಲವು ವಶವಾಗಿಸೇರಿರುವುದಿಲ್ಲ ಕೆಲವು+ಅಸ್ತಿ **ಸಂಧಿ—ಮೂಳೆಗಳ** ಜೋಡಿಕೆಗಳನ್ನು ಆತಿರವು—ಅಂತು—ಹೊಂದಿಕೊಂಡಿರುವುದಿಲ್ಲ, ....**ಯೊಳು**+ಅಸೃಕ್+ಉತ್ಪಾತ–ದೇಹದ ಭಾಗಗಳಲ್ಲಿ ಮೇಲೆದ್ದು ಹರಿಯುವ ರಕ್ತವುಳ್ಳವಾದರೂ ಮತ್ತೆ ಕೆಲವುಗಳಲ್ಲಿ ರಕ್ತವೇ ಇಲ್ಲದ, ಬಳಿಗಳು–ದೇಹದಕೆಲಭಾಗಗಳಿರುವವು.

೩೫ ಕೆಲವು+ಎಡೆಯೊಳು—ಜೀವರಲ್ಲಿ ಉದ್ರೇಕಂ+ಉಂಟು—ಆಧಿಕ್ಯವುಂಟು, **ಜ್ವಲಿಪ**–ಪ್ರಕಾಶಿಸುವ ಇನ್ನು ಕೆಲವು+ಎಡೆಯೊಳಗೆ–ಜೀವರಲ್ಲಿಯಾದರೊ ರಜೋಗುಣವು ಉಳಿದವರಲ್ಲಿ ತಮೋಗುಣವು ಕೆರಳಿರುವದುಂಟು, ಬಲವು+ಅಳಿದು–ಸತ್ವಗುಣಕ್ಕೆ ತನ್ನೊಳಗೆ ಬಲ ಕುಗ್ಗಿದಾಗ, ರಾಜಸದ+ಉಳಿವೆ-ಕೈಮೇಲಾದಾಗ, ಸುಖವೆಂದು+ಒಳಸರಿದು-ಒಳಗಡೆ ಚಲಿಸಿಬಂದು ದುಃಖದ ರೂಪುಗೊಳ್ಳುವುದು.

ಪಡೆದಿರುವುದಾ ತಾಮಸವೆ ಯಾ ।
ವೆಡೆಯೊಳಿರುತಿಹುದಲ್ಲಿ ದುಃಖದ ।
ಪಡೆಗಳೆಡೆ ಯಾಡುವುವು, ಮಿಶ್ರಂದೋರೆ ಗುಣಗಳಿಗೆ ॥
ಬಿಡದೆ ಪಲತೆರವಾಗಿ ಪಲತೆರ ।
ದಡಕಗಳ ಹೆಚ್ಚುಗೆಯ ನೈದು ।
ತ್ತೊಡನೆ ವಿವಿಧಾನುಭವ ಮೀವುದು ಚಿತ್ತವೃತ್ತಿಯಲಿ ॥ ೩೬ ॥

ಆದರಾ ಚಿತ್ತದಲಿ ಕರ್ಮದ ।
ಭೇದದಿಂ ತಾನಾಚರಿಸಿದ ಶು ।
ಭೋದಯದ ದೇಹದಲಿ ಪಾಪೋದಯದ ದೇಹದಲಿ ॥
ತೀದ ವಿಷಯಾನುಭವಮೇ ಸಂ ।
ಪಾದನೆಯ ನಾಂತದವರ ಗುಣ ।
ಭೇದಮಂ ವಾಸನೆಯರೂಪದಿ ಪರಿಣತಮುದಾಯ್ತು ॥ ೩೭ ॥

ಅದರ ವಿಷಯದ ಸನ್ನಿದಾನಂ ।
ಪುದಿದೊಡಾ ವಿಷಯಗಳ ಕಾಲಂ ।
ಪುದಿದೊಡಾ ವಿಷಯಾಕರಂಗಳ ಸಂಗಮುಂಟಾಗೆ ॥

---

೩೬ ಪಡೆದಿರುವುದು+ಆ ತಾಮಸ-ತಮೋಗುಣವೆ, ಯಾವ+ಎಡೆಯೊಳು-ಯಾವ ಜೀವರಲ್ಲಿ ಅಧಿಕತ್ವ ಹೊಂದಿರುವದೊ, ಅಲ್ಲಿ-ಆ ಜೀವರಲ್ಲೆಲ್ಲ ....ಪಡೆಗಳು-ಗುಂಪುಗುಂಪಾದ; ದುಃಖಗಳೇ ಎಡೆಯಾಡುತ್ತಿರುವವು. ಮಿಶ್ರಂ+ತೋರೆ-ಒಂದರಲ್ಲೊಂದು ಕಲೆಬೆರಕೆಯಾಗಿ ತೋರಿಕೊಳ್ಳಲು, ಬಿಡದೆ–ತಪ್ಪದಂತೆ ಜೀವರಿಗೆ, ಪಲತೆರದ–ವಿವಿಧವಾದ ಅಡಕಗಳ–ಸುಖ, ದುಃಖ, ಸುಖದುಃಖ ಮಿಶ್ರವೆಂಬ, ಭೋಗ—ವೇದನೆಗಳ ಹೆಚ್ಚುಗೆಯನ್ನು, ಐದುತ್ತ—ಹೊಂದುತ್ತ ಒಡನೆ ಸತ್ವಾದಿಗುಣಗಳು, ಚಿತ್ತವೃತ್ತಿಯಲಿ–ವಿಭಿನ್ನ ಅನುಭವಗಳನ್ನು ತಂದು, ಈವುದು–ಕೊಡುವವು.

೩೭ ಕರ್ಮದಭೇದ–ಪುಣ್ಯ ಪಾಪ ಮಿಶ್ರ ಎಂಬ ಬೇರ್ಬೇರೆಯ ಕರ್ಮವನ್ನಾಚರಿಸಿದ್ಧರಿಂದ, ಶುಭ+ಉದಯುದ ಪಾಪ+ಉದಯ–ಹುಟ್ಟಿಬಂದವಿಭಿನ್ನ ದೇಹಗಳಲ್ಲಿ, ತೀದ–ಅನುಭವಿಸಿ ಮುಗಿಸಿಕೊಂಡ, ....ಯನು+ಆಂತು—ನಿಮಿತ್ತ ಮಾಡಿಕೊಂಡು, ಅದರ+ಅದರ–ಆಯಾಯ ಬೇರ್ಬೇರೆಯ ಅನುಭವಗಳನ್ನನುಸರಿಸಿಕೊಂಡು ಉಂಟಾದ ಸಂಸ್ಕಾರವು ವಾಸನೆಸಳ ರೂಪದಿಂದ ಚಿತ್ತದಲ್ಲಿ ಬಂದು, ನೆಲೆನಿಂತ ಅನುಭವಗಳೆ ಆ ರೂಪಾಂತರವನ್ನು ಹೊಂದುವವು.

೩೮ ಅದರ–ಆ ಸಂಸ್ಕಾರಗಳ, ಪುದಿದೊಡೆ–ಕೂಡಿ, ಸೇರಿಕೊಂಡರೆ. ಆವಿಷಯ+ಆಕರಂಗಳ—ಆ ವಿಷಯಲಂಪಟರ, ಶಿಕ್ಷೆ–ತನ್ನ ಕಟ್ಟಿನಲ್ಲಿರದೆ, ಆ ಪದದಿ–ವಿಷಯ, ತತ್ಸಂಗಿ

ಚದರಿ ಶಿಕ್ಷೆಯೊಳಿರದೆ ಮೇಣಾ।
ಪದದೆ ಹರಿದೋಡಾಡುವದು, ಬಿಡ।
ದದರ ಸಂಗವ ಮಾನಸಕ್ಕಿದು ಸಹಜಗುಣಮಲ್ತೆ ॥ ೩೮ ॥

ಬುದ್ಧಿಯವರೊಡನನುಸರಿಸಿ ಪರಿ।
ಶುದ್ಧರಾಡಿದ ಮಾತಿನಲಿ ಸಂ।
ಶುದ್ಧಿಯಲಿ ವಿಶ್ವಸಿಸದಾ ವಿಷಯಾನುಭವಗಳಿಗೆ॥
ಸಿದ್ಧಿಯನು, ಸಿದ್ಧಿಗೆ ವಿರೋಧ ನಿ।
ರುದ್ಧಮಾಗಲದಕ್ಕುಪಾಯವ।
ಬುದ್ಧಿಮಂತರ ಕೇಳದೇ ತಾಂ ನಿರ್ಧರಿಸುತಿಹುದು ॥ ೩೯ ॥

ಇದರ ಸಂಗದ ಬಲದಿ ಸತ್ವ।
ಕ್ಕೊದಗದಾವಿರ್ಭಾವ ವದರಿಂ।
ದೊದಗುವದು ತಾಮಸ ವದರ ದೆಶೆಯಿಂ ದಹಂಕೃತಿಗೆ॥
ಇದಿರೊಳಿಹ ದೇಹದಲಿ ದೇಹದ।
ಪದರದೊಳಗಿರು ವಿಂದ್ರಿಯಂಗಳೊ।
ಳಿದಿರೊಳಿಹ ಪ್ರಾಣಂಗಳೊಳಭಿಮಾನವಿದು ಬಿಡದು ॥ ೪೦ ॥

ಚಿತ್ತಹೃನ್ಮತ್ಯಹಮೆನುವ ಬಳಿ।
ಗೊತ್ತರಿಸಿ ದೀ ಜಾಡ್ಯವೇ ಬಿಡ।
ದುತ್ತಮದ ಖಂಡದ ವಿಪತ್ತಿಗೆ ಮೂಲ ವೆನಿಸುವದು॥
ಮತ್ತೆ ಕಿವಿಯೊಳು ಬಿದ್ದ ಮಾತಿನ।
ಮೊತ್ತದಲಿ ಕೆಲಕೆಲವು ತಿಳಿಯದೆ।
ಕತ್ತರಿಸಿ ಹೋಗುವದು, ತೊದಲಿಂದೊಡನೆ ಕೇಳುವದು ॥ ೪೧ ॥

---

ಗಳು ಇವುಗಳಲ್ಲಿಯೇ ಹರಿದು+ಓಡಾಡುವದಕ್ಕಾರಂಭಿಸಿಬಿಡುವದು.

೪೦ ಸತ್ವಕ್ಕೆ—ಸತ್ವಗುಣಕ್ಕೆ, ಒದಗದು+ಆವಿರ್ಭಾವವು—ತಲೆದೋರುವುದಿಲ್ಲವು. ಅದರಿಂದ+ಒದಗುವುದು—ಅಧಿಕವಾಗಿ ಪ್ರಾಪ್ತವಾಗುವದು. ತಾಮಸ–ತಮೋಗುಣವು. ಇದಿರೊಳಿಹ–ಎದುರಿಟ್ಟು ಘಟದಂತೆ ತನಗೆ ಭಿನ್ನವಾಗಿಕಾಣುವ.

೪೧ ಚಿತ್ತ+ಹೃತ್–ಮನಸ್ಸು, ಮತಿ–ಬುದ್ಧಿ, ಅಹಂ (ಕಾರ)+ಎನುವಬಳಿಗೆ+ಒತ್ತರಿಸಿದ–ಸಮೀಪಿಸಿ ಬಂದ, ಈ ಜಾಡ್ಯವೆ–ಅಧ್ಯಾಸ, ಗುಣಗಳವಿಕಾರಗಳೆಂಬ ಈ ದುಃಖ ಎಂಬುದೆ. ಬಿಡದೆ–ತಪ್ಪದಂತಾಗುವ, ಉತ್ತಮ ಖಂಡದ–ಅಂತಃಕರಣಚತುಷ್ಟಯುವ, ವಿಪತ್ತಿಗೆ–ತೊಂದರೆಗಳಿಗೆಲ್ಲ, ಮೊತ್ತದಲಿ–ಕಿವಿಗೆ ಕೇಳಿಬಂದಮಾತುಗಳ ಸಾಲಿನಲ್ಲಿ.

ನಾಲಿಗೆಯ ತುದಿ ಯಲುಗಲಾಗುವ ।
ನಾಳಿಯೆ ಸರಸ್ವತಿಯೆನಿಪು ದದ ।
ರೇಳಿಗೆಯದಿರೆ ಕಿವಿಗಳೋಳಿರಡರೊಳಗಿರುತಿಹುದು ॥
ಕೇಳಿಕೆಯ ಬಲ ವಿಲ್ಲದಿರಲು ವಿ ।
ಶಾಲತರವಾದದರ ಶಕ್ತಿ ಸ ।
ಮೂಲ ವಾಗೊಂದಾದ ರಕ್ಷರ ಕೇಳಲಾಗಿರದು ॥೪೨॥

ವಿವಿಧ ತರದಾಹಾರಗಳ ಪಚ ।
ನವೆ ಸಶಂಕಿತವಾಗಲಾ ರಸ ।
ಸವೆದು ಕೆಟ್ಟೊಳಸೇರುವದು, ಮತ್ತದರದೆಶೆಯಿಂದ ॥
ಕವಡು ರಕ್ತದೊಳಾಗುವುದು ತ ।
ದ್ದ್ರವದ ದೋಷವ ನುಂಡ ತನು ಚ ।
ರ್ಮವೆ ಪದಾರ್ಥ ಸ್ಪರ್ಶದಲಿ ವಿಕಲತೆಯನೈದಿಹುದು ॥ ೪೩ ॥

ಪಿತ್ತನಾಡಿ ವಿಕಾಸ ವಾಗಿಳಿ ।
ದೊತ್ತರಿಸಿದ ಸಲಿಲವ ಮೇಲ ।
ಕ್ಕೆತ್ತಿದೊಡೆವಾ ಮಸ್ತಕದೊಳಿಹ ಮಿದುಳಿನಲಿ ದೋಷಂ॥
ಪತ್ತಿದೊಡವಾ ತಾರಕಾಂತ ।
ವೃತ್ತಿಯುಳ್ಳ ನರದಲಿ ದೋಷಂ ।
ಪತ್ತುವುದು ವೇಣತ್ತಣಿಂ ಚನ್ನಾಗಿ ಕಾಣಿಸದು ॥ ೪೪ ॥

---

೪೨ ನಾಲಗೆ–ನಾಲಿಗೆಯ, ಅಲುಗು-ಅಲುಗಾಡುವ, ತುದಿಯಲಿ+ಆಗುವ-ಇರುವ, ನಾಳಿಯು–ಸರಸ್ವತಿಯೆಂಬ ನಾಡಿಯು ಏಳಿಗೆಯು+ಅದು+ಇರೆ–ಆ ನರದ ಅಭಿವೃದ್ಧಿಯಿರುವಲ್ಲಿ, ಅದರಿಂದ ಉಚ್ಚರಿಸಲ್ಪಡುವ ಮಾತುಗಳನ್ನು ಕೇಳುವ ಬಲವು, ಕಿವಿಗಳಲ್ಲಿಯೂ ಇದ್ದು ಕೇಳಿಬರುತ್ತಿರುವದು, ಮೂಕನು ಕಿವುಡನಾಗಿರುವದು–ನಾಲಿಗೆ ಕಿವಿಗಳ ಪರಸ್ಪರ ಸಂಬಂಧವನ್ನು ಸೂಚಿಸುವದು.

೪೩ ಸಶಂಕಿತಂ+ಆಗಲು-ಜಠರಾಗ್ನಿಯಲ್ಲಿ ಸರಿಯಾಗಿ ಜೀರ್ಣವಾಗದೆ ಇರಲು, ಕೆಟ್ಟು+ಒಳ ಸೇರುವದು+ಕವಡು–ಕವಲೊಡೆದು ಬಂದ ದೋಷವು, ತತ್+ದ್ರವದ–ಆ ರಕ್ತಗತವಾಗಿ ಹರಿದುಬಂದ, ದೋಷವನು+ಉಂಡ–ಹೊಂದಿದ ತನು–ಶರೀರದ ಚರ್ಮವೆ....ಸ್ಪರ್ಶದಲಿ-ವಸ್ತುಗಳನ್ನು ಮುಟ್ಟಿ, ಸ್ಪರ್ಶವನ್ನರಿತು ಕೊಳ್ಳುವದರಲ್ಲಿ, ವಿಕಲತೆಯನು+ಐದಿ+ಇಹುದು-ತನ್ನಲ್ಲಿ ಕುಂದುವಡೆದು, ತ್ವಕ್ಕು ಅರಿವಿಲ್ಲದ್ದಾಗಿ ಬೆಂಡಾಗಿರುವದು.

೪೪ ಒತ್ತರಿಸಿದ—ಒತ್ತಿಕೊಂಡುಬಂದ, ಸಲಿಲ—ಕೆಟ್ಟನೀರು, ಮೇಲಕ್ಕೆ+ಹತ್ತಿ

ಪಟಲ ಮೆಂಬುದು ಕಾಚಮೆಂಬುದು ।
ಪಟುತರದ ದೃಷ್ಟಿಯ ನಿರೋಧಿಸಿ ।
ನಟಿಸದಿಹ ಕಂಚುಕ ವೆನಿಪುದುಂ ದೃಷ್ಟಿಗತ ದೋಷಂ ॥
ಘಟಗಳೆರಡರೊಳುದಿಪ ನಾನಾ ।
ಕುಟಕ ದೋಷಂ ಚುಲ್ಲ ಚಿಲ್ಲಂ ।
ಪಿಟಕ ಪಿಲ್ಲಾದಿಗಳು ತೊಂಬತ್ತಾರೆನಿಸುತಿಹವು ॥ ೪೫ ॥

ಲೋಚನದಲಿರುತಿಹವು; ರಸನೆಗೆ ।
ಗೋಚರಿಸುವಾಹಾರದಿಂದ ವಿ ।
ಷೂಚಿ ಮೊದಲಾಗಿರ್ಪ ರೋಗಗಳೊಡನೆ ತೋರಿದರೆ ॥
ಆಚರಿಸುವುದು ಕೃಷ್ಣ ಕಂಟಕ ।
ರೋಚಕೇತರ ರುಚಿ ಲವಣ ಮ ।
ಮ್ಲಾಚಮನ ಮುಪಜಿಹ್ವಿಕಾದಿ ಗದಂಗಳೊಡನೊಡನೆ ॥ ೪೬ ॥

---

ಜೊಡಂ+ಆ ಮಸ್ತಕ-ತಲೆಯಲ್ಲಿರುವ ಮಿದುಳಿನಲ್ಲಿ ದೋಷವುಬಂದು, ಪತ್ತಿದೊಡಂ- ಹತ್ತಿ-ಸೇರಿಕೊಂಡರೂ, ಆ ತಾರಕ-ಆ ಕಣ್ಣುಗಳಮಧ್ಯದ ಕರೀಗುಡ್ಡಿನ, ಅಂತರ್ವರ್ತಿಯುಳ್ಳ-ಒಳಗಡೆಯಲ್ಲಿರುವ ನರಗಳಲ್ಲಿ. ....ಪತ್ತುವುದು–ದೋಷವು ಹತ್ತುವುದು, ಮೇಣ್+ಅತ್ತಣಂ–ಅದರಿಂದ ಕಣ್ಣಿಗೆ ಚೆನ್ನಾಗಿ ಕಾಣಿಸದು.

೪೫ ಪಟಲ–ಕಣ್ಣುಪರೆ, ಚುಕ್ಕೆ ಎಂಬ ನೇತ್ರರೋಗ, ಕಾಚಂ–ರಾತ್ರಿಯಲ್ಲಿ ಕಾಣದಿರುಪರಾತ್ರೀಕಾಚವೆಂಬುದು ಅಥವಾ ಕಾಣ-ಒಕ್ಕಣ್ಣಿನವ, ಕಂಚುಕ-ಚಾಳೀಸು ನಲವತ್ತನೆಯ ವಯಸ್ಸಿನ ಚಾಳೀಶ್ವರಿಯೆಂಬ ದೃಷ್ಟಿಗತ–ಕಣ್ಣುಗಳಲ್ಲಿರುವ ದೋಷಗಳು, ಘಟ (ಸೇರಿರುವ) ಗಳು+ಎರಡರೊಳು--ಎರಡು ಕಣ್ಣುಗಳೊಳು ಉದಿಪ-ಹುಟ್ಟುವ, ನಾನಾಕುಟಕ-ಕಡಿತ, ಇರಿತ ಬಗೆಬಗೆಯ ಕಣ್ಣುಬೇನೆಗಳು, ಚುಲ್ಲ-ರೋಗದಿಂದ ನೀರು ಸುರಿಯುವುದು ಪಿಟಕ—ಕಣ್ಣಿನ ಬೊಬ್ಬೆ ಕುರಾ, ಪಿಚ್ಚಟ—ಕಣ್ಣಿನ ಒಂದು ಬೇನೆ, ಚಿಲ್ಲಂ ಪಿಲ್ಲ—ಕೊಳೆತು ನೀರು ಸೋರುವದು ಇರುಳುಗಣ್ಣು ಮಂಜುಗಣ್ಣು. ಗಜುಗ—ಕಣ್ಣಿನ ಹೂ ಆದಿ—ಮುಂತಾದವು ೯೬ಬಗೆಯ ನೇತ್ರರೋಗಗಳು ಬಹುಬಾಧೆಗೊಳಿಸುವವು.

೪೬ ರಸನೆಗೆ--ನಾಲಿಗೆಗೆ ವಿಷೂಚಿ—ಮುಳ್ಳಿನಗೆರೆ ಆಚರಿಸುವದು—ಉಂಟಾಗುವದು ಅವುಗಳಲ್ಲಿ, ಕೃಷ್ಣಕಂಟಕ—ಕರೀಗೆರೆಯೇ ಮುಂತಾದ ನಾಲಿಗೆಯ ರೋಗಗಳೂ, ರೋಚಕೇತರ-ಅರೋಚಕದೋಷ, ಲವಣಂ+ಅಮ್ಲಾಚಮನಂ–ಉಪ್ಪುಪ್ಪಾಗಿಯೂ ಹುಳಿಹುಳಿಯಾಗಿಯೂ ಕಾಣುವದು, ಉಪಜಿಹ್ವಿಕ—ಕಿರುನಾಲಿಗೆಯಲ್ಲದೆ, ಗಂಟಲಲ್ಲಿ ಶೀತದ ಹರಳು, ದುರ್ಮಾಂಸ ಬೆಳವಳಿಗೆ ಆದಿ—ಈ ಮುಂತಾದ ಗದಂಗಳು—ರೋಗಗಳೆಲ್ಲ ನಾಲಿಗೆಯೆಲ್ಲಿ ತೋರಿಕೊಳ್ಳುವವು.

ನಾಸಿಕದೆ ಮಿದುಳಿನ ವಿಕಾರಂ ।
ಪೈಸರಿಸೆ ಪೀನಸ ಮೆನುತ್ತೊಡ ।
ನೋಸರಿಸದೇ ರಕುತ ರಕುತದ ಹಕ್ಕು ತೋರುವುದು ॥
ಆ ಸರಿಸದಲಿ ಸಲಿಲದೋಷಂ ।
ವಾಸಮುಂ ಗೈಯಲ್ಕೆ ಶ್ಲೇಷ್ಮ ವಿ ।
ಕಾಸ ಮಾವಿರ್ಭವಿಪುದು ಶಿರೋ ಭಾರಮಂ ಪಿಡಿದು ॥ ೪೭ ॥

ಶ್ರುತಿಯು ಸಮ್ಮಂ ನೇತ್ರಮುಂ ರುಚಿ ।
ಗತಿಯ ನಡೆಸುವ ನಾಲಿಗೆಯು ಮು ।
ನ್ನತ ಸುಗಂಧ ಕುಗಂಧಮಂ ವಾಸಿಸುವ ನಾಶಿಕೆಯುಂ ॥
ಕ್ಷಿತಿಯೊಳಗೆ ಮಧ್ಯಮದ ಖಂಡ ವಿ ।
ದತಿ ವಿಪತ್ತಿಗೆ ಹೇತು ವೆನಿಸುವ ।
ದತುಲ ಮತಿಗಳ ಮತದೊಳಧ್ಯಾತ್ಮದಲಿ ಕೇಳೆಂದ ॥ ೪೮ ॥

ಗಳವು ತಾಲುಗಳೆರಡು ಮೂರ್ಧ ।
ಸ್ಥಲವು ದಂತಂಗಳು ತುಟಿ ಯುದರ ।
ಕಲಿತ ಮಾದಧರಂ ರಸಜ್ಞಾ ಸ್ಥಾನಮುಂ, ನಾಸಾ ॥
ಸ್ಥಲ ಮುಮಾರ್ಯರ ಮತದೊಳೆಂಟೀ ।
ಫಲಿಸ ಲಕ್ಷರ ಶಬ್ದ ದೇಶಂ ।
ಗಳಿವರ ವಿಕಾರಂ ಘಟಿಪುದೆಲ್ಲೆಲ್ಲಿ ಯಲ್ಲಲ್ಲಿ ॥ ೪೯ ॥

---

೪೭ ಪೈಸರಿಸೆ—ಪಸರಿಸಲು ವ್ಯಾಪಿಸಲು ಅದರಿಂದ ಮೂಗಿನಲ್ಲಿ ಚಟ್ಟನೆ ನೀರು ಸೋರಿಬರುವ ಪೀನಸವು+ ಎನುತ್ತ+ ಒಡನೆ—ಕೂಡಲೆ ಓಸರಿಸದೆ—ಪಕಕೆ ಸರಿಯದೆ, ರಕು....ಹಕ್ಕು—ರಕ್ತದ ಸಿಂಬಳವು, ಆಸರಿಸ—ಸಾಮಾನ್ಯವಾಗಿ ಮಗ್ಗಲಿನ—ಎದೆ ಮೂಗು ಗಂಟಲು ನೆತ್ತಿ ಇವುಗಳಲ್ಲಿ, ಸಲಲ–ಶೀತದನೀರಿನ, ವಿಕಾಸಂ–ವಿಸ್ತರಂ+ ಆವಿರ್ಭವಿಪುದು–ಪ್ರಕಟವಾಗುವದು.

೪೮ ಶ್ರುತಿ—ಕಿವಿ ಸಮ್ಮಂ—ಚರ್ಮ ಖಂಡವು+ ಇದು+ ಅತಿವಿಪತ್ತಿಗೆ–ಹೆಚ್ಚಾದ ದುಃಖಗಳಿಗೆ ಅತುಲಮತಿ–ಜ್ಞಾನಿಗಳ ಅಭಿಪ್ರಾಯದಲ್ಲಿ ಅಧ್ಯಾತ್ಮದಲಿ–ನಮ್ಮೊಳಗಿರುವ ಜ್ಞಾನೇಂದ್ರಿಯಗಳ ಮಧ್ಯಮ ಖಂಡವು ಕಾರಣವಾಗಿರುವವು.

೪೯ ಗಳವು—ಗಂಟಲು, ತಾಲು—ಅಂಗಳ, ಮೂರ್ಧ—ನೆತ್ತಿ, ದಂತ—ಹಲ್ಲು, ಉದರ—ಹೊಟ್ಟೆ, ಅಧರ—ತುಟಿಗಳು, ಸರಜ್ಞಾ—ನಾಲಿಯ ತುದಿ, ನಾಸಾ—ಮೂಗು, ಫಲಿಸಲು—ಈ ಎಂಟು ಸ್ಥಾನಗಳಲ್ಲಿಯೆ ಅಕ್ಷರಗಳು ಉಚ್ಚರಿಸಲ್ಪಡಬೇಕಾದ್ದರಿಂದ, ಇವರ—ಇವುಗಳಲ್ಲಿ ಕುಂದುಕೊರತೆಗಳಾದರೆ.

ವ್ಯಕ್ತವಾಗಿಹ ಶಬ್ದ ಉದಿಸದು ।
ಪ್ರಾಕ್ತನದ ಜನ್ಮದಲಿ ಪುಣ್ಯದ ।
ಶಕ್ತಿಯಿಲ್ಲದರಿವು ದದು ಕಾರ್ಯವು ದುರ್ಲಕ್ಷವೆಂದು ॥
ವ್ಯಕ್ತಿಯಲಿ ಸ್ತ್ರೀ ಪುರುಷ ರೂಷ್ಮದ ।
ಶಕ್ತನಾಹಂ ಶಷಸಹಗಳ ವಿ ।
ಭಕ್ತಿಯಂ ಪಡೆದಿರದು; ಮಿಕ್ಕಿನ ಜಂತುಜಾಲದಲಿ ॥ ೫೦ ॥

ವಚನವೆಂಬುದು ತೋರದಿರ್ಪುದು ।
ಸುಚರಿತಂ ದುಶ್ಚರಿತವಾಗೀ ।
ರುಚಿರ ರೇಖೆಗಳಿಂ ದಿಹುದು ಪಾಣಿಯಲಿ ಪುರುಷರ್ಗೆ ॥
ಕುಚ ಕಲಶವತಿಯರ್ಗೆ ದಕ್ಷಿಣ ।
ದೆ ಚದರದೇ ವಾಮದಲಿ ಪಾಪದ ।
ನಿಚಯದಿಂ ಕರಿದಾಗಲಾಗೆರೆ ದಗ್ನ ಹಸ್ತವದು ॥ ೫೧ ॥

ಕರದ ಪಾಗಿಂ ದನುಚಿತ ತಲದೆ ।
ಗೆರೆಗಳಿರ್ದೊಡ ಮುತ್ತಮೋತ್ತಮು ।
ಧರಣಿಯಲ್ಲಿ ಪವಿತ್ರ ವಸ್ತುಗಳನ್ನು ಸೋಂಕಿದೊಡಂ ॥

---

೫೦ ವ್ಯಕ್ತ—ಸ್ಫುಟ, ಉದಿಸದು—ಉಚ್ಚಾರವಾಗುವದಿಲ್ಲವು, ಪ್ರಾಕ್ತನದ–ಪೂರ್ವಜನ್ಮದ, ಶಕ್ತಿ—ಪುಣ್ಯದ ಬಲವಿಲ್ಲದ್ದನ್ನೆ, ಅರಿವುದು—ಇದು ತಿಳಿಸಿಕೊಡುವದು, ಏತಕ್ಕೆಂದರೆ ಅಕಾರ್ಯವು—ಈ ಶುದ್ಧ ಉಚ್ಚಾರವಿಲ್ಲದಿರುವದು, ಅನ್ಯಥಾ ದುರ್ಲಕ್ಷವು—ಲಕ್ಷಿಸುವದಕ್ಕಿಲ್ಲ, ಊಷ್ಮದ—ಜತೆಗೊಂಡಿರುವ ಮನುಷ್ಯವರ್ಗಮಾತ್ರ ಅಕ್ಷರಾತ್ಮಕ ಶಬ್ದವನ್ನುಚ್ಚರಿಸುವ ಶಕ್ತಿಯನ್ನು ಪಡೆದುಕೊಂಡಿದ್ದರೂ ತಕ್ಕಷ್ಟು ಪುಣ್ಯದ ಬೆಂಬಲವಿಲ್ಲದವರಲ್ಲಿ—ಶ, ಷ, ಸ, ಹ ಎಂಬ ಅಕ್ಷರಗಳನ್ನು, ವಿಭಕ್ತಿಯಂ—ವಿಂಗಡಿಸಿ ಉಚ್ಚರಿಸುವ ಶಕ್ತಿಯನ್ನು ಪಡೆದುಕೊಂಡಿರುವದಿಲ್ಲವು.

೫೧ ವಚನ—ಅಕ್ಷರಾತ್ಮಕ ಮಾತುಗಳು ಮಿಕ್ಕಪ್ರಾಣಿಗಳಲ್ಲಿರುವದಿಲ್ಲ, ಸುಚರಿ.... ರೇಖೆ—ಸೊಗಸಾದ ಅಂಗೈಯೊಳಗಿನ ಗೆರೆಗಳು, ಮುಂದಿನ ಶುಭಾಶುಭಗಳನ್ನು ಸೂಚಿಸುವವು, ಕುಚ....ಯರ್ಗೆ–ಹೆಂಗಸರಿಗೆ. ಕ್ರಮದಿಂದ ಬಲಗೈ ಎಡಗೈಗಳಲ್ಲಿರುವವು, ನಿಚಯ–ಪಾಪದರಾಶಿಯಿಂದ.

೫೨ ....ಪಾಂಗಿಂದ+ಅನುಚಿತ ತಲದೆ—ಕೈಯೊಳಗಿರುವಂತೆ ಅಂಗಾಲಿನಲ್ಲಿದ್ದರೆ, ಅಂಘ್ರಿ—ಕಾಲು ಧರಣಿ—ಭೂಮಿಯಲ್ಲಿ ಅಪವಿತ್ರವಸ್ತುಗಳೂ ಕಾಲು ಸೋಕಿದ ಮಾತ್ರದಿಂದ ಪವಿತ್ರವಾಗುವವು ಇರದೆ—ಹಾಗಿರದೆ ಪಾವುಗೆ—ಪಾದುಕೆಗಳಂತೆ ಸಮವಾದರೂಪದಲ್ಲಿ ಅಂಗಾಲಿದ್ದರೆ, ಅವತರಿಸುವದು–ದುಃಖಬೀಜಗಳಾದ ಪಾಪಗಳೇ ಹುಟ್ಟುಗಟ್ಟುವವು.

ಇರದೆ ಪಾವುಗೆಯಂತೆ ರೂಪಂ ।
ಧರಿಸಿ ಮೆರೆದೊಡ ಮಂಘ್ರಿಯಿಂದವ ।
ತರಿಸುವುದು ದುಃಖಕ್ಕೆ ಸಂಪಾದನ ಮೆನಿಪ ಬೀಜಂ ॥ ೫೨ ॥

ಕುಸುಮಶರನ ಧ್ವಜದಿ ಮೂತ್ರಂ ।
ಪ್ರಸರಿಸುವ ಕಾಲದಲಿ, ವಾಮ ।
ಪ್ರಸೃತ ಮಾದೊಡ ಮುಚ್ಚಮಾದೊಡೆ ಮದರ ಮಸ್ತಕವು ॥
ಪ್ರಸಿತ ಘನತೆಯ ನಾಂತೊಡಂ ಕಡು ।
ನುಸಿಗಳೆಡೆಯಾಡುವ ಬಳಿಯ ಕಂ ।
ಪೆಸೆದೊಡಂ ಶುಕ್ಲದಲಿ ದುರ್ಭಯ ಮುಂಟು ಕೇಡಿದರಿಂ ॥ ೫೩ ॥

ಪಾಯುವಿನಲಾತ್ಮೀಯ ದುರಿತ ।
ಪ್ರಾಯ ವಿಂತಿಹುದೆಂಬ ಪೊಲ್ಪಹು ।
ವಾಯುಗಳು ಸಂಚರಿಸುತಿರ್ದೊಡ ಮಧಿಕ ತರಮಾಗಿ ॥
ನೋಯಿಸುವ ಮೂಲದ ಮೊಳೆಗಳುಂ ।
ಬಾಯ ಮಾಳ್ಪ ಭಗಂಧರಾದ್ಯಪ ।
ಚಾಯು ಘೋರ ವ್ರಣಗಳುದಿಸಿದೊಡುಂಟು ಕಿಟುಕಿದರಿಂ ॥ ೫೪ ॥

ಚದರ ದಧ್ಯಾತ್ಮದಲಥವಾ ಖಂ ।
ಡದಲಿ ತೋರ್ಪ ವಿಪತ್ತಿ ಸೂಚಕ ।
ವಿದು ಬಳಿಕ್ಕಿದರಲ್ಲಿ ಭೇದಗಳುಂಟಸಂಖ್ಯಾತಂ ॥

---

೫೩ ಕುಸು...ಜದಿ–ಮೂತ್ರಸ್ಥಾನಗಳಿಂದ, ವಾಮ...ತಂ–ಎಡಗಡೆಯಿಂದ ಅಥವಾ ಉಚ್ಚ-ಮೇಲ್ಗಡೆಯಿಂದ ಮೂತ್ರವು ಹೊರಕ್ಕೆ ಬಂದರೂ, ಅದರಮಸ್ತಕ-ಪುರುಷೇಂದ್ರಿಯದ ಬಾಯಿಯು ತನ್ನಲ್ಲಿ ಹುಟ್ಟಿದಕಲ್ಲಿಗೆ ಪ್ರಸಿತ—ತಗಲಿ ಸಿಕ್ಕಿಬಿದ್ದ ಘನತೆ—ಗಟ್ಟಿಯಾಗಿ ಊದಿ ದಪ್ಪನಾಗಿಹೋಗಿದ್ದರೂ ಕಡು—ಹೆಚ್ಚಾಗಿ ನುಸಿ—ಕಿರುಸೊಳ್ಳೆಗಳೆಡೆಯಾಡುತ್ತ ಮೂತ್ರಿಸಿದ ಬಳಿಯಲ್ಲಿ ಕಂಪೆಸೆದು ದುರ್ನಾತವೆದ್ದರು. ಶುಕ್ಲ-ಪುರುಷನಧಾತುವಿನಲ್ಲಿ ಭಯವುಂಟು.

೫೪ ಪಾಯುವಿನಲಿ—ಗುದಸ್ಥಾನದಿಂದ ಆತ್ಮೀಯ...ಇಂತು+ಇಹುದು+ಎಂಬ ಪೊಲ್—ತನ್ನಪಾಪಗಳಿಂತಿಷ್ಟು—ಎಂಬುದನ್ನು ಲೆಕ್ಕಿಸುವಂತೆ ಬಹುವಾಗಿ ವಾಯುಗಳ ಗಡಿಬಿಡಿಯಾಗುತ್ತಿದ್ದರೆ ಈ ಅಪಾನವಾಯುಗಳಿಂದಲೂ, ಅಪಚಾಯು–ಅಧಿಕವಾದ ಭಗಂಧರಾದಿ ಉಗ್ರರೋಗಗಳು, ಉದಿಸಿದೊಡಂ–ಹುಟ್ಟಿಬಂದರೂ, ಉಂಟು ಕಿಟುಕು+ಇದರಿಂ–ದುಃಖದ ಉಪದ್ರವವು ತಪ್ಪುವಂತಯೇ ಇಲ್ಲ.

ಆದರವರ ಕೇಡಡಸಿದಾ ಗಿದ ।
ರಿದರ ದೆಶೆಯಿಂ ಬಂದುದೆಂದಾ ।
ಗುದಿತ ಚಿತ್ತದ ವೃತ್ತಿಯಿಂ ದಾರೈವುದುತ್ತಮರು ॥ ೫೫ ॥

ಆತುಮನೆನಿಪ್ಪುದಕೆ ನಾಮ ।
ಖ್ಯಾತನಾರೆನ ಲಂತರಂಗದ ।
ಕೇತನದೆ ತೋರುವ ಚಿದಾಭಾಸಂ, ಬಳಿಕ್ಕಿವನೋಳ್ ॥
ಓತಿರುವ ವಧ್ಯಾತ್ಮ ನಾಮುವ ।
ನಾತಿರುವ ವಿಂದ್ರಿಯಗಳಿದರೋಳ್ ।
ಜಾತ ದುಃಖಂಗಳೆ ತಿಳಿಯ ಲಧ್ಯಾತ್ಮಿಕಗಳಹವು ॥ ೫೬ ॥

ಮನೆಯ ಹೊಗುವರೆ ಬಾಗಿಲೊಂದೆ ಭು ।
ವಸದೆ ಸಾಧನ ಮೆಂತುಟಂತೇ ।
ತನ ತನಗೆ ದುಃಖಂಗಳೊಳಪೊಗುವುದಕೆ ವೀರ್ಯಗಳೆ ॥

---

೫೫ ಚದರದೆ+ಅಧ್ಯಾತ್ಮದಲಿ—ತಪ್ಪದಂತೆ ದುಃಖವನ್ನೆಕೊಡುವ ತನ್ನೊಳಗಿರುವ ಕರ್ಮೇಂದ್ರಿಯ ಪಂಚಕವೆಂಬ ಅಥಮುಖಂಡದಲ್ಲಿ, ತೋರ್ಪ–ತೋರುವ, ವಿಪತ್ತಿ–ದುಃಖದ ಸೂಚಕವು, ಬಳಿಕ+ಇದರಲ್ಲಿ–ಈ ದುಃಖ ನಿಮಿತ್ತರೋಗಗಳಲ್ಲಿ ಅಸಂಖ್ಯಾತಭೇದವುಂಟು. ಆದರ+ಅದರ—ಆಯಾಯ ಇಂದ್ರಿಯದ, ಕೇಡು—ತೊಂದರೆಗಳು ಅಡಸಿದಾಗ—ತನ್ನ ಕೈಸೇರಿಬಂದಾಗ ಇದರ+ಇದರ ದೆಶೆಯಿಂ—ಈ ಖಂಡ ಇಂಥ ಇಂದ್ರಿಯದಿಂದಲೇ—ಈ ದುಃಖವು ಬಂದದ್ದೆಂದು, ಆಗ+ಉದಿತ....ವೃತ್ತಿ—ತತ್ಕಾಲದ ಅನುಭವದಿಂದ ಗುರ್ತಿಸಿ, ಆರೈವುದು—ವಿಚಾರಮಾಡಿ ಉತ್ತಮರು ನಿಶ್ಚಯಿಸುವುದು.

೫೬ ಆತುಮನು+ಎನಿಪ್ಪುದಕೆ....ತನು+ಆರು+ಎನಲ್—ಆತ್ಮನೆಂಬ ಪದಕ್ಕರ್ಥ ವೇನು ಎಂದರೆ, ಉತ್ತರ ಅಂತ....ನದೆ—ಅಂತಃಕರಣದಬಳಿ ತೋರುವ, ಚಿದಾಭಾಸಂ—ತೋರುಗಾಣಿಕೆಯ ಆತ್ಮನು, ಜೀವನೇ. ಬಳಿಕ+ಇವನೊಳ್ ಓತಿರುವವು--ಒಲಿದು ಸೇರಿ ಕೊಂಡಿರುವವು. ಅಧ್ಯಾತ್ಮ....ವಸು+ಆತಿರುವವು—ಸೇರಿಕೊಂಡಿರುವವು, ಈ ಇಂದ್ರಿಯ ಗಳಲ್ಲಿ. ಜಾತ—ಹುಟ್ಟುವ ದುಃಖಂಗಳೇ ಎಂದರೆ ಈ ಜೀವನಲ್ಲಿ—ಭ್ರಾಂತಿಯಿಂದ ಹೊಂದಿ ಕೊಂಡಿರುವ ಮನ ಬುದ್ಧಿ ಚಿತ್ತಾಹಂಕಾರಗಳೂ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೂ ಸೇರಿದ ಒಟ್ಟೇ—ಅಧ್ಯಾತ್ಮವು ಈ ಅಧ್ಯಾತ್ಮವೆಂಬವುಗಳಲ್ಲಿ ಹುಟ್ಟುತ್ತಿರುವ ದುಃಖಗಳ ವೊತ್ತವೇ–ಆಧ್ಯಾತ್ಮಿಕ ದುಃಖಗಳು ಎಂದು ಹೆಸರುಗೊಂಡಿರುವವು ಎಂಬುದು ಇಲ್ಲಿಯ ವರೆಗಿನ ಗ್ರಂಥದ ಒಟ್ಟು ಸಾರವು.

೫೭ ಹೊಗುವರೆ—ಮನೆಯ ಒಳಗಡೆಗೆ ಪ್ರವೇಶಿಸುವಲ್ಲಿ ಬಾಗಿಲು+ಒಂದೆ ಸಾಧನಂ+ಎಂತುಟು+ಅಂತೇ–ಸಾಧನವಾಗಿರುವಂತೆಯೇ ದುಃಖಗಳೂ, ಒಳಪೋಗುವು ದಕೆ–ದೇಹದೊಳಗೆ ಪ್ರವೇಶಿಸುವುದಕ್ಕೂ, ವೀರ್ಯಗಳೆ-ಈ ಹದಿನಾಲ್ಕು ಕರಣಗಳೇ ಹೆಬ್ಬಾ ಗಿಲುಗಳು; ಮನೆಯೆ ದೇಹಂ–ಈ ದೇಹವೆಂಬುದೇ ಮನೆಯು, ದೇಹಗೇಹದ–ಈ ದೇಹ

ಘನತರದ ಸಾಧನವು ದೇಹದೆ ।
ಮನೆಯೆ ದೇಹಂ ದೇಹಗೇಹದ ।
ಕೊನೆ ನಡುವೆ ಮೊದಲಿರ್ಪ ಬಾಗಿಲೆ ಮೂರಿದಕೆ ಖಂಡಂ ॥ ೫೭ ॥

ಎಣಿಪ ರಧ್ಯಾತ್ಮಿಕದ ತಾಪವ ।
ಗುಣಿಗಳಾಗಿರ್ಪಾರ್ಯರಿಲ್ಲೊಳ ।
ಗಣ ನಿರಂತರ ತಾಪವೆಂದೆನೆ ಕೇಳಿ ಸಂತೈಸಿ ॥
ಮಣಿದು ಮಸ್ತಕದಿಂ ತ್ರಿಯಂಬಕ ।
ಮುನಿ ಪದಾಂಬುಜ ಯುಗಕೆ ನೆರೆಮುಂ ।
ದಣ ಸುಖೇತರ ಮಾಧಿ ಭೌತಿಕವರಿಯೆ ಬಗೆವೆತ್ತಂ ॥ ೫೮ ॥

ಈ ಕಥೆಯ ಕೇಳುವರ ಚಂದ್ರ ಕ ।
ಲಾ ಕರಂಬಿತ, ಪಿಂಜರ ಜಟಾ ।
ನೇಕ ಮೇರು ಶಿಲಾ ತಲಾಂತಶ್ಚಾರಿ ವಾರಿಯಹ ॥
ನಾಕನದಿಯಂ ತಾಳ್ದವಂ, ಕರು ।
ಣಾ ಕರಾಕ್ಷಿಯು ಕಡೆಗಳಿಂದಾ ।
ಲೋಕನಂ ಗೈದೊಡನೆ ಸಲಹುಗೆ ಬಿಡದೆ ಗೌರೀಶಂ ॥ ೫೯ ॥

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೋಳ್ ಆಧ್ಯಾತ್ಮಿಕ ತಾಪ ಕ್ರಮಮಂ ಪೇಳ್ದ ಮೂರನೆಯ ಸಂಧಿ ಸಮಾಪ್ತಂ. ( ಪದ ೧೧೨. )

---

ವೆಂಬ ಮನೆಯು–ಉತ್ತಮ ಮಧ್ಯಮ ಅಧಮವೆಂಬ ಖಂಡಗಳೇ ಹೊರಬಾಗಿಲು, ಒಳ ಮತ್ತು ಹಿಂದಿಲ ಎಂದು ಮೂರು ಬಾಗಿಲುಗಳು ಮನೆಗಿರುವುದನ್ನು ಕಂಡಿರುವಂತೆಯೆ ಇವೂ ಕೊನೆ ನಡುವೆ ಮೊದಲಿನ ಎಂದು ಈ ದೇಹಕ್ಕಿರುವ ಮೂರು ಬಾಗಿಲುಗಳು, ಇವುಗಳಿಂದ ದುಃಖಗಳು ಸರಾಗವಾಗಿ ಒಳಕ್ಕೆ ಪ್ರವೇಶಿಸುವವು,

೫೮ ಎಣಿಪರು....ಗಳಾಗಿರ್ಪ+ಆರ್ಯರು-ಪೂಜ್ಯರು ಇದನ್ನೆ ಆಧ್ಯಾತ್ಮಿಕ ದುಃಖ ಎಂದುಲೆಕ್ಕಿಸುವರು, ಇಲ್ಲಿ+ಒಳಗಣ-ದೇಹದೊಳಗಾಗುವ ನಿರಂತರತಾಪವು, ಎಂದು+ಎನೆ-ಗುರುವು ಹೀಗೆಂದು ಹೇಳೋಣ, ಮಣಿದು ಮಸ್ತಕದಿಂ–ಶಿಷ್ಯನು ತಲೆಬಾಗಿಸಿ ನಮಸ್ಕಾರ ಮಾಡಿ, ನೆರೆ–ಚೆನ್ನಾಗಿ, ಮುಂದಣಸುಖೇತರವು—ಇನ್ನುಮುಂದಿನ ಆಧಿಭೌತಿಕ ದುಃಖವನ್ನು, ಅರಿಯೆ ಬಗೆವೆತ್ತಂ–ತಿಳಿಯಬೇಕೆಂದು ಮನಸ್ಸು ಮಾಡಿಕೊಂಡನು.

೫೯ ಈ ಕಥೆಯ-ಈ ವಿಚಾರವನ್ನು ಕೇಳುವವರಿಗೆ, ಚಂದ್ರಕಲಾ-ಕಿರಣಗಳೆಲ್ಲ, ಕರಂಬಿತ–ಒಂದುಗೂಡಿಗಟ್ಟಿಗೊಂಡಿರುವ ಚಂದ್ರನನ್ನು ಧರಿಸಿ, ಪಿಂಜರ–ಹೊಂಬಣ್ಣದ ತನ್ನ ಅನೇಕ ಜಟೆಗಳಲ್ಲಿ, ಮೇರುಶಿಲಾತಲಾಂತಃ-ಮೇರುಪರ್ವತದ ಶಿಖರ-ನೆತ್ತಿಯಿಂದ, ಚಾರಿವಾರಿಯಹ–ಭೂಲೋಕದವರಿಗೆಲ್ಲ ಒಂದು ಗುರ್ತಿನ ಬೆಡಗಿನ ಚಲನೆಯಿಂದ ಭೋರ್ಗರೆಯುತ್ತ

ಓಂ ತತ್‌ಸತ್

# ಆಧಿಭೌತಿಕ ತಾಪನಿರ್ಣಯ—ನಾಲ್ಕನೆಯ ಸಂಧಿಯು

ಸೂ॥ ಆಧಿ ಭೌತಿಕ ದುಃಖಜನ್ಯ ದು ।
ರಾಧಿಯ ಸ್ಥಿತಿಯಂ ತದುತ್ಥ ।
ವ್ಯಾಧಿಯ ಸ್ಥಿತಿಯಂ ಸಮರ್ಥಕವಾಗಿ ಪೇಳುವದು ॥ ಪ ॥

ಎಂದು ಬಿನ್ನವಿಸಲ್ಕೆ ನರಸಾ ।
ರ್ಯಂ ದಳಿತ ಪಾತಕಚಯಂ, ದಯೆ ।
ಯಿಂದ ನಿರವಿಸಿದತ್ರಿಯ ಬಕ ಗುರುಗಳೆಲೆ ಮಗನೆ ॥
ಮಂದಮತಿಗಳಿಗಾಪ್ತರೆಂದೇ ।
ಬಂದು ಪೋಸವ ಮಾಡುವರಿ ಗತಿ ।
ನಿಂದ ಕರಿಗುಸಿರದಿರು ಮೋಣೇ ವಾಕ್ಯಮಾವಾಗಂ ॥ ೧ ॥

ಹೇಳು ಸಜ್ಜನರಿಂಗೆ ನಂಬಿದೆ ।
ಪಾಲಿಸಲ್ಬೇಕೆಂದರೊಪ್ಪಿದ ।
ಮೇಲೆಯೇ ನಡೆಸಿದೊಡಮವರಿಗೆ ಕೇಡಿನುಪಟಳವು ॥

---

ಹರಿದುಬರುತ್ತಿರುವ, ನಾಕನದಿಯಂ-ದೇವಲೋಕದನದಿಯನ್ನು ತಾಳಿದ ಗೌರೀಶನು, ತನ್ನ ಕರುಣಾಕಟಾಕ್ಷವೀಕ್ಷಣದಿಂದ ನೋಡಿ ನಮ್ಮನ್ನು. ಸಲುಹುಗೆ-ರಕ್ಷಿಸಲಿ ಇಲ್ಲಿ ಶಿವವನ್ನು ಚಂದ್ರಶೇಖರನೆಂಬುದು-ವೃದ್ಧಿ, ಕ್ಷಯ, ಕಲಂಕ-ಇವುಗಳೊಂದೂ ಲಕ್ಷಿಸದೆ ಭಕ್ತರೆಂದಮಾತ್ರ ದಿಂದಲೇ ಈಶ್ವರನು ಕೈವಿಡದು ಗೌರವಿಸುವನೆಂಬುದನ್ನೂ, ಗಂಗಾಧರನೆಂಬುದು ಅಹಂ ಕಾರಾದಿಗಳನ್ನು ಈಶ್ವರನು ತಡೆದು ಕಟ್ಟಿಹಾಕುವನೆಂಬುದನ್ನೂ ಸೂಚಿಸುತ್ತದೆ.

—o—

ಸೂ॥ ಅಭಿಪ್ರಾಯ—ಭೂತಗಳೆಂದರೆ ಅಕಾಶಾದಿ ಪಂಚಮಹಾಭೂತಗಳು. ಈ ಭೂತಗಳ ವಿಕಾರ–ಕಾರ್ಯಗಳಾದ ಜಡ ಚೇತನ ಪದಾರ್ಥಗಳೆಲ್ಲದರ ಒಟ್ಟೇ–ಅಧಿಭೂತವು ಇವುಗಳಿಂದಾಗುವ ದುಃಖಗಳೆಂಬುದು ಅಧಿಭೌತಿಕದುಃಖಗಳು–ಹಿತರಲ್ಲದ ಸ್ತ್ರೀ ಪುತ್ರ ಮಿತ್ರ ಬಂಧು ಪಿಸುಣರು ಸೂರೆಗೊಳ್ಳುವ ಕಳ್ಳರು ಅಧಿಕಾರಿವರ್ಗದವರು ಮುಂತಾದವ ರಿಂದಲು, ಸರ್ಪ ವ್ಯಾಘ್ರಾದಿಗಳಿಂದಲೂ, ವಿಷದ ಕ್ರಿಮಿಕೀಟ ಜಂತುಗಳಿಂದಲೂ ಈ ಸ್ಥೂಲಶರೀರದಲ್ಲಿ ತೋರಿಕೊಳ್ಳುವ ದುಃಖಗಳನ್ನೂ ಮತ್ತು ತದುತ್ಥ—ಆ ದುಃಖಗ ಳಿಂದುಂಟಾಗುವ–ಅಂತಃಕರಣ ಚತುಷ್ಟಯ ಮತ್ತು ಜ್ಞಾನೇಂದ್ರಿಯ ಕರ್ಮೇಂದ್ರಿಯಂಗಳ ನಿಮಿತ್ತವಾಗುಳ್ಳ ಈ ದೇಹದೊಳಗಿನ, ದುರಾಧಿ-ಸಹಿಸುವದಕ್ಕಿಲ್ಲದ, ವ್ಯಾಧಿಯ-ಖಂಡತ್ರಯ ಗಳಿಂದ ತೋರಿಕೊಳ್ಳುವ ಸೂಕ್ಷ್ಮರೋಗಗಳ ತಾಪ–ದುಃಖಗಳೆಂಬುದನ್ನು ಲಕ್ಷಿಸಬೇಕು.

೧ ದಳಿತ-ಒಡೆದುಹೋಗಿ, ಭಗ್ನವಾದ ಪಾಪರಾಶಿಗಳುಳ್ಳ ನರಸಾರ್ಯರು, ನಿರವಿಸಿದರು-ನಿರೂಪಿಸಿದರು, ಮಂದಮತಿ–ಶ್ರದ್ಧಾಳುಗಳಿಗೆ, ಉಸಿರದೆ–ಹೇಳದೆಇರು.

೨ ಒಪ್ಪಿದ...ರಿಗೆ—ಗುರುವಿನ ಆಜ್ಞೆಯನ್ನನುಸರಿಸುವವರಿಗೆ, ಉಪದೇಶದಂತೆ ನಡೆ

ತಾಳಿಕೊಂಡಾಯರ್ಥದಲಿ ಬಿಡು ।
ವೂಳಿಗವದೇನೆನಲು, ಸುರವಾ ।
ತೂಲ ಮಲ್ಲದೆ ಮಿಕ್ಕ ವಿಲ್ಲದ ಸಾಧು ಚಿತ್ತರಿಗೆ ॥ ೨ ॥

ಭೂತಗಳ ನೆವ ಮಾಂತಿರುವು ದಧಿ ।
ಭೂತ ಮೆನಿಸುವದದುವೆ ನಿಜಸಂ ।
ಘಾತ ಮುಳ್ಳದು ಲಕ್ಷಣೆಯನೊಳಕೊಂಡರಾಯರ್ಥಂ ॥
ಭೂತನಾಮದೆ ಭೂತಗುಣಮೇ ।
ಖ್ಯಾತವಾಗಿರುತಿಹವು ಗುಣವ ।
ದ್ಭೂತ ವಿಕೃತಿಗಳಪ್ಪ ವುಪಭೋಗ್ಯಗಳು ಕೆಲವೆಡೆಯೋಳ್ ॥ ೩ ॥

ಇದನಧಿಕರಿಸಿ ತೋರ್ಪ ತಾರ್ಪವೆ ।
ವಿದಿತವಾಗಿಹು ದಾಧಿಭೌತಿಕ ।
ಪದದಿ ಮೇಣದರೊಳಗೆ ತಾಮಸವಾದ ಮಾನಸವು ॥
ಸುಪತಿಯರ ಕಂಡಾಗ ತನ್ನೊಳ ।
ಗುದಯಿಪುದು ಕಾಮವನು ತನಗಾ ।
ರಿದಿರ ನುಡಿದರೆ ತನ್ನ ಕಾರ್ಯಕ್ಕಪಕೃತಿಯ ಗೈಯ್ಯೆ ॥ ೪ ॥

---

ಯುಳ್ಳವರಿಗೆ, ಕೇಡಿನ—ಬಾಧೆಯ, ಉಪಟಳ—ತೊಂದರೆಯನ್ನು ಕೊಡುವ ಆಧಿಭೌತಿಕ ದುಃಖದ ಸ್ವರೂಪವನ್ನು ಕುರಿತು ಹೇಳು. ತಾಳಿಕೊಂಡ+ಆಯರ್ಥದಲಿ–ಈ ಲೋಕ ಮತ್ತು ಪರಲೋಕದ ವಿಷಯಭೋಗಕ್ಕೆಂದು ಹವಣಿಸುತ್ತ, ಈ ಮೊದಲೇ ಕೈಗೊಂಡಿರುವ ಹಲವಾರು ಪಶುವೃತ್ತಿಯ ಸ್ವಾಭಾವಿಕ ಪ್ರಯತ್ನಗಳಲ್ಲಿ, ಬಿಡುವೂಳಿಗವ–ಅವೆಲ್ಲ ನಿಸ್ಸಾರವಾದವುಗಳೆಂಬ ಗುರುವಿನ ಈ ಹಿತೋಕ್ತಿಯನ್ನು ತಲೆಬಾಗಿ ಸ್ವೀಕರಿಸಿದವನು ಮತ್ತು ಸುರವಾತೂಲ–ಶಮದಮಾದಿ ದೈವೀಸಂಪತ್ತುವೊಂದಲ್ಲದೆ, ಮಿಕ್ಕವು–ಅಸುರ ಸಂಪತ್ತುಗಳು ಲೇಶ ಮಾತ್ರವೂ ಇಲ್ಲದ ಸಜ್ಜನರಿಗೆ.

೩ ನಿಜಸಂಘಾತ–ಶರೀರೇಂದ್ರಿಯರೂಪವಿಡಿದು ಓಡಾಡತಕ್ಕ, ಭೂತಗ...ರುವದು–ಚೇತನಪ್ರಾಣಿಗಳು ಅಧಿಭೂತ ಎಂದಾದರೂ ಭೂತನಾಮದೆ–ಇಲ್ಲಿ ಅಧಿಭೂತವೆಂದರೆ ಕಾರ್ಯಗಳಾಗಿ ಆಕಾಶಾದಿಭೂತಗಳ ಗುಣಗಳುಳ್ಳ ಶರೀರೇಂದ್ರಿಯಗಳ ಸಂಘಾತಗಳು, ಉಳಿದ ಶಬ್ದಾದಿ ಜಡವಿಷಯಗಳು ಎಂಬ ಉಭಯವೂ ಸೇರಿ, ಜೀವರಿಗೆ–ಉಪಭೋಗ್ಯವಾಗಿರುವದರಿಂದ ಈ ಎರಡನ್ನೂ ಸೇರಿಸಿ ಇಲ್ಲಿ ಅಧಿಭೂತ ಎಂದು ಸೂಚಿಸಿರುವದು.

೪ ಇದನು–ಈ ಮೇಲೆ ಹೇಳಿರುವ ಜಡ ಮತ್ತು ಚೇತನವೆರಡನ್ನು, ಅಧಿಕರಿಸಿ—ಹಿಡಿದು, ಆಶ್ರಯಿಸಿ. ವಿದಿತ—ಗೊತ್ತಾದದ್ದಾಗಿರುವದು, ಆಧಿಭೌ....ದದಿ–ಆಧಿಭೌತಿಕ ದುಃಖವೆಂದು, ತನ್ನಕಾರ್ಯಕ್ಕೆ+ಅಪಕೃತಿ–ಅಡ್ಡಿಯನ್ನು ಯಾರಾದರೊಬ್ಬರು ಎಸಗಿದರೆ.

ಅವರೊಳಾಗುಂಟೆನಿಸುವುದು ಕೋ ।
ಶವ ಧನಂ ಪಟ್ಟಾಂಬರಂ ಸೈಂ ।
ಧವ ಚಯಂ ನಾಗೇಂದ್ರ ತತಿ ರಥಗಳ ಸಮಗ್ರತೆಯಂ ॥
ಅವನಿಯಾರಾಮಂ ಪುರಂ ಭಟ ।
ನಿವಹ ದಾಸೀವರ್ಗ ಭೋಜನ ।
ನವ ವಿಲೇಪನ ಭೂಷಣಂ ಪಾನಕ ಮುದಾರ ಗೃಹಂ ॥ ೫ ॥

ದೊರಕಿದೊಡ ಮಿನ್ನಾರಿಗಿದ ನಾ ।
ದರಿಸಿ ಕೊಡಲಾಗದು ಕರಗಳಿಂ ।
ಪೆರರಿಗೆನಿಸುವ ಲೋಭಮಂ ಪುಟ್ಟಿಪುದು, ವೇದದಲಿ ॥
ಗುರುಗಳ ಶುಭೋಕ್ತಿಯಲಿ ಬಲ್ಲವ ।
ರುರುತರಾ ಚರಣದಲಿ ಕಳತೆಗೆ ।
ತೆರಹು ಗೊಟ್ಟಿಹುದಾವುದುಂಟಾ ಯಾ ಪದಾರ್ಥದಲಿ ॥ ೬ ॥

ತನಗೆ ಕಿಂಚಿತ್ಸುಖವ ಕೊಟ್ಟರೆ ।
ಘನತರದ ಗುಣವಿರ್ಪುದಿದರಲಿ ।
ತೊನೆದು ತೋರದು ದೋಷವೆಂಬಾ ನೋಹಮಂ ಬಿಡದೆ ॥
ಜನಿಯಿಪುದು ಲೋಕದಲಿ ಬಾಳುವ ।
ಜನರೊಳಗೆ, ನನ್ನಂತವ ರದಾ ।
ರೆಣಿಸಲಿರ್ಪರೆ ಯೆಂಬ ಕುಕ್ಷಿಂಭರಿಗಳಿಂದೊಗೆದ ॥ ೭ ॥

---

೫ ಪಟ್ಟಾಂಬರಂ—ಪಟ್ಟೇಪೀತಾಂಬರದ ಜರತಾರಿ ವಸ್ತ್ರಗಳು, ಸೈಂಧವಚಯಂ—ಕುದುರೆಯಸಾಲು, ನಾಗೇಂದ್ರತತಿ—ಆನೆಗಳ ಗುಂಪು, ರಥ—ಎಲ್ಲಾ ಬಗೆಯ ವಾಹನ ವಿಶೇಷಗಳು, ಅವನಿ—ಹೊಲ ಮನೆ ಗದ್ದೆ ಎಂಬ ನೆಲಗಳು, ಆರಾಮಂ—(ರಾಮ—ವಿನೋದಪಡುವ ಜಾಗ) ನಟ್ಟು ಬೆಳಸಿದ ತೋಟ ಉಪವನ, ಆರವೆ—ವಿಶ್ರಾಂತಿ, ಪುರಂ-ಪಟ್ಟಣ ನಗರ, ಭಟವರ್ಗ-ಸೇವಕ ಸೇವಕಿಯರ ಗುಂಪು, ನವ....ಷಣಂ-ಹೊಸಹೊಸದ ಪರಿಮಳ ಸುಗಂಧದ್ರವ್ಯಗಳೂ ಒಡವೆವಸ್ತುಗಳೂ ಉದಾರ—ವಿಶಾಲವಾದ ಮನೆ.

೬ ....ಡಂ+ಇನ್ನಾರಿಗೆ+ಇದನು+ಆದರಿಸಿ-ಸತ್ಕರಿಸಿ, ಪೆರರಿಗೆ—ಮತ್ತೊಬ್ಬರಿಗೆ, ಶುಭೋಕ್ತಿ-ಹಿತೋಪದೇಶದಲ್ಲಿಯೂ, ಕಳವೆಗೆ-ನಿಂದೆ, ತಿರಸ್ಕಾರಕ್ಕೆ. ತೆರ (ಪು) ವು-ಅವಕಾಶವನ್ನು ಕೊಟ್ಟವಸ್ತುಗಳಲ್ಲಿ.

೭ ಘನತರದ-ಅತಿಶಯದ, ಗುಣವು+ಇಪ್ಪದು-ಇರುವದು, ಇದರಲಿ ತೊನೆದು—ನೇತುಬಿದ್ದು ಸಿಕ್ಕಿಬಿದ್ದು ತನಗೆ ಚುಚ್ಚಿ ಬಾಧೆಪಡಿಸುವ ಒಂದಾದರು ದೋಷವು ತೋರುವದಿಲ್ಲ. ಜನಿಯಿಪುದು-ಹುಟ್ಟಿಸುವದು, ನನ್ನಂತವರು-ನನ್ನಂಥವರು, ಅದು+ಆರು-ಯಾರಿರು

ನುತಿಯ ವಿಷಮುಂ ಪೀರ್ದು ಹುಚ್ಚನ |
ಗತಿಯೊಳಗೆ ತಿರುಗುವ ಮದವ ನೀ |
ಕ್ಷಿತಿಯೊಳಗೆ ನಿಲಿಸುವುದು ಕೆಲಸಕೆ ಬಾರದಿರುತಿರುವ ||
ಮೃತವೆನಿಪ ಸೂತಕಕೆ ಮನೆಯಾ |
ಗತಿರುಜೆಯ ಶರಧಿಯೊಳು ಮುಳುಗುವ |
ಮೃತ ನಿಜಸ್ಥಿತಿ ಯಾಂತುದೀ ದೇಹಂ ತ್ರಿಕಾಲದಲಿ || ೮ ||

ಇದಕೆ ಸುಖಮುಂ ಕೊಡುವ ವಸ್ತು ಸ |
ಮುದಯದೊಳಗೊಂದಂ ಪಳಿದೊಡಂ |
ಚದರಿಸಿದೊಡಂ ಮೇಣವರೊಳಾಜನ್ಮ ಪರಿಯಂತಂ ||
ಕುದಿಕುದಿದು ಕೇಡೆಣಿಪ ಮಾತ್ಸ |
ರ್ಯದ ಸುಜನರಿಂ ನೂಕೆ ಪಡಿಸಿದ |
ಹೃದಯ ಶಲ್ಯವೆನಿಸಿದ ಶತ್ರುವ ಕಲ್ಪಿಸಿದುದಿವರಿಂ || ೯ ||

ಜಂತು ಜೀವಚ್ಛತ್ರುವಾದನು |
ಸಂತತಂ ಮೇಣಿವರು ನಿಜ ಹಿತ |
ರಂತಿರುತೆ ಕೇಡುಗಳ ಮೇಲುರೆ ಕೇಡುಗಳ ತಂದು ||

---

ವರು? ಎಣಿಸಲು+ಇಪ್ಪರೆ-ಇರುವರೇನು? ಕುಕ್ಷಿಂ....ಗಳಿಂದ ಹೊಟ್ಟೆಯನ್ನು ಹೊರಿಯುವ ವರಿಂದ, ಒಗೆದ-ಮಾಡಲ್ಪಟ್ಟ.

೮ ನುತಿಯ—ಹೊಗಳಿಕೆಯ ವಿಷವನ್ನು, ಪೀರ್ದು—ನೆತ್ತಿಗೇರುವಂತೆ ಬಲವಾಗಿ ಹೀರಿಕೊಳ್ಳುವಂತೆ ಮಾಡಿಸಿ, ದುರಭಿಮಾನದಿಂದ ಹುಚ್ಚಿಸಿ ಉನ್ಮತ್ತನಂತಿರಿಸುವ. ಮದವನು+ಈಕ್ಷಿತಿ-ಈ ಭೂಮಿಯೊಳಗೆ ಪತಕ್ಕುಬರದ, ಪಶು-ಅಲ್ಪಮಾನವನನ್ನೇ ಭ್ರಾಂತಿಯ ದೊಡ್ಡಸ್ತಿಕೆಯಲ್ಲಿ ಮದವು—ಕೊಂಡೊಯ್ದು ನಿಲ್ಲಿಸಿಬಿಡುವುದು. ಮೃತವೆನಿಪ—ಮರಣದ, ಅತಿರುಜೆ—ಬಲವಾದ ರೋಗರುಜಿನಗಳ ಸಮುದ್ರದಲ್ಲಿ ಮುಳುಮುಳುಗಿ ತೇಲಾಡುತ್ತಿರುವ ಈ ಶರೀರವು,ಅನೃತ...ಂತುದು—ಹುಸಿತೋರಿಕೆಯಿಂದಲೇ ತಾನು ಮೈಗೆಟ್ಟಿಕೊಂಡಿರುವದು.

೯ ಪಳಿದೊಡಂ—ಹಳಿದು ನಿಂದಿಸಿದರೂ ಚದರಿಸಿದೊಡಂ—ಸ್ಥಳದಿಂದ ಸ್ಥಳಾಂತರಕ್ಕೆ ಒಯ್ದರು, ಆಜನ್ಮ....ತಂ—ಜೀವಿಸಿರುವವರೆಗೂ ಕುದಿ....ಣಿಪ—ಕತಕತನೆ ಬೇಯುತ್ತ ಸಂಕಟಪಡುತ್ತ ಬಿಡದೆ ಹಾನಿಯನ್ನೇ ಬಗೆಯುವ, ಸುಜನ...ಸಿದ—ಸಜ್ಜನರಿಂದ ನೂಕಲ್ಪಟ್ಟಿರುವ ಹೃದಯಶಲ್ಯ—ಹೃದಯದಲ್ಲಿ ನಾಟಿ ಚುಚ್ಚಿ ಘಾಯಪಡಿಸುವ ಮಾತ್ಸರ್ಯವೆಂಬ ಹೃದಯಬರ್ಜಿಯನ್ನು,ಎಂದರೆ ಒಬ್ಬ ಒಳಗಿನಹಗೆಯನ್ನು ತನ್ನಲ್ಲಿ ತಾನೇ ಕಲ್ಪಿಸಿಕೊಂಡನು.

೧೦ ಜಂತು—ಈ ಜೀವನು ಜೀವತ್+ಶತ್ರು—ಬದುಕಿರುವವರೆಗೂ ತಾನು ಎಲ್ಲರಿಗೂ ಹಗೆಯೆಂದೆನಿಸಿಕೊಂಡನು. ಮೇಣ್+ಇವರು—ಈ ಕಾಮಾದಿಗಳು, ನಿಜಹಿತ

ಮುಂತೆ ಹೊರಿಸಿ ತಲೆಯಲಿ ಕೆಟ್ಟತಿ ।
ಚಿಂತೆಯಲಿ ಹೊರಳಿದರೆ ತನಗಾ ।
ರಿಂತಿದಕ್ಕೆ ಸಹಾಯರಾರಿಲ್ಲೆಂದೆನಿಸಿದರಿದಂ ॥ ೧೦ ॥

ನೋಡಿ ದಯೆಯುಂಟೆ ವಿಪತ್ತಿನ ।
ಗೂಡಿನೊಳಗಿರೆ ಬಿಡುವುದುಂಟೇ ।
ಓಡಿ ಹೋದೊಡ ಮಖಿಲ ಭುವನಾವಳಿಯ ದೇಶದಲಿ ॥
ಕಾಡಿ ಕೆಲುವೀ ಯರಿಗಳಾರರ ।
ಊಡಿಗೆಯ ದುರ್ಭಿಕ್ಷದೊಳಗೊಡ ।
ನಾಡಿ ಕೆಟ್ಟುದು ಮೂರು ಲೋಕಂ ಮಗನೆ ಕೇಳೆಂದ ॥ ೧೧ ॥

ಅರಿಯರವರೊಡನಾಡಿ ಬುದ್ಧಿಗೆ ।
ಮರವೆ ಬಂದುದು; ತಾಮಸಕ್ಕಾ ।
ಕರ ವೆನಿಸುವಾಹಾರಗಳ ಸೇವಿಸಿದ ದೆಶೆಯಿಂದ ॥
ಕೊರಡೆನಿಸಿ ತಜ್ಞಾನ ಜಾಡ್ಯ ಗ ।
ಳೆರಡು ಮೇಣೊಳಸರಿದು ವಿಬುಧರ ।
ಪುರದ ಹಾದಿಗೆ ಮುಳ್ಳ ಹಾಕಿದ ವಗಲದಂದದಲಿ ॥ ೧೨ ॥

ಮತಿಗೆ ಮಾಂದ್ಯಂ ಬಂದುದೆಂತೆನೆ ।
ಮಿತಿಯ ಮೀರಿದ ಕಾಯಗಳ ಸಂ ।
ಗತಿಯೊಳನುಭವಿಸಿದ ವಿಷಯಗಳಲುಂಡು ದುಃಖವನೆ ।

---

ರಂತೆ+ಇರುತೆ–ತನಗೆ ಪರಮಾಪ್ತರಂತೆ ಮನಸ್ಸಿನಲ್ಲಿದ್ದು ಕೊಳ್ಳುತ್ತ ಕೇಡುಗಳ–ಮೇಲಿಂದ ಮೇಲೆ ತಂದೊಡ್ಡುತ್ತ ಹಾನಿಗಳನ್ನು ಹೊರಿಸಿಬಿಟ್ಟರಲು ಇದರಿಂದ ಇವನು ಕೆಟ್ಟು—ಹಾಳಾಗಿ, ಅತಿಚಿಂತೆ-ಕೊನೆಗಾಣದ ಯೋಚನೆಗಳಿಗೆ ಸಿಕ್ಕಿಬಿದ್ದು, ದುಃಖಗಳಲ್ಲಿ ಹೊರಳಾಡುತ್ತ ಸಹಾಯವನ್ನು ಕಾಣದೆ ಜೀವನು. ನಶಿಸಿದರೆ—ನಾಶವಾಗಿಹೋದರೆ.

೧೧ ಈ ಕಾಮಾದಿಗಳಿಗೆ ದಯೆಯುಂಟೆ? ಭುವನ+ಆವಳಿ—ಸಾಲು ಕಾಡಿ—ತೊಂದರೆಯನ್ನು ಕೊಡುತ್ತ, ಕೊಲುವ+ಈ+ಅರಿ—ಶತ್ರುಗಳ+ಆರರ ಊಡಿಗೆಯ—ಚೆಲ್ಲಾಡುವ ಚಿನ್ನಾಟದ.

೧೨ ಅರಿಯರ+ಅವರ—ಆ ಈ ಶತ್ರುಗಳ, ಒಡನಾಡಿ—ಜತೆಗೂಡಿ ತಾಮಸಕ್ಕೆ+ಆಕರ—ಮೂಲವೆನಿಸುವ, ಕೊರಡೆನಿಸಿತು—ಮೋಟುಮರದಂತಾಗಿ ತನ್ನೊಳಗೆ ಗಟ್ಟಿಗೊಂಡವು. ಅಜ್ಞಾನ ಜಾಡ್ಯಗಳು—ಮರವೆ ಮೌಢ್ಯಗಳೆರಡು, ಮೇಣ್+ಒಳಸರಿದು—ಒಳಗಡೆಯಲ್ಲಿ ಬಂದು ತನ್ನ ಸ್ಥಿತಿಯಿಂದ ತನಗೆ ಚಲಿಸಿಬಿಟ್ಟು, ವಿಬು....ದಿಗೆ—ಸ್ವರ್ಗದ ಹಾದಿಗೆ ಉದ್ದಕ್ಕೂ ಅಗಲದಂತೆ ಕಲ್ಲುಮುಳ್ಳುಗಳನ್ನು ತಂದೆಳೆದುಬಿಟ್ಟವು,

ಪ್ರತಿ ಪದದೊಳ್ಳೈದಿದರು ಮರೆದಾ ।
ಹತ ಮಹಾ ಭೋಗ್ಯಗಳ ವಿಷಯದೆ ।
ರತಿಯ ಮಾಳ್ಪುದು ಮಾಡಿದುದ ನೊಳಿತೆಂದು ಭಾವಿಪುದು ॥ ೧೩ ॥

ಸೇಶ್ವರದಿ ದುರ್ಮತಗಳುಂಟು ನಿ ।
ರೀಶ್ವರದಿ ದುರ್ಮತಗಳುಂಟದ ।
ರಾಶ್ವಸನದಿಂದಲ್ಲಿ ಯಲ್ಲಿಯ ದುರ್ಬಲ ಶ್ರುತಿಯಂ ॥
ವಿಶ್ವಸಿಸಿ ಯಾರೇಸ ಹೇಳಿದೊ ।
ಡೀ ಶ್ವಕುಲ ಮಸ್ತಿಯನು ಕಡಿದು ಮ ।
ನಶ್ವರಾಸೃಕ್ಪ್ರಾಪ್ತಿ ಯಿಲ್ಲಿಂದಾಯಿತೆನುವಂತೆ ॥ ೧೪ ॥

ಅದರೊಳಾಸಕ್ತಿಯನು ಮಾಡಿದ ।
ರದು ಹುಳುವಿನಿಂ ಕುಟ್ಟೆಯೈದಿದ ।
ಖದಿರ ಕಾಷ್ಠವ ಘಟ್ಟೆಯಾಗಿಹುದೆಂದು ವಾನರವು ॥
ಬಿದಿರು ಕೊನೆಯಿಂ ಹಾರುತಿರುವಾ ।
ಗದ ಪಿಡಿದು ಮುಂದಕ್ಕೆ ಹಾರು ।
ತ್ತಿದರ ಮುರಿತದೊಳದನು ಪಿಡಿಯದೆ ನಡುವೆ ಬೀಳುವಂತೆ ॥ ೧೫ ॥

---

೧೩ ಮಿತಿಯ—ತಾನು ಇದುವರೆಗೆ ಹೊಂದಿದ ಜನ್ಮಗಳು ಇಂತಿಷ್ಟೇ ಸರಿಯೆಂದು ಗೊತ್ತುಮಾಡುವದಕ್ಕಿಲ್ಲದಷ್ಟುಪಡೆದ, ಕಾಯುಗಳಸಂಗತಿ—ಶರೀರಗಳಲ್ಲಿ, ಪ್ರತಿಪದ—ಒಂದೊಂದು ಹೆಜ್ಜೆಗೂ ತೊಂದರೆಗಳನ್ನೇ ತಾನು ಐದಿದರು—ಪಡೆಯುತ್ತಿದ್ದರೂ, ಎಲ್ಲವನ್ನೂ ಆ ಉತ್ತರಕ್ಷಣದಲ್ಲೆ ಮರೆತುಬಿಟ್ಟು ಹೊಸಆಳಿನಂತಾಗಿ ಆಹತ—ಪೆಟ್ಟು, ಹೊಸ ಹೊಸ ನೋವುಗಳನ್ನು ಹೊಂದುತ್ತಿದ್ದರೂ. ಒಳಿತು—ಅದನ್ನೆಲ್ಲ ಒಳ್ಳೆಯದೆಂದೇ ಭ್ರಮಿಸುತ್ತಿರುವನು.

೧೪ ಸೇಶ್ವರ...ಗಳುಂಟು—ಈಶ್ವರನನ್ನೊಪ್ಪುವ ಮತ್ತು ಒಪ್ಪದಿರುವ ಎಂದು ದುರ್ಮಗಳಿರುವವು. ಅದರ+ ಆಶ್ವಸನದಿಂದ-ಆ ಯೋಗಸಂಖ್ಯಮತಗಳಲ್ಲಿನ ವಿಶ್ವಾಸದಿಂದ, ವಿಶ್ವಸಿಸಿ—ಪರಮವಿಶ್ವಾಸವಿಟ್ಟು, ಈ ಶ್ವಕುಲಂ—ನಾಯಿಗಳ ಗುಂಪು ಅಸ್ತಿಯನು—ಎಲುಬನ್ನು ಕಡಿದದ್ದರಿಂದ ತನ್ನ ದವಡೆಯನ್ನೆಲ್ಲ ಕಿತ್ತು ಬಂದ ರಕ್ತವನ್ನು ನಾಲಿಗೆಯಿಂದ ನೆಕ್ಕುತ್ತ, ಅನಶ್ವರ+ ಅಸೃಕ್+ ಪ್ರಾಪ್ತಿ+ ಇಲ್ಲಿಂದ-ಈ ಮೂಳೆಯಿಂದಲೆ ಸ್ಥಿರವಾಗಿ ರಕ್ತವು ತನಗೆ ಸಿಕ್ಕಿತೆಂದು ಭ್ರಾಂತಿಗೊಳ್ಳುವಂತೆ.

೧೫ ಅದರೊಳು+ ಆಸಕ್ತಿ—ಆ ನಿಸ್ಸಾರಮತಗಳಲ್ಲಿ ವಿಶ್ವಾಸವಿಟ್ಟರೆ ಅದು ಹೇಗಾಗುವುದೆಂದರೆ, ಮರವನ್ನು ತಿನ್ನುವ ಒಂದು ಜಾತಿಯ ಕೀಟ, ಕುಟ್ಟೆಯ ಹುಳುವಿನಿಂದ. ಕುಟ್ಟೆಯು+ ಐದಿದ—ಪುಡಿಮಾಡಲ್ಪಟ್ಟ ಖದಿರ—ಕಾಚಿನಗಿಡ, ಕದಿರೆ ಮರದ ಕಟ್ಟಿಗೆಯನ್ನು ಹಿಡಿಯುವದಕ್ಕೆಂದು ಹಾರಿದ ಕಪಿಯಂತೆ; ಇವನೂ ಇಹಪರ ಲೋಕಗಳೆರಡರಿಂದಲೂ ಭ್ರಷ್ಟನಾಗುವನು.

ಸಾರವಿಲ್ಲದ ಪದವ ನಂಬಿದ ।
ರಾರು ಕಾಪಾಡುವರು, ಶಕ್ತರ ।
ವಾರದೊಳ್ಪುಳಕೆಯೆ ಮಹಾ ಫಲಯೋಗ್ಯವಾಗಿಹುದು ॥
ಸಾರವಿದು ನಿಸ್ಸಾರವಿದು ಎಂ ।
ಬೀ ರಸಜ್ಞತೆ ಸಭ್ಯ ಸಂಗವಿ ।
ಹಾರ ದಿಂದಲ್ಲದೆ ಘಟಿಸದನುವಾಗಿ ನೋಡಿದರೆ ॥ ೧೬ ॥

ಉಂಡ ಊಟದ ರುಚಿಯು ಕಣ್ಣಿಲಿ ।
ಕಂಡ ಶೋಭನ ವಸ್ತುಗಳ ರೂ ।
ಪಂಡಲೆವ ಕೇಳಿಕ್ಕೆಯು ಮಾತಿನೊಳೊಗೆದಭೀಪ್ಸೆಯಲಿ ॥
ತಂಡ ತಂಡಗಳಾಗಿ ಬಿಡದೊಳ ।
ಕೊಂಡು ವರ್ತಿಪ ಕಾರ್ಯಜಾಲವ ।
ಖಂಡ ವಾಗಿಯೆ ಚಿತ್ತದಲಿ ವಾಸನೆ ಯೆನಿಸುತಿಹುದು ॥ ೧೭ ॥

ಇದರ ದೆಶೆಯಿಂ ಬದುಕುವಂದದೊ ।
ಳಿದನುಳಿದ ರಾಪತ್ಪರಂಪರೆ ।
ಪುದಿವ ತೆರದಿಂ ಚಿತ್ತದಲಿ ತೋರಿದರೆ ಭುವನದಲಿ ॥
ಅದರೊಳಗೆ ಭೂತಂಗಳೆನಿಸು ।
ತ್ತದರಲಿ ಭವಿಷ್ಯತ್ಸಮಯ ಸಂ ।
ಪದವ ವಹಿಸುತ ವರ್ತಮಾನವ ಪಿಡಿದು ಕೆಲವಿಹವು ॥ ೧೮ ॥

---

೧೬ ಪದವ–ಮಾರ್ಗ, ಆಶ್ರಯವನ್ನು ನಂಬಿದರೆ+ಆರು–ಯಾರುತಾನೆ, ಶಕ್ತರ–ಸಮರ್ಥರಾದ ಶಿಷ್ಟಪುರುಷರ, ವಾರ–ಸತ್ಸಂಪ್ರದಾಯದಲ್ಲಿ ನಡೆಯುವದೆಂಬುದೆ, ಈ ರಸಜ್ಞತೆ–ನಿಶ್ಚಿತ ಜ್ಞಾನಾನಂದವನ್ನು ಕೊಡುವ, ಈ ವಿವೇಕದ ಅರಿವು, ಸಭ್ಯ–ಪೂಜ್ಯರಾದ ಸತ್ಪುರುಷರ, ಸಂಗವಿಹಾರ–ಸಮಾಗಮವು, ಅವರಲ್ಲಿ ನಡೆವಾಡುವುದು.

೧೭ ರೂಪ+ಅಂಡಲೆವ—ಕಷ್ಟಪಡಿಸುವ, ಮಾತಿನೊಳು+ಒಗೆದ—ಹುಟ್ಟಿದ, ಅಭೀಪ್ಸೆಯಲಿ—ಇಚ್ಛಿಸಲ್ಪಟ್ಟದ್ದರಲ್ಲಿ, ವರ್ತಿಪ ಕಾರ್ಯಜಾಲ—ನಮ್ಮ ವ್ಯವಹಾರಗಳೆಲ್ಲ ಸೂಕ್ಷ್ಮವಾದ ರೂಪುಗೊಂಡು, ಚಿತ್ತದಲ್ಲಿರುವ ಸಂಸ್ಕಾರಗಳ ವಿಕಾರಗಳೆಲ್ಲವೂ.

೧೮ ಇದರ—ಈ ವಾಸನೆಗಳಿಂದ ಬದು...ದೊಳು—ಬದುಕಿರುವಷ್ಟರೊಳು, ಇದನು+ಉಳಿದರೆ–ಈ ಕಲ್ಪನಾತರಂಗಗಳಲ್ಲಿ ಇಂಥದ್ದೊಂದು ಕೈ ಬಿಟ್ಟುಹೋದರೆ, ಆಪತ್ಪರಂಪರೆ–ಮೇಲ್ಮೇಲೆ ಬಂದೊದಗುವ ವಿಪತ್ತುಗಳ ಸಾಲು, ಪುದಿವ–ಬಂದು ತನ್ನ ಕೈ ಸೇರುವಂತೆ, ಅದರೊಳಗೆ—ಆ ವಾಸನೆಗಳಲ್ಲಿ ಕೆಲವು ಭೂತಂ–ಹಿಂದಿನಕಾಲದವು, ಭವಿಷ್ಯತ್ಸಮಯ–ಮತ್ತೆ ಕೆಲವಾದರೊ ಮುಂದಿನಕಾಲದವು.

ಕೆಲಸದುಪಟಲದಿಂದ ದೇಹದೊ ।
ಳಲಸಿಗೆಯ ಬಗೆಯಿಂ ನಿದ್ರಾ ।
ಕುಲದಿ ಸುಪ್ತಿಯ ಬಿಗಿಡಿನಿಂ ದುಃಖಗಳ ನನುಭವಿಸಿ ॥
ಫಲವು ಇನಿತಿಲ್ಲೆಂಬ ಹೇಸಿಕೆ ।
ಬಲು ಬಗೆಯೊಳೊತ್ತರಿಸಿದುದರಿಂ ।
ತಿಳಿಯದವರ ಗೋಷ್ಟಿಯಲಿ ಮನವುಂ ಹರಿಯ ಬಿಟ್ಟವಗೆ ॥ ೧೯ ॥

ಇಹಪರದೆ ಗತಿಯಿಲ್ಲವೆಂದೇ ।
ಬಹುಲ ಕಾವ್ಯ ಪುರಾಣ ಮಾರ್ಗಂ ।
ವಿಹರಿಸುವ ದೆಶೆಯಿಂ ಪುರಾತನರಾದವರ ಚರಿತಂ ॥
ವಿಹಿತ ಪಥದೋಳ್ಮನವ ನಡೆಸ ।
ಲ್ವಿಹರಿಸಿದೊಡಾ ವಾಸನೆಯ ತಾಂ ।
ವಹಿಸಿರುವ ಚಿತ್ತಂ ವಿಟಾಳಿಸಿ ಹತ್ತಬಿಡದಿದನು ॥ ೨೦ ॥

ಅದರ ರುಚಿಯನೆ ತೋರಿ ಸುಖವೆಂ ।
ಬುದು ವಿಷಯ ಸಂಭವ ಮದಲ್ಲದೆ ।
ಮೃದು ಮಧುರ ವಾಕ್ಯಗಳ ದೆಶೆಯಿಂ ಕಿವಿಗೊಳಿಸಿ ಪೇಳ್ದ ॥
ಇದಿರೊಳೀ ಗುರುಬೋದದಲಿ ಯಾ ।
ಕೊದಗುವದು ಫಲವೆಂಬ ಭಾವನೆ ।
ಕದಡು ಗೊಂಡಿರೆ ಚಿತ್ತದಲಿ ಮೆಲಮೆಲ್ಲನುಂಟಹುದು ॥ ೨೧ ॥

---

೧೯ ಉಪಟಳ—ತೊಂದರೆಯಿಂದ ದೇಹದೊಳು+ಅಲಸಿಗೆ—ಬಸವಳಿದು ದಣಿದು ಶ್ರಮಗೊಂಡದ್ದರಿಂದ, ನಿದ್ರಾಕುಲದಿ–ನಿದ್ರೆಯ ವ್ಯಾಕುಲ–ದುಃಖದಿಂದ, ಹೇಸಿಕೆ-ಸಂಸಾರ ದಲ್ಲಿ ಉಂಟಾದ ಮನಸ್ಸಿನ ಜುಗುಪ್ಸೆಯು, ....ಯೊಳು+ಒತ್ತರಿಸಿದುದರಿಂ–ಸಮೀಪಿಸಿ ಬಂದದ್ದರಿಂದಲೂ, ತಿಳಿಯ....ಯಲಿ–ಮೂಢರ ಗುಂಪಿನಲ್ಲಿ.

೨೦ ಬಹುಲ–ಬಹಳ ಮಾರ್ಗಂ–ಪಙ್ತಿ, ಸರಣಿ. ವಿಹರಿಸುವ—ಸಂಚರಿಸಿ ಹೇಳಿ ಕೊಡುವದರಿಂದ, ವಿಹಿತಪಥ—ಹಿತವಾದ ಸನ್ಮಾರ್ಗದಲ್ಲಿ ನಡೆಸಲ್+ವಿಹರಿಸಿದೊಡೆ—ನಡೆ ಯುವಂತೆ ಮನಸ್ಸನ್ನು ತಿರುಗಿಸಲು ಯತ್ನಿಸಿದರೆ ಕೂಡಲೆ ತಾಂ–ಆವಾಸನೆಗಳು–ಈ ಚಿತ್ತ ವನ್ನೂ ವಿಟಾಳಿಸಿ–ಮಾಲಿನ್ಯಪಡಿಸಿಬಿಟ್ಟು ಹತ್ತ—ಆ ಚಿತ್ತವನ್ನು ತೀರ ತನ್ನಹತ್ತಿರಕ್ಕೆ ಎಳೆದುಕೊಂಡು ಬಿಗಿಮಾಡಿಬಿಡುವವು.

೨೧ ಸಂಭ...ಲ್ಲದೆ—ವಿಷಯಗಳಿಂದುಂಟಾಗುವದಲ್ಲದೆ ಯಾಕೆ+ಒದಗುವದು—ವಿಷಯವನ್ನು ಕೈಬಿಟ್ಟರೆ, ಇದಿರೊಳು-ಈಗಲೆ ದೊರಕುವ ಪ್ರತ್ಯಕ್ಷಫಲವು ಹೇಗೆ ಬಂದೀತು? ಎಂಬೀ ಭಾವನೆಯು ಮೇಲೆದ್ದುಕೊಂಡು, ಕದಡು—ಚಂಚಲ, ಕ್ಷೋಭಗೊಂಡಿರಲು ಬಡ

ಕೆಟ್ಟ ಗುಣವುಳ್ಳವಗೆ ಪೋಟರ ।
ಕೊಟ್ಟಗೆಯ ಬದುಕ ವುರಿದಂದದಿ ।
ವೊಟ್ಟವೊದಲೀ ದೇಹವೇ ತಾನೆಂಬುದುದಿಸುವುದು ॥
ಬಿಟ್ಟು ಹೊಗದೊಳಸರಿದು ತುಪ್ಪದ ।
ಬೊಟ್ಟು ಎಣ್ಣೆಯ ಗಡಿಗೆಯಲಿ ನೆರ ।
ದಿಟ್ಟಣಿಸಿ ದಂದವಲಿ ಯಾರಿಂ ತೆಗೆಯಲಳವಲ್ಲ ॥ ೨೨ ॥

ವೊದಲು ತಾವುಸವಾದಹಂಕೃತಿ ।
ಬಿದಿರ ಕಳಿತೆಯ ಹಾಗೆ ವೃದು ವಾ ।
ಗುದಿಸುವದು ದೇಹಾದ್ಯಸು ಮುಖಗಳೆಂಬ ಭೂತಗಳ ॥
ಉದಿತ ವಿಕೃತಿಯ ಬಳಿಗಳಲಿ ಬಿಡ ।
ದೊದಗುವದು ಗಂಟಾಗಿ ಗಂಟಿನ ।
ಪದದಿ ಸಾರ ಕಠೋರ ವಾಗಿಹುದರಗದಂದದಲಿ ॥ ೨೩ ॥

ಹೊತ್ತರಗಲದ ಹೊರಿಗೆಯನು ಬಿಡ ।
ದೆತ್ತಿಕೊಂಡಾ ವಸ್ತುಗಳಿಗಂ ।
ಮತ್ತೆ ತನಗಂ ಭೇದವೆಂಬುದು ತೋರದಂತಿಹುದು ॥

---

ಹಾಯಿಯಾದ ಈ ಮನಸ್ಸೂ ಅದನ್ನೆ ಉಂಟು—ಸರಿಯೆಂದು ಊಗುಟ್ಟುವದಕ್ಕಾರಂಭಿಸಿ ಬಿಡುವದು.

೨೨ ಪೋಟರ...ಬದುಕಂ+ಅರಿದಂದದಿ—ಪುಂಡುಪೋಕರಿಗಳ ಪುಟ್ಟ ಗುಡಿಸಲಿನಲ್ಲಿಯೇ ಬದುಕನ್ನು ಕಾಣುವಂತೆ, ದುರ್ಬಲ ಮನಸ್ಸು ಕೂಡ–ದೇಹವೇ 'ನಾನು' ಎಂದುಕೊಂಡು ಅವುಗಳಲ್ಲಿ ಹುಟ್ಟಿಕೊಳ್ಳುವದು. ಬಿಟ್ಟು ಹೊಗದೆ+ಒಳಸರಿದು—ಹೀಗೆ ಸೋತು ಹೋಗಿ ಕುಸಿದುಬಿದ್ದು ಆ ದೇಹಾದಿಗಳಲ್ಲಿಯೇ ಬೇರು ಬಿಟ್ಟುಕೊಂಡಿರುವ ಮನಸ್ಸನ್ನು, ಕೊನೆಗೆ ನಿಪುಣಮತಿಗಳಿಂದಲೂ ಹೊರಕ್ಕೆ ಎತ್ತುವದಕ್ಕಿಲ್ಲದಂತಾಗಿ ಎಣ್ಣೆಯ ಗಡಿಗೆಯಲ್ಲಿ ನೆರೆ...ಂದದಿ–ವೀರತನದಿಂದ ಪ್ರತಿಭಟಿಸಿ,ಎದುರುಬಿದ್ದ ತುಪ್ಪದ ಬೊಟ್ಟಿನಂತೆ, ಆ ಮನಸ್ಸು ದೇಹಾದಿಗಳಲ್ಲೊಂದಾಗಿ ಹೋಗಿರುವದು!

೨೩ ಕಳಿತೆ—ಬಿದುರಿನ ಎಳೆಯ ತಿರುಳಿನಂತೆ, ಉದಿಸುವದು—ಹುಟ್ಟಿಕೊಳ್ಳುವದು, ದೇಹಾದಿ+ಅಸುಮುಖ—ಶರೀರ ಪ್ರಾಣ ಇಂದ್ರಿಯ ಮುಂತಾದ ಭೂತ...ಕೃತಿಯ—ಆಕಾಶಾದಿ ಭೂತಕಾರ್ಯಗಳಲ್ಲಿ, ಬಿಡದೆ+ಒದಗುವದು—ಬಲಿತು ವೃದಿಗೊಳ್ಳುವದು, ಪದದಿ—ರೀತಿಯಿಂದ, ಸಾರಕಠೋರ—ತಿರುಳುಗಟ್ಟಿಗೊಂಡಂತೆ ತನ್ನಲ್ಲಿ ಸ್ಥಿರಗೊಂಡಿತು.

೨೪ ಹೊರಿಗೆ—ಹೆಚ್ಚಿನ ತಲೆಹೊರೆಯನ್ನು, ಅದನ್ನು ಹೊತ್ತ ಮನುಷ್ಯನನ್ನು ಬೇರ್ಪಡಿಸಿ ನೋಡುವದಕ್ಕಿಲ್ಲದಂತೆ; ದೇಹಾದಿಗಳಲ್ಲಿ—ಕಲಬೆರಕೆಗೊಂಡು 'ನಾನು ಮನುಷ್ಯ' ಎಂದು ಮುಂತಾಗಿ ಅವುಗಳಲ್ಲೊಂದಾಗಿಬಿಟ್ಟಿರುವ ಈ ಅಧ್ಯಾಸರೂಪ

ಅತ್ತಲೊಳಗಿರು ವರಿವಿನ ಬಲಂ।
ಬೆತ್ತು ಬಾಹ್ಯ ಪದಾರ್ಥಗಳ ನಡ।
ಸುತ್ತಲಿಹುದೀ ಹಮ್ಮಿದಕೆ ಸಂಗ್ರಾಹ್ಯ ವಾಗಿರುವ ॥ ೨೪ ॥

ಭೂತ ವಿಕೃತಿಯ ದೆಶೆಯೊಳೊಡನು।
ದ್ಭೂತಿಯಾಂತನುಭವದ ರೂಪವೆ।
ಯಾತನಾತ್ಮಕ ವಾಗಿಯಸಹ್ಯತೆಯಿಂದ ಚಿತ್ತವನು ॥
ಯಾತಿ ಯಾಯತಿಗಳನು ತಡದೊಡ।
ನಾತು ಕೊಂಡಿಹುದಾಗಿ ದ್ವಿವಿಧ ಗು।
ಣಾತಿಶಯ ದಿಂದಿರ್ಪುದಿದರೊಳ್ಮೊದಲನೆಯನುಭವಂ ॥ ೨೫ ॥

ಕ್ಷಣವೆನಿಪ ಕಾಲವನು ಯುಗವೆಂ।
ಬೆಣಿಕೆ ಗೈದಿಸುತಿಹುದು ಯುಗವೆಂ।
ಬೆಣಿಕೆ ವೆತ್ತ ಮಹತ್ತರದ ಹೊರೆಯನ್ನೆ ಭಾಸ್ಕರನ ॥
ಕ್ಷಣಿಕವೆನಿಪುದು; ದುಃಖವೆಂಬುದ।
ನುಣಲು ಬೇಗುದಿ ಗೊಂಬರೊಡನೊಡ।
ನಣಿಯುರಂ ಭೋಗ್ಯದಲಿ ವರ್ತಿಸಲವನೆ ಬಯಸುವರು ॥ ೨೬ ॥

---

ಅಹಂಕಾರವು ಅದರಂತೆಯೇ, ಒಳಗಿರುವ+ಅರಿವಿನ—ಪ್ರತ್ಯಗಾತ್ಮ ಚೈತನ್ಯದ, ಬಲಂ ಬೆತ್ತು—ಬಲವನ್ನು ಹೊಂದಿ, ಹೊರಗಿನ+ಪದಾರ್ಥ—ಇಂದ್ರಿಯಾರ್ಥಗಳನ್ನು ಅರಿವಿನ ವ್ಯವಹಾರಕ್ಕೆ ಗೋಚರಪಡಿಸುತ್ತ ನಡೆಯಿಸುತ್ತಿರುವದು ಈ ಹಮ್ಮು+ಇದಕೆ.

೨೫ ಭೂತವಿಕೃತಿ—ಭೂತಕಾರ್ಯಗಳಾದ ಹೊರಗಿನ ಪದಾರ್ಥಗಳಿಂದ. ಒಡನೆ+ಉದ್ಭೂತಿಯು+ಆಂತ—ಅನುಭವಗಳ ರೂಪುಗೊಂಡ, ಯಾತನಾತ್ಮಕ—ಸೂಕ್ಷ್ಮಶರೀರದಲ್ಲಾಗುವ ಸುಖದುಃಖಗಳ ಅನುಭವವೆಂಬ ವೇದನೆಗಳು ಸಹಿಸುವದಕ್ಕಿಲ್ಲದಷ್ಟು ಅಸಹ್ಯವಾಗಿರುವವು. ಯಾತಿಯು+ಆಯತಿಗಳನು—ಚಲನೆಗೊಂಡ ಚಿತ್ತದ ಸುಖದುಃಖಗಳ ವಿಸ್ತಾರಗಳನ್ನೆಲ್ಲ, ತಡದು—ತಡೆಗಟ್ಟಿ, ಒಡನೆ+ಆತು—ಸುಖದುಃಖಗಳೆಂಬೀ ಎರಡೆ—ಎಲ್ಲ ಬಗೆಯ ವೇದನೆಗಳನ್ನೂ ತಾನು ಒಳಗೊಂಡಿರುವದು. ಮೊದಲನೆಯ (ದುಃಖದ) +ಅನುಭವಂ.

೨೬ ಎಣಿಕೆಗೆ+ಐದಿಸುತಿಹುದು—ಹೊಂದಿಸುತ್ತಿರುವದು ಯುಗವು+ಎಂಬ+ಎಣಿಕೆವೆತ್ತ—ಲೆಕ್ಕಗೊಂಡಿರುವ ಸುಖಾನುಭವದ ಮಹತ್ತರದ—ವಿಸ್ತಾರವಾದ, ಹೊರೆಯನ್ನೆ—ಕಾಲವನ್ನೆ, ಕ್ಷಣವೆಂದು ತಿಳಿಸಿಕೊಡುತ್ತಿರುವದು, ದುಃಖವು+ಎಂಬುದನು+ಉಣಲು ಬೇಗುದಿ—ಸಂಕಟ, ಅಣಿಯುರಂ—ಸುಖಾತಿಶಯವು, ಭೋಗ್ಯ—ಭೋಗಸಾಧ್ಯಗಳಾದವಿಷಯಗಳಲ್ಲಿ ವರ್ತಿಸಲು—ಇರುವದೆಂದು ಕಂಡುಬರಲು.

ಇಂತು ಮನದೊಳಗೊಗೆದರಿಗಳುಂ ।
ಸಂತತಂ ಮತಿಯೋಳ್ವಿವೇಕದ ।
ಹಂತಿಯೈದದ ಜಾಡ್ಯಮುಂ, ವೇಣಿದನು ಪೋಷಿಸುವ ॥
ಕಂತುವೈರಿ ಕೃಪಾಲಯನೆ ಕೇ ।
ಳ್ನಿಂತಿರುವ ವಾಸನೆಗಳುಂ, ತನು ।
ವಂ ತಗಲಿ ಬಿಡದಿರುವ ಹಮ್ಮಿನಭೇದತೆಯು ಮಿಲ್ಲಿ ॥ ೨೭ ॥

ಮೊದಲ ಖಂಡದ ದುಃಖವೆನಿಪುದು ।
ವಿದುರರೋಳ್ಕೆಲಬರ ಮತದೊಳಿ ।
ಲ್ಲಿದರ ದೆಸೆಯಿಂ ಪುಟ್ಟುವುಬ್ಬಸ ಮಹುದು ಘನ ದುಃಖಂ ॥
ಇದರ ಮುಂದಿಹ ವೀರ್ಯದಶಕದೊ ।
ಳುದಿಸುತಿಹ ದುಃಖಂಗಳಿಗೆ ಮೋ ।
ಣಿದನೆ ಕಾರಣವೆಂದು ಮುನಿಗಳ್ಕೆಲಬರುಸಿರುವರು ॥ ೨೮ ॥

ಹೇಳುವರು ಬಗೆಬಗೆಯ ಮಾತಿನ ।
ಪಾಳಿಯದ ವರ್ತನೆಯನದು ಮಳೆ ।
ಗಾಲ ವೆಲ್ಲಂದೀರಿ ಸಕಲ ದಿಗಂತಮಂ ಪಿಡಿದ ॥
ಮೂಲ ಮೊದಲಾದೈದು ತಾರಾ ।
ಕಾಲ ಮೇಘಗಳಂತೆ ಮಂಜಿನ ।
ಗೂಳಿಯಕ್ಕೊಡಲಾಗಿ ತುತ್ತು ಮುರಾಗಿ ಹೋಗುವದು ॥ ೨೯ ॥

---

೨೭ ಮನದೊಳಗೆ+ಒಗೆದ—ಹುಟ್ಟಿದ ಅರಿಗಳನ್ನು. ಹಂತಿ—ವಿವೇಕದ ಸಾಲಿನಲ್ಲಿ, ಐದದ—ಸೇರದಿರುವ ಜಾಡ್ಯ—ಜಡತೆಯನ್ನು ಅನುಸರಿಸಿಕೊಂಡು ಬರುವ ದುಃಖಗಳ ಬೇನೆಗಳನ್ನು,ಕಂತು—ಮನ್ಮಥನ (ವೈರಿ—ಶಿವನು), ಹಮ್ಮಿನ+ಅಭೇದತೆಯುಂ—ದೇಹಾದಿಗಳಲ್ಲಿ ಕಲೆಬೆರಕೆಗೊಂಡಿರುವ ನಾನೆಂಬುವ ಆತ್ಮನ ಅಧ್ಯಾಸವೂ.

೨೮ ಮೊದಲಖಂಡ-ಮನಬುದ್ಧಿಚಿತ್ತಾಹಂಕಾರಗಳೆಂಬ ಉತ್ತಮಖಂಡವ, ವಿದುರ-ವಿವೇಕಿಗಳ, ಉಬ್ಬಸ—ತ್ರಾಸ ಸಂಕಟ. ಘನ—ಅಧಿಕವಾದ ವೀರ್ಯದಶಕ—ದಶೇಂದ್ರಿಯಗಳ ದುಃಖಕ್ಕೆ, ಉಸುರುವರು—ಹೇಳುವರು.

೨೯ ಪಾಳಿ—ಸಾಲು, ಮಳೆಗಾಲವೆಲ್ಲ ತೀರಿ—ಮುಗಿದ ಬಳಿಕ, ಹಿಮಂತಋತುವಿನ—ಮೂಲ, ಪೂಷಾ, ಉಷಾ, ಶ್ರವಣ, ಧನಿಷ್ಠೆ ಎಂಬೀ ಐದು, ತಾರಾ—ಮಳೆಯ ನಕ್ಷತ್ರಗಳ ಕಾಲದ ಮೋಡಗಳು ದಿಕ್ಕು ದಿಕ್ಕುಗಳನಾಶ್ರಯಿಸಿ, ಮಂಜಿನ ಗೂಳೆ—ಗುಳೆ—ಗುಂಪಿಗೆ ಸೇರಿಹೋಗಿ, ಒಡಲಾಗಿ—ಹಿಮವೆ ಆಗಿಬಿಟ್ಟು ಅವು, ತುತ್ತು ಮೂರಾಗಿ—ಮಂಜಿನ ಬಿಡಿ ಬಿಡಿಯ ಹನಿಗಳಾಗಿ ನಾಶವನ್ನೈದುವಂತೆ, ಈ ವಾಸನೆಗಳೂ ತಮ್ಮೊಳಗೆ ನಾಶವಾಗಿ ಹೋಗುತ್ತಿರುವವು.

ಕೆಲವು ಕಾರ್ಯಕ್ಕಾಲಯಂಗಳು ।
ಕೆಲವು ಸುನಿಷೇಧಕ್ಕೆ ಸಾಕ್ಷಾ ।
ನ್ನಿಲಯಗಳು, ಲೀಲಾವಿಲಾಸಾಸ್ಪದ ಗಳಾಗಿಹವು ॥
ಕೆಲವಿವರೊಳಾಸಕ್ತಿಯಿಂ ದು ।
ಜ್ಜ್ವಳಿಪುದತ್ಯಂತಾರ್ತಿ ಯಿಹದೊಳ ।
ಗುಳಿಯದೇ ಬರುತಿಹುದು ರೌರವ ಮುಖ್ಯ ನರಕಚಯಂ ॥ ೩೦ ॥

ವೇದಶಾಸ್ತ್ರಂಗಳಿಗೆ ಬಾಹ್ಯವ ।
ನಾವರಿಸಿಕೊಂಡಿರ್ಪ ಮತಗಳ ।
ಲೋದಿ ಹೇಳುವ ಧರ್ಮವೆಲ್ಲಂ ರೌರವಪ್ರದವು ॥
ಏದೆಶೆಯೊಳಾದರು ಸುಜನರೀ ।
ಹಾದಿಯೊಳ್ಸಂಚರಿಸ ಲಾಗದು ।
ವೈದಿಕ ಸ್ಮಾರ್ತರ್ಪುರಾಣಜ್ಞರ್ಜಗತ್ತಿನಲಿ ॥ ೩೧ ॥

ಚೇತನದ ವರ್ಗದಲಿ ಸೃಷ್ಟಿಗೆ ।
ಜಾತ ಸೌಖ್ಯಮುದಾವುದೆನಲಾ ।
ಶಾತ ಕುಕ್ಷಿಗಳಾದ ಪೆಣ್ಗಳ ತಕ್ಕೈಪುದೊಂದೇ ॥
ಚೇತನೇತರ ವರ್ಗದಲಿ ಮೃದು ।
ಲಾತಿಶಯ ಮಾಂತಿರುವ ಶಯ್ಯೆಯು ।
ಶೀತಲ ಪ್ರಸವಚ್ಛದಂಗಳು ಮರ್ಕನತ್ಯುಷ್ಣಂ ॥ ೩೨ ॥

---

೩೦ ವಾಸನೆಗಳಲ್ಲಿ ಕೆಲವು ಕಾರ್ಯಕ್ಕೆ—ವಿಧ್ಯುಕ್ತಕರ್ಮಗಳಲ್ಲಿಯೂ ಇನ್ನು ಕೆಲವು ನಿಷಿದ್ಧಕಾರ್ಯಗಳಲ್ಲಿಯೂ, ಲೀಲಾವಿಲಾಸ್ಪದ–ಬಗೆಬಗೆಯ ಭುವನಕೇಳಿ–ವಿನೋದಗಳ ಭೋಗಗಳಲ್ಲಿಯೂ–ಮನುಷ್ಯನನ್ನು ಬಿಡದೆ ತೊಡಗಿಸುತ್ತಿರುವವು, ಆಸಕ್ತಿ–ಪ್ರೀತಿ, ಉಜ್ಜ್ವಳಿಪುದು—ತೋರಿಕೊಳ್ಳುವದು, ಅತ್ಯಂತಾರ್ತಿ—ಅಪರಿಮಿತದುಃಖವು, ಇಹದೊಳಗೆ+ಉಳಿಯದೆ-ಬಿಡದಂತೆ ಇಲ್ಲಿ ಬರುತ್ತಿರುವದಲ್ಲದೆ, ಮುಂದೆಯೂ. ಚಯಂ-ರಾಶಿಗಳೂ ಬರುವವು,

೩೧ ಬಾಹ್ಯವನು+ಆದರಿಸಿ-ವಿರುದ್ಧಾಂಶಗಳನ್ನೆ ಸತ್ಕರಿಸಿರುವ, ಏದೆಶೆಯೊಳಾದರು-ದುಃಖದ ಎಂಥ ವಿಷಮಪರಿಸ್ಥಿತಿ ಒದಗಿಬಂದಿದ್ದರೂ ಈ ಹಾದಿ–ವೇದವಿರುದ್ಧವಾದ ಈ ಮಾರ್ಗದಲ್ಲಿ.

೩೨ ವರ್ಗ-ಚೇತನಸಮೂಹದಲ್ಲಿ ಅಥವಾ ಸೃಷ್ಟಿಗೆ ಜಾತ-ನರಜನ್ಮದಲ್ಲಿ ಪ್ರಧಾನಸುಖವೆಂದು ಸಾಮಾನ್ಯರಲ್ಲಿ ಪರಿಗಣಿಸಲ್ಪಟ್ಟಿರುವ ಆಶಾತ...ಕ್ಕೈಪುದು–ತೆಳು ... ಸ್ತ್ರೀಯಳ ಆಲಿಂಗನವೆಂಬುದೊಂದೇ, ಇನ್ನು. ಚೇತನೇತರ–ಚೇತನವಲ್ಲದ ವಸ್ತುಗಳ ಸಾಲಿನಲ್ಲಿ ಆಂತಿರುವ–ಸೇರಿರುವ ಮೃದು...ಶಯ್ಯೆ–ಮೆತ್ತನೆಯ ಹಾಸಿಗೆಯೂ ಶೀತಲಪ್ರಸವ

ಎನಿಪನಾವದಿನಂಗಳಲಿ ತ ।
ದ್ದಿನಗಳಲಿ ಮೇಘಾವರಣ ಮಿ ।
ಮಿಲ್ಲೆನಿಪುಪಾವಕ್ಷಣದಲಾ ಕ್ಷಣದಲ್ಲಿ ತಿಟ್ಟನಲಿ ॥
ಘನತರದ ಗತಿಯಿಂದ ಬಳಲಿದ ।
ಜನರ ಸರ್ವಾಂಗದಲಿ ಕೂಡಿ ಪ ।
ವನ ನೆಸೆವುದುಂ, ಶೀತಕಾಲದೆ ಉಷ್ಣವಾಗಿರ್ಪ ॥ ೩೩ ॥

ವಸ್ತುಗಳ ಸಂಸರ್ಗಮುಂ, ಸುಗ ।
ಭಸ್ತಿಮಾಲಿಯು; ತೀಕ್ಷ್ಣತೆಯಲಿ ಪ್ರ ।
ಶಸ್ತ ಮಾಗಿಹ ಚಂದನಾದಿಕ ಶೀತಲ ವಿಶಿಷ್ಟ ॥
ವಸ್ತುಗಳ ಸಂಸರ್ಗಮುಂ, ಸುಖ ।
ವಸ್ತಿಯೆನಿಸುವ ಪೇಲವತೆಯಂ ।
ವಿಸ್ತರಿಸುವರ್ಥಂಗಳಲಿ ಸಂಸರ್ಗಮುಂ ಬಿಡದೆ ॥ ೩೪ ॥

ಸೊಗಮ ನೀವುದಿವರ್ಕಳಲಿ ಮತಿ ।
ಸೊಗಸಲಲ್ಲಾಸಕ್ತಿಯಿಂದೀ ।
ಬಗೆಬಗೆಯ ವಸ್ತುಗಳು ವಿಷಮಾನ್ಯಾಯ ಸಂಪಾದ್ಯಂ ॥

---

ಚ್ಛದಂಗಳುಂ—ಚಳಿಯಕಾಲದಲ್ಲಿ ಬೆಚ್ಚನೆಯ, ಛದನ—ಹೊದಿಕೆಯೆ ಮುಂತಾದವು ಹಿತವಾಗಿ ಕಾಣುವವು. ಇನ್ನು ಅರ್ಕನು+ಅತ್ಯುಷ್ಣಂ–ಪ್ರಖರಕಿರಣಗಳಿಂದ ಸೂರ್ಯನು ಉರಿಯುವ ಕಾಲದಲ್ಲಾದರೆ.

೩೩ ಗಿಡಮರಬಳ್ಳಿಗಳೂ ಹುಲ್ಲುಗಾವಲೂ ಇರುವ–ಹಸುರಿನ ಸುತ್ತುವಳಿಯ ಊ, ತಿಟ್ಟನಲಿ–ದಿಣ್ಣೆಗಳಲ್ಲಿ ಪವನನು+ಎಸೆವುದುಂ—ತಂಗಾಳಿಯ ಸುಳಿವು.

೩೪ ಸಂಸರ್ಗ–ಸಂಬಂಧವು ಸುಗಭಸ್ತಿಮಾಲಿಯು–ಸಹಸ್ರಕಿರಣನಾದ ಸೂರ್ಯನ ಬಿಸಿಲೂ ಪ್ರಶಸ್ತ—ಉನ್ನತವಾದ ಪರಿಮಳ ದ್ರವ್ಯಗಳೂ ಸುಖವಸ್ತಿ–ಸುಖವನ್ನು ವಿಸ್ತರಿಸುವ ಮತ್ತು ಆ ಸುಖದ. ಪೇಲವತೆ–ಅನುಗತತ್ವವನ್ನು ವಿಸ್ತರಿಸಿ ಆ ಸುಖವನ್ನು ಹೊರಪಡಿಸುವ, ಅರ್ಥಂ—ವಿಷಯಗಳಲ್ಲಿ ತಾನು. ಸಂಸರ್ಗ—ಸಂಬಂಧಿಸಿ ಅವುಗಳನ್ನು ಸೇವಿಸುವದು.

೩೫ ಸೊಗಮನು+ಈವುದು—ಸುಖವನ್ನು ಕೊಡುವದು. ಇವರ್ಕಳಲಿ–ಇವುಗಳಲ್ಲಿ ಮತಿ–ಬುದ್ಧಿ ಸೊಗಶಲು–ಆಹ್ಲಾದ, ಆನಂದವನ್ನು ಹೊಂದಲು. ಅಲ್ಲಿ+ಆಸಕ್ತಿ—ಅವುಗಳಲ್ಲಿನ ಪ್ರೀತಿಯಿಂದ ಅವುಗಳು ವಿಷಮಾನ್ಯಾಯ–ಕಪಟ ವಂಚನೆಯೇ ಮುಂತಾದ ಅಧರ್ಮದಿಂದಲೇ ಸಂಪಾದ್ಯಂ–ತನ್ನಿಂದ ಅವು, ಸಂಪಾದಿಸಲ್ಪಡುತ್ತವೆ. ಆ ದುಷ್ಕರ್ಮವಫಲವು ಅಗಲದೆ–ತನ್ನನ್ನು ಬಿಟ್ಟಗಲದಂತೆ ಭವಭವ–ಮರಮರಳಿ ಆಗುತ್ತಿರುವ ಹುಟ್ಟುವೊಂದು

ಅಗಲದೇ ಭವಭವಗಳಲಿ ದುಃ ।
ಖಗಳ ಕೊಡುವುದು, ಶಸ್ತ್ರ ಮುಖ್ಯಾ ।
ದಿಗಳ ಕಠಿನ ಸ್ಪರ್ಶಮುಂ ಕಂಟಕ ಸಮೂಹಗಳ　|| ೩೫ ||

ಹೊಂದುಗಡೆಯುಂ ದುರ್ಧರತೆಯಂ ।
ಹೊಂದಿ ಶೂಕಾಗ್ರತೆಯನುಂ ನಿ ।
ಸ್ಯಂದಂ ದುಷ್ಟ ದ್ರವಮನುಂ ಕಠಿನತ್ವಮುಂ ಕೂಡಿ ||
ಕುಂದು ಹೆಚ್ಚೊಡಗೂಡಿ ದಂಚಿನ ।
ಸಂದೆಸೆವ ವಸ್ತುಗಳ ಲೊಡನೊಡ ।
ನೊಂದಿಸುವುದುಂ ದುಃಖಮಯವಾಗಿಹುದು ಸಮ್ಮದಲಿ　|| ೩೬ ||

ಯಾವ ವಸ್ತುಗಳಕ್ಷಿ ನಿಕಟವ ।
ನಾವರಿಸುವವು ವಿಕೃತಿ ರೂಪವ ।
ಭಾವದಲಿ ತಾಳ್ದಿರ್ದೊಡಂ ಹೇಸಿಕೆಯ ಪೊಣ್ಮಿಸುವ ||
ಭಾವ ಮಾಂತಿರುತಿರ್ದೊಡಂ ಸಹ ।
ಜಾವಯವಗತ ದೋಷ ಮುಣ್ಮಿದೊ ।
ಡಾವಲಿರುವರ್ಥಂ ವಿಯೋಗವನೈದಿ ತೋರಿದೊಡಂ　|| ೩೭ ||

---

ಗಳ ಈ ಸಂಸಾರದಲ್ಲಿ ಆಗುತ್ತಿರುವದು, ಶಸ್ತ್ರ....ಚರ್ಮಕ್ಕೆ ದುಃಖವನ್ನು ಕೊಡುವ ವಸ್ತುಗಳನ್ನು ಕುರಿತು ಈಗ ವಿವರಿಸುವರು :—

೩೬ ಹೊಂದುಗಡೆ—ಅನುವಾಗಿ ಹೊಂದಿಸಿಕೊಂಡಿರುವ, ದುರ್ಧ....ಂದಿ–ಬಹುಕಷ್ಟದಿಂದ ಸಹಿಸಬಹುದಾದ ಶೂಕಾಗ್ರತೆ–ಚೂಪಾಗಿರುವ ಧಾನ್ಯದಮೇಲಿರುವ ಮುಳ್ಳಿನ ಕೊನೆಯಂತಿರುವದನ್ನೆ ಕೊನೆಯಲ್ಲುಳ್ಳ ಆಯುಧಗಳು, ನಿಸ್ಯಂದಂ—ಬಹಳವಾಗಿ ಸುರಿಯುವ ನೀರು ದುಷ್ಟದ್ರಮನುಂ—ದೂಷಿತವಾಗಿ ಚರ್ಮದಿಂದ ಹರಿದು ಬರುವ ಕೆಟ್ಟರಕ್ತ, ಕೀವುಳ್ಳ ಪದಾರ್ಥ. ಅಂಚಿನ+ಸಂದು+ಎಸವ—ಕೊನೆಗಳಲ್ಲಿನ ಸಂದುಗಳಿಂದ ಶೋಭಿಸುವ, ವಸ್ತುಗಳಲಿ+ಒಡನೊಡನೆ+ಒಂದಿಸುವುದುಂ–ಸೇರಿಸುವದೂ, ಸಮ್ಮ–ಚರ್ಮದಲ್ಲಿ ದುಃಖಮಯವಾಗಿರುವದು.

೩೭ ಯಾವವಸ್ತುಗಳು+ಅಕ್ಷಿನಿಕಟವನು—ಕಣ್ಣುಗಳನ್ನು ಸಮೀಪಿಸಿ, ಆವರಿಸುವವೊ–ಗೋಚರಿಸುವವೊ, ವಿಕೃ...ಳ್ದಿರ್ದೊಡಂ–ತನ್ನಲ್ಲಿ ವಿಕಾರರೂಪವನ್ನು ತಾಳಿದ್ದರೂ, ಪೊಣ್ಮಿಸುವ–ಹೊರಡಿಸುವ ಹುಟ್ಟಿಸುವ. ಭಾವಂ+ಆಂತಿರುತ+ಇರ್ದೊಡಂ–ಸ್ವರೂಪ ಹೊಂದಿದ್ದರೂ ಸಹಜ+ಅವಯವಗತ–ತನ್ನವಯವಗಳನ್ನು ಹೊಂದಿರತಕ್ಕ, ದೋಷಂ+ಉಣ್ಮಿದೊಡೆ–ಹುಟ್ಟುತ್ತಿದ್ದರೂ ಮೇಲೆಬಂದು ಏಳುತ್ತಿದ್ದರೂ ದುಃಖವೇ ಆವಲಿರುವ–ತನ್ನಲ್ಲಿ ರಾಶಿರಾಶಿಯಾಗಿ ಬಂದುಕೂಡಿದ್ದ ಅರ್ಥಗಳು, ವಿಯೋಗವನು+ಐದಿ–ತನ್ನನ್ನು ಬಿಟ್ಟು ಅವು ಅಗಲುತ್ತಿದ್ದರೂ ದುಃಖವೆ.

ಓಕರಿಕೆ ಪುಟ್ಟುವದು ಮನಕೆ, ದಿ ।
ವೌಕಸರಿಗುಪಭೋಗ್ಯಮೆನಿಪ ಶು ।
ಭಾಕೃತಿಯ ತಾಳಿರುವ ಹೇಮಂ, ಹೇಮಮಯಜೇಲಂ ॥
ಶ್ರೀಕರ ಪ್ರಭೆಯಾಂತ ರತ್ನಮ ।
ನೀಕಿನೀ ತತಿ, ಸೈಂಧವಂ ಭ ।
ದ್ರಾಕೃತಿಯ ಗಜ ಘಟ ರಥಂಗಳ ಗೊಂದಣಂ ನಗರಂ ॥ ೩೮ ॥

ಹೊಂದಗೆಯ ಚಂದದಲಿ ರಾಜಿಪ ।
ಚಂದನದ ಹಲಗೆಗಳ ಸಂದಣಿ ।
ಯಿಂದ ಚೌಕಿಯನಾಂತು ಸೂತ್ರ ಪ್ರಮಿತಿಗಳವಟ್ಟ ॥
ಮಂದಿರಂ ಮೃದುಹರಿಸ ತೂಲವ ।
ನೊಂದಿರುವ ಮಂಚಂ ಸುವರ್ಣದ ।
ಬಿಂದುವಿಂ ರಾಜಿಸುವ ದಿವ್ಯ ವ್ಯಜನಮತಿ ರಮ್ಯಂ ॥ ೩೯ ॥

ಚಾಮರಂ ಫಲ ಪುಷ್ಪ ವೃಕ್ಷಾ ।
ರಾಮ ಮುದ್ಭ್ರಾಂತ ಭ್ರಮರ ವಿ ।
ಶ್ರಾಮಕರ ಮತ್ಯಚ್ಛಯಂ ಕೃತಕಾಚಲ ಸ್ನಾನಂ ॥
ತಾಮರಸ ಕಿಂಜಲ್ಕಧೂಳೀ ।
ಹೇಮ ಭೂತ ತಟಾಕ ಜಲ ಮು ।
ದ್ದಾಮ ಸೈಕತ ವೇದಿಕೆ ಸಮುತ್ಪ ಕ್ಷಮಾ ಮಾರ್ಗಂ ॥ ೪೦ ॥

---

೩೮ ಓರಿಕೆ–ಮನಸ್ಸಿಗೆ ಸಾಕಾಗಿ ಜುಗುಪ್ಸೆಯುಂಟಾಗಿ ಅದು ವಾಂತಿಯಂತೆ ಹೊರಕ್ಕೆ ನೂಕುತ್ತಿದ್ದರೂ ದುಃಖನೇ. ದಿವೌ....ಭೋಗ್ಯಂ—ದೇವತೆಗಳಿಗೆ ಭೋಗ್ಯವಾಗಿ ರುವ ಶುಭ+ಆಕೃತಿ–ರೂಪನ್ನು ಹೇಮಂ–ಬಂಗಾರವು ಹೇಮ....ಲಂ–ಜರಿಯ ಬಟ್ಟೆ ವಿಶೇಷಗಳು, ....ತತಿ—ನವರತ್ನಗಳ ಸಮೂಹ, ಸೈಂಧವ—ಕುದುರೆಗಳ, ಭದ್ರಾಕೃತಿ—ಶುಭಲಕ್ಷಣವುಳ್ಳ ಗಜ—ಆನೆಗಳ, ಘಟ—ಪಡೆಗಳು ಗೊಂದಣಂ–ಸಾಲುಸಾಲಾದ ವಾಹನ ಗಳು.

೩೯ ಹೊಂದುಗೆಯ—ಸಲ್ಲುವಂತೆ ಹೊಂದುಕೊಂಡು ಚಂದ—ಮನೋಹರವಾಗಿ, ಸಂದಣಿ—ಸಾಲುಗಳಿಂದ, ಚೌಕಿಯ+ಆಂತು....ಚೌಕು ಚೌಕಾಗಿರುವ ಚಂದನದ ಮಣೆ ಗಳು ಸೂತ್ರ....ದಿರಂ—ಆಯಸೂತ್ರದ ಕ್ರಮಕ್ಕೊಳಪಟ್ಟ ಮನೆಮಂದಿರಗಳು, ಒಂದಿ ರುವ—ಸೇರಿಕೊಂಡಿರುವ, ....ಬಿಂದು—ಬಂಗಾರದ ಗೆಜ್ಜೆಗಳಿಂದ ಸೊಗಸುವ ದಿವ್ಯ—ದೇವಲೋಕಕ್ಕೆ ಸರಿಹೋಲುವ ವ್ಯಜನಂ—ರಮ್ಯವಾದ ಬೀಸಣಿಗೆವಿಶೇಷಗಳೇನು?

೪೦ ಚಾಮರಂ—ಚೌರಿಗಳು, ಆರಾಮಂ—ವಿಶ್ರಮಿಸುವ ಉಪವನ, ಉದ್+ ಭ್ರಾಂತ—ಬಂದಕ್ಕೊಂದು ತಪ್ಪಿಲ್ಲ ಹೊಂದಿಕೊಂಡು ಗುಂಪುಗೊಂಡಿರುವ ತುಂಬಿಗಳ

ಇವು ಮೊದಲ್ಗೊಂಡಿನ್ನುಳಿದ ರೂ ।
ಪವ ವರಿಸಿದ ಪದಾರ್ಥಗಳ ಲೊಡ ।
ನವತರಿಪ ಸಂತೋಷವೆಣಿಸಲ್ಕೊಂದು ಪಾಲಹುದು ॥
ಯುವತಿಯರ ಕಂಡಾಗ ಮತ್ತವ ।
ರವಯವ ಸ್ಥಿತಿ ಮತಿಗೆ ಗೋಚರಿ ।
ಸುವ ಸಮಯದೊಳಗುದಿಪ ಹರುಷವಿದೊಂದು ಪಾಲಹುದು ॥ ೪೧ ॥

ನೋವನೈದಿಪುದಾಗಿ ಕಣ್ಣಿಗೆ ।
ಸಾವಲಂಬನಮಾದ ವಸ್ತುವಿ ।
ನಾವಳಿಯೆ ತತ್ಕಾಲ ದುಃಖಪ್ರದವದೆನಿಸುವದು ॥
ಯೌವತದ ರೂಪ ಗ್ರಹಣ ಮೊಂ ॥
ದೇ ವರಿಸಿ ಮಾನಸವ ಬಿಡಿದೇ ।
ನೋವ ಕಾಲಾಂತರಕೆ ಕೊಡುವುದದೇ ದೃಢಂ ವರಿಸೆ ॥ ೪೨ ॥

ರಸನೆಯಲಿ ನಾನಾವಿಧಗಳಹ ।
ರಸವಿಶೇಷವನುಳ್ಳ ವಸ್ತುಗ ।
ಳ ಸುಸಮುದಯಂ ಸೂರ್ಯಪಾಕದೆ ಕೆಲವು, ಕೆಲವಹವು ॥
ವಸುವಿನಸು ಪಾಕದಲಿ ಭೋಜ್ಯಂ ।
ವಸುಧೆಯಲಿ ಜಂತುಗಳಿಗಿದರಿಂ ।
ದೆಸೆವ ಧಾತುಗಳೇಳು ಜೀವಿಸುತಿಹವು ಚನ್ನಾಗಿ ॥ ೪೩ ॥

---

ಸಾಲು, ವಿಶ್ರಾಮಕರಂ+ಅತ್ಯ....ಸ್ಥಾನಂ—ಎತ್ತರದ ಮರಳುದಿಬ್ಬೆಗಳು ಬೆಟ್ಟಗುಡ್ಡಗಳು, ತಾಮ....ಭೂತಂ—ಕಮಲಗಳಲ್ಲಿನ ಕೇಸರಗಳ ಧೂಳಿನಿಂದ ತುಂಬಿಕೊಂಡು ಸುವರ್ಣಪ್ರಾಯವಾಗಿ ಕಂಗೊಳಿಸುತ್ತಿದ್ದ ಜಲಕ್ರೀಡೆಗೆ ಅನುವಾಗಿರುವ ತಟಾಟಕಜಲಂ—ನೀರುಳ್ಳ ಕೆರೆಗಳು, ಸರೋವರಗಳು. ಉದ್ಘಾ....ದಿಕ—ಶ್ರೇಷ್ಠವಾದ ತಾಯಿಮಳಲೊಟ್ಟಿಲಿನ ಎತ್ತರದ ಜಗುಲಿಗಳು ಸಮುತ್ಪಕ್ಷಮಾ—ಸಮವಾದ ರಾಜಬೀದಿಗಳು.

೪೨ ನೋವನು+ಐದಿಪುದಾಗಿ—ಹೊಂದಿಸುತ್ತದೆಯಾಗಿ ಸಾವಲಂಬನ—ರೂಪುಗೊಂಡು ಕಣ್ಣಿಗೆ ಕಾಣಿಸುವ ವಸ್ತುವಿನ+ಆವಳಿ—ರಾಶಿಯೆ. ಯೌತದ—ಪ್ರಾಯಕ್ಕೆ ಬಂದ ನವಕನ್ನಿಕೆಯರ ಗುಂಪಿನಲ್ಲಿ ಚೆಲುವಾಗಿ ಕಾಣುವ ರೂಪಿನ ಅರಿವೊಂದೇ ವರಿಸಿ—ಸ್ವೀಕರಿಸಿ, ಈ ಮನಸ್ಸು ತನ್ನಲ್ಲಿ ಬಯಸಿ ಭದ್ರಗೊಳಿಸಿಕೊಂಡದ್ದರಿಂದ.

೪೩ ರಸನೆ—ನಾಲಿಗೆಯಿಂದ ಗ್ರಹಿಸುವ ಸುಸಮುದಯ—ಸಮುದಾಯ, ಸೂರ್ಯಪಾಕದಿ—ಬಿಸಿಲಿನಿಂದ ಪಕ್ವಗೊಳ್ಳುವ ಆಹಾರದ ವಸ್ತುಗಳು, ಅಸು—ಮನೆಯಲ್ಲಿ ಅಡಿಗೆ ಮಾಡುವ, ವಸುವಿನ—ಬೆಂಕಿ, ಚಂದ್ರನ ಕಿರಣ—ಇವುಗಳಿಂದ ಕೆಲವು ಪಕ್ವವಾಗಿ ಬಂದು, ಭೋಜ್ಯಂ—ಜನರಿಗೆ ಆಹಾರವಾಗುತ್ತಿರುವವು, ವಸುಧೆ—ಭೂಮಿಯಲ್ಲಿ, ಜಂತು—ಜೀವರುಗಳಿಗೆ, ಎಸೆವ—ಹುಟ್ಟುವ, ಜೀವಿಸುತ+ಇಹವು—ಪುಷ್ಟಿಗೊಳ್ಳುತ್ತಿರುವವು.

ಹುಳಿಯು ಸೀ ಯುಳ್ಳೆರಡು ಕಾರದಿ ।
ಬಳಸಿ ಕಹಿಯೆಂದೆರಡು ಒಗರಿಂ ।
ದೆಳಸಿದುಪ್ಪಿಂದೆರಡು ವಸ್ತುಗಳಾವ ವಿರುತಿಹವೊ ||
ಇಳೆಯೊಳವು ಸತ್ವವನು ತಮವನು ।
ಒಳಿಕ ರಜವನು ಕೂಡಿಹವು ತಾ ।
ವೊಳ ಸರಿಯಲೀ ದೇಹದಲಿ ತತ್ತದ್ಗುಣಂಗಳನು || ೪೪ ||

ಪುಟ್ಟಿಸುತ್ತಿಹವಿದರ ಬಳಕೆಯ ।
ಬಿಟ್ಟು ಬಿಡಕೂಡದು, ಬಿಡದೆಯಿರ ।
ಲಿಟ್ಟಣಿಪುದಾಯಾ ಪದಾರ್ಥಂಗಳಲಿ ಗುಣದೋಷಂ ||
ಕೊಟ್ಟರಿವ ನಾರವರ ಪಾಪವ ।
ಕಟ್ಟಿಕೊಂಡೇ ಬಂದು ಹೋಗುವವು ।
ಹೊಟ್ಟೆಯನು, ಘನ ಪಾಪವೆಲ್ಲಾಹಾರ ಮೂಲಕವೈ || ೪೫ ||

ಉತ್ತಮ ದ್ರವ್ಯಂಗಳಾದರೆ ।
ತೆತ್ತು ದೇಹ ಪ್ರಾಣ ಕರಣವ ।
ತತ್ತದುಚಿತಾವಸ್ಥೆಯಲಿ ಸಂಪಾದಿಸಲ್ಬೇಕು ||
ಎತ್ತಲಾನೊಂದಿವರ ವಾಸನೆ ।
ಚಿತ್ತದಲಿ ಪತ್ತಿದರೆ ಪಾಪಕೆ ।
ಬಿತ್ತನೆಯಿದೆಂದಾಗಮಾರ್ಯ ನಿಷಿದ್ಧ ವರ್ತನೆಯಂ || ೪೬ ||

---

೪೪ ಕಯಿ–ಕಹಿ, ಎಳಸಿದ—ಬಯಸಿದ ಇಳೆ–ಭೂಮಿ ತಾವು+ಒಳಸರಿಯಲು–ಆಹಾರಯೋಗ್ಯವಾಗಿ ತನ್ನೊಳಕ್ಕೆ ಬಂದು ರಾಶಿಕೂಡಲು, ಕೂಡಲೆ ಆ ಸೀಯೂ ಹುಳಿಯೂ—ಸತ್ವಗುಣವನ್ನು, ಕಾರಕಯಿ—ತಮೋಗುಣವನ್ನೂ, ಉಪ್ಪು ಒಗರು—ರಜೋಗುಣವನ್ನೂ ಈ ದೇಹದಲ್ಲಿ ಹುಟ್ಟಿಸುತ್ತಿರುವವು.

೪೫ ಇದರ....ಕೂಡದು–ಶರೀರರಕ್ಷಣೆಗಾಗಿ ಈ ರಸ ವಿಶೇಷಗಳನ್ನು ಮನುಷ್ಯನಿಗೆ ಬಿಡುವದಕ್ಕಿಲ್ಲ, ಬಿಡದೆ+ಇರಲು–ಸೇವಿಸಲು, ಇಟ್ಟಣಿಪುದು–ಆಹಾರದ ಗುಣದೋಷಗಳು ಎದುರುಬಿದ್ದು ತನ್ನನ್ನು ತೊಂದರೆಪಡಿಸುವವು ಆದ್ದರಿಂದಲೆ, ಕೊಟ್ಟರೆ+ಇವನು+ಆರ್-ಆ ಆಹಾರದ ವಸ್ತುಗಳನ್ನು ಕೊಟ್ಟವರ, ಹೊಗುವವು–ಹೊಟ್ಟೆಯನ್ನು ಪ್ರವೇಶಿಸುವವು, ಘನ–ಮನುಷ್ಯನು ಮಾಡುವ ಹೆಚ್ಚಿನ.

೪೬ ತೆತ್ತು—ಕೊಟ್ಟಾದರು ತತ್+ತತ್+ಉಚಿತ+ಅವಸ್ಥೆ—ದೇಹೇಂದ್ರಿಯ ಕರಣಗಳು ಯೋಗ್ಯವಾದ ಉತ್ತಮಸ್ಥಿತಿಯಲ್ಲಿರುವಂತೆ, ಇವರ–ಈ ಆಹಾರ ವಸ್ತುಗಳ, ಪತ್ತಿದರೆ–ತನ್ನ ಹೊಟ್ಟೆಗೆ ಸೇರಿ ಹತ್ತಿರವಾದರೆ ಸರಿ, ಮನುಷ್ಯನು ಮಾಡುವ ಪಾಪಗಳೆಲ್ಲಕ್ಕೂ ಇದು ಬಿತ್ತನೆಹಾಕಿದಂತೆಯೆ ಏತಕ್ಕೆಂದರೆ ಆಹಾರದಿಂದ ಪುಷ್ಟವಾದ ಚಿತ್ತದ ಈ ವಾಸನೆಗಳಿಗೆ ವಶನಾಗಿಯೆ ಆಗಮ+ಆರ್ಯ–ಶಾಸ್ತ್ರಗುರುಗಳಿಂದ, ನಿಷೇಧಿಸಲ್ಪಟ್ಟದನ್ನು ಕೂಡ ಮನಸ್ಸಿ

ಬಗೆಯದೇ, ಜಿಹ್ವೆಯಲಿ ಲಾಂಪ ।
ಟ್ಯಗಳಿಸೆಯಲಾ ದೆಸೆಯಲ್ಲೇ ಮನ ।
ವಗಲದೇ ಸಂಚರಿಪುದಿದರಿಂದೆರಡು ತೆರನಹುದು ॥
ವಿಗಡಿಸಿದರೊಳಪೊಕ್ಕು ಸದ್ಯಃ ।
ಸ್ತಗಿತ ದುಃಖಂ ಸುಖಮನಿತ್ತೊಡ ।
ನಗಡುಗೊಂಡಾಯಾ ಪದಾರ್ಥವ ನಾಳ್ದರಿಂದಹುದು ॥ ೪೭ ॥

ಬಿಡದೆ ಕಾಲಾಂತರಕೆ ದುಃಖಂ ।
ತೊಡರುವುದು; ಮೂಗಿನಲಿ ಸೇರ್ವುದು ।
ತಡೆಯದೆ ದುರ್ಗಂಧವಾಗಿ ಸುಗಂಧವಾಗೆರಡು ॥
ಉಡಿಯ ನೂಲ್ಕಡಲಾಗಿ ಮೆರೆವೀ ।
ಪೊಡವಿಯಲಿ ವಸ್ತುಗಳು ಮೇಣದ ।
ರಡಕದಿಂ ಬಾಹುಳ್ಯದಿಂ ಕ್ರಮವಾಗಿ ಪುಟ್ಟುವವು ॥ ೪೮ ॥

ರಾಗವೃತ್ತಿಗಳಲ್ಲಿ ಚಂದ್ರಪ ।
ರಾಗಂ ಕತ್ತುರಿಯ ರೇಣುಂ ಸು ।
ರಾಗ ಸುಮನಶ್ಚಂದನಾಗರು ಕುಂಕುಮ ಪ್ರಮುಖಂ ॥
ಯೋಗವಾಹಕ ಮಾಗಿಹುದು ನಾ ।
ಸಾ ಗತಿಯೊಳೆಡೆಯಾಡಿ ತರ್ಪಕ ।
ವಾಗಿ ಚಿತ್ತಕ್ಕಿಹುದು ಮನವಿದರಲ್ಲಿ ರಮಿಸುವುದು ॥ ೪೯ ॥

---

ನಲ್ಲಿ ಬಗೆಯದೆ ಮಾಡುವದಕ್ಕೆ ಮನುಷ್ಯನು ಸಿದ್ಧನಾಗುವನು.

೪೭ ಮನವು+ಅಗಲದೆ-ನಾಲಿಗೆಯ ಚಟಗಳನ್ನು ಬಿಡದೆ ಆ ಹಾದಿಯಲ್ಲಿ, ಎರಡು ತೆರ–ಬಗೆಯ ಫಲಗಳಾಗಬಹುದು. ವಿಗಡಿಸಿದರೆ+ಒಳಪೊಕ್ಕು-ಒಳಹೊಕ್ಕು ಈ ಮನಸ್ಸಿಗೆ ಕೆಡಕನ್ನು ಭಯವನ್ನು ಮಾಡಿದರೆ ಸಾಕು, ಸದ್ಯಃಸ್ತಗಿತ–ಕೂಡಲೆ ಆ ಸಂಚಾರವನ್ನೆ ನಿಲ್ಲಿಸಿ ಬಿಡುವದು ಅಥವಾ ಒಡನೆಯೆ ಸುಖದುಃಖಗಳನ್ನಾದರು ಕೊಟ್ಟು. ಅಗಡುಗೊಂಡು–ದುಷ್ಟರೂಪಿನಿಂದಲಾದರು ಎದರು ಬಂದು ನಿಲ್ಲುವದು.

೪೮ ತೊಡರುವದು–ಹೀಗೆ ದುಃಖಗಳನ್ನು ಬಿಡದಂತೆ ತನಗೆ ಎದುರಿಸುವದು. ಉಡಿಯನೂಲ್—ಶೀರೆಯನ್ನು ಬಿಗಿಯುವ, ಉಡುದಾರ—ಡಾಬು ಎನ್ನಾಗಿ, ಕಡಲು—ನಾಲ್ಕು ಸಮುದ್ರಗಳನ್ನೆ ಮಾಡಿಕೊಂಡು, ಮೆರೆವ ಈ ಪೊಡವಿ—ಈ ಭೂಮಿಯಲ್ಲಿ ಬೆಳೆಯುವ ಗಂಧದ್ರವ್ಯಗಳಲ್ಲಿ ಕೆಲಕೆಲವು:—

೪೯ ರಾಗವೃತ್ತಿ—ಇಷ್ಟವಾದವುಗಳಲ್ಲಿ ಚಂದ್ರಪರಾಗಂ–ಸಿಂಧೂರ, ಹೂವಿನಪೂಳು. ಕತ್ತುರಿಯರೇಣುಂ—ಧೂಳಿನಕಣ, ಸರಾಗ—ಸುಖವಾದ ಸುಮನಃ—ಜಾಪತ್ರಿ, ಚಂದ್ರಬಾಲಾ—ಏಲಕ್ಕಿ, ಚಂದನ—ಚಂದನಗಿಡ, ಅಗರು. ಕುಂಕುಮ ಕೇಸರ, ಪ್ರಮುಖಂ—ಮುಂತಾದ ಸುಗಂಧದ್ರವ್ಯಗಳು. ಯೋಗವಾಹಕ—ಮನಸ್ಸಿಗೆ ಸಂಬಂಧಿಸಿ

ಯಾವ ಜಂತುಗಳಲ್ಲಿ ಕೆನ್ನೀ ।
ರಾವರಿಸಿ ವರ್ತಿಪುದೊ ವಸೆಯಿಂ ।
ಭಾವಿತವದಾಗಾವುದಿರ್ಪುದೊ ತನುಗಳೆಳೆಯಲ್ಲಿ ॥
ಜೀವಿತವನುಳಿದಾ ಬಳಿಕ ರಾ ।
ಜೀವ ಬಾಂಧವನಪರಗಿರಿಯಿಂ ।
ಸೇವಿಸಲು ಮಾವೇಳೆಯೊಳವು ಪರ್ಯುಷಿತ ವಾಗುವವು ॥ ೫೦ ॥

ಹತ್ತಿರಕೆ ಬರಕೂಡದಂದದಿ ।
ಕೆತ್ತ ಕಿಸುಕುಳ ಗಂಪೆಸೆವ ವಿದ ।
ಕಿತ್ತಲತ್ತಲಿರುವ ಮಹಾ ಸ್ಥಾವರ ಶರೀರಗಳು ॥
ಬತ್ತಿದೊಡೆ ಮುದಿರಿದೊಡ ಮಂಬುವಿ ।
ನೊತ್ತರದಿಂ ಕೊಳತಿರ್ದೊಡಿವರ ।
ತುತ್ತು ಮೇತರ ಗಂಧವೆಲ್ಲವಸಹ್ಯ ಮಾಗಿಹವು ॥ ೫೧ ॥

ಸಹಿಸಕೂಡಿದವೆಲ್ಲ ಕಾಂಕ್ಷಾ ।
ವಹಗಳಾಗಿಹ ವುಗ್ರ ಗಂಧದಿ ।
ಸಹಿಸಕೂಡದವೆಲ್ಲ ತೊರೆಯಲ್ಯಕ್ಯ ಮಾಗಿಹವು ॥

---

ಉತ್ಸಾಹಕರಗಳು, ನಾಸಾಗತಿ-ಮೂಗಿನಿಂದ ಆಘ್ರಾಣಿಸಲ್ಪಟ್ಟು, ಚಿತ್ತಕ್ಕೆ+ತರ್ಪಕ (ತೃಪ್ತಿದಾಯಕ)ವಾಗಿ+ಇಹುದು.

೫೦ ಕೆನ್ನೀರು—ಕೆಂಪುನೀರು ರಕ್ತವು. ಆವರಿಸಿ—ತುಂಬಿಕೊಂಡಿರುವಹೋ, ವಸೆ—ಕೊಬ್ಬಿನಿಂದ ಕೂಡಿ, ಭಾವಿತವು—ಅದು ಸಂಭಾವಿತವು, ಆಗಿ+ಆವುದು+ಇರ್ಪುದೊ+ತನುಗಳ+ಎಳೆಯಲ್ಲಿ—ಆ ಜಂತುಗಳ ಒಂದೆ ಸಾಲಿನಲ್ಲಿ, ಜೀವಿತವನು+ಉಳಿದ—ಸತ್ತ ಆ ಬಳಿಕ, ರಾಜೀ....ವನು–ಸೂರ್ಯನು, ಅಪರಗಿರಿ—ಅಸ್ತಾಚಲವನ್ನು, ಸೇವಿಸಲು+ಆ ವೇಳೆಯೊಳು+ಅವು+ಪರ್ಯುಷಿತ—ಸತ್ತುಹಳಿಯುದಾಗಿಬಿಟ್ಟಿರುವವು.

೫೧ ಜನರು ಹತ್ತಿರ ಸುಳಿಯುವದಕ್ಕಿಲ್ಲದಂತೆ, ಕಿಸುಕುಳ—ಅಲ್ಪವಾದ, ಆ ಜಂತುಗಳ ದೇಹಗಳಿಂದ ದುರ್ನಾತವು ಹೊರಚೆಲ್ಲುತ್ತ, ಕೆತ್ತು—ಸುತ್ತಲೂ ಆವರಿಸಿಕೊಂಡು ಬಿಡುವುದು, ಇದಕೆ+ಇತ್ತಲತ್ತಲಿರುವ—ಅಕ್ಕಪಕ್ಕಗಳಲ್ಲಿನ ಗಿಡಮರ ಬಳ್ಳಿಗಳೆಂಬ ಮಹಾ ಸ್ಥಾವರ ಶರೀರಗಳು, ಬತ್ತಿದೊಡಂ—ಕ್ಷೀಣಿಸಿ ಒಣಗಿಹೋದರು, ಉದಿರಿದೊಡಂ–ಉದುರಿಬಿದ್ದರು, ಅಂಬುವಿನ+ಒತ್ತರದಿಂ–ನೀರು ಬಂದು ಒತ್ತುವದರಿಂದ ಕೊಳೆತುಹೋಗಿ ಕೊಳ್ಚೆಯಾಗಿರುವ ಈ ಗಿಡಮರಬಳ್ಳಿಗಳ ತುತ್ತುಮೇತರ—ಸಣ್ಣಸಣ್ಣ ಅಣುಗಳಾಗಿ ಹರಡಿಕೊಂಡಿರುವ ಗಂಧಂ+ಎಲ್ಲವು+ಅಸಹ್ಯಂ+ಆಗಿಹುವು.

೫೨ ಸಹಿ....ವೆಲ್ಲ–ಸಹಿಸಬಹುದಾದದ್ದೆಲ್ಲವು, ಕಾಂಕ್ಷಾ+ಆವಹಗಳು–ಬಯಕೆಗಳನ್ನು ತಂದುಚಿತ್ತಕ್ಕೆ ಹೊರಿಸುವವು. ಉಗ್ರ–ಕ್ರೂರ ಹೆಚ್ಚು ದುರ್ನಾತವುಳ್ಳವಸ್ತುಗಳು, ನಿವಹ–

ಅಹಹ ! ಈ ವಾಸನೆಯ ರೇಣು ನಿ ।
ವಹವೆ ಚಿತ್ತಕೆ ಪತ್ತಿ ದೋಷಾ ।
ವಹ ಮೆನಿಪುದಿದರಿಂ ರಜಸ್ತಮುಗಳ್ಪ್ರವರ್ತಿಪವು ॥ ೫೨ ॥

ಇದುವೆರಡನೆಯ ಖಂಡಗತ ದುಃ ।
ಖದಗಳಾಗಿಹ ವಿನ್ನು ನಾನಾ ।
ಪದಗಳೇ ಧಾತು ಸ್ವರೂಪವನಾಂತು ಪ್ರತ್ಯಯದಿಂ ॥
ಪುದಿದು ಕಾಲತ್ರಯುವ ಬೆರದು ಜ ।
ಗದೆ ಶರೀರಗಳಕ್ಷ್ಣಿ ಮಾರ್ಗ ।
ಕ್ಕಿದಿರೆನಿಪ ವಸ್ತುಗಳ ತತ್ತತ್ಸ್ಥಿತಿಯ ಪೇಳುವವು ॥ ೫೩ ॥

ಅದರ ರೂಪವ ನದರ ವರ್ಣವ ।
ನದರ ಫಲವಾಂ ಪುಷ್ಪಮುಂ ಮೇ ।
ಣದರ ಪತ್ರಂಗಳನು ಭಾವವ ನದರ ಸಂಗತಿಯಂ ॥
ಅದರ ಶಕ್ತಿಯ ನವಯವಂಗಳ ।
ನದರ ಗುಣಮುಂ ಬಾಳ್ಕೆಯುಂ ಪ್ರಾ ।
ಪ್ಯದ ಬಳಿಯನದಕಹಿತಮುಂ ಹಿತಮನ್ನೆರೆ ಪಠಿಸುವದು ॥ ೫೪ ॥

ಕರ್ತೃವಾಚಕ ಮಾದ ಪದಕೆ ಕ್ರಿ ।
ಯಾರ್ಥಮೇ ಕೂಡಿದೊಡೆ ಪೇಳುವ ।
ರಾರ್ಥಿಕರದಂ ವಾಕ್ಯಮೆಂದಾ ವಾಕ್ಯಮಿತರೇರದಿಂ ॥
ಭರ್ತೃ ಭಾವಂ ವರಿಪುದು ಪರಿ ।
ಸ್ತೋತ್ರದಲಿ ನಿಂದೆಯಲಿ, ನಿಂದಾ ।
ಪಾತ್ರದೇ ದೋಷಂಗಳಂ ಕೆದರುವುದು, ವರಿಸುವದು ॥ ೫೫ ॥

---

ಗುಂಪೆ, ಪತ್ತಿ ದೋಷ + ಆವಹ-ಹತ್ತಿರಬಂದು ಚಿತ್ತಕ್ಕೆ ದೋಷಗಳನ್ನು ಹೊರಿಸಿಬಿಟ್ಟು, ಮಲಿನ ಮಾಡುವದು. ಪ್ರವರ್ತಿಪವು–ಕೆರಳಿಕೊಂಡು ಕಾರ್ಯಗಳಲ್ಲಿ ಮನುಷ್ಯನನ್ನು ತೊಡಗಿಸುವವು

೫೩ ಇದುವೆ + ಎರಡನೆಯ ಖಂಡ–ಇಲ್ಲಿಯುವರೆಗಿನದೆಲ್ಲವು ಜ್ಞಾನೇಂದ್ರಿಯುಗಳನ್ನು ಕುರಿತ, ಗತ–ಹೊಂದಿರತಕ್ಕ, ದುಃಖ + ದಗಳು–ದುಂಖಗಳನ್ನು ಕೊಡತಕ್ಕವು, ಆಗಿಹವು-ಆಗಿರುವವು ಇನ್ನು–ಉಳಿದ ಇವನ್ನು ಬಿಟ್ಟಿರುವ ಪದಗಳೆ–ಮಾತುಗಳೆಂಬವು–ಪ್ರಕೃತಿ—ಶಬ್ದದ ಧಾತುಗಳು ತಮಗೆ ಮೊದಲು ಸೇರುವ ಉಪಸರ್ಗ–ಅವ್ಯಯುವು, ಕೊನೆಯಲ್ಲಿ ಪ್ರತ್ಯಯುವು ಎಂದು, ಆಂತು—ಹೀಗೆ ಪಡೆದು, ಪುದಿದು–ಸೇರಿ, ಶರೀರಗಳ—ಜೀವರ, ಅಕ್ಷಿಮಾರ್ಗಕ್ಕೆ ಇದಿರೆನಿಪ—ನೇತ್ರಗೋಚರವಾಗಿರುವ ತತ್ + ತತ್ + ಸ್ಥಿತಿ—ಅವರದರ ಸ್ವರೂಪವನ್ನು ಕುರಿತು ಹೇಳುವವು.

೫೫ ಕ್ರಿಯಾರ್ಥಮೆ—ಕ್ರಿಯಾಪದವೆ ಆರ್ಥಿಕರು–ವೈಯ್ಯಾಕರಣರು ಆ ವಾಕ್ಯಂ + ಇತರೇರದಿಂ–ನಿಂದಾಪದ ಸ್ತುತಿಪದವು ಎಂದು ಹೀಗೆ ದ್ವಿವಿಧವಾಗಿ ಭರ್ತೃ....ಪುದು–ನಿಂದೆ

ಸ್ತುತಿಪದವೆ ದೋಷಂಗಳಂ ಮು ।
ಚ್ಚತುಲ ಗುಣಮಂ ಮೇಲಕೆತ್ತಿ ವಿ ।
ತತ ಪರಿಗ್ರಾಹ್ಯತ್ವಮಂ ಸಾಧಿಪುದು; ಪೆರರಾರಂ ॥
ಪ್ರತಿಜನಾಸ್ಥಾನದಲಿ ಮರ್ಮ ।
ಕ್ಷತವೆನಿಪ ನುಡಿಯಂ ಪಸರಿಸ ।
ಲ್ಶ್ರುತಿಯೊಳಾಲಿಸಿ ಪ್ರತ್ಯಹಃ ಕಾಲಂಗಳೊಳಗವರು ॥ ೫೬ ॥

ಕುದಿಕುದಿದು ನಿದ್ರಾಕ್ಷಯದಿ ಪಡೆ ।
ಯದ ಮಹಾ ಯಾತನೆಯ ಪಡಲಾ ।
ಕುದಿಯ ನಿತ್ತಾನುಡಿಯ ಸಿಡಿಲಿನ ತೆರದಿ ಯೋಗಿಸಿದ ॥
ವಿದುರತಾ ವಿಮುಖನೆನೆ, ನೆರೆ ಕೊಲು ।
ವುದು ಪ್ರತೀಕಾರಂ ಜಗತ್ತಿ ನೊ ।
ಳಿದಕಿರದು ಲೋಕಂಗಳೊಳಗೆಂದುದು ಸದಾವೇದಂ ॥ ೫೭ ॥

ಮೇಲುಸಿರಿದಿಂದ್ರಿಯದ ವಿಷಯದ ।
ಪಾಳಿಯಲಿ ಕೆಳಗುಸಿರು ವಿಂದ್ರಿಯ ।
ಜಾಲದೊಳಗೊಂದೊಂದು ಕ್ರಿಯೆಗೊಂದೊಂದು ಪಾತಕವೆ ॥
ಮೇಳವಿಪುದೀ ಸಕಲ ಪಾತಕ ।
ಜಾಲ ವೊಡಗೂಡಲ್ಕೆ ನಿಂದಾ ।
ಮೂಲದಿಂ ದುತ್ತಮರ ಸಂಭವಿಸುವುದು ದೃಢವಾಗಿ ॥ ೫೮ ॥

---

ಸ್ತುತಿಗಳಲ್ಲಿ ಪ್ರಧಾನತ್ವವನ್ನು ಪಡೆದು ಅರ್ಥವಾದ ವಾಕ್ಯವೆನಿಸುವದು; ...ಪಾತ್ರವಲಿ–ನಿಂದಿಸುವುದಕ್ಕೆ ಯೋಗ್ಯವಾದ ವಸ್ತುವಿನಲ್ಲಿ.

೫೬ ಮುಚ್ಚಿ+ಅತುಲ—ಸಮಾನವಿಲ್ಲದ ವಿತತ–ಎಲ್ಲಾ ಬಗೆಯಿಂದಲೂ ಅವರಿಗೆ, ಪೇರರು+ಆರಂ—ಮತ್ತೊಬ್ಬರು ಯಾರನ್ನಾದರೂ, ಪ್ರತಿ...ದಲಿ–ಜನರು ನೆರೆವ ಸಭೆಗಳಲ್ಲಿ, ಮರ್ಮವನು ಕ್ಷತ—ಒಡೆದು ಹೊರಪಡಿಸಿ ಪಸರಿಸಲ್—ಜನರಲ್ಲೆಲ್ಲ ಹರಡಿಬಿಟ್ಟರೆ, ಶ್ರುತಿಯೊಳಾಲಿಸಿ–ಅದನ್ನು ಕಿವಿಗೊಟ್ಟು ಕೇಳಿ ಪ್ರತ್ಯಹಃ–ಪ್ರತಿಯೊಂದು ದಿನದಕ್ಷಣದಲ್ಲಿಯೂ.

೫೭ ಕುದಿಕುದಿದು–ಕತಕತಿಸುವಂತೆ ದುಃಖದಿಂದ ಬೇಯುತ್ತ ಕುದಿಗೊಂಡು ಆ ಕುದಿಯನು+ಇತ್ತ–ಕೊಟ್ಟ ಆ ನುಡಿಯ, ಯೋಗಿಸಿದ-ಸಂಬಂಧಪಡಿಸಿದ ವಿಮು...ಖನು+ಎನೆ-ತಿಳಿಗೇಡಿಯೆಂದು ಜನರಿಂದ ಎನಿಸುವದಕ್ಕಿಂತಲೂ ಅವನನ್ನು ಹಿಡಿದು ನೆರೆಕೊಲುವುದು. ಮೇಲು–ಉತ್ತಮವು ಏಕೆಂದರೆ ಪ್ರತೀಕಾರಂ–ನಿಂದಿಸಿಕೊಟ್ಟ ನೋವಿಗೆ ಜಗತ್ತಿನಲ್ಲಿ ಪರಿಹಾರವೆ ಇರುವದಿಲ್ಲವು.

೫೮ ಮೇಲ್+ಉಸಿರಿದ-ಹೇಳಿದ ಪಾಳಿ-ಸಾಲಿನಲ್ಲಿ ಕೆಳಗೆ+ಉಸಿರುವ-ಈಮುಂದೆ ಹೇಳಲ್ಪಡುವ ಜಾಲ—ಸಮೂಹದಲ್ಲಿ ಮೇಳವಿಪುದು—ತನಗೆ ಬಂದು ಜತೆಗೂಡುವದು ಈಸಕಲ...ಜಾಲಂ—ಈ ಪಾಪದರಾಶಿಗಳೆಲ್ಲವೂ ಒಡಗೂಡಲ್ಕೆ...ಒಟ್ಟಿನಲ್ಲಿ ಎಲ್ಲವೂ ತನಗೆ

ಪರರ ನಿಂದೆಯು ನೋಡೆ ಪಾತಕ ।
ದುರುಬು ಮೇಣೊಂದಲ್ಲ ವೆಂದೇ ।
ಗರುಡಗುಸುರ್ದಂ ಪದ್ಮನಾಭಂ ಗಾರುಡದೆ, ಬಳಿಕ ॥
ಸುರರಿಗೊರೆದಂ ಬ್ರಾಹ್ಮದಲಿ ಪಂ ।
ಕರುಹಪೀಠಂ; ದೇವಿಯರಿಗಾ ।
ಹರನುಸುರ್ದಂ ಲೈಂಗ್ಯವಲಿ ಕೈಯೆತ್ತಿ ನಿಜವೆಂದು　　॥ ೫೯ ॥

ಮಾತಿದೊಂದೇ ವಿವರವಳಿದರೆ ।
ಪಾತಕದ ರಾಶಿಗಳ ತಂದು ಪು ।
ರಾತನದ ಸಂಚಿತವ ಕರ್ಮದ ಕಣಜಗಳ ತುಂಬಿ ॥
ಓತಿಹ ಭವಿಷ್ಯತ್ಕ್ರಿಯಾ ಸಂ ।
ಜಾತ ಫಲಗಳಿಗಿದಿರೆಳೆದು ವಿ ।
ಖ್ಯಾತ ಮಾಗಿಹ ವರ್ತಮಾನಕ್ಕೈದಿ ಸುತ್ತಿಹುದು　　॥ ೬೦ ॥

ಮಾತನರಿಯದೆ ಮಾತನಾಡಿದ ।
ರಾತುಕೊಂಬುದು ಕೇಡು, ಕೇಡಿನ ।
ಜಾತಿಯುಂ ಕೆಡಿಸುವುದು ತಿಳಿದಾಡಿದರೆ ಕೆಲವೆಡೆಯೊಳ್ ॥
ಮಾತಿದೇ ಮಂತ್ರಂಗಳಪ್ಪುದು ।
ಮಾತಿನಲಿ ಸಾರವನು ತಿಳಿದರ ।
ಜಾತನಪ್ಪಂ ಪುರುಷನಾತ್ಮಖ್ಯಾತಿಯಂ ಪಡೆದು　　॥ ೬೧ ॥

---

ಬಂದು ಜತೆಯಾಗುವಲ್ಲಿ.

೫೯ ....ಉರುಬು-ತನ್ನಮೇಲೆ ಬಂದುಬಿದ್ದ ಪಾಪದರಾಶಿ. ಗರುಡಗೆ+ಉಸುರ್ದಂ-ಹೇಳಿದನು, ಪದ್ಮನಾಭಂ-ನಾಭೀಕಮಲನಾದ ವಿಷ್ಣುವು ಗಾರುಡದೆ-ಗರುಡಪುರಾಣದಲ್ಲಿ, ಸುರರಿಗೆ+ಒರೆದಂ-ಹೇಳಿರುವನು. ಬ್ರಾಹ್ಮ-ಬ್ರಹ್ಮಪುರಾಣದಲ್ಲಿ ಪಂ....ಪೀಠಂ-ಕಮಲಪೀಠನು, ಬ್ರಹ್ಮದೇವನು. ಉಸುರ್ದಂ-ಹೇಳಿರುವನು. ಲೈಂಗ್ಯ—ಲಿಂಗಪುರಾಣದಲ್ಲಿ.

೬೦ ವಿವರ—ಕ್ರಮವು, ಅಳಿದರೆ—ಬಿಟ್ಟು ಮಾತನಾಡಿದರೆ, ಸಂಚಿತ—ಕಳೆದ ಜನ್ಮಗಳಲ್ಲಿ ಕೂಡಿಸಿ ರಾಶಿಹಾಕಿರುವ, ಓತಿಹ—ತನಗೆ ಒಲಿದಿರುವ, ಭವಿ...ಜಾತ—ಮುಂದಾಗಬೇಕಾಗಿರುವ ಕರ್ಮದ, ಫಲಗಳಿಗೆ+ಇದಿರೆಳೆದು—ಪರಿಪಕ್ವ ಫಲಗಳನ್ನಾಗಿ ಮಾಡಿ, ವಿಖ್ಯಾತ—ಪ್ರಖ್ಯಾತಂ+ಆಗಿಹ ವರ್ತಮಾನಕ್ಕೆ+ಐದಿಸುತ್ತಿಹುದು—ಅನುಭವಕ್ಕೆ ನೇರಾಗಿ ತಂದು ಹೊಂದಿಸಿಬಿಡುತ್ತಿರುವದು.

೬೧ ಆತುಕೊಂಬುದು—ತನಗೆ ಬಂದು ಸೇರುವದು, ಜಾತಿಯುಂ—ಹುಟ್ಟನ್ನೆ, ಮಾತಿನಲಿ—ಉಪನಿಷದ್ವಾಕ್ಯಗಳಲ್ಲಿ ಸಾರರೂಪದಿಂದಿರುವ ಪರಮಾತ್ಮನನ್ನರಿತುಕೊಂಡರೆ. ಅಜಾತನು+ಅಪ್ಪಂ+ಪುರುಷನು+ಆತ್ಮಖ್ಯಾತಿಯಂ—ಜೀವಿಸಿಕೊಂಡಿದ್ದಂತೆಯೆ ಹುಟ್ಟಿಲ್ಲದ ಪರಮಾತ್ಮನಾಗಿ ಅವನು ಮುಕ್ತಿಯನ್ನೆ ಹೊಂದುವನು.

ಸಕಲ ಜಂತುಗಳಿಗೆ ವಿಧಾತಂ ।
ಸುಕರ ಶಕ್ತಿಯ ನೀಯದಾವಂ ।
ಪ್ರಕಟಿಸಿದನೀ ಮಾನವರಲೇ; ಗಜ ಸಮೂಹವನು ॥
ಸುಕರ ಮೆಂದೆನಿಸಿದೊಡಂ ಅವಕೆ ।
ಶಕುತಿಯಂ ಕೊಡದಾದ ವೃತ್ತಿ ।
ಪ್ರಕರದಲಿ ಕೈಯಿಂದ ಬಾಳುವುದೀ ಮನುಜ ತತಿಯೆ ॥ ೬೨ ॥

ಪಾಪ ಸಂಗ್ರಹ ವಿಲ್ಲದಿಹ ವೃ ।
ತ್ತ್ಯುಪಚಾರಿಕ ರಾದವರ್ಕೆಲ ।
ರೀ ಪರಿಯಲೇ ಪಾಪ ಸಂಗ್ರಹಮುಳ್ಳ ವೃತ್ತಿಗಳಿಂ ॥
ಪ್ರಾಪಣಂ ಪಡೆದಿರ್ಪವರ್ಕೆಲ ।
ರೀ ಪಟು ದ್ವಿವಿಧ ಸ್ಥಿತಿಯಲಿ ಮ ।
ಹಾ ಪದಾಯಾಸಾತ್ಮಕೀಯಾಪಚಯ ವೊಂದುವರು ॥ ೬೩ ॥

ಅರಸುಗಳು ಕೈವರ್ತರುಂ ಕಟು ।
ಕರು ಕಿರಾತರು ತೈಲಿಕರು ಹಂ ।
ಚುರಿಯ ಮೂಲದಿ ಜೀವಿಸುವ ಭರ್ಜಕರು ಕುಟ್ಟಕರು ॥
ಪರರ ವಸ್ತ್ರಕ್ಷಾಳಕರು ಸೂ ।
ದರು ಕಶಾಹಸ್ತರು ಸುಭದ್ರಾ ।
ಕರಣಕಾರರು ಕಂಡೆ ಪಾಪದ ವೃತ್ತಿಯುಳ್ಳವರು ॥ ೬೪ ॥

---

೬೨ ಹುಟ್ಟಿದಜಂತುಗಳಿಗೆಲ್ಲ ಬ್ರಹ್ಮದೇವನು ಹಸ್ತೇಂದ್ರಿಯವನ್ನು ಕೊಡದೆ ಈ ಮನುಷ್ಯರಲ್ಲೆ ಪ್ರಕಟಿಸಿರುವನು. ಆನೆಗಳ ಸಮೂಹವೇನೊ ಹಸ್ತ—ಕರವುಳ್ಳವು ಎಂದೆನ್ನಿಸಿಕೊಂಡರು ಲೌಕಿಕ ವೈದಿಕ ಕ್ರಿಯೆಗಳಿಂದ ಆಗಬೇಕಾಗಿರುವ ಪುರುಷಾರ್ಥಗಳಿಗೆಲ್ಲ ಭೂಷಣವಾಗಿರುವ ಹಸ್ತೇಂದ್ರಿಯದಿಂದ ಬಾಳುತ್ತಿರುವದು ಮಾತ್ರ ಮನುಷ್ಯರೇ.

೬೩ ವೃತ್ತ್ಯುಪಚಾರಿಕರು—ಜೀವನೋಪಾಯವುಳ್ಳವರು ವೃತ್ತಿಗಳಿಂ—ಜೀವನೋಪಾಯಗಳಿಂದ ಜೀವನದ ಪ್ರಾಪಣಂ—ಪ್ರಾಪ್ತಿಯನ್ನು, ಪಡೆದು+ಇರ್ಪವರ್+ಕೆಲರು+ಈಪಟು-ಒಳ್ಳೆಯ ಕೈಚುರುಕಿನ ಈಕೆಲಸ ಕಾರ್ಯಗಳಿಂದ, ದ್ವಿವಿಧ ಸ್ಥಿತಿ-ಪುಣ್ಯಪಾಪಗಳ ಇಬ್ಬಗೆಯ ಫಲದ ರೂಪಿನಿಂದ, ಮಹಾಪದ—ಹೆಚ್ಚಿನ ಪುಣ್ಯಪದವಿಗಳಲ್ಲಿಯೂ ಮತ್ತು, ಆಯಾಸ+ಆತ್ಮಕೀಯ—ಕರ್ಮವನ್ನು ತಾನೇ ಮಾಡಿದ್ದರು ತನ್ನನ್ನೆ ಬಿಡದಂತೆ ಗೋಳುಗೊಟ್ಟಿಸುವ ಅವಕ್ಕೆ ತಾನು ಸಿಕ್ಕಿಬಿದ್ದು, ದುಃಖದ ಆ ಪದವಿಗಳಲ್ಲಿಯೂ ಸಂಕಟಕ್ಕೊಳಗಾಗುತ್ತ, ಅಪಚಯಂ+ಒಂದುವರು—ಹೆಚ್ಚು ಕುಂದುಗಳಿಂದಲೂ ದುಃಖಗಳಿಂದಲೂ ಹಾಳಾಗುತ್ತಿರುವರು!

೬೪ ಕೈವರ್ತರುಂ—ಬೆಸ್ತರು, ಅಂಬಿಗರು. ಕಟುಕರು—ಮಾಂಸಕ್ಕಾಗಿ ಪ್ರಾಣಿಗಳನ್ನು ಕೊಲ್ಲುವವರು, ಕಿರಾತರು—ನವಿಲುಗರಿಯನ್ನುಟ್ಟ ಬೇಡರು, ಶಬರರು—ಮ್ಲೇಚ್ಛರ ಭೇದವು

ಶೀಲವುಂ ಬಿಡದಿರ್ಪ ಪಾರ್ವರ।
ಜಾಲ ಮಾರ್ಯರ ಗೊಂದಣಂ ಕೌ।
ದ್ದಾಲಿಕ ಚಯಂ ಸವುಚಿಕರ ಸ್ತಂದಣಿ ಕುಲಾಲತತಿ ॥
ಹಾಲಿಕರವರ್ಗಂ ಲಸದ್ಗೋ।
ಪಾಲ ಪಂಚಾಲನು ಸುಲೇಖಕ।
ಚೇಲಕೃತ್ಪಟು ಚಿತ್ರಕೃದ್ಗಣ ವಿಾಧರಾತಲದೆ ॥ ೬೫ ॥

ಕರದಿ ಧರ್ಮದ ವೃತ್ತಿಯುಳ್ಳದು।
ಪರರ ಕೈಯಿಂ ಕೊಂದು ಹೊಟ್ಟೆಯ।
ಹೊರೆವ ಬಾಳಿಂದೊಳಿತು ಘೋರಾರಣ್ಯ ಭೂಮಿಯಲಿ॥
ಮರಗಳಾಗವತರಿಪ ಜನ್ಮಂ।
ತರಗಳಾ ಜನ್ಮಂಗಳಲಿ ಖರ।
ಕಿರಣ ಬಿದುರಾಗ್ನಿಗಳ ಘಾತಂ ಘಾತಮಲ್ಲೆನಿಸೆ ॥ ೬೬ ॥

ಕೊಲುವುದೇ ಪಾಪಕ್ಕೆ ಸಾಧನ।
ಕೊಲುವುದೇ ಪುಣ್ಯಕ್ಕೆ ನಾಶಕ।
ಕೊಲುವುದೇ ನರಕಂಗಳೆಂಬಾ ಬೆಳೆಗೆ ಮಳೆಗಾಲಂ ॥
ಕೊಲುವುದೇ ಲೋಕತ್ರಯಂಗಳ।
ನೆಲೆ ನೆಲೆಗಳಲಿ ಬರುವ ಪುಣ್ಯದ।
ಫಲಗಳೆಂಬಾ ತರಗನುರುಹೆ ದವಾನಲಾಕಾರಂ ॥ ೬೭ ॥

---

ಭರ್ಜಕರು—ಹಂಚಿನಲ್ಲಿ ಹುರಿಯುವ ಕೆಲಸಗಾರರು, ಕುಟ್ಟಕರು—ಕುಟ್ಟುವವರು, ಸೂಪರು—ಅಡಿಗೆಗಾರರು, ಕಶಾಹಸ್ತರು—ಕೋರಡೆ ಚಾಟಿಯನ್ನು ಹಿಡಿದವರು, ಸುಭದ್ರಾಕರಣಕಾರರು–ಕ್ಷೌರಿಕರು.

೬೫ ಶೀಲವುಂ—ಸದ್ವೃತ್ತ, ಒಳ್ಳೆಯ ನಡತೆಯನ್ನು. ಪಾರ್ವರ—ಬ್ರಾಹ್ಮಣರ, ಆರ್ಯರ—ಉದಾರ ಚರಿತರ, ಕೌದ್ದಾಲಿಕ–ಗುದ್ದಲಿಗಾರರ ಗುಂಪು, ಸವುಚಿಕರ—ಶೌಚಕಾರರ ಗುಂಪು, ಕುಲಾಲತತಿ—ಕುಂಬಾರರ ಗುಂಪು, ಹಾಲಿಕರ—ನೇಗಲುಳ್ಳ ವ್ಯವಸಾಯಗಾರರು, ಲಸದ್ಗೋಪಾಲ–ಗೊಲ್ಲರು, ಪಂಚಾಲನು–ಅಕ್ಕಸಾಲಿಗನು, ಸುಲೇಖಕ–ಬರವಣಿಗೆಗಾರ, ಚೇಲಕೃತ್–ಬಟ್ಟೆಯ ನೆಯ್ಕಾರ, ಪಟುಚಿತ್ರಕೃತ್+ಗಣ–ಕುಶಲ ಚಿತ್ರಗಾರರ ಗುಂಪು ಇವರೆಲ್ಲ. ಈ ಧರಾತಲದೆ—ಈ ಭೂಮಿಯಲ್ಲಿ.

೬೬ ವೃತ್ತಿಯು+ಉಳ್ಳದು–ಜೀವನೋಪಾಯವುಳ್ಳವರು, ....ಬಾಳಿಂದ–ಬಾಳಿಗಿಂತಲೂ, ಒಳಿತು–ಒಳ್ಳಿತು—ಒಳ್ಳೆಯದು, ಅವತರಿಪ—ಹುಟ್ಟುವ, ಖರಕಿರಣ—ತೀಕ್ಷ್ಣಕಿರಣವುಳ್ಳ, ಬಿದುರಾಗ್ನಿ—ಬಿದಿರುಗಳು ಒಂದಕ್ಕೊಂದರ ತಿಕ್ಕಾಟದಿಂದ ಉಂಟಾಗುವ ಕಾಡಗಿಚ್ಚಿನ, ಘಾತಂ–ಪೆಟ್ಟು, ಸಾವು. ಘಾತಂ–ಅದು ಹಿಂಸೆಯಾಗುವುದಿಲ್ಲ. ಏತಕ್ಕೆಂದರೆ, ಎಣಿಸೆ–ವಿಚಾರಿಸುವಲ್ಲಿ. ಪಾಪಗಳಿಗೆಲ್ಲ ಸ್ವಾರ್ಥ ಬುದ್ಧಿಯೇ ಮೂಲವೆಂದು ಭಾವವು.

ಕೊಲೆಗೆ ಜನಕಂ ಕೋಪವಾಗಿರೆ ।
ಕೊಲೆಗೆ ಸಾಧನ ವಿೀಕರಂ ಜನ ।
ರಲಿ ದುರಾಚಾರಗಳಿಂ ದಿಷ್ಟಾರ್ಥಗಳ ಹಾರಕರೆ ॥
ಫಲಿತ ವಿಷಯಂ; ವಿಷಯ ವಿಷಯಿಗ ।
ಳಲಿ ಜನಿಸೆ ಕೃತ್ಯಂ ಸು ಸಾಧನ ।
ದಲಿ ಮೆರೆವುದುತ್ಕಟ ಬಲಂ ಮಿಕ್ಕಲ್ಲಿ ವರ್ತಿಸದು ॥ ೧೮ ॥

ಸೌವೆಯಿರ್ದರು ಸೂದನಿರ್ದರು ।
ಸೂದಕೃತ್ಯವ ನಿರ್ವಹಿಸೆ ಹದ ।
ವಾದ ಕೊಡಲಿಯದಿಲ್ಲವಾದರೆ ಬೆಂಕಿ ಬೇಗುದಿಯಿಂ ॥
ನ್ನೈದಡವಲರಿಯದು ತದಗ್ನಿಯೆ ।
ತೋದ ತಂಡುಲ ಕನ್ನತೆಯ ಸಂ ।
ಪಾದಿಸದದರಿಂದಿಲ್ಲಿ ಸಾಧನ ಮುಖ್ಯವಾಗಿಹುದು ॥ ೧೯ ॥

ಕಳವಿಗಿದು ಸಾಧನವು ಲೋಭವ ।
ದೊಳಗಿರುತ್ತಂ ಮಾಡಿಸುವದೀ ।
ಕಳವನೀ ಲೋಭಂಗೆ ನಲ್ಲಳ್ವಿಷಯ ರುಚಿ ಯವಳೊಳ್ ॥
ತಳುವದೊಡ ನುದಿಸಿದವ ನನುಭವ ।
ನಿಳೆಯೊಳೀ ಕಳವಧಿಕ ವಾದೊಡ ।
ಮಿಳೆಯೊಳಗೆ ಪಾತಕಿ ಯೆನಿಸುವ ನಿಯತ ನಿರಯಗಾಮಿ ॥ ೨೦ ॥

---

೧೭ ಲೋಕತ್ರಯ—ಮನುಷ್ಯ ಪಿತೃ ದೇವ ಎಂಬ ಈ ಲೋಕಗಳಲ್ಲಿನ ಪುಣ್ಯ ಫಲಗಳೆಂಬ, ಆತರಗನು+ಉರುಹೆ—ಉರಿಯಿಸುವಲ್ಲಿ, ದವಾನಲ—ಕಾಡುಗಿಚ್ಚಿನಂತೆ.

೧೮ ಜನಕಂ—ಕಾರಣ ಈಕರಂ—ಈ ಕೈಯ್ಯೋ ಫಲಿತವಿಷಯಂ—ಹೆರವರ ಇಷ್ಟಾರ್ಥಗಳನ್ನು ಕೆಡಿಸಿದ ನೀಚರೆಂಬ ಕೆಟ್ಟ ಕೂಗು ಒಂದೇ ತನಗುಂಟಾಗುವ ಪ್ರಯೋಜನ, ವಿಷಯ—ಕೋಪದ ವಿಷಯದೊಡನೆ, ಕೋಪಗೊಳ್ಳುವ ವಿಷಯಿ—ತನಗೆ ಎಂಬ ಈ ಇಬ್ಬರಲ್ಲಿ ಜನಿಸೆಕೃತ್ಯಂ—ನಿಮಿತ್ತ ಉಂಟಾದರೆ ಸರಿ ಒಡನೆಯೇ ಸುಸಾಧನ—ಕೈಯ್ಯಲ್ಲಿಯೆ ಮೆರೆವುದು+ಉತ್ಕಟ—ತೀವ್ರಬಲವು.

೧೯ ಸೂದನು—ಅಡುಗೆಯವನು, ಕೃತ್ಯವನಿರ್ವಹಿಸೆ-ಅಡುಗೆ ಮಾಡುವಲ್ಲಿ, ನ್ನೈದ... ಯದು—ಒಂದಕ್ಕೊಂದು ಹೊತ್ತಿಕೊಂಡು ಉರಿಯಲಾರದು ತದಗ್ನಿ—ಹೊತ್ತಿಕೊಂಡು ಉರಿಯದ ಬೆಂಕಿಯೆ ತೋದ—ನೀರಿನಿಂದ ನೆನೆಯಿಕ್ಕಿದ, ತಂಡುಲಕೆ—ಅಕ್ಕಿಗೆ ಅನ್ನತೆಯನ್ನೂ ಸಂಪಾದಿಸದು ಅದರಿಂದ—ಇಲ್ಲಿ.

೨೦ ಲೋಭವದು+ಒಳಗಿರುತ್ತಂ—ಒಳಗಡೆಯಿಟ್ಟುಕೊಂಡು, ನಲ್ಲಳ್—ಪ್ರೀತಿಯ ಹೆಂಡತಿಯು ವಿಷಯರುಚಿ—ವಿಷಯಭೋಗಗಳನ್ನು ಸವಿಯಬೇಕೆಂಬ, ಅಪೇಕ್ಷೆಯೆಂಬುದೇ ತಳುವದೆ—ಅವಳಲ್ಲಿ ಕೂಡಲೆ ಇಳೆ—ಭೂಮಿ ಜಗತ್ತಿನಲ್ಲಿ, ನಿಯತ—ನಿಶ್ಚಯವಾಗಿ

　ದಾನ ರಕ್ಷಣವೆರಡು ಕರಕ ।
ನ್ಯೂನ ಕಂಕಣ ಶೃಂಖಲೆಗಳೀ ।
ಶಾನು ಪೂಜಾ ವಿಷಯಕ ಕ್ರಿಯೆಯೇ ಶುಭಾವರ್ತಂ ॥
ಮಾನವರೊಳು ವಿವೇಕಿಯಾದವ ।
ನೀ ನರಾಂಗಕಿದೊಂದೆ ಮುಖ್ಯ ಪ ।
ದಾನುಗತಮೆಂ ದರಿದು ಸತ್ಕರ್ಮವನೆ ಮಾಡುವದು　　॥ ೨೧ ॥

　ಪಾದವಲಿ ವರ್ತಿಪುದು ಗಮನವ ।
ದಾದರಿಸುವದು ಕಾರ್ಯಭರಮಂ ।
ತೀದಕಾರ್ಯಾರ್ಥಂ ದ್ವಿವಿಧಮಾಗಿಹುದು, ಸತ್ಪದಮಂ ॥
ಆದಿಗೊಂಡಿಹುದೊಂ ದಸತ್ಪದ ।
ಮಾದಿಗೊಂಡಿಹುದೊಂ ದಿದರ ಸಂ ।
ಭೇದಮಾಂತಿಹ ಪದಗಳಾವಾವೆಂದ ರಿಳೆಯೊಳಗೆ　　॥ ೨೨ ॥

　ದೇವಗಂಗಾ ರವಿಸುತಾ ವಿಧಿ ।
ದೇವಿಯರೆ ಮೊದಲಾದ ಪುಣ್ಯ ನ ।
ದೀ ವರಂಗಳ ಯಾತ್ರೆಯುಂ, ವಿಶ್ವೇಶ್ವರನ ನಗರಂ ॥
ಪಾವನಪ್ರದ ತೀರ್ಥರಾಜ ನಿ ।
ಷೇವಿತಂ ಗಯೆಯೇ ಮೊದಲ್ಗೊಂ ।
ಡೀ ವಿಷಯದೊಳಗಾವವಿರ್ಪವೊ ದೇವ ನಿಲಯಗಳು　　॥ ೨೩ ॥

　ಅವರವರ ಯಾತ್ರೆಗಳ ಮಧ್ಯದ ।
ಟವಿಗಳಲಿ ಪುಣ್ಯಾತ್ಮರಿಂ ಸಂ ।
ಗವ ಪಡೆದ ಮಠಗಳಲಿ ಮಂಟಪಗಳಲಿ ಸಂಚಾರಂ ॥

---

ನಿರಯಗಾಮಿ—ನರಕವನ್ನು ಕುರಿತು ಹೊರಟವನು.

೨೧ ಕರಕೆ+ಅನ್ಯೂನ—ಕೈಯಿಗೆ ಅತಿಶಯದಿಂದ ಶೋಭಿಸುವ, ಕಂ...ಲೆಗಳು—ಸರಪಳಿಯ ಚೈನು ಬಳೆಗಳು, ಶುಭಾವರ್ತಂ—ಶುಭವಾದ ನಡತೆಗಳು, ಪದಾನುಗತ—ಹೆಚ್ಚಿನಪದವಿಯನ್ನನುಸರಿಸಿರುವದು.

೨೨ ತೀದ—ತೀರಿದ, ಆಗಿ ಮುಗಿದ. ಕಾರ್ಯಾರ್ಥಂ—ಕಾರ್ಯದ ಪ್ರಯೋಜನಗಳು, ಸತ್ಪದ ಅಸತ್ಪದ—ಸದ್ಗತಿ ದುರ್ಗತಿಗಳನ್ನು ಆದಿ—ಆಶ್ರಯಿಸಿಕೊಂಡಿರುವದು ಸಂಭೇದಂ+ಆಂತಿಹ—ಈ ಪುಣ್ಯಕ್ಷೇತ್ರಗಳ ಒಳಭೇದವನ್ನು ಹೊಂದಿರುವ ಪದ—ಹೊಂದುವ ಸ್ಥಳವಿಶೇಷಗಳು ಎಂದರೆ,

೨೩ ರವಿಸುತಾ—ಅರ್ಕಾವತೀ ವಿಧಿದೇವಿಯರೆ—ಸರಸ್ವತಿಯೇ ಮುಂತಾದ, ವಿಶ್ವೇ...ರಂ—ಕಾಶಿಯು ದೇವನಿಲಯ—ಪುಣ್ಯಕ್ಷೇತ್ರಗಳಲ್ಲಿರುವ ದೇವಮಂದಿರಗಳು.

೨೪ ಯಾತ್ರೆ—ಕಾಲ್ನಡೆಯ ಯಾತ್ರೆಗಳು ಸಮನಿಪುದು—ಸಿದ್ಧಿಸುವದು ಪರಾರ್ಥ...

ಸವನಿಸುವದೀ ಯಂಘ್ರಿಗಾದು ।
ದ್ಭವಕೆ ಸಾಫಲ್ಯಂ; ಪರಾರ್ಥ ।
ವ್ಯವಹರಣಮುಂ ನೋಡಲಿದರಂತೆಂದು ಭಾವಿಪುದು || ೭೪ ||

ತನ್ನೊಡಲ ಪೊರೆಯಲ್ಕೆ ಪರರಿಂ ।
ಪೊನ್ನನೆರೆ ಘಳಿಸಲ್ಕೆ ಸುತಮುಖ ।
ಸನ್ನಿಹಿತ ಬಂಧುಗಳ ಕಾಪಾಡಲ್ಕೆ ದುರ್ಜನರಿಂ ||
ಭಿನ್ನವಿಲ್ಲದ ನೆಲೆಸಿದೆಡೆಯೋ ।
ಳ್ಮನ್ನಿನ ಮಹಾ ಮುನಿಗಳಿಂದೆ ವಿ ।
ಯನ್ನಗರ ವಾಸಿಗಳದೆಶ್ಶೆಯಿಂ ಸೇವಿಸಲ್ಪಡದ || ೭೫ ||

ದೇಶದಲ್ಲಿಯು ಮುತ್ತಮ ಜನಾ ।
ಕ್ರೋಶಮುಖದಿಂ ಶಬ್ದವಾದ ಮು ।
ಹೀ ಶಕಲದಲ್ಲಿಯು ಮೊಡನೆ ತಿರುಗುವುದು ಪಾದಕ್ಕೆ ||
ಕ್ಲೇಶಕಾರಕವಾದ ಘನ ಕೀ ।
ನಾಶ ನಗರಿಯ ಗತಿಯ ನೀವು ದು ।
ಮೇಶವೈಮುಖ್ಯದಲಿ ಘಟಸುವುದೆಂದು ಪೇಳಿಹುದು || ೭೬ ||

ಮುನಿಗಳಿದರಿಂ ಮೇಲೆ ಗುಹ್ಯದಿ ।
ಜನಿಪದೋಷಕೆ ಲೆಕ್ಕವುಂಟೇ ।
ಮನಸಿಜಂ ಮೋಕ್ಷಾವ ಜನ್ಮದ ವೈರಿಯೋ ! ಬಿಡದೆ ||
ವನಿತೆಯರೊಳೇಕಾಂತ ವೆಂದಿನ ।
ದಿನದೊಳಾಗುವದಂದು ಚಿಳಿಗ ।
ಬ್ಬಿನ ಧನುರ್ದಂಡಕ್ಕೆ ನಾರಿಯನೊಡನೆ ಪೂರಿಸನು || ೭೭ ||

ತಾವರೆಯ ಸರಳಿಂದ ಲಸುಗೆಯ ।
ಪೂವಿನ ಕಲಂಬಂಗಳಿಂ ದಿಸಿ ।
ಮಾವಿನ ಶರಾವಳಿಗಳಿಂ ಮಲ್ಲಿಗೆಯ ಬಾಣಗಳಿಂ ||

---

ಮತ್ತೊಬ್ಬರಿಗಾಗಿ ಹೊರಟ ಪುಣ್ಯಕ್ಷೇತ್ರಾದಿಗಳ ಯಾತ್ರೆಯೂ—ಹೀಗೆಯೆ ಸಾರ್ಥಕವು.

೭೫ ಮುಖ—ಮುಂತಾದ ಸನ್ನಿಹಿತ—ಸಮೀಪಿಸಿ ಆಶ್ರಯಿಸಿರುವ ಭಿನ್ನ...ಸಿದ—ದುರ್ಜನರನ್ನು ಹೊರಗಿಡದೆ ಅವರ ವಾಸಸ್ಥಾನವಾಗಿರುವ ವಿಯ...ಸಿಗಳ—ದೇವತೆಗಳ

೭೬ ಉತ್ತಮ...ದಲ್ಲಿಯು—ಮಹಾತ್ಮರಿಂದ ಶಾಪಗ್ರಸ್ತ ನೆಲೆಗಳಲ್ಲಿಯೂ ಒಡನೆ ತಿರುಗುವುದು. ಘನ...ಗರಿ-ಅಧಿಕವಾದ ನರಕಗಳ ಮಾರ್ಗತಿಯನ್ನು. ಈವು ದು—ತಪ್ಪದೆ ಕೊಡುವದೆಂದು ಉಮಾಮಹೇಶ್ವರರ ಸಂವಾದದಲ್ಲಿರುವದು.

೭೭ ಮುಹ್ಯದಿ-ಸ್ತ್ರೀಪುರುಷರ ಜನನೇಂದ್ರಿಯದಿಂದ, ಮನಸಿಜಂ-ಕಾಮನು.

೭೮ ತಾವರೆಹೂವು ಅಶೋಕವೃಕ್ಷದ ಹೂವು ಇನಿಮಾವಿನ ಚಿಗುರು ಮಲ್ಲಿಗೆಯು

ಕೌವಲಯ ಮಾರ್ಗಣಗಳಿಂ ಕ ।
ರ್ಣಾವಲಗ್ನಂ ಬಡೆದ ಪಾಣಿ ಕ ।
ಲಾ ವಿಶೇಷದಿ ನಿಸುವ ನವನೆಸುಗೆಯ ಚಮತ್ಕೃತಿಗೆ ॥ ೭೮ ॥

ತಪ್ಪಿಸುವ ಸಾಧನಗಳುಂಟೇ ।
ಮುಪ್ಪುರಿಯ ಗುಣದಿಂದ ಬಿಗಿವಡೆ ।
ದಿಪ್ಪ ಜಂತುಗಳಿಗೆ ಜಗತ್ರಯದಲ್ಲಿ ಭಾವಿಸಲು ॥
ಅಪ್ಪುವರು ಕಾಂತೆಯರ ನಿವರೊಳ ।
ಗೊಪ್ಪವಿದು ಹೊಲ್ಲೆಹ ವಿದೆಂತೆಂ ।
ಬಪ್ಪಣೆಯನಾರೈವುದುಂಟೇ ವೇದಶಾಸ್ತ್ರಗಳ ॥ ೭೯ ॥

ಅತ್ತೆಯಾಗಲಿ ಸೊಸೆಯರಾಗಲಿ ।
ಅತ್ತಿಗೆಯರಾಗಿರಲಿ ಸುತೆಯರ ।
ಹೊತ್ತವಾಗಲಿ ತನ್ನ ಬೆನ್ನಿನೊಳುಗಿದರಾಗಿರಲಿ ॥
ಪೆತ್ತವಳೆಯಾಗಿರಲಿ ಗುರುಗಳ ।
ಮತ್ತಕಾಶಿನಿಯಾಗಿರಲಿ ರಾ ।
ಜೋತ್ತಮರ ಕಾದಲೆಯರಾಗಿರ ಲೆಣಿಸನೊಂದುವನು ॥ ೮೦ ॥

ನನಗೆ ಮೇಲಿವರಲ್ಲಿ ರತಿ ಸಂ ।
ಜನಿಸಬಾರದು! ನೋಡಲಿವರೇ ।
ನನಗೆ ಕೀಳಿನ ಜಾತಿಯವರನುರಾಗ ವೀಬಳಿಯ ॥
ತನತನಗೆ ತಲೆಯೆತ್ತಬಾರದು ।
ಜನರಿದೊಪ್ಪರು ಕಂಡರೆಂಬಾ ।
ಮನಸಿನಾಲೋಚನೆಯು ಪುಟ್ಟದು ಲಿಂಗದುಪಟಳದಿಂ ॥ ೮೧ ॥

ಹುಲಿಯ ನಿರಿದವರುಂಟು ಕಾರ್ಗ ।
ತ್ತಲೆಯೊಳಗೆ ಸಂಚರಿಸಿದವರುಂ ।
ಟುಲಿವ ಮದ್ದಾನೆಯನು ಹೊಡೆದವರುಂಟು ವನದೊಳಗೆ ॥

---

ಹೂವು, ಬಿಳಿಯ ನೈದಿಲೆ ಇವುಗಳ (ಸರಳು ಕಲಂಬ ಶರಾ ಮಾರ್ಗಣ—ಎಂದರೆ) ಬಾಣಗಳನ್ನು ಆ ಕಾಮನು, ಕರ್ಣಾವಲಗ್ನಂಬಡೆದ—ಆ ಕರ್ಣಾಂತವರೆಗೂ ಎಳೆದು, ಪಾಣಿ... ದಿಂ—ಹಸ್ತಕೌಶಲದಿಂದ ಇಸುವನು—ಪ್ರಯೋಗಿಸುವನು.

೭೯ ಮುಪ್ಪುರಿಯ—ತನ್ನೊಳಗೆ ಎಣೆದುಕೊಂಡಿರುವ ತ್ರಿಗುಣಗಳ ಮುಪ್ಪುರಿಯಿಂದ ಬಿಗಿವಡೆದಿಪ್ಪ ಬಿಗಿಯಲ್ಪಟ್ಟಿರುವ, ಆರೈವುದು—ಆಲೋಚಿಸುವದುಂಟೆ?

೮೦ ತನ್ನ....ಳು+ ಉಗಿದರು—ಅಕ್ಕತಂಗಿಯರೇ ಆಗಿರಲಿ, ಮತ್ತಕಾಶಿನಿ—ಸುಂದರಿ, ....ಕಾದಲೆ—ಪ್ರೇಯಸಿಯರೆ ಆಗಿರಲಿ.

ನಳಿನನಾಭನ ಮಗನ ಬಾಣಾ ।
ವಳಿಗೆ ಎದೆಯಂ ಚಾಚಿ ಪೆಟ್ಟಂ ।
ದಳುಕದವರಂ ಕಾಣೆ ದೇವಾಸುರರ ಕಟಕದಲಿ ॥ ೮೨ ॥

ಹಣವ ಬಿಟ್ಟವರುಂಟು ಹೆಣ್ಣಿನ ।
ಕಣುಗೊನೆಯ ನೋಟವನು, ನಾನಾ ।
ಮಣಿಖಚಿತ ಭೂಷಣಗಳಂ ಬಿಟ್ಟವರಿಹರು ಧರೆಯೊಳ್ ॥
ಫಣಿಪ ವೇಣಿಯರೊಳು ನುಡಿಯ ಮ ।
ನ್ನಣೆಯ ನಿಳೆಯಂ ಬಿಟ್ಟವರ ಗೊಂ ।
ದಣ ವಿಹುದು, ತಿಳಿವಸುರಳಂಗೋಪಾಂಗ ಸಂಗವನು ॥ ೮೩ ॥

ಬಿಟ್ಟವರ ತಿಂಥಿಣಿಯು ದಿವಿಜ ಘ ।
ರಟ್ಟರಲಿ ದಾನವರ ಜಾತಿ ಘ ।
ರಟ್ಟರಲಿ ಪಂಚಾಗ್ನಿ ತಾಪಸ ಜನರ ಸಾಲಿನಲಿ ॥
ತುಟ್ಟ ತುದಿಯಲಿ ಮೊಟ್ಟ ಮೊದಲಲಿ ।
ನಟ್ಟ ನಡುವಣ ದೇಶದಲಿ ಕ ।
ಣ್ಣಿಟ್ಟು ಕಂಡುದುದಿಲ್ಲ ಭುವನತ್ರಯದ ಗರ್ಭದಲಿ ॥ ೮೪ ॥

ಮೋಸ ಹೋದರು ಕೆಲಕೆಲರು ವನ ।
ವಾಸಮಂ ನೆರೆ ಸೇರಿ, ರಸವ ।
ದ್ಗ್ರಾಸಮಂ ಕೈಕೊಳದೆ ಹಣ್ಣೆಲೆಗಳನು ಭಕ್ಷಿಸುತ ॥
ಸೂಸುತಿಹ ಮಳೆ ಚಳಿಗೆ ಬೆದರದೆ ।
ನಾಸಿಕೆಯ ಗಾಳಿಯನು ತಡೆದವ ।
ರೀ ಸರೋಜಾಕ್ಷಿಯರ ನುಡಿ ದಡಿವಲೆಯೊಳಗೆ ಸಿಕ್ಕಿ ॥ ೮೫ ॥

---

೮೨ ಇರಿದವರು—ತಿವಿದವರು ಕಾರ್ಗತ್ತಲೆ—ದಟ್ಟವಾದ ಕತ್ತಲೆ ಉಲಿವ—ಮದಿಸಿ ಆರ್ಭಟಿಸುತ್ತ ಕೂಗುವ ನಲಿ....ಗನ—ವಿಷ್ಣುವಿನ ಪುತ್ರ, ಮನ್ಮಥನ. ಆವಳಿ+ಕಟಕ—ಗುಂಪು, ಅಳುಕದ+ಅವರಂ—ಅಂಜದೆ ಇರುವ ಧೀರರನ್ನ ದೇವ+ಅಸುರರ.

೮೩ ಕಣುಗೊನೆ—ಕಡೆಗಣ್ಣಿನ ಗೊಂದಣ—(ತಿಂಥಿಣಿ ಘರಟ್ಟ) ಸಮೂಹ, ತಿಳಿವ ಸುರಳ—ತೆಳುವಾದ ಹೊಟ್ಟೆಯುಳ್ಳ ಸ್ತ್ರೀಯಳ ಅಂಗೋ....ಸಂಗ—ರತಿಯನ್ನು.

೮೫ ರಸವದ್+ಗ್ರಾಸ—ಬಗೆಬಗೆಯಿಂದ ಸವಿಸವಿಯಾದ ರಸವಿಶೇಷಗಳನ್ನುಳ್ಳ ಕವಳವು, ಭಕ್ಷ್ಯಭೋಜ್ಯಲೇಹ್ಯಚೋಷ್ಯಗಳೆಂಬ ಪಂಚಪಕ್ವಾನ್ನಭೋಜನಗಳು. ದಡಿವಲೆ—ಕೋಲಿಗೆ ಸಿಗಿಸಿದ ಒಂದು ಬಲೆಯು. ಈ ವಿಷಯದಲ್ಲಿ ಸ್ಮೃತ್ಯರ ಸಮ್ಮತಿ—

ವಿಶ್ವಾಮಿತ್ರ ಪರಾಶರ ಪ್ರಭೃತಯಃ ವಾತಾಂಬು ಪರ್ಣಾಶನಾಃ ।
ತೇಽಪಿ ಸ್ತ್ರೀಮುಖಪಂಕಜಂ ಸುಲಲಿತಂ ದೃಷ್ಟ್ವೈವ ಮೋಹಂಗತಾಃ ॥
ಶಾಲ್ಯನ್ನಂ ಸುಘೃತಂ ಪಯೋದಧಿ ಯುತಂ ಭುಂಜಂತಿ ಯೇ ಮಾನವಾಃ ।
ತೇಷಾಮಿಂದ್ರಿಯ ನಿಗ್ರಹೋ ಯದಿ ಭವೇತ್ ವಿಂಧ್ಯಾಃ ಪ್ಲವೇತ್ಸಾಗರೇ ॥ ?

ಮಗನೆ ಕೇಳ್ಕೆ ಪಾಯುವಿನ ಭಾ ।
ಗ ಗತಿಯಂ ಪಡೆದಿರ್ಪ ಮಲದ ।
ಲ್ಲೊಗುವದೇ ತದ್ದೋಷ ದೂಷಿತಮಹುದು ಭುಕ್ತಾನ್ನಂ ॥
ಹೊಗದಿರಲ್ಕಾಕಾಯದಿಂ ಸ ।
ನ್ನಿಗಳಲರಿದದು ಬಾಳ್ಕೆಯೋಳ್ಪಾ ।
ಯು ಗತಿಯಾ ಕಡೆಗೈದಿ ದುರ್ಗಂಧತೆಯ ನಾಂತಿಹುದು ॥ ೮೬ ॥

ಆಸನದ ಪಾರ್ಶ್ವದೆ ಭಗಂಧರ ।
ವಾಸನದ ಮಧ್ಯದಲಿ ಮೂಲವ ।
ದಾಸನದ ಮೇಲ್ಗಡೆಯಲಹುದು ಪವಿತ್ರ ನಾಮಕದಿಂ ॥
ತ್ರಾಸಕೃದ್ವ್ರಣ ಮಿಲ್ಲಭೇದ್ಯಾ ।
ಯಾಸ ತೋರಿದೊಡಂ ವಿಕೃತಿವಡೆ ।
ದಾ ಸಮೀರನ ಕೂಡೆ ಪಿತ್ತಕ್ಕಾದಡಭಿಯೋಗಂ ॥ ೮೭ ॥

ವಿವಿಧವಾದ ವಿಷೂಚಿಯು ಮಜೀ ।
ರ್ಣವ ಪಡೆದು ತೋರುವುದಿದರ ಬಂ ।
ಧವೆ ಶರೀರಕೆ ಹಾನಿಯಾದುದರಿಂದಲೀ ಖಂಡಂ ॥
ಕವಿಗಳಭಿಮತದಲ್ಲಿ ನೈಚ್ಯ ।
ಪ್ರವಣಮಪ್ಪುದು ನೋಡ ಲೊಟ್ಟಾ ।
ಗಿವರ ಬಗೆಯನ್ನಾಧಿಭೌತಿಕಮಂ ವಿಚಾರದಲಿ ॥ ೮೮ ॥

---

೮೬ ಪಾಯು...ಗತಿಯಂ—ಗುದದ್ವಾರವನ್ನು ಭುಕ್ತ+ಅನ್ನಂ—ಉಂಡ ಅನ್ನವು ದೂಷಿತವಾಗಿದ್ದಲ್ಲಿ ಆ ದೋಷವು ಅಜೀರ್ಣ ಭೇದಿ, ಮಲಬದ್ಧವಾತ ಇವುಗಳಲ್ಲಿ ಎದ್ದು ಕಾಣುವದು. ಹೊಗದಿರಲ್ಕೆ+ಆಕಾಯದಿಂ—ಆ ದೇಹದಿಂದ ಮಲವು ಹೊರಗೆ ಹೋಗದಿದ್ದಲ್ಲಿ ಸನ್ನಿ—ಗುದವೆ ಮೊದಲಾದ ಸೋರುಮಲದ ಗುರ್ತಿನ ರಂಧ್ರಗಳ ದ್ವಾರದಿಂದ. ಬಾಳ್ಕೆಯೋಳ್—ಮನುಷ್ಯನು ಜೀವಿಸುವದು ಅದು+ಅರಿದು—ಅಸಾಧ್ಯವಾಗುವದು.

೮೭ ಪಾರ್ಶ್ವದೆ—ಗುದದ ಒಂದುಪಕ್ಕದಲ್ಲಿ ಭಗಂಧರ—ಮೊದಮೊದಲು ಒಂದು ಗುಳ್ಳೆಯಂತೆ ಕಾಣಿಸಿಕೊಂಡು ಆಮೇಲೆ ರಕ್ತ ಕೀವು ಸೋರುವ ದಾರುಣವ್ಯಾಧಿ, ತ್ರಾಸಕೃತ್-ಸಂಕಟಪಡಿಸುವ, ವ್ರಣಂ+ಇಲ್ಲಿ+ಅಭೇದ್ಯ—ಈ ಬಗೆಯ ಹುಣ್ಣಿನಘಾಯುಗಳು ಸಹಿಸುವದಕ್ಕಿಲ್ಲದಷ್ಟು ಆಯಾಸ—ನೋವಾಗಿ ವಿಕೃತಿವಡೆದ—ವಿಕಾರಹೊಂದಿದ, ಆ ಸಮೀರನ ಕೂಡೆ—ಆ ವಾಯುವಿನೊಡನೆ ಪಿತ್ತಕ್ಕೆ+ಆದಡೆ+ಅಭಿಯೋಗಂ—ಪಿತ್ತವು ಸಂಬಂಧಿಸಿದರೆ-

೮೮ ವಿಷೂಚಿಯುಂ—ಮೂಲದ ಮೊಳೆಗಳೂ ಅಜೀರ್ಣ ನಿಮಿತ್ತದಿಂದ ತೋರಿಕೊಳ್ಳುವವು, ಬಂಧ—ಈ ದುಃಖಗಳ ಸೆರೆಯೇ ಕವಿ—ಜ್ಞಾನಿಗಳ ನೈಚ್ಯ—ನೀಚಖಂಡವು, ನೋಡಲು+ಒಟ್ಟಾಗಿ+ಇವರ-ಈ ೧೪ ಕರಣಗಳನ್ನೆ ನೆವವಾಗುಳ್ಳ-ಹೊರಗಿನ ಜಡಚೇತನ ಪ್ರಾಣಿಗಳಿಂದಾಗುವ ದುಃಖವೇ ಆಧಿಭೌತಿಕತಾಪವು.

ಈ ಚತುರ್ದಶ ಕರಣಗಳಿಗೆ ಸು ।
ಖಾ ಚರಣಮಂ ಮಾಳ್ಪ ವಿಷಯಂ ।
ಗೋಚರಿಸದಿರೆ ದುಃಖ ಮಿದನನುಭವಿಪ ಕರಣಕ್ಕೆ ॥
ಗೋಚರಿಸಿರಲು, ಉಂಡರಗಿಸ ।
ಲ್ಪ್ರಾಚುರಂ ದೋರದಿರೆ ದುಃಖ ದು ।
ರಾಚರಣರಿದ ಕೂಡದಂದದಿ ಕೆಡಿಸಿದರೆ ದುಃಖ ! ॥ ೮೯ ॥

ಕಾಲದಿಂದನುಭವಿಪ ಕರಣಕೆ ।
ಶೀಲದೋಳ್ ಬಲವಳಿಯೆ ದುಃಖ, ವಿ ।
ಶಾಲ ವಿಷಯಂಗಳಲಿ ದೋಷಂ ವರಿಸಿರಲ್ದುಃಖ ॥
ಮೇಲೆಮೇಲೊತ್ತರಿಪ ರೋಗದ ।
ಜಾಲವಡಸಲ್ದುಃಖ ಮೀ ಪ್ರತಿ ।
ಕೂಲ ಸಂಪತ್ತಿಂದ ಸುಖವೆ ದುಃಖವಾಗಿರಲು ॥ ೯೦ ॥

ಯಾತನೆಯ ನುಪಪಾದಿಸುವ ವಿಷ ।
ಯಾತಿವಾಹಿಕ ಕರ್ಮದಿಂ ಕೇ ।
ಡೇ ತೊಡರ್ಪುದೆನುತ್ತುಸುರಲೇ ನಾಗಮಂಗಳಲಿ ॥
ಭೂತಜಾಲಂಗಳಲಿ ಸರ್ಪ ।
ವ್ರಾತಮುಂ ಪೇಬ್ಬುಲಿಯು ಕರಡಿಯು ।
ಕೋತಿಯೋಳ್ಮ್ರುಸುವಂಕರಂ, ಕಾಡ್ಗೋಣನುಂ ಚೇಳುಂ ॥ ೯೧ ॥

---

೮೯ ಈ ಚತುರ್ದಶ—ಅಂತಃಕರಣ ಚತುಷ್ಟಯವು ಬಹಿಃಕರಣಗಳು ಹತ್ತು ಸೇರಿವ ಒಟ್ಟು. ಸುಖಾ....ಳ್ಪ—ಸುಖವನ್ನು ಆಚರಿಸುವ ಕೂಡುವ, ಒಂದುವೇಳೆ ವಿಷಯಗಳು ಗೋಚರಿಸಿರಲು—ಕಂಡರು ಕೈಗೆ ಸಿಕ್ಕದೆ ಇಂದ್ರಿಯಗಳು ಬಾಬ್ಬಾಯಿ ನೀರು ಕರೆಯುತ್ತಿದ್ದರೂ ದುಃಖ, ಅವನ್ನು ಉಂಡು+ಅರಗಿಸಲ್+ಪ್ರಾಚುರಂ—ಅರಗಿಸಿಕೊಳ್ಳುವಷ್ಟು ಕರಣಗಳಲ್ಲಿ ಚುರುಕಿಲ್ಲದಿದ್ದರೂ ದುಃಖವೇ. ದುರಾಚರಣರು—ಕೇಡಿಗರು.

೯೦ ಅನುಭವಿಪ—ನಡೆಯಿಸಿಕೊಂಡು ಬಂದ, ಶೀಲದೋಳ್—ಒಳ್ಳೆಯ ನಡತೆಯಲ್ಲಿ ಕರಣಕೆ ಬಲವಳಿಯೆ—ಶರೀರೇಂದ್ರಿಯಗಳಲ್ಲಿ ಬಲಕುಂಗಿದರು, ವರಿಸಿರಲ್—ಸ್ವೀಕರಿಸಿದ್ದರೂ ದುಃಖ. ಒತ್ತರಿಪ—ತನಗೆಬೇಡವಾದರು ಬಲಾತ್ಕರಿಸಿ ಬರುವ, ಜಾಲವು+ಅಡಸಲ್—ಬಂದು ಸೇರುತ್ತಿದ್ದರು ಸಂಪತ್ತು—ಪತ್ನಿ ಪುತ್ರ ಮಿತ್ರ ಬಂಧು, ಬಳಗ ಗೃಹ ಕ್ಷೇತ್ರ ವಿತ್ತಾದಿಗಳಿಂದಾಗುವ ಸುಖವೆಲ್ಲ ದುಃಖಮಯವೇ ಆಗುವದು.

೯೧ ಯಾತನೆಯನು+ಉಪಪಾದಿಸುವ—ಹೊಂದಿಸುವ ವಿಷಯುಗಳು. ಆತಿವಾಹಿಕ—ಲಿಂಗದೇಹದ ಕರ್ಮದಿಂದ ಬಂದ ಅವುಗಳಿಂದ ಕೇಡೇ—ದುಃಖ ಹಾನಿಯೆಂಬುದೆ. ತೊಡರ್ಪುದು—ತನಗೆ ಸುತ್ತಿಕೊಳ್ಳುವದು ಎನುತ್ತ+ಉಸುರಲೇನು—ಎಂದು ಬೇರೆ ಹೇಳುವದೇನು? ಇನ್ನು ಹೊರಗಿನ ಭೂತಜಾಲಂ—ಪ್ರಾಣಿಗಳಲ್ಲಿ ವ್ರಾತಮುಂ—ಸಮೂಹ

ಪಿಸುಣನುಂ ಹಾದಿಯನು ಕಟ್ಟುವ ।
ಮಸುಕು ಜನರುಂ ಕೃಪೆಯನೈದದ ।
ರಸುಗಳುಂ ಹೆಣ್ಣಿರಲು ಹೊನ್ನಿರಲಿರಲು ಹೊಲಗೆದ್ದೆ ॥
ಬಸುರ ಬೇಗೆಯ ನೈದಿ, ಏನೊಂ ।
ದೆಸಕಮಂ ಮೇಲೊಡ್ಡಿ ಕೆಡಿಸುವ ।
ಕಿಸುಕುಳದ ಮತಿಯುಳ್ಳರುಂ ದುಃಖಕ್ಕೆ ಕಾರಣರು ॥ ೯೨ ॥

ಸೋಕಿದರೆ ನಸುಗುನ್ನಿಯಂದದಿ ।
ಶೋಕಕಾರಕ ಕಂಡುವಂ ತರ ।
ಬೇಕು ದುಷ್ಟ ವ್ಯಕ್ತಿಗಿದು ಸಹಜಾತವಾದ ಗುಣಂ ॥
ನಾಕನಿಲಯರ್ಮೊದಲು ಗೊಂಡು ಪಿ ।
ನಾಕಿ ಪರ್ಯಂತಂ ಸುರೌಘ ದೊ ।
ಳೀ ಕಾಲ ನಿಂದುದು ವಿಕೃತಿ ವಡೆದರ್ಥ ಸಂಚಯವು ॥ ೯೩ ॥

ದೊರಕಿ ನಿಲದೇಹೋಯ್ತು! ಘನ ನಾ ।
ಮರೆನಿಪ ಜಂತುಗಳೊಳಿರ್ದೀ ।
ನುರು ಸುಖವ ಸಂಪಾದಿಸಿದುದೀ ವಿಷಯ ಸಂದೋಹಂ ॥
ಅರಿಕೆಯುಳ್ಳವರಾವ ಜನ್ಮಾಂ ।
ತರವ ನೆತ್ತಿದರಾವ ಲೋಕಾಂ ।
ತರದೊಳಿರ್ದೊಡ ಮಿಂದ್ರಿಯಾರ್ಥಂ ದುಃಖಮಯವೆಂದು ॥ ೯೪ ॥

---

ಪೇರ್ಬುಲಿ–ಹೆಬ್ಬುಲಿ ಕೋತಿಗಳಲ್ಲಿ+ ಮುಸುವಂಕರಂ––ಕಪ್ಪುಮುಖದ, ಮೈಯೆಲ್ಲ ಕರಿಯದಾದ ಸಿಂಗಳಿಕ.

೯೨ ಮುಸುಕುಜನರುಂ–ಕಾಡುಜನರು ಕೃಪೆಯನು+ ಐದದ–ಪಡಿಯದಿರುವ, ಬಸುರ ಬೇಗೆಯನು+ ಐದಿ–ಹೊಟ್ಟೆಯ ಕಿಚ್ಚು ಹೊಂದಿ, ಏನೊಂದು+ ಎಸಕಮಂ–ಏನಾದರೊಂದು ದುಃಖರಚನೆಯ ಕಾರ್ಯವನ್ನು, ಕಿಸುಕುಳ–ಕಿರುಕುಳದ ಅಲ್ಪಬುದ್ಧಿಯುಳ್ಳವರೂ.

೯೩ ನಸುಗುನ್ನಿ––ನಾಯಿಸೊಣಗಿನ ಬಳ್ಳಿಯಂತೆ ಕಂಡುವಂ–ಯಾವುದಾದರೊಂದು ದುಃಖವನ್ನು ಕೊಡುವ ಅಲ್ಪಕಾರ್ಯಗಳನ್ನೆ ಇನ್ನೊಬ್ಬರಮೇಲೆ ತಂದೊಡ್ಡುವದು. ಸಹಜಾತ––ಹುಟ್ಟುಬಂದಗುಣ, ನಾಕನಿಲಯರ್–ದೇವತೆಗಳಾದಿಯಾಗಿ ಪಿನಾಕಿ–ಪಿನಾಕವೆಂಬ ಬಿಲ್ಲನ್ನು ಧರಿಸಿರುವ ಶಿವನವರೆಗಿನ. ಸುರ+ ಓಘ–ದೇವತೆಗಳ ಸಮೂಹದಲ್ಲಿಯೆ ಈ ಕಾಲದ ಪೆಟ್ಟು ತಿಂದ ವಿಷಯರಾಶಿಯು––

೯೪ ದೊರಕಿದ್ದರು ಆ ದೇವತೆಗಳಲ್ಲಿಯೇ ಕಾಲೂರಿನಿಲ್ಲದೆ ಹೋಯಿತು ಎಂದರೆ, ಇನ್ನು ಘನ–ಅತ್ಯಂತ, ಜಂತು–ಕ್ಷಣಮಾತ್ರದಲ್ಲಿ ಹುಟ್ಟಿ ಅಳಿಯುವ ಮಳೆಯ ನೀರಿನ ಕ್ಷುದ್ರಜಂತುಗಳಿಗೆ ಹೋಲುವ ಈ ಹುಲುನರರೊಳಗೆ ವಿಷಯಗಳ, ಸಂದೋಹ–ರಾಶಿಯೆಂಬುದು, ಇರ್ದು–ಇದ್ದು ಅವರಿಗೆ ಸಂಪಾದಿಸಿಕೊಟ್ಟಿರುವ ಏನು+ ಉರು–ಹೆಚ್ಚಿನ

ತಿಳಿಯಬೇಕಿದಿರಾಗಿ ಸುಖಮಂ
ತಳುವದೈದಿಪ ವಿಷಯಗಳ ಕಂ
ಡಿಳಿಯ ತೆಗೆವುದದೆಂತು ಗುರುಮೂರ್ತಿಯೆ, ಮತಿಗೆಯೆನ್ನ ||
ತಿಳಿಯಪೇಳೆನೆ, ಸುಖಮೆನಿಸಿ ಯೊಳ
ಗಿಳಿದು ಕಾಲಾಂತರಕೆ ಕಷ್ಟವ
ಬಳಕೆಗೈದಿಪ ದೆಸೆಯೊಳಿವು ದುಃಖಾತ್ಮಕಂಗಳಲ ! || ೯೫ ||

ಈ ಪ್ರಬಂಧವ ಕೇಳುವರ ಧಿಷ
ಣಾ ಪ್ರಸನ್ನತೆಯಿಂದ ಪರಿಪರ ।
ಸಪ್ರಮೋದಂ ವೆರಸಿ ಇದರರ್ಥವನು ಭಾವಿಪರ ||
ದೀ ಪ್ರಚಂದ್ರ ಕಲಾ ವಿಲಾಸ ರ ।
ಸ ಪ್ರವಾಹವೆ ಗಂಗೆಯೆಂದು ಸು ।
ರ ಪ್ರವರರೆಣಿಸಲ್ಕೆ ಮೆರೆವೀಶಂ ಸುಖಮನೀಗೆ || ೯೬ ||

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೊಳಾಧಿ ಭೌತಿಕ ತಾಪ
ಕ್ರಮಮುಳ್ಳ ನಾಲ್ಕನೆಯ ಸಂಧಿ ಸಮಾಪ್ತಂ ( ಪದ ೨೦೮ )

---

ಸುಖವಾದರು ಏನು? ಆದ್ದರಿಂದ ಅರಿಕೆಯುಳ್ಳವರು–ಬುದ್ಧಿವಂತರು ದೇವಾಸುರನರರಲ್ಲಿ ಯಾವದೆ ಉತ್ತಮ ಜನ್ಮಾಂತರವನ್ನೆತ್ತಿದರು, ಸ್ವರ್ಗ ಮರ್ತ್ಯ ಪಾತಾಳದ ಅಥವಾ ಮನುಷ್ಯ ಪಿತೃ ದೇವ ಎಂಬ ಈ ಯಾವುದೇ ಪುಣ್ಯಲೋಕಾಂತರಗಳಲ್ಲಿದ್ದರು ಭೋಗ್ಯವಾದವಿಷಯರಾಶಿಗಳೆಂಬ ಇಂದ್ರಿಯಾರ್ಥಗಳನ್ನು ಮಾತ್ರ ದುಃಖಮಯವೆಂಬುದು ಮರಿಯ ತಕ್ಕದ್ದಲ್ಲ.

೯೫ ಇದಿರಾಗಿ–ಪ್ರತ್ಯಕ್ಷವಾಗಿ ತಳುವದೆ+ಐದಿಪ—ಈ ಕೂಡಲೆ ಸುಖವನ್ನು ಹೊಂದಿಸುತ್ತಿರುವ ವಿಷಯಗಳಲ್ಲಿ. ಇಳಿ....ವುದು—ಸಂಪೂರ್ಣ ಅನುರಾಗವನ್ನೆ ಬಿಡುವುದು, ಅದೆಂತು—ಅದು ಹೇಗಾಗುವುದು? ಎಂಬುದನ್ನು, ಎನ್ನ ಮತಿಗೆ+ತಿಳಿ (ಯುವಂತೆ) ಯ+ಪೇಳು+ಎನೆ—ಎಂದು ಶಿಷ್ಯನ ಪ್ರಶ್ನೆಯು, ಸುಖಂ+ಎನಿಸಿ+ಒಳಗೆ+ಇಳಿದು—ಮನಸ್ಸಿನಲ್ಲಿ ಬೇರುಬಿಟ್ಟುಕೊಂಡ ಆ ವಿಷಯಗಳೆ ಕಾಲಾಂತರದಲ್ಲಿ ಕಷ್ಟವನ್ನೆ ತಂದು, ಬಳಕೆಗೆ+ಐದಿಪ—ಹೊಂದಿಸುವ ಕಾರಣ ಅವು ದುಃಖದ ಸ್ವರೂಪವೆ ಎಂಬುದು ಗುರುವಿನ ಉತ್ತರವು.

೯೬ ಈ ಪ್ರಬಂಧ—ಕಾವ್ಯ, ಧಿಷ...ನ್ನತೆ–ನಿರ್ಮಲ ಬುದ್ಧಿಯಿಂದ, ಸಪ್ರ...ರಸಿ–ಅತ್ಯಂತ ಸಂತೋಷ, ಉತ್ಸಾಹದೊಡನೆ ಕೂಡಿ, ಭಾವಿಪರ—ಮನನ ಮಾಡುವವರಿಗೆ, ದೀಪ್ರ....ಲಾಸ—ಹೆಚ್ಚು ಕುಂದುಗಳನ್ನು ಬಿಡದೆ ಹೊಂದುವ, ಕಿರಣಗಳಿಂದ ಹೊಳೆಯುವ ತನ್ನ ಜಡೆಯಲ್ಲಿನ ಬಾಲಚಂದ್ರನ, ರಸಪ್ರವಾಹವೆ–ಕಿರಣಗಳ ಬೆಳದಿಂಗಳನ್ನೆ ದೇವಗಂಗಾ ಪ್ರವಾಹವೆಂದು, ಸುರಪ್ರವರರು–ದೇವಮುಖ್ಯರು, ಎಣಿಸಲ್ಕೆ–ಭ್ರಾಂತಿಪಟ್ಟು ಭಾವಿಸುವಂತೆ, ಮೆರೆವ+ಈಶಂ ಸುಖಮನು+ಈಗೆ–ಕೊಟ್ಟು ಅವರಿಗೆಲ್ಲ ಕಾಪಾಡಲಿ.

ಓಂ ತತ್ ಸತ್

# ಆಧಿದೈವಿಕ ತಾಪನಿರ್ಣಯ—ಐದನೆಯ ಸಂಧಿಯು

ಸೂ|| ಆಧಿದೈವಿಕ ತಾಪ ಜನಿತ ।
ವ್ಯಾಧಿಯನು ಚನ್ನಾಗಿ ವಿವರಿಸಿ ।
ಮೇಧೆ ಗೊಪ್ಪುವ ತೆರದಿ ಬೋಧಿಸಬೇಕು ಗುರುರಾಯ || ಪ ||

ಕೇಳು ಕೇಳೆಲೆ ಮಗನೆ, ನಿಃಕರು ।
ಣಾಳುಗಳ ನಂದನ ವನಕೆ ಪೊಂ ।
ಬಾಳೆಯಲ್ಲಾ ! ಭವದೆ ಬೇಗುದಿಗೊಂಬ ಜಂತುಗಳ ||
ಜಾಲಮಂ ನೆರೆ ನೋಡಿ ಯಮನ ಕ ।
ರಾಳ ಶಾಸನಕಿನ್ನೊಡಲ ನನು ।
ಕೂಲಿಸದ ಹಾಗಿಲ್ಲಿ ಯತ್ನೀಕರಿಪ ರಾರುಂಟು || ೧ ||

ಖೂಳರಿಗೆ ಹೇಳದಿರು, ಪಿಸುಣರ ।
ಪಾಳಿಯಲಿ ತಿರುಗದಿರು ದುರ್ಮದ ।
ಕೌಳ ರಾಜಿಯ ನೋಡದಿರು ಮರೆದೊಂದು ವೇಳೆಯಲಿ ||
ಠೌಳಿಕಾರರ ಹೆಜ್ಜೆ ಹಿಡಿಯದಿ ।
ರಾಳದಿರು ತನುವಿಂವ ಕರ್ಮವೆ ।
ಮೇಲೆನ್ನುವರಂ ಮಾನವಾಕೃತಿಯಲಿ ತೋರಿದೊಡಂ || ೨ ||

ನಂಬದಿದ್ದರು ಹತ್ತಿರಕೆ ಕರ ।
ಕೊಂಬುದಲ್ಲದೆ ನೋಡದಿರ್ದರು ।
ನಂಬಿದವರಲಿ ವಂಚನೆಯ ಮಾಡದ ಮಹಾತ್ಮರನು ||
ತುಂಬಿರುವ ಮನೆ ಧಾನ್ಯ ಕನಕ ಕು ।
ಟುಂಬ ಪಶುವೃತ್ತ್ಯಾದಿಯಲಿ ಮನ ।
ಮಂ ಬಿಡದರನು ಸೇರು, ತತ್ತ್ವವ ಹೇಳು, ಕೇಳವರಿಂ || ೩ ||

---

ಸೂ॥ ಜನಿತ—ಹುಟ್ಟುವ ಮೇಧೆಗೆ+ಒಪ್ಪುವ-ಬುದ್ಧಿಗೆ ಒಪ್ಪಾಗಿ ತಿಳಿದುಬರುವಂತೆ.

೧ ಪೊಂಬಾಳೆಯಲ್ಲಾ—ಇಂದ್ರನ ಉದ್ಯಾನವನದಲ್ಲಿ ಕಂಗೊಳಿಸುವ ಹೊಂಬಾಳೆಯೆಂತೆ ಮುಮುಕ್ಷುಗಳಲ್ಲೆಲ್ಲ ನೀನು ಶೋಭಿಸುತ್ತಿರುವೆ. ಭವದೆ—ಹುಟ್ಟುಸಾವುಗಳ ಸಂಸಾರದಲ್ಲಿ ಬೇಗುದಿಗೊಂಬ—ದುಃಖದಿಂದ ಕುದಿಯುತ್ತಿರುವ ಜಂತುಜಾಲ—ಜೀವಸಮೂಹವನ್ನು ಕರಾಳ—ಉಗ್ರವಾದ ಶಾಸನಕೆ+ಇನ್ನು+ಒಡಲನು—ಶರೀರವನ್ನು.

೨ ಖೂಳ—ನೀಚ, ಪಾಳಿ—ಸಾಲು, ದುರ್ಮ....ಜಿಯ—ದುರ್ಮದಗಳೆಂಬ ಅಜ್ಞಾನಕತ್ತಲೆಗಳುಳ್ಳವರ ಗುಂಪನ್ನು ಠೌಳಿ—ಮೋಸಗಾರರ ಆಳದಿರು—ಸೇವಕನಾಗದಿರು

೩ ಪಶುವೃತ್ತಿ—ಪಶುಗಳ ನಡೆವಳಿಕೆಯೇ ಬಿಡದರನು—ಮನಸ್ಸನ್ನು ಅತ್ತ ಹರಿಯುವದಕ್ಕೆ ಬಿಡದವರನ್ನು.

ಇನಿಗದಿರ ನೀ ಮನಕೆ ದೈವಂ ।
ದಿನದಿನದೊಳಾತಂಗೆ ತೋರ್ಪುದು ।
ತನುವಿನಲಿ ಸಿತಪಕ್ಷದಲಿ ಕಲೆಗಳ ಲಸದ್ವೃದ್ಧಿ ॥
ಅನುಸರಿಸಲಾ ಕೃಷ್ಣಪಕ್ಷಂ ।
ದಿನದಿನಕೆ ಕಲೆಗಳಿಗೆ ನಾಶಂ ।
ಜನಿಸುವುದು ಕೃಶನಾಗಿ ತೋರುವನಾ ತಿಥಿಗಳಲ್ಲಿ ॥ ೪ ॥

ಈ ಮನಸ್ಸಿಗೆ ಶುಕ್ಲಪಕ್ಷವೆ ।
ರಾಮಣೀಯಕ ವಸ್ತುಗಳ ಸಂ ।
ಸ್ತೋಮವಳವಟ್ಟಂದು; ಬಿಡದೇ ಕೃಷ್ಣಪಕ್ಷವಿದು ॥
ಐಮುಖದಿ ಯೋಚಿಸಿದ ಕಾರ್ಯಂ ।
ಪ್ರೇಮಕೃದ್ವಸ್ತುವ್ರಜಂ, ಕಡು ।
ಗೈಮೆಗಳಳವಡದಂದು; ಕಲೆಗಳೆ ಬಯಕೆಗಳ ಸಾಲು ॥ ೫ ॥

ಅಮೃತಮಯ ವಿಗ್ರಹನಿಗಿಂದು ವಿ ।
ಗಮರಗಣ ಮಾಶೀರ್ವಚನಮಂ ।
ಸಮಯ ಸಮಯದೊಳಾಚರಿಪುದೀ ಮನದ ಚಂದ್ರನಲಿ ॥
ಶಮ ಮಮೃತವಾಗಿಹುದು ಧಾತುಗ ।
ಳಮರಗಣ ಮಿದರಾನುಕೂಲ್ಯದಿ ।
ಯಮನ ನಗರದ ಹಾದಿಯಂ ಮೆಟ್ಟದು ವಿಪತ್ತಿರಲು ॥ ೬ ॥

---

೪ ಇನಿಗದಿರನು—ತಿಂಗಳುಬೆಳಕುಳ್ಳ ಚಂದ್ರನು, ಈ ಮನಕ್ಕೆ+ಅಧಿದೈವನು. ತನುವಿನಲಿ–ಚಂದ್ರನಮೈಯ್ಯಲ್ಲಿ, ಸಿತ—ಶುಕ್ಲಪಕ್ಷದಲ್ಲಿ, ಲಸದ್ವೃದ್ಧಿ–ಚೆನ್ನಾಗಿಮೇಲೆದ್ದು ಕಾಣಿಸಿಕೊಂಡು ಹೊಳೆಯುವಂತೆ ಬೆಳೆದುಕೊಳ್ಳುತ್ತಿರುವವು, ಕೃಶ—ಕ್ಷೀಣನಾಗಿ.

೫ ಸಂಸ್ತೋ...ಟ್ಟಂದು—ರಾಶಿರಾಶಿಯಾಗಿ ತಾನು ಕೂಡಿಬಂದಾಗ ಐಮುಖದಿ—ಐದಾರು ಮುಖ–ಬಗೆಗಳಿಂದ, ಪ್ರೇಮ...ವ್ರಜಂ–ತನಗೆ ಪ್ರಿಯವಾದ ವಸ್ತುರಾಶಿಗಳೂ, ಕಡುಗೈಮೆಗಳು—ಅತ್ಯಂತ ತೀವ್ರವಾಗಿ ನಡೆಸಿದ ಪ್ರಯತ್ನಗಳೂ, ಅಳವಡದಂದು—ತನಗೆ ಸಿದ್ಧಿಸದೆ ವ್ಯರ್ಥವಾಗಿ ಹೋದಾಗ.

೬ ಅಮೃ....ನಿಗೆ+ಇಂದುವಿಗೆ-ಅಮೃತಕಿರಣಗಳೇ ಶರೀರನಾದ ಚಂದ್ರನಿಗೆ, ಅಮರಗಣ—ದೇವಗಣ ಆಚರಿಪುದು—ಆಚರಿಸುತ್ತಿರುವಂತೆಯೇ ಶಮವು—ಮನೋನಿಗ್ರಹವೆಂಬುದೆ. ಅಮೃತವು+ಆಗಿಹುದು ಧಾತುಗಳ್+ಅಮರಗಣಂ—ಸಪ್ತಧಾತುಗಳೆ ಈ ಮನೋಚಂದ್ರನಿಗೆ ಆಶೀರ್ವಚನ ಮಾಡುತ್ತಿರುವ ದೇವಗಣಗಳು ಇವುಗಳ, ಆನುಕೂಲ್ಯದಿ-ಸಹಾಯದಿಂದ ಮನಸ್ಸಿಗೆ ಎಷ್ಟೇ ಕಷ್ಟನಷ್ಟಗಳ ವಿಪತ್ತಿರಲು, ಅವನ್ನೆಲ್ಲ ಸಹಿಸಿಕೊಳ್ಳುವ ಶಕ್ತಿಯಿರುವದರಿಂದ ಸ್ವೇಚ್ಛಾಪ್ರವರ್ತನೆಯು ತಪ್ಪಿಹೋಗಿ ನರಕದ ಹಾದಿಯನ್ನು ಈ ಮನಸ್ಸು ಮೆಟ್ಟುವದಿಲ್ಲವು.

ಕೈಯ್ಯ ಹಿಡಿದಬಲೆಯರು ಕುರುಪಿನ ।
ವೈಯವಂಗುಂಟರಿಲ ರೂಪದೊ ।
ಳೋಯರಂ ಮಿಗಲವರವರ ಠಾಣದಲಿ ಸುಳಿವಾಗ ॥
ಈಯಶೇಷ ಜಗಕ್ಕೆ ತತ್ತ ।
ತ್ಕಾಯಿಕಾದಿಕ ಕರ್ಮಗಳ ಸಮು ।
ದಾಯದಿಂ ಸುಖದುಃಖಗಳು ಚನ್ನಾಗಿ ಕೊಡುತಿರ್ಪಂ ॥ ೭ ॥

ಮೂವರೆನಿಪ ತ್ರಿಗುಣಗಳ ಸ ।
ದ್ಭಾವದಿಂ ದುಂಟಾವ ಸಂಕ ।
ಲ್ಪಾವಳಿಯೆ ಮಾನಸ ನೃಪಂಗೆ ವಧೂ ಕದಂಬಕವು ॥
ಆ ವಧೂವರ್ಗಂ ತ್ರಿಭಾಗವ ।
ನೋವಿ ಸೇರಿಹುದದು ಪಿತೃತ್ರಯ ।
ಭಾವ ಸಂಭವಮಾದ ದೆಶೆಯಿಂ ನವನವಸ್ಥಿತಿಯಿಂ ॥ ೮ ॥

ಸುರರಗಣ ವೊಂಬತ್ತು, ದೈತ್ಯೇ ।
ಶ್ವರರಗಣ ವೊಂಬತ್ತು, ಮಾನವ ।
ವರರಗಣ ವೊಂಬತ್ತು. ನೋಡಲ್ಕೀ ಗಣತ್ರಯದಿಂ ॥

---

೭ ಕುರು...ಅವಂಗೆ+ಉಂಟು–ಕಲಂಕ ಶರೀರಿಯಾದ ಚಂದ್ರನಿಗೆ, ಅರಿಲ-ಶತ್ರು (ಮತ್ತು ಮಿತ್ರರ) ರೂಪದಲ್ಲುಂಟು, ಆತನ್ನ ಪತ್ನಿಯರ ಸಾಲಿನಲ್ಲಿ ಚಂದ್ರನು, ಮಿಗಲು—ಉಳಿದುಕೊಳ್ಳಲು, ಈ+ಅಶೇಷಜಗಕ್ಕೆ-ಜಗತ್ತಿನ ಈ ಜೀವರಿಗೆಲ್ಲ, ತತ್+ತತ್+ಕಾಯಿಕಾದಿಕ-ಶರೀರ ವಾಕ್ ಮನಸ್ಸುಗಳೆಂಬ ಆಯಾಯ ಕರಣಗಳ ಕರ್ಮಗಳಿಗೆ ತಕ್ಕಂತೆ ಚಂದ್ರನು ಸುಖದುಃಖಗಳನ್ನು ಕೊಡುತ್ತಿರುವನು. ನಕ್ಷತ್ರಗಳೆಂಬ ಚಂದ್ರನ ಪತ್ನಿಯರ ಸಾಲಿನಲ್ಲಿ ಶತೃ, ಮಿತ್ರ, ಸಮ–ಸ್ಥಾನ ಎಂಬ ವಿಭಾಗವಿರುವಂತೆ; ತನ್ನ ಸಂಕಲ್ಪಾವಳಿಗಳು ಮೂರು ಬಗೆ, ಅವುಗಳಲ್ಲಿ ಈ ಮನಸ್ಸು ಒಲಿದು ಕೂಡಿರುವಲ್ಲಿ ಜೀವನಿಗೂ ಸುಖ ದುಃಖ ಅವುಗಳ ಮಿಶ್ರ ಫಲಗಳೆಂಬ ಸ್ವರ್ಗ, ನರಕ, ಮರ್ತ್ಯ—ಎಂಬೀ ಲೋಕತ್ರಯಗಳನ್ನು ಅದು ಕೊಡುತ್ತಿರುವದು.

೮ ಸಂಕಲ್ಪಾವಳಿ–ಸಂಕಲ್ಪಗಳೆಂಬ ಕನ್ನಿಕೆಯರ ಸಮೂಹವೆ, ಮಾನಸನೃಪಂಗೆ–ಮನೋಚಂದ್ರನಿಗೆ, ವಧೂಕದಂಬಕ–ಮಡದಿಯರ ಸಾಲು, ತ್ರಿಭಾಗವನು-ಅವು ತಮ್ಮೊಳಗೆ ಮೂರು ಬಗೆಯನ್ನು, ಓವಿ–ಒಲಿದು, ಪಿತೃತ್ರಯ–ತಮಗೆ ಕಾರಣಗಳಾದ ಗುಣಗಳನ್ನು ಅನುಸರಿಸಿದ ಆ ಸಂಕಲ್ಪಗಳೂ ತಮ್ಮಲ್ಲಿ ಹೊಸಹೊಸ ರೂಪುಗಳಿಂದ ಮಾರ್ಪಡುತ್ತಿರುವವು.

೯ ದೇವಗಣ ರಾಕ್ಷಸಗಣ ಮನುಷ್ಯಗಣ ಎಂದು ತಮ್ಮೊಳಗೆ ತ್ರಿವಿಧದಿಂದ ವಿಂಗಡಿಸಿಕೊಂಡಿರುವ ಆ ಅಶ್ವಿನ್ಯಾದಿ ೨೭ ನಕ್ಷತ್ರಗಳಲ್ಲಿ ಬೆರೆತ ಚಂದ್ರನು ಸುಖ, ದುಃಖ, ಸುಖದುಃಖ ಮಿಶ್ರ—ಎಂಬ ಫಲಗಳನ್ನು ಉಣ್ಣುತ್ತಿರುವಂತೆ; ಸಾತ್ವಿಕ ತಾಮಸ ರಾಜಸ ಸಂಕಲ್ಪಗಳಲ್ಲಿ ಬೆರೆತಿರುವ ಈ ಮನಸ್ಸು—ಪುಣ್ಯ ಪಾಪ ಮಿಶ್ರ ಕರ್ಮಗಳನ್ನು ನೆನಮಾಡಿಕೊಂಡು

ಬೆರದ ಮಾನಸ ಕಪ್ಪುದಮರೇ ।
ಶ್ವರರ ಲೋಕಂ, ನರಕ ಲೋಕಂ, ।
ನರರಲೋಕಂ ಪುಣ್ಯದಿಂ ದಘದಿಂ ದಿವರ ಯುಗದಿಂ ॥ ೯ ॥

ಇರುಳಿನಲ್ಲೀ ಶಶಿಗೆ ಕಾಂತಿ ।
ಸ್ಫುರಿಪುದಲ್ಲದೆ ಹಗಲಿನಲ್ಲೀ ।
ನಿರದು ತತ್ಕಾಲದೆ ದಿವಾಂಧವಿಹಂಗ ಮೃಗಗಳಿಗೆ ॥
ಚರಿಸುವುದು ವರ್ತಿಸುವುದದರೋ ।
ಳ್ಕರಕೆ ಕಾರ್ಶ್ಯಂ ಬಂದರಾಗ ।
ಲ್ಚರಿಸೆ ಯೋಗ್ಯತೆಬಹುದು ಜಾರರಿಗೊಡನೆ ಚೋರರಿಗೆ ॥ ೧೦ ॥

ಈ ತೆರದಲೀ ಮಾನಸಕ್ಕೆ ಪು ।
ರಾತನಾಜ್ಞಾನದಿಂ ನೆರೆನೆರೆ ।
ದೋರುತಿರುವ ವಾಸನೆಗಳಲಿ ಪಿರಿದಾಗಿ ತೋರುವುದು ॥
ಖ್ಯಾತಿ ಕಾಮಾದಿಗಳಿಗವರಲಿ ।
ನೂತನ ಸ್ಥಿತಿಯಿದರೊಳಡಗ ।
ಲ್ಚೇತನಾ ಪ್ರಭೆ ಕಾಮ್ಯ ಕರ್ಮಂಗಳಿಗೆ ಕಾಲಾಟಂ ॥ ೧೧ ॥

ಸುತ ಮದನಮುಖ ರಾಶಿಗಳಲೀ ।
ಶಿತಕರಂ ದುಗ್ರ್ರಹಗಳಿಂ ವೀ ।
ಕ್ಷಿತನೆನಿಸಿ, ಯುತನೆನಿಸಿ ವರ್ತಿಸಲಾ ಸಮಯದಲ್ಲಿ ॥

---

ಸ್ವರ್ಗ ನರಕ ಮರ್ತ್ಯ ಬಂಬ ಲೋಕತ್ರಯಗಳನ್ನು ಕ್ರಮದಿಂದ ಹೊಂದುತ್ತಿರುವದು.

೧೦ ಇರುಳಿನಲ್ಲಿ—ರಾತ್ರಿಯಲ್ಲಿ ಈ ಶಶಿ—ಈ ಚಂದ್ರನಿಗೆ ಸ್ಫುರಿಪುದು–ಎದ್ದು ಕಾಣುವದು, ದಿವಾಂಧವಿಹಂಗ-ಹಗಲು ಕಣ್ಕುರುಡಿನಗೂಬೆ, ಮಾಂಸಾಹಾರಿಗಳಾದ ಮೃಗಗಳಿಗೂ. ಚರಿ....ಸುವದು–ಓಡಾಡುವದಕ್ಕಾಗುವದು, ಅವ....ರ್ಶ್ಯಂ–ಚಂದ್ರನಕಿರಣಗಳಿಗೆ, ಕ್ಷೀಣತೆ ಬಂದರೆ+ಆಗ+ಚರಿಸೆ...;

೧೧ ಅದರಂತೆ ಮನಸ್ಸಿಗೂ ಹಳೆಯ ಅಜ್ಞಾನದ ಸರಿಗತ್ತಲಿನ ರಾತ್ರಿಯಕಾಲದಲ್ಲಿ ಚೆನ್ನಾಗಿ ಗುಂಪು ಗುಂಪಾಗಿ ಸೇರಿ ಹೊಂದಿಕೊಂಡಿರುವ ಭೋಗವಾಸನೆಗಳ ತಿಂಗಳು ಬೆಳುಕಿನಲ್ಲಿ—ಜೀವರಲ್ಲೆಲ್ಲ ಹೆಸರುಗೊಂಡಿರುವ ಕಾಮಾದಿಗಳೂ, ಅದೇ ಮನಸ್ಸಿನಲ್ಲಿ ವಿವೇಕದ ಚೇತನದಪ್ರಭೆ—ಬೆಳುದಿಂಗಳಿಗೆ ಕ್ಷೀಣತೆ ಬರಲು ಕಾಮ್ಯಕರ್ಮಗಳೂ ಆಗ ಬಂದು ತಲೆ ಹಾಕಿ ಕಾಲಾಟಂ—ಸಂಚಾರಕ್ಕೆ ಅವು ಮೊದಲುಮಾಡುವವು.

೧೨ "ಸುತಮದನನವಾಂತ್ಯಾರಂಫ್ರಲಗ್ನ ಅಶುಭಯುತಃ ಶೀತರಶ್ಮಿಃ ಮರಣಾಯ। ತಪ್ಪಂಗೇ ಶುಭನಿರೀಕ್ಷಿತೇ ಶುಭಯುತೇವಾ ಶೀತರಶ್ಮಿಃ ಯೋಗಕಾರಕೊಭವತಿ (ಭೃ॥ ಜಾ)"

ಅರ್ಥ:–೫, ೭, ೮, ೯, ೧೨—ಕರ್ಮಕ್ಕೆ ತಕ್ಕಂತೆ ಈ ರಾಶಿಗಳಲ್ಲೊಂದನ್ನು ತನ್ನ ಜನ್ಮದ ಲಗ್ನವನ್ನಾಗಿ ಮಾಡಿಕೊಂಡು, ಹುಟ್ಟಿದ ಮನುಷ್ಯನಿಗೆ ಆ ಲಗ್ನದ ಮನೆಯಲ್ಲಿರುವ

ಕ್ಷಿತಿಯೊಳುದಿಸಿದವಂಗೆ ಕೊಡುವಂ ।
ವೃತಿಯ ನದರಿಂ ನ್ಯೂನವಾಗ ।
ಲ್ಕ್ಷಿತಿಯನೀವಂ ಯಾವರೀತಿಯೊಳಂತೆ ಮಾನಸವು ॥ ೧೨ ॥

ದುಷ್ಟಸಂಗವ ಮಾಡಿ ದೊರಕದ ।
ಕಷ್ಟಗಳಿಗೊಡಲಾಗಿರುವುದೇ ।
ರಿಷ್ಟವಸತಿ ಯಿದಕ್ಕೆ ದುರ್ಲೋಭಾಭಿಲಾಷೆಗಳೆ ॥
ದೃಷ್ಟಿಯೆನಿಪುದು ಪಾಪಗಳವೇ ।
ವೃಷ್ಟಿಯಿಂದುಂಟಾದ ಫಲಗಳ ।
ನಷ್ಟಮಂ ಮಾಡುವುದು ಕೆಡಿಸುವುದದರ ಲಾಭವನು ॥ ೧೩ ॥

ಇಂಗದಿರನೆ ತುಷಾರ ಕಾಲದೆ ।
ಸಂಗತಿಯ ವರಿಸಲ್ಕೆ ಜಡತೆಯ ।
ಜಂಗಮ ಸ್ಥಾವರ ಶರೀರಗಳಿಗೆ ಬೀರುವನು ॥
ಲಿಂಗದೊಳಗೀ ಮನವು ತಾಮಸ ।
ಮಂ ಗಮಿಸಲಿಂದ್ರಿಯ ದಶಕದೋ ।
ಳ್ಸಂಗತಂ ಗೊಳಿಸುವುದು ಜಾಡ್ಯವ ಮತಿಯುಲಿಯದಂತೆ ॥ ೧೪ ॥

ಖೇಟ ವರ್ಗಂಗಳಲಿ ಚಂದ್ರಂ ।
ಗೋಟವಧಿಕಂ ತಾವರೆಯ ನೆರೆ ।
ನೋಟ ವೀತನೊಳಿರದು, ಕುಮುದಂಗಳಿಗಿವಂ ಮಿತ್ರಂ ॥

---

ಶೀತರಶ್ಮಿಃ—ಚಂದ್ರನು, ದುರ್ಗ್ರಹಗಳಿಂದ ಜೊತೆಗೂಡಿದ್ದರೆ ಸಾವನ್ನೆ ಕೊಡುತ್ತಾನೆ. ತದ್+ಭಂಗೆವಾ(ನ್ಯೂನಂ+ಆಗಲ್)–ಆ ದುರ್ಗ್ರಹಗಳ ದೃಷ್ಟಿಯಿಲ್ಲದಿದ್ದರೆ ಅಥವಾ ಶುಭ ಗ್ರಹಗಳಿಂದ ಒಡಗೂಡಿದ್ದರೆ, ತದಾಶೀತರಶ್ಮಿಃ–(ಶಿತಕರಂ) ಆಗ ಚಂದ್ರನು,ಯೋಗ (ಕ್ಷಿತಿಯನು+ಈವಂ) ಕಾರಕೊಭವತಿ—ಭೂಮಿಯೆ ಮುಂತಾದ ಸಂಪತ್ಪ್ರದನಾಗುತ್ತಾನೆ.

"ಪಶ್ಯನ್ತಿಸಪ್ತಮಾಸ್ಸರ್ವೇ (ಸಾ॥ ಭೃ॥ ಜಾ॥)" ತಾವಿರುವ ಮನೆಯಿಂದ ೭ನೆ ಮನೆಯನ್ನು ನೋಡುವದು ಗ್ರಹಗಳಿಗೆಲ್ಲಕ್ಕು ಸಮಾನ. ....ಳ್+ಅಂತೆ–ಚಂದ್ರನು ಜೀವರ ಕರ್ಮಕ್ಕನುಗುಣವಾಗಿ ದುಷ್ಟಗ್ರಹಗಳ ದೃಷ್ಟಿ, ಅದರ ನ್ಯೂನತೆ–ಎಂಬಿವುಗಳಿಂದ ಜೀವರಿಗೆ ಮರಣ ಅಥವಾ ಯೋಗ ಎರಡರಲ್ಲೊಂದನ್ನು ಕೊಡುವಂತೆ; ಮಾನಸವು—ಈ ಮನಸ್ಸು ಕೂಡ ಜೀವನಿಗೆ ಎರಡು ಫಲಗಳಲ್ಲೊಂದನ್ನು ಕೊಡುತ್ತಿರುವದು.

೧೩ ಒಡಲಾಗಿರುವದೆ—ಮುಖ್ಯವಾಗಿ ತನ್ನನ್ನು ಆ ಉಪದ್ರವಗಳಿಗೆ ತೆತ್ತಿರುವದೆಂಬುದೇ. ರಿಷ್ಟವಸತಿಯು—ಅಶುಭಸ್ಥಾನವು ವೃಷ್ಟಿ—ಬಿಡಿಬಿಡಿಯಾದ ಪುಣ್ಯಕರ್ಮಫಲಗಳನ್ನು.

೧೪ ಇಂಗದಿರನೆ—ಚಂದ್ರನೆ ತುಷಾರ—ಚಳಿ,· ಮಂಜಿನ. ಸಂಗತಿಯ—ಸೇರಿಸಿಬಿಡುವದು, ಬೀರುವನು-ಹರಡುವನು, ಲಿಂಗದೇಹಕ್ಕೆ ಸೇರಿದ ಈ ಮನವು ಅದರಂತೆಯೇ;

ಕೂಟದೊಳಗಂತಃಕರಣದ ಸ ।
ಗಾಟ ಮಾಗಿಹ ದೃಶ್ಯಗಳಲ್ಲೋ ।
ಡಾಟವೀ ಮಾನಸಕೆ ಚುರುಕಾಗಿಹುದು ನೆಲೆಯಿರದು ॥ ೧೫ ॥

ಯೋಗಿಗಳಿದಂ ಲಕ್ಷಿಸರು ಗುಣ ।
ರಾಗಿಗಳಿದಂ ನೋಡುವರು, ಮೇ ।
ಲಾಗಿದರ ಪಾಂಡಿತ್ಯವೆಲ್ಲಂ ಶಾಸ್ತ್ರ ಸಮಯವನು ॥
ನೀಗಿರುವ ಲೌಕಿಕರ ಕಾರ್ಯದ ।
ಭಾಗದೊಳಗಲ್ಲದೆ ವಿವೇಕದ ।
ಯೋಗಶಾಲೆಯೊಳಾಡಲಾರದು ನಿಲಲು ಬಲವಿಲ್ಲ; ॥ ೧೬ ॥

ಮತಿಯ ಸುರರೊಳಗಾಳಿದವ ಶತ ।
ಧೃತಿ ಯವನ ಕೃತ್ಯಕ್ಕೆ ಸಾಮ್ಯವ ।
ಚತುರರೆಣಿಸಲ್ಕಾರರಮರೇಜ್ಯಾದಿಗಳ್ಬಿಡದೆ ॥
ಹುತಭುಗಂಶಂ ಬಡೆದು ಜನ್ಮ ।
ಸ್ಥಿತಿಯನಾಂತುದು ಗಗನ ಮಿದರೋ ।
ಳ್ಮಿತ ಮೆನಿಸಿದಾದ್ಯಂಶದರ್ಥಂ ಗೂಡಿ ಶೋಭಿಪುದು ॥ ೧೭ ॥

ಇದರ ದೆಶೆಯಿಂದಾಯ್ತು ವೇದದ ।
ಪದವಿಭಾಗಂ, ಸೂತ್ರಗಳ ಸಂ ।
ಘದ ಪರಸ್ಪರ ಚರ್ಚೆ ತವಸಿಗಳೆಲ್ಲರೊಂದಾಗಿ ॥

---

ಸಂಗತಂ—ಯುಕ್ತವಾದ ಸಂಬಂಧವನ್ನು, ಮತಿಯು+ ಉಲಿಯುದ—ಅಲುಗಾಡದಂತೆ.

೧೫ ಖೇಟ—ನಕ್ಷತ್ರವರ್ಗದಲ್ಲಿ ಚಂದ್ರಂಗೆ+ ಓಟವು+ ಅಧಿಕಂ ಕುಮುದಂ [ಬಿಳಿಯ ನೈದಿಲೆ] ಗಳಿಗೆ+ ಇವಂ ಕೂಟದೊಳಗೆ+ ಅಂತಃಕರವ—ಮನ ಬುದ್ಧ್ಯಾದಿಗಳೆಂಬ ಒಳಗಿನ ಕರಣಗಳ ಗುಂಪಿನಲ್ಲೆಲ್ಲ, ಸಗಾಟಂ—ಅತಿಶಯದಿಂದ ಕೂಡಿರುವ, ದೃಶ್ಯ—ವಿಷಯಗಳಲ್ಲಿಯೂ ಓಡಾಟವು+ ಈ ಮಾನಸಕೆ.

೧೬ ಗುಣರಾಗಿಗಳು—ವಿಷಯಪ್ರೇಮಿಗಳು, ಶಾಸ್ತ್ರಸಮಯ—ಶಾಸ್ತ್ರಕಾರರ ಸಿದ್ಧಾಂತಗಳನ್ನು ಕೈಬಿಟ್ಟಿರುವ. ವಿವೇ....ಶಾಲೆ—ತತ್ತ್ವವಿಚಾರಿಗಳು ನೆರದ ಗೋಷ್ಠಿಯಲ್ಲಿ, ಅವರು ನಡೆಸುವ ತತ್ತ್ವಜಿಜ್ಞಾಸೆಗಳಲ್ಲಿ

೧೭ ಶತಧೃತಿ—ಬುದ್ಧಿಗೊಡೆಯ ಬ್ರಹ್ಮದೇವನು, ಅವನ ಜಗತ್ಸೃಷ್ಟ್ಯಾದಿಗಳ ಕೃತ್ಯಕ್ಕೆ. ಚತುರರು+ ಎಣಿಸಲ್ಕೆ+ ಆರರು—ಹೀಗಾಗಿರಬಹುದೆಂದು ಯೋಚಿಸಲಾರರು. ಅಮರ+ ಇಜ್ಯಾದಿಗಳ್-ಇಂದ್ರಾದಿ ದೇವತೆಗಳಿಗೆ ಪೂಜ್ಯರಾದ ದೇವಗುರು ಮುಂತಾದವರು ಕೂಡ. ಹುತ....ಡೆದು—ಅಗ್ನಿಯ ಪಾದಾಂಶವು ಆಕಾಶದಲ್ಲಿ ಸೇರಿ ಬುದ್ಧಿಯು, ಜನ್ಮ....ಯನು+ ಆಂತುದು—ರೂಪುಗೊಂಡಿತು. ಇದರೊಳ್+ ಮಿತಮೆನಿಸಿದ+ ಆದ್ಯಂಶದ+ ಅರ್ಥಂ—ಅಗ್ನಿಯ ಪಾದಾಂಶವೆ ಬುದ್ಧಿಯಾಗಿ ಶೋಭಿಸುತ್ತಿರುವದು.

ಬದರಿಕಾರಣ್ಯದಲಿ ನಿಜ ತ ।
ತ್ತ್ವದ ವಿಚಾರವ ಮಾಡುತಿರುವಾ ।
ಗುದಿಸಿದಾಯಾ ಧಾತು ಮೂಲಕ ಭೇದಮತ ನಿಚಯಂ ॥ ೧೮ ॥

ಒಂದು ವಸ್ತುವಿನೊಡನೆ ಬಿಡದಿ ।
ನ್ನೊಂದು ವಸ್ತುವು ಕೂಡಿ ಭೋಗ್ಯತೆ ।
ಯೊಂದಬೇಕಾದರೆ ಮತಿಯ ಬಲವಿಲ್ಲದಾಗದದು ॥
ಹೊಂದಿಪರೆ ಮೇಣೆರಡು ವಸ್ತುಗ ।
ಳಂದವರ ಗುಣಮೇಳನಂ ಬಳಿ ।
ಸಂದಿರಲ್ಕೀ ಗಾಯ್ತುವಕ್ಕೆ ಗುಣಾಂತರಾವಾಪ್ತಿ ॥ ೧೯ ॥

ಇಲ್ಲವೇ ಮೊದಲಿರ್ದ ಗುಣಮೇ ।
ಪಲ್ಲವಿಪುದಿದು ತೋರದಿರೆ ಗುಣ ।
ದಲ್ಲಿ ನ್ಯೂನಾಧಿಕ್ಯಮಂ ದೋಷದಲಿ ವರ್ತಿಪುದು ॥
ಅಲ್ಲಿಗಲ್ಲಿಗೆ ಯೋಗದಿಂ ತೆರ ।
ಪಿಲ್ಲದೈದುವ ಕೇಡನರಿವರಿ ।
ವಿಲ್ಲದಿದ್ದರೆ ಕಾಣಲುಂಟೇ ಲೋಕದಲಿ ಜನರು ॥ ೨೦ ॥

ಇದಕೆ ತಾಮಸ ಪೊತ್ತರಿಸೆ ಸೇ ।
ರ್ವುದು ವಿವೇಕ ಶಿರೋಮಣಿಯೆ, ವೇ ।
ಗದಲಿ ಸಂಶಯಮುಂ ವಿಪರ್ಯಯಮುಂ ಪರಾಶ್ರಯಮುಂ ॥
ಹುದುಗದಿಹ ಸಂಭಾವನೆಯು ಮಿಂ ।
ತಿದು ತಿರ ದ್ರೋಹಂಗಳಿಂ ಗುರು ।
ಪದ ವಿಘಾತಗಳಿಂ ಶ್ರುತಿಗಳಿಂ ನಿಂದಿಸುವ ದೆಶೆಯಿಂ ॥ ೨೧ ॥

ಜನಜನಿತವಾಗಿರೆ ಪತಂಜಲಿ ।
ಮುನಿವರಂ ಪರಿಭಾಷೆಯೊಳಗೆಂ ।
ದನು ಮೊದಲ ಸೂತ್ರದಲಿ ಟೀಕೆಯನಾಲಿಸಲ್ಕಹುದು ॥
ವಿನಯು ಪರರಿಗಹಾರ್ಯ ನಿಶ್ಚಯ ।
ವನುಸರಿಸದಿರಲಿದನು ಸಂಶಯ ।
ಜನಿಸುವುದು ಮೇಣಿದರ ದೆಶೆಯಿಂ ಘೋರ ಭಯವಹುದು ॥ ೨೨ ॥

---

೨೦, ೨೧, ೨೨, ಪಲ್ಲವಿವುದು—ವಿಕಾಸವಾಗುವದು, ತೆರಪು+ಇಲ್ಲದೆ+ಐದುವ—ಬಿಡುವಿಲ್ಲದೆ ಹೊಂದುತ್ತಿರುವ, ಗೇಡನು+ಅರಿವ+ಅರಿವು+ಇಲ್ಲದಿದ್ದರೆ; ತಾಮಸವು+ಒತ್ತರಿಸೆ—ಮೇಲೆಬಿದ್ದು ಅಮುಕಿಕೊಂಡರೆ, ವಿಪರ್ಯಯ—ವಿಪರೀತಜ್ಞಾನ, ಪರಾಶ್ರಯ—ಸ್ವತಂತ್ರವಸ್ತುವಲ್ಲದ ಅಜ್ಞಾನ, ಹುದುಗದಿಹ—ಮರೆಮಾಜದ, ಪೂರ್ಣನಂಬಿಕೆಯಿಲ್ಲದ.

ಸ್ಥೈರ್ಯದಿಂ ಗುರುಜನರ ಪಾರಂ ।
ಪರ್ಯದಿಂ ತಾಂ ಬಂದ ಶಾಸ್ತ್ರದ ।
ವೀರ್ಯವಿದರಿಂ ಕೆಡದೆನುತ ಸಂಭಾವನೆಯ ನೋಡ ॥
ಆರ್ಯ ಕೇಳ್ವಿಪರೀತ ದತ್ತಣ ।
ಕಾರ್ಯವುಂ ನೋಡಾ ವಿಪತ್ತಿಗ ।
ಹಾರ್ಯ ಬೀಜವಿದೆಂದು ಪಾರ್ಥಂಗೊರೆದನಸುರಾರಿ ॥ ೨೩ ॥

ಅರಿಯದಿರುವುದು ಕೇಡು, ನಂಬಿಗೆ ।
ಬರದಿರುವುದೇ ಕೇಡು, ಕೇಡಿಂ ।
ಗೆರಡಿವಾಲಯ ವಾಡೊಡಂ ಕೇಳ್ಸಂಶಯಾತ್ಮನಿಗೆ ॥
ಪರದೊಳಾಶ್ರಯವಿಲ್ಲ ವಿಹದೊಳ ।
ಗಿರದು ಸುಖವೆಂತೆಂಬುದಿಲ್ಲೆಂ ।
ದೊರೆದನದರಿಂ ಬುದ್ಧಿಗತ ದೋಷದಲಿ ಘನದೋಷಂ ॥ ೨೪ ॥

ಯಾವುದೆನೆ, ಸಂದೇಹವದು; ಮೇ ।
ಣಾವದೆಸೆಯಿಂದ ಉದಿಪುದೆನಲು, ।
ಭವಾಳಿಯ ಪಾರಂಪರಿಯ ಬಳಿವಿಡಿದಸತ್ಯದಲಿ ॥
ಜೀವಿಸಿದ ದುರ್ವ್ಯಾಪೃತಿಯ ಸಂ ।
ಭಾವನೆಯ ನೆವದಿಂದ ಬಂದುದು ।
ಜೀವನಿಗಿದೇ ಬಂಧವೆಂದರು ದೇವಮುನಿವರರು ॥ ೨೫ ॥

ಮುತ್ತಿನಲಿ ಕೆಸರುದಿಸಿ ಬರಬರ ।
ಲೊತ್ತಿರುವಶುದ್ಧಾವರಣಗಳ ।
ಬಿತ್ತರಿಸಿ, ಕಳೆಗೆಡಿಸಿ ಕ್ರಯವುಂ ತಗ್ಗಿಸಿದ ತೆರದಿಂ ॥

---

ಸ್ಥಿರ–ಆತ್ಮದ್ರೋಹ, ಗುರು...ಘಾತ-ಪೂಜ್ಯಸಾಧುಸಂತರ ಪುಣ್ಯಾಶ್ರಮಗಳನ್ನು ಕೆಡಿಸಿದ್ದರಿಂದಲೂ ಮತ್ತು; ವಿನಯಪರರಿಗೆ–ಗುರುಶಿಕ್ಷೆ, ಅನುನಯವುಳ್ಳವರಿಗೆ. ಅಹಾರ್ಯ–ಸಂಶಯಕ್ಕೆಡೆಯಿಲ್ಲದಂತೆ ಸ್ಥಿರಗೊಂಡಿರುವ.

೨೩ ವೀರ್ಯಂ–ಪೂರ್ಣಗೊಂಡ ಜ್ಞಾನಬಲವು, ಇದರಿಂ–ಸಂಶಯದಿಂದ, ಕೆಡದು+ಎನುತ—ಎಂಬುದೇ ವಿಪತ್ತಿಗೆ+ಅಹಾರ್ಯ—ಗಟ್ಟಿಯಾದ, ಒರೆವನು—ಹೇಳಿದನು, ಅಸುರಾರಿ—ಶ್ರೀಕೃಷ್ಣನು.

೨೪ ಕೆಡಿಂಗೆ+ಎರಡು+ಇವು+ಆಲಯಂ+ಆದೊಡಂ–ಅನರ್ಥಗಳಿಗೆಲ್ಲಕ್ಕೂ ಇವೆರಡೇ ನೆಲೆಮನೆಗಳಾಗಿದ್ದರೂ, ಪರದೊಳು+ಆಶ್ರಯ–ಮುಂದಿನ ಸದ್ಗತಿಯಿಲ್ಲ, ಬುದ್ಧಿಯ ದೋಷಗಳಲ್ಲೆಲ್ಲ, ಘನ—ಅಧಿಕವಾದ.

೨೫ ಆವದೆಸೆ—ಯಾವದಿಕ್ಕಿನಿಂದ, ಉದಿಪುದು—ಹುಟ್ಟುವದು, ಭವಾಳಿ—ಹುಟ್ಟು ಹೊಂದುಗಳ ತೊಡಕಿನ ಸುಳಿಯಲ್ಲಿ ಸಿಕ್ಕಿಬಿದ್ದು, ಅಸತ್ಯದಲ್ಲಿ—ಕ್ಷಣಮಾತ್ರದಲ್ಲಿ ಭಂಗ

ಉತ್ತಮ ಗುಣಂಗಳನು ಪಾಪ ।
ಕ್ಕೊತ್ತರಿಸಿ ಹಸಗೆಡಿಸಿ ಫಲಗಳ ।
ಮೊತ್ತಮಂ ಸಂದೇಹವಿದು ಮಾಡಿದುದು ನಾಶವನು ॥ ೨೬ ॥

ಒಂದನಿನ್ನೊಂದಾಗಿ ತಿಳಿವುದು ।
**ಮುಂದಿರುವುದಂ** ನಂಬದಿರುವುದು ।
ಬಂದುದೆಲ್ಲಿಂದೆನುತ ಗುರುಗಳ ಮುಖದೆ ತಿಳಿಯಲ್ಕೆ ॥
ಸಂದೆಗದ ಬೇರಿಂದ ಮೊಳತ ವಿ ।
ದೆಂದು ಪೇಳ್ದರು ಸತ್ರಯಾಗದೆ ।
ವಿಂದರಾಲಿಸ ಲವರಿಗೊರೆದಂ ಸೂತನಿಂತೆಂದು ॥ ೨೭ ॥

ಚಿತ್ತಮಂ ಬಿಡದಾಳುವಂ ಪುರು ।
ಷೋತ್ತಮಂ, ಜಲತತ್ತ್ವದಂಶವು ।
ದೊತ್ತರಿಸೆ ಮುಖ್ಯಾಂಶಮಾದ ವಿಯತ್ತಿನಲಿ ಬಿಡದೆ ॥
ಉತ್ತಮಾಶಯ ಕೇಳು, ಪುಟ್ಟಿದು ।
ದುತ್ತರೋತ್ತರ ಕರ್ಮ ಫಲಗಳ ।
ಬಿತ್ತನೆಯ ಧಾನ್ಯಕ್ಕೆ ಕಣಜವಿದೆಂದು ಭಾವಿಪುದು ॥ ೨೮ ॥

ದುರಿತ ವಾಸನೆ ಕೆಲವು ಪುಣ್ಯದ ।
ಪರಿಮಳಂಗಳು ಕೆಲವು ಚಿತ್ತಾಂ ।
ಬರಕೆ ಹತ್ತಿರುತಿಹವು, ತಚ್ಚೇಲಕ್ಕೆ ತಂತುಗಳೆ ॥

---

ಪಡುವ ಇಂದ್ರಿಯಪ್ರಾಣಗಳನ್ನು ತೃಪ್ತಿಪಡಿಸುವದಕ್ಕೆಂದೆ ಜೀವಿಸಿಕೊಂಡಿರುವ. ದುವ್ರ್ಯಾಪೃತಿ—ದುರ್ವ್ಯವಹಾರದ ಫಲವಾಗಿ, ಇದೇ—ಈ ಸಂಶಯವೆಂಬುದೇ.

೨೬ ಬರಬರಲು+ಒತ್ತಿರುವ—ಸಮೀಪಿಸಿಬರುವ, ಅಶುದ್ಧಾವರಣ—ಪಾಚಿಯ ಮೇಲ್ಮುಸುಕುಗಳನ್ನು, ಒತ್ತರಿಸಿ—ವಿಸ್ತರಿಸಿ, ಕಳೆಗೆಡಿಸಿ—ಕಾಂತಿಯನ್ನು ಕುಗ್ಗಿಸಿ, ಪಾಪಕ್ಕೆ+ಒತ್ತರಿಸಿ—ನೂಕಿ, ಹಸಗೆಡಿಸಿ—ನಿರ್ಮಲತೆಯನ್ನು ಕೆಡಿಸಿಬಿಡುತ್ತ, ಪುಣ್ಯದಫಲಗಳ ರಾಶಿಯನ್ನೆಲ್ಲ ನಾಶ ಮಾಡುತ್ತಿರುವದು.

೨೭ ಒಂದನು+ಇನ್ನೊಂದಾಗಿ ಸಂದೆಗದ—ಸಂಶಯದ, ಮೊಳತವು—ಹುಟ್ಟಿಬಂದವುಗಳೆಂದು, **ಸತ್ರಯಾಗದೆ—** ದೀರ್ಘಕಾಲದ ಜ್ಞಾನಯಜ್ಞದ ಮರ್ಮವನ್ನೆಲ್ಲ, ವಿಂದರಾಲಿಸಲು—ಬಲ್ಲಶೌನಕಾದಿ ಋಷಿಗಳು ಮನಸ್ಸಿಟ್ಟುಕೇಳಲು.

೨೮ ಪುರುಷೋತ್ತಮಂ—ವಾಸುದೇವನು, ಜಲತತ್ತ್ವದ+ಅಂಶವು—ಪಾದಾಂಶವು, ಅದು+ಒತ್ತರಿಸೆ—ಸಮೀಪಿಸಿಬಂದು ಅದು. ಮುಖ್ಯಾಂಶಂ+ಆದ+ವಿಯತ್ತಿನಲ್ಲಿ—ಆಕಾಶದ ಅರ್ಧದಲ್ಲಿ ಸೇರಿ ಹುಟ್ಟಿಬಂದ ಈ ಚಿತ್ತವು.

೨೯ ....ಪರಿಮಳಂಗಳು-ಕೆಲವು ಪುಣ್ಯವಾಸನೆಗಳು, ಚಿತ್ತಾಂಬರಕೆ-ಚಿತ್ತವೆಂಬಬಟ್ಟೆಗೆ, ತತ್+ಚೇಲಕೆ—ಆ ಚಿತ್ತವೆಂಬ ಬಟ್ಟೆಗೆ, ತಂತು—ನೂಲು, ಮರಿಸಿರುವ— ಹೊಂದಿರುವ,

ಪರಿಪರಿಯ ವಿಷಯಾನುಭವವಮಂ ।
ವರಿಸಿರುವ ವಿಜ್ಞಾನಗಳವಂ ।
ಬೆರೆದಿರುವವೀ ವೆರಡು ತೆರದಲ್ಲಖಿಲ ವಿಧವುುಂಟು ॥ ೨೯ ॥

ಏಳು ಧಾತುಗಳಂ ಹಿಡಿದು, ಗುಣ ।
ಮೂಲವುಂ ನೆರೆವಿಡಿದು, ದಶಕರ ।
ಣಾಳಿಯಂ ಕಡು ಪಿಡಿದು ಬಾಲ್ಯಾದಿಕ ವಯಸ್ಸುಗಳಂ ॥
ತಾಳಿ, ಜಾಗ್ರತ್ಸ್ವಪ್ನ ಸುಪ್ತಿಯ ।
ಮೇಳಯಿಸಿ ಕರ್ಮಗಳನೈದಿ, ವಿ ।
ಶಾಲ ದೇಶಸ್ಥರ ನಿಜ ವ್ಯಾಪಾರವುಂ ತಳೆದು ॥ ೩೦ ॥

ಪುಟ್ಟುವವು ವಾಸನೆಗಳವರೊಳು ।
ಕೆಟ್ಟುಪೋಪವು ಕೆಲವು, ಕೆಲವವ ।
ರೊಟ್ಟೆಯಲಿ ಸೇರಿಹವು, ಕೆಲವಂಕುರಿಪ ವಡಗುವವು ॥
ತಟ್ಟ ನೇಳ್ವುದು, ಕೂಡೆ ತಲೆ ಯೆ ।
ತ್ತಿಟ್ಟಣಿಸುವದು, ವಿರಳವಹುದೆದೆ ।
ಗಟ್ಟುವುದು, ತಾಂ ಪೆರರ ನಂಬಿಹುದೊಡನೆ ನಂಬಿರದು ॥ ೩೧ ॥

---

ವಿಜ್ಞಾನಗಳು+ಅವಂ....ವವು+ಇವು+ಎರಡು ತೆರವು—ಸುಖದ ಅನುಭವ, ದುಃಖದ ಅನುಭವ ಎಂದು ಎರಡು ಬಗೆಯಾದ ಇಲ್ಲಿ....ಇವುಗಳಲ್ಲಿಯೆ ಜೀವರ ಅನುಭವಗಳೆಲ್ಲ ಅಡಕಗೊಂಡಿರುವವು.

೩೦ ಏಳುಧಾತು—ಅಸ್ಥಿ ಮಾಂಸ ಮಜ್ಜಾ ಮೇದಸ್ಸು ಸ್ನಾಯು ರಕ್ತ ಶುಕ್ಲಗಳನ್ನು ಹಿಡಿದು ಹುಟ್ಟಬಂದಿರುವ, ಗುಣಮೂಲ—ಪ್ರಕೃತಿಯ ಸ್ವರೂಪವಾದ ದೇಹಾದಿಗಳನ್ನು 'ನಾನು' ಎಂದು ಚೆನ್ನಾಗಿ ಗ್ರಹಿಸಿ, ಅವುಗಳಲ್ಲಿಯೆ ನೆಲೆನಿಂತು. ದಶಕರಣಾಳಿ—ದಶೇಂದ್ರಿಯ ಗಳನ್ನು, ಕಡುಪಿಡಿದು—ಬಿಗಿಯಾಗಿ ತನ್ನಲ್ಲಿ ಎಳೆದುಕೊಂಡು ಎಂದರೆ ಇವೆಲ್ಲವನ್ನೂ ಆತ್ಮ ನಲ್ಲಿ ಅಧ್ಯಾಸಮಾಡಿಕೊಂಡು, ಅವುಗಳ ಧರ್ಮಗಳಾದ. ಬಾಲ್ಯಾದಿ—ಬಾಲ್ಯಕೌಮಾರ ಪೌಗಂಡ ಕಿಶೋರ ಯೌವನ ಮುಪ್ಪುಗಳನ್ನೂ, ಇಂದ್ರಿಯಾಂತಃಕರಣಗಳ ಕಿವುಡು ಕುರುಡು ಮೂಕತ್ವಾದಿಗಳನ್ನೂ ಸಂಶಯ ನಿಶ್ಚಯ ಚಿಂತನ ಅಭಿಮಾನಗಳನ್ನೂ ತಾಳಿದವ ನಾಗಿ ಎಚ್ಚರಾದಿ ಅವಸ್ಥೆಗಳನ್ನು ಮೇಳೈಸಿ—ಜತೆಸೇರಿ, ಕರ್ಮಗಳನ್ನು ಐದಿ—ಹೊಂದಿ, ನಡೆಸುವ ಆಧ್ಯಾಸಿಕದ ಬಗೆಬಗೆಯ ವ್ಯಾಪಾರಗಳನ್ನೆಲ್ಲವನ್ನು. ತಳೆದು—ನಿಮಿತ್ತ ಮಾಡಿ ಕೊಂಡು ಆವಾಸನೆಗಳು.

೩೧ ಕೆಲವು+ಅವರ+ಒಟ್ಟೆಯಲಿ—ಒಟ್ಟನಗುಂಪಿನಲ್ಲಿ, ಇಟ್ಟಣಿಸುವವು—ಜತೆಗೂಡಿ ಎದುರಿಸುವವು, ವಿರಳವಹುದು+ಎದೆಗೆ+ಅಟ್ಟುವದು—ಮನಸ್ಸಿಗೆ ನೆನಪುಬಂದು ಬಡಿ ಯುವದು.

೩೨ ಭವಾಟವಿ—ಸಂಸಾರದ ಕಾಡಿನಲ್ಲಿ, ಪರಿಪಾಟಿ—ಅಭ್ಯಾಸವೆ, ತಾವು+ಐದಿ—ಅವು

ಕೋಟಿಕೋಟ್ಯಾವಧಿಕವಾಗಿ ಭ ।
ವಾಟವಿಯಲೀ ವಾಸನಾ ಪರಿ ।
ಪಾಟಿಯೇ ಪ್ರಾಬಲ್ಯವುಂ ತವ್ಮೊಳಗೆ ತಾವ್ಪೈದಿ ॥
ಧಾಟಿಯಂ ಮಾಡುವವು, ಮತ್ತಿವ ।
ರಾಟವೆಂತಿಹುದೆನಲು, ಕೆಸರಿನ ।
ಕೂಟದಲಿ ಗುಂಗುರುಗಳಿದ್ದಲ್ಲಿಯೆ ಚರಿಸುವಂತೆ ॥ ೩೨ ॥

ಇವಕೆ ಮೂಲಸ್ಥಲವೆ ಚಿತ್ತಂ ।
ಭವದ ಬೀಜಂಗಳು ವಿಚಾರಿಸ ।
ಲಿವು ಗುರುಗಳಭ್ಯರ್ಣವುಂ ಕಡುಭಕ್ತಿಯಿಂ ಸೇರಿ ॥
ಸವೆವ ತೆರದಿಂ ಸಂಸೃತಿಯ ರೋ ।
ಗವನು ಯತ್ನೀಕರಿಸುತಿರಲದ ।
ನಿವು ನಿಲಲ್ಬಿಡವೆಡೆಯೆಡೆಯೊಳಡಹಾಯ್ದು ಕೆಡಿಸುವವು ॥ ೩೩ ॥

ವಾಸನೆಯನುಳಿದೊಣಗಿ ರೂಪ ವಿ ।
ಲಾಸವುಂ ತೊಲಗಿರುವ ಕುಸುಮಗ ।
ಳೇಸಿರಲು ನಿರ್ಮಾಲ್ಯವೆಂದದ ಕಂಡು ಬಿಸುಡುವರು ॥
ವಾಸನೆಗಳಿರುವನ್ನಬರವೇ ।
ವಾಸವುಂ ಮಾಡಿಹುದು ನಾಭಿ ನಿ ।
ವಾಸದಲಿ ಚಿತ್ತಂ ಬಳಿಕ ಕಡ್ಡಿಗೆ ಕಡೆಯೆನಿಪುದು ॥ ೩೪ ॥

ಬಳಿಕ ಹಮ್ಮಿಂಗೊಡೆಯ ಚಂದಿರ ।
ನೆಳೆವೆರೆಯ ತಾಳಿದವ ನಾತನ ।
ಬಲದ ವೆಶೆಯಿಂ ದಿದಕೆ ಸಂಬಂಧಿ ಗ್ರಹಣ ಶಕ್ತಿ ॥

---

ಹೊಂದಿ, ಧಾಟಿ-ಹೃದಯವನ್ನೆ ಸೂರೆಗೊಳ್ಳುತ್ತಿರುವವು, ಮತ್ತು+ಇವರ+ಆಟಂ+ಎಂತಿಹುದು+ಎನಲು ಕೆಸರಿ....ಗಳು+ಎದ್ದಲ್ಲಿಯೆ—ಕೊಚ್ಚೆಯಬಳಿ ರೆಕ್ಕೆಯ ಸಣ್ಣಕೀಟಗಳು, ಕಣ್ಣುಗಳಿಗೆ ಮುತ್ತುವ ಕಿರುಸೊಳ್ಳೆಯ ನೊರಜುಗಳು ತಾವೆದ್ದಲ್ಲಿಯೇ ಸುತ್ತುಗಟ್ಟುತ್ತಿರುವಂತೆ; ಈ ವಾಸನೆಗಳೂ ತಾವೆದ್ದ ಚಿತ್ತದ ಬಳಿಯಲ್ಲಿಯೇ ಸುತ್ತಾಡುತ್ತಿರುವವು.

೩೩ ಗುರುಗಳ+ಅಭ್ಯರ್ಣಂ—ಸನ್ನಿಧಿಯನ್ನು ಸಂಸೃತಿ—ಸಂಸಾರ ಅದನು—ಆ ಪ್ರಯತ್ನವನ್ನು ಸ್ಥಿರವಾಗಿ ನಡೆಯಿಸಲು ಇವು+ಬಿಡವು+ಎಡೆ+ಎಡೆಯೊಳು+ಅಡಹಾಯ್ದು—ಹೆಜ್ಜೆ ಹೆಜ್ಜೆಗೂ ಈ ವಾಸನೆಗಳು ಅಡ್ಡಲಾಗಿ ಬಂದು.

೩೪ ....ಉಳಿದು—ಸುವಾಸನೆಯಿಲ್ಲದ ಕುಸುಮಗಳು+ಏಸಿರಲು—ಎಷ್ಟಿದ್ದರೂ ಆ ಹೂವುಗಳನ್ನು; ....ಇರುವ+ಅನ್ನಬರವೇ—ಅಲ್ಲಿಯುವರೆಗೇ.

೩೫ ಹಮ್ಮಿಂಗೆ+ಒಡೆಯ—ಅಧಿದೇವತೆಯು, ಚಂದಿರನ+ಎಳೆವೆರೆಯ—ಬಾಲಚಂದ್ರನನ್ನು ತಾಳಿದ ಶಿವನು, ಸಂ....ಶಕ್ತಿ—ಅಹಂತೆಯ ಮತ್ತು ಮಮತೆಯ ದೇಹಾದಿ

ಇಳೆಯೊಳೊಡದೊಡಕಿಂದ ಗಗನಂ ।
ಬಳಸೆ ಮುಖ್ಯಾಂಶದಲಿ ಜನ್ಮಂ ।
ದಳೆದುದಿದು ಸೂಕ್ಷ್ಮಾಂಗದಲಿ ಸುವಿವೇಕಿ ಕೇಳೆಂದ ॥ ೩೫ ॥

ಸತ್ವಗುಣವಿದರಲ್ಲಿ ಸಂಯೋ ।
ಗತ್ವಮಂ ಪಡೆದಂದು ಪರವ ।
ಸ್ತುತ್ವಮಂ ತಾ ಮುಸುಕಿ ಜೀವತ್ರಯುವ ಮಾಡಿದುದು ॥
ತತ್ತ್ವವಿದುರನೆ ಕೇಳು, ರಾಜಸ ।
ಸತ್ವಮುಳವಟ್ಟಂದು ಲಿಂಗ ತ ।
ನುತ್ವದೋಳ್ಸರ್ವಾವಯವಗಳ ತಾಗಿ ಮುತ್ತಿದುದು ॥ ೩೬ ॥

ತಾಮಸಸ್ಥಿತಿ ಯಿದರೊಳಗೆ ವಿ ।
ಶ್ರಾಮಮಂ ಪಡೆದಂದು ಧಾತು ।
ಸ್ತೋಮಮುಳ್ಳ ಸ್ಥೂಲದೇಹವ ನೊಡನೆ ನೆಮ್ಮಿದುದು ॥
ಈ ಮಿತಿಯೊಳಿರದಿಲ್ಲ ಅಧಿಕ ।
ಪ್ರೇಮ ಮೊಡಗೂಡಲ್ಕೆ ಪುತ್ರ ।
ಭಾಮಿನಿಯರುಂ ತಾನೆನುವ ಘನ ಮೋಹ ಮುಂಟದುದು ॥ ೩೭ ॥

ಈಯಹಂಕಾರಕ್ಕೆ ಮಮತಾ ।
ಜಾಯೆ ಬಂದಳು ತಿಂದುಳಿದ ಕ ।
ಜ್ಜಾಯಮಂ ತಿನಲೆಂದು ಪಡೆದಳು ಮಕ್ಕಳೀರ್ವರನು ॥
ರಾಯರಾಯರ ಸಭೆಯೊಳಗೆ ಕ ।
ಟ್ಟಾಯಮಂ ತೋರಿಸುವ ಬಿಡದ ।
ನ್ಯಾಯಮಂ ವರ್ತಿಸುವ ಡಂಬಂ ದರ್ಪನೆಂಬವನು ॥ ೩೮ ॥

---

ಹೊರಗಿನ ವಸ್ತುಗಳಲ್ಲಿ ನಾನು, ನನ್ನದು—ಎಂದು ತಿಳಿಯುವ ಬಲವು ಬಂದಿರುವದು. ಇಳೆಯೊಳು+ಭೂಮಿಯೊಳು, ಒಡೆದ+ಒಡಕಿಂದ—ಆಕಾಶದಲ್ಲಿ ಸೇರಿದ ಪಾದಾಂಶದಿಂದ, ಇದು—ಈ ಅಹಂಕಾರವು, ಜನ್ಮಂ+ತಳೆದುದು—ಜನ್ಮಿಸಿತು.

೩೬-೩೭ ಪರವಸ್ತುವನ್ನು ಮರೆಯಿಸಿ ಮೇಲೆದ್ದು ಕಾಣುವ ವಿಶ್ವಾದಿ ಜೀವರಲ್ಲಿ ಈ ಅಹಂಕಾರವು ಸತ್ವಗುಣದಿಂದ ತಾನೆಂಬ ಅರಿವನ್ನು ಕೂಡಿತು, ರಜೋಗುಣದಿಂದ ಸೂಕ್ಷ್ಮ ಶರೀರದ ಅವಯವಗಳೊಡನೆ ತಗುಲಿಕೊಂಡಿತು, ಹೀಗೆಯೇ ತಮೋಗುಣದಿಂದ ಸಪ್ತ ಧಾತುಗಳ ರಾಶಿಯಾದ ಈ ಸ್ಥೂಲದೇಹವನ್ನು ಸಂಜಿಕೊಂಡಿತು, ಈ ಮಿತಿಯೊಳು—ಈ ಸ್ಥೂಲಶರೀರದ ಕಟ್ಟಿನಲ್ಲಿಯೆ ಇರದೆ, ಇಲ್ಲಿ—ಈ ದೇಹದಲ್ಲಿ, ಪ್ರೇಮಂ+ಒಡಗೂಡಲ್ಕೆ—ಬಂದುಜತೆಗೂಡಲು.

೩೮ ಜಾಯೆ—ಹೆಂಡತಿ, ಮಕ್ಕಳು+ಈರ್ವರನು—ಇಬ್ಬರನ್ನು, ಕಟ್ಟಾಯ—ಬಿಣ ಪ್ರತಿಷ್ಠೆಯನ್ನು ದರ್ಪನು—ಗರ್ವನು.

ಬಂದುದಧ್ಯಾಸದ ಬಲದಲೇ ।
ದಂದುಗಂ ಜೀವಂಗೆ, ಜೀವ ನೊ ।
ಳೊಂದಿದಧ್ಯಾಸಕ್ಕೆ ದೇಹವನಂತರಂಗವನು ॥
ಮುಂದುವರಿದನು, ಬಂಧಿಸಿದ ಹಂ ।
ಮಿಂದಲೇ ಘನವಾದ ಶಕ್ತಿಯು ।
ಬಂದುದಿದರಿಂದಾಯ್ತು ಭವಮಾಲಿಕೆಗೆ ನಿಜತಂತು ॥ ೩೯ ॥

ತನಗೆ ಬೇಕೆಂದೆಂಬ ಶುಭ ಭೋ ।
ಜನಮುನುಂ ಪಟ್ಟಾಂಬರಮುನುಂ ।
ವಸಿತೆಯರುಂ ನವಧಾನ್ಯಮುಂ ಪಶು ಹಯ ಗಜಾಳಿಗಳ ॥
ಮನೆಯನುಂ ವೃತ್ತಿಯನು ಸುಮನೋ ।
ವನಮುನುಂ ಕ್ಷೇತ್ರವನು ನಿಶ್ಚಲ ।
ವೆನಿಪ ಬಹುತರ ಭೂರಿ ಭಂಡಾರವನು ರಾಜ್ಯವನು ॥ ೪೦ ॥

ಯಾರಿದಕೆ ಭೋಕ್ತಾರರೆಂಬ ವಿ ।
ಚಾರ ವೆಳ್ಳನಿತಿಲ್ಲದಂತಿದ ।
ಕೋರುಗುಡಿಸಿತು ಕಮಲ ಪೀಠನ ಕೋಶ ಮಧ್ಯದಲಿ ॥
ಧೀರತರ ಸಂಸಾರ! ಜೀವಂ ।
ಗೀ ರುಚಿಯನುಂಡುಂಡು ಬುದ್ಧಿ ವಿ ।
ಕಾರ ಮಾದುದು, ಚಿತ್ತದಲಿ ವಾಸನೆಗಳೊಟ್ಟಾಯ್ತು! ॥ ೪೧ ॥

ತಿರುಗುತಿರ್ದುದು ಮಾನಸಂ ಕುಂ ।
ಬರನ ತಿಗುರಿಯ ಹಾಗೆ, ದುಃಖಗ ।
ಳುರವಣಿಸುತಿರ್ದರು ಮಿದಕೆಚ್ಚರವದೇನುಂಟೆ ॥

---

೩೯ ದಂದುಗಂ–ತೊಂದರೆ, ಜೀವನೊಳು+ಒಂದಿದ–ಸರಿಹೊಂದಿಸಿ ಆಗಿರುವ, ದೇಹವನ್ನು+ಅಂತರಂಗವನು—ಸ್ಥೂಲಸೂಕ್ಷ್ಮಶರೀರಗಳನ್ನು 'ನಾನು' ಎಂದು, ಅವುಗಳಲ್ಲಿ ಮುಂದುವರಿದ ಈ ಅಧ್ಯಾಸದಿಂದಲೇ ಘನ...ಬಂದುದು-ಜೀವತ್ವವು ದೃಢಮೂಲವಾಯಿತು, ಭವಮಾಲಿಕೆ–ಹುಟ್ಟುಹೊಂದುಗಳನ್ನು ಪೋಣಿಸಿಕೊಂಡಿರುವ ಭವಮಾಲೆಗೆ, ನಿಜತಂತು–ಇದೇ ಒಂದು ದಾರವಾಯ್ತು, ಅಧ್ಯಾಸದಿಂದಲೇ ದುಃಖಗಳೆಲ್ಲವು ಉಂಟಾಗುವದು ಹೇಗೆಂಬುದನ್ನು ವಿವರಿಸುತ್ತಿದಾರೆ:—

೪೦ ಪಟ್ಟಾಂಬರಂ—ಜರಿಯಿರುವ ಪಟ್ಟೆಪೀತಾಂಬರಗಳು, ಪಶು—ದನಕರಾವುಗಳು, ಹಯ —ಕುದುರೆಗಳು, ಗಜಾಳಿಗಳುಂ—ಆನೆಗಳ ಪಡೆಗಳು, ವೃತ್ತಿಯನು–ಜೀವನಮಾರ್ಗಗಳು, ಸುಮನೋವನ—ಕಂಗೊಳಿಸುವ ಹೂದೋಟಗಳು, ಕ್ಷೇತ್ರ—ಹೊಲಗದ್ದೆಗಳು.

೪೧ ಭೋಕ್ತಾರರು–ಭೋಗಪಡತಕ್ಕವರು, ವಿಚಾರವು+ಎಳ್ಳನಿತು+ಇಲ್ಲದಂತೆ+ಇದಕೆ+ಓವು+ಗುಡಿಸಿತು—ಕ್ರಮಕ್ರಮನಾಗಿ ವಿಷಯಗಳ ಸವಿಯನ್ನು ನೆತ್ತಿಗೇರುವಂತೆ

ಬರುವ ದುಃಖಗಳೆಲ್ಲವಂ ಹಿಂ ।
ದಿರಿಸಿ ಮುಂದಕೆ ಮುಂದಕೊಂದು ।
ತ್ತಿರುವ ಸುಖದಲಿ ದೃಷ್ಟಿಯಲ್ಲದೆ ಬೇರೆಮತಿಯಿಲ್ಲ ॥ ೪೨ ॥

ಮಗನಂ ತಾನೆಂದೆನಲಾ ಮಗ ।
ನಿಗೆ ಮದುವೆಯಂ ಮಾಡಿ ತಂದಾ ।
ಕೆಗೆ ತನಗೆ ಸಂಭೋಗವುಂಟೇ ಯಾವ ನಾಡಿನಲಿ ॥
ಬಗೆಯೆ ಹೊರಗಿಹ ಕಾಯ ಕರಣಾ ।
ದಿಗಳ ನಾನೆಂದೆನಿಸಿದೀ ಹ ।
ಮ್ಮಿಗೆ ಸಿಲುಕಿ ಮಂಕಾದ ನೀ ಕಾಯದಿ ಚಿದಾಭಾಸಂ ! ॥ ೪೩ ॥

ಹಮ್ಮಿನೊಳಗಿಹ ಮುಖ್ಯದೋಷವೆ, ।
ಹಮ್ಮಿನೊಳಗಿಹ ಮುಖ್ಯ ತಾಪವೆ, ।
ಹಮ್ಮಿನೊಳಗತಿ ಮುಖ್ಯವಾಗಿಹ ಕೇಡೆ ನೋಡಿದರೆ ॥
ಸಮ್ಮುಖವ ಪಡೆದಿರ್ದ ದೃಶ್ಯವ ।
ನೆಮ್ಮಿ ತಾನೆಂದಿರ್ದುದಾವುದು ।
ಕೆಮ್ಮದೀ ಜಂತುಗಳಿಗದು ದೈವಿಕ ವೆನಿಸುತಿಹುದು ॥ ೪೪ ॥

ಇಂತಿದುತ್ತಮ ಖಂಡ ದೈವಿಕ ।
ಮಂ ತಳೆದ ತಾಪಂ, ಸಮಸ್ತದೆ ।
ನಿಂತುದಾವಾಗಾವ ವಾರ್ತೆಗಳಾತ್ಮ ಯತ್ನವನು ॥
ಮುಂತಿಡದೆ ಕೇಳಿಕೆಗೆ ಬಂದು ನಿ ।
ರಂತರ ಮನೋವ್ಯಥೆಯ ತುಷ್ಟಿಯ ।
ಪಂತಿಯಿಂ ಕೃಚ್ಛ್ರಂ ಗಳೋಘದೆ ತಂದು ಸಾರ್ಚುವವು ॥ ೪೫ ॥

---

ಕುಡಿಸಿಬಿಟ್ಟಿತು! ಕಮಲ....ಕೋಶ—ಬ್ರಹ್ಮಾಂಡ ಕೋಶವಾದ ಈ ಜಗತ್ತಿನಲ್ಲಿ.

೪೨-೪೩-೪೪ ದುಃಖಗಳು+ಉರ....ರ್ದರು—ಬಿಡುವಿಲ್ಲದಂತೆ ತನ್ನಮೇಲೆಬಂದು ಸವಾರಿ ಮಾಡುತ್ತಿದ್ದರೂ; ಬಗೆಯೆ—ವಿಚಾರಿಸಲು, ಹೊರಗಿಹ—ತನಗಿಂತ ಬೇರಾದ ಕಾಯ—ಶರೀರ, ಕರಣಾದಿ—ದಶೇಂದ್ರಿಯಂಗಳನ್ನು; ....ಕೇಡೆ—ಅಹಂಕಾರದ ಮುಖ್ಯ ದುಃಖ ಯಾವದೆಂದು, ಸಮ್ಮು....ದಾವುದು—ಎದುರಾಗಿ ಕಾಣುವ ದೇಹಾದಿಗಳನ್ನು 'ನಾನು' ಎಂದು ನಂಬಿಕೊಂಡಿರುವದೇ ಕೆಮ್ಮದೆ—ಯೋಚಿಸದೆ.

೪೫ ಇಂತು+ಇದು+ಉತ್ತಮ ಖಂಡ—ಅಂತಃಕರಣಚತುಷ್ಟಯದ ದೈವಿಕತಾಪವು ಎಲ್ಲರಿಗೂ ಉಂಟು. ಈಗ ಜ್ಞಾನೇಂದ್ರಿಯಂಗಳೆಂಬ ಮಧ್ಯಮ ಖಂಡದ ತಾಪವನ್ನು ವಿವರಿಸುತ್ತಿದಾರೆ- ಆತ್ಮಯತ್ನ....ತಿಡದೆ—ತನ್ನ ಪ್ರಯತ್ನವಿಲ್ಲದೆ, ಮನೋವ್ಯಥೆಯನ್ನೂ; ತುಷ್ಟಿ.... ಕೃಚ್ಛ್ರಂಗಳ+ಓಘದೆ—ತೃಪ್ತಿಯನ್ನು ಭಂಗಪಡಿಸುವ ಪಂಕ್ತಿಯಿಂದ ವಿಪತ್ತುಗಳ ಪರಂಪರೆಯನ್ನೂ ತಂದು, ಸಾರ್ಚುವವು—ಮುಂದೊಡ್ಡುವವು.

ಕೇಳಿಕೆಯೊಳೆರಡುಂಟು ಬಿಡದೇ ।
ಗಾಳಿವಾತುಂ ಪೊಗಳುವುದು ಮಿದ ।
ರೇಳಿಗೆಯ ಪಾಂಗಿನಲಿ ನಾಲ್ಕಾಗೆಸವುತಿರುತಿಹುದು ।
ಕೇಳಿಕೆಯು ಸತ್ಯೋಕ್ತಿಯೆಂದನೃ ।
ತಾಲಪನ ವೆಂತೆಂದವಾಂತರ ।
ಶೀಲ ವಾಕ್ಯೆಂದೌದ್ಯಮಿಕ ಮೆಂತೆಂದು ಶಾಸ್ತ್ರದಲಿ ‖ ೪೬ ‖

ಇರುವ ದಿರುವಂತುಸುರ್ದರದು ಸ ।
ತ್ಪುರುಷರಿಂ ಸತ್ಯೋಕ್ತಿ ಯೆನಿಸುವು ।
ದಿರದುದಂ ಪೇಳಿದೊಡ ಮುಂಟೆಂದನೃತ ವಾಕ್ಯವದು ‖
ಪುರುಷರಾಚರಿಸಲ್ಕೆ ಯಾಗಾಂ ।
ತರವ ಪರಲೋಕದಲಿ ಭೋಗಂ ।
ದೊರಕೊಳುವುದೆನುವ ದಿದವಾಂತರ ವಾಕ್ಯವೆನಿಸುವುದು ‖ ೪೭ ‖

ವಿವಿಧ ವಸ್ತುಗಳಲ್ಲಿರುವ ವಾ ।
ಸ್ತವ ಗುಣಂಗಳ ಪೊಗಳಿ, ಮೇಣವ ।
ರಿವರ ಸಂಯೋಗದಲಿ ಪುಟ್ಟುವವೀ ಗುಣಗಳೆಂದು ‖
ಸ್ತವಮನಾಚರಿಸುವುದೆ ನಾಲ್ಕನೆ ।
ಯ ವಚನ ಮಿದುದ್ಯೋಗ ಮಾಡಿಪು ।
ದವನಿಯೊಳಗಿದ ನರ್ಥವಾದ ವೆನುತ್ತ ಪೇಳುವರು ‖ ೪೮ ‖

ಕಂಡುದುಂ ಕಣ್ಣಾರ ಬಾಯೊಳ ।
ಗುಂಡುದುಂ ಮನದಣಿಯೆ ಇರಲಿವ ।
ರಂಡೆಯಂ ಸೇರಿರದ ವಸ್ತುಗಳೊಳಗೆ ರಾಗವನು ।

---

೪೬ ಗಾಳಿವಾತುಂ–ಗಾಳಿಗೆತ್ತೂರುವ ಮಾತುಗಳೆಂದೂ, ಪಾಂಗಿನಲಿ–ಅದರಂತೆಯೇ ನಾಲ್ಕು ಬಗೆಯಿಂದ, ಎಸವುತ—ಶೋಭಿಸುತ್ತ, ವಾಕ್ಯ+ಎಂದು+ಔದ್ಯಮಿಕಂ+ಎಂತೆಂದು–ಹೇಗೆಂದರೆ—

೪೭ ಉಸುರ್ದರೆ—ಹೇಳಿದರೆ ಅದು, ....ಎನಿಸುವದು+ಇರದುದಂ—ಇಲ್ಲದ್ದನ್ನು ಪೇಳಿದೊಡಂ+ಉಂಟು+ಎಂದು.

೪೮ ಪೊಗಳಿ—ಹೊಗಳಿ, ಮೇಣವರ+ಇವರ–ಅದರಿದರ, ಸ್ತವಮನು+ಆಚರಿಸುವದೆ—ಹೊಗಳುವದೆ, ಅವನಿ—ಭೂಮಿಯೊಳಗೆ, ಉದ್ಯೋಗ—ಕರ್ಮ ಮಾಡಿಸುವ ಈ ಔದ್ಯಮಿಕ ವಾಕ್ಯವೆ ಅರ್ಥವಾದ ಎನಿಸುವದು.

೪೯ ದಣಿಯೆ+ಇರಲು—ಮನಸ್ಸು ತೃಪ್ತಿ ಪಡುವಂತಿದ್ದರೂ ಬಹುವಾಗಿದ್ದರು ಇವರ+ಅಂಡೆಯಂ–ನಳಿಕೆಯನ್ನು, ಇವುಗಳಂತೆ ಅನುಭವಕ್ಕೆ, ಕಂಡಿತರ ಫಲ–ಸೊಗಸಾಗಿ ಬಣ್ಣಿಸುವ, ಮಂಡಲಂ–ಸಮೂಹ.

ಕೊಂಡುಬಂದೀವುದು ಧರಿಸಿ ತಾಂ ।
ಪಂಡಿತರ ಫಲವಾದ ವಾಕ್ಯದ ।
ಮಂಡಲಂ ತಾಪಕ್ಕೆ ಮೂಲವಿದೇ ವಿಚಾರಿಸಲು ॥ ೪೯ ॥

ಹೊರಗೆ ತಿರುಗುವ ವಾಯು ಚಳಿಯಂ ।
ವೆರಸಿ ನೀರಿಂ ಕೂಡಿ, ಚರ್ಮ ।
ಕ್ಕಿರದೆ ದುಃಖವ ನೀವುದಂತಃಸ್ಥಿತಿಯ ಪಡೆದಿರುವ ॥
ಮರುತವೇ ಪ್ರಾಣಾದಿ ರೂಪವ ।
ಧರಿಸಿ, ಭುಕ್ತಾನ್ನೋದಕಂಗಳ ।
ನಂಗಿಸುವುದೀ ದೇಹಕಾ ರಸವನ್ನು ಪತ್ತಿಪುದು ॥ ೫೦ ॥

ನಾಗವಾಯು ಪ್ರಮುಖಗಳೆ ಚ ।
ನ್ನಾಗಿ ಕಾಯದ ಕೃತ್ಯದಲ್ಲಿ ನಿ ।
ಯೋಗಿಸಿರುವವು, ಮರಳಿ ವೈರಂಭಾದಿ ವಾಯುಗಳು ॥
ಯೋಗಿಸಿಹವಂತಃಕರಣದೆ ವಿ ।
ಯೋಗಮಂ ವಿಷಯಂಗಳಲಿ ಸಂ ।
ಯೋಗಮಂ ಮಾಡಿಪವು ಮಾನಸ ಮುಖ ಚತುಷ್ಟಯಕೆ ॥ ೫೧ ॥

ಭುಕ್ತ ಪೀತಾನ್ನೋದಕಂಗಳು ।
ಪಕ್ತಿಯಂ ಪಡೆವಾಗ ಕೆಡಲುಂ, ।
ಭುಕ್ತಿಕಾಲದೊಳದ ನರಗಿಪಗ್ನಿಯಲಿ ನಿಜವಾದ ॥
ಶಕ್ತಿಯಿಲ್ಲದೆ ಯಿರಲು ಮಿಾಪ್ರಾ ।
ಣೋಕ್ತ ಧರ್ಮಂಗಳು ವಿಕಾರ ।
ವ್ಯಕ್ತಿಯಂ ಪಡೆಯಲ್ಪಡುವ ವಿವರಿಂದಹುದು ತಾಪಂ ॥ ೫೨ ॥

ತನುವಿನೊಳಗಾಲಸ್ಯಮೇ ಸಂ ।
ಜನಿಸಿದೊಡ ಮಾತ್ಮೀಯ ದೋಷಂ ।
ತನತನಗೆ ವಿಕರಿಸಿದೊಡಂ, ನಾಗಾದಿ ವಾಯುಗಳ ॥

---

೫೦ ವೆರಸಿ—ಬೆರಸಿಕೊಂಡು, ದುಃಖವನು+ಈವುದು—ಕೊಡುವದು ಇನ್ನು+ಅಂತಃಸ್ಥಿತಿಯ-ದೇಹದ ಒಳಗಡೆಯಿರುವ, ಮರುತ-ವಾಯು, ಭುಕ್ತ+ಅನ್ನ+ಉದಕಂಗಳನ್ನು-ಈ ದೇಹಕೆ+ಆ ರಸವನ್ನು, ಪತ್ತಿಪುದು—ಸಮೀಪಿಸಿ ತಂದುಹತ್ತಿಸುವದು.

೫೧ ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ ಎಂಬೀ ಉಪವಾಯುಗಳೂ, ಕಾಯದಕೃತ್ಯದಲ್ಲಿ—ಶರೀರದ ಚೇಷ್ಟೆಗಳಲ್ಲಿ ನಿಯಮಿಸಲ್ಪಟ್ಟಿವೆ, ಅಂತಃಕರಣವಲ್ಲಿ ಯೋಗಿಸಿಹವು—ಸಂಬಂಧಿಸಲ್ಪಟ್ಟಿರುವವು, ಮುಖ—ಮುಂತಾದ ನಾಲ್ಕಕ್ಕು

೫೨ ಭುಕ್ತ+ಪೀತ—ಉಂಡು ಕುಡಿವ ಅನ್ನಪಾನಾದಿಗಳು, ಪಕ್ತಿಯಂ—ಪಾಕವನ್ನೂ ಭುಕ್ತಿ—ಊಟಮಾಡಿದಕಾಲದಲ್ಲಿ ತನಗೆ ಹಸಿವಿಲ್ಲದಿದ್ದರೂ. ವಿಕಾರವ್ಯಕ್ತಿಯಂ—ಕೆಟ್ಟು

ಜನಜನಿತ ಕೃತ್ಯಂ ನಡೆಯದಿದ |
ನನುಸರಿಸಿ ಸಂತಾಪ ಮುದಯಿಪು |
ದನುಭವಕ್ಕೆ ವಿರೋಧವಾವ ಪದಾರ್ಥದಿಂದಹುದೊ || ೫೩ ||

ಅಂದಿಗೀ ಚಿತ್ತದಲಿ ಬೇಗುದಿ |
ಯೊಂದುವದು ಮೇಣದರುರಿಯ ಮನ |
ಕೋಂದಿಪುದು, ಮಾನಸದ ಧಾವನ ಮಾವ ಬೇಸರಮಂ ||
ತಂದುಕೊಡುವುದು ಚಿತ್ತಕೀ ಬಗೆ |
ಯಿಂದ ಕಾರ್ಯದೊಳರ್ಥ ನಿಶ್ಚಯ |
ವೊಂದದಿರೆ ಮಂಕಾದ ದುರ್ಬುದ್ಧಿಯು, ಬಳಿಕ್ಕಿದನು || ೫೪ ||

ಸೇರಿ ಫಲಮಂ ಪಡೆಯದಿಹ ಹಂ |
ಕಾರಮೇ ಬೆಂಡಾಗಿ ಕಾಣದ |
ದಾರಿಯಲಿ ಪೋಗುತ್ತಿರುವ ಪೋಲಿಗನ ಹಾಗಿಹುದು ||
ಬೇರೆಬೇರಿವರವರ ಚೇಷ್ಟಾ |
ಕಾರಿಯವ ಮಾಡುತ್ತಲಿರುತಿಹ |
ಮಾರುತರೆ ವೈರಂಭಮುಖ ರಿವರಿಂದಹುದು ತಾಪಂ || ೫೫ ||

ನೋಟವುಂ ನಡಸುವನೆ ರವಿಯವನ |
ನಾಟದಲ್ಲಿ ಮಹೋಷ್ಣಮಂ ಸುಕೃ |
ಶೀಟವುಂ ಹಿಮವುಂ ಸಮರ್ಥಿಪ ಪುಷ್ಪಸಮಯಾದಿ ||

---

ಹೋಗಿರುವವು.

೫೩ ತನುವಿನೊಳಗೆ+ ಆಲಸ್ಯಮೇ— ರೋಗಾದಿಗಳು ಆತ್ಮೀಯ— ತನ್ನಪ್ರಾಣಾದಿ ವಾಯುಗಳಲ್ಲಿ ದೋಷವು ಬಂದು, ಅವು ಕೆಟ್ಟು ವಿಕಾರವನ್ನು ಹೊಂದಿದ್ದರೂ. ಜನಜನಿತ– ಎಂದಿನಂತೆ ಶರೀರದಲ್ಲಿ ನಡಿಯುವ ಆ ನಾಗಾದಿವಾಯುಗಳ ಪ್ರಸಿದ್ಧಕ್ರಿಯೆಗಳು.

೫೪ ಬೇಗುದಿ– ತಾಪವು, ಒಂದುವದು– ಬಂದು ಸೇರುವದು, ಮೇಣದರ+ ಉರಿಯ ಮನಕೆ+ ಒಂದಿಪುದು– ತಂದು ಕೂಡಿಸುವದು, ಧಾವನಂ– ಓಡುವಿಕೆ ಸಂಚಾರವು. ಆವ– ಯಾವ ದುಃಖವನ್ನು ನಿಶ್ಚಯಂ+ ಒಂದಿದರೆ– ತನ್ನಲ್ಲಿ ಹೊಂದಿರಲು ಬಳಿಕ+ ಇದನು– ಬುದ್ಧಿಯೂ ಚಿತ್ತವೂ– ಎಂಬ ಈ ಎರಡನ್ನು–

೫೫ ಬೆಂಡಾಗಿ– ತನ್ನ ಅರಿವಿಲ್ಲದ್ದಾಗಿ ಪೋಲಿಗನ– ಪಟಿಂಗನ ಬೇರೆಬೇರೆ+ ಇವರ+ ಅವರ– ಈ ಮನ ಬುದ್ಧಿ ಚಿತ್ತ ಅಹಂಕಾರಗಳ ಚೇಷ್ಟಾಕಾರಿಯವ– ಚೇಷ್ಟೆಯ ಭಿನ್ನಭಿನ್ನ ಗಳಾದ ಕಾರ್ಯಗಳನ್ನು.

೫೬ ರವಿಯು+ ಅವನ+ ಆಟದಲ್ಲಿ ಓಡಾಟದ ಸಂಚಾರಕಾಲದಲ್ಲಿ, ಮಹೋಷ್ಣಮಂ– ಬೇಸಿಗೆಯನ್ನೂ ಸುಕೃಶೀಟವುಂ– ಮಳೆಯನ್ನೂ ಹಿಮವುಂ– ಚಳಿಯನ್ನೂ ಸಮರ್ಥಿಪ– ಉಂಟುಮಾಡುವ, ಪುಷ್ಪ…ಪಾಟವ+ ಋತುಗಳು+ ಆರು+ ಎಸವವು– ವಸಂತಾದಿ ಆರು

ಪಾಟವರ್ತುಗಳಾರೆಸವವವ ।
ರೋಟದಲಿ ದುಷ್ಕಾಲದಿಂ ಗ್ರಹ ।
ಕೂಟಮೇ ವಿಷಮಿಸಲು ದೇಹಂಗಳಿಗೆ ನೋವಹುದು ॥ ೫೭ ॥

ಗ್ರಹಪತಿಗೆ ಪರ್ವದಲಿ ರಾಹು ।
ಗ್ರಹಣ ಮಾಗಲು ಕೆಡುವುದು ಧರೋ ।
ದ್ವಹನಮಾಂತಿಹ ಧಾನ್ಯಗಣ ಪಿದರಂತೆ ಗರ್ಭಿಣಿಯರು ॥
ಅಹಹ! ಶಿಥಿಲಾವಯವ ಪುತ್ರ ನಿ ।
ವಹಮನಾನುವರಾಗ ನೋಡ ।
ಲ್ಬಹುದು ಕಣ್ಣಿಗೆ ಮಾಂದ್ಯ ಮಾಕ್ಷಣದಲ್ಲಿ ತಪ್ಪದಲೆ ॥ ೫೮ ॥

ವರುಣನಿಂದಾವಾವುದಪ್ಪುದು ।
ದುರಿತ ಫಲಮೆನೆ, ಮೊದಲ ಮೇಘದೊ ।
ಳುರವಣಿಸಿ ವರ್ಷಿಸಿದ ನೀರಿನ ಮೂಲದಿಂ ತುಂಬಿ ॥
ಹೊರಳುತಿಹ ಬಾವಿಗಳ ಕೊಳಗಳ ।
ಸರಗಳ ತಟಾಕಗಳ ಪಲ್ವಲ ।
ಶರಗಳಲಿ ಮೃತ ವಿಷಕ್ರಿಮಿಗಳಿಂ ದೋಷಮುಡಿಸಿಹುದು ॥ ೫೯ ॥

ಮೂರುದಿನದೊಳಗದನು ಕೊಂಡರೆ ।
ಘೋರತರ ರೋಗಂಗಳುದಿಪವು; ।
ನೀರಿನಲ್ಲಿಹ ಶೈವಲಮೆ ಮೇಣದಕೆ ಘನದೋಷಂ ॥

---

ಋತುಗಳು ಕ್ರಮವಾಗಿ ಶೋಭಿಸುವವು; ಅವರ+ಓಟದಲ್ಲಿ-ಬಂದು ಹೋಗುತ್ತಿರುವ ಆ ಋತುಗಳ ಕಾಲದಲ್ಲಿ ದುಷ್ಕಾಲದಿಂ-ಜೀವರ ಪಾಪಕರ್ಮಗಳ ಪರಿಪಾಕದಿಂದ. ಗ್ರಹ.... ಸಲು-ಶತೃಗ್ರಹಗಳು ಒಂದಾಗಿ ಏಕರಾಶಿಯಾಗಲು, ದೇಹಂಗಳಿಗೆ-ಜೀವರಿಗೆ.

೫೮ ಗ್ರಹಪತಿ—ಸೂರ್ಯನಿಗೆ ಪರ್ವ-ಅಮಾವಾಸ್ಯದ ಪರ್ವಕಾಲದಲ್ಲಿ, ಧರೋದ್ವಹನಂ+ಆಂತಿಹ-ಬಿತ್ತಿದ ಬೀಜಧಾನ್ಯಗಳೂ ಮೊಳೆತ ಪೈರುಪಚ್ಚೆಗಳು ಕೋಮಲವಾಗಿ ಬೆಳೆಯದೆ ಕೆಟ್ಟುಹೋಗುವಂತೆ; ಗರ್ಭಿಣಿಯರೂ ಊನವಾದ ಕೈಕಾಲುಗಳುಳ್ಳ ಮಕ್ಕಳು, ನಿವಹಂ—ಸಮೂಹವನ್ನು ಅನಾನುವರು-ಹೊಂದಿಪಡೆಯುವರು ಅಹಹ-ದುಃಖದ ಸಂಗತಿಯು! ಆಗ-ಗ್ರಹಣಕಾಲದಲ್ಲಿ ಸೂರ್ಯನನ್ನು ನೋಡಲ್+ಬಹುದು-ಬರುವದು.

೫೯ ಉರವಣಿಸಿ—ಬಿಡುವಿಲ್ಲದಂತೆ, ಕೊಳ—ಕುಂಟೆ ಸರ-ಸರಸ್ಸುಗಳು ತಟಾಕ-ಕೆರೆ, ಪಲ್ವಲ—ಹಳ್ಳ, ಸಣ್ಣಸರೋವರ. ಶರ—ಕಲ್ಲುಬಂಡೆಗಳಲ್ಲಿ ಹೊಡೆದುಬಂದಿರುವ ನೀರಿನ ದೊಣೆ ಇವುಗಳ ನೀರಿನಲ್ಲಿ, ದೋಷಂ+ಅಡಸಿಹುದು—ಸೇರಿಕೊಂಡಿರುವದು.

೬೦ ....ದೊಳಗೆ+ಅದನು—ಆ ದೋಷದ ನೀರನ್ನು ಬಳಸಿಕೊಂಡರೆ. ಶೈವಲವೆ—ಹಾವಸೆ, ಪಾಚಿಯೆ. ಮಹೀ....ರ್ಮಂಗಳಿಂದ—ತರಗೆಲೆಗಳಿಂದಲೂ, ಶರೀ....ಶಲ್ಯಚಯ—ಮೃತಪಟ್ಟಿರುವ ವಿಷಕ್ರಿಮಿಗಳ ಮುಳ್ಳುಗೋಲುನಂತಿರುವ ಶರೀರದ ಎಲುಬುಗಳಿಂದಲೂ.

ಕ್ಷಾರ ಮೃತ್ತಿಕೆಯಿಂದ ಕೊಳೆತ ಮ ।
ಹೀರುಹದ ಪರ್ಣಂಗಳಿಂದ ಶ ।
ರೀರ ಸಂಭವ ಶಲ್ಯಚಯದಿಂ ದುಷ್ಟಜಂತುಗಳ ॥ ೫೯ ॥

ಸಲಿಲ ಕಪ್ಪುದು ದೋಷವದರಿಂ ।
ದುಲಿವ ಭೋಜನದಲ್ಲಿ ನಾಲಿಗೆ ।
ಗಳವಡುವುದರುಚಿತ್ವವದರಿಂದುಂಟಹುದು ತಾಪಂ ॥
ಲಲಿತ ಗಂಧ ಕಪೂಯ ಗಂಧಂ ।
ಗಳಿಗೆ ನಾಸಿಕ ವಾಶ್ರಯ ಮಿದಂ ।
ಬಳಕೆಯಂ ಮಾಡಿಸುವರಾಶ್ಚಿನರಲ್ಲಿ ವರ್ತಿಪರು ॥ ೬೦ ॥

ಹೇಸಿಕೆಯ ನಾತಕ್ಕೆ ಜನನದ ।
ದೇಶವಾವುದೆನಲ್ಕೆ ಪಾಪದ ।
ರಾಶಿಯಂ ತಳೆದಿರುವ ಜಂತು ಶರೀರ ಧಾತುಗಳು ॥
ಪೈಸರಿಸಲದರಿಂದ ದೋಷಾ ।
ವೇಶಮಪ್ಪುದು ಮಾನಸದೆ ಸಂ ।
ಕ್ಲೇಶ ಕಾರಣಮದು ಮದರ ಸಂಕ್ಷಯಕೆ ಕಾರಣವು ॥ ೬೧ ॥

ಪರಿಮಳಂ ಘ್ರಾಣೇಂದ್ರಿಯ ದೊಳಾ ।
ವರಿಸೆ ಚೇತಃ ಪುಷ್ಟಿಯಹುದೆಂ ।
ದೊರೆದುದಾಮ್ನಾಯಂ, ಸುಗಂಧಂಗಳನು ಮೇಲಾಂತು ॥
ಮರುತನಾವೆಡೆಯಲ್ಲಿ ತಿರುಗು ।
ತ್ತಿರುವನಾದೇಶಂ ಸಮಸ್ತಾ ।
ಮರ ವಿಹಾರ ವಿಷಯ ಮೆನುತ್ತು ಸಿರಿತು ಸ್ಮೃತಿವ್ರಾತಂ ॥ ೬೨ ॥

---

೬೦ ಸಲಿಲಕೆ+ ಅಪ್ಪುದು–ನೀರಿಗಾಗುವದು, ಅದರಿಂದ+ ಉಲಿವ—ಕತಕತನೆ ಶಬ್ದ ಮಾಡುತ್ತ ಬೆಂದು ತಯಾರಾಗುವ, ಅಳವಡುವದು—ಹೊಂದಿಕೊಳ್ಳುವದು, ಅರುಚಿತ್ವವು–ಅರೋಚಕತ್ವವು ಲಲಿತ––ಮನೋಹರವಾದವಾಸನೆ ಕಪೂ....ಥಂ–ಮನ್ಗಾತ, ಇದಂ—ಈ ವಾಸನೆಗಳನ್ನು ಬಳಕೆಯಂ—ಮೂಸಿನೋಡುವಂತೆ ಮೂಗನ್ನು ಪ್ರೇರಿಸುವರು. ಅಲ್ಲಿ—ಮೂಗಿನ ಆ ತುದಿಯಲ್ಲಿದ್ದುಕೊಂಡು.

೬೧ ತಳೆದಿರುವ—ತಮ್ಮಲ್ಲಿ ಹೊಂದಿಸಿಕೊಂಡು ಹುಟ್ಟಿರುವ. ಪೈಸರಿಸಲು–ಸುತ್ತಲೂ ಹರಡಿಕೊಳ್ಳಲು, ದೋಷ+ ಆವೇಶಂ+ ಅಪ್ಪುದು—ಮನಸ್ಸಿನಲ್ಲಿ ಆ ದೋಷವು ಪ್ರವೇಶಿಸುವದು, ಅದು—ಆ ಮನಸ್ಸಿನ ನೋವಿಗೂ, ಮತ್ತು ಕ್ಷಯಕ್ಕೂ ಕಾರಣವು.

೬೨ ಆವರಿಸೆ—ತುಂಬಿಕೊಂಡು ವಾಸನೆಬರಲು ಚೇತಃ—ಮನಸ್ಸು ಒರೆದುದು+ ಆಮ್ನಾಯಂ—ಶಾಸ್ತ್ರಗಳು ಹೇಳುತ್ತಿರುವವು ಮೇಲೆ+ ಅಂತು—ಪಡೆದುಕೊಂಡು, ಮರುತನು—ಗಾಳಿಯು ವಿಹಾರವಿಷಯಂ—ಸರ್ವದೇವತೆಗಳ ಸಂಚಾರಕ್ಕೆ ಯೋಗ್ಯವಾದ

ಇದುವೆ ಮಧ್ಯಮ ಖಂಡೆ ದೈವಿಕ ।
ದುದಿತ ತಾಪ ಕಥನ ಮಿದಕ್ಕಂ ।
ತುದಿಯೊಳಿಹ ಖಂಡಕ್ಕೆ ವಾಕ್ಕೇ ಪ್ರಥಮವಾಗಿಹುದು ॥
ಇದಕೆ ವೈಶ್ವಾನರ ನಧೀಶಂ ।
ಪದುಮದಣುಗನ ನಲ್ಲಳಭಿಧಾ ।
ನದಲಿ ರಾಜಿಪ ನುಡಿಯಿಂ ಹೊರಗೊಂದಲಾಗಿಹುದು ॥ ೬೩ ॥

ಪಿತ್ತದುದ್ರೇಕದಲಿ ಎದೆಯೊಳ ।
ಗೊತ್ತರಿಸುವುರಿಯುಂ, ಸಿಡಿಲುಗಳ ।
ಮೊತ್ತದಿಂದಹ ಘಾತಮುಂ ಬಿಸಿನೀರಿಸಿಂದುಗಿದ ॥
ಕತ್ತರಿಸುವುರಿನಾಲಿಗೆಯ ಬೆಂ ।
ಬೊತ್ತುವುರಿಯುಂ, ಜ್ವರದ ತಾಪಮು ।
ಮಿತ್ತಲಿಂದಲೆ ಬಹುದು ವೈಶ್ವಾನರನ ಕೇಡೆಂದ ॥ ೬೪ ॥

ಕೈಯ ಕರ್ಮೇಂದ್ರಿಯಕೆ ದಿವಿಜರ ।
ನಾಯಕನೆ ಪತಿ ಯವನ ದೆಶೆಯಿಂ ।
ನ್ಯಾಯ ಮುಳಿದಾಚಾರದಿಂ ಪ್ರಾಣಿಗಳು ಪುಟ್ಟುವವು ॥
ಬೀಯಮುಂಟಹಬರದವರೊಳ ।
ತ್ಯಾಯತ ಕ್ಷುತ್ಪೀಡೆಯದರಿಂ ।
ಕಾಯಗತ ಧಾತುಕ್ಷಯಂ ದೃಢವಾಗಿ ವರ್ತಿಪುದು ॥ ೬೫ ॥

---

ಪ್ರದೇಶವಾಗುವದು, ಎನುತ್ತ+ಉಸಿರಿತು-ಹೇಳುತ್ತಿರುವವು, ಸ್ಮೃತಿವ್ರಾತಂ—ಸಮೂಹವು.

೬೩ ಮಧ್ಯಮಖಂಡ—ಪಂಚಜ್ಞಾನೇಂದ್ರಿಯಗಳ ದೈವಿಕದ+ಉದಿತ—ಆಧಿದೇವತೆಗಳಿಂದ ಹುಟ್ಟುವ ತಾಪವು, ತುದಿ....ಡಕ್ಕೆ—ಕರ್ಮೇಂದ್ರಿಯಗಳೆಂಬ ಕೊನೆಯ ಖಂಡಕ್ಕೆ, ವಾಕ್ಕೇ—ವಾಗಿಂದ್ರಿಯವೇ ವೈಶ್ವಾನರನು—ಅಗ್ನಿಯೆ ಅಧೀಶಂ—ಅಧಿದೇವತೆಯು, ಪದುಮದ—ವಿಷ್ಣುವಿನ, ಅಣುಗ—ಮಗನಾದ ಬ್ರಹ್ಮನ, ನಲ್ಲಳ್—ಪ್ರಿಯಳಾದ ಸರಸ್ವತಿಯೆಂಬ ಅಭಿಧಾನ—ಹೆಸರಿನ ಹೊರ....ಹುದು—ಶಬ್ದಗಳನ್ನೆಲ್ಲ ಹೊರಗೆಡಹುತ್ತ ನುಡಿಯುತ್ತಿರುವದು

೬೪ ಒತ್ತರಿಸುವ—ಪಿತ್ತವು ಕೆರಳಿ ಎದೆಯೊಳಗೆ ಒತ್ತುತ್ತಿರುವ ಉರಿಯನ್ನೂ ಮತ್ತು ನಾಲಿಗೆಯು ಹೊಡೆದುಕೊಂಡು ಉಗಿದ—ಉಂಟಾದ ಕತ್ತರಿಸುವ—ಸೀಳಿ ಬಿರುಕಿಕೊಂಡದ್ದರಿಂದ ಬಂದ ಉರಿಯೇ ಮುಂತಾದ ಬೆಂ (ಬೆತ್ತು) ಬೊತ್ತುವ—ನಾಲಿಗೆಯ ಹಿಂದೆ ಬಿದ್ದು ಬರುವ, ಈ ಉರಿಗಳೂ ಜ್ವರದತಾಪಗಳೂ ಎಲ್ಲವೂ ಇತ್ತಲಿಂದಲೇ—ಈ ವೈಶ್ವಾನರನೆಂಬ ಅಗ್ನಿಯಿಂದಲೇ ಬಹುದು—ಬರುತ್ತಿರುವವು.

೬೫ ದಿವಿ....ಯಕ—ಇಂದ್ರನೆ ಪತಿಯು—ಅಧಿದೇವತೆಯು, ನ್ಯಾಯಂ+ಉಳಿದ—ಬಿಟ್ಟಿರುವ ಬೀಯಂ+ಉಂಟು+ಅಹಬರದ—ಅಂಥಜೀವರಲ್ಲಿ ವ್ಯರ್ಥವಾಗಿ ಹುಟ್ಟುವ ಜನ್ಮಗಳೂ ಇರುವವು. ಅವರೊಳು+ಅತಿ+ಆಯತ—ಪಾಪದಫಲವಾಗಿ ಹೆಚ್ಚು ಕಾಲ

ಲಿಂಗಕಧಿಪತಿ ಯಪ್ಪನಾ ಚಂ ।
ಕ್ರಾಂಗ ವಾಹನ ನಪರತನುವಿಂ ।
ಕಂಗೊಳಿಸುವ ಪ್ರಜೇಶ್ವರಂ, ಧಾತುಗಳೊಳೇಳನೆಯ ॥
ಸಂಗತಿಯ ಶೋಣಿತದೆ ಕೂಡಲು ।
ಜಂಗವು ಪ್ರಾಣಿಗಳ ಪುಟ್ಟಿಸು ।
ವಂಗಡಿಯ ಮುಂಗಡೆಯ ಸರಕಹ ಶುಕ್ಲಮತಿಶುಕ್ಲಂ ॥ ೬೬ ॥

ಗಂಡೆನಿಸಿ ಹೆಣ್ಣೆನಿಸಿ ಚೇತನ ।
ಮಂಡಲಂ ಪುಟ್ಟುವುದು, ಭೂರುಹ ।
ಮಂಡಲಂಗಳೊಳುಂಟು ಸ್ತ್ರೀ ಪುರುಷದ್ವಯಕೆ ಸಂಜ್ಞೆ ॥
ಪಂಡಿತ ರಿವರ್ಕಳೊಳು ಕೆಲಬರ ।
ಪಂಡಿತರಿವರ್ಕಳೊಳು ಕೆಲಬರು ।
ತಂಡತಂಡದೊಳಿಹರು ನಾನಾ ಭುವನ ದೇಶದಲಿ ॥ ೬೭ ॥

ಇವರುದಿಸೆ ಪಿತೃಮಾತೃಗಳಿಗುಂ ।
ಟವರೊಳಗೆ ಸಂಬಂಧವದು, ಧಾ ।
ನ್ಯವ ಧನವ ಪಶು ವಸ್ತ್ರ ವಾಹನ ಗೇಹ ವಪ್ರಗಳಂ ॥
ನೆವವಿಡಿದು, ಪೂರ್ವದಲಿ ಸಂದಿಹ ।
ಭವಗಳಲಿ ಮೋಣಿವರು ದುಷ್ಕ ।
ರ್ಮವನು ಸತ್ಕರ್ಮವನು ನಿಜ ವಾಸನೆಯ ದೆಶೆಯಿಂದ ॥ ೬೮ ॥

ಹಂಚಿಕೊಂಡವರು ತತ್ಫಲವ; ತನು ।
ವಿಂ ಚದರಿ ಲೋಕಾಂತರಗಳಲಿ ।
ಪಾಂಚ ಭೌತಿಕ ದೇಹ ಮಾಂತಿದೊರ್ಡ ಮಿವರೊಳೆಸವ ॥

---

ನಿಂತ ಬಲವಾದ ಹಸಿವೂ ಆಗುತ್ತಿರುವದು ಅದರಿಂದ ಕಾಯುಗತ—ಶರೀರವನ್ನು ಹೊಂದಿರುವ ಧಾತುಗಳಲ್ಲಿ (ಪಾದೇಂದ್ರಿಯದ ಪದ್ಯವು ಇಲ್ಲಿ ಕಾಣುತ್ತಿಲ್ಲ).

೬೬ ಚಕ್ರಾಂ....ನನು-ಹಂಸವಾಹನನಾದ ಬ್ರಹ್ಮನು, ಅಪರತನುವಿಂ-ಪುರುಷೇಂದ್ರಿಯವೆಂಬ ಬೇರೊಂದು ತನ್ನ ಶರೀರದಿಂದ ಕಾಣುವ, ಧಾತು....ಳನೆಯ—ಶುಕ್ಲವು, ಸಂಗತಿಯ—ಸ್ತ್ರೀ ಸಹವಾಸದಿಂದ ಪುಟ್ಟಿಸುವ (ಪುರುಷೇಂದ್ರಿಯವೆಂಬ)+ಅಂಗಡಿಯ.

೬೭-೬೮-೬೯ ಭೂರು....ಳೊಳು—ವನಸ್ಪತಿಯ ವರ್ಗಗಳಲ್ಲಿಯೂ ಸ್ತ್ರೀಪುರುಷ ಎಂಬ ಭೇದವಿರುವದು; ಇವರು+ಉದಿಸೆ—ಶುಕ್ಲಶೋಣಿತಗಳು ರೂಪಾಂತರ ಹೊಂದಿದ ಈ ಸಂತಾನಗಳು ಉತ್ಪನ್ನವಾದರೆ ಗೇಹ—ಮನೆ, ವಪ್ರ—ಹೊಲಗದ್ದೆಗಳೆಂಬ ಕ್ಷೇತ್ರವನ್ನು, ಸಂದಿಹ—ಹೊಂದಿದ್ದ ಭವ—ಹುಟ್ಟುಹೊಂದುಗಳ ಸಾಲಿನಲ್ಲಿ; ಚದರಿ—ಜನ್ಮಾಂತರಗಳಲ್ಲಿ ಹೊಕ್ಕವರಾಗಿ. ದೇಹಂ+ಆಂತಿದೊರ್ಡಂ—ಸೇರಿಕೊಂಡಿದ್ದರು ಇವರೊಳು+ಎಸವ—ಕಾಣುವ, ಸಂಚಿತ+ಈಹ—ಕೂಡಿಸಿ ರಾಶಿಹಾಕಿದ್ದ ಕರ್ಮಗಳಲ್ಲಿ ಒಂದು ಕರ್ಮವು

ಸಂಚಿತೇಹಗಳಲ್ಲಿ ಪ್ರಾಚು ।
ರ್ಯ್ಯಂ ಚರಿಪುದಿವರವರಿಗಪ್ಪುದು ।
ಮುಂಚಿದವನೇ ಜನಕ, ಹಿಂಚಿದವನೇ ತನಯನಾಗಿ ॥ ೧೯ ॥

ಹೀಗೆ ನಡೆಯುತ್ತಿರುವ ಭವದೊಳ ।
ಗಾಗೆ ಸ್ವಾಭಿಮತಾರ್ಥದಲ್ಲಿ ವಿ ।
ರಾಗ ಮಂತಃಕರಣಪೂರ್ವಕವಾಗಿ ಜನಕರಿಗು ॥
ಆಗ ತನಯರಿಗಂ ಭವಿಷ್ಯ ।
ದ್ಭಾಗಧೇಯದೊಳವರವರಿಗಿ ।
ನ್ನಾಗ ದಿರ್ಪುದು ಜನ್ಯಜನಕತ್ವಂ ವಿಚಾರಿಸಲು ॥ ೨೦ ॥

ಪಾಯುವಿಂಗಧಿನಾಥನೇ ಛಾ ।
ಯೇಯನಪ್ಪಂ ಪಾಪಿಗಳ ಸಮು ।
ದಾಯವಂ ನಿಗ್ರಹಿಸ ಕೃತ್ಯಂ ಬಂದುದಾತನಿಗೆ ॥
ನ್ಯಾಯ ಪರರಾಗಿರ್ಪ ನಾನಾ ।
ರಾಯರುಂ ಮಂತ್ರೀಶರುಂ ನಿ ।
ರ್ಣಾಯಕರು ಮರ್ಥಾನುಗಾಮಿ ವಿವಾದ ವಿಷಯದಲಿ ॥ ೨೧ ॥

ಇರುವರಾತನ ಸಭೆಯೊಳಗೆ ವಿ ।
ಸ್ಫುರಿತ ಮತ್ಪ್ರಾಣಾಪಹರಣದೆ ।
ಪರಿಪರಿಯ ಜಂತುಗಳ ನಿಪುಣರೆನಿಸುವ ಭಟರಚಯಂ ॥
ಅರೆಬರವರೊಳು ರೋಗ ವಿಗ್ರಹ ।
ರರೆಬರವರೊಳು ಭೂತರೂಪದೆ ।
ಮರಳಿ ಪ್ರೇತಾಕೃತಿಯಲಿ ಪಿಶಾಚಾಕೃತಿಯಲಿಹರು ॥ ೨೨ ॥

---

ಪ್ರಾಚುರ್ಯ್ಯಂ—ಫಲವನ್ನು ಕೊಡುವದಕ್ಕೆ ಪ್ರಾರಂಭಿಸಿ ಚರಿಪುದು—ಪಕ್ವವಾಗಿ ಫಲಕ್ಕೆ ಚರಿಸಿಬಂದಾಗ.

೨೦ ಈ ತಂದೆ ಮಕ್ಕಳ ಸಂಬಂಧಕ್ಕೆ ಕೊನೆಗಾಲವನ್ನು ಹೇಳುತ್ತಿದ್ದಾರೆ—ಸ್ವಾಭಿಮತಾರ್ಥ—ತಮಗಿಷ್ಟವಾದ ಸ್ತ್ರೀಪುತ್ರಧನಕನಕಾದಿ ವಸ್ತುಗಳಲ್ಲಿ ವಿರಾಗವುಂಟಾಗಲು, ಭವಿಷ್ಯತ್+ಭಾಗಧೇಯದೊಳು—ಮುಂದಿನ ದಾಯಾದಿಯ ಭಾಗವಾದ ಪುಣ್ಯ ಕರ್ಮದ ಫಲಗಳಲ್ಲಿ ತಂದೆಮಕ್ಕಳ ಒಬ್ಬರಿಗೊಬ್ಬರ ಹಂಚಿಕೆಯ ಸಂಬಂಧವು ಇನ್ನುಮುಂದೆ ಆಗದೆ+ಇರ್ಪುದು.

೨೧ ಪಾಯುವಿಂಗೆ—ಗುದಸ್ಥಾನಕ್ಕೆ ಅಧಿನಾಥ—ಅಧಿದೇವತೆಯೆ ಛಾಯೆಯನು—ಸೂರ್ಯನಪತ್ನಿ ಛಾಯಾದೇವಿಯ-ಮಗನಾದ ಯಮನು, ರಾಯರು—ರಾಜರು, ಅರ್ಥಾನುಗಾಮಿ—ವಿಷಯವಿದ್ದಂತೆ ಅನುಸರಿಸಿ ಹೀಗೆಯೆ ಸರಿಯೆಂಬ ನಿಶ್ಚಯಕೊಡತಕ್ಕವರು. ವಿವಾದ—ಸಂಶಯಬಂದ ವಿಷಯದಲ್ಲಿ.

ಇದರ ಕಡೆಯಿಂದಾವುದಿಳಿವುದೊ ।
ಬಿದುರುವುದು ಹೇಸಿಕೆಯ ನಶುಚಿಯ ।
ನದು ಸಹಜವಾಗಿರಲಿ ಪಾವನವಾದ ಪಾವನವು ॥
ಇದರ ದೆಶೆಯಿಂ ಪೊರಟರಾ ಕ್ಷಣ ।
ಮದು ಸಕಲ ನಾಸಾಪುಟಂಗಳ ।
ಪದಕೆ ಬಟ್ಟೆಯ ಕಟ್ಟೆಸುವದಿನ್ನೊಂದನೆನಲೇನು ॥ ೨೩ ॥

ಈವರಿಗಿದೇ ತುದಿಯಖಂಡದ ।
ದೈವಿಕದ ತಾಪಂ ಜಗತ್ತಿನೊ ।
ಳಾವರಾಗಲಿ ಪಾಂಚಭೌತಿಕ ದೇಹಮಂ ಪಡೆದು ॥
ಜೀವಿಸುತ್ತಿರುತಿರುವ ನಾನಾ ।
ಜೀವರಾಶಿಗಳುಂಟವರೊಳುಂ ।
ಟೀ ವಿಧದ ತಾಪತ್ರಯಂ ಬೆನ್ನಂಪಿಡಿದು ಬಿಡದೆ ॥ ೨೪ ॥

ಎಂದು ನಿರುಪಾಧಿಕ ವೆನಿಸುವಾ ।
ನಂದರೂಪ ಬ್ರಹ್ಮದಲಿ ಬಳಿ ।
ಸಂದು ದೋರಿತೊ ಮಾಯೆಯಾಕಾರದೊಳಗಾಮಾಯೆ ॥
ಎಂದು ಸಪ್ತಾವರಣ ರೂಪವ ।
ನೊಂದಿ ತೋರಿತೊ ತೋರಿದಾವರ ।
ಣಂ ದಳಿತ ತತ್ತ್ವಂಗಳಲಿ ಪಂಚೀಕೃತ ಸ್ಥಿತಿಯಂ ॥ ೨೫ ॥

---

೨೨ ವಿಸ್ಫುರಿತವತ್–ಕಾಣುತ್ತಿದ್ದಂತೆಯೆ ಪ್ರಾಣವನ್ನು ಅಪಹರಿಸುವುದರಲ್ಲಿ, ಅರೆಬರು—ಕೆಲವರು ರೋಗವಿಗ್ರಹರು—ರೋಗಶರೀರರು ಅರೆಬರಃ—ಮತ್ತೆಕೆಲವರು ಭೂತಪ್ರೇತ ಪಿಶಾಚಿ—ಇವುಗಳ ಆಕಾರದ ಶರೀರವುಳ್ಳವರು ಕೆಲಕೆಲರು.

೨೩ ಇದರ—ಈ ಗುದದಿಂದ ಆವುದು+ಇಳಿವುದೊ—ಜಾರುವ ಮಲವು, ಬಿದುರುವುದು—ಬೀರುವದು ಮಲದಕಟ್ಟನ್ನು ಸಡಲಿಸಿ ದುರ್ನಾತವು ಹರಡಿಕೊಳ್ಳುವಂತೆ ಮಾಡುವದು, ಇದರ...ಟರೆ—ಅಪಾನವಾಯು ಹೊರಟರೆ, ಆ ಕ್ಷಣಂ+ಅದು...ಪದಕೆ–ಮೂಗಿನ ಮಾರ್ಗವಾದ ಸೊಳ್ಳೆಗಳಿಗೆ.

೨೪ ಈವರಿಗೆ+ಇದೆ—ಈ ಹೇಳಿರುವ ಕರ್ಮೇಂದ್ರಿಯಗಳೆಂಬ ಅಧಮಖಂಡದ ತಾಪವು. ಈ ವಿಧದತಾಪತ್ರಯಂ–ಈ ಪೂರ್ವೋಕ್ತ ಮೂರು ಖಂಡಗಳ ತಾಪತ್ರಯಗಳು ಎಡೆಬಿಡದಂತೆ ಸರ್ವಜೀವರಲ್ಲಿಯೂ ಇರುವದು.

೨೫ ಬಳಿಸಂದು–ದೇಹಾಭಿಮಾನಿಗಳ ಮಿಥ್ಯಾದೃಷ್ಟಿಯಿಂದ ತನ್ನ ಬ್ರಹ್ಮಾತ್ಮಸ್ವರೂಪದಲ್ಲಿ ಕಲ್ಪಿಸಲ್ಪಟ್ಟ ಬರಿಯ ಕಲ್ಪನೆಯಲ್ಲಿ ಗಂಟುಬಿದ್ದಿತೋ? ಮಾಯೆಯ+ಆಕಾರ–ಯುಕ್ತಿಹೀನಪ್ರಕಾಶದ ಹುಸಿಯ ಶರೀರದರೂಪದಲ್ಲಿ, ಆ ಮಾಯೆ—ಬರಿಯ ಶಬ್ದಮಾತ್ರದ ಹುಸಿಕಲ್ಪನೆಯು ಜಗದ್ಬೀಜವು, ಸಪ್ತಾವರಣ—ಮಹತ್ತು ಅಹಂಕಾರ ಪಂಚತನ್ಮಾತ್ರೆಗಳ

ಐದಿತೋ, ಅಂದಿಂದ ಬಂದುದು ।
ಹೋದ ಹೊಲಬಂ ಕಾಣಿಸದ ನಿಜ ।
ವಾದ ತತ್ತ್ವಕೆ ಜೀವರೂಪಂ; ಜೀವರೂಪವನೆ ॥
ಆದಿಗೊಂಡೀ ಖಂಡ ಮೂರರ ।
ಭೇದದಿಂ ಹೊರಹೊಮ್ಮಿ ಸಂಜ್ಞೆಯು ।
ನಾದರಿಸಿದುದು ಬಿಡದೆ ಚಾತುರ್ದಶ್ಯ ಭಾವದಲಿ ॥ ೭೬ ॥

ಮೊದಲೊಳಧ್ಯಾತ್ಮಂಗಳೇ ದುಃ ।
ಖದ ನಿಲಯು ಮಧಿಭೂತಮೇ ತ ।
ತ್ಪದದೊಳೊಗೆದಂಕುರಚಯುಂ, ಮೇಣಲ್ಲಿಯಧಿದೈವಂ ॥
ವಿದಿತ ಸಾಂಗೋಪಾಂಗ ರೂಪಂ ।
ಇದರ ಮೂಲಕವಾಗಿ ಬಹ ದುಃ ।
ಖದ ಪರಂಪರೆ ಯೆಲ್ಲವುಂ ಸುಖವಾಗಿ ತೋರಿಪೊಡಂ ॥ ೭೭ ॥

ಎಂದಿಗೀ ಹದಿನಾಲ್ಕುರುಪಟಳ ।
ನಂದುವುದು ಮುಗುಳುದಿಸದಂದದೊ ।
ಳಂದಿಗಲ್ಲದೆ ಸೌಖ್ಯವೆಂಬುದು ಕಾಣಿಕೆಗೆ ಬರದು ॥

---

ಈ ಹುಸಿಯುರೂಪುಗೊಂಡಿತೊ ? ಎಂದರೆ ಮಿಥ್ಯಾದರ್ಶಿಗಳಿಗೆ ತೋರಿಕೊಂಡಿತೋ? ಆವರಣಾಂ ದಳಿತ–ಆ ಸಪ್ತಪ್ರಕೃತಿ ವಿಕೃತಿಗಳ ದಟ್ಟವಾದ, ತತ್ತ್ವಂಗಳಲಿ—೨೫ ತತ್ತ್ವಾತ್ಮಕ ವಾದ ಈ ಸ್ಥೂಲಶರೀರವು ಹುಟ್ಟಿರೂಪುಗೊಂಡಿತೊ ?

**೭೬ ಐದಿತೊ**—ಆ ಕಲ್ಪಿತ ಶರೀರದಲ್ಲಿ ‘ನಾನು’ ಎಂಬ ಅಭಿಮಾನದ ರೂಪನ್ನು **ಹೊಂದಿದ** ಆರಭ್ಯ ಈ ಜೀವತ್ವಭ್ರಾಂತಿಯು ಬ್ರಹ್ಮದಲ್ಲಿ ಕಲ್ಪಿಸಲ್ಪಟ್ಟು ಬಂದುದು—**ಬಂದಿತು, ಹೊಲಬಂ**—ದಿಕ್ಕುಮಾರ್ಗವೇಕಾಣಿಸದಂತೆ, **ತತ್ತ್ವಕೆ**—ಇರುವ ಒಂದು ತತ್ತ್ವವೇ **ಜೀವರೂಪದಿಂದ** ದೇಹಾದಿಗಳ, ಸಾಭಿಮಾನ—ಅಧ್ಯಾಸದ ಕಟ್ಟುಳ್ಳ ಜನರಿಗೆ ಕಾಣುತ್ತಿರು ವದು. ಈ ಜೀವತ್ವವನ್ನು ಹಿಡಿದುಕೊಂಡೇ—ಅಂತಃಕರಣ ಬಹಿಃಕರಣಗಳ ಒಟ್ಟಿನ ರಾಶಿ ಯಾದ ಈ ೧೪ ಕರಣಗಳಲ್ಲಿಯೇ ಮೇಲಿನ ಉತ್ತಮಾದಿ ಖಂಡಗಳ ಸಂಜ್ಞೆ—ಸಂಕೇತ ವುಳ್ಳ ಭೇದದಿಂದ ಅವು ಹೊರಹೊಮ್ಮಿ ಎಲ್ಲರಿಗೂ ಕಾಡಿಸುತ್ತಿರುವದು !

೭೭ ಮೊದಲೊಳು+ಅಧ್ಯಾತ್ಮಂಗಳೇ—ಈ ೧೪ ಕರಣಗಳ ಒಟ್ಟಿನರಾಶಿಯೇ ನಿಲಯುಂ—ದುಃಖಗಳಿಗೆಲ್ಲ ತವರುಮನೆಯು, ಅಧಿಭೂತಮೇ—ಇಂದ್ರಿಯಗೋಚರವಾದ ಜಡಚೇತನಗಳ ಒಟ್ಟಿನಪ್ರಪಂಚವೆಂಬುದೆ ತತ್ಪದ–ಬ್ರಹ್ಮದಲ್ಲಿ ಒಗೆದ+ಅಂಕುರಚಯುಂ–ಮೊಳತಪೈರುಗಳಸಾಲು ಮೇಣ್+ಅಲ್ಲಿ—ಆ ಪ್ರಪಂಚದೊಳಗೆ ಅಧಿದೇವತೆಗಳು ಪ್ರಸಿದ್ಧಂಗಳೆ–ಎಂಬುದನ್ನೂ ವಿವರಿಸಿ ಹೇಳಿರುವೆವು. ಬಹ—ಬರುವ ದುಃಖಗಳಸಾಲು ಸುಖವೆಂದು ಕಂಡರು ದುಃಖವೆಂದೇ ವಿವೇಕಿಗಳು ಉಪೇಕ್ಷಿಸಬೇಕು.

೭೮ ಉಪಟಳ—ಉಪದ್ರವ ನಂದುವುದು—ನಾಶವಾಗುವದೋ ಮುಗುಳಿ—ಪ್ರನಃ

ಮಂದಮತಿಗಳಿವಿರುತಿರಲ್ನಡು ।
ವೊಂದುತಿಹ ವೈಷಯಿಕ ಸುಖವನು ।
ನಿಂದಿರಿಸಿ ನಾನಾ ಮತಾಭಾಸಗಳ ಪೇಳುವರು ॥ ೭೮ ॥

ಜಲಧಿಯಲಿ ವಾಯುವಿನ ವಿಕೃತಿಯ ।
ತಳೆದು ಪುಟ್ಟಿದ ಬೊಬ್ಬುಳಿಕೆ ಗು ।
ಜ್ವಲ ಸುವರ್ಣದ ಪಾಶದಿಂ ನೆರೆಕಟ್ಟಿ ಬಿಗಿಮಾಡಿ ॥
ನಿಲಿಸಲೆಳಸುವ ಪಾಮರರಲಾ ! ।
ಫಲವನವರಿಗೆ ಕೊಡುವ ದೇವಾ ।
ವಳಿಗಳೇಂ ಕನಸಿನಲಿ ಕಾಣಿಸಿಕೊ-ಡ ಪುರುಷರಲ ! ! ॥೭೯ ॥

ಓದಿದರೆ ವೇದಾಂತ ಶಾಸ್ತ್ರವ ।
ನೋದಬೇಕರ್ಥವನು ತಿಳಿದರೆ ।
ವೇದಮಸ್ತಕದೊಳಗೆ ಪೇಳುವುದನ್ನೆ ಚನ್ನಾಗಿ ॥
ಆದರಿಸ ಬೇಕಾಲಿಯುಂ ಬಿಡ ।
ಲಾದರೀ ಹದಿನಾಲ್ಕು ತತ್ತ್ವದ ।
ಬೀದಿಯೊಳಗಿಹ ನಡತೆಯಂ ಬಿಡಬೇಕು ಬೇಸರದೆ ॥ ೮೦ ॥

ಮರಳಿ ಬರದಂದದಲಿ ದುಃಖವ ।
ನರಿದು ಬಿಸುಟುದೆ ಗೈಮೆ, ಮುಗುಳಂ ।
ಕುರಿಸಿದರೆ ತದ್ದುಃಖ ವೇತರ ಕೆಲಸ ವಾರೈಯ್ಯೆ ॥
ನೆರದು ಪರಮಾನಧಿಯ ಕಂಡುದೆ ।
ಧರೆಯೊಳರಿವಲ್ಲದೆ ನಡುವೆ ಬಂ ।
ದೆರಗುತಿಹ ಸುಖದಲ್ಲಿ ತೀರಿಸಿಕೊಂಡುದೇಂ ತಿಳಿವೆ ॥ ೮೧ ॥

---

ಉದಿಸದ+ಅಂದಪೊಳು+ಅಂದಿಗಲ್ಲದೆ ಕಾಣಿಕೆಗೆ—ಅಲ್ಲಿಯುವರೆಗೆ ಸುಖವು ಕಾಣುವ ದಕ್ಕೂ ಬರುವದಿಲ್ಲ. ....ಗಳು+ಇವು+ಇರುತಿರಲ್—ಈ ಕರಣಗಳೆಲ್ಲವಿದ್ದಂತೆಯೇ ನಡುವೆ+ಬಂದುತಿಹ—ಬಂದುಸೇರುತ್ತಿರುವ ಸುಖವನ್ನು, ನಿಂದಿರಿಸಿ——ನಿಲ್ಲಿಸಿಕೊಂಡು,

೮೦ ವೇದಮಸ್ತಕ-ಉಪನಿಷತ್ತು ಆದರಿಸಬೇಕು-ಗೌರವಿಸಬೇಕು, ಈಹ....ತ್ತ್ವದ.... ಮೇಲಿನ ೧೪ ಕರಣಗಳನ್ನು ನಿಗ್ರಹಿಸಿ ತಾನು ಅಂತರ್ಮುಖನಾಗಿರಬೇಕು.

೮೧ ದುಃಖವನು+ಅರಿದು—ಅಧ್ಯಾಸವೆಂಬ ಬೇರಿನೊಡನೆ ಕತ್ತರಿಸಿ ಹಾಳುಮಾಡಿ, ಮುಗುಳ್—ಮರಳಿ ಕೆಲಸವು+ಆರೈಯ್ಯೆ—ವಿಚಾರಿಸಿದರೆ ನೆರದು—ಹತ್ತಿರಮಾಡಿಕೊಂಡು, ಅನುಭವಿಸಿ; ಪರಮಾವಧಿ—ಸುಖಗಳೆಲ್ಲಕ್ಕೂ ಕೇಂದ್ರವಾಗಿರುವ ಬ್ರಹ್ಮಾನಂದವನ್ನೆ ತನ್ನಾತ್ಮ ಸ್ವರೂಪದಿಂದ ನೇರಾಗಿ ಕಂಡುಕೊಂಡಷ್ಟೇ ಧರೆಯೊಳು+ಅರಿವಿಲ್ಲದೆ ಮತ್ತೊಂದೆಂದಿಗೂ ಅಲ್ಲವು ಬಂದು+ಎರಗುತಿಹ—ಪ್ರೀತಿಯಿಂದ ತನಗೆ ಬಂದು ಸೇರುತ್ತಿರುವ ತೀರಿಸಿ... ಆ ಜ್ಞಾನದ ತ್ತತ್ವವು ಸಫಲವಾದಪ್ಪೇನು? ಎಂದರೆ ಅದೊಂದು ತಿಳಿವೇ ಅಲ್ಲವೆಂದು ಭಾವವು.

ಎಷ್ಟು ದೊರಕಿದೊಡೆಷ್ಟೆ ಸಾಕೆಂ ।
ದಷ್ಟರಲೆ ತೃಪ್ತಿಯನು ಪಡೆವೀ ।
ಭ್ರಷ್ಟಮತಿಗಳಿಗೇಕೆ ಪೂರ್ಣಾನಂದ ಸಾಮ್ರಾಜ್ಯ ॥
ತುಷ್ಟಿಯೆಂಬುದು ಬಂದ ಬಳಿಕಂ ।
ನಷ್ಟವಾಗದೆ ಇರ್ದರದು ಮತಿ ।
ಪುಷ್ಟಿಕಾರಕ ವಾಗಿಹುದು ಶಂಭು ಪ್ರಭೃತಿಗಳಿಗೆ ॥ ೮೨ ॥

ಪಾರದೃಗ್ವರರೆನಿಪ ತತ್ತ್ರಿಪು ।
ರಾರಿ ವಿಷ್ಣು ಸರೋಜಪೀಠ ಬ ।
ಲಾರಿ ಗುರು ಭಾರ್ಗವ ವಸಿಷ್ಠಾದಿಗಳಿಗಭಿಮತವು ॥
ಸಾರವಾದದ್ವೈತ ವೊಂದೇ; ।
ತೋರುತಿಹ ನಾನಾ ಮತಂಗಳ ।
ವಾರದಲಿ ಕಿಂಚಿಜ್ಞರಾದ ಅಘಶೇಷ ಚಿತ್ತರಿಗೆ ॥ ೮೩ ॥

ಹಲವರಂ ಭಜಿಸುವುದು, ಸೇವಿತ ।
ಫಲ ರುಚಿಯ ಬಿಡದಿರುತಿಹುದು, ತ ।
ನ್ನಲಿ ಲಘುತ್ವವನೊಪ್ಪಿಕೊಂಬುದು, ತಿಳಿಯ ಹೇಳಿದರು॥
ತಿಳಿಯದಿಹುದು ಮನೀಷೆ ಗಲ್ಪರ ।
ಕುಲದ ಪಾರಂಪರ್ಯವಹ ನಡೆ ।
ವಳಿ ಯಿದಂತಿರಲಿನ್ನು ನೀ ಕೇಳುವದ ಕೇಳೆಂದ ॥ ೮೪ ॥

ವಿಷದ ಬೇಗೆಗೆ ಕಾರ್ಯ ಹಾನಿಗೆ ।
ವಿಷಮವಾದ ಫಲಕ್ಕೆ ಬಂದನಿ ।
ಮಿಷರು ದುಃಖಿಪ ದುಃಖಮಂ ಕಣ್ಣಾರ ತಾ ಕಂಡು ॥

---

೮೩ ಪಾರದೃಗ್+ವರರೆನಿಪ್ಪ—ಸಂಸಾರದ ಪಡವಾದ ಬ್ರಹ್ಮವನ್ನು ಕಂಡವರೆಂದೆನಿಸಿರುವ, ತತ್+ತ್ರಿಪುರಾರಿ—ಆ ಶಿವನು, ಸರೋಜಪೀಠ—ಬ್ರಹ್ಮನು, ಬಲಾರಿ—ಬಲಾರಾತಿಃ—ಇಂದ್ರನು, ಗುರು-ಬೃಹಸ್ಪತಿ, ಭಾರ್ಗವ-ಶುಕ್ರನು ಈ ಎಲ್ಲರಿಗೂ ಶ್ರುತಿಗಳ ಸಾರವಾದ ಅದ್ವೈತ ಒಂದೇ ಅಭಿಮತ—ಸಮ್ಮತವಾದದ್ದಲ್ಲದೆ ಬೇರೊಂದಲ್ಲವು. ತೋರುತಿಹ—ಬರಿಯ ತೋರುಗಾಣಿಕೆಯ, ವಿಚಾರಕ್ಕೆ ನಿಲ್ಲದ ನಾನಾ-ಒಂದನ್ನೊಂದು ಬಾಧಿಸುವ ವಿರೋಧವನ್ನಿಟ್ಟುಕೊಂಡು ಹೊರಟಿರುವ ಆ ಭಾಸಮತಗಳ ವಾರ-ಸಾಲುಗಳಲ್ಲಿ ವಿಶ್ವಾಸವು, ಕಿಂಚಿಜ್ಞರಾಗಿ-ಬುದ್ಧಿಬಲವಿಲ್ಲದ ತಿಳಿಗೇಡಿಗಳಾಗಿ, ಅಘಶೇಷ-ಪಾಪವುಳಿದ ಚಿತ್ತದ ಜನರಿಗೆ.

೮೪ ಹಲವುದೇವತೆಗಳ ಭೇಧವನ್ನು ಸತ್ಯವಾಗಿಟ್ಟುಕೊಂಡು ಅವುಗಳನ್ನು ಆರಾಧಿಸುವದು ಸೇವಿತ-ಹಲವುಬಾರಿಯುಂಡ ಭೋಗಗಳನ್ನೆ ಮರಮರಳಿಯೂ ಬಯಸುತ್ತಿರುವದು ಲಘುತ್ವವನು-ತನ್ನಲ್ಲಿ ಅಲ್ಪತ್ವ-ನೀಚತ್ವಾದಿಗಳನ್ನು ಮನೀಷೆಗೆ-ಬುದ್ಧಿಗೆ ಕೇಳು+ಎಂದ-ತ್ರ್ಯಂಬಕಗುರುವು ಎಂದನು.

ಸುಷುಮ ಕಂಠದೊಳದ ಧರಿಸಿದ ಕ ।
ಲುಷಮೆಸೆಯೆ ಸತ್ಕೀರ್ತಿ ಗಂಗಾ ।
ವಿಷಯದೋಳೊಪ್ಪುವ ಮಹೇಶಂ ನಮ್ಮ ರಕ್ಷಿಸುಗೆ　　|| ೮೫ ||

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೊಳಾಧಿದೈವಿಕ ತಾಪ ಕ್ರಮವನುಳ್ಳ ಐದನೆಯ ಸಂಧಿ ಸಂಪೂರ್ಣಂ. ( ಪದ ೨೯೩ )

## ಗುರುಪ್ರಭಾವ ನಿರ್ಣಯ—ಆರನೆಯ ಸಂಧಿಯು

ಸೂ॥ ವಸ್ತುತಂತ್ರವಿದಾದ ದೆಶೆಯಿಂ ।
ನಿಸ್ತುಲಂ ಗುರುವೆಂದು, ಗುರುವೆ ಸ ।
ಮಸ್ತ ವಿಬುಧಾಕಾರನೆಂದೀ ಪ್ರಕರಣಂ ಪೇಳ್ಗುಂ ॥ ಪ ॥

ಭೋಗದಲ್ಲಭಿಲಾಷವಿರಲನು ।
ವಾಗಿ ನಡೆವದ ನಡೆಸದಿರಲು ।
ದ್ವೇಗ ವೊತ್ತರಿಸಿರಲಿ ಚಿತ್ತದೆ ಮತ್ತತೆಯ ನೊಂದಿ ॥
ಆಗತಕ್ಕುದ ನಾಗಮಾಡುವ ।
ಯೋಗವುಂ ಬಿಟ್ಟಿರಲಿ, ಸಾಧು ಸ ।
ಮಾಗಮವ ಬಿಡದವನಿಗುಸಿರುವುದೀ ಕಥಾಶ್ರುತಿಯ　　|| ೧ ||

ಆವ ಗುರುಕುಲ ಸಾರ್ವಭೌಮು ಕೃ ।
ಪಾವಲೋಕನದಿಂದ ಬಂದಕ ।
ಲೇವರದ ಬಂಧನವಡಂಗಿತು, ಪೂರ್ಣವಾಗಿರ್ಪ ॥

---

೮೫ ದೇವಾಸುರರು ಜತೆಗೂಡಿ ಮಾಡಿದ ಸಮುದ್ರ ಮಂಥನದಿಂದ ಎದ್ದ ಮಹಾ ಹಾಲಾಹಲ ವಿಷದ ಉರಿಬೇಗೆಗೆ ಸಿಕ್ಕಿ ಸಂಕಟಪಡುತ್ತ ತಮಗೊದಗಿಬಂದ; ....ಲಕ್ಕಿ—ಅಮೃತಕ್ಕೆ ಬದುಲಾಗಿ ಬಂದ ವಿಪರೀತ ಫಲಕ್ಕೆ ಅನಿಮಿ....ಃಖಿಪ—ದೇವತೆಗಳು ದುಃಖಿಸುತ್ತಿರಲು, ಶಿವನು ತನ್ನ+ಸುಷುಮ—ಸೊಗಸಾದ ಕಂಠದೊಳು+ಅದ—ಆ ವಿಷವನ್ನು ಧರಿಸಿದ, ಕಲುಷಂ+ಎಸೆಯೆ—ವಿಷದ ಕಪ್ಪು ಶೋಭಿಸುತ್ತಿರಲು, ವಿಷದ ಆ ಮಹಾವಿಪತ್ತಿನಿಂದ ಲೋಕಗಳನ್ನು ಕಾಪಾಡಿದ ವಿಷಕಂಠನೆಂಬ ಸತ್ಕೀರ್ತಿಯಿಂದಲೂ (ಭಾಗವತ ೮—೯) ಜಡೆಯಲ್ಲಿ ದೇವಗಂಗೆಯಿಂದಲೂ ಒಪ್ಪುವ ಶಿವನು ನಮ್ಮನ್ನು ರಕ್ಷಿಸಲಿ.

ಸೂ। ವಸ್ತು—ಉಪನಿಷಸ್ತ್ರತಿಪಾದ್ಯ ಬ್ರಹ್ಮವಸ್ತುವಿದ್ದಂತೆ, ತಂತ್ರ—ಅದನ್ನನುಸರಿಸಿಕೊಂಡು ಉಂಟಾಗುವ, ಇದು—ಈ ಜ್ಞಾನವಾದ ದೆಶೆಯಿಂದ, ನಿಸ್ತುಲಂ—ಗುರುವು ತನಗೆ ಸಮನಿಲ್ಲದವನೆಂದೂ, ವಿಬುಧಾಕಾರ–ಸರ್ವದೇವತಾಸ್ವರೂಪನೆಂದೂ ಇಲ್ಲಿಹೇಳಲ್ಪಡುವನು.

೧ ಅನು....ವದ—ಕಾಲೋಚಿತವಾಗಿ ನಡೆಯಿಸಬೇಕಾಗಿರುವದನ್ನು ಉದ್ವೇಗಂ+ಒತ್ತರಿಸಿರಲಿ—ಅಂತಸ್ತಾಪವು ಒತ್ತರಿಸಿಕೊಂಡಿದ್ದರೂ ಮತ್ತತೆಯನು+ಒಂದಿ—ಹೊಂದಿ ....ಯೋಗವುಂ–ಪ್ರಾಪ್ತಿಯ ಯತ್ನವನ್ನು

ಭಾವ ಚಿತ್ಸುಖ ದಾಯಕನ ತ ।
ತ್ಪಾವನಾಂಘ್ರಿದ್ವಂದ್ವ ಶುಭರಾ ।
ಜೀವಕಾ ನ್ನತನಪ್ಪೆ ನಿತ್ಯವನನ್ಯ ಮತಿಯಿಂದ ॥ ೨ ॥

ಜ್ಞಾನಕಿಂ ದಧಿಕಂ ಸಮಂ ತ್ರಿ ।
ಸ್ಥಾನಮಾದ ಭುವನದೊಳಿಲ್ಲಾ ।
ಜ್ಞಾನದಿಂ ಬ್ರಹ್ಮಾತ್ಮಭಾವಂ ಘಟಿಪುದದುವೆ ಫಲಂ ॥
ಊನಮಾಗದದಕ್ಕೆ ವಿಘ್ನ ವಿ ।
ತಾನ ವಡಿಸಿಹುದದ ನಡಂಗಿಸೆ ।
ದಾನ ತೀರ್ಥ ನಿಷೇವಣಾದಿಗಳಿದಕೆ ಸಾಧನವು ॥ ೩ ॥

ಇದುವೆ ವೃದ್ಧಾನುಕ ಮಂ ಶ್ರು ।
ತ್ಯುದಿತ ವಿದಕೆ ಫಲತ್ರಯಂ ಗ್ರಂ ।
ಥದ ಸಮಾಪ್ತಿಯು ಸಾಂಪ್ರದಾಯಂ ಶ್ರೋತೃ ಚಿತ್ತರುಚಿ ॥
ಅದರ ದೆಶೆಯಿಂ ಶಿಷ್ಟವಿಧಿಯಂ ।
ಪೊದೆದು ನಡೆವುದಕೀಶ ನತಿ ಗೈ ।
ಯದೆ ಗುರು ಪ್ರಣತಿಯನು ಮಾಡಿದುದೇನು ಭಾವಮೆನೆ ॥ ೪ ॥

ದೇವರಲ್ಲೆಂತಂತು ಗುರುವಿನ ।
ಠಾವಿನಲ್ಲಿದ್ದರೆ ಬಕುತಿ ಸಂ ।
ಭಾವಿಪುದು ಕಥಿತಾರ್ಥದ ಸಿದ್ಧಿಯೆಂದುದಾಮ್ನಾಯ ॥

---

೨ ಬಂದ....ಂಗಿತು–ಅಜ್ಞಾನದ ದೇಹಬಂಧನವು, ಮಿಥ್ಯಾಜ್ಞಾನವು ಪುನಃ ತಲೆಯೆತ್ತದಂತೆ ಅಡಗಿತೋ. ಪೂರ್ಣ....ಯಕನ–ಸರ್ವತ್ರ ತುಂಬಿರುವ ಸತ್ತು ಚಿತ್ತು ಆನಂದ ಸ್ವರೂಪನಾದ ಪರಮಾತ್ಮನನ್ನೆ ತನ್ನ ಆತ್ಮನನ್ನಾಗಿಸಿ ಅನುಭವಕ್ಕೆ ತಂದುಕೊಟ್ಟಿರುವ, ತತ್+ಪಾವ....ೀವಕೆ–ಆಗುರುವಿನ ಶುಭವಾದ ಪಾದಪದ್ಮಂಗಳೆರಡಕ್ಕೆ, ಆನ್+ನತನಪ್ಪೆ....ನಿತ್ಯವೂ ಅನನ್ಯ ಭಾವದಿಂದ ನಾನು ನಮುಸ್ಕರಿಸುತ್ತೇನೆ.

೩ ತ್ರಿಸ್ಥಾ....ಭುವನ–ಮೂರುಲೋಕಗಳಲ್ಲಿಯೇ ಇಲ್ಲ. ಊನಂ+ಆಗದೆ–ಕಡಮೆಯಿಲ್ಲದಂತೆ ಆದಕ್ಕೆ ವಿಘ್ನವಿತಾನವು+ಅಡಸಿಹುದು—ವಿಸ್ತಾರವಾಗಿ ಅಡ್ಡಿಗಳೆ ಹೊಂದಿ ಸೇರಿಕೊಂಡಿರುವವು ಅದನು+ಅಡಂಗಿಸೆ—ಅಡಗಿಸುವಲ್ಲಿ ನಿಷೇವಣ–ಸೇವಿಸುವದು.

೪ ಇದುವೆ–ಮಂಗಲಾಚರಣೆ ವೃದ್ಧಾನುಕ್ರಮಂ-ಶಿಷ್ಟಾಚಾರವು, ಶ್ರುತಿ+ಉದಿತ–ಶ್ರುತ್ಯುಕ್ತವಾದ, ....ರುಚಿ–ಶ್ರೋತೃಗಳ ವಿಶ್ವಾಸವು, ....ವಿಧಿಯಂಪೊದೆದು–ಶಿಷ್ಟರನೇಮ ಬಿಟ್ಟು, ಈಶ....ಈಶ್ವರನ ನತಿ-ನಮಸ್ಕಾರಮಂಗಲವನ್ನು, ಪ್ರಣತಿ–ನಮುಸ್ಕಾರವನ್ನು, ಏನು ಭಾವಂ+ಎನೆ–ನಿಮ್ಮ ಅಭಿಪ್ರಾಯವೇನು ಎಂದರೆ.—

೫ ದೇವರಲ್ಲಿ+ಎಂತೊ+ಅಂತು—ಹೇಗೊ ಹಾಗೆಯೆ; ....ಠಾವಿನಲ್ಲಿ—ಗುರುವಿನ ಬಳಿಯಲ್ಲಿ, ಬಕುತಿ–ಭಕ್ತಿ ಕಥಿತ+ಅರ್ಥದ–ಗುರೂಪದಿಷ್ಟಾರ್ಥವೆಲ್ಲವೂ ತಿಳಿವಮನವು

ದೇವತೆಗೆ ಸರಿಯೆಂತು ಮರ್ತ್ಯಕ ।
ಲೇ ವರದ ಗುರುವೆನಲು, ಕೇಳ್ಬ್ರ ।
ಹ್ಮಾವ ಬೋಧರಸೈಕ ತೃಪ್ತಂ ಗೆನಗೆ ಭೇದವನು ॥ ೫ ॥

ಯಾರು ಮಾಡುವರವರು ಮೂಢರು ।
ನಾರಯಣ ಕೇಳೆಂದು ಪೇಳ್ದಂ ।
ಗೌರಿಯಾಣ್ಮಂ ಮುಕ್ತಿಖಂಡದೆ ಸೂತಸಂಹಿತೆಯ ॥
ಕೌರವಗೆ ನಾನಾತ್ಮನಿಷ್ಠಂ ।
ಬೇರೆಣಿಕೆ ಗೊಳಬೇಡವೆಂದೇ ।
ಭಾರತದ ಗೀತೆಯಲಿ ವಸುದೇವಾತ್ಮಜಂ ನುಡಿದಂ ॥ ೬ ॥

ಶಿವನೆ ಭವತಾರಕ ನೆನುತ್ತನು ।
ಭವಿಯ ಪೂಜಿಪುದೆಂದು ಪೇಳ್ದಂ ।
ದಿವಿಜರಿಗೆ ಕಮಲಾಸನಂ ನಿಜಭೂತಿ ಕಾಮರಿಗೆ ॥
ಸವೆಯದರ್ಥದಿ; ತನುವಿನಿಂದಾ ।
ಶಿವನು ತತ್ತ್ವಸಮುಷ್ಟ್ಯುಪಾಧಿ ।
ಪ್ರವರನಹ ಸರ್ವಜ್ಞನಹ ಮಾಯೇಶನಾಗಿಹನು ॥ ೭ ॥

---

ಎಂಬ ಶ್ವೇತಾಶ್ವೇತರ ಶ್ರುತಿ—

ಯಸ್ಯದೇವೇ ಪರಾಭಕ್ತಿರ್ಯಥಾದೇವೆ ತಥಾಗುರೌ ।
ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶಂತೆ ಮಹಾತ್ಮನಃ ॥

ಪರಮೇಶ್ವರನನ್ನು ಸೇವಿಸುವಂತೆಯೇ ಆತ್ಮಜ್ಞಾನಿಯನ್ನೂ ನಿಷ್ಕಾಮರಾಗಿ ಭಕ್ತಿಯಿಂದ ಮೋಕ್ಷೇಚ್ಛೆಯುಳ್ಳವರಾಗಿ ಸೇವಿಸುವವರು. ಪರಮಾತ್ಮನಲ್ಲಿಯೇ ಪ್ರತಿಷ್ಠೆಯನ್ನು ಹೊಂದುವರು, ಅವರಿಗೆ—ಪುನರ್ಜನ್ಮವೇ ಇಲ್ಲ ಎಂದೂ ಮುಂಡಕಶ್ರುತಿಯು ಸಾರುತ್ತಿದೆ.

"ಪುರುಷಂ ಯೇ ಹ್ಯಕಾಮಾಸ್ತೇ ಶುಕ್ರಮೇತದತಿವರ್ತನ್ತಿಧೀರಾಃ" (೩-೨-೧,೩-೧-೧೦) ಮರ್ತ್ಯಕಲೆವರದ—ಹುಟ್ಟುಹೊಂದುಗಳುಳ್ಳ ಶರೀರದ ಕೇಳ್+ಬ್ರಹ್ಮ....ಪ್ತಂಗೆ+ಎನಗೆ—ಜ್ಞಾನಿಗೂ ಶಿವನಾದ ನನಿಗೂ.

೬ ಗೌರಿಯಾಣ್ಮಂ—ಶಿವನು ಕೌರವನಿಗೆ—ಅರ್ಜುನನಿಗೆ ನಾನು+ಆತ್ಮನಿಷ್ಠಂ—ನನಿಗೂ ಆತ್ಮಜ್ಞಾನಿಗೂ ಬೇರೆಣಿಕೆಗೆ—ಭೇದಜ್ಞಾನಕ್ಕೆ ಒಳಬೇಡ—ಒಳಗಾಗಬೇಡ ವಸುದೇವಾತ್ಮಜಂ—ಶ್ರೀಕೃಷ್ಣನು.

೭ ....ಕನು+ಎನುತ್ತ+ಅನುಭವಿಯ—ಗುರುವನ್ನು ಸವೆಯದ+ಅರ್ಥದಿ—ಯಾವಾಗಲೂ ನಿತ್ಯವಾದ ಐಶ್ವರ್ಯದಿಂದೊಡಗೂಡಿರುವ ನಿಜಭೂತಿ—ತಂತಮ್ಮ ವಿಭೂತಿಗಳನ್ನೇ ಬಯಸುವ ದಿವಿಜರಿಗೆ—ದೇವತೆಗಳಿಗೆ ಕಮಲಾಸನಂ—ಬ್ರಹ್ಮದೇವನು ತನುವಿನಿಂದ—ತನ್ನ ಮಾಯಾಶರೀರದಿಂದ.

೮ ....ಯತ್ತಂ—ನಿತ್ಯವೂ ಅಂತಃಕರಣದಕಟ್ಟುಳ್ಳುವನು ವ್ಯಷ್ಟಿ—ದೇಹೇಂದ್ರಿಯಂ

ಗುರುವು ಕಿಂಚಿಜ್ಞಂ ಸದಾಂತಃ ।
ಕರಣತಾಯತ್ತಂ ಸದಾ ವ್ಯ ।
ಷ್ಟ್ಯುರುತರೋಪಾಧಿಕ ನಿವರ್ಗೆಂತಹುದು ಸಾಮ್ಯವೆನೆ ॥
ಸರಿಯೆ ಕಾಚವ ಮಣಿಗೆ ಪಚ್ಚೆಯ ।
ಹರಳೆನಲ್ವ್ಯಷ್ಟಿಯು ಸಮಷ್ಟಿಯು ।
ಮರುಳುಗೊಂಡೀ ಮಾಯೆಯಿಂದಾಯಿತ್ತು ಬೇರುಂಟೆ ॥ ೮ ॥

ಪೊಂದಿರುವುಪಾಧಿಯ ವಿಕಾರತೆ ।
ಯಿಂದ ಘಟಿಸಿತು ಪರಮ ತತ್ತ್ವಕೆ ।
ಬಂದುದೀ ವ್ಯಷ್ಟಿಯಲಿ ಜೀವತ್ವಂ ಸಮಷ್ಟಿಯಲಿ ॥
ಬಂದುದೀಶತೆ ಯಾತ್ಮನಿಗೆ ಭೇ ।
ದಂ ದೊರಕಿದಂದದಲಿ ಭಾವದೆ ।
ನಿಂದುದೇಭಿದೆ, ಕಲ್ಪಿತದ್ವಯವಿದು ಸಹಜವಲ್ಲ ॥ ೯ ॥

ಎಷ್ಟಸಾಧಾರಣದ ಕೃತ್ಯದೆ ।
ಪುಷ್ಟಿ ಕೃದ್ಬಲ ವುಂಟವೆಲ್ಲವು ।
ಶಿಷ್ಟಸತ್ವಗುಣಾತಿಶಯದಿಂದಾದುದೆನಬೇಕು ॥
ಎಷ್ಟು ಸಾಧಾರಣದ ಕೃತ್ಯದೊ ।
ಳಿಷ್ಟವಾಗಿಹ ಬಲವಿರದದೇ ।
ದುಷ್ಟತಾಮಸ ದೋಷದಿಂದಾಯಿತ್ತು ನಿಜವಾಗಿ ॥ ೧೦ ॥

---

ಗಳ ಒಂದು ಸಂಘಾತ, ಕಾಚದಮಣಿ–ಬರಿಯಗಾಜಿನ ಒಂದು ಚೂರಿಗೆ, ಪಚ್ಚೆಯ—ದೈವಿಕ ಭೌತಿಕವಾದ ಎಲ್ಲ ಉಪದ್ರವಗಳಿಂದಲೂ ಮನುಷ್ಯನನ್ನು ಪಾರಾಗಿಸಬಲ್ಲ ಮರಕತರತ್ನವು ಸರಿಯೆ? ಮರುಳು—ಹುಚ್ಚು, ಕ್ಷೋಭಗೊಂಡ ಈ ಮಾಯೆಯಿಂದಾಯ್ತಲ್ಲದೆ, ಚೈತನ್ಯ ದಲ್ಲಿ ನಿಜವಾದ ಭೇದಬಂದಿತೆಯೇನು?

೯ ಪೊಂದಿರುವ—ಹೊಂದಿರುವ, ವಿಕಾರತೆ—ಭೂತಕಾರ್ಯಗಳಾದ, ವ್ಯಷ್ಟಿ—ಶರೀರೇಂದ್ರಿಯದ ಸಂಘಾತವೆಂಬ ಒಂದು ಉಪಾಧಿಯಿಂದ, ಸಮಷ್ಟಿ—ಜಗತ್ತಿನ ಶರೀರ ಗಳ ಒಟ್ಟಿನ ಉಪಾಧಿಯಿಂದ ಬಂದಂತೆ ಕಾಣುವ ಈ ಜೀವೇಶ್ವರಭೇದವು ಪರಮಾರ್ಥ ದಲ್ಲಿ ಇಲ್ಲವು. ಆತ್ಮನಿಗೆ-ಅದ್ವಿತೀಯಬ್ರಹ್ಮನಾಗಿರುವ ಒಬ್ಬಾತ್ಮನಿಗೆ, ದೊರ...ದಲಿ-ಬಂದಂತೆ ಅದು ಕಾಣುತ್ತಿರುವದಲ್ಲದೆ, ಭಾವ...ಭಿದೆ–ಆತ್ಮನಲ್ಲೇನಾದರೂ ಆ ಭೇದವು ಕಾಲೂರಿ ನಿಂತಿ ರುವದೇನು? ಇಲ್ಲ. ದ್ವಯವು+ಇದು—ಎಂದಿಗೂ ಆತ್ಮನಲ್ಲಿ ಇಲ್ಲದ ಈ ಭೇದವು ಬರಿಯ ಹೆಸರಿಗೆ ಮಾತ್ರ ಕಲ್ಪಿತವಾಗಿ ಬಂದಿರುವದಷ್ಟೆ?

೧೦ ಎಷ್ಟು+ಅಸಾಧಾ....ಈಶ್ವರನ ಅಸಾಧಾರಣ ಶಕ್ತಿಯ ಕಾರ್ಯಗಳು ಸತ್ವಗುಣ ದ್ದೆಂತಲೂ, ...ದೊಳು+ಇಷ್ಟವಾಗಿಹ....ತನ್ನಿಷ್ಟಾರ್ಥ ಸಾಧನೆಗೆ ತಕ್ಕಷ್ಟು ಬಲವೂ ಜೀವ ನಲ್ಲಿ ಕಾಣದಿರುವದು ಮಲಿನಸತ್ವಗುಣದ ಕಾರ್ಯವೆಂತಲೂ ಊಹಿಸಬೇಕು.

ಹೀಗೆನುವದು ವಿವೇಕ ಸಾರದ ।
ವಾಗುದಿತ ಮಭಿಯುಕ್ತ ನಿರ್ಮಲ ।
ವಾಗುದಿತ ಮಿನ್ನೊಂದು ವಿಶ್ವಾಧಿಕನೆ ಪರಮೇಶ ॥
ಭಾಗದೃಕ್ಕಿಂ ಮಶಕ ತಾಂ ಸುರ ।
ನಾಗ ಏಂ ಚಿದೃಕ್ಕಿನಿಂ ಬೇ ।
ರಾಗಿ ತೋರ್ಪುದದೇನು ನನ್ನೊಳು ನಿನ್ನೊಳೆಂಬುದರಿಂ ॥ ೧೧ ॥

ಘಟಿಸಿದುದಭೇದಂ; ಗುರುವಿನಿಂ ।
ನಿಟಿಲ ನಯನಂ ಪೂಜ್ಯನಾಗಿಹ ।
ನಿಟಿಲ ಲೋಚನನಿಂದ ಗುರುಕೃತ ಪೂಜ್ಯನೇ ಎನಲು ॥
ಸ್ಫುಟದಿ ನನ್ನಿಂ ಘನ ಹಿರಣ್ಮಯ ।
ಪಟಲ ದೆಶೆಯಿಂ ಬ್ರಹ್ಮನಿಂ ಸಂ ।
ಘಟಿತ ಮಾಯಾ ದೂರ ಪೂಜ್ಯಂ, ಧನನಿಧಿಯನೈದಿ ॥ ೧೨ ॥

ಬಾಲನೆಂತೈದನೋ ಫಲವ ನೀ ।
ಬಾಲಿಶರು ತಾವಂತೆ ತಾತ್ವಿಕ ।
ಶೀಲನಂ ವಿಜ್ಞಾನಿಯಂ ಕಳಿದಿಪ್ಪರಕಟಕಟ! ॥

---

೧೧ ....ಉದಿತಂ–ಹೀಗೆಂಬುದೆ ವಿವೇಕದಿಂದಾದ, ನಿರ್ಮಲವು ಸರಿಯಾದ ನಿಶ್ಚಯವು ಆಗಿ+ಉದಿತಂ+ಇನ್ನೊಂದು—ಗುರುವೆ ಈಗ ಮತ್ತೊಂದು ಸಂದೇಹ. ವಿಶ್ವಾ....ಶಿವನು ಇಡಿಯ ಜಗತ್ತಿಗೇ ಹೆಚ್ಚು, ಭಾಗದೃಕ್ಕಿಂ—ವಿವೇಕಜ್ಞಾನಮಾತ್ರದಿಂದ—ಅಲ್ಪನೂ ಮರ್ತ್ಯನೂ ಆಗಿ, ಹುಟ್ಟಿಬಂದಿರುವ ಗುರುವು ಪರಮೇಶನೆಂಬುದು ಹೇಗೆ? ಮಶಕತಾಂ–ಕ್ಷುದ್ರಸೊಳ್ಳೆಯು ಎಂದಿಗಾದರು, ಸುರನಾಗ+ಏಂ?—ದೇವಲೋಕದ ಆನೆಯಾದೀತೆ ಏನು? ಉತ್ತರ–ಉಪಾಧಿಯಿಂದ ಗುರು, ಶಿವ ಎಂದಿಬ್ಬರಲ್ಲಿ ಭೇದ ಕಂಡುಬಂದರೂ, ಚಿತ್ ದೃಕ್ಕಿನಿಂ–ಚೈತನ್ಯದ ದೃಷ್ಟಿಯಿಂದ ಅದು ಕಾಣುವದಿಲ್ಲವು.

೧೨ ನಿಟಿಲನಯನಂ—ಹಣೆಗಣ್ಣುಳ್ಳ ಶಿವನು. ಗುರುವೇನಾದರೂ ಆ ಶಿವನಿಂದ ಕೃತ—ಪೂಜೆಗೊಳ್ಳುವನೇನು? ಘನ...ಟಲ–ಬ್ರಹ್ಮಾದಿಸರ್ವದೇವತಾ ಸಮೂಹದಿಂದಲೂ ಬ್ರಹ್ಮನಿಂ—ವಿಷ್ಣುವಿನಿಂದಲೂ ಸಂಘಟಿತ—ಚೆನ್ನಾಗಿ ಹೊಂದಿಕೆಯಾಗುವಂತೆ ಮಾಯಾ ದೂರ–ಗುರುವು (ಭಾಗವತ ೧೨–೧೦).

೧೩ ಬಾಲನು+ಎಂತು+ಐದನೋ–ಹೇಗೆ ಹೊಂದುವದಿಲ್ಲವೊ ಈ ಬಾಲಿಶರು—ತಿಳಿಯದಿರುವ ಈ ಮೂಢರೂ ಹಾಗೆಯೇ ಲಾಭ ಹೊಂದುತ್ತಿಲ್ಲ, ತಾತ್ತ್ವಿಕಶೀಲನಂ—ಸ್ವಭಾವಧಿಂದಲೇ ತತ್ತ್ವದಲ್ಲಿ ನೆಲೆನಿಂತಿರುವ ತತ್ತ್ವದರ್ಶಿಯನ್ನು ಕಳಿದು+ಇಪ್ಪರು–ಕಳಿಯುತ್ತಿರುವರಲ್ಲ! ತತ್+ಶೀಲಂ–ಆ ಬ್ರಹ್ಮವನ್ನೆ ತನ್ನ ಸ್ವಭಾವವನ್ನಾಗಿ ಅಳವಡಿಸಿ ಕೊಂಡುಬಿಟ್ಟರೆ. ಶೂಲಕರನು–ಶಿವನೆ ತಾನಾಗುವನೇನು? ಎನಲ್ಕೆ+ಅಭಿಯುಕ್ತ–ಶಿಷ್ಟರ ಮತ್ತು ಶ್ರುತಿಗಳ ಸಮ್ಮತಿ—'ಬ್ರಹ್ಮವೇದ ಬ್ರಹ್ಮೈವಭವತಿ,' 'ಏಕೋದೇವಸ್ಸರ್ವ

ಪೇಳಲೇನೆಂದನು ಶಿವಂ, ತ ।
ಚ್ಛೀಲ ಮುಳವಟ್ಟಿರೆ ಗುರುವೆ ತಾಂ ।
ಶೂಲಕರನಪ್ಪನೇಂ ಎನಲ್ಕಭಿಯುಕ್ತ ವಾಕ್ಯಿಹುದು ॥ ೧೩ ॥

ಹರಿಮುಖಾದ್ಯುತ್ತಮ ಶರೀರಾಂ ।
ತರವ ಪೊಕ್ಕೀ ಜೀವ ತತ್ತ್ವವೆ ।
ಸುರನೆನಿಪ ಮರ್ತ್ಯಾದಿ ನೀಚ ಶರೀರದಿಂದವರ ॥
ಪರಿಚರಣಮುಂ ಮಾಳ್ಪ ಭೇದ ।
ಸ್ಫುರಣೆಯಳಿಯಲುಪಾಧಿಯ ಪರಾ ।
ವರವೆ ಕಲ್ಪಿತವಲ್ಲದೆ ತಾತ್ತ್ವಿಕವಹುದೆ ದೃಢವಾಗಿ ॥ ೧೪ ॥

ಹೀಗೆ ಪ್ರತ್ಯಗಭಿನ್ನ ಚಿತ್ತನು ।
ವಾಗಿರದು; ಜೀವತ್ವವದನುಳಿ ।
ದಾಗ ಗೌರವವೆಲ್ಲಿಹುದೆನಲ್ಕವರೊಳೀರ್ವರೊಳು ॥
ತಾಗುತಿಹ ಮಿಥ್ಯಾತ್ವದಿಂ ಚ ।
ನ್ನಾಗಿ ಬಾಧಿತಮಲ್ಲದೆಸೆಯದ ।
ದಾಗ ಎಂಬಾಚಾರ್ಯಮತ ಜೀವೇಶರೊಳೈಕ್ಯರ್ಗಂ ॥ ೧೫ ॥

ಆದಿಪೂಜ್ಯರದಾರು ಗುರುಶಿವ ।
ಭೇದದಲ್ಲೆನೆ, ಗುರುವೆ ಪೂಜ್ಯನ ।
ನಾದಿಪೂಜ್ಯಂ ಶಂಭುವೆಂಬಲ್ಲಾಗಮೋದ್ಘೋಷಂ ॥

---

ಭೂತಾಂತರಾತ್ಮ....'—ಬ್ರಹ್ಮಾದಿಪಿಪೀಲಿಕಾಂತವಾದ ಸರ್ವಭೂತಗಳಲ್ಲಿಯೂ ಚೈತನ್ಯವೊಂದೇ ಒಳಹೊಕ್ಕಿರುವದೆಂದು ಪಂಚದಶೀನಾಟಕದೀಪ. (೧೦—೨)

೧೪ ಹರಿಮುಖಾದಿ+ಉತ್ತಮ–ವಿಷ್ಣು ಮುಂತಾದ ದೇವತೆಗಳ ಶರೀರಗಳಲ್ಲಿ ಪೊಕ್ಕು—ಒಳಹೊಕ್ಕು ಪ್ರವೇಶಿಸಿ ಈ ಜೀವತತ್ತ್ವವೆ–ವೇದಗಳೆಲ್ಲದರ ತಿರುಳಾದ ಈ ಆತ್ಮತತ್ತ್ವವೇ ಸುರನೆನಿಸಿ ಪೂಜ್ಯನೆಂತಲೂ ಮರ್ತ್ಯಾದಿ–ಮನುಷ್ಯರ ನೀಚಶರೀರಗಳಲ್ಲಿ ಹೊಕ್ಕು ದೇವತೆಗಳನ್ನು ಸೇವಿಸುತ್ತ ಪೂಜಕನೆಂತಲೂ ಬಂದಿರುವ ಈ ಭೇದವು ಅಳಿಯಲು–ಉಪಾಧಿಗಳು ಜ್ಞಾನದಿಂದ ಬಾಧಿತವಾಗಲು ಪರಾ+ಅವರ–ಶರೀರಗಳ ಈ ಉಚ್ಚನೀಚ ಎಂಬ ಭೇದವು ಕಲ್ಪಿತವಲ್ಲವೆ? ಭೇದವು ತನ್ನಲ್ಲಿ ಅಳಿಸಿಕೊಂಡಿರುವ ಆತ್ಮತತ್ತ್ವವೊಂದೇ ಒಂದು ಗಟ್ಟಿಯಾಗಿ ನೆಲೆನಿಂತಿರುವದು.

೧೫ ಪ್ರತ್ಯಗಭಿನ್ನ—ಪ್ರತ್ಯಗಾತ್ಮ ಸ್ವರೂಪದಿಂದಿರುವ, ಚಿತ್ತು—ಬ್ರಹ್ಮಾತ್ಮಭಾವವಾದ ತನ್ನಲ್ಲಿ. ಭೇದವು+ಅನುವಾಗಿ+ಇರದು—ತಾನು ಹೊಂದುವಂತಿರುವದಿಲ್ಲವು, ಏತಕ್ಕೆಂದರೆ ಜೀವತ್ವವು+ಅದನು+ಉಳಿದಾಗ–ಬಿಟ್ಟು ಮೇಲೆದ್ದಾಗ, ತತ್ತ್ವದಲ್ಲಿ ಗೌರವಂ+ಎಲ್ಲಿಹುದು—ಪೂಜ್ಯಭಾವದ ಈಶ್ವರನೆಂಬ ಭೇದವು ಕಣ್ಣಿಟ್ಟು ಹುಡುಕಿದರು ತೋರುವದಿಲ್ಲವು, ತಾಗುತಿಹ—ತಾನಾಗಿಯೆ ಸೋಂಕಿತಗಲುವ, ಬಾಧಿತಂ+ಅಲ್ಲದೆ+ಆಗ ಸತ್ಯವಾಗಿ

ಆದರಾಗುರು ಶಿವರೊಳಧಿಕರ ।
ಭೇದಿಸಲ್ತಕ್ಕುದೆನೆ, ಗುರುವಾ ।
ಪಾದಿತ ತ್ರ್ಯೈಮೂರ್ತ್ಯನೆಂದು ಪುರಾಣತತಿಯುಂಟು ॥ ೧೬ ॥

ಇದ್ದು ಸಕಲರ ದಹರ ದೇಶದೆ ।
ತಿದ್ದಿದರ್ಥವದೇನು ಶಿವ, ತಾಂ ।
ಹೊದ್ದಿ ಗುರುವಿಂ ವೇದ್ಯನಾಗೆ ಸಫಲ ನೆನಿಪನಲ್ತೆ ॥
ಸದ್ದಿದೃಕ್ಷುಗಳಿಂಗೆ ರುದ್ರ ಲ ।
ಸದ್ಧರನ್ಮುಖಚಂದ್ರಿಕಾ ಭಾ ।
ಸ್ವದ್ದಯಾರಸ ಮಿಲ್ಲದೆಂತುದಿಸುವುದು ವಿಜ್ಞಾನಂ ॥ ೧೭ ॥

ಆದರಾಲಿಸು ಮಗನೆ, ಶಿವನೆ ಮ ।
ಹೋದಧಿಯ ಪಾಂಗಿನಲಿ ತೋರ್ಪನು ।
ಆದಿಮೂರ್ತಿಯನಾಂತ ಗುರು ಕಲ್ಲೋಲದಂತಿಹನು ॥
ಆ ದಿನಕ್ಕಾದಿನಕೆ ಭವರುಜೆ ।
ತೀದ ಜಂತುಗಳಿಂಗೆ ಸುಖಮುಪ ।
ಪಾದಿಸಲ್ಕಾ ಜಲಮೆ ವೀಚಿಯ ತಳೆದುದಾಕೃತಿಯಂ ॥ ೧೮ ॥

---

ಆ ಭೇದವು+ಎಸೆಯದದು+ಆಗ ಎಂಬ+ಆಚಾರ್ಯರ.

೧೬ ಗುರ಼ುವು, ಶಿವನು ಎಂಬ ಭೇದವಲ್ಲಿ–ಇಬ್ಬರಲ್ಲಿ ಎನೆ, ಗುರುವೆ ಆದಿಪೂಜ್ಯನು, ಅಧಿಕರ–ಯಾರುಹೆಚ್ಚು ಎಂಬುದನ್ನು ವಿಂಗಡಿಸಬೇಕು ಎಂದರೆ ಗುರುವು+ಆಪಾದಿತ ಹೇಳಲ್ಪಟ್ಟನು.

೧೭ ದಹರದೇಶದೆ—ಸರ್ವಜೀವರ ಹೃದಯಗಳಲ್ಲಿ ಶಿವನಿದ್ದು, ತಿದ್ದಿದ+ಅರ್ಥವು—ತಪ್ಪುತಿಳುವಳಿಕೆಯನ್ನು ಕಳೆದು, ಅವನು ಕೊಟ್ಟಿರುವ ತಿಳಿವಳಿಕೆಯಾದರೂ ಯಾವದು? ತಾಂಹೊದ್ದಿ–ಆ ಶಿವನು ನರ ಶರೀರವನ್ನು ಹೊದ್ದಿ ಸಮೀಪಿಸಿ, ಸತ್+ದಿದೃಕ್ಷು–ಸತ್ತನ್ನೇ ಕಾಣಳೆಳಸುವ ಜಿಜ್ಞಾಸುಗಳಿಗೆ, ರುದ್ರ—ಭೇದರೂಪ, ಭಯಂಕರರೂಪ ಸಂಸಾರದಿಂದ ರಕ್ಷಿಸುವವರಲ್ಲಿ. ಲಸತ್—-ಹೆಚ್ಚಾಗಿ ಶೋಭಿಸುವ, ರುದ್ರ–ಗುರುವಿನ ರೂಪದಿಂದ ಸಮೀಪಿಸಿರುವ ಶಿವನು ಅಥವಾ ಲಸತ್—ಮೇಲೆದ್ದು ಕಾಣುವ ಸಂಸಾರ ತಾಪವನ್ನೆಲ್ಲ ಹರನ್+ಮುಖ....ಸ್ವತ್—-ಹೋಗಲಾಡಿಸುವ ಹಸುನಗೆಯ ಬೆಳುದಿಂಗಳಿನ ಪ್ರಶಾಂತಿಯಿಂದ ಒಪ್ಪುವ, ರುದ್ರ—ಗುರುವಿನ ರೂಪುಗೊಂಡಿರುವ ಶಿವನ ದಯಾರಸವೊಂದಿಲ್ಲದಿದ್ದರೆ ಸಂಸಾರತಮಸ್ಸನ್ನು ಕಳೆಯುವ ಅನುಭವವು ಯಾರಿಗೇ ಆಗಲಿ ಹೇಗೆ ತಾನೆ ಆದೀತು?

೧೮ ಮಹೋ....ನಲಿ—ಮಹಾಸಮುದ್ರದಂತೆ, ಆದಿ....ಯನು+ಅಂತ—ಹುಟ್ಟು ಹೊಂದುಗಳುಳ್ಳ ಶರೀರವನ್ನು ಧರಿಸಿ ಬಂದಿರುವ ಗುರುವಾದರೋ, ಕಲ್ಲೋಲ—ಮಹಾತರಂಗದಂತಿರುವನು, ಆದಿ....ನಕ್ಕೆ—ಸಂಸಾರರೋಗಬಲಿತಿರುವ ಅಧಿಕಾರಿಗಳಿಗೋಸ್ಕರ ಆಯಾಯ ದಿನದಿನಕ್ಕೂ ತಪ್ಪದಂತೆ ಶಿವನು, ಭವ....ತೀದ—ಪಕ್ವಗೊಂಡು ಮುಗಿಯಲು,

ತೋರುತಿಹುದದ್ವೈತ ವಾಸನೆ ।
ತೋರುತಿಹುದು ವಿವೇಕವಾತ್ಮನ ।
ತೋರುತಿಹುದೆಣಿಸಲ್ಕೆ ಕೈವಲ್ಯದಲಿ ದೃಢವಾಂಛೆ ॥
ಪಾರಮೇಶ್ವರದಿಂದೆ ಗುರುವಿಂ ।
ತೋರುವುದೆ ಎನೆ, ಬ್ರಹ್ಮ ವಿಷ್ಣು ಪು ।
ರಾರಿ ಬಲಭೇದಿಗಳು ಚಿರ ಸಂಪೂಜಿತರು ತಮ್ಮ ॥ ೧೯ ॥

ಕಿಂಕರರಿಗೆ ಅಗೋಚರದಲಿ ಶಿ ।
ವಂ ಕರರೆ ಹೊರತಾಗಿ ಬಯಕೆಗೆ ।
ಲೆಂಕನಾದೀ ಮನದ ಖೋಡಿಯ ಬಿಡಿಸರನುವಾಗಿ ॥
ಶಂಕರನೆ ಜನನಾದಿ ಕೃತ್ಯಾ ।
ತಂಕದಿಂ ಗುರುಮೂರ್ತಿವಿಡಿದು ನಿ ।
ರಂಕುಶಾನಂದಮನು ಜಂತುಗಳಿಂಗೆ ಕೊಡಲಿರ್ಪಂ ॥ ೨೦ ॥

ಬೇವ ಬೆಲ್ಲವ ಮಾಡಿಕೊಡಿ ಎಂ ।
ದೋವಿ ಕೂಸುಗಳತ್ತರವದಿರ ।
ಭಾವಮಂ ನೋಯಿಸದೆ ಹಾಗೆಯೆ ಮಾಡಿ ಕೊಡುತಿಹೆವು ॥

---

ತೀದ–ತೀರಿ ಮುಗಿದುಬಂದ, ಭವರೋಗವುಳ್ಳ ಜೀವರಿಗೆ ಸುಖಂ+ಉಪ...ಲ್ಕೆ-ಸಂಸಾರದಿಂದ ವಿಶ್ರಾಂತಿಯ ಸುಖವನ್ನು ಕೊಡುವದಕ್ಕೆಂದೇ, ಆ ಜಲಮೆ–ಸಮುದ್ರದ ಆ ನೀರೇ, ವೀಚಿಯ ಆಕೃತಿಯುಂ–ಅಲೆಯ ಆಕಾರವನ್ನು, ತಳೆದುದು–ಹೊಂದುವಂತೆ; ಶಿವನೂ–ಗುರುವಿನ ರೂಪದಿಂದ ಮೈದೋರಿಕೊಳ್ಳುತ್ತಿರುವನು.

೧೯ ಎಣಿಸಲ್ಕೆ–ವಿಚಾರಿಸಿದರೆ, ಪಾರ...ದಿಂದ–ಶಿವನಿಂದಲೇ ತೋರುವದಲ್ಲವೇ? ಎನೆ–ಎಂದು ಶಿಷ್ಯನು ಕೇಳಲು, ಪುರಾರಿ–ಶಿವನು, ಬಲಭೇದಿಗಳು–ಇಂದ್ರಾದಿದೇವತೆಗಳು ಚಿರ–ಬಹುಕಾಲ.

೨೦ ತಮ್ಮ ಸೇವಕರಿಗೆ ಅವರು ಅಗೋಚರದಲ್ಲಿದ್ದುಕೊಂಡು, ಶಿವಂಕರರೆ-ಸಂಸಾರದ ಅಭ್ಯುದಯವನ್ನು ಮಾಡತಕ್ಕವರೆ ಹೊರತು, ಲೆಂಕನು–ಸೇವಕನಾದ, ಖೋಡಿ–ನೀಚತ್ವವನ್ನು, ಜನನ+ಆದಿ–ಮರಣ ಶೋಕ ಮೋಹ ಹಸಿವು ನೀರಡಿಕೆ ಎಂಬ, ಕೃತ್ಯಾತಂಕದಿಂ–ಸಂಸಾರದ ಈ ಆರು ತೊಡಕುಗಳನ್ನು ಹೊಂದಿ, ಮೂರ್ತಿ–ಪುಣ್ಯದೇಹವನ್ನು ಧರಿಸಿಕೊಂಡು, ನಿರಂಕುಶಾನಂದ–ಅಕಂಟವಾದ ಆತ್ಮಾನಂದವನ್ನು ಮುಮುಕ್ಷುಗಳಿಗೆ ಕೊಡುವದಕ್ಕೆಂದೇ ಶಿವನು ಸದಾ ಕಾದುಕೊಂಡಿರುವನು.

೨೧ ಎಂದು+ಓವಿ–ತಾಯ್ತಂದೆಗಳಲ್ಲಿ ಪ್ರೀತಿಯಿಟ್ಟ ಅತ್ತರೆ+ಅವದಿರ–ಆ ಮಕ್ಕಳ ಭಾವಮಂ–ಹೃದಯದ ಇನ್ನು ಕೋಮಲ ಅವಸ್ಥೆಯನ್ನು ಕಂಡ ಅವರು, ನೀವು+ಅಳಲ್ಕೆ+ಇನ್ನು+ಅಗದು+ಎಂದುಮಾಡುವ+ಉಪಜೀವಿತ+ಉಕ್ತಿ-ಅನುಕಂಪದ ಸಮಾಧಾನದಂತೆ....ಮುಖರ್–ಮೊದಲಾದ ದೇವತೆಗಳು.

ನೀವಳಲ್ಕಿನ್ನಾಗದೆಂ ದುಪ ।
ಜೀವಿತೋಕ್ತಿಯ ಪೇಳ್ವ ಜನಕರ ।
ಭಾವದಂದದಿ ಶಿವಮುಖರ್ಕಿಂಕರರ ಪೋಷಿಪರು ॥ ೨೧ ॥

ಆದರೀಶ್ವರ ಗುರುಗಳಲ್ಲಿ ಅ ।
ಭೇದಘಟಿಸಿತು; ಗುರುವಿಗಾಧಿ ।
ಕ್ಯೋದಯ ಮದೆಂತೆನಲು, ಮಾಯಿ ಮಹೇಶ ನಿರ್ಮಾಯ ॥
ಮೇದಿನಿಯ ಮಧ್ಯದಲಿಗುರು; ಶಿವ ।
ನೈದಿ ಕೋಪಿಸೆ ಪೊರೆವ ದೇಶಿಕ ।
ನೈದೆ ದೇಶಿಕ ಮುನಿಯೆ ಶಿವನಾಗನು ಪರಿತ್ರಾತ ॥ ೨೨ ॥

ಪರಮ ಗುರುವಾರನುಪಮಾನ ।
ಸ್ಥಿರ ಯಶೋನಿಧಿ ಕೇಳು, ಪೆತ್ತವ ।
ಗುರುವೆನಿಸುವ, ನಿಷೇಕಮುಖ ಕೃತ್ತಹನು ಗುರು ಸಂಜ್ಞಂ ॥
ಗುರುಗಳಲ್ಲಿವರಾತ್ಮ ಶಿಷ್ಯಾ ।
ದರ ವಿಷಯ ಧನಧಾನ್ಯ ಪಶು ತ ।
ಸ್ಕರರು ಬಂಧಪ್ರದರು ವಂಚಕರಲ್ತೆ ನೋಡಿದರೆ ॥ ೨೩ ॥

ಮಂತ್ರದಂ ಗುರುವಲ್ಲ ನಾನಾ ।
ತಂತ್ರದಂ ಗುರುವಲ್ಲ ದಿವಿಷ ।
ದ್ಯಂತ್ರದಂ ಗುರುವಲ್ಲ ಭೂತಿದ ನಾಗಗುರುವರ್ಯಂ ॥

---

೨೨ ಆದರೆ+ಈಶ್ವರನು, ಗುರುವಿಗೆ+ಆಧಿಕ್ಯೋದಯಂ—ಶಿವನಿಗಿಂತಲೂ ಹೆಚ್ಚಿಂಬುದು ಹೇಗೆ? ಎಂದರೆ, ಮೇದಿನಿ—ಭೂಮಿಯಮೇಲೆ, ದೇಶಿಕನು+ಐದೆ—ಸೇರಿದ, ದೇಶಿಕ—ಗುರುವು, ಮುನಿಯೆ—ಕೋಪಗೊಂಡಲ್ಲಿ ಆ ವಿಪತ್ತಿನಿಂದ ಶಿವನು+ಪರಿತ್ರಾತ—ರಕ್ಷಕನು, ಆಗನು—ಆಗುವದಿಲ್ಲ.

೨೩ ....ಗುರುವು+ಆರು—ಯಾರು? ಎಂದರೆ ಅನುಪ....ನಿಧಿ—ಮತ್ತೊಬ್ಬರನ್ನು ಹೋಲಿಸುವದಕ್ಕಿಲ್ಲದ ಸ್ಥಿರಗೊಂಡ ಯಶಸ್ವಿಯೆ ಕೇಳು, ಪೆತ್ತವ—ಹುಟ್ಟಿಸಿದ ತಂದೆ, ನಿಷೇಕ....ಕನ್ನಿಕೆಯನ್ನು ಧಾರೆಯೆರೆದ ಮಾವನು ಇವರು ಗುರುವೆಂದೆನ್ನಿಸಿಕೊಂಡರು, ವಿಚಾರಿಸುವಲ್ಲಿ ಗುರುಗಳು+ಅಲ್ಲ+ಇವರು ಏತಕ್ಕೆಂದರೆ ಆತ್ಮ—ತಮ್ಮ, ಮಗ ಮತ್ತು ಶಿಷ್ಯ—ಅಳಿಯ ಇವರನ್ನು ಚನ್ನಾಗಿ ಸಂಸಾರದಲ್ಲಿ ಸಿಗಿಸಿಬಿಟ್ಟು ಬಂಧ ಪ್ರದರಾಗುವರು, ಅಲ್ಲದೆ, ಆದರ-ಅವರಿಗೆ ಪ್ರಿಯವಾಗಿರುವ ಧನಧಾನ್ಯ ಪಶುಗಳನ್ನೂ ಕದಿಯುವ, ತಸ್ಕರರು—ಕಳ್ಳರು, ವಂಚಕರು ಆಗುವರು.

೨೪ ಮಂತ್ರ+ದಂ—ಕೊಡತಕ್ಕವನು, ....ತಂತ್ರದಂ—ಕುಟುಂಬ ಪೋಷಣೆಗೆ ಬೇಕಾದದ್ದು, ಶಾಸ್ತ್ರ ಸಿದ್ಧಾಂತ, ಮೂಲಿಕಾವಿಶೇಷ ಈ ಮುಂತಾದವುಗಳನ್ನು ಹೇಳಿಕೊಡುವವನು, ದಿವಿಷತ್+ಯಂತ್ರ+ದಂ—ಸಾಮಾನ್ಯ ದೇವತೆಗಳಲ್ಲೊಬ್ಬರನ್ನು ಸಾಧಿಸುವ ಕ್ರಮ

ಸಂತ್ರ ಈ ಮಾರ್ಗಸ್ಖಲಿತ ದು ।
ರ್ಮಂತ್ರ ಭವಮೋಹಪ್ರದಾರಣೆ ।
ಯಿಂ ತ್ರಿವರ್ಗದನಲ್ಲ ಗುರುವೆಂಬಲ್ಲಿ ಪೌರಾಣಂ ॥ ೨೪ ॥

ವಿದುರ ಕೇಳೈ ಚಾರು ವೇದಾಂ ।
ತದ ಪದವಿಯಲ್ಲಿರ್ಪ ಶಿವನೇ ।
ಪುದಿದ ಭವಮಂ ಬಿಡಿಪನಲ್ಲದೆ ಸಾಧುಸಂತತಿಗೆ ॥
ಅದರೊಳಿದರೊಳಗಿರ್ಪ ಶಂಭುವಿ ।
ದೊದಗಿಸನು ನಿಷ್ಕರುಣಿಯೇ ಎನ ।
ಲದರದರೊಳಿರ್ಪಾತನಹ ಕಾಲಾಂತರಕೆ ಫಲದಂ ॥ ೨೫ ॥

ಓಡುವಾಕಳಿಗೆಳೆಯ ಹುಲ್ಲಿನ ।
ಜಾಡುತೋರಿಸಿ ನಿಲಿಸಿ ಮೇಯಿಸಿ ।
ಕೂಡೆ ಕಟ್ಟುವ ತೆರದೊಳಿಷ್ಟಾರ್ಥಿಯಂ ಗೈದು ॥

---

ವನ್ನು ಹೇಳಿಕೊಡತಕ್ಕವರು, ಭೂತಿ+ದಂ—ಐಶ್ವರ್ಯ ಸಂಪತ್ತುಗಳು—ದಾಸ ಭೃತ್ಯ ಪುತ್ರ ಬಂಧುವರ್ಗ ವಸ್ತ್ರ ವಾಹನ ಧನ ಧಾನ್ಯಗಳೆಂಬ ಅಷ್ಟೈಶ್ವರ್ಯಗಳು, ಅಣಿಮಾ. ಮಹಿಮ, ಗರಿಮ, ಲಘುಮ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ ವಶಿತ್ವಎಂಬ ಅಷ್ಟಸಿದ್ಧಿಗಳು ಅಥವಾ ರಾಜ್ಯಲಕ್ಷ್ಮಿ ಧೈರ್ಯಲಕ್ಷ್ಮಿ ಶೌರ್ಯಲಕ್ಷ್ಮಿ ಧಾನ್ಯಲಕ್ಷ್ಮಿ ಜಯಲಕ್ಷ್ಮಿ ಧನಲಕ್ಷ್ಮಿ ಕೀರ್ತಿಲಕ್ಷ್ಮಿ ವಿದ್ಯಾಲಕ್ಷ್ಮಿ ಎಂಬ ಅಷ್ಟಮಹಾಲಕ್ಷ್ಮಿಯರು ಇವುಗಳಲ್ಲೊಂದನ್ನು ಕೊಡತಕ್ಕವರು ಪ್ರಪಂಚಕ್ಕೆ ದೊಡ್ಡವರೆಂಬುದು ನಿಜವಾದರು ಸಂಸಾರದಿಂದ ಉದ್ಧರಿಸಿಕೊಳ್ಳಬೇಕೆಂಬ ತತ್ತ್ವ ಜಿಜ್ಞಾಸುಗಳನ್ನು ಕುರಿತು ಇವರು ಗುರುವರ್ಯರಲ್ಲ. ಏತಕ್ಕೆಂದರೆ ಸಂತ್ರ (?)-ಸಂತನೆ, ಸಾಧುವೆ. ಈ ಮಾರ್ಗಸ್ಖಲಿತ—ಈ ಮೇಲಿನವುಗಳು ಸಂಸಾರತಾರಕವಾದ ಈ ಜ್ಞಾನಮಾರ್ಗದಿಂದ ತನ್ನನ್ನು ಕದಲಿಸಿಬಿಟ್ಟು, ಕೆಳಕ್ಕೆ ಜಾರಿಸಿಬಿಡುವ ದುರ್ಮಂತ್ರಗಳು. ಆದ್ದರಿಂದ ಗುರುವೆಂದರೆ, ಭವಮೋಹ....—ಕೈಸೇರಿ ಒಡನೆಯೆ ತನ್ನ ಕೈಯನ್ನು ಕಳಚಿಕೊಂಡು ಬಿಸಿಲಿಗೆ ಮೈಗರೆಯುವ ಮಂಜಿನಂತೆ ವಿವೇಕದಿಂದ ಕರಗಿ ಹೋಗುತ್ತಿರುವ ಸ್ತ್ರೀ ಪುತ್ರಾದಿ ಬಂಧುವರ್ಗಗಳ ದುಸ್ಸಹವಾದ ಈ ಸಂಸಾರ ಮೋಹವನ್ನು ಹರಿದುಬಿಸುಡುವವನೇ ಗುರುವಲ್ಲದೆ, ಧರ್ಮ ಅರ್ಥ ಕಾಮುಗಳೆಂಬ ಸಂಸಾರದ ತ್ರಿವರ್ಗದ ಫಲಗಳನ್ನು ಉಪದೇಶಿಸಿ, ಆ ಮೋಹವನ್ನು ಹೆಚ್ಚಿಸುವವನು ಎಂದಿಗೂ ಗುರುವಲ್ಲ.

೨೫ ವಿದುರ—ಎಲೈ ವಿವೇಕಿಯೆ, ಚಾರು...ಲ್ಲಿರ್ಪ—ಬ್ರಹ್ಮವಿದ್ಯೋಪದೇಶಕನಾದ ಗುರುವಿನ ರೂಪುಗೊಂಡಿರುವ, ಪುದಿದ—ಅಜ್ಞಾನದಿಂದ ತನಗೆ ಸೇರಿದ, ಅದರೊಳಗೆ+ಇದರೊಳಗಿರ್ಪ–ವಿಭಿನ್ನವಾದ ವಿಗ್ರಹಾದಿಗಳಲ್ಲಿ ಆರಾಧ್ಯ ರೂಪುಗೊಂಡಿರುವ, ಶಂಭುವು+ಇದು (–ಸಂಸಾರದ ಬಿಡುಗಡೆಯನ್ನು)+ಒದಗಿಸನು, ....ಳು+ಇರ್ಪ+ಆತನು+ಅಹ—ಆ ವಿಗ್ರಹಾದಿಗಳಲ್ಲಿ ದೇವರ ರೂಪುಗೊಂಡಿರುವ ಶಿವನಾದರೆ ಅದೃಷ್ಟಫಲಪ್ರದನಾಗುವನು.

೨೬ ಜಾಡು—ತನ್ನ ಕೈಯೊಳಗಿರುವ ಎಳೆಯ ಹುಲ್ಲಿನ ಕುರುಹು, ಇಷ್ಟಾರ್ಥ

ಬೇಡಿದುದನೊಡನಿತ್ತು ಕಡೆಗಿವ ।
ರೀಡಿರಿದ ಬಂಧನವಳಿದು ಕಾ ।
ಪಾಡಬೇಕೆಂಬಾವುದೊಂದಭಿಮಾನ ಮೀಶಂಗೆ || ೨೬ ||

ಎಂದಿಗಹುದಾದಿನದೆ ತಾಂ ಗುರು ।
ವೆಂದೆನಿಪ ಪೆಸರಿಂದ ಸುಳಿವ ನ ।
ಮಂದ ಭಾಗ್ಯರ ಮುಂದುಗಡೆಯೊಳ್ಸುಂದರಾಕೃತಿಯಿಂ ||
ಇಂದುಶೇಖರ ನುಳಿದ ಸುರರೇಂ ।
ಬಂದಿರರೆ ತತ್ಕಾರ್ಯಕೆನೆ, ಗೋ ।
ವಿಂದನಿಂದಾಗುವದು ಜಂತುವಿಗರ್ಚಿರಾದಿ ಗತಿ || ೨೭ ||

ಭಾರತಿಯ ಪತಿಯಿಂದ ವೈಪ್ರಂ, ।
ಭಾರತಿಯ ದೆಶೆಯಿಂದ ವಾಕ್ಯದೆ ।
ಚಾರುತೆ, ಕಲಾನಾಥನಿಂ ಕುಡಿವರಿಗು ಕೀರ್ತಿಲತೆ ||
ಸೂರನಿಂದಾರೋಗ್ಯ ಮಗ್ನಿಯ ।
ಸಾರಿದಯೆಯಿಂ ಭೂತಿ, ಯಮ ಸ ।
ತ್ಕಾರದಿಂ ದಪಮೃತ್ಯುವಿನ ಪರಿಹಾರ ಮೊದಗುವುದು || ೨೮ ||

ಸುರರ ವಲ್ಲಭನಿಂದ ಭಾಗ್ಯ ।
ಸ್ಫುರಣೆ, ವಾಯುವಿನಿಂದ ಬಲ ಮಾ ।
ಕರಿವದನನಿಂ ದಂತರಾಯ ವಿನಾಶಮಾಗುವುದು ॥

---

ಗಳನ್ನೆಲ್ಲ ಪೂರ್ತಿಮಾಡಿ ಬೇಡಿದುದನು+ಒಡನಿತ್ತು—ಸಾವಕಾಶವಿಲ್ಲದೆ ಸಲ್ಲಿಸಿ, ಕಡೆಗೆ+ಇವರ+ಈಡಿರಿದ—ಉದ್ದೇಶವಾದ ಸಂಸಾರಬಂಧನವನ್ನು ಅಳಿದು—ತೊಲಗಿಸಿ.

೨೭ ಚಿತ್ತಶುದ್ಧಿಯಿಂದ ಬರುವ ಜ್ಞಾನಯೋಗ್ಯತೆಯು ಎಂದಿಗೆ+ಅಹುದು-ಬಂದ ಆ ದಿನದಲ್ಲಿಯೇ, ತಾಂ—ಆ ಶಿವನೆ, ಸುಳಿವನು—ಬರುವನು, ಅಮಂದಭಾಗ್ಯರ—ಮಹಾ ಪುಣ್ಯ ಜನ್ಮದ ಮುಮುಕ್ಷುಗಳ, ಇಂ....ಖರನು—ಶಿವನು, ಉಳಿದ....ರ್ಯಕೆನೆ—ಹಾಗಾದರೆ ಮಿಕ್ಕದೇವತೆಗಳು ಮುಕ್ತಿಯನ್ನು ಕೊಡುವದಿಲ್ಲವೇನು? ಎಂದರೆ, ಆ ದೇವತೆಗಳು ಕೊಡ ಬಹುದಾದ ಫಲಗಳನ್ನು ಒಂದೊಂದಾಗಿ ವಿವರಿಸುತ್ತಿದ್ದಾರೆ. ಗೋವಿಂದನು—ವಿಷ್ಣುವಿನಿಂದ, ಅರ್ಚಿರಾದಿ ಮಾರ್ಗದಿಂದ ಉತ್ತಮಗತಿ.

೨೮ ಭಾರ...ವೈಪ್ರಂ—ಬ್ರಹ್ಮದೇವನಿಂದ ವಿಪ್ರತ್ವ, ಬ್ರಾಹ್ಮಣ್ಯವು; ಭಾರ....ರುತೆ—ವಾಗ್ದೇವಿಯಿಂದ ವಾಕ್ಪಟುತ್ವ, ಕಲಾ....ಲತೆ—ಚಂದ್ರನಿಂದ ಕೀರ್ತಿ, ಸೂ....ಗ್ಯಂ—ಸೂರ್ಯನಿಂದಾರೋಗ್ಯ, ಅಗ್ನಿ....ಭೂತಿ—ವಿಭೂತಿ, ಸಂಪತ್ತು.

೨೯ ಸುರರವಲ್ಲಭ—ದೇವೇಂದ್ರನಿಂದ ಐಶ್ವರ್ಯಾದಿ ಭಾಗ್ಯಗಳು. ಆ ಕರಿವದನ—ವಿಘ್ನೇಶ್ವರನಿಂದ, ಅಂತರಾಯ—ವಿಘ್ನ, ಶರಭವ—ಶರಜನ್ಮ ಕುಮಾರಸ್ವಾಮಿಯಿಂದ ಅಖಿಲ ಸಿದ್ಧಿಗಳು, ....ಂದ+ಒತ್ತರಿಸುವದು—ತನಗೆ ಕೈಕೂಡಿ ಬರುವದು, ರಮೆ—ಲಕ್ಷ್ಮಿ.

ಶರಭವನ ಮುಖದಿಂ ದಖಿಲ ಸಿ ।
ದ್ಧಿರಸ ಸುಸ್ಥಿತಿ, ದುರ್ಗೆಯಿಂ ದೊ ।
ತ್ತರಿಸುವುದು ವಿಜಯಂ, ರಮೆಯ ದಯೆಯಿಂದ ಸಂಪತ್ತಿ ॥ ೨೯ ॥

ಆದಿತೇಯರಿಂ ಕಾಮಿಗಳಿಗೆ ।
ಪಾದಪೂಜೆಯ ನೆವದೊಳೊದಗುವ ।
ದೈದೆತನ ಮೊದಲಾದ ಸಾಂಸಾರಿಕ ಸುಖಪ್ರಾಪ್ತಿ ॥
ನ್ಮೈದೆಗೆದ ಕಾಮುನ ಮನಸ್ಸಿನ ।
ಬೀದಿಯೊಳಗಿವರರ್ಚಿಸಿದರೆ ಸು ।
ಮೋದದಿಂದೀಶ ಪ್ರಸಾದಕೆ ಮಾಳ್ಪರರ್ಹರನು ॥ ೩೦ ॥

ಭುಕ್ತಿದರು ದೇವತೆಗಳಲ್ಲದೆ ।
ಮುಕ್ತಿದರು ತಾವಾಗರಹನವಿ ।
ಮುಕ್ತ ಮಂದಿರವಾಸಿಯೋರ್ವನೆ ಬಂಧಮೋಚಕನು ॥
ಮುಕ್ತಿದಾಯಕನಾತನೆ ಗುರು ।
ವ್ಯಕ್ತಿಯಂ ತಾಳ್ದಾಗಲಲ್ಲದೆ ।
ಶಕ್ತಿಯಿಂ ಕೂಡಿರ್ದ ಕಾಲದೊಳಾಗನುಮೆಯೊಣ್ಮಂ ॥ ೩೧ ॥

ಆದಿಗುರು ತಾನಾಗಿಹ ರಹ ।
ಲ್ಮೇದಿನಿಯೊಳೀ ಗುರುತೆಯಂ ಸಂ ।
ಪಾದಿಸಿದನಾ ಕಮಲನಾಭ ಸುರಾಗ್ರಜ ವಸಿಷ್ಠ ॥

---

೩೦ ಆದಿತೇಯರಿಂ—ಪೂಜ್ಯಸ್ತ್ರೀದೇವತೆಗಳಿಂದ ನೆವದೊಳು+ಒದಗುವದು+ಐದೆತನ—ಮುತ್ತೈದೆತನವು, ನ್ಮೈದೆಗೆ…ಳಗೆ—ಇವರನ್ನೆ ಫಲಾಪೇಕ್ಷೆಯನ್ನು ಬಟ್ಟು ಪೂಜಿಸಿದರೆ ಸುಮೋದ—ಸಂತೋಷದಿಂದ.

೩೧ ಭುಕ್ತಿದರು—ಸಂಸಾರದ ಶರೀರಭೋಗಗಳನ್ನು ಕೊಡತಕ್ಕವರಲ್ಲದೆ, ಮುಕ್ತಿದರು+ತಾವು+ಆಗರು—ಮುಕ್ತಿಯನ್ನು ಕೊಡುವವರಾಗುವದಿಲ್ಲ, ಅಪನು+ಅಪಿ…ರ್ವನೆ—ಕಾಶೀವಿಶ್ವನಾಥನಾದ ಶಿವನೊಬ್ಬನೇ ಸಂಸಾರಬಂಧದಿಂದ, ಮೋಚಕನು—ಬಿಡಿಸುವನು, ವ್ಯಕ್ತಿಯಂ—ಸ್ತ್ರೀಜಾತಿಗಿಂತ ಬೇರೆಯ ಪುರುಷಶರೀರವನ್ನು (ವ್ಯಕ್ತಿಸ್ತುಪೃಥಗಾತ್ಮಿಕ. ಅ). ತಾಳ್ದಾಗಲಲ್ಲದೆ—ಧರಿಸಿದಾಗಲೇ ಮುಕ್ತಿದಾಯಕನಲ್ಲದೆ. ಉಮೆಯಾಣ್ಮಂ—ಶಿವನಾಗಿದ್ದರೂ ಶಕ್ತಿ—ಪಾರ್ವತಿಯಿಂದ ಕೂಡಿರುವ ಕಾಲದಲ್ಲಿ ಎಕ್ಕೆಲ್ಲರಂತೆ ತಾನೂ ಆರಾಧ್ಯದೇವನಾಗಿರುವನು ಮುಕ್ತಿಯನ್ನು ಕೊಡುವವನು ಆಗುವದಿಲ್ಲ.

೩೨ ಶ್ರೌತಅದ್ವೈತ ಸಂಪ್ರದಾಯದ ಗುರುಪರಂಪರೆಯುವರಲ್ಲಿ ಬಂದವರು—ನಾರಾಯಣನು ಬ್ರಹ್ಮದೇವನು ವಸಿಷ್ಠ ಶಕ್ತಿಪಾದ ಪರಾಶರ ವೇದವ್ಯಾಸ ಶುಕಮುನಿಗಳು—ಇವರಿಂದ ಗೌಡಪಾದರು, ಗೋವಿಂದ ಭಗವತ್ಪಾದರಿಂದ ಬಂದವರಲ್ಲಿ ಶಂಕರ ಭಗವತ್ಪಾದ ಪೂಜ್ಯರೇ ಮೊದಲನೆಯ ಗುರುಗಳೆಂದು ಭರತ ಖಂಡದ ಜನರಲ್ಲಿ ಪ್ರಸಿದ್ಧಿಯು.

ಪಾದಶಕ್ತಿ ಪರಾಶರೋತ್ತಮು ।
ವೇದನಿರ್ಣಯಕಾರ ಮುಖ ಗುರು ।
ಪಾದ ಪಾರಂಪರ್ಯಮಂ ಶಂಕರನೆ ಇವರೊಳಗೆ ॥ ೩೨ ॥

ಯಾರು ಗುರು ಶಬ್ದೈಕ ವಾಚ್ಯರು ।
ಧಾರುಣಿಯೊಳೆನೆ, ಸತ್ಯದಂದದಿ ।
ತೋರುತಿಹ ವಿಶ್ವವನು ಸಟೆಯಂ ಗೈದು ಬೇರ್ಪಡಿಸಿ ॥
ಸಾರಸಾಕ್ಷಿತೆಯಿಂದ ತನ್ನನು ।
ಬೇರಿಡದದೇ ನೀನೆನುತ ವಿ ।
ಸ್ತಾರ ವೇದಾಂತ ಪ್ರದೀಪದಿ ಬೆಳಗಿ, ಕತ್ತಲೆಯ ॥ ೩೩ ॥

ಮರವೆಯೆಂಬುದನುರುಹುವವನೇ ।
ಗುರುವೆನುತ ದೇವತೆಗಳಿಗೆ ತಾ ।
ನೊರೆದ ವಾಣೀ ಪ್ರಾಣನಾಥಂ ಬ್ರಹ್ಮಗೀತೆಯಲಿ ॥
ಗುರುಚರಣರಿಂತೆಂದರಾತನ ।
ಸರಸ ಕರುಣಾ ಲಭ್ಯ ವಾತ್ಮ ।
ಸ್ಥಿರ ವಿವೇಕಂ ಶಾಸ್ತ್ರ ರಾಶಿಗಳಿರಲಿ ಗಿರಿಯಂತೆ ॥ ೩೪ ॥

ಇಂತೆನುವ ದೆಶೆಯಿಂದ ಪೂರ್ವೋ ।
ಕ್ತಂ ತಿಳಿದು ಚನ್ನಾಗಿ ಸರ್ವಮ ।
ನಂತನವ್ಯಯ ನಮಲಸಸಮಾಧಿಕ ನಿಖಿಲಲೋಕಂ ॥

---

೩೩ ....ಶಬ್ದ + ಏಕವಾಚ್ಯರು—ನಿಶ್ಚಿತ, ಮುಖ್ಯವಾದ ಅರ್ಥರು; ಸಟೆಯಂ—ಅನುಭವಕ್ಕೊಪ್ಪುವ ವಿಚಾರದಿಂದ ಪುಸಿಯನ್ನಾಗಿ ಮಾಡಿ. ಬೇರ್ಪಡಿಸಿ—ಸತ್ತಿಗಿಂತ ಬೇರಾಗಿ ಮಾಡಿಸಿ, ಬುದ್ಧಿಗೆ ಅಳವಡಿಸಿಕೊಟ್ಟು. ಸಾರ—ಪ್ರಪಂಚಕ್ಕೆಲ್ಲ ತಿರುಳಾಗಿರುವ ಮತ್ತು ಆ ಅನಾತ್ಮವನ್ನೆಲ್ಲವನ್ನು ಉಂಡುಂಡೆಯನ್ನಾಗಿಸಿಕೊಂಡಿರುವ ಜಾಗ್ರದಾದಿ ಒಟ್ಟಿನ ಅವಸ್ಥೆಗಳನ್ನೇ ನೇರಾಗಿ—ಪ್ರಮಾಣಗಳ ಹಂಗಿಲ್ಲದೆ ನೋಡುವ ಕೇವಲ ಸಾಕ್ಷಿಯರೂಪದಿಂದಿರುವ ತನ್ನಾತ್ಮ ಸ್ವರೂಪವನ್ನು ವ್ಯಾಪಕಯುಕ್ತಿ ಸಾರ್ವತ್ರಿಕ ಅನುಭವ ಇವುಗಳ ತಳಗಟ್ಟಿನ ವಿಚಾರದ ಕಡೆತದಿಂದ ವಿಂಗಡಿಸಿ ತನ್ನ ಅನುಭವದಲ್ಲಿ ತೋರಿಸಿಕೊಟ್ಟು, ಅದಕ್ಕಿಂತಲೂ ತನ್ನನ್ನು ಬೇರಿಡದೆ 'ಅದೇ ನೀನು' ಎಂದು ತನ್ನ ಬ್ರಹ್ಮಾತ್ಮಭಾವವನ್ನು ವಿಸ್ತಾರ ವೇದಾಂತ ಪ್ರದೀಪಗಳಿಂದ ಬೆಳಗಿಸಿ, ನಿಶ್ಚಿತವಾದ ಅನುಭವಕ್ಕೆ ಹೊಂದಿಸಿಕೊಟ್ಟು, ೩೪—ಮರೆವೆಯೆಂಬ ಕತ್ತಲೆಯನ್ನೆಲ್ಲ ಉರುಹುವವನೆ—ಉಫ್ ಎಂದು ಉರುಬುವವನೆ ಗುರುವು ಎಂದು ತಾನು + ಒರೆದ + ವಾಣಿ...ಥಂ—ಬ್ರಹ್ಮದೇವನು, ....ಚರಣರು—ಶಿಷ್ಯರಾದ ಪೂಜ್ಯರೂ, ಸರಸ—ಪ್ರಸನ್ನ, ಶಾಸ್ತ್ರಗಳನ್ನೆಲ್ಲ ಕೂಡಿಸಿ ಬೆಟ್ಟದಂತೆ ರಾಶಿಯನ್ನು ಹಾಕಿಕೊಂಡಿದ್ದರೂ ಅವುಗಳಿಂದ ಜ್ಞಾನವಾಗುವ ಭರವಸೆ ಮಾತ್ರ ತನಗೆ ಎಂದಿಗೂ ಇರುವದಿಲ್ಲ.

೩೫ ಪೂರ್ವೋಕ್ತಂ—ಹಿಂದೆ ಹೇಳಿರುವದನ್ನೆಲ್ಲವನ್ನೂ ತಿಳಿದುಕೊಂಡು ಗುರುಭಕ್ತ

ಸಂತತಾನಂದೈಕ ವಿಗ್ರಹ ।
ನಂತುಟೆಂತುಟೆನಲ್ಕ ಸಾಧ್ಯ ಪ ।
ದಂ ತಿರಂ ಗುರುವೆಂದು ನಿಶ್ಚಯಿಸುವುದು ಭಕ್ತಜಯಂ ॥ ೨೫ ॥

ನೀರ ಗುಳ್ಳೆಯ ತೆರದಿ ಕೆಡುವ ಶ ।
ರೀರ ಭೋಗಕ್ಕಖಿಲವಸ್ತು ವಿ ।
ಕಾರವಂ ಒಲಿದೀವ ದೇವತೆಗಳನು ನೆರೆನೋಡಿ ॥
ತೋರಿ ತೋರದಹಾಗೆ ನಗುವ ಮು ।
ಖಾರವಿಂದದಿ ಮುನಿಗಳಿಗೆ ಸುವಿ ।
ಚಾರಮಂ ಸೂಚಿಸುವ ಶಂಕರನೀಗೆ ಶಿವಪದಮಂ ॥ ೨೬ ॥

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೊಳ್ ಗುರುಪ್ರಭಾವಮುಳ್ಳ
ಆರನೆಯ ಸಂಧಿ ಸಂಪೂರ್ಣಂ (ಪದ ೨೬)

## ಅದ್ವೈತ ಮುಕ್ತಿ ಸ್ಥಿತಿನಿರ್ಣಯಂ-ಏಳನೆಯ ಸಂಧಿಯು

ಸೂ ॥ ಗುರುಕಥಿತ ವೇದಾಂತದಿಂದೇ ।
ದೊರಕುವುದು ಪರಮುಕ್ತಿ, ಮಿಕ್ಕಿನ ।
ತೆರಪಿನಲಿ ಸಂಘಟಿಸದೆಂಬುದು ವೇದಕಭಿಮತವು ॥ ಪ ॥

ಚಂಡರಾಗಲಿ ಪಂಚಶರ ಕೋ ।
ದಂಡಿತ ಸ್ತ್ರೀ ಭ್ರೂ ಚಲದ್ದ್ವ ।
ಕ್ಪುಂಡರೀಕಾಶುಗ ವಿದಾರಿತ ಹೃದಯರಾಗಿರಲಿ ॥

---

ಸ್ಪಂದವು—ಸರ್ವವೂ ಅನಂತವೂ ಅವ್ಯಯವೂ ಅಮಲನೂ ಮನಸ್ಸಿನಪರಿದಾಟಗಳಿಲ್ಲದ ಪ್ರಶಾಂತಚಿತ್ತನೂ ಸರ್ವಲೋಕಾತ್ಮಕನೂ ಸಂತತಾನಂದೈಕಮೂರ್ತಿಯೂ ಹೀಗೊ ಹಾಗೊ? ಎನ್ನುವದಕ್ಕಳವಲ್ಲದ ಸ್ಥಿರವಾದ, ಪರಮಪದ— ಸಾಕ್ಷಾತ್ ಪರಬ್ರಹ್ಮವೇ ಗುರುವಿನ ಪರಮಾರ್ಥವೆಂದು ತನ್ನೊಳಗೆ ನಿಶ್ಚಯಿಸಿ ಕೃತಕೃತ್ಯರಾಗತಕ್ಕದ್ದು.

೨೬ ನೀರುಗುಳ್ಳೆಯಂತೆ ಕ್ಷಣಮಾತ್ರದಲ್ಲಿ ಕೆಡುವ ಶರೀರದ ಭೋಗಕ್ಕೆಂದು, ಕ್ಷಣವೂ ನಿಲ್ಲದಂತೆ । ತನ್ನೊಳಗೆ ವಿಕಾರವನ್ನು ಹೊಂದುತ್ತಿರುವ ಭೋಗದ ವಸ್ತುಗಳನ್ನು ತಮ್ಮ ಭಕ್ತರಿಗೆ ಒಲಿದು ಕೊಡುತ್ತಿರುವ ದೇವತೆಗಳನ್ನು ಕಂಡ ಶಿವನು—ಹುಸಿನಗೆಯ ಮುಖಾರವಿಂದದಿಂದೊಪ್ಪುತ್ತ ಸನಕಸನಂದನಾದಿ ಮುನಿಗಳಿಗೆ ಬ್ರಹ್ಮವಿಚಾರವನ್ನು ಅನುಗ್ರಹಿಸುತ್ತಿರುವ ಆ ಶಂಕರನು ತನ್ನ ನಿತ್ಯ ಮಂಗಳಪದವನ್ನು ಕೊಟ್ಟು ನಮ್ಮನ್ನು ಸಲಹಲಿ.

ಸೂ॥ ಕಥಿತ—ಉಪದೇಶಿಸಿದ, ಪರಮುಕ್ತಿ—ತನ್ನ ಬ್ರಹ್ಮತ್ವಭಾವವು, ....ತೆರಪು—

ಕಂಡು ಪರ ಸಂಪತ್ತಿಯನು ಖತಿ।
ಗೊಂಡು ಖಲನೃಪರೊಡನೆ ಪೇಳುವ।
ಕೊಂಡೆಯದ ಖೂಳರಿಗರುಹದಿಹುದೀ ಕಥಾಶ್ರುತಿಯ ॥ ೧ ॥

ತನ್ನನುದ್ಧರಿಸುವೊಡೆ ವೇದೋ।
ಕ್ತವನ್ನ ಮಾರ್ಗದೆ ನಡೆದು ಶ್ರೀಗುರು।
ವನ್ನು ಕಾರುಣಿಕನನು ಸೇರುವುದಾರ್ಯನಾದವನು॥
ಉನ್ನತಿಯು ತಪದಿಂದ, ಬುದ್ಧಿಯ।
ಸನ್ನೆಯಿಂದ ಭಯಂ ಪರಿತ್ಯಾ।
ಗಂ ನೆರೆಯೆ ನಿಜಶಾಂತಿಯೆಂತಹುದಂತು ಘಟಿಸುವುದು ॥ ೨ ॥

ಗುರುವಿನಿಂದೇ ಜ್ಞಾನವದರಿಂ।
ಹರವುದೀ ಸಂಸಾರ, ಮೊದಲ।
ಲ್ಲಿರುವ ವರ್ಣೋಚಿತದ ಕೃತ್ಯವ ಮಾಡಿ ನಿರ್ಮಲತೆ॥
ದೊರಕೆ ಮನಸಿಂಗುಕ್ತ ಸಾಧನ।
ವರನೆನಿಪವಂ ಸೇರುವುದು ಸ।
ದ್ಗುರುವನುಪಶಾಂತನ ಪದಾರ್ಥಜ್ಞಾನಕೋವಿದನ ॥ ೩ ॥

ಉತ್ತಮ ಶ್ರೇಯಸ್ಸನರಿಯಲು।
ಪಾತ್ರನಾಂಥನು ತತ್ಪ್ರಣತಿಯಿಂ।
ದೊತ್ತುವರಿದುಪಚಾರದಿಂ ಚನ್ನಾಗಿ ಕೇಳ್ವುದರಿಂ॥

---

ಅದನ್ನು ಬಿಟ್ಟಿರುವ ಬೇರೆಯರೀತಿ, ಮಾರ್ಗಗಳಿಂದ; ಸಂಘಟಿಸದು—ಎಂದಿಗೂ ಆಗುವದಿಲ್ಲವೆಂಬುದು.

೧ ಚಂಡ—ಕ್ರೂರ, ಪಂಚ...ಡಿತ—ಮನ್ಮಥನ ಬಿಲ್ಲಾಗಿರುವ, ಸ್ತ್ರೀಭ್ರೂ-ಸ್ತ್ರೀಯರ ಕಣ್ಣುಗಳ ಹುಬ್ಬುಗಳಲ್ಲಿಟ್ಟು ಏರಿಸಿದ, ಚಲತ್+ದೃಕ್—ಕಡೆಗಣ್ಣೋಟದ ಚಂಚಲದೃಷ್ಟಿಯೆಂಬ, ಪುಂಡರೀಕ+ಆಶುಗ—ಬಿಡಲ್ಪಟ್ಟ ತಾವರೆಯ ಬಾಣದಿಂದ ಅಥವಾ ಕಮಲಾಕ್ಷಿಯರ ಕಡೆಗಣ್ಣೋಟವೆಂಬ ಮನ್ಮಥನ ಬಾಣದಿಂದ ವಿದಾರಿತ—ಶೀಳಿದ, ಕಾಮವಿಕಾರಕ್ಕೊಳಗಾದ ಹೃದಯರಾಗಿದ್ದರೂ ಆಗಿರಲಿ. ಖತಿ—ಸಿಟ್ಟುಗೊಂಡು, ಕೊಂಡೆಯದ—ಪಿಸುಣಕಾರರಾದ, ಖೂಳ—ಖಲ, ಕ್ಷುಲ್ಲ. ನೀಚರಿಗೆ. ಅರುಹದೆ+ಇಹುದು—ಇರಬೇಕು.

೨ ತನ್ನನು+ಉದ್ಧರಿಸುವಡೆ—ಉದ್ಧರಿಸಿಕೊಳ್ಳುವಲ್ಲಿ ವೇದೋ....ಡೆದು—ಕರ್ಮೋಪಾಸನೆಗಳಿಂದ ಚಿತ್ತಪರಿಪಾಕವನ್ನು ಹೊಂದಿ, ಆರ್ಯನು—ಸಂಸ್ಕೃತನು, ಉನ್ನತಿ—ಅತಿಶಯ, ಭಾಗ್ಯೋದಯವು. ಸನ್ನೆ—ಬುದ್ಧಿಯ ಕುರುಹು ಆಗಿರುವ ವಿಚಾರದಿಂದ; ನೆರೆಯೆ—ಒದಗಿಬರಲು ಇವರಂತೆ ಗುರುಗಳಿಂದ ತತ್ತ್ವಜ್ಞಾನರೂಪಶಾಂತಿ ದೊರಕುವದು.

೩ ಮನಸ್ಸಿಂಗೆ+ಉಕ್ತ—ಶಮದಮಾದಿ ಶ್ರುತ್ಯುಕ್ತಸಾಧನಗಳುಳ್ಳವನು ಸದ್ಗುರುವ+ಉಪಶಾಂತನ—ಭೋಗೇಚ್ಛೆಗಳ ಪರಿದಾಟವಿಲ್ಲದ ಪ್ರಶಾಂತಚಿತ್ತನನ್ನು ಪದಾರ್ಥ...

ಬಿತ್ತರಿಪರಾಯರ್ಥಮಂ ವ್ಯ।
ತ್ಪತ್ತಿ ಪೂರ್ವ್ವಕಮಾಗಿವಂಗವ।
ರಿತ್ತ ನೆಲೆಗೊಳೆ ಚಿತ್ತಮೈದುವುದೊಡನೆ ನಿರ್ವಾಣಂ ॥ ೪ ॥

ಬೊಮ್ಮದಲ್ಲಿಪ್ಪರಿಗೆ ಕ್ಲೇಶದ।
ಬಿಮ್ಮು ಪೆರತಾಗಿರುವದರಿಂ।
ಬೊಮ್ಮದವಗತಿ ಸಾಭಿಮಾನ ಜನಕ್ಕೆ ದುಸ್ಸಾಧ್ಯಂ॥
ಒಮ್ಮೆ ವಾರಣಾಶಿಯ ಮೃತಿಯಿಂ।
ಸುಮ್ಮನೇ ದೊರಕೊಂಬಪವ।
ರ್ಗಂ ಮಹಾಸದಸಜ್ಜನರ್ಗೆ ಸಮಂ ಶುಭನುದಲ್ತೆ! ॥ ೫ ॥

ಎನಲು, ಭೋಜನ ವಸನ ರಮಣೀ।
ಜನ ಸಮಾಗಮದೊಳ್ಪರಾಯಣ।
ರೆನಿಪ ಖಲಮನುಜರಿಗೆ ತಾನಾಗಲ್ಲಿ ಬೋಳೆಯರ॥
ದುನಿಯೆ ಗಾಢಾಂಗಾರವಾಹಿನಿ।
ಯೆನಿಸುವಳ್ತತ್ಕಾಶಿ ಕೀಟಕ।
ಜನಪದವೆ ಎನಿಸುವದೆನುತ್ತಂ ಕೆಲವಡೆಯೊಳಿಹುದು ॥ ೬ ॥

---

—ವೇದಾಂತಗಳ ತತ್ತ್ವಾರ್ಥವನ್ನೆಲ್ಲ ಸಂಪೂರ್ಣ ಬಲ್ಲವನಾಗಿ ತನ್ನಿಷ್ಠನಾಗಿರುವನನ್ನು.

೪ ....ಶ್ರೇಯಸ್ಸನು-ತನ್ನ ಸ್ವರೂಪಸಿದ್ಧವಾದ ಬ್ರಹ್ಮಾತ್ಮಭಾವವನ್ನು ಅರಿಯಲು+ ಉಪಾತ್ತ—ಇಚ್ಛೆಯನ್ನು ಹೊಂದಿದವನು, ತತ್+ಪ್ರಣತಿ—ಆ ಗುರುವಿಗೆ ನಮಸ್ಕಾರ ಮಾಡಿ, ಪ್ರಸನ್ನರಾಗುವವರೆಗೂ ಚನ್ನಾಗಿ ಸೇವಿಸುತ್ತಿದ್ದು ಒತ್ತುವರಿದು—ಸಮಯ ವರಿದು, ಬಿತ್ತರಿಪರು—ವಿವರಿಸುವರು (ಗೀ ೪—೩೪). ಆಯರ್ಥ....ಮಾಗಿ—ಆತ್ಮೈಕತ್ವ ವೆಂಬ ವೇದಾಂತಗಳ ಮೂಲಾರ್ಥವನ್ನು ಬ್ರಹ್ಮದ ಕೊನೆಗಂಡ ಅವಗತಿಯನ್ನು. ಇವಂಗೆ+ಅವರು+ಇತ್ತ ನೆಲೆಗೊಳೆ—ಶಿಷ್ಯನಿಗೆ ಬಂದಅನುಭವ ಸ್ಥಿರವಾಗಲು, ಚಿತ್ತ+ ಐದುವದು+ಒಡನೆ—ನಿರ್ವಾಣಂ—ಆತ್ಮನನ್ನು ಹೊಂದಿ ಚಿತ್ತವು ಶಾಂತವು, ವಿನಾಶವು ಆಗಿ ಬಿಡುವದು.

೫ ಬೊಮ್ಮ....ರಿಗೆ—ಬ್ರಹ್ಮಿಷ್ಠರಿಗೆ. ....ಬಿಮ್ಮು—ಗಂಭೀರತೆ, ಆತ್ಮಾನಾತ್ಮಗಳ ಅಧ್ಯಾಸವು, ಅಜ್ಞಾನಾದಿಗಳು; ಪೆರತಾಗಿ—ಹೊರಗಿನವಾಗಿ ತೊಲಗಿರುವದರಿಂದ ಬೊಮ್ಮದ+ಅವಗತಿ—ಅನುಭವದವರೆಗೆ ಕೊನೆಗಂಡಿರುವ ಬ್ರಹ್ಮಜ್ಞಾನವು, ಸಾಭಿಮಾನ-ದೇಹೇಂದ್ರಿಯಗಳಲ್ಲಿ 'ನಾನು' ಎಂಬ ಮಿಥ್ಯಾಜ್ಞಾನದ ಕಟ್ಟುಪಡೆದಿರುವ, ಅಪವರ್ಗಂ—ಮುಕ್ತಿ, ಮಹಾ....-ಒಳ್ಳೆಯವರು, ಕೆಟ್ಟವರು ಎಂಬುದಿಲ್ಲದೆ ಎಲ್ಲರಿಗೂ ಸಮವಾಗಿ ಆಗುತ್ತಿರುವ ಕಾಶಿಯ ಮರಣದ ಮುಕ್ತಿಯು ಸುಲಭವೆಂದಾಗಲಿಲ್ಲವೆ?

೬ ಬೋಳೆ...ನಿಯೆ—ಹರಿಯುವ ಅಲ್ಲಿಯ ದೇವಗಂಗೆಯೇ, ಗಾಢಾ....ಹಿನಿ—ಚನ್ನಾಗಿ ಹೊತ್ತುಕೊಂಡು ಉರಿಯುವ ಬೆಂಕಿಯ ಉಜ್ವಲ ಪ್ರವಾಹವಾಗಿ ಪರಿಣಮಿಸು

ಕಾಲಭೈರವನಲ್ಲಿ ಬಿಡದೆ ಕ।
ರಾಳಪಾಪಂಗಳನು ಮಾಡಿದ।
ಖೂಳರನು ಹಿಡಿತಂದು ಮೇಲೊರಳಿನಲಿ ಕಣೆಯುಳ್ಳ॥
ಕಾಲಕಂಭದೊಳರೆವನೆಂದುಂ,।
ಮೇಲೆ ಬಿಡಿನಾಡಿನಲಿ ಚೇತನ।
ಜಾಲವೆಸಗಿದ ಪಾತಕಂ ಪೋಗುವದು ಋಷಿವರರಿಂ ॥ ೭ ॥

ದೇವತೆಗಳಿಂ ಪುಣ್ಯಜಲದಿಂ।
ಸೇವಿತವುದಾಗಿರುವ ಬಳಿಯಲಿ।
ಸಾವುದಲ್ಲೆಸಗಿದ ಮಹಾಪಾತಕದ ರಾಶಿಗಳು॥
ದೇವದೇವನ ರಾಜಧಾನಿಯ।
ಸೇವಿಸಿದ ಮಾತ್ರದಲೆ ಪೋಪುದು।
ಹೇವರಿಸದಲ್ಲೆಸಗಿದ ಮಹಾಪಾತಕ ವ್ರಾತಂ ॥ ೮ ॥

ಕುಂಭಕೋಣಕ್ಷೇತ್ರದಲಿ ವಿ।
ಜೃಂಭಿಸದೆ ಕೆಡುತಿರುವದೆಂಬ ರು।
ತುಂಭರೋಕ್ತಿಗಳಿಂದಅಲ್ಲಹ ಮುಕ್ತಿಗಭಿಘಾತಂ॥
ಸಂಭವಿಸಿದುದು, ವರ್ತಮಾನ।
ಸ್ತಂಭದಿ ಮೃತದೊಳಿರುವ ಜಂತುಗ।
ಳಂ ಭಜಿಸಿ ನಿಜದೇಶಮಂ ನೀವೆಂದು ಕನಸಿನಲಿ ॥ ೯ ॥

---

ವಳು! ಎಂದೂ, ತತ್+ಕಾಶಿಯೆ ಕೀಟಕ—ಹುಳುವರ್ಗದ ಅಲ್ಪಜೀವಿಗಳ ಜನ ಸಮೂಹದ ಅಥವಾ ಕೀಕಟ—ಲೋಭ, ದರಿದ್ರರಾದ, ಜನಪದ—ಜನರುಳ್ಳ ಪ್ರದೇಶವು.

೭ ....ವನು+ಅಲ್ಲಿ—ಆ ಕಾಶಿಯಲ್ಲಿ ಕರಾಳ—ಕ್ರೂರ ಖೂಳ—ಖುಲ್ಲ—ನೀಚ ರನ್ನು, ಕಣೆಯು+ಉಳ್ಳ—ಚೂಪಾದ ಮೊನೆಗಳುಳ್ಳ, ಅರೆವನು—ತೀಡುವನು, ನಾಶ ಮಾಡುವನು. ಚೇತನ ಜಾಲವು—ಜೀವ ಸಮೂಹವು, ಎಸಗಿದ—ಮಾಡಿದ.

೮ ಸಾವುದು+ಅಲ್ಲೆಸಗಿದ—ಪುಣ್ಯಕ್ಷೇತ್ರಗಳಲ್ಲಿ ಹೋಗುವಂತಿದ್ದರೂ ಆ ಕ್ಷೇತ್ರ ಗಳಲ್ಲಿ ಮಾಡಿರುವ, ದೇವ....ಪುದು—ಕಾಶಿಯನ್ನು ಸೇವಿಸುವದರಿಂದ ಬಿಟ್ಟು ತೊಲಗುವ ದೆಂಬುದು ನಿಜವು, ಹೇವರಿಸದೆ—ಅಸಹ್ಯವನ್ನು, ನಾಚಿಕೆಯನ್ನು ತಂದುಕೊಳ್ಳದೆ, ಅಲ್ಲಿ+ ಎಸಗಿದ—ಮಾಡಿರುವ, ವ್ರಾತಂ—ರಾಶಿರಾಶಿಯ ಪಾಪಗಳು.

೯ ವಿಜೃಂಭಿಸದೆ—ತೋರಿಕೊಳ್ಳದೆ, ರುತುಂ....ದಲಿ—ಸ್ಥಳಪುರಾಣಗಳ ಪ್ರಮಾಣ ವಚನಗಳಿಂದ, ಅಲ್ಲಹ—ಪಾಪಬಿಡುಗಡೆಯ ಮುಕ್ತಿಯು ಅಲ್ಲಾಗುತ್ತೆಂಬುದಕ್ಕೆ, ಅಭಿ ಘಾತಂ—ಬಲವಾದ ಪೆಟ್ಟು ಬಿದ್ದಂತಾಯ್ತು, ವರ್ತ....ರುವ—ಪ್ರಾರಬ್ಧ ಕರ್ಮದ ತಡೆಯು ಸಂಭವಿಸಿ ಸಾಯಲಿರುವ, ಜಂತು—ಜೀವರನ್ನು ಕುರಿತು ಆ ಶಿವನು, ಕನಸಿನಲ್ಲಿ ಬಂದು ಅವ ರಿಗೆ, ಭಜಿಸಿ...ಮಂ—ನಿಮ್ಮ ನಿಮ್ಮ ದೇಶವನ್ನು ಹೊಂದಿರಿ ಎಂದು—

ಭೂತನಾಯಕನುಸಿರಿ ಕಾಶೀ ।
ಭೂತಲದ ದೆಶೆಯಿಂದ ಹೊರಡಿಪ ।
ನೀತಿಯಿಂದಲ್ಲಪ್ಪ ಮುಕ್ತಿಗೆ ವಿಘ್ನಮಂ ತೋರ್ಕುಂ ॥
ಜಾತವಿಘ್ನ ವಿಘಾತಿಯಿಂ ತ ।
ದ್ಭೂತಲದೆ ಮೃತಿಯನ್ನು ಪಡೆದ ಪು ।
ರಾತನೋತ್ತಮ ಪುಣ್ಯಪುರುಷರ್ಗಾಗ ನಿರ್ವಾಣಂ ॥ ೧೦ ॥

ಎಲೆ ಪುರಾಂತಕ, ನಿನ್ನ ನಗರಿಯ ।
ನೆಲದೆ ಬಸವನ ಹೆಜ್ಜೆಯೊಳ್ತನು ।
ವಳಿದಿರುವೆಗಳರ್ಧೇಂದು ಶೇಖರನಾಗಿ, ಪಣೆಯೊಳಗೆ ॥
ತಲೆಯೊಳಗೆ ಕಂಠದಲಿ ಕಣ್ಣಂ ।
ಸಲಿಲಮಂ ವಿಷಮಂ ಧರಿಸಿ ತಾ ।
ವೊಲಿದದಂ ಹತ್ತಲ್ಕೆಳಸುವವಿದೇನಿದಾಶ್ಚರ್ಯಂ! ॥ ೧೧ ॥

ನಸುನಗೆಯ ಬೆಳದಿಂಗಳಾ ಮೊಗ ।
ಸಸಿಯೊಳುಣ್ಮುತ್ತಿರಲು ಪೇಳುವ ।
ವಸುಧೆಯಂ ಪೊತ್ತವರ ರಾಯನ ಮಗಳ ಮಾತಿಂದ ॥
ಪಸರಿಸಿತು ಸಾರೂಪ್ಯ ಮೋಕ್ಷ ।
ಪ್ರಸವಗಂಧಂ ಸಕಲಪಂಡಿತ ।
ವಿಸರ ಮೇಧಾ ನಾಸಿಕಾಂತರ್ದೇಶದಲಿ ಬಿಡದೆ ॥ ೧೨ ॥

ದಾನ ತೀರ್ಥವ್ರತಗಳಲಿ ಸು ।
ಜ್ಞಾನವಿಲ್ಲದವರ್ಗೆ ನಿಜ ನಿ ।
ರ್ವಾಣವಾಗದು; ನೋಡಲವು ವೈಯರ್ಥ್ಯವೇ ಎನಲು, ॥

---

೧೦ ಭೂತನಾಯಕ(ಶಿವ)ನು+ಉಸಿರಿ—ಹೇಳಿ, ನೀತಿ—ಹಿತೋಪದೇಶದಿಂದ, ಅಲ್ಲಪ್ಪ-ಆ ಕಾಶಿಯಲ್ಲಾಗುವ ಮುಕ್ತಿಗೂ, ಜಾತ...ಯಿಂ-ಹುಟ್ಟುವ ವಿಘ್ನಗಳ ಪರಿಹಾರದಿಂದ ತತ್+ಭೂತಲದೆ-ಆ ಕಾಶಿಯಲ್ಲಿಯೇ ದೇಹವಳಿದ ಹಿಂದಿನ ಪುಣ್ಯಾತ್ಮರಿಗೆಲ್ಲ ನಿರ್ವಾಣವಾಗಿದೆಯಲ್ಲ? ಎಂದರೆ, ಗುರುವು-ನಿಜ, ಆದರೆ ಅದು ಸಾರೂಪ್ಯವೇ ಹೊರತು ಕೈವಲ್ಯವು ಎಂದಿಗೂ ಅಲ್ಲ ಎಂದು ಪಾರ್ವತಿಯ ಈ ಪ್ರಶ್ನೆಯು ಸೂಚಿಸುವದು—

೧೧ ಎಲೈ ಪುರಾಂತಕನೆ? ಕಾಶಿಯಲ್ಲಿ-ಬಸವನ ಹೆಜ್ಜೆಯಲ್ಲಿ ಸಿಕ್ಕಿ ಮೃತಪಟ್ಟ ಇರುವೆಗಳು-ಅರ್ಧಚಂದ್ರನನ್ನು ಧರಿಸಿದಶಿವನಾಗಿ, ಹಣೆ ತಲೆ ಕಂಠ ಇವುಗಳಲ್ಲಿ ಕ್ರಮದಿಂದ ಅಗ್ನಿನೇತ್ರವನ್ನು ದೇವಗಂಗೆಯನ್ನು ಹಾಲಾಹಲವಿಷವನ್ನು ಧರಿಸಿದವುಗಳಾಗಿ ಅದೇ ಬಸವನನ್ನು ಏರಲಿಚ್ಛಿಸುತ್ತಿರುವದು ಇದೇನಾಶ್ಚರ್ಯ!

೧೨ ಮೊಗಸಸಿಯೊಳು—ಮುಖವೆಂಬ ಚಂದ್ರನಲ್ಲಿ, ಉಣ್ಮುತ್ತಿರಲು—ಮೇಲೆ ಏಳುತ್ತಿರಲು, ....ರಾಯನ-ಪರ್ವತರಾಜನ ಪುತ್ರಿಯ ಪ್ರಶ್ನೆಯಿಂದ ವಿಸರ-ಗುಂಪಿನಲ್ಲಿ

ಸೂನುಗಳಿಗಾಡುವ ಬಳಿಯಲಿ ಸ |
ಮಾನಮಹ ಗಜ್ಜುಗ ದೊರಕಲನು |
ಮಾನಮೇಂ ಫಲವಲ್ಲವೇ, ಮೇಣಂತವರ ನಡುವೆ ॥ ೧೩ ॥

ತನುವಿದೇ ವಾರಣಾಶಿಯು, ತ |
ನ್ನನು ಬಿಡದ ವಿಜ್ಞಾನವೇ ತ್ರಿಭು |
ವನ ವಿಹಾರಿಣಿಯಾದ ಗಂಗಾನದಿಯು, ದೇಹದಲಿ ||
ಮಿನುಗುವಿಂದ್ರಿಯಗಳನು ವಿಷಯದ |
ಮನೆಯೊಳಾಡಿಸುವಾತ್ಮನೇ ಶೋ |
ಭನಪದಂ ವಿಶ್ವೇಶನೆಂದಾರ್ಯೋಕ್ತಿ ರಾಜಿಪುದು; ॥ ೧೪ ॥

ಯಾತಕೈದುವರಮಲ ಪದ ನಿ |
ಷ್ಣಾತರಾದ ಯತಿಗಳು ಕಾಶಿಯ |
ಕೌತುಕದೊಳೆನೆ, ವೇದಶಿರದರ್ಥವನು ನಂಬದಲೆ! ||
ಜಾತವಾಗಲ್ಕರಿಯಲೇಂ ಸು |
ಪ್ರೀತರಾದಾರಥಿಕ ತೀರ್ಥಾ |
ದ್ಯಾತತ ಕ್ರಿಯೆಗಳಲಿ ಪಗಲಿರುಳೆಣಿಸುತಿರ್ದರೆಯು ॥ ೧೫ ॥

---

ಸಾರೂಪ್ಯವೆಂದೇ ನಿರ್ಣಯಗೊಂಡಿತು,

೧೩ ನಿಜನಿರ್ವಾಣಂ—ತನ್ನಾತ್ಮನಲ್ಲಿ ನೆಲೆನಿಲ್ಲುವದೆಂಬ ಸರ್ವಾನರ್ಥಗಳ ವಿನಾಶವು;

ತೀರ್ಥಯಾತ್ರಾಭಿಗಮನಂ ಯಾವತ್ ತತ್ತ್ವಂ ನವಿಂದತಿ ॥ಪೈಂ....? ॥
ಅತ್ಯಂತ ಮಲಿನೋದೇಹೋ ದೇಹಿಚಾತ್ಯಂತ ನಿರ್ಮಲಃ ।
ಉಭಯೋರಂತರಂ ಜ್ಞಾತ್ವಾ ಕಸ್ಯ ಶೌಚಂ ವಿಧೀಯತೆ? ॥ ಮುಕ್ತಿ....? ॥

ವೈಯರ್ಥ್ಯವೆ–ಹಾಗಾದರೆ ಅವೆಲ್ಲ ವ್ಯರ್ಥವೆ? ಎಂದರೆ ಹಾಗಲ್ಲ, ಸೂನು–ಮಕ್ಕಳಿಗೆ ಮೇಣ್+ಅಂತವರ ನಡುವೆ—ಹಾಗೆಯೇ ಅಜ್ಞಾನಿಗಳಿಗೂ ದಾನಾದಿ ಸತ್ಕರ್ಮಗಳಿಂದ ಸಂಸಾರಫಲವುಂಟು.

೧೪ ದೇಹೋದೇವಾಲಯಃ ಪ್ರೋಕ್ತೋ ಜೀವೋ ದೇವಸ್ಸನಾತನಃ ।
ತ್ಯಜೇದಜ್ಞಾನ ನಿರ್ಮಾಲ್ಯಂ ಸೋಹಂ ಭಾವೇನ ಪೂಜಯೇತ್ ॥?॥
ಸ್ವಸ್ವರೂಪಸ್ಯ ವಿಜ್ಞಾನಾತ್ ಸಾಧಿಕಂ ತೀರ್ಥಮುಚ್ಯತೇ ॥ ವಾ ॥

೧೫ ಯಾತಕೆ+ಐದುವರು–ಹೋಗುವರು ಅಮಲಪದ–ಮುಕ್ತಿಯನ್ನು ಹೊಂದಬೇಕೆಂಬುದರಲ್ಲಿ ನಿಷ್ಣಾತ–ನಿಪುಣರು ವೇದ....ವನು–ಮೋಕ್ಷವು ಉತ್ಪಾದ್ಯಾದಿ ಕರ್ಮಫಲಗಳಲ್ಲೊಂದೂ ಅಭಿಪ್ರಾಯವನ್ನು ಅಲ್ಲವೆಂಬ ಕೈಯೆತ್ತಿ ಸಾರುವ 'ನಕರ್ಮಣಾ....' ಎಂಬ ಉಪನಿಷತ್ತುಗಳನ್ನು ನಂಬದಲೆ ಜಾತವು+ಆಗಲ್ಕೇನು–ಕ್ರಿಯಾಫಲವಾಗಿ ಮುಕ್ತಿಯು ಹುಟ್ಟಿದರೆ ಅದು ನಿತ್ಯವಲ್ಲವೆಂದು ಅರಿಯುವದಕ್ಕೆ ಶ್ರಮವಾದರು ಏನು? ಸುಪ್ರೀತರಾದ-ಶಮದಮಾದಿ ಜ್ಞಾನಸಾಧನಗಳ ಸಂಸ್ಕಾರವುಳ್ಳವರಲ್ಲಿ, ತೀರ್ಥಾದಿ+ಆ ತತ–ವಿಸ್ತಾರದ ಅಪರಿ

ಔಪನಿಷದವ ವಾರಣಾಶ್ಯಾ।
ದ್ಯೌಪಚಾರಿಕಯೋಗಮೋಕ್ಷವ।
ನೇ ಪಡಿಸುವರ್ಗಡ! ಮೃಗಜಳಂಪದಲಿ ಕಾಲವನು॥
ಕ್ಷೇಪಿಸುವರಧ್ವರಮುಖಗಳಿಂ।
ದೇ ಪರಂ ಬೇಳಿದುದು ಮಾನವ।
ಕಾ ಪುರುಷರಾದರೆ ಮರೀಚಿಯ ನೀರವೆಂದೆನುತ! ॥ ೧೬ ॥

ಅರಿದವರೆ ಮೋಹಿಸಿದರವದಿರ।
ನರುಹುವವರಾರಾತ್ಮತತ್ತ್ವದ।
ಸರಣಿಗಾರಿನ್ನಧ್ವಗರು, ಕುಚಮಧ್ಯದೊಳಗಿಹನ॥
ತರುಣಿ ತನಯುನ ಕಾಣದರಸುವ।
ಪರಿ ಯವಸ್ಥಾತ್ರಯದೆ ಚಿತ್ತದೊ।
ಳಿರುವ ದೇವನ ಕಾಣರಯ್ಯೋ! ಜನರು ಭ್ರಮೆಯಿಂದ ॥ ೧೭ ॥

ಸಾವಲಂಬರ ವಿಷಯವಾಗಿಯೆ।
ಭಾವಿಸುವರು ವಿವಾದಜಾಲವ।
ಜೀವಪರಮೇಶಂ ನಿರಂಜನನೆಂದು ನಿಜಪದವ॥

---

ಮಿತ ಕ್ರಿಯೆಗಳಲ್ಲಿಯೇ ಹಗಲಿರುಳೆನ್ನದಂತೆ ತೊಡಗಿದ್ದರೂ ಅವುಗಳಿಂದ ತಮಗೆ ಸಂಸಾರ ಬಿಡುಗಡೆಯಾದೀತೆಂದು ಆರ್–ಬುದ್ಧಿವಂತರು ಯಾರುತಾನೆ ತಿಳಿದುಕೊಳ್ಳುವರು?

೧೬ ಔಪನಿ...ಗಡ—ಉಪನಿಷದ್ವಿಚಾರ ಜನ್ಯಜ್ಞಾನಫಲವಾದ ನಿತ್ಯ ಮುಕ್ತಿಯನ್ನು ಕಾಶ್ಯಾದಿ ಪುಣ್ಯಕ್ಷೇತ್ರಗಳಿಂದಲೇ ತಮಗೆ ದೊರಕುವದೆಂದು ಭ್ರಾಂತಿಪಟ್ಟಿರುವರಲ್ಲ! ಉಳಿದ ವೇದೋಕ್ತಕ್ರಿಯೆಗಳಲ್ಲಿ ಹೊರಟಪರಂತು. ....ಕ್ಷೇಪಿಸುವರು—ಅನ್ಯಾಯವಾಗಿ ಕಾಲವನ್ನು ಎಸೆಯುತ್ತ ಹಾಳುಮಾಡಿಕೊಳ್ಳುತ್ತಿರುವರು! ಅಧ್ವರ...ಳಿದುದು–ಯಜ್ಞಾದಿ ಕ್ರಿಯೆಗಳಿಂದಲೇ ಮುಕ್ತಿಯನ್ನು ವೇದವು ಹೇಳಿರುವದೆಂದು ಗಡಿಬಿಡಿಯನ್ನು ಮಾಡುತ್ತ ಗೂಗಿಕೊಳ್ಳುವ (ನೈ. ಸಿ. ೧–೨೨), ಕಾಪುರುಷರು—ಹಾಳಾದ ತಿಳಿಗೇಡಿಯ ಪಾಮರರಾದರೆ ವ್ಯರ್ಥವಾಗಿಯೆ ಭ್ರಮಿಸುತ್ತಿರುವರು!

೧೭ ಮೋಹಿಸಿದರೆ+ಅವದಿರನು—ಅವರನ್ನು, ಅರುಹುವವರು+ಆರು—ಯಾರು, ಆತ್ಮತತ್ತ್ವದ ಸರಣಿಗೆ—ಆತ್ಮಜ್ಞಾನದ ಮಾರ್ಗಕ್ಕೆ, ಆರು+ಇನ್ನು+ಅಧ್ವಗರು—ಯಾರು ದಾರಿಯನ್ನು ತೋರತಕ್ಕವರು? (ಹೊಳೆನರಸೀಪುರದ ಅಧ್ಯಾತ್ಮ ಪ್ರಕಾಶಕಾರ್ಯಾಲಯದಲ್ಲಿ ಪ್ರಕಟಿಸಿರುವ" ಪರಮಾರ್ಥ ಚಿಂತಾಮಣಿಯಲ್ಲಿ ಅವಸ್ಥಾತ್ರಯ ವಿಚಾರವು ವಿವರಿಸಿರುವದು) 'ಅಂತಸ್ಥಮಾತ್ಮಾನಮಜಂ ನಪ್ರಪಶ್ಯನ್ತಿ ಭ್ರಮನ್ತಿ ಮೂಢಾಗಿರಿ ಗಹ್ವರೇಷು' 'ಅಯಮಾತ್ಮಾ ಬ್ರಹ್ಮ' 'ಯದಾಹ್ಯೇವೈಷ...ಅಥತಸ್ಯ ಭಯಂ ಭವತಿ' (ತೈ) 'ಯತ್ಪರಂ ಬ್ರಹ್ಮ ಸರ್ವಾತ್ಮಾ ವಿಶ್ವಸ್ಯಾಯತನಂ ಮಹತ್' 'ಸ್ವಪ್ನಾಂತಂ ಜಾಗರಿತಾಂತಂ ಚೋಭೌ ಯೇನಾನುಪಶ್ಯತಿ ಮಹಂತಂ ವಿಭುಮಾತ್ಮಾನಂ ಮತ್ವಾಧೀರೋ ನಶೋಚತಿ' (ಕಠ)

**ಕೋವಿದರು ಮೊದಲಾಗಿ ತಿಳಿಯರ।**
**ದೇಂ ವಿಚಿತ್ರವೊ! ತತ್ತ್ವಶಾಸ್ತ್ರವ।**
ಸೇವಿಸದೆ ಕಾರ್ಮಣವ ಕಲಿಯಲಿ ಪಠಿಸಿ, ಯಾರುನಿಜಂ ॥ ೧೮ ॥

ಪಿಡಿಯಲಾಗದು; ತತ್ತ್ವ ಶಾಸ್ತ್ರವ।
ಕಡೆಗಣಿಸಿ ಬೇರೊಂದ ಯತಿಗಳು।
ಪಿಡಿದರಾದರೆ ಪತಿತರಪ್ಪರು, ಮೇಣವರೆ ತಪವಂ॥
ನಡೆಸಿ ನಿಗ್ರಹವಂ ಪ್ರಸಾದವ।
ಕೊಡುವರಾದಾರಿನ್ನು ಕಲಿಯುಗ।
ವಡಸೆ ಪಿಶುನರು ಕಲಹಕುತುಕರು ಬಾಹ್ಯಮಾನಸರು ॥ ೧೯॥

ಮೋಸಮುಳ್ಳವರಪ್ಪರಾ ಸಂ।
ನ್ಯಾಸಿಜನಮಕಟಕಟ! ಪ್ರಾಕೃತ।
ವಾಸನಾ ವಂಚಿತರು! ಪುಸ್ತುಕ ಚರ್ಮ ರುದ್ರಾಕ್ಷ॥
ವಾಸುದೇವೋಪಲ ತ್ರಿಪುಂಡ್ರವ।
ನಾಸೆಯಂ ವರ್ಜಿಸದೆ ಲೋಕದ।
ಲಾ ಸಿವಾಚಾರವನು ನುಡಿವುತ, ನಿತ್ಯಮುಕ್ತತೆಯಂ ॥ ೨೦॥

**ತಿಳಿದು ಶ್ರುತಿಯಿಂ, ಜೀವಭಾವ।**
**ವುಳಿದದಂ ನಂಬದೆ ಪರಿವ್ರಾ।**
**ಟ್ಕುಲಮೆ ಭಜಿಪುದಲಾ ಪ್ರಯಾಗಾದಿಗಳನೊಂದಾಗಿ॥**

---

೧೮ ವಿವಾದಜಾಲ—ವಿಚಾರಗೋಷ್ಠಿ, ಚರ್ಚಾಕೂಟವನ್ನೆಲ್ಲ, ಸಾವ....ಸುವರು—ಬರಿಯ ಅವಿದ್ಯಕ ಜೀವೇಶ್ವರರ ವಿಷಯದಲ್ಲಿಯೇ ಗೌರವಿಸುತ್ತಿರುವರಲ್ಲದೆ, ಜೀವ....ದವ–ಜೀವೇಶ್ವರರ ತತ್ತ್ವವು ಪರಮಾರ್ಥವಾಗಿ ಭೇದಗಂಧವಿಲ್ಲದ ಅದ್ವಿತೀಯವೆಂಬ ಮರ್ಮವನ್ನು ಪಂಡಿತರು ಮೊದಲಾಗಿ ತಿಳಿಯದಿರುವದು ಆಶ್ಚರ್ಯವು! ಬಲ್ಲಗುರುಗಳಲ್ಲಿ ಪೂಜ್ಯಭಾವನೆಯನ್ನಿಟ್ಟು, ಅವರಲ್ಲಿ ತತ್ತ್ವಾರ್ಥವನ್ನು ಸ್ವೀಕರಿಸಲಾರದೆ, ಕಾರ್ಮಣವ—ಮಂತ್ರ, ಮೂಲಿಕೆಗಳಿಂದ ಜಲಸ್ತಂಭನಾದಿಗಳನ್ನು ಮಾಡುವದು. ಅಥವಾ ಸ್ವತಂತ್ರದಿಂದ ತಾವೇ ಶಾಸ್ತ್ರಗಳನ್ನು ಓದಿಕೊಂಡು ಬಲ್ಲವರಾಗಿರಬಹುದೆ? ಇದು ನಿರ್ಣಯಿಸುವುದು ಕಷ್ಟವು.

೧೯ ನಿಗ್ರ....ದವ—ವರಶಾಪಗಳನ್ನು, ಕಲಿಯುಗವು+ಅಡಸೆ—ಪ್ರಾಪ್ತವಾಗಲು, ಪಿಶುನರು—ಪಿಸುಣರು, ಕುತುಕರು—ಕುತೂಹಲವುಳ್ಳವರು, ಬಾಹ್ಯಮಾನಸರು—ವಿಷಯಗಳಲ್ಲಿ ಆಸಕ್ತರು.

೨೦ ಪ್ರಾಕೃ....ಂಚಿತರು—ಪರಮಾರ್ಥಗಂಧವಿಲ್ಲದೆ ಶುದ್ಧಪ್ರಾಪಂಚಿಕರಾಗಿ ಪಾಪ! ವಿಶ್ವಾಸದ ಭೋಳೆಯ ಜನರನ್ನು ಮರುಳುಗೊಳಿಸುತ್ತ ವೇದಾಂತ ಪುಸ್ತಕಗಳು, ವಾಸುದೇವೋಪಲ—ಸಾಲಿಗ್ರಾಮಶಿಲೆಗಳು, ತ್ರಿಪುಂಡ್ರವನು—ಹಣೆಯಗಲದ ಭಸ್ಮಗಳ ಮೂರು ಗೆರೆಗಳು ನಾಮಗಳು, ಶಿವಾಚಾರ–ಜನರನ್ನು ಬೆರಗುಪಡಿಸುವ ಮಂಗಳಕರವಾದ ವೇದಾಂತ

ನಿಲುವುದನುಚಿತ ಮಸ್ಕರಿಗಳೊ ।
ಬ್ಬಳಿಯೊಳಾದರೆ ದುಃಖಮೇ ವೆ ।
ಗ್ಗಳಿಪುದೆಂಬೀಯರ್ಥಗಳಿಗೆ ಕ್ರಮುಪ್ರಮಾಣಗಳು ॥ ೨೧ ॥

ಪರಮುವಿಶ್ವಪತಿ ಸ್ಮೃತಿಯು ವಿ ।
ಸ್ತರಮೊಡರ್ಚವ ಯಾಜ್ಞವಲ್ಕ್ಯವು ।
ನಿರವಧಿಕಮನು ಶಕ್ತಿ ಗುರುವಾಕ್ಯಗಳು ಭಾರತವು ॥
ಅರುಣ ಸಂಬಂಧಿನಿ ಶ್ರುತಿಯು ।
ಸ್ಫುರಿಸುಗುಂ; ತದ್ಯೋಗದಿಂದೇ ।
ನಿರದೇ ಎನೆ, ಸಾರೂಪ್ಯಮುಖ್ಯಗತಿಗಳವರ ದೆಶೆಯಿಂ ॥ ೨೨ ॥

ಆ ಪದಾಪ್ತಯತಿತ್ವದಿಂ ನಿ ।
ರ್ಲೇಪವಪ್ಪುದೆನುವ ಶ್ರುತಿಗೆ ತಾ ।
ನಾಪರವಪ್ಪುದು ಮುಕ್ತಿ ಚಾತುರ್ಮಾಸ್ಯನೆಂಬುದಕೆ ॥
ಏಪಥಮೆನಲ್ ರುಚಿಯ ಪುಟ್ಟಿಸ ।
ಲೌಪಚಾರಿಕ ವಚನ ಪುರುಷ ।
ರ್ಗೀಪದದಿ ಪೊಂದುವುದು ಪುನರಾವೃತ್ತಿಯೆಂಬುದಕೆ ॥ ೨೩ ॥

---

ಮಾತುಗಳನ್ನು.

೨೧ ತಿಳಿದು—ಶ್ರುತಿಯು ಬರಿಯ ಮಾತುಗಳನ್ನಾಡುತ್ತ, ....ದೊಳು+ ಉಳಿಪು—ಜೀವಭಾವದಲ್ಲೆ ತಾವು ಉಳಿದುಕೊಂಡು, ಪರಿವ್ರಾಟ್+ಕುಲ—ತಂಡತಂಡಗಳಾದ ಸಂನ್ಯಾಸಿಗಳು, ಭಜಿಪುದಲ—ಹೋಗಿ ಸೇರುತ್ತಿರುವದಲ್ಲ, ಒಂದಾಗಿ—ಜತೆಗೊಂಡು, ಮಸ್ಕರಿಗಳು—ಭಿಕ್ಷುಗಳು, ಒಬ್ಬಳಿ—ಒಂದು ಬಳಿಯಲ್ಲಿ ಒಟ್ಟುಗೂಡಿದಲ್ಲಿ. ವೆಗ್ಗಳಿಪುದು—ಅಧಿಕತರವಾಗುವದು,

ಏಷಣಾತ್ರಯತ್ಯಾಗವೆಂಬುದು ಸಾಮಾನ್ಯರಿಗೆ ಅತ್ಯಾಶ್ಚರ್ಯಕರವಾಗಿರುವದರಿಂದ ಅದು ಆಶ್ಚಯಪ್ರಾಯರ್ವಾಗಿರುವದು! ಇವು ಉಳಿದ ಸಾಧನಗಳೆಲ್ಲಕ್ಕೂ ಉಪಲಕ್ಷಣವು ಪ್ರಶ್ನ ೬೧ ಟಿಪ್ಪಣಿ ೫; “ತತ್ ಸರ್ವೈಷಣಾ ವಿನಿರ್ಮುಕ್ತಃ” ಪ್ರಶ್ನ ಭಾಗ ೪—೧೦, ಭಾಷ್ಯ ೪; ಸಂನ್ಯಾಸವೆಂದರೆ ಏಷಣಾತ್ರಯವನ್ನು ತೊರೆದು ನಿಷ್ಕ್ರಿಯಾತ್ಮಸ್ವರೂಪದಲ್ಲಿ ನೆಲೆನಿಲ್ಲುವದೇ ಹೊರತು ಬರಿಯ ಆಶ್ರಮರೂಪವಲ್ಲ (ಗೀ... ಭಾ.೫—೧ ಭಾ. ಭಾ ೩೧೬; ಬೃ. ಭಾ ೩—೫—೧ ಭಾ. ಭಾ ೬೦, ೬೧; ಅಧ್ಯಾತ್ಮ ಪ್ರಕಾಶ ೨೦೭, ೨೩೯),

೨೩ ಆಪತ್—ಮರಣಕಾಲದಲ್ಲಿ ಆತುರವಾಗಿ, ಆಪ್ತ—ಸ್ವೀಕರಿಸಿ ಪಡೆಯುವ, ಯತಿತ್ವ—ಸಂನ್ಯಾಸದಿಂದ, ನಿರ್ಲೇಪವು+ ಅಪ್ಪುದು—ಅಸಂಗಾತ್ಮನ ಪ್ರಾಪ್ತಿ, ಮುಕ್ತಿಯು ಆಗುತ್ತೆಂಬ ಚಾತುರ್ಮಾಸ್ಯ....ದಕೆ—ಎಂದು ಅಕ್ಷಯಫಲ ಹೇಳುವ ಈ ಶ್ರುತಿಗಳಿಗೆಲ್ಲ, ಏಪಥಮೆನಲ್—ಗತಿಯೇನು? ಎಂದರೆ, ರುಚಿ....ಸಲು—ಸಂನ್ಯಾಸದಲ್ಲಿ ಆಶೆಯನ್ನು ಹುಟ್ಟಿಸುವದಕ್ಕಾಗಿ ಹೇಳಿದ ಉಪಚಾರದ ಮಾತು ಏತಕ್ಕೆಂದರೆ ಪುರುಷರ್ಗೆ+ ಈಪದದಿ—ಪ್ರಣ್ಯ

ಗೀತೆಮೊದಲಾಗಿಹ ಪುರಾಣ।
ವ್ರಾತಗತ ತತ್ತತ್ಕಥಾ ಪುರು।
ಷೈತಿಹಾಸಿಕವೆ ನಿದರ್ಶನವಿಲ್ಲಿ ಮೋಕ್ಷವೊಂಡ॥
ಖ್ಯಾತಫಲವೆಂದುಸುರ್ವಮುಖ್ಯ।
ಶ್ರೌತ ಚಾತುರ್ವಿಧ್ಯ ಸಾಧನ।
ಜಾತಕಪ್ಪುದನಾದರಣೆ ಯದರಿಂದ ಕಾಶಿಯಲಿ ॥ ೨೪ ॥

ಮೃತಿಯ ನೈದಿದ ಜಂತುಗಳೆ ಪಶು।
ಪತಿಯ ರೂಪವ ತಾಳಿ ಪಾರ್ಥಂ।
ಕ್ಷತವನೈದರೆನುವ ಪುರಾಣದೊಳಹುದೆ ಸಾರೂಪ್ಯಂ॥
ಹತಕರಣತೆಯು ದೊರಕದೆಂಬ।
ಲ್ಲತಿಶಯ ಪ್ರಮಾಣ್ಯಮುಂಟ।
ಚ್ಯುತಭುಜಿಷ್ಯಂ ಹರಿಹರಾಖ್ಯ ಕವೀಶನಿಹನೊರ್ವಂ ॥ ೨೫ ॥

ಆತಗಾಗುತ್ತಿರೆ ಪುರಾರಿ ನಿ।
ಕೇತನದೆ ಮೃತಿ, ಬಂದು ಪೇಳ್ದಂ।
ಭೂತಪತಿ, ನಾನಾ ಮುರಾಂತಕ ನೀ ಮಹಾ ಕ್ಷೇತ್ರಂ॥

---

ಫಲವಾದ ಬ್ರಹ್ಮಲೋಕಾದಿಗಳ ಈ ಮಾರ್ಗದಿಂದಲೂ ಮನುಷ್ಯನಿಗೆ ಪುನರಾವೃತ್ತಿಯನ್ನು ಹೇಳುವ ಶ್ರುತಿ ಸ್ಮೃತಿಗಳಿಗೆಲ್ಲ ವಿರೋಧ ಬರುವದು.

೨೪ (ಗೀ :೮-೧೬) ....ವ್ರಾತ—ಪುರಾಣಗಳ ರಾಶಿಗಳಲ್ಲಿಯೂ, ತತ್+ತತ್+ ಕಥಾ ಪುರುಷರ+ಐತಿಹಾಸಿಕವೇ—ಬೇರ್ಬೇರೆಯ ಆ ಕಥಾನಾಯಕರ ಇತಿಹಾಸಗಳೆ ಮೋಕ್ಷವಿಲ್ಲವೆಂಬುದಕ್ಕೆ ಸಾಕಾದಷ್ಟು ನಿದರ್ಶನಗಳು; ಮತ್ತು ಮೋಕ್ಷ...ಲಂ+ಎಂದು+ ಉಸುರ್ವ—ಮೋಕ್ಷವೊಂದೇ ಒಂದು ಶ್ರುತಿ ಪ್ರಸಿದ್ಧ ಜ್ಞಾನಮಾತ್ರದ ನೈಜಫಲವೆಂಬ 'ಜ್ಞಾನಾದೇವತು ಕೈವಲ್ಯಂ....' ಮುಂತಾದ ಶ್ರುತಿಗಳಿಗೂ, ವಿವೇಕಾದಿಗಳೆಂಬ ಮುಖ್ಯ ಶ್ರೌತ....ತಕೆ+ಅಪ್ಪುದು–'ಶ್ರೋತ್ರಿಯಂ ಬ್ರಹ್ಮನಿಷ್ಠಂ....ಯದ್ಯೇಥೇಹಚಿತೋ....' ಎಂಬ ಶ್ರುತ್ಯುಕ್ತಸಾದನ ಚತುಷ್ಟಯಕ್ಕೂ ತಿರಸ್ಕರಿಸಿದಂತಾಗುತ್ತೆಂಬುದು ಒಟ್ಟಿನ ಭಾವವು, ಈ ಎಲ್ಲಾ ಕಾರಣಗಳಿಂದಲೂ–

೨೫ ಮೃತಿಯನು+ಐದಿ—ಕಾಶಿಯಲ್ಲಿ ಸತ್ತವರು, ಪಶುಪತಿ–ಶಿವನ, ಪಾರ್ಥಂ— ಸಂಸಾರಜಲಧಿಯ ನೀರಿನಮೇಲೆ ದೋಣಿಯನ್ನು ನಡೆಯಿಸುವ, ಕ್ಷತ್ತಾ–ಸಾರಥಿ ಎಂದರೆ ಸಂಸಾರದಿಂದ ಕಡೆಹಾಯಿಸುವ ಶಿವನರೂಪವನ್ನು, ಐದಿದರು–ಹೊಂದಿದರೆಂಬ, ಹತಕರಣತೆ—ಲಿಂಗಭಂಗವೆಂಬ ಸಂಸಾರಮುಕ್ತಿಯು, ದೊರಕದು+ಎಂಬಲ್ಲಿ+ಅತಿಶಯದ ಪ್ರಮಾಣ್ಯಂ+ಉಂಟು+ಅಚ್ಯುತ ಭುಜಿಷ್ಯಂ—ವಿಷ್ಣುಸೇವಕ, ಹರಿಹರ(ಎಂಬ)+ ಆಖ್ಯ-ಹೆಸರಿನಭಕ್ತನೊಬ್ಬ.

೨೬ ನಿಕೇತನದೆ–ಸದಾಶಿವನಿಗೆ ವಾಸದಮನೆಯಾದ ಕಾಶಿಯಲ್ಲಿ ಭೂತಪತಿ–ಶಿವನು,

ಓತು ಕೊಡಲಾರೆವು ನಿರಾವೃತಿ ।
ಯೊತಟನಿಯಹ ಜಾಹ್ನವಿಯು, ವಿ ।
ಖ್ಯಾತವಾಗಿದಿರಾಗಿ ತೋರುವ ಪಂಚ ಭೂತಗಳು ॥೨೬॥

ಮುಂದೆ ತೋರುತ್ತಿರಲಿ ಭೂಮಿಯೊ ।
ಳೊಂದಿರುವ ಕಾಠಿನ್ಯವನು ಜಲ ।
ದಿಂದೆಸೆವ ಸುದ್ರವವ ವಹ್ನಿಯೊಳೆಸವ ಕಾಂತಿಯನು ॥
ಸ್ಪಂದದಿಂ ಸಂಸ್ಪರ್ಶವನಿಲನೊ ।
ಳೊಂದಿದವಕಾಶವನು ಗಗನದೆ ।
ನಿಂದಿಸಲ್ಕಾಭೂತಜಾಲದೊಳುಳಿವುದೇನಿಹುದು ॥ ೨೭ ॥

ಅಳಿವುದೇನಹುದೆನಲು, ಭಾವಂ ।
ತಿಳಿವು ಸೊಗಮಿವುಮೂರು, ಮತ್ತಾ ।
ಬಳಿಕ ರೂಪಂ ನಾಮವೆರಡೀ ಪಂಚಕದೊಳಿಹುದು ॥
ಉಳಿಮೆಯಾದದ್ವೈತವಸ್ತು ।
ಸ್ಥಳವೆ ಪೂರ್ವೋಕ್ತತ್ರಯಂ, ಮ ।
ತ್ತೆಳಸಿದೆರಡುಂ ಪ್ರಕೃತಿಭಾಗದೆ ವರ್ತಿಸುತ್ತಿಹುದು ॥ ೨೮ ॥

ಚಿದ್ವಿವೃತ್ತಂ ಜಗವಿದೆಂದೇ ।
ಸದ್ವಿವೇಕದಿ ತಿಳಿದು ನಿಂದಾ ।
ವಿದ್ವಧೀಶಗೆ ಘಟಿಸುವದು ಕೈವಲ್ಯ ಸಾಮ್ರಾಜ್ಯಂ ॥

---

ನಾನು+ಆ ಮುರಾಂತಕನು–ವಿಷ್ಣುವು, ಓತು–ಭಕ್ತಿಗೆ ವಶರಾಗಿ ಒಲಿದು, ನಿರಾವೃತಿಯು–ಮುಕ್ತಿಯನ್ನು. ತಟನಿ–ಹೊಳೆಯಾಗಿರುವ ಜಾಹ್ನವೀ–ಈಗಂಗೆಯೂ.

೨೭ ಎಸವ–ಶೋಭಿಸುವ ಸ್ಪಂದದಿಂದ–ಸುಳಿದಾಡುವದರಿಂದ ಅನಿಲ–ವಾಯುವಿನೊಳು ಎಂದರೆ ಭೂಮಿಯಿಂದ ಕೂಡಿದ ಕಠಿನತ್ವವು ಜಲಸಹಿತದ್ರವತ್ವವು ಅಗ್ನಿಯೊಡನೆ ಕಾಂತಿಯು ಸೋಕುವ ವಾಯುವಿನೊಡನೆ ಸ್ಪರ್ಶವು ಆಕಾಶದೊಡನೆ ಅವಕಾಶವು ಎಂಬಿವುಗಳಲ್ಲೊಂದೊಂದನ್ನು ಲಯಕ್ರಮದಿಂದ ಚಿಂತಿಸಿ, ಮನಸ್ಸಿನಲ್ಲಿ ಅವನ್ನು ತಿರಸ್ಕರಿಸಲು ಭೂತಗಳಲ್ಲಿ ಉಳಿದದ್ದು ಮತ್ತು ಅಳಿದದ್ದು ಏನು? ಎಂಬ ಶಿವನ ಪ್ರಶ್ನೆಗೆ ಆ ವಿಷ್ಣುಭಕ್ತನು-

೨೮ ಭಾವಂ–ಸತ್ತು ಸೊಗಂ–ಆನಂದವು+ಇವು ಮೂರು, ನಾಮರೂಪು ಎಂಬ ಈ ಎರಡೂ ಸೇರಿದ ಪಂಚಕವೆಂಬ ಉತ್ತರಕ್ಕೆ ಶಿವನು–ಪೂರ್ವೋ....ಯಂ— ಸತ್ತು ಚಿತ್ತು ಆನಂದವೆಂಬ ಈ ಮೂರೂ ಅದ್ವೈತಬ್ರಹ್ಮವಸ್ತುವಿನ ಸ್ವರೂಪವೆಂದೂ ಎಳಸಿದ–ಬಯಸಿದ ವಿಕ್ಕೆರಡು ಮಾಯೆಯ ಹುಸಿಯಾದ ಪ್ರಕೃತಿಯರೂಪವೆಂದೂ ಉಪದೇಶಿಸಿದನು.

೨೯ ಚಿತ್+ವಿವೃತ್ತಂ–ಈ ಜಗತ್ತೆಲ್ಲ ಚಿದ್ವಸ್ತು ಜ್ಞಾನದರೂಪಾಂತರವೇ ಎಂದು, ಸದ್ವಿವೇಕದಿ+ತಿಳಿದು–ಶಕ್ತಿನಿಂದ ವಿಂಗಡಿಸಿ ಜಗತ್ತನ್ನೆಲ್ಲ ಇಲ್ಲವೆಂಬುದನ್ನು ಮನಗಂಡು ಅನಾತ್ಮ ಸೋಂಕಿಲ್ಲದ ಅದ್ವಿತೀಯಾತ್ಮನಲ್ಲಿಯೇ ನೆಲೆ ನಿಂತಿರುವ ವಿದ್ವಧೀಶಗೆ–ಜ್ಞಾನಿಗೆ

ಹೃದ್ವದುಪಜೀವ್ಯಂ ಗಳಾದ ಶ।
ರದ್ವಯೇಂದ್ರಿಯ ವಾಯುಪಂಚಕ।
ಸದ್ವಿಯೋಗವೆ ದೇಹದೊಡನೀ ವಿಶ್ವನಿಗೆ ವೋಕ್ಷಂ ॥ ೨೯ ॥

ಎಂದು ಬೋಧಿಸೆ ಮುಕ್ತನಾದಂ।
ವಿಂದನಾಗಾ ಪುರುಷ ನೆನುವದ।
ರಿಂದ ಜ್ಞಾನಂ ಘಟಿಸದೇ ಕೈವಲ್ಯದೊರಕೊಳದು ॥
ಬಂದ ಕೈವಲ್ಯವನು ಕಾಶಿಯೊ।
ಳೊಂದಿರುವ ವ್ಯುತಿಜನ್ಯಸಾರೂ।
ಪ್ಯಂ ದಣಿಸಿ ಬಲವಿಲ್ಲವೆಂಬುದಕಿದೆ ನಿದರ್ಶನವು ॥ ೩೦ ॥

ಮಂದಮತಿಗಳಿಗೈದದಿರ್ಪಾ।
ನಂದಮಂ ಕೊಡುತಿರ್ಪ ತಿಳಿವಿನ।
ಬಂಧು ವಾವೆಡೆಯೊಳಗೆ ತೋರುತ್ತಿರದೊ ತತ್ಸ್ಥಲದೆ ॥
ಹಿಂದುಳಿದಫಲಭುಕ್ತಿ ಕರ್ಮಗ।
ಳಿಂದ ಸೇರುವುದೆಂದು ನಿಶ್ಚಯ।
**ವೊಂದಿ ತನ್ನ ವಿಚಾರಿಪುದೆ ಶ್ರುತಿಯಿಂದ ಪರಮಾರ್ಥಂ** ॥ ೩೧ ॥

ತೊವಲುಡಿಗೆಯಿಂದೊಪ್ಪಿ ಪಿತೃವಣ।
ಭವನೆನಿಸುತ ಸರೀಸೃಪಾಭರ।
ಣವನು ತೊಟ್ಟು ಪಿಶಾಚಗಣದೊಡನಾಡಿ ನಿಂದಿತನೆ ॥

---

ಹೃದ್ವದುಪಜೀವ್ಯಂ—ಸೂಕ್ಷ್ಮ ಶರೀರದಲ್ಲಿ ಜೀವಿಸಿಕೊಂಡಿರುವ, ಶರದ್ವಯ (ಈರೈದು—ಹತ್ತಾದ)+ಇಂದ್ರಿಯಗಳು ವಾಯುಗಳೈದು ಮನಬುದ್ಧಿ ಸೇರಿದ ಈ ೧೭ ತತ್ತ್ವಗಳ ಒಟ್ಟಿನ ಲಿಂಗಶರೀರವನ್ನು ಈ ಸ್ಥೂಲದೇಹದೊಡನೆ, ಸದ್ವಿಯೋಗವೇ-ಸತ್ತಿನಿಂದ ಬೇರ್ಪಡಿಸುವ ಸತ್ಯವಲ್ಲವೆಂಬೀ ರೂಪದ ಜ್ಞಾನ ನಾಶ್ಯವೇ ಈ ವಿಶ್ವ (ಜೀವ)ನಿಗೆ ಈ ಸ್ಥೂಲಶರೀರದ ಬಿಡುಗಡೆ ಎಂಬ ಆತ್ಯಂತಿಕ ಮುಕ್ತಿಯಲ್ಲದೆ, ಈ ಸ್ಥೂಲ ಶರೀರದ ಅಳಿವು ಮಾತ್ರ ಎಂದಿಗೂ ಮುಕ್ತಿಯಾಗುವದಿಲ್ಲ.

೩೦ ಆವಿಂದನು—ಆ ಕವಿಯು ಮುಕ್ತನಾದನು, ಹೀಗೆ ಜ್ಞಾನಫಲವಾಗಿ ಬಂದ ಕೈವಲ್ಯದಂತೆ ಕಾಶಿಯಮರಣದ ಸಾರೂಪ್ಯವು ನಿರಂಕುಶಾನಂದವನ್ನಿತ್ತು ಮಾನವನನ್ನು ಪೂರ್ಣ ತೃಪ್ತಿಪಡಿಸಲಾರದೆಂಬುದಕ್ಕೆ ಈ ಕಥೆಯೇ ಸಾಕಾದಷ್ಟು ನಿದರ್ಶನವು.

೩೧ ಮಂದಮತಿಗಳಿಗೆ+ಐದದಿರ್ಪ+ಆನಂದಮಂ—ವಿಷಯಾಸಕ್ತರಿಗೆ ಎಟುಕದಿರುವ ಬ್ರಹ್ಮಾನಂದವನ್ನು, ತಿಳಿ....ಧುವು—ತತ್ತ್ವದರ್ಶಿಯಾದ ಗುರುವು, ಆವ+ಎಡೆ....ತ್ತಿರದೊ—ಲಭಿಸದಿರುವ, ತತ್+ಸ್ಥಲದೆ—ಗುರುವಿಲ್ಲದ ಆ ಬಳಿಯ ಜನರನ್ನು ಪುಣ್ಯಬಲವಿಲ್ಲದವರೆಂದು ಗೊತ್ತುಮಾಡಿ ಅವರಿಗೆ ಹಿಂದೆ+ಉಳಿದ—ಜ್ಞಾನಫಲಕ್ಕೆ ಹಿಂದುಳಿದ ಸಂಸಾರದ, ಫಲಭುಕ್ತಿ—ಅಲ್ಪಫಲಗಳ ಭೋಗವೇ ಸಿಕ್ಕುವದು ಎಂದು ಗುರುಪುತ್ರರು

ದಿವಿಜ ಮಧ್ಯದೆ ಶಂಭು, ವಿಷಯದ ।
ಭವಣಿಯಾತ್ಮಾರಾಮನೆಂತೈ ।
ದುವನು ಪುಸಿಯುಂ ಭೂತಪತಿಯೆಮಗೀಗೆ ಶಿವಸುಖಮಂ ॥ ೩೨ ॥

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೊಳದ್ವೈತ ಮುಕ್ತಿಸ್ಥಿತಿಯಂ
ಪೇಳಿದುದೇಳನೆಯ ಸಂಧಿ ಸಂಪೂರ್ಣಂ (ಪದ ೩೬೧)

## ಅಧಿಕಾರಿ ನಿರ್ಣಯಂ—ಎಂಟನೆಯ ಸಂಧಿಯುಂ

ಸೂ॥ ಸಾರವಹ ಸಾಧನವು ನಾಲ್ಕಧಿ ।
ಕಾರಿ ಸೇವ್ಯಮೆನಿಪುದರಿಂ ದಧಿ ।
ಕಾರಿ ಲಕ್ಷಣಮಿಲ್ಲಿ ಪೇಳಲ್ಪಡುವುದನುಕೂಲಂ ॥ ಪ ॥

ಗುರುಮುಖದೊಳಧ್ಯಾತ್ಮಶಾಸ್ತ್ರವ ।
ನರಿದು ಕಾಲಾಂತರಕೆ ವಿಷಯಾ ।
ತುರರೆನಿಸಿ ದುಷ್ಪ್ರಭು ಸಮೀಪವಸೇರಿ, ಹೊಟ್ಟೆಯನು ॥
ಹೊರೆಯಲೊಸುಗ ಸಾಧುಜೀವನ ।
ಹರಮುಖ ಪ್ರಿಯವಚನಮಂ ಬಿ ।
ತ್ತರಿಪ ನೀಚರಬಳಿಗೆ ತರದಿಪುದಿ ಕಥಾಶ್ರುತಿಯ ॥ ೧ ॥

ಸುಗುಣಮುಳ್ಳವನಪ್ಪನಧಿಕಾ ।
ರಿಗಳೊಳಗ್ರೇಸರನು, ಯುಗ್ಮವ ।
ನಗಲದಿಪ್ಪನು ಪ್ರಾಕೃತಾಪ್ರಾಕೃತರ, ಸಂಸ್ಕೃತಗೆ ॥

---

ತಮ್ಮೊಳಗೆ ನಿಶ್ಚಯಂ+ಬಂದಿ—ಹೊಂದಿ.

೩೨ ತೊವಲು+ಉಡಿಗೆಯಿಂದ—ಚರ್ಮದ ಹೊದ್ದಿಕೆಯಿಂದ ಒಪ್ಪಿ, ಪಿತೃವಣ—ಸ್ಮಶಾನವನ್ನೆ ತನ್ನ ವಾಸದ ಭವನ—ಮನೆ ಎನಿಸಿಕೊಂಡು, ಸರೀಸೃಪ(ಸರ್ಪಗಳ)+ಆಭರಣವನು ತೊಟ್ಟು ಪಿಶಾಚಗಣದ+ಒಡನಾಡಿ—ಎಂದು ಕಂಡುಬಂದರೂ ಆ ಶಿವನು ನಿಂದಿತನೇನು? ಪುಣ್ಯಫಲಜೀವಿಗಳಾಗಿ ಹುಟ್ಟಿ ಸದಾ ಬೋಗಾಸಕ್ತರಾಗಿರುವ ದಿವಿಜರ—ದೇವತೆಗಳ ನಡುವೆಯಿದ್ದರು, ....ಭವಣಿ—ವಿಕಾರದ ತೊಂದರೆಯನ್ನು ಆತ್ಮಾರಾಮನು—ಆತ್ಮನಲ್ಲಿಯೇ ರಮಿಸುತ್ತಿರುವವನು ಐದುವದು+ಎಂತು—ಅದನ್ನು ಹೊಂದುವದು ಹೇಗೆ? ಪುಸಿ—ಶುದ್ಧ ಸುಳ್ಳು, ಭೂತಪತಿಯು+ಎಮಗೆ+ಈಗೆ—ನಮಗೆ ಕೊಡಲಿ, ಶಿವಸುಖಮಂ—ನಿತ್ಯಮಂಗಲವಾದ ತನ್ನ ಸುಖವನ್ನು.

೧ ಆತುರರು—ವಿಷಯಾಸಕ್ತರಾಗಿ, ದುಷ್ಪ್ರಭು—ನೀಚರಾದ ಅರಸುಗಳು, ಧನಿಕರು ಇವರನ್ನಾಶ್ರಯಿಸಿ, ....ಜೀವನಪರಮುಖ—ಬದುಕನ್ನೇ ಮುಖ್ಯವಾಗಿ ಹಾಳು ಮಾಡತಕ್ಕ, ಬಿತ್ತರಿಪ—ವಿವರಿಸಿ ಹೇಳುವ.

ಸೊಗಸುವುದು ಗೀರ್ವಾಣ, ಕನ್ನಡ ।
ಸೊಗಸುವುದು ಪ್ರಾಕೃತಗೆ ಎರಡು ತೆ ।
ರಗಳೊಳಿರ್ಕುಂ ಪ್ರೌಢಕೃತಿಯಿಾ ಗ್ರಂಥಮೇಕೆನಲು, ॥ ೨ ॥

ಕುಸುಮರಾಜಿಯೊಳಿರ್ಪ ಮಧುರಸ ।
ಪ ಸರಘವ್ರಜಮೇ ಗ್ರಹಿಸಿ ಸೇ ।
ರಿಸಲು, ಹುಟ್ಟಿಯು ಜೇನೆನಿಸಿ ಸಕಲೋಪಕಾರವನು ॥
ಪಸರಿಸಿದ ಹಾಗಿಲ್ಲಿ ತೋರ್ಪ ಸ ।
ರಸ ಪದಾರ್ಥವ ಕುಶಲರೆತ್ತಿ ಸ ।
ಮಿಸಿಸೆ ಮೆಚ್ಚದರೊಳರೆ, ತಾಳದರೊಳರೆ ಬುಧರಲ್ಲಿ! ॥ ೩ ॥

ಅವಿಕಲೋದಕ ಕೂಪದಲಿ ಸಂ ।
ಭವಿಪುದೆಷ್ಟೋ ಕೆಲಸವಷ್ಟೇ ।
ಭುವನದಲಿ ನೀರಡಿಕೆವೆತ್ತವ ಗಲ್ತೆ, ನೆರೆನೊಂದು ॥
ಭವದ ತಾಪದ ದೆಶೆಯೊಳರಸುವ ।
ಕವಿಗೆ ತತ್ತ್ವರಹಸ್ಯವಿದರಿಂ ।
ಸವಿಯಲ್ದೊರಕಲಾಗಲೆ ಕೃತಾರ್ಥನೆನಿಪ್ಪ ಪುರುಷಂ ॥ ೪ ॥

ತನುತೆಯಂ ಪಡೆದಿರ್ಪದರಿನಿಂ ।
ಜನಿಪುದೇ ಬಹುಕೃತಿಪದ ವಿಲೋ ।
ಕನ ಸಮಾಪ್ತಾರ್ಥಾವಗತಿಯೆನೆ, ಬಿಸಿಲ ನಡಗೆಯಲಿ ॥

---

೨ ....ವನು+ ಅಪ್ಪನು—ಆಗುವನು, ಅಗ್ರೇಸರನು—ಮುಖ್ಯಾಧಿಕಾರಿಯು, ಯುಗ್ಮವನು+ ಅಗಲದೆ+ ಇಪ್ಪನು—ಬಹುಮಟ್ಟಿಗೆ ಸಂಸ್ಕೃತ ಮತ್ತು ಕನ್ನಡ ಎಂಬ ಪ್ರಾಕೃತರ+ ಅಪ್ರಾಕೃತರ ಎರಡು ಭಾಷೆಗಳನ್ನು ಬಿಟ್ಟಗಲದಂತೆ ಬಲ್ಲವನಾಗಿದ್ದರೂ ಹಾಗಿಲ್ಲದ ಒಂದೊಂದು ಭಾಷಾಭಿಜ್ಞರಿಗೂ.

೩ ಕುಸುಮ....ರಸವ—ಹೂವುಗಳಲ್ಲಿನ ಮಕರಂದವನ್ನು, ಸರಘುವ್ರಜವು—ಜೇನು ನೊಣಗಳ ಗುಂಪೆಂಬುದು ಒಂದುಬಳಿ ಸೇರಿಸಿದ್ದರಿಂದ ಸಕಲಜನರಿಗೂ ಉಪಕಾರವಾದಂತೆ, ಹಾಗೆ+ ಇಲ್ಲಿ—ಈ ಗ್ರಂಥದಲ್ಲಿ ತಂದುಕೂಡಿಸಿದ, ಸರಸಪದಾರ್ಥವ—ವೇದಾಂತಗಳ ತತ್ತ್ವಾರ್ಥವನ್ನೆಲ್ಲ ಇದರಲ್ಲಿ ಸಂಗ್ರಹಿಸಿ ಕಟ್ಟಿಟ್ಟತಾತ್ಪರ್ಯದಂತಿರುವ ಈ ಗ್ರಂಥದ ವಿಷಯಗಳನ್ನು ಸಮಿಸಿಸೆ—ವೇದಾಂತಗಳ ಅರ್ಥಕ್ಕೆ ಸರಿದೂಗಲು.

೪ ಅವಿಕಲ+ ಉದಕ—ಧ್ರುವಜಲದ ಬಾವಿಯಾಗಿದ್ದರೂ, ಸಂಭ....ವೆತ್ತ+ ಅವಗೆ+ ಅಲ್ತೆ—ಬಾಯಾರಿಕೆ ಬಂದು ಬಸವಳಿದ ಮನುಷ್ಯನಾಗಿದ್ದರೂ ತನಗೆ ಬೇಕಾದಷ್ಟು ಒಂದೆರಡು ಕೈಬೊಗಸೆಗಳ ನೀರಿನಿಂದಲೆ ತೃಪ್ತನಾಗುವನಲ್ಲವೆ ? ಭವ....ಯೊಳು—ಸಂಸಾರ ತಾಪದಲ್ಲಿಯು ಕಡುನೊಂದು ಕಣ್ಗೆಟ್ಟು ತತ್ತ್ವವನ್ನೆ ಕುರಿತು, ಅರಸುವ—ಕಣ್ಣಿಟ್ಟು ಹುಡುಕುತ್ತಿರುವ, ಕವಿ—ಜಿಜ್ಞಾಸುವಿಗೂ.

ಜನಿತ ವಿಸ್ಮೃಯ್ಯೈದೆ, ಮಸ್ತಕ ।
ವನು ಚುಲಕ ಸಲಿಲದೊಳಗೊತ್ತಲ ।
ದನುಮತಿಯ ಸರ್ವಾಂಗದೊಳಗಿತ್ತಂತೆ ಲಘುವಾಗಿ ॥ ೫ ॥

ಘನವೆನಿಸುವರ್ಥವನು ತಾಳ್ದೀ ।
ಮನನಗೋಚರವಾದ ಕಾವ್ಯದ ।
ಕೆನೆಯನೊಳಪೊಕ್ಕಿದರ ಸಾರವ ಸಾಧುಮುಖದಿಂದ ॥
ಅನುಭವಿಸಿದವ ಸಕಲ ವಾಸ್ತವ ।
ವನು ಪಡೆದ ನರನೆಂಬ ಬಳಿಯ ।
ಲ್ಲಿ ನಿಗಮಂ ಗೀತೆಗಳು ಮುಖ್ಯಾಗಮ ಪುರಾಣಗಳು ॥ ೬ ॥

ಕ್ಷೀರಮಂ ಒಲಿದೀಂಟಿ ಹಂಸಂ ।
ನೀರಮಂ ನೂಕಿದವೊಲೀ ಪದ ।
ಸಾರಮಂ ಬಲ್ಲನನು ನೂಕುವನುಳಿದ ಕಾವ್ಯಗಳಂ ॥
ಧಾರುಣಿಯೊಳಿಹ ಪೂರ್ವಕೃತಿಗಳ ।
ಸಾರವೇ ಎನಲಲ್ಲಿ ವಿದ್ವ ।
ಜ್ಜಾರು ಕಾವ್ಯಗಳುಂಟು ಪ್ರಾಕೃತ ಜನಕೃತಿಗಳುಂಟು ॥ ೭ ॥

ಅರಿತು ಮಾಡಿದವುಂಟು ಹೆಸರೊಂ ।
ದಿರಲಿ ತಮಗೆಂತೆಂಬ ಮಾನದಿ ।
ವಿರಚಿಸಿದವುಂಟಾದೊಡನುಭವ ಮಿಲ್ಲದೇ ನೋಡಿ ॥

---

೫ ತನು...ರಿನಿಂ—ಈ ಗ್ರಂಥವು ತನ್ನಗಾತ್ರದಲ್ಲಿ ಸಣ್ಣದಾದ್ದರಿಂದ, ಬಹುಕೃ.... ಮಾಪ್ತ+ಅರ್ಥ—ಅನೇಕ ಉದ್ಗ್ರಂಥಗಳ ಪರಿಶೀಲನದಿಂದ ಬರುವ, ಅನುಭವದಲ್ಲಿ ಕೊನೆಗಾಣುವ ಅವಗತಿಯು+ಜನಿಪುದೆ+ಎನೆ–ನಿಶ್ಚಿತಾನುಭವವನ್ನು ಹುಟ್ಟಿಸುತ್ತದೆಯೆ? ಎಂದರೆ ಚುಲಕ—ಕೈಕುಡಿಕೆಯಷ್ಟು ಕೊಂಚಮಾತ್ರ ನೀರಿನಿಂದಲೇ, ಮತಿಯು—ಅವನ ಶರೀರದಲ್ಲೆಲ್ಲ ಅರಿವನ್ನು ಕೊಟ್ಟಂತೆ ಈ ಕಾವ್ಯವೂ ತನ್ನ ಆಕಾರದಲ್ಲಿ. ಲಘುವಾಗಿ—ಸಣ್ಣ ದಾಗಿ ಕಂಡುಬಂದರೂ.

೬ ಘನವೆನಿಸುವ—ಅಧಿಕವಾಗಿ ವೇದಾರ್ಥಗಳ ಸಮೂಹವನ್ನೆಲ್ಲ, ತಾಳ್ದು+ಈ—ತಳೆದು, ತಾನು ಧರಿಸಿಕೊಂಡಿರುವ ಈ...; ಕೆನೆಯನ್ನು—ಸತ್ವ, ಒಳಗಿನ ಹೃದಯವನ್ನು ಕುರಿತು ಅದರ ಒಳಹೊಕ್ಕು. ಸಾಧು—ಬಲ್ಲ ತತ್ತ್ವಜ್ಞರಿಂದ, ಸಕಲವಾಸ್ತವ...ವನು–ಜೀವ ಜಗತ್ತುಗಳ ಪರಮಾರ್ಥವನ್ನೆಲ್ಲವನ್ನೂ ಸೂರೆಗೊಂಡವನು ಎಂಬಲ್ಲಿ.

೭ ಒಲಿದು+ಈಂಟಿ—ಪ್ರೀತಿಯಿಂದ ಸವಿದು, ಈ ಪದಸಾರಮಂ—ಈ ಕಾವ್ಯದ ಮರ್ಮಜ್ಞನೂ, ....ಬಲ್ಲವನು+ಉಳಿದ-ಮಿಕ್ಕ, ಎನಲು+ಅಲ್ಲಿ-ಆ ಹಿಂದಿನವರ ಗ್ರಂಥಗಳ ಪಟ್ಟಿಯ ಸಾಲುಗಳಲ್ಲಿ.

೧೦ ವಾರಮೆ—ಗುಂಪು, ಮತ್ತು+ಅವರು+ಆರಯುವ—ಪರಿಶೀಲಿಸದೆ ಜಿಜ್ಞಾಸು

ಪರರ ಸತ್ಕೃತಿಗಳನು ಮಾಡಿದ ।
ಪರಿಪರಿಯ ಕಾವ್ಯಂಗಳುಂಟನು ।
ವರಿದು ಮಾಡಿದ ಕೃತಿಗಳುಂಟು ಮಹಾ ಪುರುಷರುಗಳ ॥ ೮ ॥

ಅಲ್ಲವಾದವ ನೂಕಿ ಕೊಳುವದು ।
ಬಲ್ಲವರ ಕಾವ್ಯಗಳ, ತಿಳಿವಿದ ।
ರಲ್ಲಿ ತೋರದಿರಲ್ಕೆ ಜನಜನಿತ ಪ್ರವೃತ್ತಿಯನು ॥
ಸಿಲ್ಲದಾರೈವುದು ಬಳಿಕ ತಾಂ ।
ಬಲ್ಲವರ ಬಳಿಗೈದಿ, ಕೇಳಿದ ।
ರಲ್ಲಿ ನಿರ್ಣಯವಾಗುವುದು ದಿಟವೆಂದು ಪುಸಿಯೆಂದು, ॥ ೯ ॥

ಮಾರುತಿಹ ಪೈರಿಂಗೆ ಕೊಳುವರ ।
ವಾರಮೋ ಮುತ್ತಿಹುದು, ಮತ್ತವ ।
ರಾರಯುದೆ ಕೈಯಿಂದ ಹಣವನು ಕೊಟ್ಟುಕೊಳುವರೆ ॥
ಯಾರಿಗಾದರು ಸರಿ! ಇದೇತಕೆ ।
ತೋರುವುದು ಕೃತಕೃತ್ಯರಲಿ ಸಂ ।
ಸಾರ ಸಂಭವದೋಷವವರಂಚಿಗೆ ತಿರಿಗಿಬರದು ॥ ೧೦ ॥

ಕಾಲಮಂ ನಡಸುವೊಡೆ ಸಿದ್ಧರ ।
ಜಾಲದಲಿ, ಸಂನ್ಯಾಸಿ ಜನಗಳ ।
ಜಾಲದಲಿ ಚಿಂತಿಪೊಡೆಯಾರೈವೊಡೆ ಮುಮುಕ್ಷುಗಳ ॥
ಜಾಲದಲಿ ವಿನಿಯೋಗ ಮುಂಟನು ।
ಕೂಲವೇ ವಾಚಕವು ಬಿಟ್ಟು ಕ ।
ಪೋಲ ಕಲ್ಪಿತ ಶಬ್ದವಿಲ್ಲಿಡುವುದು ಮಹಾತ್ಮರಲಿ ॥ ೧೧ ॥

---

ಗಳು ವಿಚಾರಮಾಡಿಯೇ ನೋಡಬೇಕಲ್ಲದೆ ಕುರುಡರ ಹಾದಿಯನ್ನು ಹಿಡಿಯುವದಲ್ಲ, ಕೃತಕೃತ್ಯರಲಿ (—ಜ್ಞಾನಿಗಳಲ್ಲಿ) ....ದೋಷವು? ಎಂಬುದು ಪ್ರಶ್ನೆಯು, ಅವರಂಚಿಗೆ—ಜ್ಞಾನಿಗಳ ಹತ್ತಿರಕ್ಕೂ, ತಿರುಗಿ—ಮರಳಿಸುಳಿಯುವದಿಲ್ಲ ಎಂದರೆ—ವ್ಯವಹಾರಮೂಲವಾದ ಅಧ್ಯಾಸವೇ ಜ್ಞಾನಿಗಳಲ್ಲಿ ಕಳಚಿಕೊಂಡಿರುವದರಿಂದ ವಿಕಾರಗಳೊಂದೂ ಅವರ ಹತ್ತಿರ ಬರುವಂತಿಲ್ಲ ಎಂಬುದು ಉತ್ತರವು.

೧೧ ....ನಡೆಸುವೊಡೆ—ಕಾಲಹರಣಮಾಡಬೇಕಾದಲ್ಲಿ, ಸಿದ್ಧರ—ಜ್ಞಾನಿಗಳ, ಸಂನ್ಯಾಸಿ—ವಿರಕ್ತರ, ಜಾಲ—ಗುಂಪಿನಲ್ಲಿ, ಚಿಂತಿಪೊಡೆ+ಆರೈವೊಡೆ—ತತ್ತ್ವಚಿಂತೆಯನ್ನಾಗಲಿ ವಿಚಾರವನ್ನಾಗಲಿ ನಡೆಸುವಲ್ಲಿ ಜಿಜ್ಞಾಸುಗಳಲ್ಲಿಯೇ ವಿನಿಯೋಗಂ+ಉಂಟು+ಅನುಕೂಲವೇ—ಮಹಾ ಲಾಭದಾಯಕವೆಂಬುದೇನೋ ಸರಿಯೆ ಆದರೆ, ವಾಚ...ಟ್ಟು—ಪೂರ್ವಿಕರ ಗ್ರಂಥಗಳನ್ನು ಕೈಬಿಟ್ಟು, ಅವುಗಳ ಸಾಲಿನಲ್ಲಿ ಸ್ವಕಪೋಲಗ್ರಂಥವೊಂದು ಜೋಡಿಸುವದು ಹೇಗೆ?

ಉಚಿತವೇ, ಪರಮೇಶ್ವರಗುಣ ।
ಪ್ರಚುರವಾಗಿಹ ಪದ್ಯ ಪಪಶ ।
ಬ್ದ ಚಯವನಾದರು ವಿಬುಧರಿಂ ಸಂಗ್ರಾಹ್ಯವಿದೆನುಳಿದ ॥
ಕುಚಗಳೆಂಬುಜ ಕೋಶ, ವಶಿಯಳ ।
ಕಚಗಳಳಿಗಳ ಬಳಗ, ಮೃದುಪದ ।
ವಚನವಮೃತದ ಸೋನೆಯೆಂಬವರುಕ್ತಿಯಗ್ರಾಹ್ಯಂ ॥ ೧೨ ॥

ಪ್ರಚುರರಹ ಸಪ್ತರ್ಷಿಗಳು ಮಂ ।
ತ್ರಚಯ ವರ್ಣವ ತಿರುಹಿ ಪೇಳಿದ ।
ರು ಚರಿಸದೆ ತಾಂ ಪಡೆದನು 'ಮರಾ' ಎನುತ ವಾಲ್ಮೀಕಿ ॥
ಅಚಲಿತ ಶ್ರೇಯಸ್ಸನಾದರ।
ನುಚಿತ ಪದಪಂಜ್ತಿಯಲಿ ಕಾವ್ಯವ ।
ರಚಿಸಬೇಕೆಂದಾವ ಬಳಿಯಲಿ ಪೇಳಿರುವದೆನಲು, ॥ ೧೩ ॥

ಸೂತಸಂಹಿತೆಯಲಿ ಪ್ರಮಾಣ ವಿ ।
ನೀತನಾದವ, ಮುಕ್ತಿ ಮಾರ್ಗವ ।
ಜಾತಗುಣ ಮೌಮುಕ್ಷುವದೆ ಪೀಳದೊಡನವನಕೊಲಲು ॥

---

೧೨ ....ಪ್ರಚುರ--ಗುಣಗಾನ ಮಾಡುವ ಅಪಶಬ್ದಗಳ, ಚಯ--ರಾಶಿಯಿಂದ ಕೂಡಿದ್ದರೂ ಅದು ಪರಮಾತ್ಮನನ್ನೆ ಲಕ್ಷಿಸುತ್ತಿರುವದರಿಂದ, ಸಂಗ್ರಾಹ್ಯವು+ ಇದನು+ ಉಳಿದ--ಮಿಕ್ಕ ಕಾಮಿ ಪುರುಷರನ್ನು ವಂಚಿಸುವ, ಕುಚಗಳು+ ಅಂಬುಜಕೋಶ-ತಾವರೆಯ ಮೊಗ್ಗುಗಳೆಂದೂ, ವಶಿಯಳ--ಸ್ತ್ರೀಯಳ ಕಚಗಳು-- ತಲೆಯ ಗುಂಗುರುಳು ಮತ್ತು ಹಣೆಯ ಮೇಲಿದ್ದು ಉರುಳಿದ ಮುಂಗುರುಳು ಎಂಬ ಕೂದಲನ್ನು, ಅಳಿಗಳ--ಸಾಲುಸಾಲಾಗಿ ಕಟ್ಟಿರುವ ತುಂಬಿಗಳ ಬಳಗವೆಂದೂ, ಮೃದುಪದ--ಕಾಲುಗಳನ್ನು ಹೂವುಗಳಂತೆ ಮೃದುವಾದವುಗಳೆಂದೂ, ವಚ....ನೆಯ--ಮಾತುಗಳನ್ನಂತು ತೊಟ್ಟಿಕ್ಕುತ್ತಿರುವ ಅಮೃತದ ಹನಿಮಳೆ ಎಂದು ಮುಂತಾಗಿ ಬಗೆಬಗೆಯಿಂದ ಬಣ್ಣಿಸುವ, ಅವರ+ ಉಕ್ತಿಯು--ಕಾಮರಸವನ್ನು ಇಂದ್ರಿಯಗಳಲ್ಲಿ ಸಂಚರಿಸುವಂತೆ ಹೊರಚೆಲ್ಲುವ ಕವಿತಾನಿಬಂಧನೆಗಳು ಎಷ್ಟೇ ಶುದ್ಧವಾಗಿದ್ದರೂ ಅವು ಜಿಜ್ಞಾಸುಗಳನ್ನು ಕುರಿತು ಅಗ್ರಾಹ್ಯವೇ ಸರಿ.

೧೩ ಪ್ರಚುರ--ಪುರಾಣಸಿದ್ಧರಾದ ಕಶ್ಯಪ, ಅಂಗಿರಸ, ಭರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ವಸಿಷ್ಠರು ಎಂಬೀ ಸಪ್ತ ಋಷಿಗಳು, ಮಂತ್ರ....ರುಹಿ--ರಾಮತಾರಕಮಂತ್ರದ ಅಕ್ಷರಗಳನ್ನು ಹಿಂದುಮುಂದು ಮಾಡಿ ತಿರಿಚಿ ಹೇಳಿಕೊಟ್ಟರೂ 'ಮರಾ' ಎಂದು ಪಠಿಸಿಯೆ ಆ ವಾಲ್ಮೀಕಿಯೂ, ಅಚಲಿತ-ನಿತ್ಯವಾದ ಶ್ರೇಯಸ್ಸನ್ನೆ ಅವನು ಪಡೆದುಕೊಂಡುಬಿಟ್ಟನು! ಸರಿಯೆ, ಆರ್+ ಆದನು+ ಅನು....ಂಜ್ತಿ--ಉಚಿತವಲ್ಲದ ಪದಜೋಡನೆಯಿಂದಲೂ ಗ್ರಂಥವನ್ನು ಮಾಡಬಹುದೆಂದು ಎಲ್ಲಿ ಹೇಳಿರುವದು?

೧೪ ಪ್ರಮಾ....ನೀತನು--ಆತ್ಮಜ್ಞಾನ ಸಾಧನವನ್ನು ಬಲ್ಲವನು ಮುಕ್ತಿ....ಕ್ಷುವದೆ--

ಪಾತಕಿಯು ನರನಾಗ ಶಾಂಕರ।
ವಿೂತನಲಿ ವರ್ತಿಸದು ಬ್ರಾಹ್ಮಣ।
ಘಾತಿಗಿವ ಸಖನೆಂದು ಗೌರೀಶಂಭುವಾದದಲಿ   ॥ ೧೪ ॥

ವಾರಣಾಶೀ ಸ್ಥಲದೆ ಶಿವನೇ।
ಸಾರತರ ತತ್ತ್ವೋಪದೇಶವ।
ಸಾರಿಪುದರಿಂದಂ, ಮುಮುಕ್ಷು ಜನಕ್ಕೆ ನಿಲಿಸಲ್ಕೆ॥
ಪಾರಮಾರ್ಥಿಕ ನಯವ ಬಲಕ್ಕೆ।
ಸೇರದಿರೆ, ಮನುಜರ್ಗೆಲಸದುಪ।
ಕಾರಮಾದರದಕ್ಕೆ ಮಾಡಲ್ ಜ್ಞಾನಸಿದ್ಧಿಪುದು   ॥ ೧೫ ॥

ಎಂಬ ನಾನಾಸ್ಮೃತಿ ಪುರಾಣ ಕ।
ದಂಬದಿಂ ಮುನ್ನುಳ್ಳ ವಾಕ್ಯಗ।
ಳಂ ಬಲಪ್ರಾಯಾನುಭವ ದಿವ್ಯಂಗಳಂ ತೆಗೆದು॥
ಇಂಬೆನಿಸುವೋಲ್ ಧೀರ ಚಿತ್ಪ್ರತಿ।
ಬಿಂಬಗಳಿಗೀ ಕಾವ್ಯರಸ ವಿಂ।
ಬೆಂಬರಾರ್ನೆರೆಗೈಯ್ಯೆ ನೂತನವೆಂದು ಲಘುವೆಂದು   ॥ ೧೬ ॥

ಗುಣಘನ ದ್ರವ್ಯಗಳು ನಾನಾ।
ಜನ ನಿಷೇವ್ಯಂ ಬಡೆಯವೇ ಚಂ।
ದನ ಮಹೀರುಹಮೇಕೆ ಬರಸೆಳೆದುದು ಭುಜಂಗಗಳ॥

---

ಜ್ಞಾನಕ್ಕೆಬೇಕಾದ ಅಧಿಕಾರಸಂಪತ್ತುಳ್ಳವನಿಗೂ ಜ್ಞಾನವನ್ನು ಹೇಳಿಕೊಡದೆ ಅವನನ್ನು ಕೊಲ್ಲಲು, ಬ್ರಹ್ಮತ್ವವು ಈತನಲ್ಲಿ ಕಾಲೂರಿ ನಿಲ್ಲುವದಿಲ್ಲವೆಂದೂ ಬ್ರಹ್ಮಹತ್ಯವನ್ನು ಮಾಡಿದವನ ಮಿತ್ರರಲ್ಲಿ ಒಬ್ಬನಾಗಿ ಇವನು ಸೇರುವನೆಂದೂ ಹೇಳಿರುವದು.

೧೫ ಸಾರಿಪುದರಿಂದಂ–ತತ್ತ್ವವನ್ನು ಕೈಯೆತ್ತಿ ಸಾರುತ್ತಿರುವದರಿಂದ ಪಾರಮಾರ್ಥಿಕನಯವ–ವೇದಾಂತಗ್ರಂಥವೊಂದನ್ನು ಅವರಿಗೆ ಒದಗಿಸಿಕೊಟ್ಟು ಜಿಜ್ಞಾಸುವಿಗೆ ಬಂದಿಷ್ಟು ಉಪಕಾರವನ್ನು ಮಾಡಿದವನಿಗೂ.

೧೬ ಕದಂಬದಿಂ–ರಾಶಿಯಿಂದ: ಮುನ್ನ....ವೋಲ್–ಪೂರ್ವಿಕರವಾಕ್ಯಗಳನ್ನೂ ಬಲವಾದ ಅನುಭವಗಳನ್ನು ಆರಿಸಿ ಆಧಾರಪಡಿಕೊಂಡು ಬರೆದಿರುವ ಈ ಗ್ರಂಥವು–ಹೊಸಹೊಸ ವಿಷಯುಗಳ ಅಡಕದಿಂದಲೂ ಸುಲಭತ್ವದಿಂದಲೂ ಒಪ್ಪುತ್ತ ಧೀರಚಿತ್ಪ್ರತಿ.... ಪ್ರಾಜ್ಞರಾದ ಜಿಜ್ಞಾಸುಗಳಿಗೆ ಅರಿವನ್ನು ಕೊಡುವದರಲ್ಲಿ ಈ ಕಾವ್ಯವು ತನಗೆ ಮತ್ತೊಂದನ್ನು ಸರಿಗಟ್ಟದಿರುವದು,

೧೭ ಗುಣಘನ–ಅಪ್ಯಾಯಮಾನವಾಗಿ ಮನಸ್ಸಿಗೆ ಮೋಹಪಡಿಸುವ ಪದಾರ್ಥಗಳು ಒಬ್ಬೊಬ್ಬರಿಂದಲೂ ಉತ್ಸಾಹದಿಂದ ಸೇವಿಸಲ್ಪಡುವದಿಲ್ಲವೆನು? ಚಂದನಮಹೀರುಹಂ–ಶ್ರೀಗಂಧದಮರವು ಏಕೆ....ಭುಜಂಗಗಳ–ಹಾವುಗಳನ್ನು ತನ್ನ ಹತ್ತಿರ ಮಾಡಿ ಅದೇಕೆ

ಎಣಿಕೆಗಳವಡದಿರ್ಪ ವಾಸ್ತವ ।
ವನು ಪ್ರಕಟಿಸೀ ಕೃತಿಯು, ಲೌಕಿಕ ।
ಜನರನೇ ಮೆಚ್ಚಿಸುವುದೆಂಬುದು ಪುಸಿಯಮಾತಲ್ಲ ॥ ೧೭ ॥

ಆವನಿಲ್ಲಧಿಕಾರಿಯೆನೆ, ವಿಷ ।
ಯಾವಳಿಯ ಬಯಸದ ಧರಿತ್ರೀ ।
ದೇವನೇ ಮುಖ್ಯಂ, ತದನ್ಯದ್ವಿಜರುಮರಸುಗಳುಂ ॥
ಸೌವಣಿಜರುಂ, ಬ್ರಾಹ್ಮಣ ಪ್ರಾ ।
ಜ್ಞೀ ವಿಶೇಷಂ, ಗುರುಪದಾಂಬುಜ ।
ಸೇವೆಯೊಳ್ ರತಿಯುಳ್ಳ ಸಚ್ಛೂದ್ರನು ಪುರಾಣಗಳಿಂ ॥ ೧೮ ॥

ಮಿಕ್ಕವರ್ಣೋತ್ಪನ್ನರುಂ ವಿನ ।
ಯಕ್ಕೆ ಪಾತ್ರರು ಭಾಷೆಯಿಂದೀ ।
ದಿಕ್ಕಿನಲ್ಲಧಿಕಾರಿಗಳು; ಸಾಧನವೊಡಂಬಡದೆ ॥
ಸಿಕ್ಕಲರಿಯದು ನಿಜವಿವೇಕ ವಿ ।
ದಕ್ಕೆ ಗತಿಯೇನಹುದಲಾ ಎನ ।
ಲಕ್ಕಜಂ! ಜನ್ಮಾಂತರಾರ್ಜಿತಮೆನ್ನಬೇಕವರ! ॥ ೧೯ ॥

ಸಂಗತಪ್ರತಿಬಂಧನಿಗೆ ಮೋ ।
ಕ್ಷಂ ಗಮಿಸದದರಿಂದ ಶುದ್ಧನಿ ।
ಗಂ ಗುರುಪ್ರಸಾದಮಾಗದಯತ್ನದಿಂ ಮೋಕ್ಷಂ ॥

---

ಎಳೆದುಕೊಂಡಿತು? ಹಾಗೆಯೇ ಎಣಿಕೆ...ಟಪ+ಈ ಕೃತಿಯು–ಕಾಲದೇಶಬದ್ಧ ಸಂಖ್ಯೆಯನ್ನೆ ಮೀರಿರುವ ತನ್ನ ಪರಮಾರ್ಥವಾದ ಅದ್ವಿತೀಯ ಬ್ರಹ್ಮಾತ್ಮ ತತ್ತ್ವವೊಂದನ್ನೆ ತಿಳಿಸುವ ಈ ಗ್ರಂಥವೂ ಲೌಕಿಕರ...—ಬಿಡದಂತೆ ಪಾಮರರಿಂದ ಪಂಡಿತರವರೆಗೆ ಸರ್ವರಿಗೂ ಮನಮೆಚ್ಚಿಸುವದು.

೧೮ ಆವನು+ಇಲ್ಲಿ–ಈ ವೇದಾಂತ ಶಾಸ್ತ್ರಕ್ಕೆ ವಿಷಯ+ಆವಳಿ–ವಿಷಯರಾಶಿಯನ್ನು, ಧರಿತ್ರಿದೇವನೆ–ಭೂಸುರೋತ್ತಮನೆ ವೇದಾಂತವಿಚಾರಕ್ಕೆ ಬೇಕಾಗಿರುವ ಶಮದಮಾದಿ ಸಕಲ ದೈವೀ ಸಂಪತ್ಭರಿತನೇ ಮುಖ್ಯಾಧಿಕಾರಿ ಎಂದಾದರೂ, ತತ್–ಅವನಿಗಿಂತ ಅನ್ಯರಾದ ಕ್ಷತ್ರಿಯರು, ಸೌವಣಜರುಂ—ಉತ್ತಮ ವೈಶ್ಯರು, ಬ್ರಾಹ್ಮಣಪ್ರಾಜ್ಞೀ ವಿಶೇಷಂ–ಮೇಧಾವಿಯಾದ ಬ್ರಾಹ್ಮಣನು ದ್ವಿಜ ಬಂಧುಗಳೂ ಅಧಿಕಾರಿಗಳೇ.

೧೯ ಮಿಕ್ಕವರ್ಣ+ಉತ್ಪನ್ನರುಂ–ಪಂಚಮ, ಸಂಕರ ಎಂಬ ವರ್ಣದವರಿಗೂ ಭಾಷಾಂತರ ಗ್ರಂಥಗಳಿಂದ ವಿನಯಕ್ಕೆ–ಈ ಜ್ಞಾನೋಪದೇಶದ ಶಿಕ್ಷೆಗೆ, ಎನಲು+ಅಕ್ಕಜಂ–ಆಶ್ಚರ್ಯ, ಜನ್ಮಾಂತರ+ಆರ್ಜಿತಂ+ಎನ್ನಬೇಕು+ಅವರ.

ವಿಪ್ರಕ್ಷತ್ರ ವಿಶಶ್ಚತುರ್ಥಕುಲಜಾಯೇ ಪಂಚಮಾ ಸ್ಸಂಕರಾಃ ।
ಷಷ್ಠಾಷ್ಷಡ್ವಿಧ ವರ್ಣಜಾ ಭುವಿಜನಾ ಏಪ್ರಾದಿ ದಸ್ರಾದಿತಃ ॥ ೫೭ ॥

ಲಿಂಗಭೇದಕ್ರಿಯೆಗಳಿಂದದ ।
ರಂಗವೊಂದದು ಸತ್ವಶುದ್ಧಿಯ ।
ಮಂಗಲದಲೇ ಘಟಿಪುದುಳಿದ ವಿದಕ್ಕೆ ಸಾಧನವು ॥ ೨೦ ॥

ಮೊರಟುಕಲ್ಲಿಗೆ ನೀರಿನಿಂ ಮೃದು ।
ತರ ವಿಶೇಷಂ ದೊರಕುವದೆ, ಪಾ ।
ಮರನಿಗಳವಡುವುದೆ ವಿವೇಕಸ್ಫುರಣೆಯದರಿಂದೆ ॥
ಸರಳಹೃದಯುಂಗನುರುವುದು ನಿ ।
ರ್ಭರ ಸುಧಾಖಂಡೋಪ ಮಾನ ।
ಸ್ಥಿರ ನಿರಂಜನ ಸೌಖ್ಯವಿವರಿನ್ನೇ ವಿಶಿಷ್ಟರೆನೆ ॥ ೨೧ ॥

ಆದಿಯೆಂದಂ ಭವನು ಭೂತದ ।
ಬಾಧೆಯನು ಸಹನಾರ್ಜವಗಳಾ ।
ರಾಧನೆಯ ಗುರುಗಳ ಶುಚಿತ್ವವ ವಿಷಯನಿಗ್ರಹವುಂ ॥
ವ್ಯಾಧಿ ಜನ್ಮ ಜರಾ ಮರಣ ದುಃ ।
ಖಾದಿಕ ವಿಲೋಕನವ ಖಣ ಸಂ ।
ಬಾದಹೃತ ದಾರಾದಿವರ್ಗದೊಳಪ್ರಸಕ್ತಿಯನು ॥ ೨೨ ॥

---

**ಅರ್ಥ**—ಮನುಷ್ಯರಲ್ಲಿ ಆರುವರ್ಣಗಳು ಕಾಣುವಂತೆ ಅಶ್ವಿನ್ಯಾದಿ ೨೭ ನಕ್ಷತ್ರಗಳಲ್ಲಿಯೂ ಅವು ಇರುವವವೆಂಬ ಈ ಜೋತಿಷಸರ್ವವಿಷಯಾಮೃತ ಸಂಗ್ರಹವು ಪ್ರಮಾಣವು.

೨೦ ಸಂಗತಪ್ರತಿಬಂಧನಿಗೆ—ಅಡ್ಡಿಯುಳ್ಳಾತನಿಗೆ, ಮೋಕ್ಷಂ+ಗಮಿಸದು—ಮೋಕ್ಷವಿಲ್ಲದ್ದರಿಂದ ಶುದ್ಧನಿಗು—ಪ್ರತಿಬಂಧಕವಿಲ್ಲದವನಿಗಾದರೂ ಆವಶ್ಯಕವಾದ ಯತ್ನವಿಲ್ಲದೆ ಗುರುಪ್ರಸಾದ ಮೋಕ್ಷ ಎಂಬೆರಡರಲ್ಲಿ ಒಂದಾದರೂ ಲಭಿಸುವಂತಿಲ್ಲ. ಲಿಂಗಭೇದ ಕ್ರಿಯೆಗಳಿಂದ+ಅದರ+ಅಂಗಂ+ಒಂದದು—ಕ್ರಿಯಾಸಾಮಾನ್ಯದಿಂದ ಅಂತಃಕರಣಶುದ್ಧವಾಗುವದಿಲ್ಲವು. ಮಂಗ...ಪುದು—ಕರ್ತೃ ಕರ್ಮ ಫಲಗಳ ಸಂಗವನ್ನು ಬಿಟ್ಟು ಮಾಡಿದ ಶಾಸ್ತ್ರೋಕ್ತ ಕರ್ಮಗಳಿಂದಲೇ ಸತ್ವಶುದ್ಧಿಯು ತಪ್ಪದೆಯುಂಟಾಗುವದು ಉಳಿದವು—ಮಿಕ್ಕ ಶಾಸ್ತ್ರೋಕ್ತ ಕ್ರಿಯೆಗಳೂ ಎಂದರೆ ಇದಕ್ಕೆ—ಸ್ವೇಚ್ಛಾ ಪ್ರವೃತ್ತಿಗಳಲ್ಲಿ ಮನುಷ್ಯನನ್ನು ತಡೆಗಟ್ಟಿ, ಮೊದಮೊದಲು ಕರ್ಮಗಳಲ್ಲಿ ತೊಡಗಿಸುವದಕ್ಕೆಂದು ಅವು 'ಗುಡಜಿಹ್ವಾನ್ಯಾಯ' ದಿಂದ ಬಂದಿರುವವು.

೨೧ ಸರಳಹೃದಯುಂಗೆ—ಕಪಟವಿಲ್ಲದ ನೇರಾದ ಹೃದಯುಸಿಗೇ ಅನುರುವುದು—ಬಂದು ಸೇರುವದು ನಿರ್ಭರ—ಅಧಿಕವಾದ ಸುಧಾಖಂಡ+ಉಪಮಾನ—ಅಮೃತದ ತಿರುಳಿಗೆ:ಸರಿಹೋಲುವ, ಸ್ಥಿರನಿರಂಜನ ಸಾಖ್ಯವು—ತೆರೆಮರೆಗಳಿಲ್ಲದಆತ್ಮಸುಖವು ಇವರಿನ್ನೇ—ಜ್ಞಾನಕ್ಕೊಪ್ಪುವ ಇವರನ್ನೆ ವಿಶಿಷ್ಟರೆನೆ—ಮುಖ್ಯಾಧಿಕಾರಿ ಎಂದರೆ ಒಪ್ಪುವದು.

೨೨ ಆದಿಯು+ಎಂದು—ವಿಚಾರಕ್ಕೆ ಮೊದಲಿರಬೇಕಾದವುಗಳೆಂದು ಗೀತೆಯಲ್ಲಿ (೧೩–೭ರಿಂದ ೧೧) ಹೇಳಿರುವನು ಭವನು—ಶ್ರೀಕೃಷ್ಣಭಗವಂತನು ಭೂತ...ವನ—

ಗೋಚರ ವಿರಾಗವ ನಹಂಕೃತಿ ।
ವೋಚನವ; ಸಮಚಿತ್ತತೆಯ ಪ್ರಾ ।
ಗಾಚರಿತ ಕರ್ಮಾಹೃತೇಷ್ಟಾನಿಷ್ಟ ಪದಗಳಲಿ ॥
ಲೋಚನತ್ರಯನಲ್ಲಿ ಭಕ್ತಿಯ, ।
ಗೋಚರಾತಿಗದೇಶ ವಸತಿಯ, ।
ನೀಚಜನ ಸಂಸರ್ಗವಿರತಿಯ ತತ್ತ್ವಚಿಂತನೆಯ ॥ ೨೩ ॥

ಕ್ರಮದಿ ಮೂರಂ ಬಿಟ್ಟು ಪಿಡಿದು ।
ತ್ತಮವನೈದಂ ಮೇಲೆ ನವಕವ ।
ಸುಮುಖನಾಗಿಯೆ ನಡಸುವವನಾವನವಂ ಧನ್ಯಂ ॥
ಕುಮತಿಯಾಗದೆ ನಿಂದೆಯಿಂ ಸಂ ।
ಭ್ರಮಿಸದೇ ಸ್ತುತಿಯಿಂದ, ಸತ್ಕ ।
ರ್ಮವುಮನೇ ನಿರ್ವಹಿಸುತಿಪ್ಪನೆ ಸಾಧುವೆನಿಸುವನು ॥ ೨೪ ॥

ಕಲುಷಮೆನ್ನಬರಂ ಫಲಿಪುದೊ ಸ ।
ಕಲ ಪದಾರ್ಥದೊಳನ್ನಬರ ದು ।
ರ್ಬಲವೆನುತ್ತಂ ತನ್ನ ಚಾರು ವಿಚಾರಲೋಚನದಿಂ ॥

---

ಜನರು ಕೊಡುವನೋವುಗಳ ಸಹನೆಯನ್ನು ಆರ್ಜವ–ನೇರವಾದ ಹೃದಯವನ್ನು ಆರಾಧನೆಯು-ಗುರುಸೇವೆ ಪೂಜೆಗಳನ್ನು ಶುಚಿತ್ವ—ಅಂತರಬಾಹ್ಯ ಶೌಚಗಳನ್ನು, ವಿಷಯನಿಗ್ರಹಮಂ–ಇಂದ್ರಿಯನಿಗ್ರಹವನ್ನೂ, ವ್ಯಾಧಿ, ಜನ್ಮ, ಜರಾ ಮರಣ— ಈ ನಾಲ್ಕರಲ್ಲಿ ಎಡಬಿಡದಂತೆ ತನಗಾಗುತ್ತಿರುವ ದುಃಖಾದಿಗಳ ವಿಲೋಕನವ—ಅರಿವನ್ನೇ ತನ್ನ ಮನಸ್ಸಿನಲ್ಲಿ ಯಾವಾಗಲೂ ನೆನೆಪಿಸಿಕೊಳ್ಳುತ್ತಿರುವದನ್ನೂ, ಋಣ....ಕ್ತಿಯನು–ಕರ್ಮಾನುಬಂಧಿಗಳಾದ ಹೆಂಡತಿ ಮಕ್ಕಳು ಮನೆಮಠಗಳಲ್ಲಿ ವಿರಸಬುದ್ಧಿಯನ್ನೂ.

೨೩ ಗೋಚರವಿರಾಗವನುಂ—ಹೊರಗೆ ಕಾಣುವ ವಿಷಯಗಳಲ್ಲಿ ಪ್ರೇಮದ ಇಳುವರಿಯನ್ನೂ ಅಹಂ....ಚನವ–ಅಭಿಮಾನತ್ಯಾಗವನ್ನೂ ಪ್ರಾಕ್ + ಆಚರಿತಕರ್ಮ + ಆಹೃತ + ಇಷ್ಟಾ...–ಕರ್ಮಫಲವಾಗಿ ಬರುವ ವಿಷಮತರದ ವಿಷಯಗಳಲ್ಲಿ ಚಿತ್ತವು ಏರುಪೇರುಗಳಿಲ್ಲದಿರುವದನ್ನೂ ಲೋಚ...ಕ್ತಿಯ–ಮುಕ್ಕಣ್ಣನಾದ ಶಿವನಲ್ಲಿ ಭಕ್ತಿಯನ್ನೂ, ಗೋಚರ + ಅತಿಗದೇಶವಸತಿ–ದೃಶ್ಯವಿಷಯಗಳಿಗೆ ಹೊರಚ್ಚಾಗಿರುವ ಏಕಾಂತದೇಶಸೇವಿತ್ವವನ್ನು ವಿಷಯ ಸಂಗತ್ಯಾಗವನ್ನೂ, ನೀಚ....ತಿಯ–ವಿಷಯಿಜನರ ಗುಂಪಿನಲ್ಲಿ ಮನಸ್ಸಿಗೆ ಒಲವಿಲ್ಲದಿರುವದನ್ನೂ.

೨೪ ಮೂರಂ-ಕಾಮ ಕ್ರೋಧ ಲೋಭಗಳನ್ನು ಕೈಬಿಟ್ಟು ಪಿಡಿದು + ಉತ್ತಮವನು + ಐದಂ + ಮೇಲೆನವಕವ–೫+೯=೧೪ರಸಂಖ್ಯೆಗಳಿಂದ ಕೂಡಿದ ೧೪ ಸಾಧನಗಳನ್ನೂ ಕುಮತಿ-ಸಿಟ್ಟಿಗೆದ್ದು ತಾನು ತಿಳಿಗೇಡಿಯಾಗದೆ, ಸಂಭ್ರಮಿಸದೆ–ಹಿಗ್ಗಿ ಮುರಿಯದೆ, ಸತ್ಕರ್ಮವುಮನೆ–ಸಂಗತ್ರಯವಿಲ್ಲದ ಕರ್ಮಯೋಗವುಳ್ಳವನೇ ಸಾಧು ಉತ್ತಮಾಧಿಕಾರಿಯು.

ತಿಳಿದು, ಜಲಜದೆ ಕಳಿದು ಬಹುಕಂ ।
ದಳಿತದಳ ಕಿಂಜಲ್ಕಗಳ ನಿ ।
ರ್ಮಲ ಮಕರಂದಂ ಗ್ರಹಿಪ ತುಂಬಿವೊಲಿರ್ಪನೇ ಧೀರಂ ! :॥ ೨೫ ॥

ಅಧಮರನ್ವೇಷಿಪರು ಭೋಗಾ ।
ಭ್ಯಧಿಕ ಧರ್ಮವ, ಬಲ್ಲವರಿಗಂ ।
ವ್ಯಧಿಕರಣ ಮಾಗಿರದೆ ಮೇಣದು ಚಿತ್ರಮೇನಿಲ್ಲಿ ! ॥
ವಿಧಿಯವಾಹನಗಳಿಗೆ ಗ್ರೀಷ್ಮಾ ।
ವಧಿಕ ಪಂಕಿಲ ಪಲ್ವಲಸ್ಥಾಂ ।
ಬು ಧೃತಿಯಂ ಸೊಗಸುವುದೆ ಭೇಕಗಳಿಂದ ಸಂಸೇವ್ಯಂ ॥ ೨೬ ॥

ಮಾಟದಿಂ ದರಿವರ್ಜನರ್ಮಾಡಿ ।
ಯಾಟದಿಂ ಪಂಡಿತರು, ನೆನಹಿನ ।
ಪಾಟವದೆ ದೇವರ್ಕಳಂಗೈನೆಲ್ಲಿಯಂದದಲಿ ॥
ಮಾಟ ನುಡಿ ನೆನಹಿನಲಿ ದೋಷೋ ।
ತ್ಪಾಟನವನೆಸಗುವದು ಕುಶಲರ ।
ಕೂಟದೆಬ್ಬರ್ಪುದು ಧಾರ್ಷ್ಟ್ಯವೆಂದತಿ ಭೀತಿಯಂ ವೆತ್ತು ॥ ೨೭ ॥

---

೨೫ ಕಲುಷಂ+ಎನ್ನಬರಂ—ವಿಷಯಾಸಕ್ತಿಯೆಂಬ ಕಶ್ಮಲವು ಎಲ್ಲಿಯುವರೆಗೂ ತನ್ನ ಚಿತ್ತದಲ್ಲಿ, ಫಲಿಪುದೊ—ಹುಟ್ಟುತ್ತಲಿರುವದೊ, ಸಕಲಪದಾರ್ಥದೊಳು—ಹೊರಗಿನ ವಿಷಯಗಳಲ್ಲಿ, ಅನ್ನಬರ—ಅಲ್ಲಿಯುವರೆಗೂ, ದುರ್ಬಲಂ+ಎನುತ್ತಂ—ತನ್ನ ಚಿತ್ತವು ದುರ್ಬಲವೆಂಬುದನ್ನು. ತನ್ನ ಚಾಪು....ನದಿಂ—ಆತ್ಮವಿಚಾರವೆಂಬ ಮನೋಹರವಾದ ತನ್ನ ಒಳಗಣ್ಣಿನಿಂದ ಧೀರನಾದವನು ತಿಳಿದುಕೊಂಡು, ಬಹುಕಂದಳಿತದಳ—ಸಾವಿರಾರು ಹೊರಗಿನ ಎಲೆಗಳನ್ನು, ಕಿಂಜಲ್ಕ—ಒಳಗಿನ ಕೇಸರಗಳನ್ನು ಕಳಿದು ನಿರ್ಮಲ ಮಕರಂದಮಾತ್ರವನ್ನೇ, ಜಲಜದೆ—ತಾವರೆಯಲ್ಲಿ ಗ್ರಹಿಸುವ ತುಂಬಿಯಂತೆ, ನಿಸ್ಸಾರವಾದ ಭೋಗಗಳನ್ನು ಉಳಿದು, ವೈರಾಗ್ಯದಿಂದ ಆತ್ಮಾನಂದವನ್ನು ಸವಿಯಬಲ್ಲವನೇ ಧೀರನು.

೨೬ ಅಧಮರು+ಅನ್ವೇಷಿಪರು—ಬಿಡದಂತೆ ಹುಡುಕುತ್ತಿರುವರು, ಭೋಗ+ಅಭ್ಯಧಿಕ—ಅಧಿಕವಾದ, ಧರ್ಮವೇಪ್ರಯತ್ನಗಳನ್ನೆ, ಆದರೆ+ವ್ಯಧಿಕರಣಂ+ಆಗಿರದೆ—ತನಗೆ ಬೇರೊಂದು ಆಶ್ರಯವಾಗಿ,ಬಲ್ಲವರನ್ನು ಬಿಟ್ಟು ತೊಲಗದೆ ಇರುವವೇನು? ಚಿತ್ರಂ+ಏನು+ಇಲ್ಲಿ—ಇಲ್ಲಾಶ್ಚರ್ಯವೇನು? ವಿಧಿಯವಾಹನ—ಹಂಸಪಕ್ಷಿಗಳಿಗೆ, ಗ್ರೀಷ್ಮಾ... ಪಲ್ವಲಸ್ಥ—ಹನಿಮಳೆಯಿಂದ ತುಂಬಿರುವ ಹಳ್ಳಕೊಳ್ಳದ, ಸರೋವರಗಳಲ್ಲಿನ, ಅಂಬುಧೃತಿಯಲ್ಲಿ—ಗಟ್ಟಿಯ ಬಗ್ಗಡದ ಕೊಚ್ಚೆಯ ನೀರು ಸೊಗಸಿತೇನು? ಇಲ್ಲ. ಭೇಕ—ಕಪ್ಪೆಗಳಿಂದ ಅಲ್ಲವೆ ಅದು ಸೇವಿಸಲ್ಪಡಬೇಕು? ಭೋಗದ ಉದ್ಯಮಗಳು ವಿಷಯಲಂಪಟರನ್ನು ಬಿಟ್ಟು ವಿಚಾರಪರರಿಗೆ ಎಂದಿಗೆ ತಾನೆ ಸೊಗಸೀತು?

೨೭ ಮಾಟ—ಮಾಡುವ ಕಾರ್ಯದಿಂದ, ಮತ್ತೊಬ್ಬರ ವಿಷಯವನ್ನು ಅರಿವರ್+

ತೆರುವರರ್ಥವ ದೇಹವಂ ಪು ।
ತ್ರರ ಕಲತ್ರರ ಭೂಮಿಯಂ, ಭಾ ।
ಸುರತರ ನ್ಯಾಯದಲಿ ರುಚಿಯಂ ಬಿಡರು ಸಜ್ಜನರು ॥
ಅರಿಯಲೊಂಕಲಿ ಕೆತ್ತಲೆತ್ತಲಿ ।
ತಿರುಳ ಚುರ್ಚಲಿ ಚಂದನಕೆ ಮಾ ।
ಸಿರುವುದೇ ಲೋಕಾತಿಶಯ ಪರಿಮಲ ಪರಂಪರೆಯು ॥ ೨೮ ॥

ಶಾಂತಿಯುಳ್ಳವನೇ ವಿನೀತಂ ।
ಶಾಂತಿಯುಳ್ಳವನೇ ಕೃತಜ್ಞಂ ।
ಶಾಂತಿಯುಳ್ಳವನೇಯಭೇದ್ಯೋರಚ್ಛದಚ್ಛಾದ್ಯಂ, ॥
ಶಾಂತಿಯುಳ್ಳವನಲ್ತೆ ಶ್ರುತಿ ಸೀ ।
ಮಂತಿನಿಗೆ ನೇತ್ರ ಪ್ರದೇಶಂ ! ।
ಶಾಂತನೇ ತತ್ತ್ವಾಧಿಕಾರಿಯು ಬಾಹ್ಯನೆಂತಪ್ಪ ॥ ೨೯ ॥

---

ಜನರ್—ಸಾಮಾನ್ಯ ಜನರು, ನುಡಿಯಾಟದಿಂ—ಆಡುವ ಮಾತುಗಳಿಂದಲೆ, ನೆನಹಿನಪಾಟವದೆ–ನೆನಪಿನಿಂದಲೇ ದೇವರ್ಕಳು+ಅಂಗೈ....–ಪ್ರತ್ಯಕ್ಷವಾಗಿ ಅರಿತುಕೊಂಡುಬಿಡುವರು, ದೋಷ+ಉತ್ಪಾಟನವನು—ಮೇಲಕ್ಕೆ ಎತ್ತಿ, ಎಸಗುವದು—ವಿವೇಕದಿಂದ ಹೊರಗಿಡುವದನ್ನು ಮಾತ್ರ, ಕುಶಲರಕೂಟದೆ—ಪಂಡಿತರ ಗುಂಪಿನಲ್ಲಿಯೇ ಬರುವಂತಿದ್ದರೂ ಹಾಗೆ ಮಾಡುವದು,ಧಾರ್ಷ್ಟ್ಯವು–ಹಿಂಸೆಯು, ಮರ್ಯಾದೆ ಮೀರಿದ ನಡತೆಯೆಂದು ಬಗೆದು, ಅತಿಭೀತಿಯಂ+ವೆತ್ತು—ಹೊತ್ತು ಅವರು ಹೊರಗಿಡರು (ಪಂಚದಶಿ, ಭಾಗವತ.)

೨೮ ತೆರುವರು+ಅರ್ಥವಂ—ಸತ್ಯಕ್ಕಾಗಿ ಧನಕನಕವಾಹನ ಸ್ತ್ರೀಪುತ್ರಾದಿಗಳನ್ನಾದರು, ಭಾಸುರ–ಮನೋಹರ, ರುಚಿ–ಪ್ರಿತಿಯನ್ನು ಮಾತ್ರ, ‘ನೀತಿನಿಪುಣರಾದವರು–ಜನರು ತಮ್ಮನ್ನು ನಿಂದಿಸಲಿ ಅಥವಾ ಹೊಗಳಲಿ, ಲಕ್ಷ್ಮಿಯು ಬಂದು ತಮಗೆ ಸೇರಲಿ ಅಥವಾ ತನ್ನಿಚ್ಛೆಯಿದ್ದಂತೆ ಹೊರಟುಹೋಗಲಿ, ಇಂದೇ ತಮಗೆ ಮರಣವಾಗಲಿ ಅಥವಾ ಯುಗಾಂತರದಲ್ಲಾಗಲಿ ಧೀರರಾದವರು ನ್ಯಾಯದ ಹಾದಿಯಿಂದ ಒಂದು ಹೆಜ್ಜೆಯನ್ನು ಕದಲಿಸಿ ಅತ್ತ ಇಡುವದಿಲ್ಲ ॥ಭ॥ ಸುಭಾಷಿತವು. ಅರಿಯಲಿ+ಓಂಕಲಿ—ಅಮುಕಿಹಿಡಲಿ, ಉಳಿ ಚಾಕು ಮಚ್ಚುಗಳಿಂದ ಕೆತ್ತಲಿ+ಎತ್ತಲಿ—ಸುತ್ತಲೂ ತನ್ನನ್ನು ಕೆತ್ತಿ ಒರೆದುಹಾಕಿಬಿಡಲಿ,ಚುರ್ಚಲಿ-ಚುಚ್ಚಿ-ತೂತನ್ನುಮಾಡಿ ಉಳಿಯಿಂದ ಕೊರೆದುಬಿಟ್ಟರು ಲೋಕಕ್ಕೇ ಅತಿಶಯದ ತನ್ನ ಪರಿಮಲ ಮಾತ್ರ ಚಂದನಕ್ಕೆ ಒಂದೇ ಬಗೆಯಲ್ಲಿರುವಂತೆ !

೨೯ ವಿನೀತಂ-ಸಂಸ್ಕೃತನು, ಕೃತಜ್ಞಂ—ಉಪಕೃತಿಯನ್ನು ಮರಿಯದವನು,ಅಭೇದ್ಯೋ+ಅಚ್ಛದ+ಚ್ಛಾದ್ಯಂ-ಆಕಾಶಾದಿ ಭೂತಗಳು ತತ್ಕಾರ್ಯಗಳು ಎರಡರಿಂದಲೂ ಭೇದಿಸುವದಕ್ಕಿಲ್ಲದ ಜೀವಜಗತ್ತಿನ ನಿರ್ಮಲವಾದ ಶುದ್ಧತತ್ತ್ವಕ್ಕೆ ಭೂಷಣಪ್ರಾಯನು ! ಅಥವಾ ಯಾರಿಂದಲೂ ಅಭೇದ್ಯವಾಗಿರುವ, ಉರ—ಹೃದಯಗ್ರಂಥಿ ಯೆಂಬ ಛದಃ—ಮನಸ್ಸಿನೊಳಗೆ ಭಾವರೂಪದಿಂದ, ಸರ್ವಾನರ್ಥ ಬೀಜವಾಗಿರುವ ಅನ್ಯೋನ್ಯಾಧ್ಯಾಸವನ್ನು ಕಳೆದು

ಹೊರದ ಹೊಸಮಲ್ಲಿಗೆಯ ದಳದೋ।
ಳ್ಮಿರುವ ರಾಕಾತುಹಿನ ದೀಧಿತಿ।
ಕರದೊಳಾದರು ಕರೆಕರಂ ಕಣ್ಣುರವಣಿಸಲಿಭರಂ॥
ಪರಮಸಾತ್ವಿಕದಲ್ಲಿ ದೋಷಂ।
ದೊರಕೊಳದು, ದೊರಕೊಂಬುದೆನಲೀ।
ನರರೊಳವದಿರೆ ನಿರಯವಾಸಿಗಳೆಂದನುಮೆಯಾಣ್ಮಂ ॥ ೩೦ ॥

ಅರಿಗಳಿಗೆ ಮಿತ್ರತ್ವಮುಂಟೇ।
ನೆರೆಯೆ ಮಿತ್ರತೆ ಶತೃ ಭಾವಂ।
ದೊರಕುವದೆ, ಮತ್ತೇತಕೀ ಬಳಿಯಲ್ಲಿ ಸಂಖ್ಯಾನಂ॥
ಅರಿಗಳೀ ಕಾಮಾದಿಗಳು ದು।
ಷ್ಕರರು ವಿನಯಗ್ರಾಹ್ಯರೇ ಸಾ।
ಕಿರಲಿ ತದುಪಾಸನೆಯೆನುತ ನಿಗ್ರಹಿಪನೇ ವೀರ! ॥ ೩೧ ॥

ಎನಿತುಮಂ ಕಲಿತೊಡೆ ಯಸೂಯಾಂ।
ಗನೆಯ ತೆಕ್ಕೆಯ ಬಿಡರು! ಕೆಲ ಕೆಲ।
ರೆನಿತುಮಂ ಸಾಧಿಸಿವರೆಯು ಪರವಂಚನಾಬಲೆಯ॥
ಮನೆತನವ ಮಾಣರು! ಪದಾರ್ಥದೊ।
ಳೆನಿತು ಮಿರ್ದರು ಕೆಲರು ಕಾಂಕ್ಷಾ।
ವನಿತೆಯೋಳ್ಸಮರತಿಯ ನುಳಿಯರು ಶಿವಶಿವಾ ಚಿತ್ರಂ! ॥ ೩೨ ॥

---

ಕೊಂಡಿರುವ, ಛಾದ್ಯಂ—ಛಾದಿತಂ—ಬಹುಗೋಪ್ಯನಾಗಿರುವ ಜ್ಞಾನಿಯು, ಬಾಹ್ಯನು+ ಎಂತಪ್ಪ—ಶಾಂತಿಯಿಲ್ಲದವನು ಎಂತಾಗುವನು?

೩೦ ಹೊರದ—ಪ್ರಫುಲ್ಲವಾಗಿ ಅರಳಿಕೊಂಡಿರುವ, ಮಿರುವ—ಥಳಗುಟ್ಟುತ್ತಿರುವ, ರಾಕಾ—ಪೂರ್ಣಚಂದ್ರನ, ತುಹಿನ—ಬೆಳುದಿಂಗಳಿನ, ದೀಧಿತಿ—ಕಾಂತಿಯ, ಕರ—ಕಿರಣದೊಳಾದರೂ, ಕರೆಕರಂ—ಕಣ್ಣನ್ನು ಉರಿಗೊಳಿಸುವ ದೋಷವು, ಕಣ್ಣು+ ಉರವಣಿಸಲಿ ಭರಂ—ಅಧಿಕವೇಗದಿಂದ ಬಂದು ಕಣ್ಣನ್ನು ವೇಧಿಸಿ ಬಾಧೆ ಪಡಿಸಿದರೂ ಈ ನರರೊಳು+ ಅವದಿರೆ—ಅವರೇ, ನಿರಯ—ನರಕದ.

೩೧ ನೆರೆಯ—ಮಿತ್ರತ್ವವು ಬಂದು ಜತೆಗೂಡಿದರೆ, ಮತ್ತು+ ಏತಕೆ+ ಈ ಬಳಿಯಲ್ಲಿ ಸಂಖ್ಯಾನಂ—ಇಲ್ಲಿ ಸಾವಕಾಶದ ವಿಚಾರವು ಏಕೆ? ದುಷ್ಕರರು—ಕೇಡಾಳಿಗಳು, ವಿನಯಗ್ರಾಹ್ಯರೆ—ಸುಲಭದಿಂದ ವಶವಾಗತಕ್ಕವರೆ? ಅಲ್ಲ. ತತ್+ ಉಪಾಸನೆಯು—ಅವರನ್ನು ಕುರಿತ ಯೋಚನೆಯು ಹಾಗಿರಲೆಂದು ಚಟ್ಟನೆದ್ದು.

೩೨ ಎನಿ...ಡೆಯೂ+ ಅಸೂಯ+ ಅಂಗನೆಯ—ಕರಬು ಎಂಬಾಕೆಯ, ತೆಕ್ಕೆಯ—ಜತೆಯನ್ನು, ಮಾಣರು—ಬಿಡರು, ಕಾಂಕ್ಷಾ—ಬಯಕೆಯೆಂಬ ಹೆಂಗಸಿನಲ್ಲಿ, ಸಮರತಿಯನು+ ಉಳಿಯರು—ಬಿಡರು, ಚಿತ್ರಂ—ಇದು ವಿಚಿತ್ರ!

ತಂದೆ ಘಳಿಸಿದ ಧನಮುಖಂಗಳು ।
ನಂದನರ ಸೇರಿರುವದಲ್ಲದೆ ।
ಪೊಂದುವವೆ ಲೋಗರಿಗೆ, ಗುರ್ವಭಿಮಾನದಿಂ ಪಡೆದ ॥
ಮಂದಿರಾದಿ ಪದಾರ್ಥಪಾಲನೆ ।
ನಂದನಾನ್ನೃತಗಲ್ಲದದರಿಂ ।
ಮುಂದುವರಿದೊಗ್ಗಾಗಿ ಬೆಳೆದುದು ಸಂಸೃತಿಯ ಕಳವೆ ॥ ೩೩ ॥

ಕೆಲರು ದುರ್ಮಾರ್ಗದಲಿ ಕೆಲಬ ।
ರ್ನೆಲೆಯ ಮೋಹಗಿರಿಯಲೀ ವಿಪ ।
ತ್ಕಲುಷದಲಿ ಕೆಲರೊಂದಿ ದಿಕ್ಕಂ ಕಾಣದರಸುವರು! ॥
ಅಳಲುವರು ಮುಳುಗುವರು ಮಿಕ್ಕ ।
ರ್ತಿಳಿಯದೇ ಬಳಲುವರು ಲೋಕಂ ।
ಗಳಲಿ ಚಿತ್ರಶರೀರರಾಗಿ ವಿಚಿತ್ರಭೋಗದಲಿ! ॥ ೩೪ ॥

ಬಿಸಿಲ್ಗುದುರೆ ಗರವಟ್ಟಿಗೆಯು ಕ ।
ಟ್ಟಿಸಿಯಫಲೆಯರ ಪುತ್ರರಿಗೆ ಪೇ ।
ರ್ಬಸಿವನುಂ ನೀರಡಿಕೆಯಂ ಮಾಣಿಸಲು ಬಗೆವನೊಲು, ॥
ಪುಸಿಯೆನಿಪ ಪುತ್ರಾಂಗನಾ ಧನ ।
ವಸತಿ ಪಶ್ವಾರಾಮ ವಿಗ್ರಹ ।
ವಿಸರದಲಿ ಕೃತಕಾರ್ಯಭರರಾದರ್ಜನರಿದೇನೊ! ॥ ೩೫ ॥

---

೩೩ ಮುಖಂ—ಮುಂತಾದವು, ಲೋಗರಿಗೆ—ಮಿಕ್ಕಜನರಿಗೆ, ಗುರು (ಅಧಿಕವಾದ)+ಅಭಿಮಾನ....ವರಿದು+ಒಗ್ಗಾಗಿ—ಒತ್ತೊತ್ತಾಗಿ ಬಂದು, ....ಕಳವೆ—ಕಳವೆ–ಬಲ್ಲಜ್ಞಾಸಿಗಳಿಂದ ತಿರಸ್ಕೃತವಾಗಿರುವ. ಹೊಲಮನೆಗದ್ದೆಗಳ ಮೋಹದ ಬೆಟ್ಟಗುಡ್ಡಗಳಲ್ಲಿ, ವಿಪತ್ತು(ಗಳೆಂಬ)+ಕಲುಷ–ಪಾಪದಕಶ್ಮಲವನ್ನು, ಕೆಲರು+ಒಂದಿ–ಅದರಲ್ಲಿ ಸಿಕ್ಕಿಬಿದ್ದು, ಚಿತ್ರ—ಬೇರ್ಬೇರೆಯ, ವಿಚಿತ್ರ....ವಿಷಮಫಲಗಳಾದ ಸುಖದುಃಖಗಳಲ್ಲಿ.

೩೫ ಬಿಸಿಲ್ಗುದುರೆಗೆ—ಮರುಮರೀಚಿಕೆಯನೀರಿಗೆ, ಅಫಲೆಯರ–ಬಂಜೆಸ್ತ್ರೀಯರ, ಪೇರ್ಬಸಿವನುಂ–ಹೆಚ್ಚಿನ ಹಸಿವನ್ನು, ಮಾಣಿಸಲು–ನೀಗಿಸಲು, ಪುಸಿಯೆನಿಪ–ಕಣ್ಣಿಟ್ಟು ವಿಚಾರಿಸಿದರೆ ಬರಿಯತೋರುಗಾಣಿಕೆಯ, ವಸತಿ–ಮನೆ, ಪಶು+ಆರಾಮ–ವಿಶ್ರಮದ ಉದ್ಯಾನವನಗಳು, ವಿಗ್ರಹ–ಶರೀರ, ವಿಸರ–ವಿತಾನ–ಗುಂಪಿನಲ್ಲಿ. ಕೃತಕಾರ್ಯ–ಮಾಡಿ ಹಿಂದೆಯೇ ಮುಗಿಸಿಕೊಂಡಿರುವ ಕ್ರಿಯೆಗಳನ್ನೆ ಪಿಷ್ಟಪೇಷಣನ್ಯಾಯದಂತೆ ಮತ್ತೂ ಮಾಡಿಕೊಳ್ಳುತ್ತಿರುವರು! ಬೇಡವೆಂದರೂ ಬಿಟ್ಟಗಲದಂತೆ ತನಗೆ ಭೋಗ ಕೊಡಲಿರುವ ಧರ್ಮಾರ್ಥಕಾಮಗಳ ಅವಶ್ಯಂಭಾವಿಯ ಸಂಸಾರಭೋಗಕ್ಕೆಂದೇ ಸುಮ್ಮನಾದರೂ ಶ್ರಮಿಸುತ್ತಿರುವರೆಂದು, ಇದೇನೊ–ಮರುಕಸೂಚಿಸುತ್ತಿರುವರು! ಭಾಗವತ ೭-೬-೩, ೪, ೧೪, ೨೫ ; ೭-೭-೨೭, ೩೮-೪೦.

ಮಾಡಬಾರದ ಸತ್ಯ ಶಪಥವ ।
ನಾಡಿ ವಂಚನೆಯಿಂದ, ಲೋಗರ ।
ಮಾಡಗಳ ಕೆಡಿಸಲಿ ಜನರಿಂ ದುಷ್ಕಾರ್ಯ ಜಾಲವನು ॥
ಮಾಡಿಸಿದ ನಿಜಮೂರ್ತಿಗಕ್ಷತಿ ।
ಗೂಡಿತೇ, ಬರಿದೇ ವಿಘಾತಿಯ ।
ನಾಡರಿಯಲಾಚರಿಸಿ ನರಕಕ್ಕಿಳಿವರವರಯ್ಯೊ! ॥ ೩೬ ॥

ವಿನಯದಿಂದೊಡಗೂಡದದು ಮಂ ।
ಚನೆಯಲೇ, ಶಾಂತಿಯಲಿ ಸೇರದ ।
ಘನತೆ ಕರ್ಮಾದಿಗಳಲೇ, ವಿಜ್ಞಾನ ವಸ್ತುವಿನಿಂ ॥
ತನಗೆ ದೊರಕದ ಮಾನ್ಯ ನಾನಾ ।
ಮನು ತಪಶ್ಚರಣಗಳಲೇ ದು ।
ರ್ಜನರ ಪಥವಿದು ಘಟಿಸುವುದು, ಪೆರತೆಲ್ಲ ಮಾಯಿಕವು ॥ ೩೭ ॥

ಸುರರ ಸುರಭಿಯ ನೂಕಿ ಕತ್ತೆಯ ।
ಕರದರೀವುದೆ ಚಿಂತಿತಾರ್ಥವ ।
ಚರಮ ಚರಣ ಪ್ರಹರಣಂ ಬೇಕಾದರುಂಟಲ್ಲಿ ॥
ಗುರುಜನಾಚರಿತಾರ್ಥದಲಿ ಈ ।
ಸರಮೆಸಂಗಡೆ, ಕುಪಥದಲಿ ಕಾ ।
ಪುರುಷ ವಚನವ ಕೇಳಲಪ್ಪುದು ಸತ್ಯ ನಿರಯ ಫಲಂ ॥ ೩೮ ॥

---

೩೬ ಲೋಗರ–ನೆಮ್ಮದಿಯಜನರ, ಮಾಡಗಳ–ಬದುಕುಗಳನ್ನೂ ಕೆಡಿಸಲ್–ಕೆಡಿಸಿಬಿಟ್ಟು, ದುಷ್ಕಾ....-ನೂರಾರು ಕೆಡಕುಗಳಿಂದ ಜನಕ್ಕೆ ಕಿರುಕುಳಪಡಿಸಿದ, ನಿಜಮೂರ್ತಿಗೆ+ಅಕ್ಷತಿ–ತನ್ನ ಶರೀರಕ್ಕೆ ಅಕ್ಷಯಪದವನ್ನಾದರೂ ಕೈಗೂಡಿತೇನು? ಇಲ್ಲ! ವಿಘಾತಿಯ–ಜನರಿಗೆ ಕೆಡಕುಗಳನ್ನು, ನಾಡು–ಜನರೆಲ್ಲ, ಆಚರಿಸಿ, ನರಕಕ್ಕೆ+ಇಳಿವರು+ಅವರು+ಅಯ್ಯೊ! ಭಾಗವತ ೭-೬-೧೩, ೧೬.

೩೭ ವಿನಯ–ಅನುನಯ, ಜಿತೇಂದ್ರಿಯದಿಂದ+ಒಡಗೂಡದ+ಅದು—ಸಿಕ್ಕಿರಬೇಕಾದರೆ, ಶಾಂತ್ಯಾದಿಮಹದ್ಗುಣಗಳಿಂದ ಬಂದಿಲ್ಲದ, ಘನತೆ–ದೊಡ್ಡಸ್ತಿಕೆಯು ದೊರೆತುಬಿಟ್ಟದ್ದರೆ, ಕರ್ಮಾದಿಗಳಲೆ–ಕೃತ್ರಿಮವಾದ ಕ್ರಿಯೆಗಳಿಂದಲೆ ಕೈಸೇರಿರಬೇಕು. ವಿಜ್ಞಾ....ಮಾನ್ಯ–ಜ್ಞಾನರೂಪಬ್ರಹ್ಮವಸ್ತುವಿನಿಂದ ಸಿಕ್ಕದಿರುವ ಪೂಜ್ಯತೆ ಎಂಬುದು ಒಬ್ಬನಿಗೆ ಸಿಕ್ಕಿದ್ದರೆ, ನಾನಾ....ಳಲೇ–ಮಂತ್ರತಂತ್ರಗಳ ಕ್ಷುದ್ರತಪಸ್ಸುಗಳಿಂದಲೇ ಎಂಬುದು ಸಿದ್ಧವು. ಆದರೆ ಈ ವಕ್ರಮಾರ್ಗವು–ನೀಚಜನರಿಗೆ ಸೇರಿದ್ದೆಂದು ಮುಮುಕ್ಷುವು ಅದನ್ನು ಕೈಬಿಟ್ಟು ನೇರಾದ ತತ್ತ್ವಮಾರ್ಗದಲ್ಲಿಯೇ ಹೆಜ್ಜೆಯನ್ನೂರಿ ಈ ರಾಜಮಾರ್ಗದಿಂದಲೇ ತನ್ನನ್ನು ಪುನೀತನನ್ನಾಗಿಸಿಕೊಳ್ಳಬೇಕು.

೩೮ ಸುರಭಿ-ಕಾಮಧೇನುವನ್ನು, ಕರೆದರೆ+ಈವುದೆ-ಕೊಡುವದೆಯೇನು? ಚಿಂತಿತ+

ಅರಿದವರೊಳರಿದವರನರಸುವ ।
ದರಿವುದವರಿಂ ಶಾಸ್ತ್ರಮುರ್ವವ ।
ಮರಳಿ ಮರಳಿ ನಿಜಾನುಭವವೆಸೆವಂತೆ ಸಾಧಿಪುದು ॥
ತಿರುಗವರೊಳೀ ಬಂದ ಬೋಧವ ।
ನೊರೆದು ನೋಡುವದಾಗ ಪ್ರಾಚೀ ।
ನರ ಹೃದಯಮುಳವಟ್ಟರೈದುವದೊಡನೆ ವಿಶ್ರಮುವ ॥ ೩೯ ॥

ಕುರುಡರನಿಬರು ಕೂಡಿ ವಾಲವ ।
ಕರವ ಪಾದಂಗಳನು ಕೈಯಿಂ ।
ಕರಿಯ ಬೇಗದಿಸವರಿ ತತ್ತದ್ರೂಪದೀ ನಾಗಂ ॥
ಬೆರೆಯದಿನ್ನೊಂದಾಕೃತಿಯನೆಂ ।
ಬರುಗಡಾ ಹಾ ! ಮೇಣವರಂತೆ ।
ಪರಮತತ್ತ್ವವಿಂದರಾಡಿದ ವಾಕ್ಯ ಪುಸಿಯಲ್ತೆ ॥ ೪೦ ॥

ಕರಿಯ ಮುಖಮುಂ ತೊಡಿಸಿ, ಬಿಳಿಯ ಕು ।
ದುರೆಯ ಮುಖಮುಂ ಹತ್ತಿಸಂಗದೊ ।
ಳೆರಡು ಶೀಳಂ ಮಾಡಿ, ಹೆಣ್ಣಂ ಮಾಡಿ, ನಾಲ್ಕೈದು ॥

---

ಅರ್ಥಿಪ–ಬಯಸಿದ ಗೋ ಕ್ಷೀರವನ್ನು, ಗುರುಜನ+ಆಚರಿತ+ಅರ್ಥದಲಿ+ಈಸರಂ+ಎಸಂಗದೆ–ಶಿಷ್ಟ ಪುರುಷರ ಅನುಷ್ಠೇಯವಾದ ವೇದಾರ್ಥದಲ್ಲಿ ಪೂರ್ಣ ಶ್ರದ್ಧಾಭಕ್ತಿಯಿಂಬಿಷ್ಟನ್ನು ತಾನು ಮಾಡಿಕೊಳ್ಳದೆ, ಕುಪಥ–ವೇದವಿರುದ್ಧವಾದ ದುರ್ಮಾರ್ಗದಲ್ಲಿ ಹೊರಟಿರುವ, ಕಾಪುರುಷರ–ಹಾಳಾದ ಕೆಟ್ಟಮನುಷ್ಯರ. ಕೇಳಲು+ಅಪ್ಪುದು+ನಿರಯ (ನರಕವೆಂಬ ದುಷ್ಫಲವೆ ತನಗಾಗುವದು)+ಸತ್ಯವು.

೩೯ ಅರಿದವರೊಳ್+ಅರಿದವರನು–ಆತ್ಮನಿಷ್ಠರಾದ ಅನುಭವಿಗಳನ್ನು ಅರಸುವದು–ಹುಡುಕಿಸಿಕೊಂಡು, ಅವರನ್ನು ಗುರುವಾಗಿ ತಾನು ಆರಿಸಿಕೊಳ್ಳುವದು ನಿಜಾನುಭವಂ+ಎಸೆವಂತೆ–ತನ್ನಲ್ಲಿ ಹುಟ್ಟಿ ಪರಿಶೋಭಿಸುವಂತೆ.

೪೦ ಕುರುಡರು+ಅನಿಬರು–ಕೆಲವರೊಂದುಗೂಡಿ,ವಾಲ-ಬಾಲ, ಕರವ–ಸೊಂಡಿಲು, ಕರಿಯ–ಒಂದಾನೆಯ–ಹೊಟ್ಟೆ ಕಿವಿ ಇವುಗಳಲ್ಲಿ ಒಂದೊಂದನ್ನು ಕೈಯಿಂದ ಸವರುತ್ತ ತತ್+ತತ್+ರೂಪದೆ+ಈ ನಾಗಂ-ಆನೆಯೆಂದರೆ ಸರಿಸರಿ ತನಗೆ ಗೊತ್ತಾಯಿತು! ಎಂದು ತಾವು ತಾವೇ ಮುಟ್ಟಿನೋಡಿದ ಒಂದೊಂದು ಅವಯವದ ರೂಪಿನ ಕಸಬರಿಕೆ ಮನಿಕೆ ಕಂಬ ನಗಾರೆ ಮೊರ ಇವುಗಳಲ್ಲಿ ತಮತಮಗೊಪ್ಪದ ಒಂದೊಂದು ರೂಪಿನದಲ್ಲವೆ, ಈ ಆನೆಯೆಂಬುದು ಇನ್ನೊಂದು+ಆಕೃತಿ-ಬೇರೊಂದು ರೂಪು ತನ್ನಲ್ಲಿ ಬೆರೆಯದೆಂದು ಒಪ್ಪಿಕೊಂಡಿದ್ದಾರೂ ಮೇಣ್+ಅವರಂತೆ-ಪಟ್ಟು ಹಿಡಿದುಬಿಟ್ಟಿರುವಂತೆ! ಪರಮತತ್ತ್ವ+ಅವಿಂದರು-ತಿಳಿಯದವರೂ ಭ್ರಮಿಸುತ್ತಿರುವರು!

೪೧ ತತ್ತ್ವಜ್ಞರಾದ ವ್ಯಾಸಾದಿಗಳು ಮಂದಪ್ರಜ್ಞರ ಅನುಗ್ರಹಕ್ಕಾಗಿಂದು ತಮ್ಮ

ವರತರಾಂಗವ ವ್ಯೈಯ್ಯಮೇಲ ।
ಕ್ಕಿರಿಸಿ ಪೇಳಲ್ಬುಧರವರಿದೇ ।
ಪರಮತತ್ತ್ವಂ ಮೂಲಕಾರಣಮೆಂದು ಶಾಸ್ತ್ರದಲಿ ॥ ೪೧॥

ಶ್ರುತಮನ್ಯೈದದದೃಷ್ಟದೃಷ್ಟ ।
ಸ್ಥಿತಿಯನ್ಯೈದದ ಬುದ್ಧಿಗತ ಸಂ ।
ಗತಮೆಸೆವರದು ಭ್ರಾಂತಿಯೆಂದೇ ಬಗೆದು ಗುರುಮುಖದಿ ॥
ಶ್ರುತಿಯನನುಭೂತಿಯ ಮನನದಿಂ ।
ಮತಿವಿಕಾಸವ ಶಾಸ್ತ್ರಗಳ ಪರಿ ।
ಚಿತಿಯ ದೆಶೆಯಿಂದೈದಲವ ಕೃತಕೃತ್ಯ ನರರೊಳಗೆ ॥ ೪೨॥

ಮತಿವಿಹೀನಂ ಗಾಗದಾತ್ಮ ।
ಸ್ಥಿತಿಯು, ಮತ್ತಾಮತಿಯು ರಾಗೋ ।
ನ್ನತ ಮನಃಸಂಯುಕ್ತಮಾದರೆ ಕೇಡನೇ ತಹುದು ॥

---

ಪುರಾಣಗಳಲ್ಲಿ-ಗಣಪತಿ, ಹಯಗ್ರೀವ, ಅರ್ಧನಾರೀಶ್ವರ, ಚತುರ್ಮುಖಬ್ರಹ್ಮ, ಸದ್ಯೋಜಾತಾದಿ ಪಂಚಮುಖನಾದ ಶಿವ, ಚತುರ್ಭುಜ ವಿಷ್ಣು, ಸಹಸ್ರಕಿರಣ ಸೂರ್ಯ, ಅಷ್ಟಭುಜದೇವಿ-ಎಂಬ ಆಕಾರವಿಶೇಷಗಳನ್ನು ತತ್ತ್ವದಲ್ಲಿಯೇ ಕಲ್ಪಿಸಿ, ಮನಬುದ್ಧ್ಯಾದಿ ಇಂದ್ರಿಯಗಳಿಗೆ ಎಟುಕದ ಆ ಪರಮಾರ್ಥವನ್ನೆ ಹೇಳಿರುವರು. ಇದನ್ನರಿಯದ ವಿಭಿನ್ನ ಮತಾನುಯಾಯಿಗಳು ಬೇರ್ಬೆರೆಯ ಆ ದೇವತೆಗಳ ಆಕಾರಗಳಿಗೆ ಮನಸ್ಸೋತು, ತಮಗಿಷ್ಟವಾದ ಆ ಒಂದೊಂದು ಆಕಾರವನ್ನೆ ಬಲವಾಗಿ ಪಟ್ಟುಹಿಡಿದು, ಅದನ್ನೆ ಪರಮತತ್ತ್ವವು ಜಗನ್ಮೂಲವು ಎಂದು ಪುರಾಣಗಳಲ್ಲಿಯೂ ಶಾಸ್ತ್ರಗಳ ತತ್ತ್ವಾರ್ಥದಲ್ಲಿಯೂ ಭ್ರಮಿಸುತ್ತಿರುವರು! (ಪಂಚದಶೀ ೬-೧೦೨ರಿಂದ ೧೨೨.)

೪೨ ಶ್ರುತಮನು+ಐದದ-ಶಬ್ದಗೋಚರವಲ್ಲದ, ಅದೃಷ್ಟ+ದೃಷ್ಟ+ಸ್ಥಿತಿಯನು+ಐದದ—ಇಂದ್ರಿಯಗಳಿಗೆ ಕಾಣುವ ಮತ್ತು ಪರಲೋಕದ ವಿಷಯಗಳಂತೆ ಅವುಗಳಿಂದ ಕಾಣುವದಕ್ಕಿಲ್ಲದ—ಈ ಎರಡು ಬಗೆಗಳಲ್ಲೊಂದೂ ಅಲ್ಲದಿರುವ ಎಂದರೆ ನೇರಾಗಿ ತನ್ನಾತ್ಮಸ್ವರೂಪದಲ್ಲಿಯೇ ಪ್ರತಿಷ್ಠೆಗೊಂಡಿರುವ ಪರಮಾರ್ಥತತ್ತ್ವದಲ್ಲಿ—ಮಂದಬುದ್ಧಿಗಳು, ಬುದ್ಧಿ—ದೇಹೇಂದ್ರಿಯಾದಿಗಳಲ್ಲಿ ಎರಕಗೊಂಡಿರುವ ಅನಾತ್ಮಮಯವಾದ ಬುದ್ಧಿಯನ್ನು ಗತ—ಹೊಂದಿರತಕ್ಕ ಸಂಗತಂ—ಸರಿಹೊಂದುವ ದೃಢವಾಗಿ ನೆಲೆಗೊಂಡಿರುವ ತಪ್ಪು ತಿಳಿವಳಿಕೆಗಳನ್ನು ಆ ತತ್ತ್ವದಲ್ಲಿಯೆ ಎಸೆವರು—ಕಲ್ಪಿಸುತ್ತಿರುವರು! ಆದರೆ ವಿವೇಕಿಗಳು ಮಾತ್ರ ಭ್ರಾಂತಿಯೆಂದೆ ಅದನ್ನು ಕೈಬಿಟ್ಟು, ಶ್ರುತಿಯನು—ಶ್ರುತ್ಯರ್ಥದ—ಶ್ರವಣಾದಿಗಳಿಂದ ತನ್ನೊಳಗೆ ಪಡೆದುಕೊಂಡಿರುವ ಅನುಭೂತಿಯಿಂದಲೂ ಆಮೂಲಾಗ್ರ ಶಾಸ್ತ್ರ ಪರಿಶೀಲನದಿಂದಲೂ ತನ್ನ ಮತಿಯು ವಿಕಾಸವನು—ಸರ್ವಾತ್ಮಭಾವದಿಂದ ವಿಸ್ತರಿಸಿದ ಆ ಬುದ್ಧಿಯು ವಿಶಾಲವಾಗಲು....,

೪೩ ಮತಿವಿಹೀನಂಗೆ+ಆಗದು+ಆತ್ಮ....ಮತ್ತು+ಆ ಮತಿಯು ರಾಗ+ಉನ್ನತ-

ಮತಿಯುತಗೆ ಸಜ್ಜನರೊಡನೆ ಸಂ।
ಗತಿಯು ದೈವವಿಶೇಷದಿಂ ತಾಂ।
ಪತಿತವಾದರೆ ದೊರಕುವುದು ಕೈವಲ್ಯಸಾಮ್ರಾಜ್ಯಂ! ॥ ೪೩ ॥

ಅರಿವಿರಲ್ಕನುಭವವೆಸೆಯದಿರ।
ಲರಿವು ಘನತೆಯನುಳಿದು ಕಾಲಾಂ।
ತರದೊಳನ್ಯಾಸಕ್ತವಪ್ಪುದು, ಮನನಮುಂಟಾಗೆ ॥
ನೆರಹುವುದು ನಿತ್ಯಾನುಭೂತಿಯ।
ನರಸಲೇಕದರಿಂದರಿವು ವಿ।
ಸ್ಫುರಿಸುವುದು, ದಧಿಯಲ್ಲಿ ನವನೀತವನು ತೆಗೆದಂತೆ ॥ ೪೪ ॥

ಪೇಳಲೇನುಳಿದರ್ಥ ಶತಶತ।
ಜಾಲಮುಂ ಸಾಕಿನ್ನು ಸಜ್ಜನ।
ಮೂಲವೇ ವಿಜ್ಞಾನ ಮಾಯರ್ಥಂ ತ್ರಿಶಪಥಾದ್ಯಂ॥
ಶೂಲಪಾಣಿಗೆ ವಿಷ್ಣುವಿಂಗೆ ಮ।
ರಾಳರಥನಿಗೆ ಭಾನುವಿಗೆ ಸುರ।
ಪಾಲನಿಗೆ ಸಮ್ಮತವು ಮಿಕ್ಕವು ಸಾಂಶಯಿಕಮುಕ್ಕುಂ ॥ ೪೫ ॥

ಕ್ರಿಯೆಯ ಕೂಡಿದ ತಿಳಿವು ಮೋಕ್ಷನಿ।
ಲಯವೆನುತ್ತಾಡುವರ ಮಾತನು।
ನಿಯತ ಚಕ್ರಾಧಾರ ದೇಶಂಗಳನು ಬಿಟ್ಟಿರಲು ॥

---

ಮೇಲೆದ್ದು ಕಾಣುವ ರಾಗಾದಿದೋಷಗಳಲ್ಲಿ ಮನಃ—ಮನಸ್ಸು, ಸಂಯುಕ್ತಂ+ಆದರೆ ಕೂಡಿಕೊಂಡಿರಲು, ತಹುದು—ಕೇಡನ್ನೇ ತಂದೊಡ್ಡುವದು, ಮತಿಯುತಗೆ—ವಿಚಾರಬಲವುಳ್ಳವನಿಗೆ, ದೈವವಿಶೇಷದಿಂ—ಪೂರ್ವಪುಣ್ಯದಿಂದ ತಾಂ—ಆ ಸತ್ಸಂಗವು, ಪತಿತಂ+ಆದರೆ ತನಗೆ ಲಭಿಸಿದರಂತು ಕೈವಲ್ಯವೇ ಸಿಕ್ಕುವದು!

೪೪ ಅರಿವು+ಇರಲ್ಕೆ-ಅರಿವಿದ್ದರೂ ಆದು ಅನುಭವದರೂಪಿನಿಂದ ಮೇಲೆದ್ದು ಫಲವನ್ನು ಕೊಡಬೇಕಾದರೆ ತಕ್ಕ ಪ್ರಯತ್ನವಿಲ್ಲದೆ ಅದು ತಾನೆ ಅನುಭವವಾಗಿ, ಎಸೆಯದು—ಹೊರಕ್ಕೆ ಬಂದುಬಿಡುವದಿಲ್ಲ, ಘನತೆಯನು—ತನ್ನ ಹಿರಿಮೆಯನ್ನು, ಉಳಿದು—ಕೈಬಿಟ್ಟು ಅನ್ಯಾಸಕ್ತ—ಬೇರೊಂದಾಪ ಹೊರಗಿನ ಅನಾತ್ಮ ವಿಷಯಗಳಲ್ಲಿ ಸೇರಿ ಅವುಗಳೊಡನೆ ಒಂದಾಗಿಬಿಟ್ಟಿರುವದು! ಮನನ...ಹುವುದು—ಹೃದಯದಲ್ಲಿದ್ದ ಆ ನಿತ್ಯಾನುಭೂತಿಯೇ ವಿಚಾರದ ಕಡೆತದಿಂದ ಅನುಭವದಲ್ಲೆದ್ದು ಬಂದು ತನ್ನ ಜತೆಗೂಡುವದು.

೪೫ ಪೇಳಲ+ಏನು+ಉಳಿದ–ಮಿಕ್ಕ ನೂರಾರು ವಿಚಾರಗಳಿಂದ ಫಲವೇನು? ಸಜ್ಜನ—ಒಬ್ಬ ಸದ್ಗುರುವಿನ, ಎಂಬ+ಈ+ಅರ್ಥಂ+ತ್ರಿಶಪಥ+ಆದ್ಯಂ—ಶಿಷ್ಟಪುರುಷರು ಮೂರಾವರ್ತಿ ಇದನ್ನು ಪ್ರತಿಜ್ಞೆಮಾಡಿ ಹೇಳಿರುವರು, ಮರಾಳರಥನಿಗೆ—ಹಂಸವಾಹನನಾದ ಬ್ರಹ್ಮದೇವನಿಗೆ,

ಜಯಿಸಲಾರದು ಭವವ ತಿಳಿವೆಂ।
ದಯುತ ಸಿದ್ಧ ಪದಾರ್ಥ ವಿದನೆಂ।
ಬ ಯಮಿವಾಕ್ಯವ ಕೇಳದಿರು ಮರಡಾದರೂ ನೀನು　　॥ ೪೬ ॥

ಅಸ್ವತಂತ್ರ ಪದಾರ್ಥರಾಜಿಯು।
ನೆ ಸ್ವತಂತ್ರ ಜ್ಞಾನದೊಡನೆ ಸ।
ಮ ಸ್ವಭಾವವೆನುವರ ಮಾತಿಂಗಿಳೆಯ ಮಧ್ಯದಲಿ॥
ವಿಶ್ವಸಿಸಬಾರದು, ಪಯಣದೊಳು।
ಮಶ್ವ ಶಬ್ದಮದಾದರೀವುದು।
ಸುಶ್ವಸಿತಮಂ ಶಕುನಕಿದರಿಂದಿದು ನಿಕೃಷ್ಟ ವಲ!　　॥ ೪೭ ॥

ಜನಿಪುದು ಪರಾಮರ್ಶೆಯಿಂ ಜ್ಞಾ।
ನ ನಿಯತಸ್ಥಿತಿ, ಕರ್ಮದಿಂದ ಭು।
ವನದೆ ದೊರಕದು ನಿಯತವೃತ್ತಿ ಯಿದೆಲ್ಲಿಕಂಡಿರೆನೆ,॥
ಇನನೆನಿಪ ನಹುಷಂ ಶತಕ್ರತು।
ವನು ವಿಧಾನದೆ ಮಾಡಿ ಕಾಮನ॥
ಕಣೆಯ ಮುಖದಿಂ ಸರ್ಪವಾದನು ಸಕಲ ಜನರರಿಯೆ!　　॥ ೪೮ ॥

ನೃಗನಿಗೊಂದಾಕಳ ನಿಮಿತ್ತದಿ।
ತಗಲಿದುದು ಸರಟತ್ವ ವಿಹದೊಳು।
ಬಗೆಬಗೆಯ ಭೋಗಗಳ ನುಂಡೀ ಭೋಗ್ಯಕಾಮ್ಯಗಳು॥

---

೪೬ ನಿಲಯಂ+ಎನುತ್ತ+ಆಡುವರ ಚಕ್ರಾಧಾರ—ಅಧಾರ ಮುಂತಾದ ಆರು ಚಕ್ರಗಳಲ್ಲಿ ಮನಸ್ಸನ್ನು ನಿಲ್ಲಿಸಿದಲ್ಲದೆ, ತಿಳಿವು—ಬರಿಯ ಜ್ಞಾನವು ಎಂದೂ, ಅಯುತಸಿದ್ಧ ಪದಾರ್ಥಂ—ಜ್ಞಾನವು ಸ್ವತಂತ್ರವಾಗಿ ಮುಕ್ತಿಯನ್ನು ಕೊಡುವದಿಲ್ಲವೆಂಬ ಕರ್ಮಸಮುಚ್ಚಯವಾದಿಗಳ ಮತ್ತು ಯಮಿ—ಯೋಗಿಗಳ.

೪೭ ಕರ್ತೃತಂತ್ರವಾದ ಕ್ರಿಯೆಗಳ ರಾಶಿಯನ್ನು ವಸ್ತುತಂತ್ರವಾಗಿ ತನ್ನ ಫಲದಲ್ಲಿ ಅಸಹಾಯಶೂರವಾಗಿರುವ ಜ್ಞಾನದೊಡನೆ ಸೇರಿಸಿ ಸರಿದೂಗಿಸಬೇಕೆಂಬವರ ಮಾತು ಜಗತ್ತಿನಲ್ಲಿ ವಿಶ್ವಾಸಾರ್ಹವಲ್ಲವು ಪ್ರಯಾಣದಲ್ಲಿ ಶುಭಸೂಚಿಸುವ ಕುದುರೆಯ ಶಕುನಕ್ಕಿಂತಲೂ ಅದು ನಿಕೃಷ್ಟವಲ್ಲದೆ ಮತ್ತೇನು!

೪೮ ಪರಾಮರ್ಶೆ—ಯುಕ್ತ್ಯನುಭವಗಳನ್ನು ಸರಿಹೊಂದಿಸಿಕೊಂಡು ಮಾಡುವ ತತ್ತ್ವವಿಚಾರವೊಂದರಿಂದ ಹುಟ್ಟುವ ಜ್ಞಾನದಿಂದಲೇ, ನಿಯತ—ನಿಶ್ಚಿತವಾಗಿ, ದೊರಕುವ ಸ್ಥಿತಿ—ತನ್ನಾತ್ಮನಲ್ಲಿ ನೆಲೆನಿಲ್ಲುವದೆಂಬ ಬ್ರಹ್ಮಾತ್ಮ ಭಾವದ ಮುಕ್ತಿಯೆಂಬುದು, ನಿಯತ ವೃತ್ತಿ—ಆ ಮುಕ್ತಿಯಾಗಲಿ, ನಿಶ್ಚಯವಾಗಿ ತನ್ನ ಫಲಗಳಾಗಲಿ ಕರ್ಮದಿಂದ ದೊರೆಯುವದಿಲ್ಲವೆಂಬುದನ್ನೆಲ್ಲಿ, ಕಂಡಿರಿ+ಎನೆ, ಇನನು+ಎನಿಪ—ರಾಜನೆಂದೆನಿಸಿಕೊಂಡಿದ್ದ, ಶತಕ್ರತು—ವಿಧ್ಯುಕ್ತ ನಡೆಸಿದ ನೂರಶ್ವಮೇಧಯಜ್ಞಗಳಿಂದ ಸ್ವರ್ಗದ ರಾಜನಾಗಿ ಹೋಗಿ

ತೆಗೆಸಲಾರವು ಕಾಮದುರಿಯು।
ಬ್ಬೆಗವನೆಂದಯಯಾತಿ, ತಪಮಂ।
ಮಿಗಿಲೆನಿಸಲಾಚರಿಸಿ ದಿವಿಜರ ನಗರಿಯನುಪಡೆದು ॥೪೯॥

ಹಮ್ಮಿನಿಂದೆ ವಿನಾಶ ಭಾವವ।
ನೆಮ್ಮಿದಂ ನಿಮಿ, ನಾಗ ಶುಂಡಾ।
ಸಮ್ಮಿತಾಜ್ಯದ ಧಾರೆಯಂ ಯಾಗಾಗ್ನಿಯಲಿ ಬೆಳ್ಳಿ॥
ಸಮ್ಮದಂ ಬೆತ್ತಾತ ಗುರುರಾಃ।
ಟ್ಸಮ್ಮುಖೋಕ್ತಿಯ ವಜ್ರದಿಂ ಪಡೆ।
ದಂ ಮೃತಿತ್ವವನಿವರ ದೆಶೆಯಿಂ ಜ್ಞಾನವೇ ಸತ್ಯಂ ॥೫೦॥

ಕೀಳು ಚಿನ್ನದ ಹೊನ್ನು ಕರ್ಮದ।
ಜಾಲಗಳು, ಧರ್ಮಂಗಳೇ ರಜ।
ತಾಳಿಯಿಂದಾಗಿರುವ ರೂಪಕ ಮಿವಕಿತರವಾದ॥
ಶೀಲವೇ ಕಾಯಿಕದ ವ್ರತಗಳ।
ಪಾಳಿಯಲಿ ಕಾಸುಗಳು, ಶ್ರೀಗುರು।
ಮೂಲದಿಂದುಂಟಾದ ಸುಜ್ಞಾನವೆ ಇದಪರಂಜಿ! ॥೫೧॥

---

ದ್ದರು ಶಚಿಯನ್ನು ಬಯಸಿ ಕಾಮನ ಕಣೆ—ಬಾಣದಿಂದ ಮಹಾಸರ್ಪನಾಗಿಬಿದ್ದನು. (ಭಾಗವತ ೯–೧೮).

೪೯ ಇಂತಿಷ್ಟೆ ಸರಿಯೆಂದು ಲೆಕ್ಕಿಸುವದಕ್ಕಿಲ್ಲದಷ್ಟು ಗೋದಾನಗಳನ್ನು ಮಾಡಿದ್ದ ನೃಗ ಚಕ್ರವರ್ತಿಗೆ ಪ್ರಮಾದದಿಂದ ಕೊಟ್ಟಿದ್ದ ಒಂದು ಗೋದಾನ ನಿಮಿತ್ತವಾಗಿ ಸರಟತ್ವವು–ಪರ್ವತಾಕಾರವಾದ ಒಂದು ಹೆಂಟಿಗೊಡ್ಡನ ಜನ್ಮವು ಬಂದಿತು! ಭಾಗವತ ೧೦-ಉ ೬೪; ಕೃಷ್ಣನ ಪಾದಸ್ಪರ್ಶದಿಂದ ಆತನು ಮುಕ್ತನಾದನು. ಎಷ್ಟು ಭೋಗಿಸಿದರೂ ವಿಷಯುಗಳೆಂಬ ಭೋಗ್ಯ ಕಾಷ್ಠಗಳು, ಕಾಮದ+ಉರಿಯು+ಉಬ್ಬೆಗವನು—ಮತ್ತೂ ಭೋಗಿಸಬೇಕೆಂಬ ಉದ್ವೇಗ, ಅಂತಸ್ತಾಪದ ಉರಿಯ ಹೆಚ್ಚಿನವೇಗವನ್ನು ಎಂದಿಗೂ ಅವು ತಗ್ಗಿಸಲಾರವು "ನಜಾತು....ವರ್ಧತೆ" ಎಂದು ಯಯಾತಿರಾಜನು ಭೋಗಗಳಿಂದ ವಿರಕ್ತನಾದನು (ಭಾಗವತ ೯–೧೮.)

೫೦–೫೧ ಬೆ(ಳ್ಬು)ಳ್ಳಿ—ದೇವತೆಗಳಿಗೆಂದು ಹೋಮಾಗ್ನಿಯಲ್ಲಿ ಕೊಟ್ಟು ಹಾಕಿ, ಸಮ್ಮದಂ+ಬೆತ್ತ+ಆತ—ನಾಗಶುಂಡ ಎಂಬವನು ಓಲಗದಲ್ಲಿ ಮಂಡಿಸಿದ್ದಾಗ, ಗುರುರಾಟ್–ಪೂಜ್ಯರಾದ ದೇವಗುರುಗಳು ಬಂದರೂ ಅವನು ಮೇಲಕ್ಕೆ ಏಳದೆ ಮದಿಸಿ ಇಂದ್ರನ ಆಸನದಲ್ಲಿಯೇ ಕುಳಿತಿರಲು, ಅವಮಾನಿತರಾದ ಗುರುಗಳು ಸಿಟ್ಟುಗೊಂಡು, ಸಮ್ಮುಖೋಕ್ತಿ—ಶಪಿಸಿದವಾಗ್ವಜ್ರದ ಪಟ್ಟಿನಿಂದ ಕೂಡಲೆ ಹತನಾಗಿ ನಾಗಶುಂಡನು ಮರಣ ಹೊಂದಿದನೆಂಬ ಇತಿಹಾಸ. ೫೧—ರಜಿತಾ....ಪಕಂ–ಬೆಳ್ಳಿಯಲ್ಲಿ ತಿದ್ದಿ ಮಾಡಿದ ಆಕಾರ ವಿಶೇಷಗಳು, ಇವಕೆ+ಇತರವಾದ ಶೀಲವೆ—ಶೌಚಾದಿ ಉತ್ತಮ ಆಚಾರಗಳು ದೇಹ

ಕರಣಸಿದ್ಧನಿಗಲ್ಲಧಾಸ್ಥಿತಿ।
ದೊರಕಲರಿಯದು ಯಾರಿಗಾಗಲಿ,।
ಮರುಮರೀಚಿಕೆಗೇಕೆ ಬಹುಸಾಧನಸಮುಚ್ಚಯವು,॥
ಅರಿದರಾಗದೆ ಮಿಥ್ಯೆಯದರಂ।
ತಿರುವದಕೆ ವಿಜ್ಞಾನವೇ ಸಾ।
ಕುರವಣಿಪ ಯತ್ನೋಪಯತ್ನದ ರಾಶಿಯಿಂದೇನು ॥ ೫೦ ॥

ಇಂತೆನುವ ದೆಶೆಯಿಂದ ತಜ್ಞಾ।
ಜ್ಞಾಂತರಾಳಿಕನಾಗಿ ನಾಬ।
ದ್ಧಂ ತಿಳಿಯೆ ನಿರ್ಮುಕ್ತನಾದೇನೆಂಬವಂಗಲ್ತೆ॥
ಮುಂತೆಸವ ಸಾಧನಗಳವಗೀ।
ತಂತರದೊಳಧಿಕಾರ ಮುಂಟವ।
ನಂ ತಿಳಿದವರ್ತಿಳುಪಬೇಹುದು, ಖುಲ್ಲರಾದರಿಗೆ ॥ ೫೧ ॥

ಯಾರು ತಿಳುಪಲ್ಬಗೆವರವರೇ।
ಗೌರಿಯನು ಪುತ್ರಿಯನು ಕುಸುಮ ಕು।
ಮಾರಿಯನು ಕನಸಿನಲಿ ಕಂಡವಗೀವರಲ್ತೆಕರಂ!॥
ಪಾರಮಾರ್ಥಿಕರಿಂಗೆ ತತ್ತ್ವ ವಿ।
ಚಾರಮಂ ಪೇಳುವರು ವರಕ।
ಸ್ತೂರಿಯಲಿ ಪರಿಮಳವ ವಾಸಿಪರೆಂಡನಜಪುತ್ರ! ॥ ೫೨ ॥

---

ವನ್ನು ಕರಗಿಸುವ ಕಾಯಿಕದ ಪ್ರತೋಪವಾಸಾದಿಗಳ ಪಾಳಿ-ಸಾಲುಗಳಲ್ಲಿ ಬಿಡಿಕಾಸುಗಳು,

೫೦ ಕರಣಸಿದ್ಧನಿಗೆ—ಬಾಹ್ಯಾಂತಃಕರಣಗಳನೆಲ್ಲ ನಿಗ್ರಹಿಸಿ, ಜ್ಞಾನಯೋಗ್ಯವಾದ ಕರಣವುಳ್ಳವನಿಗೇ ಆಗುವದಲ್ಲದೆ+ಆ ಸ್ಥಿತಿ—ಆ ಆತ್ಮನಿಷ್ಠೆಯೆಂಬುದು, ಅಜಿತೇಂದ್ರಿಯನಿಗೆ ಎಂದಿಗೂ ದೊರಕಲು+ಅರಿಯದು—ಅಸಾಧ್ಯವು, ಅರಿದರೆ—ಮಿಥ್ಯೆಯೆಂಬುದಿಷ್ಟನ್ನೇ ತಿಳಿದರೆ ಸಾಕಲ್ಲವೆ? ಉರವಣಿಪ—ಬಿಡುವಿಲ್ಲದಂತೆ ಮಾಡುವ,

೫೧ ತತ್+ಜ್ಞ+ಅಜ್ಞ+ಅಂತರಾಳಿಕನು—ಆ ತತ್ತ್ವ ಬಲ್ಲವನು, ಏನೊಂದೂ ತಿಳಿಯದ ಅತ್ಯಂತ ಮೂಢನು ಎಂಬಿಬ್ಬರಿಗೂ ನಡುವಣದವನಾಗಿ ತಿಳಿಯಬೇಕೆಂಬಿಚ್ಛೆಯಿಂ ಮೊಡಗೂಡಿ, ನಾ—ನಾನು ಸಂಸಾರ ಬಂಧನದಲ್ಲಿ, ಬದ್ಧಂ—ಕಟ್ಟುವಡಿಯಲ್ಪಟ್ಟಿರುವೆನು, ಬ್ರಹ್ಮಾತ್ಮತತ್ತ್ವವನ್ನು ತಿಳಿಯೆ—ತಿಳಿದುಕೊಂಡರೆ, ನಿರ್ಮುಕ್ತನು+ಆದೇನು+ಎಂಬವಂಗೆ+ಅಲ್ತೆ—ಮುಕ್ತಿಗಾಗಿ ಕಾತರಿಸುತ್ತಿರುವವನಿಗಲ್ಲವೆ? ಮುಂತು+ಎಸವ—ಮುಂದಿನ, ಅವಗೆ+ಈ ತಂತರದೊಳು-ವಿಚಾರಪ್ರಧಾನವಾದ ಈ ಕಾವ್ಯದಲ್ಲಿ, ಅಧಿಕಾರಂ+ಉಂಟು—ಎಂದರೆ ಮತ್ತೊಬ್ಬನಿಗಿರುವದಿಲ್ಲವು, ತಿಳುಪಬೇಹುದು—ತತ್ತ್ವವನ್ನು ತಿಳಿಸಿಕೊಡಬೇಕು, ಹಾಗಲ್ಲದೆ, ಯಾರಾದರೆ ಖುಲ್ಲರು—ನೀಚರು, ವಿಷಯಲಂಪಟರಿಗೆ.

೫೨ ತಿಳುಪಲ್+ಬಗೆವರು—ತಿಳಿಸುವ ಮನಸ್ಸಿನವರೇ, ....ವಗೆ+ಈವರಲ್ತೆ—

ಶಮೆಯುತಗೆ ಜಿತ ವೀರ್ಯನಿಗೆ ದೋ।
ಷಮನು ಪೊರ್ದ್ದದವನಿಗೆ ಪೇಳಿದು।
ದ ಮರೆಯದೆ ಮಾಡುವಗೆ ಸುಗುಣಿಗೆ ಕೂಡಲಿರ್ಪನಿಗೆ॥
ವಿಮಲಮತ್ಯಾಚಾರ್ಯನಹ ನೆ।
ಲ್ಲಮನು ಮಾಜದೆ ಕೊಡಲುತಕ್ಕದು।
ಸುಮುಖದಿಂದೆಂದಾರ್ಯಚರಣರ ವಾಕ್ಯ ವಿಸ್ಫಲದೆ ॥ ೫೫ ॥

ಉರುತರಾಭರಣವನು ವಿಬುಧೇ!
ಶ್ವರರು ಧರಿಸಿರುತಿರಲಿ ತತ್ತ।
ತ್ಕರಣಕೀಲಕ ಭೂಷಣವ ನೊಲಿದಾಂತು ಮುಂದಪ್ಪ॥
ಸುರರಿಗೀ ಪದವಿಗಳನಿತ್ಯಾ।
ಕರವೆನಿಪುದಭಿನಯಿಸಿ ತತ್ತ್ವ ಜಿ।
ಜ್ಞು ರುಚಿಯಂ ಪೇರ್ಚಿಸುವ ಭವನೆಮಗೀಗೆ ಶಿವಪದವಂ ॥ ೫೬ ॥

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೊಳಧಿಕಾರಿ ಲಕ್ಷಣಮಂ
ಪೇಳಿದುದೆಂಟನೆಯ ಸಂಧಿ ಸಂಪೂರ್ಣಂ (ಪದ ೪೧೭)

## ನಿತ್ಯಾನಿತ್ಯ ನಿರ್ಣಯಂ— ಒಂಬತ್ತನೆಯ ಸಂಧಿಯುಂ

ಸೂ॥ ಸರ್ವನಿತ್ಯ ವಿರುದ್ಧ ಮಾನಾ।
ಖರ್ವಸತ್ಯಾತ್ಮಾನುಭವದಿಂ।
ನಿರ್ವಹಿಸಲಿಲ್ಲಪ್ಪುದಾತ್ಮಾಪಾತ್ರ ಸಂಖ್ಯಾನಂ ॥ ೧ ॥

---

ಕೊಡತಕ್ಕವರೆಂಬುದು, ಕರಂ—ಚನ್ನಾಗಿ ಒಪ್ಪುವದು, ವಾಸಿಪರು—ಮೂಸಿನೋಡಿ ನಲಿಯ ತಕ್ಕವರು, ಎಂದನು+ಅಜ—(ಬ್ರಹ್ಮನ) ಪುತ್ರ—ವಸಿಷ್ಠರು.

೫೫ ಶಮೆ—ಮನೋನಿಗ್ರಹ, ಜಿತವೀರ್ಯ—ಜಿತೇಂದ್ರಿಯನಿಗೆ, ದೋಷ...ನಿಗೆ—ಶುದ್ಧ ಚರಿತ್ರನಿಗೆ, ಕೂಡಲಿರ್ಪನಿಗೆ—ಗುರುವನ್ನು ಕೂಡಿಯಿರತಕ್ಕವನಿಗೆ, ವಿಮಲಮತಿ+ಆಚಾರ್ಯನಹನು+ಎಲ್ಲವನು, ....ದಿಂದ+ಎಂದು+ಆರ್ಯಚರಣರ—ಪೂಜ್ಯಪಾದರಾದ ಗುರುಗಳ.

೫೬ ದಿವ್ಯಾಭರಣಗಳಿಂದ ವಿಭೂಷಿತರಾದ ದೇವತೆಗಳ ತಮ್ಮ ಪದವಿಗಳು ಕರ್ಮಫಲಗಳಾಗಿರುವದರಿಂದ ಅವು ಕಾಲಾಧೀನವಾಗತಕ್ಕ ಅನಿತ್ಯವೆಂಬುದನ್ನು ಆ ದೇವತೆಗಳಿಗೆ ತಿಳಿಸಿಕೊಡುವನೋ ಎಂಬಂತೆ ಅಭಿನಯಿಸುತ್ತಿರುವ ಶಿವನು—ತನ್ನ ಶರೀರಕ್ಕೆ ಚಿತೆಯ ಬೂದಿಯನ್ನು ಬಳಿದುಕೊಂಡು, ಅವಯವಗಳಲ್ಲೆಲ್ಲ ಸರ್ಪಗಳನ್ನು ಅಲಂಕರಿಸಿಕೊಂಡಿದ್ದರೂ ಜಿಜ್ಞಾಸುಗಳಿಗೆ ಮಾತ್ರ ತತ್ತ್ವದಲ್ಲಿ ರುಚಿಯನ್ನು ಹೆಚ್ಚಿಸುತ್ತಿರುವ ಅವನು ತನ್ನ ನಿತ್ಯಮಂಗಲಪದವನ್ನು ಕೊಟ್ಟು ನಮ್ಮನ್ನು ಕಾಪಾಡಲಿ.

ಸೂ॥ ನಿತ್ಯವೂ ಸರ್ವವೂ ತಾನಾಗಿ, ತನಗೆ ವಿರುದ್ಧ—ಸರಿಯುಳ್ಳದ, ಮಾನಾ—ಪ್ರಮಾಣಗಳನ್ನೆಲ್ಲ, ಖರ್ವ—ಮೀರಿದಿರುವ, ಅಥವಾ ಅವಕ್ಕೆ ಸಿಕ್ಕದೆ ಕುಳ್ಳನಾಗಿರುವ,

ಮಿಂಚಿನಂದದಿ ಪೊಳೆದಡಗುತಿಹ ।
ಪಾಂಚಭೌತಿಕ ದೇಹ ಪಾಲನೆ ।
ಗಂ ಚಟುಶತಂ ಬೇಳಿ ಮೂಢಜನರ್ಕಳಿದಿರಿನಲಿ ॥
ವಂಚನಾ ಮುಖದಿಂದ ಬಾಳ್ವ ಖ ।
ಲಾಂಚಲವ ಸೇರದ ವಿರಕ್ತಿ ರ ।
ಸಾಂಚಿತ ಮನಸ್ಕರಿಗೆ ಪೇಳುವದೀ ಕಥಾಶ್ರುತಿಯ ॥೧॥

ಯಾರು ಮೋಕ್ಷವ ಬಯಸುವರು, ಸಂ ।
ಸಾರ ತಾಪದೆ ನೊಂದು; ಮೇಣವ ।
ರೇ ರುಚಿಯನಧ್ಯಾತ್ಮಶಾಸ್ತ್ರದೊಳೊಡವೆರದು ಗುರುವ ॥
ಸೇರಿ, ಸುಸ್ಥಿರ ಬುದ್ಧಿಯಿಂದ ವಿ ।
ಚಾರಿಸುವು ದೆಳ್ಳನಿತು ಸಂಶಯ ।
ತೋರದಂದದಿ ಮನದೊಳಾತ್ಮಾನಾತ್ಮ ಭಾವವನು ॥೨॥

ತನ್ನ ಬಿಟ್ಟೊಂದಿಲ್ಲ ವಾಸ್ತವ ।
ದೌನ್ನತಿಯು, ನಿತ್ಯಂ ಸ್ವರೂಪಂ ।
ಭಿನ್ನಭಾವವಿದೆಲ್ಲ ಕನಕಿನ ತೋರ್ಕೆಯೆಂತಿಹುದು ॥
ಅನ್ನುವದೆ ವೇದಾಂತರಾಶಿಯ ।
ಸನ್ನಿಹಿತಸಾರಂ ವಿವೇಚಿಸ ।
ಲಿನ್ನು ಕಡೆಗಿವನುಳಿದು ಕೂಡವ ಮೊಘ ರಸವೊಂದು ॥೩॥

---

ಸತ್ಯ—ಕಾಲದಲ್ಲಿಲ್ಲದ ತನಗೆ ಆ ಕಾಲದ ಸೋಂಕಿಲ್ಲದ, ನಿರ್ವಹಿಸಲು—ಮಾಡಲು, ಇಲ್ಲಿ+ಅಪ್ಪುದು, ಸಂಖ್ಯಾನಂ—ನಿರ್ಣಯದ ವಿಚಾರವು.

೧ ಚಟು—ಕಿವಿಗೆ ಒಳ್ಳೆಯ ಇಂಪನ್ನಾಗಿರುವ, ಶತಂ—ನೂರಾರು ಮಾತುಗಳನ್ನು, ಪೇಳಿ—ಕೂಗಿ ಹೇಳಿ, ಸ್ತೋತ್ರದ ಮಾತುಗಳಿಂದ ಉಬ್ಬಿಸಿ ಜನರನ್ನು ಮರುಳುಮಾಡಿ, ....ಮುಖ—ಮುಂತಾದ್ದರಿಂದಲೇ, ಖಳಾಂಚಲವ—ಪಟಿಂಗರ ಸೆರಗನ್ನು, ವಿರಕ್ತಿ ಎಂಬ ರಸಾಂಚಿತ—ಮನೋಹರವಾದ ಸವಿಗಂಡ.

೨ ರುಚಿಯನು—ಪ್ರೇಮವನ್ನು, ಒಡವೆರದು—ಜತೆಗೂಡಿ, ವಿಚಾರಿಸುವುದು+ಎಳ್ಳನಿತು—ಎಳ್ಳಿನಷ್ಟಾದರೂ, ಆತ್ಮಾನಾತ್ಮಗಳ ಭಾವ—ಸ್ವರೂಪವನ್ನು, ಎಂದರೆ ತನ್ನ ಪರಮಾರ್ಥ ಶ್ರೇಯಸ್ಸನ್ನು ಕುರಿತು.

೩ ವಾಸ್ತವದ+ಔನ್ನತಿ—ಶ್ರೇಯಸ್ಸಿನ ಉದಯ, ಅಧಿಕತ್ವವು. ಸನ್ನಿಹಿತ—ರಹಸ್ಯ ಪಡಿಸಿಟ್ಟಿರುವ, ವಿವೇಚಿಸಲು+ಇನ್ನು—ಶಾಸ್ತ್ರಗಳನ್ನೆಲ್ಲ ಒಕ್ಕಡೆ ರಾಶಿ ಹಾಕಿಕೊಂಡು ಎಷ್ಟೇ ದೀರ್ಘಕಾಲದವರೆಗೆ ಅವುಗಳ ವಿಚಾರದಲ್ಲಿ ಶ್ರಮಿಸಿದರು ಕಡೆಗೆ+ಇದನು+ಉಳಿದು—ಇದಕ್ಕಿಂತ ಬೇರೊಂದು, ಅಮೋಘರಸಂ+ಒಂದು+ಕೂಡದು—ಭಯವಿಲ್ಲದ ಪರಮಾತ್ಮ ತತ್ತ್ವ, ಸಫಲವಾದ ಅಮೃತತತ್ವವೆಂಬುದು ಮತ್ತೊಂದಿರುವದಿಲ್ಲವೆಂಬುದಕ್ಕೆ—

ನಯ ಪರರ್ಗಿದು ದೊರಕುವದೊ ನಿ ।
ರ್ಣಯ ಪರರ್ಗಿದು ದೊರಕುವದೊ ಸಂ ।
ಶಯವನಿಲ್ಲಿಡತಕ್ಕುದಲ್ಲೆನೆ, ಗುರುವಿನನುಮತಿಯ ।
ಶ್ರಯಿಸಿ ಶ್ರದ್ಧಾ ಪೂರ್ವಕದಿ ನಿ ।
ಶ್ಚಯ ಮಖಂಡಾತ್ಮ ಪ್ರಸಾದಂ ।
ಜಯವುದಲ್ಲದೆ ಕೂಗಿ ಕಲಿತೋದಿನಲಿ ಫಲವಿಲ್ಲ! ||೪||

ನಿಜಪದವ ಭೋಧಿಸದ ಶಾಸ್ತ್ರ ।
ವ್ರಜಗಳೇ ದುರ್ಗಮದ ಕತ್ತಲೆ! ।
ಭಜಿಸಲದ ನೊಂದಾದರಾ ಬಳಿಯಲ್ಲಿ ಕಾಣಿಸದು ॥
ನಿಜವೆನಿಸದೇ ತರ್ಕವೆನಲು, ಮ ।
ನುಜರದನು ಕೇವಲವ ಪಿಡಿದು ವಿ ।
ಭಜಿಸಲಾಗದ ನಿರಯ ವೈದಿದರೆಂದನಾ ಸೂತಂ ||೫||

ಭಾರತದೊಳವರಿಂ ಗುಸುರ್ದುದು ।
ಫೇರವದ ಯೋನಿಯನು, ಕಡೆಯಲಿ ।
ಹಾರಲದು ಸಾಂಖ್ಯಾದಿ ದರ್ಶನಗಳ್ಳನಂಗಳೆನೆ, ॥
ಕಾರಣವ ಪ್ರಕೃತಿಗೆ ಜಗತ್ತಿನ ।
ಹಾರವುದು ಕಾಪಿಲವು, ಯೋಗವು ।
ಹಾರವುದು ಗುರಿಯಿಡಿದು ಠಾವಿನ ತೆರಪನಾತ್ಮನಿಗೆ ||೬||

---

ವಿಚಾರಿತಮಲಂ ಶಾಸ್ತ್ರಂ ಚಿರಮುದ್ಗ್ರಾಹಿತಂ ಮಿಥಃ ।
ಸಂತ್ಯಕ್ತವಾಸನಾನ್ಮೌನಾ ದೃತೇ ನಾಸ್ತ್ಯುತ್ತಮಂ ಪದಂ ॥ ವಾಸಿಷ್ಠ ॥

೪ ನಯಪರರ್ಗೆ–ಸರಳವಾದಹೃದಯವುಳ್ಳವರಿಗೆ, ನಿರ್ಣಯ–ಹೀಗೋ ಹಾಗೋ ಯೆಂದು ಶಾಸ್ತ್ರಗಳನ್ನೆಲ್ಲ ಓದಿ ಮಾಡುವ ತರ್ಕಕುಶಲರಿಗೆ, ತತ್ತ್ವದರ್ಶಿಗಳಾದ ಗುರುಗಳನ್ನು–ಸೇವಿಸಿ, ಪ್ರಸನ್ನರಾಗಿಸಿ, ....ಶ್ರಯಿಸೆ–ಅವರನ್ನು ಅನುಸರಿಸಿಕೊಂಡು ಹೋಗುವ ದೆಂಬ ಗುರು ಪ್ರಸಾದೈಕಲಭ್ಯವಾಗಿ ಬರತಕ್ಕ ಈ ನಿಶ್ಚಯಂ+ಅಖಂಡಾತ್ಮ ಪ್ರಸಾದಂ—ಬ್ರಹ್ಮದಲ್ಲಿ ನಿಷ್ಠರಾದ ಗುರುವಿನ ಆ ಅನುಗ್ರಹ ಒಂದರಿಂದಲೇ, ಜಯಿಪುದು (ಬರತಕ್ಕದ್ದು)+ಅಲ್ಲದೆ.

೫ ನಿಜಪದ–ತನ್ನ ಬ್ರಹ್ಮಾತ್ಮ ಸ್ವಭಾವವನ್ನು, ವ್ರಜ–ರಾಶಿಗಳೆಂಬುದು, ದುರ್ಗಮದ–ಪ್ರವೇಶಿಸುವದಕ್ಕಿಲ್ಲದಷ್ಟು ದಟ್ಟವಾದ, ಭಜಿಸಲು—ಶಾಸ್ತ್ರದ ಆ ರಾಶಿಯನ್ನು ಒಳಹೊಕ್ಕು ಸೇವಿಸಲು, ಅನುಭವಕ್ಕಿಲ್ಲದ ಆ ಪ್ರಮೇಯಗಳಲ್ಲಿ ಒಂದಾದರು ನೆಲೆ ನಿಲ್ಲುವಂತಿಲ್ಲವು. ವಿಭಜಿಸ (ಕೊನೆಗಾಣ)ಲು+ಆಗದ ನಿರಯವನು+ಐದಿದರು.

೬ ಅವರಿಂಗೆ+ಉಸುರ್ದುದು—ಹೇಳಿದುದು; ಫೇರವ—ನರಿ, ಗುರಿಯು+ಇಡಿದು–ಗುರಿಯಿಟ್ಟಂತೆ ನೇರಾಗಿ ಆತ್ಮನನ್ನು ಹಿಡಿದುಕೊಂಡು, ಠಾವಿನ ತೆರಪನು–ಭೂಮ್ಯಾದಿಜಡ

ಶೈವ ಮೂರೀಕರಿಪುದನುಪಮ ।
ಭಾವ ಶಕ್ತಿಯ ಸಾಮರಸ್ಯವ ।
ನೋವಿ ಪೇಳ್ವುದು, ಪಾಂಚರಾತ್ರಂ ವ್ಯೂಹಭೇದವನು, ॥
ಜೀವನಿಗೆ ಕರ್ಮಾಧಿಕಾರಂ ।
ಭಾವವೆಂಬುದು ಭಾಟ್ಟಮತ ಮಿಾ ।
ಜೀವನೇ ಗುಣಿಯೆಂಬುದರ್ಹನ್ಮತಮನಾಮ್ನಾಯಂ ॥ ೭ ॥

ಇವರೊಳಗೆ ಪಿಡಿವುದು ತತ್ತ್ವ ।
ವ್ಯವಹೃತಿಯು, ಮಿಕ್ಕಾದ ಶಾಸ್ತ್ರ ।
ವ್ಯವಹೃತಿಯು ದೃಢಮೂಲವಲ್ಲದರಿಂದವಿಶ್ವಸ್ಯಂ ॥
ಇವರೊಳಪ್ಪರು ಕೆಲರು ಸಗುಣ ।
ಪ್ರವಚನರು ಪ್ರತ್ಯಕ್ಷದೋಳ್ಮ ।
ತ್ತಿವರೊಳು ಪರೋಕ್ಷದ ದಶಗುಣ ಪ್ರವಚನರು ಕೆಲರು ; ॥ ೮ ॥

ಇದುಮೆ ಶಾಸ್ತ್ರಂ ಜ್ಞೇಯ ಮಿದು ಎಂ ।
ದಿದರೊಳಿಚ್ಛೆಯ ನಾಂತು ನಡೆಯು ।
ಲ್ಕೊದಗದಿಲ್ಲಿ ಸರತ್ಸಹಸ್ರಗಳಿಂದ ವಿಜ್ಞಾನಂ ॥
ಅವರದರೊಳಭಿಮಾನದಿಂ ಮೋ ।
ಕ್ಷದ ವಿಶೇಷವ ಬಂಧದಿರವಂ ।
ಚದುರಿಸಿಯೆ ಪೇಳಿರ್ಪರಲ್ಲದೆ ಪೇಳರವರೊಂದ ॥ ೯ ॥

---

ಭೂತಗಳಂತೆ ಆತ್ಮನಿಗೆ ಭೇದವಿಲ್ಲವೆಂಬ ಆ ಯೋಗಮತವು ಸರಿಯಲ್ಲವು.

೭ ಶೈವಂ+ ಉರಿ(ಅಂಗೀ)ಕರಿಪುದು ಅನು...ಪ್ಯವನು—ಪರಮಾರ್ಥಸತ್ಯವಾದ ಶಿವಶಕ್ತಿಯನ್ನೂ, ಶಿವಾಧಿರಜೀವನಿಗೆ ಶಿವಸಾಮರಸ್ಯವ(ನ್ನೂ)ನು+ ಓವಿ—ತಾನು ಒಲಿದು. ವ್ಯೂಹ—ಪ್ರದ್ಯುಮ್ನ ಅನಿರುದ್ಧ ಸಂಕರ್ಷಣ ವಾಸುದೇವ ಎಂಬ ಚತುರ್ವ್ಯೂಹ ಭೇದವನ್ನು ಹೇಳಿರುತ್ತದೆ; ಭಾವ(ಪರಮಾರ್ಥಸತ್ಯ)ಂ+ ಎಂಬುದು; ಗುಣಿ—ಆತ್ಮನುಗುಣಗಳುಳ್ಳವನೆಂಬುದು ಅರ್ಹನ್ಮತಂ+ ಅನಾಮ್ನಾಯಂ—ಅವೈದಿಕ ಜೈನಮತವು;

೮ ತತ್ತ್ವವ್ಯವಹೃತಿ-‘ಶಿವನಿಷ್ಟತತ್ತ್ವ’ ಎಂಬ ವ್ಯವಹಾರವು, ಅವಿಶ್ವಸ್ಯಂ-ವಿಶ್ವಾಸಯೋಗ್ಯವಲ್ಲವು, ಪ್ರತ್ಯಕ್ಷದೋಳ್+ ಮತ್ತು+ ಇವ(ಭ್ರಾಂತ)ರೊಳು+ ಕೆಲರು ಚತುರ್ದಶ ಗುಣಗಳನ್ನೂ ಮತ್ತೆ ಕೆಲರು ದಶಗುಣಗಳನ್ನೂ ಹೇಳುವರು (ಪಂಚದಶಿ, ೬—೬೦....೧೦೧).

೯ ಎಂದು+ ಇವರೊಳು—ಈ ಶಾಸ್ತ್ರಗಳಲ್ಲಿ, ಇಚ್ಛೆಯನು+ ಆಂತು-ತಾನು ಹೊಂದಿ, ನಡೆಯಲ್ಕೆ+ ಒದಗದು+ ಇಲ್ಲಿ+ ಸರತ್—ಸಹಸ್ರ ಸಂವತ್ಸರಗಳಿಂದಲಾದರೂ ಬಂಧದ (ಮತ್ತು—ಮುಕ್ತಿಯ ಗೊತ್ತಾದ ಒಂದು ವಿಶೇಷದ)+ ಇರುವಂ—ಸ್ವರೂಪವನ್ನು ಅವುಗಳಿಗೆ ಹೇಳದೆ ಒಬ್ಬೊಬ್ಬರೂ, ಚದುರಿಸಿ—ಒಬ್ಬರಿಗಿಂತೊಬ್ಬರು ಬೇರೊಂದುಪರಿಯಲ್ಲಿಯೇ

ಕಾಪಿಲಂ ಕಡೆ ಲೌ ತಾರ್ಕಿಕಂ ಮೊದ||
ಲೀ ಪಥದ ಮಾಧ್ಯಮಿಕರೆಲ್ಲರ್ !
ಪ್ರಾಪಿತ ಭ್ರಾಂತಿಗಳು ಜೀವಸ್ಥಲದೊಳು, ಈಶನಲಿ||
ಪ್ರಾಪಿತ ಭ್ರಾಂತಿಗಳು ತೃಣ ಪೂ।
ಜಾ ಪರಂ ಮೊದಲಾಗಿ ಮಧ್ಯಮ।
ರಾ ಪಥದೆ ಪಾತಂಜಲಂ ಕಡೆಯಾಗಿ ಪುಸಿಯೆಲ್ಲ ! ||೧೦||

ಕಾಪಿಲಗೆ ಗುಣಸಾಮ್ಯವೇ, ದುಃ।
ಖಾಪಚಯವೇ ತಾರ್ಕಿಕಗೆ ಸಮ।
ರೂಪವೇ ತಾಂತ್ರಿಕಗೆ ದೇವತೆಯಲ್ಲುಪಾಸ್ಯೆಯಲಿ : ||
ಪಾಪವೀಹದೆ ಉದಿಸದಿರ್ಪುದೆ।
ರೂಪ ವಿಲಯವೆ ಪರಪದಾರ್ಥ।
ಪ್ರಾಪಣವೆ ಮೀಮಾಂಸಕಗೆ ಲೌಕಿಕಗೆ ವೈಷ್ಣವಗೆ ||೧೧||

ಮುಕ್ತಿಗಳು ಬಂಧಗಳು ಮಿಂತೇ।
ಯುಕ್ತಿ ಕೃತವಾಗೆಸೆವವುವರಿಂ!
ವ್ಯಕ್ತಮಾಗದ್ವೈತ ನಿರ್ವಾಣಂ ಘಟಿಸದಿಲ್ಲಿ ||
ಯುಕ್ತಮಾಗಿರ್ಪಖಿಲ ನಯ ಸಂ!
ಸಕ್ತನಾದರು ಕೆಡದು ಸಂಸೃತಿ।
ರಕ್ತ ವಿಷಯಾನ್ಯಾಗಮಂಗಳು ಸುಪ್ರಮಾವಗಳು! ||೧೨||

---

ಹೇಳಿರುವರು, ಒಂದನ್ನು—ಒಂದು ಬಗೆಯನ್ನು ಹೇಳಿರುವದಿಲ್ಲ.

೧೦ ಲೌಕಿಕಂ—ಚಾರ್ವಾಕಮತ, ಪ್ರಾಪಿತ+ಭ್ರಾಂತಿಗಳು(ಇವರು ಎಂದರೆ) ಕಪಿಲಮತಾನುಯಾಯಿಗಳಾದಿಯಾಗಿ ಲೌಕಿಕರವರೆಗೆ ಜೀವನಸ್ವರೂಪದ ವಿಷಯವಾಗಿಯೂ ಮತ್ತು) ; ತೃಣಂ....ಕಡೆಯಾಗಿ—ಹುಲ್ಲಿನಗರಿಕೆಯಿಂದ ಯೋಗಮತದವರೆಗಿನ ಎಲ್ಲರೂ ಈಶ್ವರನ ತತ್ತ್ವದ ವಿಷಯದಲ್ಲಿಯೂ ಮೋಹಿತರು ಭ್ರಾಂತಿಗೆ ಪಕ್ಕಾದವರೆ ಸರಿ.

೧೧ ಕಪಿಲರಿಗೆ—ಗುಣಸಾಮ್ಯವೆ, ತಾರ್ಕಿಕರಿಗೆ ೨೧ ದುಃಖಗಳ ಅಪಚಯ—ಕ್ಷೀಣಿಸುವದೆಂಬುದೆ; ತಾಂತ್ರಿಕರಿಗೆ—ಶೈವ ಮತ್ತು ಉಪಾಸಕರು ಇಬ್ಬರಿಗೂ ಆರಾಧ್ಯ ಮತ್ತು ಉಪಾಸ್ಯ—ದೇವತೆಯೊಡನೆ ಸಮರೂಪವೆ ಮುಕ್ತಿಯು. ಅಲ್ಲದೆ, ಪ್ರತ್ಯವಾಯ—ಪಾಪದೋಷಗಳು, ಈಹದೆ—ಮಾಡುವ ಕರ್ಮಗಳಲ್ಲಿ ಹುಟ್ಟದಿರುವದು ಮೀಮಾಂಸಕರಿಗೂ, ರೂಪ(ದೇಹದ) ವಿಲಯವು ಲೌಕಿಕರಿಗೂ, ವಿಷ್ಣುವಿನ ಚತುರ್ಭುಜಾದಿಗಳೆಂಬ ಪರಪದಾರ್ಥ ಪ್ರಾಪಣ—ರೂಪಾಂತರ ಪ್ರಾಪ್ತಿ ವೈಷ್ಣವರಿಗೂ ಮುಕ್ತಿಗಳು, ಇವಕ್ಕೆ ವಿರುದ್ಧವೆ ಅವರವರಿಗೆ ಸಂಸಾರಬಂಧನವು.

೧೨ ಯುಕ್ತಿಕೃತ(ಪೂರ್ವಕ)ವಾಗಿ+ಅವರಿಂದ+ಎಸೆವುದು—ಹೇಳಲ್ಪಡುವದು, ಅದ್ವೈತ ನಿರ್ವಾಣಂ-ಕೈವಲ್ಯವಿಲ್ಲವೆಂಬುದು ಸ್ಪಷ್ಟವು, ...ನಯ ಸಂಸಕ್ತನು,—ತರ್ಕಾವಲಂಬ

ಯಾರಿಗಾತ್ಮ ದ್ರೋಹದೊಳಗಂ।
ಕೂರಿಸುವದೋ ಬುದ್ಧಿಯವದಿ।
ಸೇರಬೇಕಧ್ಯಾತ್ಮವಿದ್ಯಾ ಬಾಹ್ಯಮಾರ್ಗವನು॥
ಓರೆನಿಸಿ ಇರುವಂತೆ ಭಾಸಿಪ।
ಪಾರಮಾರ್ಥಿಕವನ್ನು ಭಾವದೆ।
ಬೇರೆಣಿಪ ನರನಿಂದ ಕಳ್ಳನದಾವ ಭೂಮಿಯಲಿ ॥೧೩॥

ಓದುವದರಿಂ ಮೊದಲು ತಾಪದೆ।
ಕಾದಿರವನಷ್ಟೇ, ಬಳಿಕ ಸಂ।
ಪಾದಿತಾಭ್ಯಾಸಾಸ್ಮೃತಿ ಪರಾಭೂತ ವರ್ಗಗಳಿಂ॥
ಮೋದವಂ ಪಡೆಯಂ ನರಂ ತ।
ತ್ತ್ವಾದರ ದೊಳೇನಾಯ್ತು ಶೋಕವು।
ನೈದಿದಂ ಪಿರಿದಾಗಿಯದರಿಂ ವ್ಯರ್ಥಮಿತರ ನಯಂ ॥೧೪॥

ಕಲಿಯ ಬೇಕೊಬ್ಬಳಿಯಲೊಬ್ಬರ।
ಬಲವೊಳೊಂದಾನೊಂದು ವಸ್ತುವ।
ಫಲಿಸಿ ತೃಪ್ತಿಯ ನೈದಿಸದ ಕಿಂಕರತೆಯಂ ಪೇಳ್ವ॥

---

ನದ ಈ ಶಾಸ್ತ್ರಗಳಲ್ಲಿ ಚೆನ್ನಾಗಿ ನುರಿತವನಿಗೂ ಸಂಸೃತಿಯು ಕೆಡುವಂತಿಲ್ಲ ಎಂಬುದಕ್ಕೆ, ಸಂಸೃತಿರಕ್ತವಿಷಯು–ಸಂಸಾರದ ವಿಷಯಾಸಕ್ತರನ್ನು ಕುರಿತಿರುವ, ಅನ್ಯಾಗಮಂಗಳು–ತತ್ತ್ವಕ್ಕೆ ಹೊರಚ್ಚಾಗಿರುವ ಈ ಶಾಸ್ತ್ರಗಳು ಪ್ರಮಾದರೂಪಗಳು, ಆದ್ದರಿಂದ ತತ್ತ್ವ ಜಿಜ್ಞಾಸುಗಳು ಅವುಗಳಿಂದ ಜಾಗರೂಕರಾಗಿರಬೇಕು.

೧೩ ಅಧ್ಯಾತ್ಮವಿದ್ಯೆಯನ್ನು ಬಗಲಿರುವ ಈ ಮಾರ್ಗವನ್ನು, ಅವದಿರ್—ಅಂಥವರು ಮಾತ್ರ ಸೇರಬೇಕು. ಓರ್‌-ಅನಾತ್ಮ ಸೋಂಕಿಲ್ಲದ ಕೇವಲಾದ್ವಿತೀಯನೆಂದು ತಾನು ಎನಿಸಿಕೊಂಡು, ಭಾವದೆ—ತನ್ನಮನಸ್ಸಿನಲ್ಲಿ (ಈಶ. ೩).

೧೪ ಆಧ್ಯಾತ್ಮಿಕಾದಿ ತಾಪದೆ—ತಾಪತ್ರಯಗಳಲ್ಲಿ ಸಿಕ್ಕಿ ನೊಂದಿರುವನಷ್ಟೆ? ಓದಿದ ಬಳಿಕಲಾದರೆ, ನಿರಂತರದ ಅಭ್ಯಾಸ, ಸ್ವಭಾವದಿಂದ ಮರಿಯುವ ವಿಸ್ಮೃತಿ, ಅಧಿಕ ವಿದ್ಯೆಯುಳ್ಳವರಿಂದ ತನಗೆ ಸೋಲು, ಕಡಿಮೆಯುವರಿಂದ ಗೆಲವು, ಸಮರಲ್ಲಿ ಬಸುರುಬೇಗೆ, ಓದು ಸಾಲದವರನ್ನು ಕಂಡರೆ ಗರ್ವಿಸುವದು—ಇವುಗಳಿಂದ ಮನುಷ್ಯನು ಎಂದಿಗೂ ಮೊದವಂ—ಸುಖಿಸುವದಕ್ಕೆ ಇಲ್ಲವಾದ್ದರಿಂದ ಅನಾತ್ಮವಿದ್ಯೆಗಳಿಂದ, ತತ್ತ್ವಾದರದೊಳು–ತತ್ತ್ವಪಕ್ಷಪಾತಿಯಾದ ತನಗೆ ಸಿಗಬೇಕಾಗಿದ್ದ ಆತ್ಮ ವಿಶ್ರಾಂತಿಗೆ ಬದಲು, ಪಿರಿದಾಗಿ+ಶೋಕವನು+ಐದಿದನು+ಅದರಿಂದ+ಇತರನಯಂ—ಆತ್ಮವಿದ್ಯೆಗೆ ಹೊರಗಿನ ಶಾಸ್ತ್ರಗಳು ಶ್ರಮಹೇತುವಾದ್ದರಿಂದ ವ್ಯರ್ಥಂ+ಎಂದು ವಿವೇಕಿಸಲಕ್ಕುಂ (ಛಾಂದೋಗ್ಯ ೭).

೧೫ ಕಿಂಕರತೆಯನ್ನು ಹೇಳುವ ದುರ್ಮತಗಳನ್ನು ತನ್ನ ಬದಿಗೊತ್ತರಿಸಿ, ಜೀವ ಜಗತ್ತುಗಳ ಪರಮಾರ್ಥವನ್ನು ಗೊತ್ತುಪಡಿಸುತ್ತ, ತನ್ನ ಶಂಕರತೆಯನ್ನು ನೆನಪಿಸುವ

ಖಿಲ ಮತವ ಖಂಡಿಸುವ ತತ್ತ್ವೋ ।
ಜ್ವಲ ನಯನ, ಕಿಟಿಯಂತೆ ಧರೆಯಲಿ ।
ಕಳಿವಕಲ್ಪಕ್ಕಿಂದ ನಂದಿಪ್ರೊಲಿರ್ಪತ್ರುಟಿಲೇಸು ! ॥ ೧೫ ॥

ಸತ್ಯನಾತ್ಮನು ಸಕಲ ವೆಲ್ಲವ ।
ಸತ್ಯವೆಂಬುದೆ ಸದ್ವಿವೇಕವ ।
ಡತ್ಯಧಿಕ ಪದವಿಂದ ತನ್ನಿರವೆಂತೆನಲ್ಪರಮಂ ॥
ಪ್ರತ್ಯಯಾಸ್ಪದ ನಮಲ ನವ್ಯಯ ।
ನಿತ್ಯ ಶುದ್ಧ ನಿರಂಜನನು ನಿ ।
ರ್ವ್ಯತ್ಯರ್ಗಚಿನ್ಮಾತ್ರಂ ಪುರತ್ರಯ ದಾಣ್ಮನೆಸದಿರ್ಪಂ! ॥ ೧೬ ॥

ಅವನೆ ಯವಿಕಾರನು ಜನನ ಸಂ ।
ಭವ ವಿದೂರನು ಸಾಕ್ಷಿ ಸರ್ವ ।
ಕ್ಕವನೆ ಸಂಸಾರಿಕ ವಿಷಯದಿಂ ಲಿಪ್ತನಲ್ಲೆಂದು ॥

---

ವೇದಾಂತವೊಂದನ್ನೇ ಜಿಜ್ಞಾಸುವು ಗುರುವಿನಲ್ಲಿ ಕಲಿಯಬೇಕು. ಇದರಿಂದ ತನಗೆ ಶಾಶ್ವತ ತೃಪ್ತಿಯು ಸಿದ್ಧಿಸುವದು. ಏಕೆಂದರೆ ತೃಪ್ತಿಯು ಗಂಧವಿಲ್ಲದೆ, ತನ್ನನ್ನು ಗುಲಾಮರನ್ನಾಗಿಸುವ ಆ ದುರ್ಮತಗಳಲ್ಲಿ ಭ್ರಮಿಸಿ ಕಾಡುಹಂದಿಯಂತೆ ಪ್ರಳಯಕಾಲವನ್ನು ಕಳೆಯುವದಕ್ಕಿಂತಲೂ ಪರಮಾರ್ಥವನ್ನು ಸೂರೆಗೊಂಡ ಪುಣ್ಯ ಪುರುಷನ ಪಾವನಜೀವಿತಕಾಲವು ನಂದಿಯಂತೆ ಲವಕಾಲದ ನೂರನೆಯ ಒಂದಂಶದ ಪರಿಮಿತಿಯಷ್ಟು, ತ್ರುಟಿ—ಅತ್ಯಲ್ಪಕಾಲವಾಗಿದ್ದರೂ ‘ ಅದೇ ಲೇಸು ’ ಎಂಬುದು ಹೇಳಬೇಕಿಲ್ಲ.

೧೬ ಕಾಲವನ್ನು ಮೀರಿದ ಆತ್ಮನೊಬ್ಬನೆ ಪರಮಾರ್ಥಸತ್ಯಸ್ವರೂಪನು, ಕ್ಷಣವಾದರೂ ನಿಲ್ಲದಂತೆ ವಿಕಾರಪಡೆಯುತ್ತಿರುವ ಆತ್ಮನಲ್ಲದ ಈ ಸಕಲವೂ ಅಸತ್ಯವು, ತೋರುಗಾಣಿಕೆಯು ಇರವಿನದು ಎಂಬುದೆ+ಸದ್ವಿವೇಕವು+ಅದು+ಅತ್ಯಧಿಕವು, ತನ್ನ+ಇರವು (ಪರಮಾರ್ಥವು)+ಎಂತೆನಲು, ಪರಾವರ—ಉಚ್ಚನೀಚ ಎಂಬ ಈ ಎಲ್ಲಕ್ಕೂ ಪರಮಂ—ಮಿಗಿಲು, ಪ್ರತ್ಯಯ—ಅರಿವಿನ ವೃತ್ತಿಗಳಿಗೆಲ್ಲಕ್ಕೂ, ಆಸ್ಪದ—ಆಶ್ರಯವಾಗಿರುವ ಸಾಕ್ಷಿಯು, ಪುಣ್ಯ ಪಾಪಮಲವಿಲ್ಲದ, ಅಮಲನು ಕ್ಷೀಣಿಸದಿರುವ ಅವ್ಯಯನು, ದೇಶ ಕಾಲ ಕಾರ್ಯಕಾರಣ ಕಲ್ಪನೆಗಳನ್ನೆಲ್ಲ ಬದಿಗೊತ್ತರಿಸಿರುವ ನಿತ್ಯನು, ಅವಿದ್ಯಾಕಾಮಕರ್ಮ ಎಂಬ ಸಂಸಾರ ಬೀಜದ ದೋಷಗಳಿಲ್ಲದ ಶುದ್ಧನು, ಅನಾತ್ಮಗಳ ತೆರೆಮರೆಗಳಿಲ್ಲದ ನಿರಂಜನನು, ಪ್ರಮಾಣಗಳಿಂದ ಉತ್ಪನ್ನನಾಗದೆ ಅವುಗಳ ವ್ಯಾಪಾರಕ್ಕೆ ಮೊದಲೆ ಸ್ವತಸ್ಸಿದ್ಧನಾಗಿರುವ ನಿರ್ವ್ಯತ್ಯರ್ಗನು ಪ್ರಮಾಣಗಳಿಂದ ಅಳೆಯಲ್ಪಡದ ಅಪ್ರಮೇಯನು, ಜ್ಞಾನಶರೀರನಾದ ಚಿನ್ಮಾತ್ರನು, ಎಚ್ಚರ ಕನಸು ಘನ ನಿದ್ರೆಗಳನ್ನು ತನ್ನ ಸತ್ತಿನಿಂದಲೆ ಆಣ್ಮನು—ಆಳುತ್ತಿರುವನು, ಇಂತು+ಎಸದಿರ್ಪಂ—ಶೋಭಿಸುತ್ತಿರುವನು.

೧೭ ಅವನೆ+ಅವಿಕಾರನು—ಹುಟ್ಟನ್ನು ಪ್ರಾರಂಭಿಸಿಬರುವ ಜನನಾದಿ ವಿಕಾರಗಳೂ ಶಿಶುತ್ವಬಾಲ್ಯ ಕೌಮಾರ ಪೌಗಂಡ ಕಿಶೋರ ಎಂಬ ಅವಸ್ಥೆಗಳೂ ಇಲ್ಲದವನು ಎಲ್ಲವನ್ನೂ

ಅವನೆ ಪೂರ್ಣನು ಸುಖಮಯನು ಬ್ರ।
ಹ್ಮವು ಸನಾತನನಚಲನಜರಂ।
ವ್ಯವಹೃತಾವಸ್ಥಾ ಪರಿಸ್ಫುರಿತನು ಶರೀರದಲಿ ॥ ೧೭ ॥

ಏತದರ್ಥ ವಿರುದ್ಧವಪ್ಪವೆ।
ಭೌತಿಕಂಗಳು, ನಿತ್ಯತೆಯು ಮೇ।
ಣಾತುಮನೊಳಾಬ್ರಹ್ಮದೊಳಗೆರಡಾಗಿರಲ್ಬಹುದೆ॥
ಆತುಮನೆ ಪರವಸ್ತು ಭೇದಂ।
ಜಾತವಾಗದವೆರಡು ಶಬ್ದಗ।
ಳೋತು ಪಾರ್ಯಾಯಿಕಗಳೇ ಪರ್ಯಾಯವಲ್ಲದೊಡಂ ॥ ೧೮ ॥

ಸಚ್ಚಿದಾನಂದಂ ಗಳಲ್ಲ।
ತ್ಯುಚ್ಚ ಭೇದಂ ಪದಗಳಲ್ಲಿ ಸ।
ಮುಚ್ಚಲ ದ್ರವ್ಯತ್ವದಿಂ ತೋರಿದರು ತನ್ನಲ್ಲಿ॥

---

ನೇರಾಗಿ ನೋಡುವ ಸಾಕ್ಷಿಯು, ....ವಿಷಯದಿಂ—ಭೋಗವಿಕಾರನಿರ್ಲೇಪನು, ಸಂಪೂರ್ಣ ಅನಾತ್ಮಕ್ಕೆ ಇಂಬೆನಿಸಿ ಆ ಅನಾತ್ಮರೂಪದಿಂದ ತೋರುವ ಪೂರ್ಣನು, ಸನಾತನನು+ಅಚಲನು+ಅಜರಂ—ಮುಪ್ಪಿಲ್ಲದವನು, ನಿತ್ಯವೂ ಪ್ರತಿಯೊಬ್ಬರಿಗೂ ಬಂದು ಹೋಗುತ್ತಿರುವ ಎಚ್ಚರಾದಿ ಅವಸ್ಥೆಗಳನ್ನು ಈ ಶರೀರದಲ್ಲಿಯೆ, ವ್ಯವಹೃತ–ಅನುಭವಕ್ಕೆ ಬರುವಂತೆ ಮಾಡಿ ಪರಿಸ್ಫುರಿತನು—ಬೆಳಗುತ್ತಿರುವವನು.

೧೮ ಏತತ್(ಈ)+ಅರ್ಥ+ವಿರುದ್ಧವು+ಅಪ್ಪವೆ—ಹೀಗಲ್ಲದವುಗಳೇ, ಭೌತಿಕಂಗಳು—ಭೂತಕಾರ್ಯದೇಹಾದ್ಯನಾತ್ಮಗಳು, ಮೇಣ್+ಆತುಮನೊಳು (ಒಂದು)+ಆ ಬ್ರಹ್ಮದೊಳು ಮತ್ತೊಂದು ಎಂದು ನಿತ್ಯತೆಯು ಎರಡಿರುವುದಿಲ್ಲವು; ....ಪರವಸ್ತು—ಸಾಕ್ಷಾದ್ಬ್ರಹ್ಮವಲ್ಲವೆ, ಭೇದಂ+ಜಾತಂ+ಆಗದು—ಭೇದವಾಗುವದಿಲ್ಲ. ಆತ್ಮ ಬ್ರಹ್ಮ ಶಬ್ದಗಳು+ಓತು—ಒಲಿದು ಒಂದರ್ಥಹೇಳುವ–ಪರ್ಯಾಯಗಳೆಂದು ತಿಳಿಯಬೇಕು, ಹಾಗಲ್ಲದಿದ್ದರೆ ಆತ್ಮಮತ್ತು ಬ್ರಹ್ಮ ಇವುಗಳ ಸ್ವರೂಪವಾದ.—

೧೯ ಸಚ್ಚಿದಾನಂದಂಗಳಲ್ಲಿ (ಯೂ ಬಿಡದೆ.. ಭೇದವೆ)+ಅತ್ಯುಚ್ಚ—ಮೇಲೆದ್ದು ಕಾಣಬೇಕಾಗಿತ್ತು ಹಾಗೆ ಕಾಣುತ್ತಿರುವದಿಲ್ಲವು, ಪದಗ...ರಿದರು—ಬ್ರಹ್ಮ ಆತ್ಮ ಎಂಬ ಶಬ್ದಗಳಲ್ಲಿ ಭೇದ ಕಂಡರು, ತನ್ನಲ್ಲಿ–ತನ್ನ ಬ್ರಹ್ಮಾತ್ಮ ಸ್ವಭಾವದಲ್ಲಿ ಆ ಭೇದವು, ಬಿಚ್ಚದು+ಏತರಮೂಲದಿಂದಂ+ಎಂತೆಂದು—ಅದು ಹೇಗೆಂದರೆ ಭೇದವನ್ನೂ ಸಾಧಿಸುವ—ಶಾಸ್ತ್ರಗಳು, ಪ್ರಮಾಣಗಳು ಮತ್ತು ಪ್ರಮಾಣಪರೀಕ್ಷಕರು ಇವರಿಗೆ ಬೇಕೆನಿಸುವ—ದೇಶಕಾಲಗಳು, ಧರ್ಮಿಪ್ರತಿಯೋಗಿಗಳು ಅಲ್ಲದೆ, ಭಿನ್ನಧರ್ಮಿಯನ್ನು ಕುರಿತಿರುವದೋ ಆ ಭೇದವು ಅಭಿನ್ನ ಧರ್ಮಿಯನ್ನೋ? ಇರುವ ಭೇದವೋ ಅದು ಶೂನ್ಯವೋ? ಪ್ರಮಾಣಸಿದ್ಧವೊ, ಅದು ಅಸಿದ್ಧವೋ? ವಾಚ್ಯವೊ ಅಥವಾ ಅವಾಚ್ಯವೋ? ಎಂಬ ಕಲ್ಪವಿಕಲ್ಪಗಳು, ತರ್ಕವಿತರ್ಕಗಳು ಎಲ್ಲವೂ ಆತ್ಮಾನಾತ್ಮಗಳು ಒಂದರಲ್ಲೊಂದು ಕಲೆಬೆರೆತಿರುವ ಅಧ್ಯಾಸ

ಬಿಚ್ಚದೇತರ ಮೂಲದಿಂದಂ।
ನಿಚ್ಚಲಂ, ತದ್ವ್ಯರ್ಥಗಳವು ಲ।
ಸಚ್ಚತುರ ನಿಗಮಂಗಳೇತಕೆ; ಬ್ರಹ್ಮವರಿವನಸು ॥೧೯॥

ಪರವನೈದುವನೆಂದು ಅದು ಸ।
ತ್ಕರಿಸಿದುದು ರುಚಿಯನು ಮುಮುಕ್ಷುವಿ।
ಗಿರದೆ ದಹರದ ಚಿದ್ಗಗನದಲಿ ಸಚ್ಚಿದಾನಂತ್ಯಂ॥
ಪರಮವಾಗಿಹ ಬೊಮ್ಮವರಿದವ।
ಬೆರೆವನಖಿಲೇಷ್ಟಾರ್ಥವನ್ನು ಸ।
ಪರಮನಾದಾವಿಂದನಿಂದೈದಲ್ಪಡುವುದಮೃತಂ ॥೨೦॥

ಎನುವದೇನೋಪಾಸನ ಮುದಾ।
ಘನ ತರದ ಧಾತ್ವರ್ಥವೇ ಖಂ।
ಡನವ ಮಾಳ್ಪುದು ದೇಶಕಾಲಚ್ಛಿನ್ನತೆಯನದರಿಂ॥

---

ದಿಂದ ಹೊರಟರುವವು—ತಾನಲ್ಲದ ಶರೀರೇಂದ್ರಿಯ ಎಂಬ ಅನಾತ್ಮವರ್ಗವಲ್ಲಿ 'ನಾನು' ಎಂಬ ತಪ್ಪು ತಿಳಿವಳಿಕೆಯಿಂದ ಸಿದ್ಧನಾಗಿರುವ ಪ್ರಮಾತೃ (ಎಂಬ ಅಜ್ಞಾನ) ಸಿದ್ಧವು. ಆದ್ದರಿಂದ ಮಿಥ್ಯಾಸಿದ್ಧವಾದ ಈ ಮೇಲಿನವುಗಳಿಂದ ಅದ್ವಿತೀಯ ತನ್ನ ಬ್ರಹ್ಮಾತ್ಮ ಸ್ವರೂಪ ದಲ್ಲಿ ಪರಮಾರ್ಥಭೇದವನ್ನು ನಿಪುಣಮತಿಗಳಿಂದಲೂ ಬಿಚ್ಚುವಂತಿಲ್ಲ ಎಂಬಿದು ನಿಶ್ಚಲಂ— ನಿಶ್ಚಿತವಾದ ತೀರ್ಪು. ಆದ್ದರಿಂದ ದೇಹೇಂದ್ರಿಯಗಳ ವಾಚ್ಯಾರ್ಥದ ತತ್—ಆ ಭೇದವು, ವ್ಯರ್ಥವೆಂದಾಗಿ ಉಪೇಕ್ಷಣೀಯವು, ಅವು—ಬ್ರಹ್ಮ ಮತ್ತು ಆತ್ಮ ಎಂಬಿದು ತನ್ನ ಸ್ವರೂಪ ದಿಂದಲೆ ಬೇರಿದ್ದರೆ ಎಲ್ಲರಿಗೂ ಅದು ತಿಳಿದಿರುವದೆಂದಾಗಿ, ಲಸ....ೀತಕೆ—ಭೇದ ದೃಷ್ಟಿ ಯನ್ನು ಬಿಡಿಸಿ, ಶುಭದೃಷ್ಟಿಯನ್ನೀಯುವ ಸಯಕ್ತಿಕವೇದವು, ಪೂಜ್ಯಗುರುಪರಂಪರೆಯ ಉಪದೇಶವೆಂಬ ಆಗಮವು ಪ್ರಯೋಜನವಿಲ್ಲವೆಂದಲ್ಲವೆ ಆಗಬೇಕು? ಆದರೆ ಈ ಮನುಷ್ಯ ರಿಗಾಗಿ ಅಲೌಕಿಕಫಲವನ್ನು ಸಾರುತ್ತಿರುವ 'ಬ್ರಹ್ಮವಿದ್ಬ್ರಹ್ಮೈವ ಭವತಿ' 'ಬ್ರಹ್ಮವಿದಾ ಽಪ್ನೋತಿಪರಂ' 'ಆತ್ಮವಿಚ್ಛೋಕಾಂಸ್ತರತಿ' 'ಬ್ರಹ್ಮಣೋಽಽನಂದಂ ವಿದ್ವಾನ್ನಬಿಭೇತಿಕುತ ಶ್ಚನ' ಮುಂತಾದ ಶ್ರುತಿಗಳು—ಮುಕ್ತಿಯನ್ನು ಪಡೆಯಬೇಕೆಂಬ—.

೨೦ ರುಚಿ—ಇಚ್ಛೆಯನ್ನು ಹುಟ್ಟಿಸುತ್ತಿರುವವು. ಆದ್ದರಿಂದಲೆ, ದಹರದ—ಹೃದಯದ ಚಿತ್+ಗಗನ—ಆ ಸಚ್ಚಿದಾನಂತ್ಯಗಳು ಚಿದಾಕಾಶನೆಂಬ ಪ್ರತ್ಯಗಾತ್ಮನಸ್ವರೂಪಸಿದ್ಧವು ಎಂಬುದು ಸಿದ್ಧವಾಯಿತು. ಬೆರವನು—ಬೆರೆಯುವನು 'ಸೋಽಶ್ನುತೆ ಸರ್ವಾನ್ ಕಾಮಾನ್....' 'ಸ ಆಪ್ತಕಾಮೋ ಪೂರ್ಣಕಾಮಃ' ಎಂದು ಶ್ರುತಿಗಳು, ಸಪರಮನಾದ+ ಆ ವಿಂದನಿಂದ—ಪರಬ್ರಹ್ಮಸ್ವರೂಪನಾದ ಆ ತತ್ತ್ವದರ್ಶಿಯಿಂದ ಐದಲ್ಪಡುವದು+ ಅಮೃತಂ—ನಾಶವಿಲ್ಲದಾತ್ಮಪದವು.

೨೧ ಎಂಬ ಶ್ರುತಿಗಳು ಉಪಾಸನೆಯನ್ನು ಹೇಳುತ್ತೆಂಬವರ ಪಕ್ಷದಲ್ಲಿಯೂ ಬೃಹತ್ ಧಾತುನಿಷ್ಪನ್ನವಾದ ಬ್ರಹ್ಮಶಬ್ದವು—ತನ್ನ ಸ್ವಭಾವದಿಂದಲೇ ಭೂತಕಾರ್ಯಗಳಾದ

ವಿನಿಹಿತ ವಿಶೇಷಣವೆ ಪ್ರಯೋ ।
ಜನವದಕ್ಕೆ ಬ್ರಹ್ಮ ಶಬ್ದಂ ।
ವಿನಯಿಸುವದರ್ಥೈಕ್ಯದಿಂದಾ ಯಾತ್ಮಪದದಲ್ಲಿ ॥ ೨೧ ॥

ಪುರುಷನೇ ಇವನೊಬ್ಬನೇ ವಿ ।
ಸ್ತರಿಸುತಿರ್ದಂ ಮೊದಲು ಹಿರ್ವನೆ ।
ಪರಮುನಖಿಲ ಶರೀರ ಗೂಢಂ, ( (ಡಲಿವನಿಂದ ॥
ಸು ರರರನಟ್ಟಿಗೆ ಪುಟಿತದರಿಂ ।
ಮರುತ ಮೊದಲಾದವೆನುವದರಿಂ ।
ಚರಸುಸಿಗವಾಭಿನುತಮರ್ಥದೆ ತದ್ದ್ವಯದೊಳೈಕ್ಯಂ ॥ ೨೨ ॥

ಭೇದಮೆಸವುದುಪಾಧಿಕೃತ ಸಂ ।
ವಾದವಲ್ಲದೆ ತಥ್ಯವಲ್ಲ, ಘ ।
ನಾದಿತೇಯರ ಮಾರ್ಗ ಮೆಸೆವರೆ ಘಟ ಚಕ್ಷಕಗಳಲಿ ॥
ಆದಭಾವಮುಪಾಧಿಕೃತ ಮೆಂ ।
ತೀ ದೆಶೆಯೊಳೀ ಬ್ರಹ್ಮ ಜೀವರ ।
ಭೇವಮೆಂಬುದು ಹಾಗೆಯೆಂದವಧರಿಸೆಸುವಿವೇಕಂ ॥ ೨೩ ॥

---

ದೇಹೇಂದ್ರಿಯಗಳು ತನ್ನಿಮಿತ್ತ ದೇಶಕಾಲಗಳು ಅಷ್ಟೇ ಏಕೆ? ಎಲ್ಲವನ್ನೂ ಗರ್ಭೀಕರಿಸಿಕೊಂಡಿರುವ ಎಚ್ಚರಾದಿ ಅವಸ್ಥೆಗಳ ಎಲ್ಲೆಕಟ್ಟನ್ನು ಕಳಚಿಕೊಂಡಿರುವ ಪೂರ್ಣಾರ್ಥವನ್ನು ನಮ್ಮೆಲ್ಲರ ಸ್ವರೂಪನಾದ ಪ್ರತ್ಯಗಾತ್ಮನಲ್ಲಿಯೇ ಸರಿಹೊಂದಿಸಿ, ಐಕ್ಯಾರ್ಥವನ್ನು ನೆನೆಪಿಸುತ್ತಿದೆ. ' ಉಪಾಸನೆ ' ಎಂಬಲ್ಲಿಯೂ ನಮ್ಮ ಆತ್ಮನ ಉಪ—ಸಮೀಪ ಬ್ರಹ್ಮವನ್ನು ಭಾವನೆಯಿಂದ ತಂದು ಪ್ರತ್ಯಗಾತ್ಮನೆಂದು ಭಾವಿಸಿ ಅದರಲ್ಲಿಯೇ ಸ್ಥಿರವಾಗಿ ಆಸನಂ—ಕುಳಿತಿರುವುದು ಎಂದಾಗಿ ಬ್ರಹ್ಮವು ' ನಮ್ಮ ಪರಮಾರ್ಥ ' ಎಂಬ ತನ್ನ ಸಂಪೂರ್ಣಾರ್ಥವನ್ನು ಬ್ರಹ್ಮ ಶಬ್ದವುಳ್ಳದ್ದಾಗಿರುವದು. ಅಲ್ಲದೆ ' ಉಪಾಸನಂ ಶರಾಭ್ಯಾಸೆ ಹಿಂಸಾ ಸೇವನಯೋರಪಿ ' ಎಂಬ ನಾನಾರ್ಥ ರತ್ನಮಾಲೆಯಂತೆ ' ಆಸನ ' ಮತ್ತು (ಭೇದವನ್ನು) ' ಕೊಲ್ಲುವಿಕೆ ' ಎಂಬರ್ಥಗಳೂ ಹೊಂದುತ್ತಿರುವವು.

೨೨ ಶರೀರಗಳೆಂಬ ಪುರಗಳಲ್ಲಿದ್ದು ' ಪುರುಷ 'ನಾದ ಈ ಬ್ರಹ್ಮವೊಂದೇ ಸೃಷ್ಟಿಗೆ ಮೊದಲು ಇತ್ತು, ಈ ಒಬ್ಬ ದೇವನೇ ಸರ್ವ ಶರೀರಗಳಲ್ಲಿಯೂ ಗೂಢನಾಗಿರುವನು. ಆ ಬ್ರಹ್ಮಾತ್ಮನಾದ ನಮ್ಮ ಈ ಆತ್ಮನಿಂದಲೇ ಆಕಾಶಾದಿಗಳು ಹುಟ್ಟಿದವು. ಎಲ್ಲವನ್ನೂ ಸೃಷ್ಟಿಸಿದ ಅವನೇ ಜಂಗಮ ಶರೀರಗಳಲ್ಲಿ ಹೊಕ್ಕು ಜೀವನಾಗಿರುವನೆಂದೂ—' ಸದೇವ....' ' ಏಕೋದೇವ....' ' ತಸ್ಮಾದ್ವಾ....' ' ತತ್ಸೃಷ್ಟ್ವಾ ತದೇವಾನು ಪ್ರಾವಿಶತ್ ' ಎಂಬೀ ಶ್ರುತಿಗಳು ' ಬ್ರಹ್ಮಾತ್ಮೈಕ್ಯ 'ವನ್ನೇ ಗುರಿಯಿಟ್ಟಂತೆ ಸಾರುತ್ತಿರುವವು.

೨೩ ವೇದೋಕ್ತಕ್ರಿಯೆಗಳಲ್ಲಿ ಭೇದಂ+ಎಸೆವುದು—ಕಾಣುವ ಭೇದವು ಉಪಾ....ಲ್ಲದೆ—ಉಪಾಧಿಯಿಂದ ತೋರುವದೆ ಹೊರತು ತಥ್ಯ—ಸತ್ಯವಲ್ಲವು, ಘನಾ....ಗರಿ—

ಇದುವೆ ವಸ್ತು ನಿಸರ್ಗ ಸುಜ್ಞಾ ।
ನದ ವಿಶೇಷಂ, ಯೌಗಿಕವ ಪೊಂ ।
ದದು, ಸಮರ್ಥಾಚರಣಮುಲ್ಲುಪಚಾರಪರ ಮಲ್ಲ, ॥
ಪದಪಿನಿಂ ಸ್ತುತಿಯಲ್ಲವೆಂದು ನ ।
ಯದ ಪರಿಶ್ರಮದಿಂದ ಗುರುಜನ ।
ವಿದಿತ ವರ್ತನೆಯಿಂದಲರಿದವನಪ್ಪ ಕೃತ ಕೃತ್ಯಂ ॥ ೨೪ ॥

ಭೂತ ಪಂಚಕವಲ್ಲ ತನ್ನಯ ।
ಧಾತುವಾಗಿಹ ಪ್ರಕೃತಿಯೊಡನೆ ಸ ।
ನಾತನಂ ತಾನಲ್ಲ ಕಾಲಗ್ರಸ್ತಮಾಗಿಹುದು, ॥
ಶ್ರೌತದೋಳ್ಪೇಳಿದರು ನಿತ್ಯವ ।
ಭೂತಗಳಿಗದು ನಿತ್ಯಮುಕ್ಕು ವಿ ।
ನೀತರಿಗೆ ಚಿನ್ಮಾತ್ರವೆಂಬುದು ನಿರ್ಮಲ ಶ್ರುತಿಯು ॥ ೨೫ ॥

ಅದರ ದೆಶೆಯಿಂದೊಗೆದ ನೀಚೋ ।
ಚ್ಚದ ವಿಕಾರದ ಭುವನಗಳು ತ ।
ತ್ಪದದೊಳುದಿಸುವ ಚಿತ್ರ ದೇಹಾದಿಗಳು ತತ್ಪದೆ ॥
ಪುದಿದು ಭೋಗಕೆ ಬರ್ಪ ಬಹು ವಿಷ ।
ಯದ ಪರಂ ಪರೆಯದ ಪಿಡಿದು ತಾ ।
ಪದಫಲವ ಪುಟ್ಟಿಸುವ ಕರ್ಮಗಳೆಲ್ಲ ಮಾಯಿಕವು. ॥ ೨೬ ॥

---

ಒಂದಾದ ಆಕಾಶವೆ, ಚಷಕ—(ನೀರನ್ನು) ಕುಡಿಯುವ ಬಟ್ಟಲು, ಕುಡಿಕೆ ಇವುಗಳಲ್ಲಿ, ಎಸೆದರೆ—ಹೊರತೋರಿಕೊಂಡರೆ, ಆದಭಾವಂ—ಗಡಿಗೆಯ ಆಕಾಶ ಕುಡಿಕೆಯ ಆಕಾಶ ಎಂದು ಬಂದ ಭೇದವು, ಉಪಾಧಿಕೃತಂ+ ಎಂತೊ+ ಈ ದೆಶೆಯೊಳು—ಹೀಗೆಯೆ ಜೀವೇಶ್ವರ ಭೇದವೆಂಬುದೆಂದು ಅವಧರಿಸೆ+ ಸುವಿವೇಕಂ.

೨೪ ....ನಿಸರ್ಗ....ಶೇಷಂ—ಬ್ರಹ್ಮಾತ್ಮತತ್ತ್ವವು ಸ್ವಭಾವಸಿದ್ಧವಾಗಿದ್ದಂತೆ ಅದನ್ನು ನಿಶ್ಚಯಿಸುವ ತತ್ತ್ವಜ್ಞಾನವು ಪದಗಳ ಯೋಗಶಕ್ತಿಯಿಂದ ಬರುವ ಯೌಗಿಕವಲ್ಲವು, ಕರ್ಮೋಪಾಸನೆಗಳಿಂದ ಹುಟ್ಟುವದಲ್ಲವು, ಉಪಚಾರದ ಅಥವಾ ಪ್ರಯೋಜನಕ್ಕಾಗಿ ಹೊಗಳುವ ಜ್ಞಾನವಂತು ಸರ್ವಥಾ ಅಲ್ಲ ಎಂದು, ನಯದ—ಸದ್ಗ್ರಂಥಗಳಿಂದಲೂ ಒಬ್ಬರಿಂದೊಬ್ಬರಿಗೆ ಬಂದ ಗುರೂಪದೇಶದಿಂದಲೂ ಅರಿದವನು ಕೃತಕೃತ್ಯನು.

೨೫ ತನ್ನಯ—ಆ ಆಕಾಶಾದಿಗಳಿಗೆ, ಧಾತು—ಮೂಲವಾಗಿರುವ ಪ್ರಕೃತಿಯೊಡನೆ ಜತೆಗೊಂಡವನು ತಾನಲ್ಲ, ....ಗಳಿಗೆ+ ಅದು—ಆ ಆತ್ಮನು ನಿತ್ಯಕ್ಕೂ ನಿತ್ಯನೆಂದು ಶ್ರುತಿಯಿರುವದು; ಇದೆಲ್ಲ ಹೇಗಾದರೂ ಇರಲಿ ಒಟ್ಟಿನಲ್ಲಿ, ವಿನೀತರಿಗೆ—ಜ್ಞಾನಸಾಧನಗಳಿಂದ ಸಂಸ್ಕೃತರಿಗೆ ಚಿನ್ಮಾತ್ರವಲ್ಲದೆ, ಅನ್ಯರಿಗೆ ತತ್ತ್ವ ಸಿಕ್ಕುವದಿಲ್ಲವೆಂಬುದು ಶ್ರುತಿಸಿದ್ಧವು.

೨೬ ....ಯಿಂದ+ ಒಗೆದ—ಹುಟ್ಟಿದ ನೀಚ+ ಉಚ್ಚದ—ಮೇಲ್ತರದ, ಚಿತ್ರ—

ಸುರರ ಚಾಪಕೆ ಮಿಂಚಿನಲ್ಲಿ ತೊ।
ಡರಿಸಿ ಹೆದೆಯನು ಚಾಚಿ ಜಾರಿದ।
ಭರುಚಿಯಾಶುಗಮಂ ಪೊಡೆಯೆ ಯವಕೇಶಿನಿಯ ಪುತ್ರಂ॥
ಮರುತ ಸರಣಿಯೊಳಗೆಸೆವ ಸೂರ್ಯನ।
ಕಿರಣಕಪ್ಪುದೆ ಕೇಡು, ಮಾಯಾ।
ಸ್ಫುರಣೆಯಿಂದೊಂದಾಗಲರಿಯದು ಸತ್ಯತತ್ತ್ವದಲಿ ॥ ೨೭ ॥

ಮುಳ್ಳು ಮೊನೆಯೂರಲ್ಕೆ ಸಂದಂ।
ತಳ್ಳಿರುವ ಮಳೆಗಾಲದಲ್ಲಿಯ।
ಬಳ್ಳಿ ಮಿಂಚಿನ ಮೋಡಸಕಲದಿಶಾ ಪ್ರದೇಶಗಳಂ॥
ನಿಲ್ಲದಾವಸಿದೊರ್ಡದರೊಳ।
ಗುಳ್ಳ ನೀರಿಂ ನೆನೆವುದೇ, ದಿವಿ।
ಷಲ್ಲಸನ್ಮಾರ್ಗಂ ವಿಕರಿಪುದೆ ಖಂಡವೈದುವುದೆ ॥ ೨೮ ॥

ಉಕ್ತಸಪ್ತಾವರಣ ಭಾವಾ।
ವ್ಯಕ್ತದಿಂದುಂಟಾದ ದೇಹ।
ವ್ಯಕ್ತಿಗಳಿಗಾಗುವದೆ ನಿತ್ಯವಿದೆತ್ತಣ ವಿಲಾಪಂ॥
ಯುಕ್ತಮೆಂದುಸಿರಿದರೆ ಶಾಸ್ತ್ರದ।
ಶಕ್ತಿಗವಸಾನಂ, ಕ್ರಿಯಾಫಲ।
ರಕ್ತಿಯಲಿ ವಾಸ್ತವದೊಳಾಗದು ನಿಜ ಹೃದಯ ಮದಕೆ ॥ ೨೯ ॥

---

ಬಗೆಬಗೆಯು, ಪುದಿದು—ಸೇರಿಕೊಂಡು, ....ಬರ್ಪ—ಬರುವ, ಪಿಡಿದು—ಆಶ್ರಯಿಸಿಕೊಂಡು, ತಾಪದ—ಶರೀರೇಂದ್ರಿಯಗಳನ್ನು ಬಸವಳಿಸುವ ಕರ್ಮಗಳು ದೇಹಾದಿಗಳಲ್ಲಿ 'ನಾನು' ಎಂಬ ಆತ್ಮಾನಾತ್ಮ ಅಧ್ಯಾಸವನ್ನಿಟ್ಟುಕೊಂಡೇ ನಡೆಯಿಸಬೇಕಾಗಿ ಬಂದಿರುವದರಿಂದ ಅವು ಅಸತ್ಯವೆಂಬುದು ಅನಿವಾರ್ಯವು.

೨೭ ಕಾಮನಬಿಲ್ಲಿಗೆ ಮಿಂಚಿನಬಳ್ಳಿಯ ಹೆದೆಯನ್ನು ಮಾಡಿ ಅದರಲ್ಲಿ ತಗುಲಿಸಿದ ಆಕಾಶದ ಹೊಂಬಣ್ಣದ ಬಾಣವನ್ನು ಸೂರ್ಯನಿಗೆ ಬಂಜೆಯಮಗನು ಹೊಡೆಯಲು ಅದರಿಂದ ವಾಯುಮಾರ್ಗವಾದ ಆಕಾಶದಲ್ಲಿ ಸಂಚರಿಸುವ ಆ ಸೂರ್ಯನಕಿರಣಕ್ಕೆ ಕೇಡಿಲ್ಲದಿರುವಂತೆ; ಇಂದ್ರಿಯ ಜ್ಞಾನವೆಂಬ (ಬೃ...೨-೫-೧೯, ಭಾಷ್ಯವೂ, ಯಾಸ್ಕರ ನಿಘಂಟು) ಮಾಯೆಯವಿಕಾರದಿಂದಲೂ ಆತ್ಮತತ್ತ್ವದಲ್ಲಿ ವಿಕಾರದ ಲೇಶವೂ ಇರುವದಿಲ್ಲ (ಬ್ರಹ್ಮಸೂತ್ರ...ಅಧ್ಯಾಸಭಾಷ್ಯ);

೨೮ ಸಕಲ+ದಿಶಾ—ದಿಕ್ಕುಗಳನ್ನೆಲ್ಲ ನಿಲ್ಲದೆ+ಅವರಿಸಿದೊರ್ಡೆ—ತುಂಬಿಕೊಂಡಿರಲು, ದಿವಿಷತ್+ಲಸನ್ಮಾರ್ಗಂ—ಆಕಾಶವೇನಾದರೂ ಅದರಿಂದ ಖಂಡಂ+ಐದು (ಹೊಂದು)ವದೆ.

೨೯ ಮಹತ್ತು, ಅಹಂಕಾರ, ಭೂತತನ್ಮಾತ್ರೆ, ಕಾರ್ಯವಾದ ದೇಹಾದಿಗಳು ನಿತ್ಯವಲ್ಲದ್ದರಿಂದ ಎಂದಿಗೂ ಆತ್ಮನಲ್ಲಿ ವಿಕಾರವನ್ನು ಮಾಡಲಾರವಾದರೂ ಅದು ಯುಕ್ತ

ಅನುಭವಿಸ ಬೇಕಿದನೆನುತ ಪರ।
ಜನಪದದೊಳಾರ್ಜನೆಗೆ ಬಹ ವ।
ಸ್ತು ನಿಚಯಗಳೆಷ್ಟುಂಟು ಮಾಯಿಕವುವಿದರ ಕ್ರಮದಿಂ॥
ಅನುಭವಿಪನನುಭಾವ್ಯಗಳ ಯೋ।
ಜನತೆಯಿಂ ಖಂಡೀ ಭವಿಸಿ ಬಾ।
ರನು ಸಮುಸ್ತಾವಸರಗಳಲನುಭೂತನೆಂದೆನಿಸಿ ॥೩೦॥

ಕಾಲ ಕರ್ಮ ಪ್ರಕೃತಿಪರಮಾ।
ಣ್ವಾಳಿಗಳು, ಭಿನ್ನಂಗಳಾದೀ।
ರೇಳು ಲೋಕಂಗಳು, ಕುಲಾಚಲಗಳು ಸಮುದ್ರಗಳು॥
ಮೂಲಜಲ ಕನಕ ಸ್ವರೂಪ ಮ।
ರಾಳ ವಾಹನ ಕೋಶ, ಕಚ್ಛಪ।
ಕಾಲಕೂಟರದನ ದಿಗಿಭಗಳು ತೋರಿಕೆಡುತಿಹವು ॥೩೧॥

(ವೇಸರಿ) ೧+ ಎಂದು+ ಉಸಿರಿದರೆ ಇದೆತ್ತಣವಿಲಾಪಂ—ಎಲ್ಲಿಯರೋಪನ! ಏಕೆಂಪರೆ ಹಾಗೆನ್ನುವಲ್ಲಿ ಶಾಸ್ತ್ರಪಶಕ್ತಿಗ+ ಅವಸಾನಂ—ಶಾಸ್ತ್ರಗಳು ನಿಸ್ಸಾರವೆಂದೂ ಮುಕ್ತಿಯಿಲ್ಲ ವೆಂಮೂ ಆಗಿಬಿಡುವದು; ಕ್ರಿಯಾಫಲರಕ್ತಿ—ಕ್ರಿಯೆಗಳಲ್ಲಿಯೂ ತತ್ಫಲಗಳಲ್ಲಿಯೂ ಶಾಸ್ತ್ರಕ್ಕೆ ಹೃದಯವಿಲ್ಲವೆಂಬುದನ್ನು ಹಿಂದೆಯೇ ವಿವರಿಸಿರುತ್ತದೆ.

೩೦ ಪರಜನಪದ—ಭೋಗಕ್ಕೋಸ್ಕರ ವಿಷಯಗಳನ್ನು ಕೂಡಿಸುವ ಜನರ ಮಾರ್ಗ ದಿಂದ, ...ಬಹ—ಬರುವ ವಸ್ತುಜಾಲವೆಲ್ಲವೂ, ಆತ್ಮನುಮಾತ್ರ ಈ ಭೋಗ್ಯಭೋಕ್ತೃಗ ಳಿಂದ ಎಂದಿಗೂ, ಖಂಡೀಭವಿಸಿಬಾರನು—ಖಂಡಿಸನು, ವಿಕಾರವನ್ನು ಹೊಂದಿ ಶೀಳಾಗುವ ದಿಲ್ಲವು ಹೇಗೆಂದರೆ ಅನುಭವರೂಪನಾದ ಈ ಆತ್ಮನು ಪ್ರಮಾಣಗಳಿಗೆ ಮೊದಲೇ ಸಿದ್ಧನಾಗಿ ರುವದರಿಂದ ಪ್ರಮಾಣಗಳಿಂದ ಪ್ರಮೇಯನಾಗಿ ಅಳಿಯಲ್ಪಡುವದು ಅವನಲ್ಲಿಲ್ಲವಾದ್ದರಿಂದ ಅವನು ಅಪರಿಚ್ಛೇದ್ಯನು—ಅಪ್ರಮೇಯನು (ಗೀತಾ ೨-೧೮-ಭಾಷ್ಯ) ಆಗಿರುವನು.

೩೧ ಜ್ಯೌತಿಷ್ಯಶಾಸ್ತ್ರದಕಾಲ, ಪೂರ್ವಮೀಮಾಂಸಕರ ಕರ್ಮ, ಸಾಂಖ್ಯರ ಪ್ರಕೃತಿ. ನ್ಯಾಯವೈಶೇಷಿಕರ ಪರಮಾಣುಗಳು ಅಷ್ಟು ಏಕೆ? ಭೂಃಭುವಃ ಸುವಃ ಮಹಃ ಜನಃ ತಪಃ ಸತ್ಯಃ ಎಂಬಿವುಗಳು ಮತ್ತು ಅತಲ ವಿತಲ ಸುತಲ ತಲಾತಲ ರಸಾತಲ ಮಹಾ ಪಾತಾಳ ಎಂಬ ಅಧೋಲೋಕಗಳು ಎಲ್ಲವೂ ಕೆಡುತ್ತಿರುವಲ್ಲಿ ಇನ್ನು ಒಳವಿವರಹೇಳ ಬೇಕಿಲ್ಲವಾದರೂ ಮಂದಬುದ್ಧಿಗಳಿಗೆ ಸುಲಭವಾಗಲೆಂದು ವಿವರಿಸುತ್ತಿರುವರು—ಭೂಮಿಯ ಸಪ್ತದ್ವೀಪಗಳು, ಅವುಗಳಲ್ಲಿನ ಒಂದೊಂದರಲ್ಲಿನ ನವನವಖಂಡಗಳು, ಈ ಖಂಡದ— ಹಿಮಾಲಯ ನಿಷಧ ವಿಂಧ್ಯ ಮಾಲ್ಯವಂತ ಪಾರಿಯಾತ್ರ ಗಂಧಮಾದನ ಹೇಮಕೂಟ ಎಂಬ ಕುಲಪರ್ವತಗಳು, ಲವಣ ಇಕ್ಷು ಸುರಾ ಸರ್ಪಿ ದಧಿ ಕ್ಷೀರ ಶುದ್ಧೋದಕ ಎಂಬ ಸಮುದ್ರಗಳು ಕನಕ...ಹನ—ಬ್ರಹ್ಮನಕೋಶವು ಭೂಮಿಯನ್ನು ಹೊತ್ತಿರುವ ಕಚ್ಛಪ— ಅಷ್ಟಕೂರ್ಮಗಳು, ಕಾಲಕೂಟರದನ—ಆದಿಶೇಷನು, ದಿಗಿಭ—ಅಷ್ಟದಿಗ್ಗಜಗಳು.

ಸುರಪಮುಖ ದಿಕ್ಪಾಲಕರು ಕಿಂ।
ಪುರುಷಮುಖ ತದ್ಯೋನಿ ಭಿನ್ನರು,।
ಮರುತ ನಿಗ್ರಹ ಪರಿದಯೋಗೀಶ್ವರರು, ಮುನಿನಿಕರಂ॥
ತರಣಿಮುಖ ಖೇಟಗಳು, ತಾರಾ।
ಸರಣಿ ಜನರಾದಿ ಬನವಾಸಿಗ।
ಳುರುಬಲರು ದೈತ್ಯೇಯರೆಲ್ಲರು ಕಾಲಕಿಂಕರರು ॥ ೩೨ ॥

ಮರುತ ನಿಂ ಶೋಷಿಸದೆ, ಸೂರ್ಯನ ।
ಕಿರಣದಿಂ ಬೆಂಡಾಗದೇ, ಹಿಮ ।
ಕರನ ಕಾಂತಿಯ ಮೂಲದಿಂದೊಗ್ಗೊಡೆಯದೊಡನುಂಬ ॥
ಶರಗಳಿಂ ಕೊಳೆಯದೆ ಕರಗದೆ,।
ಉರಿಯ ನಾಲಿಗೆಯಿಂದ ಬೇಯದೆ ।
ಇರುವ ವಸ್ತುಗಳೆಲ್ಲ ಕಾಲಕ್ಕರಗಿ ಹೋಗುವವು ! ॥ ೩೩ ॥

ಬರಸೆಳೆಯೆ ಕೈಯಿಲ್ಲ, ಬಾಯೊಳ ।
ಗುರವಣಿಸಿಯುಗಿಯಲ್ಕೆ ಹಲ್ಲಿ।
ಲ್ಲರಗಿಸಿಕೊಳಲ್ಗಾಢವಹ ಜಠರಾಗ್ನಿಯೊಂದಿಲ್ಲ ॥
ಸರಸವಾಗಿರಲರಸವಾಗಿರ।
ಲುರೆ ಕಟು ಕಠೋರಂಗಳಾಗಿರೆ ।
ಇರುವ ಈ ದ್ರವ್ಯಂಗಳನು ಬಿಡದುಂಬನೀ ಕಾಲಂ ! ॥ ೩೪ ॥

ಮೊರದ ಪಾಂಗಿಂ ಧಾನ್ಯವಂ ಸ್ತ್ರೀ ।
ಕರಿಸಿ, ಜಲ್ಲಡಿಯಂತೆ ಹೊಟ್ಟಂ।
ವರಿಸಿ ಈ ಕರ್ಮಂಗಳೊಂದಾನೊಂದು ಕಾಲದಲಿ॥

---

೩೨ ಸುರಪ—ಇಂದ್ರನೇ, ಮುಖ—ಮುಂತಾದ ಅಗ್ನಿ ಯಮ ನೈರುತ್ಯ ವರುಣ ವಾಯು ಕುಬೇರ ಈಶಾನರು ಎಂಬ ದಿಕ್ಪಾಲಕರು, ಕಿನ್ನರ ಕಿಂಪುರುಷ ಗಂಧರ್ವಾದಿಗಳು, ಮರುತ—ವಾಯುವನ್ನು ತಡೆಗಟ್ಟುವ ಯೋಗಿಗಳು, ತರಣಿ ಮುಖಖೇಟಗಳು—ಸೂರ್ಯಾದಿ ನವಗ್ರಹಗಳು, ಭೂಮ್ಯಾದಿಮಂಡಲಗಳು, ತಾರಾಸರಣಿ—ನಕ್ಷತ್ರಮಾರ್ಗದಿಂದ ಭೂಮಿಯವರೆಗೆ ಸಂಚರಿಸುವ ಜನರು ಅಲ್ಲದೆ, ವನವಾಸಿಗಳು, ಉರು—ಹೆಚ್ಚಿನಬಲಿಷ್ಠರಾದ ದೈತ್ಯದಾನವರು ಎಲ್ಲರೂ ಅಧ್ಯಾಸದಸರಿಯಾಗಿರುವ ಕಾಲದಲ್ಲಿ ಹುಟ್ಟಿಬಂದವರಾದ್ದರಿಂದ ಒಟ್ಟಿನ ಅನಾತ್ಮರಾಶಿಯೆಲ್ಲವೂ ಮಿಥ್ಯೆಯೇ (ಬ್ರಹ್ಮಸೂತ್ರ ಅಧ್ಯಾಸ ಭಾಷ್ಯ).

೩೩ ಹಿಮ...ಂದ—ಚಂದ್ರನ ಶೀತಕಿರಣದಿಂದ, ಒಗ್ಗೊಡೆಯದೆ—ತನ್ನವಯಗಳ ರಾಶಿಯಲ್ಲಿ ಸಡಲಿಸಿ ಚದುರುವ ವಿಕಾರವನ್ನು ಹೊಂದದಿರುವ ಪದಾರ್ಥಗಳೆಲ್ಲ, ಒಡನೆ+ಉಂಬಶರಗಳಿಂ—ತನ್ನನ್ನು ಕೂಡಿದವಸ್ತುವನ್ನು ಕೂಡಲೆ ತೋಯಿಸಿ ನೆನೆಯಿಸಿಬಿಡುವ ನೀರಿನಿಂದ, ಉರಿನಾಲಿಗೆ—ಬೆಂಕಿ.

ಧರಿಸುವವು ಗುಣವತ್ಪದಾರ್ಥವ ।
ನಿರದೆ ದೋಷಿ ಪದಾರ್ಥಮಂ ವಹಿ !
ನಿರುವ ವಿವಕೆ ಯಥಾರ್ಥ ಲಕ್ಷಣವಿಲ್ಲ ನೋಡಿದರೆ ! ॥ ೩೫ ॥

ಮೊರಟುಕಲ್ಲೀ ಕರ್ಮತತಿ ವಿ ।
ಸ್ಫುರಿತ ಬುದ್ಧಿಯ ಸಾಣೆಯಿಂ ಕ ।
ತ್ತರಿಸಿ ತಿದ್ದಿದರಾಗ ನಯವಾಗುವದು, ಕಾಂತಿಯನು ॥
ವರಿಸುವುದು, ಮೆಣಾವ ಸಜ್ಜನ ।
ಪುರುಷರಿಲ್ಲಿರಲೆಳಸುವರು ಬಂ ।
ದಿರಲು ಯೋಗ್ಯತೆ, ಬಿಡದು ಕಾಠಿನ್ಯವನು ಸಹಜವನು ॥ ೩೬ ॥

ತಾನು ಮಾಡಿದ ಫಲ ವನಿತ್ಯವ ।
ನೇ ನಿಯಮದಿಂ ಪಿಡಿವುದಲ್ಲದೆ, ।
ಮಾನವರೊಳಾಗಿರದು ನಿತ್ಯಂ ತುಚ್ಛವಾಗಿರ್ದುಂ; ॥
ಏನಿದಕ್ಕಂ ಪ್ರತ್ಯವಾಯ ಶ ।
ತಾನು ಶತಿಕಗಳುಂಟು ! ಬಿಡದಿವ ।
ರಾನುಕೂಲ್ಯವನಂತರಾಯ ಶತಂಗಳಿರುತಿಹವು ॥ ೩೭ ॥

ಫಲಗಳೆಲ್ಲವು ಕರ್ಮಸಾಧ್ಯವು ।
ಫಲಿಸಬೇಕಾಗಿರ್ದರವು ದು ।
ರ್ಬಲ ಸುರೇಶ್ವರರ ಪ್ರಸಾದಂ ಬಂದಲ್ಲದೊದಗದು ॥
ಫಲ ವಿಘಾತಕರುಂಟು, ಸಕಲ ರೊ ।
ಳೊಲಿದಿರುವುದಾಕಾಂಕ್ಷೆಯೊಬ್ಬರ ।
ಬಳಲಿಸಿದರೀ ಪ್ರಾಣಪರ್ಯಂತಂ ಬಹುದು ಹಾನಿ ॥ ೩೮ ॥

---

೩೬ ತತಿ–ರಾಶಿ, ವಿಸ್ಫುರಿತ-ಅರಿವಿನಿಂದ ಬೆಳಗುವ, ನಯ–ತನ್ನಲ್ಲಿ ಒರಟು ಕಳೆದುಹದವಾಗುವದು, ....ಪುರುಷರು+ಇಲ್ಲಿರಲು–ವಿವೇಕಾದಿಗಳೆಂಬ ಜ್ಞಾನಯೋಗ್ಯತೆಯು ತನಗೆ ಬಂದಿದ್ದರೂ ಪ್ರವೃತ್ತಿಮಾರ್ಗವಾದ ಈ ಸಂಸಾರದಲ್ಲಿಯೇ ತಾವಿರಬೇಕೆಂದು ಯಾರು ತಾನೆ, ಎಳಸುವರು–ಬಯಸುವರು? ಏಕೆಂದರೆ ಅನಿತ್ಯಫಲವನ್ನು ಕೊಡುವದೆಂಬ ತಮ್ಮ ನೈಜವಾದ ಕಾಠಿನ್ಯವನ್ನು ಶುಭಕರ್ಮಗಳೂ ಬಿಡುವಂತಿಲ್ಲವು ಅಲ್ಲದೆ–

೩೭ ಪ್ರತ್ಯವಾಯಶತಾನುಶತಿಕಗಳುಂಟು–ಪಾಪದೋಷಗಳು ಬೇರೆ ಈ ಕರ್ಮಗಳಿಗೆ ನೂರುನೂರುಗಟ್ಟಲೆಯಾಗಿ ಬಿಡದೆ ಅಂಟುವವು, ಬಿಡದು+ಇವರ+ಆನುಕೂಲ್ಯವನು–ಇವು ತನಗೆ ಅನುಕೂಲಿಸದಂತೆ ನಡುವೆ ಬರುವ ನೂರಾರು, ಅಂತರಾಯ-ವಿಘ್ನಗಳೂ ಸದಾ ಕಾದುಕೊಂಡಿರುವವು.

೩೮ ಸಂಸಾರದ ಫಲಗಳಲ್ಲಿ ಯಾವದಾದರು ಅದು ಕರ್ಮದಿಂದಲೆ ಬರಬೇಕು, ....ಬಂದಲ್ಲದೆ+(ಒಂದಾದರು ತನಗೆ) ಒದಗದು. ಸಕಲರೊಳು+ಒಲಿದಿರುವದು+

ಹಾನಿಯೊಕ್ಕಾಡುತ್ತಿರಲ್ಕದ ।
ಮಾನಸಕ್ಕೆ ತರದೆ, ಸುಯತ್ನ ವಿ ।
ತಾನಮಂ ಮಾಡುತ್ತಿರಲ್ಕದು ಕಾಲವ ಎಣಿಸದೆ ॥
ತಾ ನೆರೆಯದಾ ಕಾಲ ಕರ್ಮ ।
ಕ್ಕಾನುಕೂಲ್ಯತೆ ಬಂದೊಡಾಗದು ।
ಆನವ ಪ್ರಾಬಲ್ಯವಿಲ್ಲದೆ ಭೋಗಕನುಕೂಲಂ ॥ ೩೯ ॥

ಭೋಗಿಸಿದ ಭೋಗಿಗಳು ಕಾಮ ವಿ ।
ಯೋಗವೈದದೆ ನಡುವೆ ಬಂದರೆ ।
ಭೋಗಕುಪಹತಿ, ಬಹುಲ ಶೋಕವ ಗೈದರೆಂಬಲ್ಲಿ ॥
ಆಗಮಂಗಳಲಾದಿ ರಾಯರ ।
ಪೂಗದೊಳಗಾ ಕಥೆಯ ಕೇಳು, ಸ ।
ರಾಗಮುಂಟೇ ಮನದಣಿಯಲನುಭವಿಸಲೀ ಸ್ಥಲದೆ ॥ ೪೦ ॥

ಹೇಳಿದುದ ತಾ ಕೊಡುವುದಲ್ಲದೆ ।
ಕಾಲ ಚೋದಿತ ಕರ್ಮಫಲವದ ।
ನೋಳವಿಸಿಯುಣುವಾಗ ಸೇರುವ ವಿಘ್ನ ಶತಕಗಳಂ ॥

---

ಆಕಾಂಕ್ಷೆ–ಪ್ರತಿಮನುಷ್ಯನಲ್ಲಿಯೂ ಬಯಕೆಯು ಸಮವಾಗಿ ಹಂಚಿಕೊಂಡಿರುವಲ್ಲಿ ಇವನು ಒಬ್ಬನಿಗೆ ವಂಚಿಸಿದರೆ ಜೀವಾವಧಿಯಾದರೂ ಅದರ ಕೇಡು ಇವನಿಗೆ ತಪ್ಪುವದಿಲ್ಲ.

೩೯ ಹೀಗೆ ಬಂದ ಹಾನಿಯು ಇವನ ಒಳಹೊಕ್ಕು ಆಡುತ್ತಿರಲ್ಕೆ+ಅದ-ಅದನ್ನು ವಿತಾನ—ಅನೇಕ ಪ್ರಯತ್ನಗಳನ್ನು ತಾ—ಆ ಕರ್ಮಗಳಲ್ಲಿ ಒಂದಾದರೂ ಫಲಕ್ಕೆ ಪಕ್ವವಾಗಿ, ನೆರೆಯದು—ಯೋಗ್ಯವಾಗದು, ಏಕೆಂದರೆ ಅದು ಕಾಲಕರ್ಮಗಳನ್ನು ನಿರೀಕ್ಷಿಸುತ್ತಿರುವದು. ಅವುಗಳಿಂದಲೂ ತನಗೆ ಭೋಗ ಬರುವಂತಿಲ್ಲ. ಹೇಗೆಂದರೆ ಆ ಕರ್ಮಭೋಗಕ್ಕೆ ಅನುಕೂಲವಾದ ದೇಹೇಂದ್ರಿಯ ಬಲವು ತನಗಿರಬೇಕಷ್ಟೆ? ಹೀಗೆ ಒಟ್ಟಿನಲ್ಲಿ ಸಂಸಾರ ಸುಖಕ್ಕೆ ರಾಶಿರಾಶಿಯಾದ ಜಯಶೀಲ ಪ್ರಯತ್ನಗಳು, ಕಾಲಕರ್ಮಗಳು, ತನ್ನಲ್ಲಿ ಶರೀರೇಂದ್ರಿಯಬಲವು ಇವುಗಳಲ್ಲೊಂದಕ್ಕೆ ಕೊರತೆ ಬಂದರೂ ಭೋಗದ ಆಶೆಯೂ ತನಗಿಲ್ಲವೆಂದಾಯಿತು.

೪೦ ಕಾಮವಿಯೋಗಂ+ಐದದೆ—ತನ್ನಿಚ್ಛೆಯು ಪೂರೈಸುವದರೊಳಗೆ ನಡುವೆಬಂದ, ಭೋಗಕೆ+ಉಪಹತಿ—ಅಡ್ಡಿಗಳಿಂದ, ಬಹುಲ—ಬಹುವಾಗಿ, ಆಗಮಂ—ಪುರಾಣೇತಿಹಾಸ ಶಾಸ್ತ್ರಗಳಲ್ಲಿ, ಆದಿರಾಯರಪೂಗ—ಹಿಂದಿನರಾಜರ ಗುಂಪಿನೊಳಗೆ ಸೇರಿದವರ, ಆ ಕಥೆಯನ್ನು ಕೇಳಿದರೆ ಮನಃಪೂರ್ತಿಯಾಗಿ ತಾನು ಅನುಭವಿಸುವದಕ್ಕೆ ಈ ಸ್ಥಲದೆ—ಕರ್ಮಫಲಗಳ ಈ ಸಂಸಾರದಲ್ಲಿ ತನಗೆ ಸರಾಗಂ+ಉಂಟೆ? ಸಂಪೂರ್ಣ ಅವಕಾಶವೆಂದಿಗೂ ಇರುವದಿಲ್ಲ ಎಂದರ್ಥವು.

೪೧ ಕಾಲನಿಂದ ಚೋದಿತ—ನಿಯಮಿಸಲ್ಪಟ್ಟು ಪಕ್ವವಾಗಿ ಬಂದ ಕರ್ಮಫಲ

ಕಾಲಲೊಡೆಯುಬ್ಬಲುಪಕ್ಕುಂ ।
ಟೀ ಲಯುಂ ತಾಂ ಗಮಿಸಲೆಳಸುವ ।
ದಾಳಿದೊಡೆಯನ ಭೋಗವೊಂದಾಗಿರದು ಸಾಕಲ್ಯಂ ॥ ೪೧ ॥

ಸರಸಿಜಾಸನ ಕೋಶವೆಂಬುದು ।
ಮಿರುಗುವತ್ತಿಯ ಹಣ್ಣಿದರೊಳಿರು ।
ತಿರುವ ಪುಳುಗಳೆ, ಜಂತುಗಳು ಬೀಜಗಳ ಚೇತನವ ॥
ನಿರವಧಿಕ ತಾವರದ ಭೂತ ವಿ ।
ಸರವಿದಕೆ ನೆಲೆಯೆಂತುಟಂತು ವಿ ।
ಕರಿಸುವದು ಬಾಳುವದು ಕೆಡುವದು ಕಾಲವಶದಿಂದ ॥ ೪೨ ॥

ಕರ್ಮವೇ ಎರಡಕ್ಕು ಧರ್ಮಾ ।
ಧರ್ಮರೂಪವ ತಾಳಿಯುದರೋ ।
ಳ್ಧರ್ಮಮಯವೇ ಕೊಡವುದೀ ಜೀವರಿಗೆ ಭೋಗವನು ॥
ದುರ್ಮದ ಪ್ರದನಾದ ಪಾಪದ ।
ಕರ್ಮವೇ ದುಃಖವ ಸಮರ್ಥಿಪು ।
ದಿರ್ಮೆಯೆಡೆಯಾಡುವುದು ಭುವನದೆ ಕಾಲವಶವಾಗಿ ॥ ೪೩ ॥

---

ವನ್ನು ಮೇಳವಿಸಿ (ತಾನು ಹೊಂದಿ)+ಉಣುವಾಗ (ಬಂದು ಅದಕ್ಕೆ)+ಸೇರುವ, ..ಬಲಂ+ಇವ(ಈ ಕರ್ಮ)ಕ್ಕೆ+ಉಂಟೆ? ಲಯುಂತಾಂ+ಗಮಿಸಲು+ಎಳಸುವದು-ಫಲವನ್ನು ಕೊಟ್ಟುತನ್ನ ಕೆಲಸ ಮುಗಿದಿರುವದರಿಂದ ಆ ಕರ್ಮವು ತನ್ನನಾಶದ ಗತಿಯನ್ನೆದುರಿಸುವದು, ಆಳಿದ+ಒಡೆಯನ-ಕರ್ಮವನ್ನು ಅಕ್ಕರೆಯಿಂದ ಮಾಡಿರುವ ತನ್ನ ಯಜಮಾನನ ವಾಂಛಿತ ಭೋಗಗಳಲ್ಲಿ ಒಂದಾದರೂ ಸಾಕಲ್ಯಂ—ಮನಃಪೂರ್ತಿಯಿಂದ ಅನುಭವಿಸಿ, ಆಗಿರದು—ಆಗಿಲ್ಲದ, ಅರೆಭೋಗದ ತನ್ನನ್ನು ಮಧ್ಯಮಾರ್ಗದಲ್ಲಿಯೆ ಕರ್ಮವು ಕೆಡಹಿ ತಾನು ತೊಲಗುವ ತನ್ನ ಕ್ಷೇಮವನ್ನು ಬಯಸುತ್ತಿರುವದು!

೪೨ ಈ ಬ್ರಹ್ಮಾಂಡಕೋಶ ಎಂಬುದೊಂದು ಅತ್ತಿಯ ಹಣ್ಣು, ಚೇತನವೆಂಬುದನ್ನೇ ತಮಗೆ ಬೀಜವಾಗುಳ್ಳ ಜಂಗಮ ಮತ್ತು ಅವಧಿಯನ್ನು ಮೀರಿರುವ ಸ್ಥಾವರ ಎಂಬ ಈ ಉಭಯವರ್ಗದ ಭೂತನಿಸರ—ಪ್ರಾಣಿಗಳ ಗುಂಪೆಂಬುವೆ ಅದರ ಹುಳುಗಳು ಇದಕ್ಕೆ ನೆಲೆಯು+ಎಂತುಟು+ಅಂತು—ಈ ಅತ್ತಿಯ ಹಣ್ಣಿನ ವಿಸ್ತಾರವಿರುವಷ್ಟು ಅಗಲವೂ ಆ ಉಭಯವರ್ಗವು ತನ್ನಲ್ಲಿ ವಿಕರಿಸುವದು.

೪೩ ಎರಡು(ಬಗೆಯಿಂದ)+ಅಕ್ಕು—ಆಗುವದು, ...(ಸುಖವೆಂಬ) ಭೋಗವನು (ಕೊಡುವದು). ....ಸಮರ್ಥಿಪುದು—ಘಟಿಸುವಂತೆ ಮಾಡುವದು, ಕರ್ಮವೊಂದೇ ತನ್ನಲ್ಲಿ ಇರ್ಮೆ (ಎರಡುಬಗೆ)ಯಿಂದ+ಎಡೆಯಾಡುವದು—ಜೀವರಿಂದಾಚರಿಸಲ್ಪಡುತ್ತಿರುವದು, ಭುವನದೆ—ಜಗತ್ತಿನಜೀವರಲ್ಲಿ,

೪೪ ...ಅಲ್ಲಿನ+ಮೂರ್ತಿಯು+ಎರಡು+ಅಸು—ಪ್ರಾಣಗಳಲ್ಲಿ. ವರ್ತಿಸುವ—

ಕರ್ಮದಿಂ ತನುವಪ್ಪುದಲ್ಲಿರು ।
ಮೂರ್ಮಿಯೆರಡಸುಗಳಲಿ ವರ್ತಿಸು ।
ಮೂರ್ಮಿಯೆರಡು, ಮನೀಷೆಯಲ್ಲಿರುವೂರ್ಮಿಯೆರಡಿವರ ॥
ಧರ್ಮಮುಂಟಾಗುವುದು ಕೆಡುವದು ।
ಪೇರ್ಮೆಯೆಸೆವುದು ಕಾಲವಶದಿಂ ।
ನಿರ್ಮೃತಿಯು ಬೀಜಾಂಕುರನ್ಯಾಯದೊಳಗನ್ಯತರಂ ॥ ೪೪ ॥

ಜರೆಮೃತಿಗಳೆರಡಿರ್ದು ದೇಹದೆ ।
ಕರಗಿಸುವದದು, ಹಸಿವು ತೃಷೆಯುಂ ।
ಮರುತನೊಳಗಿರ್ದುಬ್ಬೆಗಂ ಪುಟ್ಟಿಪುದು, ಬುದ್ಧಿಯಲಿ ॥
ಬೆರದು ಶೋಕವು ಮೋಹಮುಂ ದು ।
ಷ್ಕರ ಶರೀರಗಳಿತ್ತು ನೋಯಿಪ ।
ವರರೆ! ಊರ್ಮಿ ಮಹತ್ತ್ವಮೆಂತೋ ಭವಸಮುದ್ರದಲಿ! ॥ ೪೫ ॥

ಕಮಲಪೀಠ ಮುರಾರಿ ರುದ್ರ ।
ಭ್ರಮಣಕೊಳಗಾದರುಗಡೇಂ ಕಾ ।
ಲಮಯ ಚಕ್ರ ಮಹತ್ತ್ವಮೋ ! ಮಿಕ್ಕಾದ ಜಂತುಗಳು ॥
ಮಮತೆಯಿಂ ನಶ್ವರ ಕಲತ್ರಾ ।
ದಿಮ ಪದಾರ್ಥವ ಪೋಷಿಸುವರೆನ ।
ಲಮಮ ! ನೋಡಲಿದಕ್ಕೆ ಬಿಟ್ಟೆನ್ನಿಲ್ಲವದ್ಭುತವು ॥ ೪೬ ॥

ಇರುವ, ವೇಗವಾಗಿ ಹರಿದುಬರುವ ದುಃಖದ ಬಾಧೆಗಳೆಂಬ ಊರ್ಮಿ+ಎರಡು ಮನೀಷೆ—ಬುದ್ಧಿಯ (ಮನಸ್ಸಿನ)ಲ್ಲಿರುವ, ಊರ್ಮಿಯು+ಎರಡು+ಇವರ ಧರ್ಮ(ಗಳು)ಂ (ಎಂದರೆ ಶರೀರವು ಜನ್ಮಿಸಿ)+ಉಂಟಾಗುವದು ಪೇರ್ಮೆಯು+ಎಸೆವುದು—ಪ್ರಾಯದಲ್ಲಿ ಕೊಬ್ಬಿನಿಂದ ಉಬ್ಬುವದು, ಪುನಃ ಮುಪ್ಪಿನಿಂದ ತನ್ನಲ್ಲಿ ಕರಗಿ ಕಾಲವಶವಾಗಿ, ನಿರ್ಮೃತಿ—ನಿಶ್ಚಯವಾಗಿ ಸಾಯುವದು ಎಂಬ ಕರ್ಮ ಮತ್ತು ಜನ್ಮಗಳು ಬೀಜಾಂಕುರನ್ಯಾಯದಂತೆ ನಡೆಯುತ್ತಿರುವ ಈ ಸಂಸಾರದಲ್ಲಿ ಶರೀರ ಎಂದರೆ ಜನ್ಮ ಮತ್ತು ಕರ್ಮ ಎಂಬೆರಡರ ಪರಂಪರೆಯಲ್ಲಿ ಒಂದನ್ನು ಮೊದಲು ಮತ್ತೊಂದನ್ನು ಆಮೇಲೆ ಎಂದು ವಿಂಗಡಿಸಿ ಹೇಳುವದಕ್ಕಿಲ್ಲ (ಮಾಂಡೂಕ್ಯಕಾರಿಕಾ ಅಲಾತಶಾಂತಿ)

೪೫ ಜರೆ—ಮುಪ್ಪು, ಮೃತಿ—ಮರಣ ಎಂಬಿವು ಜೀವನನ್ನು ದುಃಖದಿಂದ ಗೋಳಾಡಿಸಿ ಕರಗಿಸುವದು, ಮರುತನೊಳಗೆ—ಪ್ರಾಣಗಳಲ್ಲಿ, ಇರ್ದು+ಉಬ್ಬೆಗಂ—ಸಂಕಟದ ಉದ್ವೇಗವನ್ನು. ದುಷ್ಕರ—ಕಡುದುಃಖದ ಯೋನಿಗಳನ್ನು ಕೊಟ್ಟು, ಊರ್ಮಿ—ವೇಗವಾಗಿ ಬರುವ ದುಃಖದಲೆಗಳ ಪರಂಪರೆಗಳ ಉರಿಬಾಧೆಗಳ ಹಿರಿಮೆಯ ಅದ್ಭುತವು ಎಷ್ಟು!

೪೬ ಕಮಲಪೀಠ—ಬ್ರಹ್ಮದೇವನು, ಮುರಾರಿ—ವಿಷ್ಣುವು, ಭ್ರಮಣಕೆ—ಸೃಷ್ಟಿಯ ಕಾಲಚಕ್ರಕ್ಕೆ ಒಳಗಾದರು! ಎಂದಮೇಲೆ ಉಳಿದ ಜೀವರ ಪಾಡೇನು! ನಶ್ವರ—ನಶ್ವಃ—ನಾಳೆಯು

ಭವನದೊಳು ಮಲಗಿಹನು ಸುಸ್ವ ।
ಪ್ನವನು ಬಯಸುವ ತೆರದಿ; ನರದೇ ।
ಹವನು ಸುರದೇಹವನು ನಾಗ ಶರೀರವನು ಧರಿಸಿ ॥
ವ್ಯವಹರಿಪ ಜೀವನು ವಿಷಯಸಂ ।
ಭವ ಸುಖವ ಬಯಸುವನಿವನ ಮೌ ।
ಢ್ಯವನು ಬಿಡಿಸಲ್ಕಾರನಾ ಸುರ ಸಚಿವನಾದೊಡೆಯು ॥ ೪೭ ॥

ಭೋಗವೆಂಬುದು ಮುಗಿಲ ಪೊಳಪನು ।
ರಾಗವೆಂಬುದು ಮಿಂಚಿನೊಲವು ಸು ।
ಯೋಗವೆಂಬುದು ಬುದ್ಬುದಪ್ರಾಯಂ ಸುತಾದಿಗಳ ॥
ಸಾಗುತಿಹುದಾಯುಷ್ಯ ಜರ್ಝರ ।
ವಾಗಿರುವ ಘಟ ಜಲದ ತೆರದಿಂ; ।
ರಾಗಪೂರ್ಣಮು ಹಾ ವಿಚಿತ್ರಂ ಮೋಹ ಮಹಾತ್ಮ್ಯಂ ! ॥ ೪೮ ॥

ಕೆಡುವುದನು ಕಣ್ಣಾರ ಕಂಡರು ।
ಬಿಡರು ಮಮತೆಯನಾತ್ಮಕರ್ಮದಿ ।
ಪಡೆದರೂ ದುಃಖವನು, ತೊರೆಯರು ಮೋಹ ಶತ್ರುವನು ! ॥
ಅಡಿಗಡಿಗೆ ಬೆನ್ನಟ್ಟಿ ದೇಹವ ।
ಸುಡುವ ತಾಪತ್ರಯವನೇ ಕೈ ।
ಹಿಡಿವರಲ್ಲದೆ; ಶಾಂತಿಕಲ್ಪಚ್ಛಾಯೆಯೊಳ್ನಿಲರು ! ॥ ೪೯ ॥

ಈ ಪರಿಯ ದೃಗ್ಭ್ರಮೆಯು ಚೇತ ।
ಸ್ತಾಪವನು ತಂದಿಟ್ಟು ದುಃಖ ।
ದ್ವೀಪವೋಹಾರಣ್ಯದೊಳ್ತೊಳಲಿಪುದು ತಾಂಗೈದ ॥

---

ವರೆಗೆ ನಿಲ್ಲುವದಲ್ಲ, ಆದರೂ ನಿಲ್ಲಬಹುವೆಂಬ ಭರವಸೆಯನ್ನು ಉಂಟುಮಾಡಿ ವಂಚಿಸುತ್ತಿರುವ, ಕಲತ್ರಾದಿಮ— ಈ ಪತ್ನಿಪುತ್ರಾದಿಗಳನ್ನು, ....ವರು+ಎನಲು+ಅಮಮ— ಅಯ್ಯಯ್ಯೋ !! ನೋಡಲು+ಇದಕ್ಕೆ+ಬಿಟ್ಟ+ಇನ್ನು— ಮತ್ತೊಂದು ಅದ್ಭುತವಿಲ್ಲ !

೪೭ ಭವನ—ಮನೆಯೊಳಗೆ, ವ್ಯವಹರಿಪ—ಸಂಸಾರಮಾಡುತ್ತಿರುವ, ಬಯಸುವನು—ಬರಿದೇ ಆಶಿಸುತ್ತಿರುವನಲ್ಲ, ಬಿಡಿಸಲ್ಕೆ+ಆರನು+ಆ ಸುರಸಚಿವ....— ಇವನ ಮೌಢ್ಯವನ್ನು ಆ ದೇವಗುರುವಾದರೂ ಬಿಡಿಸಲಾರನಷ್ಟೆ ?

೪೮ ಮುಗಿಲಪೊಳಪು— ನೋಡಗಳಂತೆ ಅದು ತೋರಿಕೆ ಮಾತ್ರ, ಅನುರಾಗ—ಸ್ತ್ರೀಪುತ್ರಾದಿಗಳ ಪ್ರೇಮವು ಮಿಂಚಿನೊಲವು, ಜರ್ಝರ— ತೂತುಬಿದ್ದಿರುವ, ಹಾ—ದುಃಖದ ಇದೇನು ಬಗೆಯೋ !

೫೦ ದೃಕ್—ತನ್ನ ಆತ್ಮನಲ್ಲುಂಟಾದ ಮನಸ್ಸಿನ ಭ್ರಮೆಯು ಚೇತಃ—ತನ್ನ ಮನಸ್ಸಿನೊಳಗೆ, ತಾಪವನು—ಅಪರಿಮಿತ ನೋವನ್ನು ಕೊಟ್ಟು, ದೈವ+ಉಪಚಯ—ಬಂದ

ಪಾಪವೋ! ಮಾಯೆಯ ಬಲವೋ! ದೈ ।
ವೋಪಚಯವೋ! ವಿಷಯ ರುಚಿಯೊ! ದು ।
ರಾಪದಾಶ್ರಯ ದೇಹಬಂಧವೊ ತಿಳಿಯಲಸದಳವು! ॥ ೫೦ ॥

ಭೂತವೈದರ ಮೂಲಗುಣ ಸಮ ।
ವೇತವಾಗಿಹುದದು ತಮಃ ಪ್ರ ।
ಖ್ಯಾತವಾಗಲವಿದ್ಯೆ, ಸತ್ವವಿಶೇಷದಿಂ ಮಾಯೆ ॥
ಈ ತೆರದ ಕರಣಾಂತರಂಗ ।
ವ್ರಾತದೊಳ್ಬಳಿವಿಡಿದಿರುವದಾ ।
ಧಾತು ಭಾವಂ ವಿಕರಿಸನು ಎಂದಿಹದು ಕೃಷ್ಣೋಕ್ತಿ ॥ ೫೧ ॥

ಅದುವೆ ಲಿಂಗಂ, ಸೂಕ್ಷ್ಮಕಾಯ ಮು ।
ದದುವೆ ಗುಹೆ, ಹೃತ್ಕೋಶ ಸಂಜ್ಞಿಕ ।
ಮದರೊಳಾವರಿಸಿರ್ಪ ಚಿತ್ಕಳೆ ಜೀವನೆನಿಸುವನು ॥
ವಿದಳಿತಾಂತಃಕರಣನಭೋಗಾ ।
ಸ್ಪದನಕರ್ತನಲಿಪ್ತನವನೀ ।
ಪದದೊಳಾರೋಪಿಪರು ಭೋಗಾದಿಗಳ ಖಲರಲ್ತೆ ॥ ೫೨ ॥

ಜಲದೊಳುದಿಸಿದ ಜಲಜ ಪತ್ರಕೆ ।
ಜಲ ಸಮಾಗಮಮುಂಟೆ ವಿಷಮಂ ।
ತಳೆದ ಸರ್ಪಕ್ಕುಂಟೆ ವಿಷಕೃತ ಭೀತಿ, ಬಿಡಿತಿಯನು ॥

---

ಅದೃಷ್ಟದರಾಶಿಯೋ, ....ರುಚಿಯೋ—ವಿಷಯಾಸಕ್ತಿಯೋ, ದುರಾಪತ್—ದುಷ್ಟವಿಪತ್ತುಗಳಿಗೆ ಆಶ್ರಯವಾಗಿರುವ ದೇಹೇಂದ್ರಿಯ ಅನಾತ್ಮಗಳಲ್ಲಿ 'ನಾನು' ಎಂದು ಅಭಿಮಾನದಿಂದ ಕಟ್ಟುಬಿದ್ದಿರುವ ದೇಹಬಂಧವೋ!

೫೧ ಭೂತ...ವೇತಂ+ಆಗಿಹುದು—ಭೂತಗಳ ಸಮಷ್ಟಿ ಸತ್ವಾಂಶ ಕಾರ್ಯವಾದ ಕರಣಾಂ....ವ್ರಾತಂ—ಮನಬುದ್ಧಿಗಳ ರೂಪುಗೊಂಡ ಅಂತಃಕರಣದ, ಬಳಿವಿಡಿದು (ನಿರ್ವಿಕಾರಾತ್ಮ ಚೈತನ್ಯವು ಚಿದಾಭಾಸನರೂಪುಗೊಂಡು)+ಇರುವದು+ಆದರು+ಆಧಾತು ಭಾವಂ—ತನ್ನ ಆ ಮೂಲಸ್ವರೂಪವನ್ನು ಮಾತ್ರ ಬಿಟ್ಟು, ಎಂದಿಗೂ ಅದು ವಿಕರಿಸದು (ಗೀತಾ ೧೩-೨).

೫೨ ಹೃದಯ—ಗುಹೆ, ಕೋಶ ಎಂಬ ಸಂಜ್ಞಿಕಂ—ಗುರುತುಳ್ಳದ್ದು, ಅದರೊಳು+ಆವರಿಸಿರ್ಪ—ತುಂಬಿಕೊಂಡಿರುವ, ಚಿತ್ಕಳೆ—ಚಿದಾಭಾಸನು ಜೀವನು ಎಂದೆನಿಸಿಕೊಂಡರೂ ನಮ್ಮೆಲ್ಲರ ಸ್ವರೂಪವಾಗಿರುವ ಚೈತನ್ಯವು ತನ್ನ ಪರಮಾರ್ಥ ಸ್ವರೂಪದಿಂದ, ವಿದಳಿತ—ಶೀಳಿಹೋದ, ಅಂತಃಕರಣನು+ಅಭೋಗಾಸ್ಪದನು+ಅಕರ್ತನು+ಅಲಿಪ್ತನು (ಆಗಿರುವ)+ಅದರ (ಪರಮಾರ್ಥಸ್ವರೂಪವಾಗಿರುವ)+ಈ ಪದದೊಳು—ನಿಷ್ಕ್ರಿಯವಾದ ತನ್ನ ಸಾಕ್ಷಿರೂಪದಲ್ಲಿ.

ಬಳಸಿರುವ ಚಿನ್ನದಲಿ ಕರಗಿದ ।
ಕಳೆವೆರಸಿದಪರಂಜಿಗುಂಟೇ ।
ಕಳತೆ ಮಾಯೆಯ ತೊಡಕು ವಸ್ತುವಿಗಿಲ್ಲ ನಿಜವಾಗಿ ॥ ೫೩ ॥

ಅಳಿವುದಕ್ಕುಳಿವಿಲ್ಲವೆಲ್ಲಾ ।
ಗಳು ಮುಳಿವುದಳಿಯದು, ತಿಳಿವ ನಿ ।
ರ್ಮಲ ಪದಾರ್ಥಂ ತಿಳುಹಿಸಲ್ಕೊಳ್ಳನು, ತಿಳುಹಿನಿರವ ॥
ಬಳಸಿಮುದು ತಿಳಿಯದು, ಸುಖಂ ಮು ।
ಕ್ಕುಳಿಸದಾರ್ತಿಯ ನಾರ್ತಿಯೋಳ್ಪ ।
ಜ್ಜಳಿಸದಾನಂದಂ ಎನುವುದಭಿಮತ ಮಹಾತ್ಮರಿಗೆ ॥ ೫೪ ॥

ಇರುವುದರಿವಿಂದಲ್ಲದೊದಗದು ।
ಮರಳಿ ತಿಳಿವಿಂಗಮಲವೃತ್ತಿ ।
ಸ್ಫುರಿಸದಿರೆ ರಾಜಿಸದು, ರಾಜಿಸದಿರುವ ತಿಳಿವಿನಲಿ ॥
ಕರುವುಗೊಂಡುದಿಸಿದುದೆ ದುಃಖಂ ।
ತಿರುಗಿ ಚಿದ್ವೃತ್ತಿಯಲಿ ಸುಖಮಂ ।
ಕುರಿಸದದಕೊಪ್ಪಿದರಭಿವ್ಯಕ್ತಿಯ ಸನಾತನರು ॥ ೫೫ ॥

---

೫೩ ಕಳೆವೆರಸಿದ–ತನ್ನ ಪೂರಾ ಬಣ್ಣವನ್ನುಹೊಂದಿರುವ, ಕಳತೆ-ಕಳಪೆ-ಕೆಟ್ಟದೋಷ,

೫೪ ಅಳಿವುದಕ್ಕೆ+ ಉಳಿವಿಲ್ಲವು+ ಎಲ್ಲಾಗಳುಂ+ ಉಳಿವದು+ ಅಳಿಯದು (ಗೀತಾ ೨–೧೬) ಭಾವಾಭಾವಗಳೆಂದಿಗೂ ತಮ್ಮೊಳಗೆ ಬದುಲುವದಿಲ್ಲ, ....ನಿರ್ಮಲ–ದೃಶ್ಯಸಂಪರ್ಕವಿಲ್ಲದ ಬರಿಯ ಚೈತನ್ಯರೂಪದ ತಿಳಿವು ಎಂದಿಗೂ, ತಿಳುಹಿನ (ಆತ್ಮಚೈತನ್ಯದ)+ ಇರುವ ಬಳಸಿದುದು+ ಅದು (ಎಂದಿಗೂ ಮತ್ತೊಂದನ್ನು ಸ್ವತಂತ್ರವಾಗಿ)+ ತಿಳಿಯದು, ಹೀಗೆಯೆ ಸುಖಂ...ಯುನು—ಸುಖವು ಎಂದಿಗೂ ತಾನು ದುಃಖವನ್ನು ಹೊರಗೆ ಉಗುಳುವುದಿಲ್ಲ, ತೋರಿಸುವದಿಲ್ಲ; ಆರ್ತಿಯೋಳ್—ದುಃಖದಲ್ಲಿ ಆನಂದವೂ ಹೀಗೆಯೇ ಪಜ್ಜಳಿಸದು—ಹೊರಗೆದ್ದು ತಾನು ತೋರಿಕೊಳ್ಳುವದಿಲ್ಲವು.

೫೫ ಸ್ವತಸಿದ್ಧವಲ್ಲದ ಅನಾತ್ಮವು ಇರುವದು ಎಂಬುದು ಅರಿವಿಂದಲ್ಲದೆ (ಜ್ಞಾನಗೋಚರವಾದಲ್ಲದೆ ಸ್ವಂತ ಇರುವಿಕೆಯು ಅದಕ್ಕೆ)+ ಒದಗದು ತಿಳಿವಿಂಗೆ—ಆ ಜ್ಞಾನಕ್ಕಾದರೆ, ಅಮಲವೃತ್ತಿ—ನಿರ್ಮಲಾಂತಃಕರಣದ ವೃತ್ತಿಯು ಸ್ಫುರಿಸದಲ್ಲದೆ. ಅದು ಹೊರಗೆದ್ದು ಅನುಭವದಲ್ಲಿ ಸಮ್ಯಕ್ ಜ್ಞಾನದ ರೂಪಿನಿಂದ ಶೋಭಿಸುವದಕ್ಕೆ ರುವದಿಲ್ಲವು. ಇದರಂತೆ, ರಾಜಿ...ನಲ್ಲಿ....–ಸ್ಪಷ್ಟವಾಗಿ ಕಾಣದಿರುವ ಆ ಜ್ಞಾನರೂಪ ಅಜ್ಞಾತಾತ್ಮನಲ್ಲಿ ಬರಿಯ ಮಿಥ್ಯಾಜ್ಞಾನ ಎಂಬ ಕರು(ಹು)ವು—ಗೊಂಡು+ ಉದಿಸಿದುದೇ—ಈ ಸಂಸಾರದುಃಖ ಹುಟ್ಟಿರುವದಲ್ಲದೆ ಸತ್ಯವಲ್ಲ, ಹೀಗಿರುವದರಿಂದಲೇ ಮಿಥ್ಯಾಜ್ಞಾನದ ಆ ಮರೆಯಲ್ಲಿರುವ ಚಿದ್ರೂಪಾತ್ಮನಲ್ಲಿ ನಿತ್ಯಾನಂದವು ತಿರುಗಿ . ಎಂದಿಗೂ ಅಂಕುರಿಸಿ ತೋರದೆಂಬ ಅಭಿವ್ಯಕ್ತಿ—ನಿಶ್ಚಿತಾಭಿಪ್ರಾಯವನ್ನು ಒಪ್ಪಿದರು.

ಮೊಳೆಯಲೀ ದುಃಖಕ್ಕೆ ಬೀಜವೆ ।
ತಿಳಿಯೆ ಮಾಯೆಯೆನುವರು ಕೆಲರವ ।
ರೊಳಗೆ ಕೆಲಬರು ಮಾಯೆಯೆಂಬರು ದುಃಖವೆಂತೆಂದು ॥
ಫಲಿಸದಿದರಂದದಲಿ ಕೇಳ್ಸುಖ ।
ದೊಳಗೆ ಲಕ್ಷಣ ಮಾವೃತಿಯು ಕಿಟು ।
ಕಳಿಯೆ ತಾನೇ ತೋರುವುದಭಿವ್ಯಕ್ತಿಯೆನಿಸುವದು ॥ ೫೬ ॥

ಎನುವ ದೆಶೆಯಿಂ ನಿತ್ಯ ಸತ್ಯಂ ।
ಘನದೆ ನಿತ್ಯಾನಿತ್ಯಯುಗ್ಮವ ।
ಬಿನದ ಮಾಯೆಯೊಳೆಂದು ವಾಚಸ್ಪತ್ಯ ವೊಪ್ಪಿಹುದು ॥
ಕನಸಿನಂದದಿ ತೋರ್ಪ ಮಾಯೆಯ ।
ಮನೆತನಂ ಚಲ್ಲಾಟ ಮಿಲ್ಲಿಯ ।
ಜನನ ಮರಣ ಸ್ಥಿತಿಯು ಪ್ರಾಯೋನುಭವ ಮಿಷದಿಂದೆ ॥ ೫೭ ॥

ಎಚ್ಚರಿಂದಾ ಕನಸಿನಲ್ಲಿಯ ।
ಬಚ್ಚಣೆಯು ನಡೆವಳಿಯು ಕಿಡುವುದು ।
ಎಚ್ಚರಿನ ತೋರಿಕೆಯು ಕೆಡುವುದು ಜ್ಞಾನ ಬಲದಿಂದ ॥
ನಿಚ್ಚಯಮಿದು, ಗಾಜಿನಮಣಿಯಿದು ।
ಪಚ್ಚೆಯೇ ಎಂದಾಚೆ ಗಾಜಿಗೆ ।
ಪಚ್ಚೆಯತನಂ ಬರ್ಪುದೇ ಕಣ್ಣಿರಲಿ ಯಿರದಿರಲಿ ॥ ೫೮ ॥

---

೫೬ ಮಾಯೆ---ಇಂದ್ರಿಯಪ್ರಜ್ಞೆಗಳು (ಬೃ॥ ೨-೫-೧೯, ಯಾಸ್ಕರನಿಘಂಟು; ಇಂದ್ರಿಯಾರ್ಥಗಳು ಎಂಬಲ್ಲಿ ಭಾಗವತ ೩-೯-೯....) ಆತ್ಮಾನಾತ್ಮಗಳ ಅಧ್ಯಾಸದಿಂದ ಬಂದವುಗಳಾದ್ದರಿಂದ ಅವು ದುಃಖಗಳೂ, ದುಃಖಬೀಜಗಳೂ ಎಂಬುದನ್ನು 'ಸರ್ವಾನರ್ಥಹೇತೋರಸ್ಯ ಪ್ರಹಾಣಾಯ' ಎಂಬ ಉಪಸಂಹಾರದ ಅಧ್ಯಾಸ ಭಾಷ್ಯದಲ್ಲಿ ನೋಡಬಹುದು ಮತ್ತು ದೇಹೇಂದ್ರಿಯ ಅನಾತ್ಮಗಳಲ್ಲಿ 'ನಾನು' ಎಂಬ ಅವಿದ್ಯಾಕಲ್ಪಿತ 'ನಾಮರೂಪ ಮಾಯಾ' 'ಜಗದ್ಬೀಜ' ಎಂಬುದನ್ನು 'ಅವಿದ್ಯಾಕಲ್ಪಿತನಾಮರೂಪಬೀಜ' 'ಅವಿದ್ಯಾಪ್ರತ್ಯುಪಸ್ಥಾಪಿತಮಾಯಾ' ಎಂಬ ಮಾತುಗಳಿಂದ ಪ್ರಸ್ಥಾನತ್ರಯಗಳೂ ಸಾರುತ್ತಿರುವವು ಫಲಿಸದು+ಇದರಂದದಲಿ-ಹೀಗೆಯೇ. ಮಿಥ್ಯಾಜ್ಞಾನಸಿದ್ಧವಾದ ಆ ದುಃಖದ ಮರೆಯಲ್ಲಿ ಸುಖ ಕಾಣದಂತಿದ್ದರೂ ಆವೃತಿಯು+ಕಿಟುಕು—ಮನಸ್ಸನ್ನು ಕದಡುವ ದುಃಖದ ಆ ಮರೆಯು ಅಳಿಯಲಾಗಿ ನೊವತೇ ಇಷ್ಟ ಆತ್ಮಸುಖವು ಹೊರಗೆದ್ದು ತೋರುವದು.

೫೭ ಮನೆತನಂ---ಸಹವಾಸ, ಪ್ರಾಯಃ+ಅನುಭವವು+ಮಿಷ—ತೋರಿಕೆಯಿಂದೆ.

೫೮ ಬಚ್ಚಣೆಯು—ತೋರಿಕೆಮಾತ್ರದ, ಕಿಡುವುದು—ಕೆಡುವಂದು, ನಿಚ್ಚಯಂ—ನಿಶ್ಚಯವಿದು, ....ಮಣಿ—ಗಾಜಿನ ಚೂರನ್ನು, ಪಚ್ಚೆ-ಶ್ರೇಷ್ಠವಾದ ಮರಕತ ರತ್ನ, ಎಂದು (ತಿಳಿದುಕೊಂಡಮಾತ್ರಕ್ಕೆ)+ಆಚೆ (ಆ ರತ್ನಕ್ಕಿಂತಲೂ ಬೇರಾದ)+ಗಾಜಿ (ನ ಒಂದು)

ಸಕಲವೆಲ್ಲವು ನೋಡೆ ತಾತ್ಕಾ |
ಲಿಕ ಸುಖಾನುಭವೈಕ ಕಾರಣ |
ಮಕಟಕಟ ! ಪರಿಣಾಮವೈರಸ್ಯಂ ಬಳಿಕ, ನಶ್ಯಂ ||
ಅಕುಟಿಲಾಯನ ಪಥಿಕ ನೀ ದು |
ರ್ವಿಕೃತಿಯಲಿ ಸಿಲುಕುವನೆ ನಿತ್ಯಾ |
ತ್ಮಕನು ವಿಭುವಾನಂದವಿಗ್ರಹನುನ್ಮನೀ ನಿಲಯಂ || ೫೯ ||

ಪರಿಮಿತಾಯುಃ ಶ್ರೀ ವಿಭೂತಿ |
ಸ್ಫುರಣೆಯಿಂ ದವಲೇಪತಾಪ |
ಜ್ವರಕೆ ಚಿತ್ತವತೆತ್ತ ಬಿಡುಗಣ್ಣವರಾನನಗಳಂ ||
ಹರಿಣ ರೂಪದೆ ಪಿಡಿದು ದುಃಖಾ |
ತುರರೆನಿಸಲವರೊಳಗನುಗ್ರಹ |
ಪರನೆನಿಪ ಸಾರಂಗಧರ ನೆಮಗೀಗೆ ಶಿವಪದಮಂ || ೬೦ ||

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೊಳ್ನಿತ್ಯಾನಿತ್ಯ ಲಕ್ಷಣಮಂ
ಪೇಳಿದೊಂಬತ್ತನೆಯ ಸಂಧಿ ಸಂಪೂರ್ಣಂ (ಪದ ೪೭೭)

## ವೈರಾಗ್ಯನಿರ್ಣಯ—ಹತ್ತನೆಯ ಸಂಧಿಯು

ಸೂ|| ವೀತರಾಗನಿಗಲ್ಲದೀ ಜ್ಞಾ |
ನಾತಿಯ ದೊರಕೊಳ್ಳದು, ಅದರಿಂ |
ಖ್ಯಾತವೈರಾಗ್ಯಂ ದ್ವಿವಿಧ ಮುಸಿರಲ್ಪಡುವುದಿಲ್ಲಿ || ೧ ||

---

ಚೂರಿ)ಗೆ.

೫೯ ....ಕಾರಣಂ+ಅಕಟಕಟ—ಅಯ್ಯಯ್ಯೋ!! ಪರಿಣಾಮ—ಆ ಭೋಗದ ಕೊನೆಯಲ್ಲಿ, ವೈರಸ್ಯಂ—ವಿರಸಬುದ್ಧಿಯುಂಟಾಗುವದು, ನಶ್ಯಂ—ನಶಿಸುವದು, ಅಕು...ಥಿಕ—ಋಜುಮಾರ್ಗಗಾಮಿಯೆ? ದುರ್ವಿಕೃತಿ—ಸಂಸಾರದ ವಿಕಾರಗಳಲ್ಲಿ, ವಿಭು—ದೇಶದ ಅಳತೆಯ ಕಟ್ಟನ್ನು ಮೀರಿದವನು, ಆನಂದ ವಿಗ್ರಹನು—ಶರೀರಿಯು, ಉನ್ಮನೀನಿಲಯು—ಮನಸ್ಸನ್ನು ಅಥವಾ ಆ ಮನಸ್ಸಿನವೃತ್ತಿಗಳಾದ ಎಚ್ಚರಾದಿಗಳನ್ನು ತನ್ನಲ್ಲಿ ಐರಸಿಹಾಕಿರುವ ತುರೀಯನು.

೬೦ ನೂರುವರಷವೆಂಬಿಷ್ಟೇ ಪರಿಮಿತಿಯ+ಆಯುಸ್ಸುಳ್ಳ. ಶ್ರೀ—ಶುಭವಾದ ದೇವಲೋಕದ, ವಿಭೂತಿ—ಭಾಗ್ಯಗಳ, ಸ್ಫುರಣೆಯಿಂದ+ಅವಲೇಪ ಅಭಿಮಾನದಿಂದ ತಮ್ಮೊಳಗೆ ಉಬ್ಬಿಹೋಗಿರುವದೆಂಬ ತಾಪಜ್ವರಕೆ ತಮ್ಮ ಚಿತ್ತವನ್ನು ತೆತ್ತಿರುವ, ಬಿಡುಗಣ್ಣವರ—ಆ ದೇವತೆಗಳ, ಆನನಗಳಂ—ಮುಖಗಳನ್ನು, ತನ್ನಕೈಯಲ್ಲಿ ಜಿಂಕೆಯರೂಪ ಮಾಡಿ ಅವರನ್ನು ಹಿಡಿದು, ದುಃಖಾತುರರು+ಎನಿಸಲು+ಅವರೊಳು+ಅನುಗ್ರಹಪರನು+ಎಂದೆನಿಸುವ, ಸಾರಂಗ—ಮೃಗಧರನಾದ ಆ ಶಿವನು, ಎಮಗೆ—ನಮಗೆ, ತನ್ನ ಶಿವಪದವನ್ನು, ಈಗೆ—ಕೊಟ್ಟು ಕಾಪಾಡಲಿ!

ಖ್ಯಾತಿಲಾಭೇಚ್ಛೆಯಲಿ ಶಾಸ್ತ್ರ ।
ವ್ರಾತವನ್ನಭ್ಯಸಿಸಿ ಗರ್ವ ನಿ ।
ಕೇತನದೆ ಬಾಳುತ್ತ ತನಗಹ ಭಾವ್ಯನರ್ಥವನು ॥
ಚೇತನೆಯೊಳಾರೈಯ್ಯದಿಹ ನರ ।
ಜಾತಿ ಮತ್ತೋರಭ್ರಗಳಿಗಸು ।
ವೇ ತೆರಳುತಿರ್ದರೆಯು ಪೇಳದಿರೀ ಕಥಾಶ್ರುತಿಯ ॥ ೧ ॥

ಗೋ ಸಹಸ್ರದೊಳೆಂತು ಕರುವಾ ।
ಯಾಸವಿಲ್ಲದೆ ತಾಯನೈದುವ ।
ದೋ ಸಮಾನಮಿದಕ್ಕೆನಲ್ಕರ್ತೃವನೆ ಕರ್ಮಫಲಂ ॥
ಬೇಸರಿಪುದೇ, ತನಗೆ ರಾಗ ನಿ ।
ರಾಸ ಮೆಂತಾಗುವದೆನೆ, ತನ್ನಿ ।
ರಾಸನಕ್ಕೆ ವಿವೇಕವಲ್ಲವೆ ನಿತ್ಯ ಸಾಧನವು; ॥ ೨ ॥

ಕ್ರಿಯೆಯ ಫಲಮುಂಟಾಗೆ ಭೋಗ ।
ಕ್ಷಯವ ಪೇಳುವ ದಿಕ್ಕಿನಲ್ಲಭಿ ।
ನಯಿಪುದೆಂತು ವಿವೇಕದಿಂ ನಾಶವನೆನಲ್ಕೆ, ನಿಜಂ ॥

---

ಸೂ॥ ವೀತರಾಗನಿಗೆ—ತನ್ನನ್ನು ಬಿಟ್ಟು ತೊಲಗಿರುವರಾಗವುಳ್ಳವನಿಗೆ, ಈ ಜ್ಞಾನಾತಿಶಯ—ವಿಶಿಷ್ಟ-ಹೆಚ್ಚಿನ ಈ ಜ್ಞಾನವು ಸಿಕ್ಕುವದಲ್ಲದೆ, ಮತ್ತೊಬ್ಬನಿಗೆ ಎಂದಿಗೂ ಅದು ದೊರಕೊಳ್ಳದು+ ಅದರಿಂದ ಖ್ಯಾತ—ಶಾಸ್ತ್ರಸಿದ್ಧವೈರಾಗ್ಯವನ್ನ, ದ್ವಿವಿಧಂ+ ಉಸಿರಲ್ಪಡುವದು+ ಇಲ್ಲಿ.

೧ ಖ್ಯಾತಿ—ಕೀರ್ತಿ, ಸುಖಸಾಧನ ಜಾತವನ್ನು ಲಾಭ—ತಾನು ಪಡಿಯುವ ಇಚ್ಛೆಯಿಂದ, ....ವ್ರಾತ—ರಾಶಿಯನ್ನು ಅಭ್ಯಸಿಸಿ, ....ನಿಕೇತನದೆ—ಗರ್ವದಮನೆಯಲ್ಲಿ, ತನಗೆ ಅಹ+ ಭಾವಿ—ಮುಂದಾಗುವ ಅನರ್ಥವನ್ನು, ಚೇತನೆ (ತನ್ನಬುದ್ಧಿ) ಯೊಳು+ ಆರೈಯ್ಯದೆ+ ಇಹ—ಯೋಚಿಸದಿರುವ, ನರಜಾತಿಯು ಮತ್ತ(ವಾದ)+ ಉರಭ್ರ (ಟಗರು) ಗಳಿಗೆ+ ಅಸು (ತನ್ನಪ್ರಾಣ)ವೇ....;

೨ ತಾಯನು+ ಐದು(ಹೊಂದು)ವದೊ ಅದರಂತೆ ಕರ್ಮವೂ ತನ್ನ ಕರ್ತೃವಿಗೆ ಫಲವನ್ನು ಸೇರಿಸುವದರಲ್ಲಿ ಬೇಸರಿಪುದೆ+ ಏನು? ಇದಕ್ಕೆ+ ಸಮಾನಂ+ ಎನಲ್,....ನಿರಾಸಂ+ ಎಂತಾಗುವದು+ ಎನೆ, ತತ್+ ನಿರಾಸನಕ್ಕೆ—ಆ ರಾಗದ ನಿರಸನಕ್ಕೆ.

೩ ....ದಿಕ್ಕಿನಲ್ಲಿ—ಭೋಗಕ್ಕಿರಬೇಕಾದ ರಾಗದೊಡನೆಯೆ ಕರ್ಮವು ತನ್ನ ಫಲಭೋಗವನ್ನು ಕೊಟ್ಟಮೇಲೆಯೆ ಮನುಷ್ಯರಿಗೆ 'ರಾಗ ನಿರಸನ' ಎನ್ನುವ ಆ ಶಾಸ್ತ್ರವು ವಿವೇಕದಿಂದಲೆ ಅದನ್ನು, ಅಭಿನಯಿಪುದು+ ಎಂತು...—ಹೇಳುವದು ಹೇಗೆ? ಗುರುವು, ನಿಜಂ....ನಿಜಯದೊಳು+ ಅದು—ಕರ್ಮವು ತನ್ನ ಫಲದ ಭೋಗವನ್ನು ಕೊಟ್ಟು ಕ್ಷಯಿಸಬೇಕೆಂಬ ಮಾತು ಅಜ್ಞಾನಿಗಳಲ್ಲಿ ನಿಜ, ಆದರು ಆ ಕರ್ಮಗಳಲ್ಲಿ ಸಂಚಿತಾಗಮಿಗಳ-

ಕ್ರಿಯೆಯ ಫಲವು ಭೋಗದಿಂದಂ ।
ಕ್ಷಯಿಪುದಾತ್ಮಜ್ಞಾನ ಶೂನ್ಯನಿ ।
ಈಪ.ವೊಳವು ವಿಜ್ಞಾನಿಯಲಿ ಮೂರಾಗಿ ತೋರಿದೊಡಂ ॥ ೩ ॥

ಹಿಂದೆ ಮಾಡಿದ ಕರ್ಮಫಲಗ ।
ಳ್ಬಿಂದು ಪೋಗುವವರಿವಿನುರಿಯಿಂ ।
ಮುಂವಣವು ಸುಕೃತವಿಕೃತಾಕೃತಿಯಾವ ಕರ್ಮಫಲಂ ॥
ವಂದಿಸಿದರಿಗೆ ಮತ್ತಮಾತನ ।
ನಿಂದಿಸಿದರಿಗೆ ಸೇರುವುದು, ತಾ ।
ನೊಂದವುದು ಪ್ರಾರಭ್ಧವೊಂದೇ ಭೋಗನಾಶವನು ॥ ೪ ॥

ಇದು ನಿರೀಚ್ಛೆಯಲಾದರೂ ಭೋ ।
ಗದ ಬಳವಿಗೆಯ ನೀವುದು, ಸ್ಪೃಹೆ ।
ಯುದಿಪುದಿದರಿಂದಿದಕೆ ಕೇಡಿಲ್ಲವೆನೆ, ಎಚ್ಚಿರಲು ॥
ವಿದಿತ ತದ್ದ್ವೇಷೈಕ ದರ್ಶನ ।
ಮಿದು ತದಿಚ್ಛೆಯನೆಂತು ಜನಿಯಂ ।
ಪದುಳಿಪುದು, ಹಾಗಾದರೆಯು ಪ್ರಾರಭ್ಧವೇ ಬಹುಲಂ ॥ ೫ ॥

ಒಪ್ಪಬೇಕದರಿಂದ ಜನ್ಮವ ।
ನಿಪ್ಪವಾಂಛೆಗದಿರೆ ವಿರಾಗಕೆ ।
ನೆಪ್ಪಿರುವುದೇ ಎನಲಣಂ ವರ್ತಿಸಲಿಯಭಿಲಾಷಂ ॥
ಅಪ್ಪುದಿಲ್ಲದರಿಂದ ಬಾಧೆಯು ।
ಕುಪ್ಪದೇ ಸಂಭ್ರಷ್ಟ ಬೀಜವು ।
ತಪ್ಪದಾಕೃತಿಯಿದ್ದರಾಗಿರದಂಕುರಾರ್ಥದಲಿ ॥ ೬ ॥

---

ಮಾತ್ರ ಜ್ಞಾನದಿಂದಲೂ ವಂದಕ ನಿಂದಕರು ಸ್ವೀಕರಿಸುವದರಿಂದಲೂ ಜ್ಞಾನಿಯಲ್ಲಿ ಅದು ನಾಶವಾಗುವ ಪರಿಯೇ ಬೇರೆ.

೫ ಭೋಗಕ್ಕೆ ಮೊದಲಾಗಿರುವ ಪ್ರಾರಬ್ಧವು—ಇಚ್ಛೆಯಿಲ್ಲದಿದ್ದರೂ, ಆ ಸ್ಪೃಹೆಯನ್ನು ತನಗೆ ಅಥವಾ ಪರರಿಗೆ ಹುಟ್ಟಿಸಿಯಾದರೂ ಜ್ಞಾನಿಗೆ ಭೋಗ ಕೊಡುವದರಿಂದ ಕೆಡುವಂತಿಲ್ಲ; ದ್ವೇಷವೃಷ್ಟಿಯೆಚ್ಚತ್ತಿರಲು ಭೋಗದಲ್ಲಿ ಆ ಇಚ್ಛೆಯನ್ನಾದರು ಜನಿಯಂ+ಪದುಳಿಪುದು+ಎಂತು ಹುಟ್ಟಿಸುವುದು ಹೇಗೆ? ಗುರುವು—ನಿಜ, ಆದರೂ ಕರ್ಮವೇ ಬಲವತ್ತರವು.

೬ ಒಪ್ಪಬೇಕು+ಅದ...ವನು+ಇಪ್ಪ...ಂಛೆಗೆ+ಅದಿರೆ—ಹಾಗಾದರೆ ಜನ್ಮವನ್ನೂ ಜ್ಞಾನಿಗೆ ಒಪ್ಪಬೇಕು ಹೇಗೆಂದರೆ ಇಚ್ಛೆಗೆ ಕರ್ಮವು, ಜನ್ಮಕ್ಕೆ ಇಚ್ಛೆಯು ಹೀಗೆ ಒಂದಕ್ಕೊಂದು ಕಾರಣವಾಗಿ ಜ್ಞಾನಿಯಲ್ಲಿ ಹೊಂದಿಕೊಂಡಿರುವದರಿಂದ ಇಚ್ಛಾಮೂಲಜನ್ಮವು ಜ್ಞಾನಿಗೂ ಉಂಟಷ್ಟೆ? ಅಲ್ಲವೆ, ನೆಪ್ಪು—ನೆನಪಾದರು ಇರುವದೆ? ಎನಲು+ಅಣಂ-

ಇಲ್ಲಿಯಾವಶ್ಯಕವದಾರಿಗೆ ।
ಬಲ್ಲವರಿಗೋ ತಿಳಿಯಲಿಚ್ಛಿಯ ।
ಪ್ಪಲ್ಲಿ ನಿಂದವರಿಗೊ ಎನಲ್ಕಭ್ಯಾಸಿಗಿದು ಕೃತ್ಯಂ ॥
ನಿಲ್ಲದಭ್ಯಸಿಸಲ್ಕೆ ಮತಿಯೇ ।
ಪಲ್ಲವಿಪುದೀ ಕಾರ್ಯವೇಕಿರ ।
ಲ್ಲಿವೇ ಸುವಿವೇಕವದೆ ಸಾಲದೆ ಎನಲ್ಕಹುದು ॥ ೭ ॥

ಇದಕೆ ಕಾರಣವೀ ವಿರಾಗಂ ।
ಪುದಿಯೆ ಸ್ವಜ್ಞಾನಂ ಘಟಿಪು ದಾ ।
ಗದೊಡೆ ಕನಸಿನ ತಿಳಿವಿನಂತಕ್ಕುಂ ವಿವೇಕತ್ವಂ ॥
ವಿದಿತ ಭಕ್ತಿಗಳೆರಡು ವೈರಾ ।
ಗ್ಯದ ಮನದೊಳಿರ್ಕುಂ ವಿಷಯ ಭೋ ।
ಗದ ಬಳಕೆಯುನ್ನಬರಮಿಹುದಾತ್ಮನಿಗೆ ಜೀವತ್ವಂ ॥ ೮ ॥

ವಿಷವೆ ಪೇಳಲ್ಪಡುವುದಲ್ಲದೆ ।
ವಿಷಯ ಭಾವದೆ, ತಾನೆಯಾದೀ ।
ವಿಷವು ವಿಷವಲ್ಲೇತಕೆನೆ, ತನುವೊಂದು ಕೆಡುತಿಹುದು ॥
ವಿಷದ ಸೇವನೆಯಿಂದ, ನೋಡ ।
ಲ್ವಿಷಯ ಸೇವನೆಯಿಂದ ನಾನಾ ।
ವಿಷಯ ವಸತಿಗಳಾರ್ತಿಯೈದುವವಾನ ದೆಸೆಯಿಂದ ॥ ೯ ॥

---

ಕನಿಷ್ಕ್ರಿಯಿಲ್ಲದಂತೆ, ಅಸ್ರುದಿಲ್ಲ—ಎಂದಿಗೂ ಜನ್ಮದಬಾಧೆಯಾಗುವದಿಲ್ಲವು, ಕುಪ್ಪದೆ—ಕೈಯಿಂದ ತಪ್ಪಿಸಿಕೊಂಡು ಹಾರದೆ, ಸಂಭ್ರಷ್ಟ—ಚೆನ್ನಾಗಿ ಹುರಿದ ಬೀಜವು ಮೊದಲಿನ ಆಕೃತಿ—ಆಕಾರವು ತಪ್ಪದೆ ತನ್ನಲ್ಲಿ ಕಂಡರು.

೭ ಇಲ್ಲಿ(ರುವ ವೈರಾಗ್ಯವ)+ಆವಶ್ಯಕಂ+ಅದು+ಆರಿಗೆ? ಕೃತ್ಯಂ—ಪ್ರಯತ್ನದಿಂದ ಪಡೆಯುವ ಸಾಧನ ಎಂಬಿದು ಉತ್ತರ; ಆತ್ಮಾನಾತ್ಮವಿವೇಕವೊಂದನ್ನೆ ತಾನು ನಿಲ್ಲದೆ (ಎಡಬಿಡದಂತೆ ನಿರಂತರವೂ)+ಅಭ್ಯಸಿಸಲ್ಕೆ ಮತಿಯೆ+ಪಲ್ಲವಿಪುದು—ಆತ್ಮನಸ್ವರೂಪದಲ್ಲಿಯೇ ನಿಂತು ಅದು ವಿಕಾಸವಾಗಿಬಿಡುವದು, ಈ ಕಾರ್ಯವು—ಇನ್ನು ಈ ವೈರಾಗ್ಯವೇಕೆ?

೮ ಇದಕೆ—ಹುಲುಸಾಗಿ ಈ ವಿವೇಕವು ಬೆಳೆದುಕೊಳ್ಳುವಲ್ಲಿ, ಪುದಿಯೆ—ಬಂದು ಸೇರಿಕೊಳ್ಳಲು, ವಿದಿತಂ—ತಿಳಿದವಿವೇಕ, ಸ್ವತಸಿದ್ಧಜ್ಞಾನ ಮತ್ತು....; ಎನ್ನಬರಂ (ಎಲ್ಲಿಯವರೆಗೆ)+ಇಹುದು+ಆತ್ಮನಿಗೆ+ಅನ್ನಬರ—ಅಲ್ಲಿಯವರೆಗೂ ಜೀವತ್ವವು ತಪ್ಪುವಂತಿಲ್ಲ.

೯ ....ಭಾವದೆ—ವಿಷಯದ ರೂಪಿನಲ್ಲಿ, ....ವಿಷವಲ್ಲ+ಏತಕೆ+ಎನೆ, ಒಳಹೊಕ್ಕು ವಿಚಾರವನ್ನು ಮಾಡಿ ನೋಡಲ್—ನೋಡಿದರೆ, ....ವಸತಿಗಳು+ಆರ್ತಿಯು—ವಿಷಭರಿತ ವಿಷಯ ನಿವಾಸಸ್ಥಳಗಳಲ್ಲಿ ದುಃಖಗಳೆ ಮೇಲಿಂದಮೇಲೆ ತನಗೆ ಬಂದು, ಐದುವವು—ಸೇರಿಕೊಳ್ಳುವವು ಆದ್ದರಿಂದ 'ವಿಷ'ವೆಂಬುದು ವಿಷಯವನ್ನು ಬಿಟ್ಟಿರುವದಿಲ್ಲ.

ವಿವಿಧ ವಿಷಯಂಗಳನು ಬಿಡದು ।
ದ್ಭವಿಸುವಂದದ ಕಾಯ ಮಾಂತಿಹು ।
ದವನಿಯಿದು ಗಿರಿ ನದಿಯ ಭೇದಂ ಬಡೆದು ದೇಶತೆಯಿಂ ॥
ವಿವಹಿಸುತ್ತಿಹುದಿದಕೆ ರಾಜ್ಯ ।
ವ್ಯವಹೃತಿಯು ವರ್ತಿಸುವುದಿದ ಗಳಿ ।
ಸುವೊಡೆ ಜೀವರಿಗಪ್ಪುದತ್ಯಂತಾಭಿಮಾನರಸಂ ॥ ೧೦ ॥

ಭೂಮಿ ಲಾಭದೊಳಿಟ್ಟ ದೃಷ್ಟಿಯ ।
ಭೂಮಿಪಗೆ ಪೆರತೊಂದು ತೋರದು, ।
ಭೂಮಿದೇವರ ದ್ರೋಹದಲಿ ಕಟ್ಟೆಗಳನೊಡೆವಲ್ಲಿ ॥
ಗ್ರಾಮಗಳ ಸುಡುವಲ್ಲಿ, ನಾನಾ ।
ಸ್ವಾಮಿಗಳ ಮಂದಿರಗಳಂ ನಿ ।
ರ್ನಾಮಮಂ ಮಾಳ್ಪಲ್ಲಿ, ಪಶುನಾರೀ ವಧಂಗಳಲಿ ॥ ೧೧ ॥

ಏಸು ಕಲ್ಪಗಳಾದರೆಯು, ಮಗು ।
ಳೇಸು ಯಮರಿಗೆ ಸಂಯಮನಿಯಲಿ ॥
ವಾಸಮಳವಟ್ಟರು ಕೆಡದ ನರಕಗಳ ರಾಶಿಯಲಿ ॥
ಘಾಸಿ ತಪ್ಪದ ಪದವಿ ಬರ್ಪುದು ।
ಗೋ ಸತೀಶರಿಗಿವರಕಷ್ಟಕೆ ।
ಬೇಸಿಗೆಯ ನೊಂದೆಡೆಯೊಳಾದರು ಕೊಂಬರಂ ಕಾಣೆ ॥ ೧೨ ॥

ಲಾಂಗುಲಕ್ಕಭಿವೃದ್ಧಿಯಾದ ದಿ ।
ನಂಗಳಲಿ ಮಗಳೆಂದು ಬೇರಿಹ ।
ತಂಗಿಯರಿವರ್ಸೊಸೆಯರಿವರತ್ತೆಯದಿರತ್ತಿಗೆಯ ॥

---

೧೦ ಬಿಡದೆ+ಉದ್ಭವಿಸುವಂದದಕಾಯಂ— ಹುಟ್ಟಿಸುವದೆ ತನ್ನ ಸ್ವರೂಪವನ್ನಾಗಿ, ಆಂತಿಹುದು—ಪಡೆದುಕೊಂಡಿರುವದು, ಅವನಿ–ಈ ಭೂಮಿಯು, ಬಡೆದು—ಪಡೆದು ವಿವಹಿಸುತ್ತಿಹುದು—ಸೇರಿಕೊಂಡಿರುವದು, ವ್ಯವ...ವುದು—ರಾಜ್ಯವೆಂಬ ವ್ಯವಹಾರವನ್ನು ಅದು ಹೊಂದಿರುವದು.

೧೧ ಭೂಮಿದೇವರ-ಬ್ರಾಹ್ಮಣರ, ಅಣೆಕಟ್ಟು ದೇವಮಂದಿರಗಳನ್ನು ಹೊಡೆಯುವಲ್ಲಿ

೧೨ ಏಸು—ಎಷ್ಟು, ಮಗುಳೆ+ಏಸು, ಸಂಯಮನಿ–ನರಕಗಳಲ್ಲಿ, ಘಾಸಿ—ದುರ್ಗತಿಯು, ಗೋಸತೀಶರಿಗೆ–ಭೂಮಿಯನ್ನಾಳುವ ಅರಸರಿಗೆ,, ಬೇಸಿಗೆಯನು—ಕಷ್ಟದಿಂದ ಅವರನ್ನು ಬಿಡಿಸಿಕೊಳ್ಳುವವರನ್ನು.

೧೩ ಲಾಂಗುಲಕ್ಕೆ–ಪುರುಷೇಂದ್ರಿಕ್ಕೆ, ಅಭಿವೃದ್ಧಿ–ಚುರುಕಾಗಿರುವ ತನಗೆ ಯೌವನ ಬಂದಿರುವ ದಿನಗಳಲ್ಲಿ, ಬೇರಿಹ—ತನ್ನ ಸಹವಾಸಕ್ಕೆ ಸಲ್ಲದ, ಉತ್ತುಂಗ-ಪೂಜ್ಯರಾದ, ವ್ರಾತಂ–ವರ್ಗದವರು.

ಏಂಗಡವಿದಕ್ಕಂದಿರಿವರು ।
ತ್ತುಂಗವಮಾತ್ಸವ್ರಾತವಿದಿದೆಂ ।
ಬಿಂಗಿತಮದೇನುಂಟೆ, ನಡೆವುದು ವಿಜನಪದಕೃತ್ಯಂ ! ॥ ೧೩ ॥

ಹಣವನಬಲರಲಿರಲು ಕಂಡಾ ।
ಕ್ಷಣವೆ ಶಕ್ತನೆನಿಪನು ಕೊಲುವಂ ।
ಮಣಿಯದಿರಲವರೊಳಗೆ ವಂಚನೆಯಿಂದ ಕೆಡಿಸುವನು ॥
ಅಣೆದಿರಲ್ಕವರ್ೈದಿ ರಾಜಾಂ ।
ಗಣವ ಚಾಡಿಯ ಪೇಳಿ, ಮನೆಯಂ ।
ಮಣೆಯುವಂ ಸಂಪಾದಿತಮನುಂ ಕೂಡೆ ಕೆಡಿಸುವರು ॥ ೧೪ ॥

ಇದನು ತಿನಕೂಡದು ಕುಡಿಯಕೂ ।
ಡದು ಧರೆಯೊಳಿದ ನೆನಿಸಿಕೊಂಬುದ ।
ನೊದಗಿ ತಿನುವುದು ಕುಡಿವುದೀ ಜಿಹ್ವೆಯಲಿ ಲಾಂಪಟ್ಯಂ ॥
ತುದಿಯ ಕರ್ಮೇಂದ್ರಿಯದ ಪಂಚಕ ।
ಮೊದಲ ಬುದ್ಧೀಂದ್ರಿಯದ ಪಂಚಕ ।
ಪುದಿದಿರಲ್ಕೀ ವರ್ಗದೊಳಗೊಂದೊಂದೆ ಮುಖ್ಯತೆಯಂ ॥ ೧೫ ॥

ವರಿಸಿರುತ್ತಿಹವಾವುದೆನಲದು ।
ವರುಣನಾಳ್ಕೆಯದೊಂದು, ಕಾಮನ ।
ಕರಣಕ್ಕೈದಿದುದೊಂದು ಜಂತುಗಳಂ ಮಹತ್ತಾದ ॥
ನರಕ ಕೂಪಕ್ಕಿಳುಹಿಸಲ್ಕಾ ।
ದಿರುವವವರಿಂದಪ್ಪುದಾನಂ ।
ದ ರಸವೆಂದುರುಮೋಹದಿಂ ಚೇತನರು ಬಳಲಿದರು ॥ ೧೬ ॥

ಬಡಿಸ ಮಾಂಸವನೂಡಿ ಮೀನಂ ।
ಪಿಡಿದು ಕೊಂದ ಕಿರಾತನಂದದಿ ; ।
ನಡುನಡುವೆ ಕಿಂಚಿತ್ಸುಖಂಗಳ ಬೀರಿ ವಿಷಯಗಳು ॥

---

೧೪ ಮಣಿಯದಿರಲು—ತಲೆಬಾಗದಿರಲು, ಅಣೆದಿರಲ್ಕೆ—ಹೊಡೆದಾಡುವದಕ್ಕೆ ಅವರು ಸಿದ್ಧರಾದರೆ, ಕೂಡಲೆ ತಾನು ರಾಜನ ಸಭೆಯನ್ನು. ಐದಿ—ಸೇರಿ, ಮಣೆಯುವಂ—ಯೋಣೆಗಾರಿಕೆಯ ಉದ್ಯೋಗವನ್ನೂ, ಸಂಪಾದಿಸಿದ್ದನ್ನೂ, ಕೂ(ಡಲೆ)ಡೆ....

೧೫ ಇಂದ್ರಿಯುಗಳ ಉಭಯ ವರ್ಗಗಳಲ್ಲಿಯೂ ಮಿಕ್ಕೆಲ್ಲ ಇಂದ್ರಿಯಗಳ ಬಲವನ್ನು ತನ್ನೊಳಗೆ ಅಡಕ ಮಾಡಿಕೊಂಡು ಒಂದೊಂದು ಇಂದ್ರಿಯವೇ ಆ ವರ್ಗಗಳಲ್ಲಿ ಮುಖ್ಯತೆಯನ್ನು ವರಿಸಿರುವದು.

ಕೆಡಿಸಿಬಿಟ್ಟವು ಕೆಡಿಸುವಿವರೆಡೆ ।
ಬಿಡದೆ ತಾವೊಳಗಾಗಿ ನಾಲಿಗೆ ।
ವೃಡ ವಿರೋಧಿ ಧ್ವಜವು ಕೆಡಿಸಿದವಿಂದ್ರಿಯಂಗಳಾಗಿ ॥ ೧೭ ॥

ಕೆಡಿಸಬಾರದೆ ಇಂದ್ರಿಯಾಖ್ಯೆಯ ।
ಪಡೆದಮೇಲೇಕೆನಲು, ಪಾಣಿನಿ ।
ನುಡಿದನಿಂದ್ರಂ ಜೀವನೀತನ ಭಾವದಿಂ ಸೇವ್ಯಂ ॥
ಬಡೆದುವಕ್ಕಹುದಿಂದ್ರಜುಷ್ಟಂ ।
ಬಿಡದೆನುತ್ತಂ ಸೇರಿದೊಡೆಯನ ।
ಕೆಡಿಸುವರ್ಖಲರೊಳಗೆ ಮುಖ್ಯರು ಮೊದಲ ಮನೆಯವರು ॥ ೧೮ ॥

ಇದರ ದೆಶೆಯಿಂ ವಿಷಯ ರುಚಿಯಂ ।
ಹದಗೆಡಿಸಿದಲ್ಲದೆ, ಬರುವದೇ ।
ಮದವಡಗಿ ಮಾನಸದೆ ಶಾಂತಿಯೆನಲ್ಕೆ ಭಕ್ತಿಯಲಿ ॥
ಹುದುಗಿರಲು ಶಾಂತಿಯ ರಸಂ ಮುಂ ।
ದೊದಗದೇ ಎನಲದರ ಮರ್ಮವ ।
ಸದಮಲ ಜ್ಞಾನೈಕರಸನಿಧಿ ಪೇಳೆ ತಾಂ ಬಗೆದಂ ॥ ೧೯ ॥

ಜ್ಞಾನವಿರಲೀ ಭಕ್ತಿಗಂತೆಡೆ ।
ಮಾನಸದೆ ಪರತಂತ್ರಮಿದು ತ ।
ಜ್ಜ್ಞಾನಮುಕ್ಕುಂ ವಸ್ತುತಂತ್ರಮೆನಲ್ಕಭೇದವನು ॥

---

೧೭ ಬಡಿಸ—ಗಾಳಕ್ಕೆ, ಬೀರಿ—ವಿಸ್ತರಿಸಿ ಕೊಟ್ಟು, ಕೆಡಿಸುವ+ಇವರು—ಈ ಉಭಯ ಇಂದ್ರಿಯಗಳು, ತಾವು+ಒಳಗಾಗಿ—ಜೀವರಲ್ಲಿ ಇಂದ್ರಿಯಗಳಾಗಿ ಎಡೆಬಿಡದಂತೆ ಅವು ಸೇರಿಕೊಂಡು, ವೃಡ....ಜವು—ಶಿಶ್ನವು.

೧೮ ಈ ಕರಣಗಳಿಗೆ ಇಂದ್ರನೆ, ಜೀವನು—ಒಡೆಯನೆಂಬರ್ಥದ ಇಂದ್ರಪದ ಬಂದು, ಇಂದ್ರಿಯ ಎಂದು ಹೆಸರಾದ ಬಳಿಕ ಅವು ಮನುಷ್ಯನನ್ನು ಕೆಡಿಸದೆ ಬಿಡುವದು ಹೇಗೆ? ಅಲ್ಲದೆ, (ಇಂದ್ರನಿಗೆ ಕರಣವಾಗಿರುವದು ಇಂದ್ರಿಯ) ಎಂತ ಶಬ್ದವಾಗಿರುವದು. ಈ ಇಂದ್ರಿಯ ಶಬ್ದವಾಚ್ಯ ಕರಣಗಳು—ಇಂದ್ರನ ಕರಣವಾದ ವಜ್ರಾಯುಧದಂತೆ ತಮಗೆ ಆಶ್ರಯನಾದ ಮನುಷ್ಯನನ್ನು ಪುರುಷಾರ್ಥದಿಂದ ಭ್ರಷ್ಟಪಡಿಸಿ ಕೆಡಿಸುವವೆಂಬಲ್ಲಿ ಸಂಶಯವೇನು? ಖಲರಲ್ಲಿ ಮುಖ್ಯರೆಂಬುದು ಅವಕ್ಕೆ ಯುಕ್ತವೂ ಆಗಿದೆ.

೧೯ ರುಚಿ—ಆಸಕ್ತಿಯನ್ನು, ಎನಲು+ಅದರ ಭಕ್ತಿಯೆಂಬುದು ಪ್ರೇಮಸ್ವರೂಪದಿಂದ ನಿರುಪಚರಿತವಾಗಿ ಆತ್ಮನ ಸ್ವರೂಪವಾಗಿಯೇ ಇದ್ದು, ವಿಚಾರದಿಂದ ಅದು ಆತ್ಮನ ಬ್ರಹ್ಮಾತ್ಮಭಾವನನ್ನು ಬೆಳಗುವ ಜ್ಞಾನವಾಗಿ ಪರಿಣಮಿಸುವದೆಂಬ ಭಕ್ತಿಯ ಮರ್ಮವನ್ನು ಗುರು ಹೇಳಿದ್ದನ್ನು ಕೇಳಿದ, ತಾಂ—ಆ ಶಿಷ್ಯನು ಪುನಃ ತನ್ನಲ್ಲಿ, ಬಗೆದಂ—ಆಲೋಚಿಸಿಕೊಂಡನು.

ಮಾಣದೈದಿದ ಭಕ್ತಿ ನಿಜ ನಿ ।
ರ್ವಾಣರೂಪಿಣಿಯೆಂದುದಾಗಮ ।
ವಾಣಿಯಾದರದಂತಿರಲಿ, ಸುಜ್ಞಾನದಿಂದಹುದೊ ॥ ೨೦ ॥

ವೀತರಾಗದೊಳಹುದೊ ವಸ್ತು ।
ಖ್ಯಾತ ಸಿದ್ಧಿಯೆನಲ್ಕೆ ಗಳಸಮ ।
ವೇತಹಾರವ ದೀಪದಿಂದರಿದಂತೆ ವೈರಾಗ್ಯಂ ॥
ಜಾತಘನಮೆಂತೆಂದುದಕ್ಕೆ ಪು ।
ರಾತನೋಕ್ತಿಯದೌಪಚಾರಿಕ ।
ಭೂತ ಸುಜ್ಞಾನ ಪ್ರದೀಪಕೆ ತೈಲಮುಪರಾಗಂ ॥ ೨೧ ॥

ಮನದ ಲಯಮೆ ವಿರಾಗಮೆನೆ, ಸಂ ।
ಜನಿಪುದೆಂತು ಮುಮುಕ್ಷುವಿಂಗನು ।
ದಿನಮೊಡರ್ಚಲ್ವಿಹಿತಮಾಗಿರೆ ಸಾಧು ಸಂಗತಿಯು ॥
ಅನುಪಮಾನ ಗುರೂತ್ತಮ ಪದಾ ।
ರ್ಚನೆಯು ವೇದಾಂತಶ್ರವಣ ಸಾ ।
ಧನೆಯು ಶಮದಮಾದಿಗಳು ಸತ್ವದ ಲವಲವಿಕೆಯುನು ॥ ೨೨ ॥

---

೨೦ ಜ್ಞಾನಂ+ಇರಲು ಅದೇ ಮನಸ್ಸಿನಲ್ಲಿ ಈ ಭಕ್ತಿಗೆ+ಎಂತು+ಎಡೆ, ಏಕೆಂದರೆ ಪರತಂತ್ರಂ+ಇದು—ಮಾಡಿಕೊಂಡರೆ ಈ ಭಕ್ತಿ, ತಾನೇ ಇರುವದಲ್ಲ. ಬ್ರಹ್ಮವು ಭೂತವಸ್ತು, ಇದನ್ನನುಸರಿಸಿ ಆಗುವ ಜ್ಞಾನವು, ವಸ್ತುತಂತ್ರಂ+ಎನಲ್ಕೆ, ಬಿಡದೆ ಜ್ಞಾನದೊಡನೆ ಅಭೇದವನು+ಐದಿದ—ಹೊಂದಿದ ಭಕ್ತಿಯೂ, ನಿರ್ವಾಣರೂಪಿಣಿ—ಕೈವಲ್ಯರೂಪವೆಂದೇ, ಎಂದುದು+ಆಗಮವಾಣಿಯು+ಆದರೆ+ಅದು+ಅಂತಿರಲಿ.

೨೧ ವೀತ(ತನ್ನನ್ನು ಬಿಟ್ಟು ತೊಲಗಿದ)+ರಾಗದೊಳು+ಅಹುದೊ.... ಖ್ಯಾತ—ಪ್ರಸಿದ್ಧನಾದ ಆತ್ಮನ ಸಿದ್ಧಿ (ಪ್ರಾಪ್ತಿ)ಯು+ಎನಲ್ಕೆ, ಗಳಸಮುವೇತ—ತನ್ನ ಕೊರಳಿನ ಹಾರವನ್ನು ದೀಪದಿಂದರಿವಂತೆ, ಜ್ಞಾನಿಯೂ 'ನಿತ್ಯಸಿದ್ಧವಾದ ತನ್ನ ಸರ್ವಾತ್ಮಭಾವವನ್ನು' ಜ್ಞಾನದಿಂದಲೆ ಪಡೆದುಕೊಳ್ಳುವನು (ಬೃ.ಭಾ. ೧-೪-೧೦) ಹಾಗಾದರೆ, ವೈರಾಗ್ಯಂ+ಜಾತಘನಂ—ಅಧಿಕವೆಂಬುದು ಹೇಗೆ! ಪುರಾತನ+ಉಕ್ತಿ+ಅದು+ಔಪಚಾರಿಕವು+ಆದರು ಅದಕ್ಕು ಹೆಚ್ಚಿನ ಒಂದು ಫಲವುಂಟು, ಭೂತ—ಮೊದಲೆ ಇರುವ ಆತ್ಮವಸ್ತು ವಿಷಯದ ಸುಜ್ಞಾನವೆಂಬ ಪ್ರದೀಪಕೆ+ಅಪರಾಗಂ (ವೈರಾಗ್ಯವು+ತೈಲಂ—ಎಣ್ಣೆಯು ಎಂದರೆ ಜ್ಞಾನವು ವೈರಾಗ್ಯದಿಂದ ಕಾಲೂರಬೇಕು.

೨೨ ವಿರಾಗಂ+ಎನೆ—ಎಂದು ಪ್ರಶ್ನಿಸಿದರೆ, .... ವಿಂಗೆ+ಅನುದಿನಂ+ಒಡರ್ಚಲ್—ಈ ಸಾಧನೆಗಳನ್ನು ಪಡೆಯುವದಕ್ಕಾಗಿ ಪ್ರಯತ್ನವನ್ನು ಮಾಡಬೇಕೆಂದು ಶಾಸ್ತ್ರದಲ್ಲಿ, ವಿಹಿತಂ+ಆಗಿರೆ—ವಿಧಿಸಿರುವಲ್ಲಿ.

ಎಂಬ ದೆಶೆಯಿಂ ರಜದ ತಮದ ಕಿ ।
ಲುಂಬು ಸೋಂಕದ ತೆರದಿ ಗೈವ ।
ರ್ಥಂ, ಬಿಡದೆ ಚಿತ್ತಕ್ಕೆ ಪೇಳ್ವುದು ನೀತಿ, ನಿಲಿಸುವದು ॥
ಬೆಂಬಿಡದ ಸತ್ವವನು, ವೈರಾ ।
ಗ್ಯಂ ಬರಲ್ಫಲಪಾಕದಂತೆ ಹ ।
ರುಂಬಳಿಯೆ ಕಾಲಕ್ರಮದಿ ಸುಜ್ಞಾನವೊಂದುವದು ॥ ೨೩ ॥

ಜ್ಞಾನ ವಿಜ್ಞಾನಾಪರಾಗ ।
ಸ್ಥಾನದೋಳ್ವೈರಾಗ್ಯ ಖಡ್ಗದಿ ।
ತಾನೊಡಪ್ಪುರ್ದು ಚಿತ್ತಮಯ ದುರ್ವ್ಯಾಘ್ರ ಸಂಕ್ಷಯಮುಂ ॥
ಪ್ಪೌನಿಗಳ್ಸಂನ್ಯಾಸವೇ ರಾ ।
ಗಾನುಕೂಲತ್ಯಾಗವೆಂಬರಿ ।
ದೇನು ಕರ್ಮಫಲಚ್ಯುತಿಯೆ, ಮೇಣೊಂದು ದೇಶದಲಿ ॥ ೨೪ ॥

ಯತಿತೆಯೆಂಬರೆನಲ್ಕೆ ಫಲಸಂ ।
ಗತಿಯ ವರ್ಜನೆಯೆಂತುಟಿರದೆ ವಿ ।
ರತಿ ಘಟಿಪುದಿದರಿಂದ ಕಾರಣಮಾಯ್ತು ವೈರಾಗ್ಯಂ ॥
ಮತಿಯೊಳಿಹ ರಾಗವೆ ಗುರುತು ವಿ ।
ಸ್ಮೃತಿಗೆ, ತರುಕೋಟರದೊಳಿರಲಾ ।
ಕ್ರತುಭುಜಂ ಶಾಡ್ವಲತೆಯಪ್ಪುದೆ ಕಾಮ್ಯತೆಯೆ ಲಿಂಗಂ ॥ ೨೫ ॥

---

೨೩ ಎಂಬ ದೆಶೆಯಿಂದ ವೈರಾಗ್ಯವು ಮನೋಲಯವಲ್ಲವು. ಅದಕ್ಕೆ ಪ್ರತಿಯಾಗಿ ಗೈವರ್ಥಂ—ಮಾಡುವ ಪ್ರಯತ್ನಗಳು. ನೀತಿ—ವಿವೇಕವನ್ನ, ಈ ಮೇಲಿನವುಗಳಿಂದ ವೈರಾಗ್ಯಂ ಬರಲು+ಫಲ....ಳಿಯೆ—ಮಾಗಿದ ಹಣ್ಣು ತಾನು ತೊಟ್ಟು ಕಳಚಿಕೊಂಡಂತೆ,....ಜ್ಞಾನಂ+ಒಂದುವದು—ತನಗೆ ಬಂದು ಪ್ರಾಪ್ತವಾಗುವದು.

೨೪ ಜ್ಞಾನ, ವಿಜ್ಞಾನ+ಅಪ(ವಿ)ರಾಗ+ಸ್ಥಾನದೋಳ್—ಎಂಬ ಮೂರರಲ್ಲಿ ಬಂದು ವೈರಾಗ್ಯ ಕತ್ತಿಯಿಂದಲೇ ಚಿತ್ತವೆಂಬ ದುರ್ವ್ಯಾಘ್ರದ, ಸಂಕ್ಷಯಮುಂ—ನಾಶವು, ತಾನು+ಒಡಪ್ಪುರ್ದು—ತನ್ನಲ್ಲಿ ಅದು ಹುಟ್ಟಿಕೊಳ್ಳುವದು, ಅನುಕೂಲ ವಿಷಯದ ರಾಗತ್ಯಾಗವೇ ವೈರಾಗ್ಯವು. ಅದನ್ನೆ ಕರ್ಮಗಳನ್ನು ಬಿಡುವ ಸಂನ್ಯಾಸವೆಂದು ಕೆಲರು, ಇನ್ನು ಕೆಲವರು ಕರ್ಮಫಲತ್ಯಾಗವೆ ಸಂನ್ಯಾಸ (ಗೀತಾ ೧೮-೨) ಎಂದೆನ್ನುತ್ತಿರುವಲ್ಲಿ ವೈರಾಗ್ಯವೆಂಬುದರ ನಿಶ್ಚಿತಾರ್ಥ ಯಾವದು?

೨೫ ಫಲ....ನೆಯು—ಫಲಾಕಾಂಕ್ಷೆಯ ತ್ಯಾಗವನ್ನು, ಎಂತುಟಿರದೆ—ಮಾಡಿದಲ್ಲವೆ, ವಿರತಿ—ವೈರಾಗ್ಯವೆಂಬ ಸಂನ್ಯಾಸ (ಎಂದರೆ ಜ್ಞಾನ)ವು+ತನಗೆ ಹೇಗೆ ಘಟಿಪುದು+ಇದರಿಂದ (ಜ್ಞಾನಕ್ಕೆ)+ಕಾರಣವಾಯ್ತು+ವೈರಾಗ್ಯಂ, ವಿಸ್ಮೃತಿಗೆ—ಅಜ್ಞಾನವಿರುವದೆಂಬುವಕ್ಕೆ. ತರು ಕೋಟರ ಮರದ ಪೊಟರೆಯಲ್ಲಿ, ಆ ಕ್ರತುಭುಜಂ—ಆ ಬೆಂಕಿಯಿದ್ದರೆ, ಶಾಡ್ವಲತೆಯು+

ಇಲ್ಲವೇ ರಾಗದ ವಿಕಾರಂ ।
ಬಲ್ಲವರಿಗೆನೆ ಜನಕ ಬಲಿ ನೆರೆ ।
ಬಲ್ಲ ಶುಕ ಸನಕಾದಿಗಳೊಳು ಬಹು ಕ್ರಿಯಾ ಸಾಮ್ಯಂ ॥
ಎಲ್ಲಿಹುದು, ತದ್ಬಾಧೆಯದರಿಂ ।
ದಿಲ್ಲಿ ಶಿಥಿಲ ಗ್ರಹಣವೇ ಮ ।
ತ್ತಲ್ಲ ಜೀವನ್ಮುಕ್ತಪರವಿದು ತಾವಿರಲಿ ದಾರ್ಢ್ಯಂ ॥ ೨೬ ॥

ರಾಗಗಳಿವೆಂಬುದರ ದೆಶೆಯಿಂ ।
ರಾಗಕಂ ಪ್ರಾರಬ್ಧ ಫಲ ಸಂ ।
ಭೋಗದಲಿ ತಡೆಯಿಲ್ಲವೆಂಬುದರಲ್ಲಿ ತಾತ್ಪರ್ಯಂ ॥
ರಾಗಸಂಗ್ರಹದಲ್ಲಿ ತೋರದು ।
ಹಾಗಿರಲಿ, ತತ್ಕಥೆ ವಿಚಾರಿಸೆ ।
ರಾಗಗೋಚರವೆಲ್ಲ ವಿಟ್ಪ್ರಾಯಂ ಮಹಾತ್ಮರಿಗೆ ॥ ೨೭ ॥

ಎನುವ ನುಡಿಯಿಂ ಪೊರಗೆ ಬಹು ಕಾ ।
ರ್ಯನಿಯತಾಶಯನಾಗಿ ನ್ನೈರಾ ।
ಶ್ಯ ನಿಬಿಡ ಸುಮತಿಯಾಗಲಂತಃಸ್ಥಲದೆ ಜಯಿಪ ನರಂ ॥
ಎನುವ ನುಡಿಯಿಂ ತೋರ್ಪಭೇದಾ ।
ಭಿನಯಕನುಕೂಲತ್ವಮಿಲ್ಲೆಂ ।
ತೆನಲು ಪೂರ್ವಾರಬ್ಧ ಕರ್ಮವೆ ಗಮ್ಯಮಾಗಿಹುದು ॥ ೨೮ ॥

---

ಅಪ್ಪುದೆ— ಅಲ್ಲಿ ಹುಲ್ಲು ಚಿಗುರುವುದೆ ? ಅಜ್ಞಾನಿಯಲ್ಲಿ ಜ್ಞಾನವೂ ಹೀಗೆಯೇ ಹುಟ್ಟುವದಕ್ಕಿಲ್ಲ ವೆಂಬುದಕ್ಕೆ ಅವರಲ್ಲಿನ, ಕಾಮ್ಯತೆ—ಬಯಸುವ ವಿಷಯಗಳ ಆಕಾಂಕ್ಷೆಯೇ ಬಲವಾದ, ಲಿಂಗಂ— ಒಂದು ಕುರುಹು.

೨೬ ಇಲ್ಲಿ—ಜ್ಞಾನಿಗಳಲ್ಲಿ, ಶಿಥಿಲ—ತಮ್ಮಲ್ಲಿ ದೃಢಮೂಲವಿಲ್ಲದ ಅದೃಢ ರಾಗಗಳು+ ಎಂದಲ್ಲದೆ, ಮತ್ತಲ್ಲ—ದೃಢವಾದ ರಾಗಗಳನ್ನು ಇಲ್ಲಿ ಗ್ರಹಿಸುವದಲ್ಲ, ತಾವು+(ಅವು)+ಇರಲಿ ದಾರ್ಢ್ಯಂ—ಪುಷ್ಕಳವಾಗಿದ್ದರೂ ಅವುಗಳಿಂದ ಜ್ಞಾನಿಗಳಿಗೆ ಬಾಧಕವಿರುವದಿಲ್ಲ.

೨೭ ಜ್ಞಾನಿಯಲ್ಲಿ, ರಾಗಗಳು+ಇವೆ+ಎಂಬುದರ...., ರಾಗಕಂ—(ರಾಗಾಸ್ಸಂತು....) ಎಂಬ ಶ್ರುತಿಗೆ,....ಸಂಗ್ರಹದಲ್ಲಿ—ಜ್ಞಾನಿಯಲ್ಲಿ ರಾಗಗಳಿರುವನೆಂಬಲ್ಲಿ ತಾತ್ಪರ್ಯವಿರುವದಿಲ್ಲ. ಏಕೆಂದರೆ ಭೋಗಗಳು ಜ್ಞಾನಿಗೆ ವಿಟ್ (ಮಲ)+ಪ್ರಾಯಂ.

೨೮ ಪೊರಗೆ....ನಾಗಿ—ಕಾರ್ಯಗಳಲ್ಲಿ ಜ್ಞಾನಿಯು ಬಿಡುವಿಲ್ಲದಂತೆ ತೊಡಗಿರುವನೆಂದು ಹೊರಗೆ ಕಂಡರು, ನೈರಾ....ಗಲು+ಅಂತಸ್ಸ್ಥಲ....—ತನ್ನೊಳಗೆ ಮಾತ್ರ ಅವುಗಳ ಸಂಗವಿಲ್ಲದ ಜ್ಞಾನಿಯೇ ಅನಾಯಸದಿಂದ ಮೋಕ್ಷವನ್ನು ಜಯಿಸುವ ಧೀರನು ! ಇದರಿಂದ ವ್ಯವಹಾರವೆಲ್ಲ ಸತ್ಯವೆಂಬ ಭ್ರಾಂತರ ಶಾಸ್ತ್ರಕ್ಕೆ ಬೆಂಬಲ ಬರುವದಿಲ್ಲ, ಹೇಗೆಂದರೆ ಜ್ಞಾನಿಯ ವ್ಯವಹಾರವು ಹಿಂದಿನ ಕರ್ಮವನ್ನನುಸರಿಸಿರುವುದು.

ಅನುಭವಿಸಲಾವಶ್ಯಕತ್ವವ ।
ನನುಗಮಿಪಾರಬ್ಧ ಕೃತಿಗೆ ನಾ ।
ಶನಮಿರುವದಾದರೆ ಬಲಿಷ್ಠರು ಲಬ್ಧ ವೈಭವರು ॥
ಘನರು ನಲ ರಾಘವ ಯುಧಿಷ್ಠಿರ ।
ರನುಭವಿಸಿಡರದೆಂತವಾರ್ಯ ಜ ।
ನನವನುಳ್ಳ ದ್ವಂದ್ವ ದುಃಖವನೇನು ಹೃದಯಮೆನೆ ॥ ೨೯ ॥

ಇರಲಿ ಸಾಂದ್ರಾರಬ್ಧದಿಂದಾ ।
ಸ್ಫುರಣೆ ವಿಜ್ಞಾನವನು ಕೆಡದೋ ।
ಲ್ಪೊರೆಯೆ ವೈರಾಗ್ಯಂ ದೃಢಂ ಬೇಕಿಲ್ಲಿ ಮನುಜರಿಗೆ ॥
ಇರದೊಡೀ ನಯ ವಸ್ತುಬೋಧಾ ।
ಕರಮೆನಿಪ ದೆಶೆಯಿಂದ ಶ್ರೀಮ ।
ದ್ಗುರು ಚರಣರೂರೀಕೃತಂ ಪಾಲಿಪುದು ಶಿಷ್ಯಜನಂ ॥ ೩೦ ॥

ಶೋಕಮೈದನು ವೀತರಾಗನು ।
ಲೋಕದಲ್ಲಿ ಇದಕ್ಕೆ ಲಕ್ಷಣ ।
ಮೇಕಲೆಯ ಪಡೆದಿರ್ಪುದೆನೆ, ಪರಕೃತಿ ವಿಘಾತವನು ॥
ಸಾಕೆನದೆ ಸಹಿಸುವದು ಮೌನಾ ।
ನೇಕವಸ್ತುತ್ಯಾಗಕರ ಭಿ ।
ಕ್ಷಾಕರಣ ದಾರಾತ್ಮಜಾದಿ ವಿಯೋಗವೆನಿಸುವದು ॥ ೩೧ ॥

---

೨೯ ಅನುಭವಿಸಲು + ಆವಶ್ಯಕತ್ವವನು + ಅನುಗಮಿಪ—ಸೂಚಿಸುವ, ತನ್ನ ಫಲಕ್ಕೆ ಆರಂಭಿಸಿರುವ. ಆರಬ್ಧಕೃತಿ—ಕರ್ಮಕ್ಕೆ, ಘನರು—ಮನುಷ್ಯರಲ್ಲಿ ಹೆಚ್ಚಿನವರು,....ಷ್ಠಿರರು+ ಅನುಭವಿಸಿದರು+ ಅದೆಂತು+ ಅವಾರ್ಯಜನನವನುಳ್ಳ—ತಿರಸ್ಕರಿಸುವದಕ್ಕೆ ಶಕ್ಯವಿಲ್ಲದ, ದ್ವಂದ್ವ ದುಃಖವನು+ ಏನು ಹೃದಯಂ+ ಎನೆ—ತನ್ನ ಫಲಕೊಡುವಂತೆ ಕರ್ಮಕ್ಕೆ ನಿಯಾಮಕರಾಗಿರುವ ಅಗ್ನಿ ವಿಷ್ಣು ಧರ್ಮಗಳ ಅಂಶಸಂಭೂತರಾದ ನಳ ರಾಮ ಯುಧಿಷ್ಠಿರರು ಏಕೆ ದುಃಖಪಟ್ಟರು ?

೩೦ ಪ್ರಾಸಂಗಿಕ ಸಂಗತಿ ಹಾಗಿರಲಿ, ಸಾಂದ್ರ—ಸಂದು ಬಿಡದಂತೆ ತನ್ನಲ್ಲಿ ಹೆಣೆದು ಕೊಂಡು ತನಗೆ ದಾಟುವದಕ್ಕೆ ಅಶಕ್ಯವಾಗಿರುವ, ಆರಬ್ಧ—ಫಲಕ್ಕಾರಂಭಿಸಿರುವ ಪ್ರಾರಬ್ಧಕರ್ಮ ದಿಂದ, ಕೆಡದ+ ಓಲ್+ ಪೊರೆಯೆ, ಈ ನಯ—ಈ ಶಾಸ್ತ್ರವು, ವಸ್ತು—ಭೋಕ್ತೃ ಭೋಗ್ಯ ಭೋಗಗಳನ್ನು ತಳ್ಳಿಹಾಕಿರುವ ತನ್ನ ಸರ್ವಾತ್ಮಭಾವದ, ಬೋಧ—ಅನುಭವಗಂಡ ಅವಗತಿ ಯನ್ನು, ಅಕರ—ಉಂಟುಮಾಡುವದಿಲ್ಲವಾದ್ದರಿಂದ,.... ಚರಣರ+ ಊರೀಕೃತಂ—ಆಶ್ರುತಂ— ಇದುವರೆಗೆ ಕೇಳಿದ್ದನ್ನು, ಅಥವಾ ಪ್ರತಿಜ್ಞಾತಂ—ಪ್ರತಿಜ್ಞೆ ಮಾಡಿ ವಿಸ್ತರಿಸಿದ ಈ ವೈರಾಗ್ಯವನ್ನು ತನ್ನ ಶ್ರೇಯಸ್ಸಿಗಾಗಿ ಮುಮುಕ್ಷುವು ಸಂಪಾದಿಸಲೇಬೇಕು. ಏಕೆಂದರೆ—

೩೧ ಶೋಕಂ+ ಐ(ಹೊಂ)ದನು, ವೀತ—(+ ರಾಗ) ರಹಿತನು, ಇದಕ್ಕೆ—ಈ ವೈರಾಗ್ಯಕ್ಕೆ, ಲಕ್ಷಣಂ+ ಏಕಲೆಯ—ಯಾವ ಗುರ್ತಿನ, ಪರಕೃತಿ ವಿಘಾತ—ತನಗೆ ಪರರು ಕೊಡುವ

ಜ್ಞಾನವಹ್ನಿ ವಿರಾಗ ಕಾಷ್ಟವ ।
ತಾನಡಸಿ ದುಸ್ತಾರ್ಯ ಸಂಸೃತಿ ।
ಕಾನನವ ದಹಿಸುವದು ಸತ್ಯಂ ಮುನಿಗಳಿದನರಿತು ॥
ಮಾನವರಿಗೆ ಮುಮುಕ್ಷುಗಳಿಗೆ ಸ ।
ದಾನುಭಾವ್ಯಮೆ ಭೈಕ್ಷ್ಯಮೊಂದಾ ।
ದಾನವಾಗದೆ ಮತ್ತೆ ಪೇಳ್ದರು ಬಯಕೆಗಿರದಂತೆ ॥ ೩೨ ॥

ಕೆಲರು ಬ್ರಹ್ಮವ್ರತಮೆನುತ್ತಂ ।
ತಿಳಿದರೀ ವೈರಾಗ್ಯಮಂ, ಕೆಲ ।
ಕೆಲರು ಸಂನ್ಯಾಸಕ್ಕೆ ನೆಲೆವನೆಯೆಂದರಿವರಿಂದ ॥
ಬಲಿದ ಮನವುಳ್ಳವನು ಪೀರ್ದುಜ್ ।
ಜ್ವಳಿಪನೌದಾಸೀನ್ಯ ಸುಧೆಯಂ ।
ಬಳಿಕವಗೆ ಸುರಪಾಲ ತೋರ್ಪಂ ಕಾಡಮಿಗದಂತೆ ॥ ೩೩ ॥

ಇತರ ನರನಾಥ ಕ್ರಿಮಿಗಳ ।
ಲ್ಲತಿಶಯಮದೇಂ ಭುವನಮೇ ತೃಣ ।
ತತಿಯೊಲಿರ್ಪುದು ವೀತರಾಂಗಗೆಲ್ಲಿಯದು ರಾಗ, ॥

---

ಉಪದ್ರವಗಳನ್ನು ಸಹಿಸುವದು ಮತ್ತು, ಮೌನ—ಸುಮ್ಮನಿರುವಲ್ಲಿಯೂ, ಅನೇಕ....ಕ—ಇಷ್ಟ ವಸ್ತುಗಳು ತನ್ನನ್ನು ಬಿಟ್ಟಗಲುವಲ್ಲಿಯೂ, ಭಿಕ್ಷಾಕರಣ—ತಿರಿದುಂಬುವಲ್ಲಿಯೂ, ದಾರಾ—ಹೆಂಡತಿ, ಆತ್ಮಜಾದಿ—ಮಕ್ಕಳು-ಮರಿಗಳ ವಿಯೋಗದಲ್ಲಿಯೂ ಬೇಕಿಲ್ಲದಿದ್ದರೂ ತನಗೆ ಬರುವ ಕಷ್ಟಗಳನ್ನು ಹೃದಯಪೂರ್ವಕ ಆಹ್ವಾನಿಸುವದೆ ವೈರಾಗ್ಯದ ತಿರುಳು.

೩೨ ತಾನು+ಅಡಸಿ—ಒಂದು ಬಳಿ ತಂದು ಸೇರಿಸಿದರೆ ಅದರಿಂದ, ದುಸ್ತಾರ್ಯ—ತಾನು ತರಿಸುವದಕ್ಕೆ ಬಹು ಕಷ್ಟವಾಗಿರುವ ಸಂಸಾರವೆಂಬ, ಕಾನನ (ಕಾಡನ್ನು) ವ+ಈ ಜ್ಞಾನ ವಹ್ನಿಯು+ದಹಿಸುವದು+ಸತ್ಯಂ—ವೈರಾಗ್ಯವೆಂಬ ಕಟ್ಟಿಗೆಗಳು ಈ ಜ್ಞಾನಕ್ಕೆ ಒಂದುಗೂಡಿದರೆ ಕಾಡಗಿಚ್ಚಾಗಿ ಅದು ಸುಡುವದರಲ್ಲಿ ಸಂಶಯವಿಲ್ಲವು. ಆದ್ದರಿಂದಲೆ ಪೂಜ್ಯರಾದ ಹಿಂದಿನವರು ಮುಮುಕ್ಷುಗಳಿಗೆ, ಸದಾನು....ಕ್ಷಂ—ಸಂನ್ಯಾಸ ಪೂಜ್ಯವಾಗಿದ್ದರೂ ಅದೊಂದೇ, ಆದಾನಂ—ಸ್ವೀಕರಿಸುವದು ಸಾಕು, ಆಗದೆ, ಅದರ ಜತೆಗೆ, ಮತ್ತೆ—ಮತ್ತೂ, ಬಯಕೆಗೆ+ಇರದಂತೆ—ಬಯಕೆಯನ್ನೆಲ್ಲ ಬಿಡುವ ವೈರಾಗ್ಯವನ್ನು ಒತ್ತಿ ಹೇಳಿರುವರು.

೩೩ ....ದರು+ಇವರಿಂ (ಈ ವೈರಾಗ್ಯದಿಂ)ದ+ಬಲಿದ, ಪೀರ್ದು—ನಾಲಿಗೆಯಿಂದ ಸೆಳೆದು ಸವಿದುಂಡು, ಉಜ್ಜ್ವಳಿಪನು—ಚೆನ್ನಾಗಿ ಬೆಳಗುವನು, ಔದಾಸೀನ್ಯ ಸುಧೆಯಂ—ಬ್ರಹ್ಮ ಲೋಕಾಂತವ ಪುಣ್ಯಪದವಿಗಳಲ್ಲಿ ಉಪೇಕ್ಷೆಯೆಂಬ ಅಮೃತವನ್ನು, ಸುರಪಾಲ—ಇಂದ್ರನು ಕೂಡ ಒಂದು ಕಾಡುಮೃಗ(ಕೋತಿ?)ದಂತೆಯೆ !

೩೪ ನರನಾಥ—ಇನ್ನು ಮನುಷ್ಯರಾಜರೆಂಬ, ಕ್ರಿಮಿ (ಹುಳು)ಗಳಲ್ಲಿ+ಅತಿಶಯಂ+ಅದೇಂ?....ತೃಣತತಿ—ಕಸಕಡ್ಡಿಗಳ ರಾಶಿಯಂತೆ, ವೀತ-ರಾಗವೆ ತನ್ನಲ್ಲಳಿಸಿಹೋಗಿರುವ ವಿರಕ್ತ

ಮತಿವಿಭೇದಿಸಲಾತ್ಮತನು ಸಂ ।
ಗತಿಯಲಂಟದ ಮೋಹವಿಾಗ ಯು ।
ವತಿಯ ಸಂಗದೊಳಪ್ಪುದೇ ಜಗದೇಕವಿಗ್ರಹಗೆ ॥ ೩೪ ॥

ವಿರತಿಯಿಂ ಪೊರವಂಟು ಮನೆಯಂ ।
ಮರಳಿ ನೆನೆದವನಾಗೆ, ಯುಃತಮಂ ।
ದಿರನು ವಾನಪ್ರಸ್ಥನೋರ್ವಂ ಭೋಗಪರನಾಗಿ ॥
ಪರಮ ತತ್ತ್ವವೆ ತಾನೆನುವದಾ ।
ದರೆ ಬಿಡುವದವನಂ ಹೊಲೆಯನಂ ।
ತಿರುವ ಕರ್ಮಬ್ರಹ್ಮಯುಗ್ಮದೆ ಭ್ರಷ್ಟನಾಗುವನಂ ॥ ೩೫ ॥

ನಿರಧಿಕಾರಿಗಳಾದ ವರ ವ ।
ರ್ಣರಿಗೆ ನಾರಿಯರಿಗೆ ರಹಸ್ಯವ ।
ನರುಪುವಂ ವಿಷಯಾರ್ಥಿಯಲ್ಲದೆ ತತ್ತ್ವಪರನಲ್ಲ ॥
ಅರಸುಗಳಿಗಿದ ಪೇಳ್ದನಾದರೆ ।
ಗುರುವಲಾ ವಂಚಕರ ಗೊಂದಣ ।
ಕರರೆ ಗ್ರಾಮ ಬಹಿಷ್ಠವೀಥಿ ಸದನಿಯೇಯಾತುಂ ॥ ೩೬ ॥

ತನ್ನ ಹೊಲೆಯೊಡಲಿಂಗೆ ಹೇಸದ ।
ಕುನ್ನಿಗೇಕೆ ವಿರಾಗವೈದರೊ ।
ಳಿನ್ನಿರುವುದೇ ಸುಖವು, ಭೂತಂಗಳಲಿಯಾರನೆಯ ॥

---

ನಿಗೆ ಹೇಳುವವೇನು ? ದುಃಖದಿಂದ ತುಂಬಿರುವ ಜುಗುಪ್ಸೆಯ ಈ ವಿಷಯಗಳಲ್ಲಿ ಅನುರಾಗ ಹೇಗೆ ಬಂದೀತು ? ಆತ್ಮ ಮತ್ತು ತನು—ದೇಹಾದಿಗಳೆಂಬ ಅನಾತ್ಮ ಈ ಎರಡನ್ನೂ, ವಿಭೇದಿಸಲು—ಬೇರಾಗಿ ಒಂದರಿಂದೊಂದನ್ನು ವಿವೇಕಿಸಲು ಆತ್ಮಾನಾತ್ಮಗಳ ಕಲಿಬೆರಕೆಯ ಅಧ್ಯಾಸವೆ ತನ್ನನ್ನು ಬಿಟ್ಟು ತೊಲಗಿರುವದರಿಂದ ಆಗ ಜ್ಞಾನಿಗೆ, ತನುಸಂಗತಿಯಲಿ—ತನ್ನ ದೇಹೇಂದ್ರಿಯಗಳಲ್ಲಿಯೆ 'ನಾನು' ಎಂಬ ತನ್ನನ್ನು ಅವುಗಳೊಡನೆ ಒಂದಾಗಿ ಮಾಡುವ, ಮೋಹಂ—ಮೋಹವೆ ಅಂಟದೆ ಇರುವಲ್ಲಿ, ಇನ್ನು+ಈಗ....., .....ವಿಗ್ರಹ—ಇಡಿಯ ಜಗತ್ತೇ ತನ್ನ ಶರೀರವನ್ನಾಗಿ ಮಾಡಿಕೊಂಡಿರುವ ಆ ಜ್ಞಾನಿಗೆ.

೩೬ ವರ—ಮೇಲಿನ, ....ವನು+ಅರುಪುವಂ—ತಿಳಿಸುವವನು, ....ಅರ್ಥಿ—ಬಯಸುತ್ತಿರುವವನಲ್ಲವೆ, ಗೊಂದಣಕೆ—ಗುಂಪಿಗೆ, ಗ್ರಾಮ..... —ಅಲ್ಲದೆ, ಊರುಹೊರಗಿನ ಅಮೇಧ್ಯದ ಬೀದಿಯನ್ನೆ ಮನೆಯನ್ನಾಗುಳ್ಳವನು ಎಂದರೆ ಹಂದಿ ನಾಯಿಗಳಂತೆ ವಿಷಯಭೋಗಗಳ ಅಮೇಧ್ಯದ ಬೀದಿಯಲ್ಲಿಯೆ ಸಂಚರಿಸುವವನು, ಎಂದಾಶಯವು.

೩೭ ಕುನ್ನಿ (ನಾಯಿ) ಗೆ+ಏಕೆ ವಿರಾಗಂ+ಐದುವದು, ಐದರೊಳು—ಶಬ್ದಾದಿ ಪಂಚ ವಿಷಯಗಳಲ್ಲಿ, ....ಆರನೆಯ—ಭೂತಗಳೂ ಅವುಗಳ ಗುಣಗಳೂ ಅಲ್ಲದ ನಿರ್ವಿಷಯನೆಂಬ, ಸನ್ನಿ—ಕುರುಹಿನಿಂ' ತನ್ನ ಆತ್ಮನನ್ನು, ತಿಳಿದವನು+ಆಹಂ—ವ್ಯಕ್ತಪನ್ನಚಿತ್ತಂ—'ನಾನು'

ಸನ್ನೆಯಿಂ ತಿಳಿದವನಹಂ ವೃ ।
ತ್ಪನ್ನ ಚಿತ್ತಂ, ಮಾಂಸಮಯುತನು ।
ವನ್ನುಳಿದು ಭೂತಮಣಿ ತಂತುವ ಚಿತ್ತೆಣಿಪನಾರ್ಯಂ ॥ ೩೭ ॥

ತಿಳಿದು ವಿಷಯ ವಿಸರವ ಮತ್ತದ ।
ಬಳಸಿದವ ನರನಲ್ಲ ಗರ್ದಭ ।
ಕುಲಜನಹ ನಹಿತಪ್ರಧಾನವ ತನ್ನಧೀನವನು ॥
ಕಳೆಯದವನೀಪ್ಸಿತವ ನರರೋ ।
ಳ್ಪುಳುವಲಾ! ಲಕ್ಷಣ ಶತ ಶತಂ ।
ಗಳಲಿ ನಿಂದೇಂ ಕೆಲಸ ಗುಣದೋಷಂಗಳೆರಡರಲಿ ॥ ೩೮ ॥

ಕೆಸರ ಹೋರಟೆಯ ಎಡರನು ತಾಂ ।
ಮಸುಳಿಪುದೆ ಗುಣವೆಂದು ಪೇಳ್ವರು ।
ರಸಿಕರೀ ದೇಹಾದಿ ಸಂಗವೆ ಶೈವಲದ ತೊಡಕು ॥
ರಸಧಿಯೆ ಸಂಸಾರವಿದ ದಾಂ ।
ಟಿಸುವ ನಾವಿಕನಲ್ತೆ ಗುರು ಸೇ ।
ರಿಸುವ ಪೋತವೆ ತಡಿಯ ಸೋಹಂಭಾವವೆನಿಸುವದು ॥ ೩೯ ॥

---

ಎಂಬುದರ ನಿಜವನ್ನರಿತವನು, ....ತನುವನ್ನು+ ಉಳಿದು—ಆ ದೇಹದಲ್ಲಿ ನಾನೆಂಬುದನ್ನು ಬಿಟ್ಟು, ಭೂತಮಣಿತಂತುವ—ಧಾರದಲ್ಲಿ ಮಣಿಗಳಂತೆ ಈ ಆಕಾಶಾದಿ ಭೂತಗಳನ್ನು ಪೋಣಿಸಿಕೊಂಡಿರುವ ಚಿತ್ತೊಂದನ್ನೆ ನಾನೆಂದು ಶಮದಮಾದಿಗಳಿಂದ ಸುಸಂಸ್ಕೃತನಾದಾರ್ಯನು, ಎಣಿಪನು-ಎಣಿಸುವನು.

೩೮ ಸುಖಲೇಶವೂ ಇಲ್ಲದ್ದೆಂದು ತಿಳಿದು ವಿಷಯ,ವಿಸರ—ಸಮೂಹವನ್ನು ಬಿಟ್ಟ ಬಳಿಕ, ಮತ್ತು—ಪುನಃ, ಅದ—ಅವುಗಳನ್ನು,....ಜನು+ಅಹನು(ವಾಸಿಷ್ಠ, ಉ....ಸಿ....೮-೯)+ಅಹಿತ ....—ತನಗೆ ದುಃಖವನ್ನು ಬಯಸುವವರಲ್ಲಿ ಅಗ್ರಗಣ್ಯವಾಗಿ ತನ್ನಧೀನವಲ್ಲಿರುವ, ಈಪ್ಸಿತವ—ಭೋಗೇಚ್ಛೆಯನ್ನು ಬಿಟ್ಟು ಕಳಿಯುವವನು+ನರರೋಳ್+ಪುಟ್ಟಿದ ಪುಳುವಲ! ಆಶೆಗಳೆಲ್ಲ ಬಿಟ್ಟರೆ, 'ಆತ್ಮಪ್ರಾಪ್ತಿ' ಎಂಬ ಫಲ ಸಿಕ್ಕುವದು. ಇದರಿಂದ ಆಶೆಗಳೆಂಬ ವಿಷದ ಮೂಲ ಬಳ್ಳಿಗಳ ಮಾಲೆಯೆ ಕಿತ್ತುಹೋಗುವದು (ವಾ॥ ಉ॥ ಸಿ॥ ೮-೮).

೩೯ ಕಳ್ಪುಸುಬುಲು-ಕೆಸರಿನ ಕಳ್ಭೂಮಿಯಲ್ಲಿ ಸಿಕ್ಕಿಬಿದ್ದಿರುವ ಒಬ್ಬ ಮನುಷ್ಯನು ಅದರಿಂದ ಮೇಲಕ್ಕೆ ಬರುವದಕ್ಕಾಗಿ ತಾನು ಮಾಡುವ ಕೆಸರ ಹೋರಟೆಯ—ತನ್ನೆ ಹೋರಾಟದ, ಎಡರಿನ-ಒಂದು ವಿಪತ್ತನ್ನು, ಗುಣ-ಹಗ್ಗವು, ಮುಸುಳಿಪುದೆ-ಆ ತೊಡಕಿನ ತೊಂದರೆಯನ್ನು ತನಗೆ ತಗ್ಗಿಸಿ ಪರಿಹರಿಸಬಲ್ಲುದೆ ಏನು? (ಲಕ್ಷಣ....ಡರಲಿ-೩೮) ಆಶೆಗೆ ಸಿಕ್ಕಿ ಅದರಲ್ಲಿ ಚೆನ್ನಾಗಿ ಹೂತುಕೊಂಡಿರುವ ನರನನ್ನೂ ಗುಣದೋಷಗಳ ನಮ್ಮಾ ವಿಮರ್ಶೆಯು ಎಷ್ಟುಮಾತ್ರ ಉದ್ಧರಿಸೀತು? ರಸಿಕರು—ಮರ್ಮಜ್ಞರು, ಈ ದೇಹಾದಿ ಸಂಗವೆ—ಬೇರ್ಪಡಿಸುವದಕ್ಕಿಲ್ಲದಂತೆ ಆತ್ಮಾನಾತ್ಮಗಳನ್ನು ಒಂದನ್ನೊಂದರಲ್ಲಿ ಕಲೆಬೆರಕೆಯನ್ನು ಮಾಡಿಕೊಂಡಿರುವ ಅನಾತ್ಮಾಭಿಮಾನವೆಂಬುದೇ,

ಸಂಸರಣ ವೈತರಣಿಯಲ್ಲಿಹ ।
ರಂ, ಸುಕೃಪೆಯಿಂ ನಮ್ಮ ನೋಡಿ ಕ !
ರಂ ಸಹಿಸದಿರಿ ತನುವಿನಲಿ ಮಾನವೆನುತ ಶ್ರುತಿಯು ॥
ಹಿಂಸಿಸಿಯೆ ತಾಯಂತೆ ಪೇಳ್ವುದು ।
ಶಂಸಖಿಯ ಬುದ್ಧಿಯನು ಎಂದ-।
ಹಂಸವರರಾ ನೈಮಿಶಾರಣ್ಯದಲಿ ತವಸಿಗಳು ॥ ೪೦ ॥

ವಿರತಿಯಿಲ್ಲದವಂಗೆ ಸೌಖ್ಯಂ ।
ದೊರಕಲರಿಯದು, ಮುಕ್ತಿಯೆಂಬುದು ।
ಬರಡು, ಹೈನಾಗಿರಲು ತನುಧರ್ಮಕ್ಕೆ ನೆಲೆಯುಂಟೆ ॥
ಪುರುಷರಿಂ ಪ್ರಾಚೀನರಿಂದೀ ।
ಪರಿಯು ಪೇಳಲ್ಪಟ್ಟುದಂತಃ ।
ಕರಣದೊಳ್ಪೊರಸೂಸಿದಳ್ಕರಿನಿಂ ತ್ರಿವಿಧವಾರಂ ॥ ೪೧ ॥

ಇದು ವಿರಾಗವಿಹದಲಿ; ಪರಲೋ ।
ಕದ ವಿರಾಗಂ ಬರದುಪಾಸನೆ-।
ಯ ದುರಘಂ ಮನವೊತ್ತರಿಸೆ ವಿನ್ನೇತ್ರ ಶೂನ್ಯರಿಗೆ ॥

---

ಶೈವಲದ—ನೀರಿನ, ಹಾವಸೆ—ಪಾಚಿಯ ಬಲವಾದ ತೊಡಕು! ರಸಧಿಯೆ—ಈ ಸಂಸಾರವೆಂಬುದೆ ಒಂದು ಸಮುದ್ರವು. ಇದನ್ನು ದಾಟಿಸುವ ಗುರುವೇ ನಾವಿಕನಲ್ಲವೆ? ಆ ಸದ್ಗುರುವು ತಡಿಯನ್ನು ಸೇರಿಸುವದಕ್ಕೆ ಬೇಕಾಗಿರುವ, ಪೋತವೆ—ದೋಣಿಯೇ, 'ಸೋಽಹಂ'ಭಾವವು+ಎನಿಸುವದು.

೪೦ ಸಂಸರಣ—ಈ ಸಂಸಾರವೆಂಬ, ವೈತರಣಿ (ನರಕಗಳಲ್ಲೊಂದು, ಯಮನ ಪಟ್ಟಣದ ಮುಂದೆ ಹರಿಯುವ ಒಂದು ನದಿ)ಯಲ್ಲಿ+ಇಹರಂ—ಇರುವ ನಮ್ಮನ್ನು, ಕರಂ—ಲೇಶವಾದರೂ, ತನು....ವನು—ದೇಹೇಂದ್ರಿಯ ಅನಾತ್ಮಗಳಲ್ಲಿ 'ನಾನು' ಎಂಬ ಅನಾತ್ಮಾಭಿಮಾನವನ್ನು ಮಾತ್ರ ನೀವು ಸರ್ವಥಾ ಸಹಿಸದೆ+ಇರಿ—ಕ್ಷೇಮದಿಂದ ಇರುವವರಾಗಿರಿ, ಬಂಡಿಯ ಗಾಲಿಯ ಗುಂಬದಲ್ಲಿ ಹಾರೆಯಕೋಲುಗಳಂತೆ ಈ ಪ್ರಾಣಾದಿ ಕಲೆಗಳೆಲ್ಲ ಯಾವಾತನಲ್ಲಿ ನಿಂತಿರುವವೋ ಅನುಭವವೇದ್ಯನಾದ ಆ ಪುರುಷನನ್ನು ಅರಿತುಕೊಂಡರೆ ನಿಮ್ಮನ್ನು ಮೃತ್ಯುವು ವ್ಯಥೆಗೊಳಿಸದೆ ಇದ್ದೀತು (ಪ್ರಶ್ನ॥ ೬) ಎಂದು, ನಮ್ಮನ್ನು ಕುರಿತು ಶ್ರುತಿಯು, ಶಂಸಖಿಯ—ಶ್ರೇಯಸ್ಸಿನ ಬುದ್ಧಿವಾದವನ್ನು ಮೈತ್ರೀಭಾವದಿಂದ ಪೇಳ್ವುದು, ತವಸಿ—ತಪಸ್ವಿಗಳು, ಹಂಸವರರು—ಪರಮಹಂಸರು.

೪೧ ಬರಡು—ಜೊಳ್ಳು, ಎಂದಿಗೂ ಮುಕ್ತಿಯೆಂಬುದಾಗುವದೇಇಲ್ಲ. ಹೈನಾ....—(ಹನ್-ಹತ್ತು) ಹರಿಯುವ ನೀರಿನಂತೆ 'ನಾನು' ಎಂಬ ಸೂಕ್ಷ್ಮರೂಪುಗೊಂಡು ದೇಹಾದಿಗಳಲ್ಲಿ ಹರಿದುಬಂದು ತನ್ಮಯತ್ವದಿಂದ ಅವುಗಳನ್ನು ಹತ್ತಿ—ನಾನೆಂಬ ರೂಪದಿಂದ ಸವಾರಿ ಮಾಡುತ್ತ, ಆ ಅನಾತ್ಮಗಳಲ್ಲಿಯೇ ಒಂದಾಗಿ ಕಲೆತು ವ್ಯಾಪಿಸಿಕೊಂಡಿರಲು, ದೇಹಗಳ ಪರಂಪರೆಯು ಸಂಸಾರಕ್ಕೆ ನೆಲೆಯಿನ್ನೆಲ್ಲಿ ಬಂದೀತು? ಅಂತಃ....ದೊಳ್+ಪೊರಸೂಸಿದ+ಅಳ್ಕರಿ (ಅಳ್ತಿ-ಅಳಿ)ನಿಂ—ಹೊರಗೆದ್ದ ಪ್ರೀತಿಯಿಂದ ಇದನ್ನು ಮೂರಾವರ್ತಿ ಪ್ರತಿಜ್ಞೆಯನ್ನು ಮಾಡಿ ಹೇಳಲ್ಪಟ್ಟಿತು.

೪೨ ವಿರಾಗವು+ಇಹದಲಿ—ಈ ಲೋಕದಲ್ಲಿ, ದುರಘಂ—ದೇವಲೋಕದ ಭೋಗ

ಅದರೊಳಪ್ರತ್ಯಕ್ಷ ವಿಷಯಾ ।
ಸ್ಪದವೆನಿಪ ಚಿತ್ರಕ್ಕೆ ಲೌಕಿಕ ।
ವಿದಿರೊಳಿಹಮಿಷದಿಂದ ದೃಷ್ಟಾಂತಕ್ಕೆ ಪದವೆನಿಸಿ ॥ ೪೨ ॥

ಸುರರ ಪದವಿಯೊಳೇನು ಸುಖ, ಕಿಂ ।
ನರರ ಠಾವಿನೊಳೇನು ಭೋಗ- ।
ಸ್ಫುರಣೆ, ಗಂಧರ್ವರ ವಿಷಯದೊಳಗೇನು ಸಂಪ್ರಾಪ್ತಿ ॥
ಮರುತರಿಹ ನಗರದೊಳಗೇಂ ಫಲ ।
ದೊರಕುವದು, ಸಿಕ್ಕುವದು ವಿದ್ಯಾ ।
ಧರರ ನೆಲೆಗಳೊಳೇನು ಸೌಭಾಗ್ಯಂ ವಿಚಾರಿಸಲು ॥ ೪೩ ॥

ಸುರರ ಗುರುಗಳ ಲೋಕಗಳಲು ।
ತ್ತರ ಜನರ್ಮುಖ ಲೋಕಗಳಲೊಂ ।
ದಿರುವ ಭೋಗಂಗಳಿಗೆ ನಿತ್ಯತೆಯೆಂಬುದೇನುಂಟೆ ॥
ಹರಿಹರ ಬ್ರಹ್ಮಾದಿ ಲೋಕಾಂ ।
ತರದೊಳೇನು ವಿಶೇಷವೆಲ್ಲವು ।
ಕರಣ ದೌರ್ಬಲ್ಯಾಂತರಂಗಾರ್ಜಿತ ಫಲಗಳೈಸೆ ॥ ೪೪ ॥

ಯಾರ ದೆಶೆಯಿಂದಾಗದಿರ್ಪ ಶ ।
ರೀರಕಷ್ಟಂಗಳನೊಡರ್ಚಿ ಪು ।
ರಾರಿ ಮುಖ ದಿವಿಷತ್ಪುರಂಗಳನೈದಿರುವ ಜನರೊಳ್ ॥
ಸಾರಿದರು ಸಾಯುಜ್ಯಮಂ ಕೆಲ ।
ರೀರಸೆಗೆ ಮಗುಳಿಳಿದರೆಂದೇ ।
ಭೂರಿ ಪೌರಾಣಿಕರಿರುವ ದೆಶೆಯಿಂದನಿತ್ಯವದು ॥ ೪೫ ॥

---

ವಾಸನೆಯೆಂಬ ಹಾಳಾದ ಪಾಪವು, ಮನಂ+ಒತ್ತರಿಸೆ—ಬಂದು ಸಮೀಪಿಸಿ, ಆ ಮನಸ್ಸಿನಲ್ಲಿ ಸೇರಿರಲು. ಚಿತ್ (ಜ್ಞಾನವೆಂಬ)+ನೇತ್ರಶೂನ್ಯರಿಗೆ, ವಿಷಯ+ಆಸ್ಪದವು+ಎನಿಪ ಲೌಕಿಕವು +ಇದಿರೊಳು+ಇಹ(—ಇರುವದೆಂಬ)+ಮಿಷ—ನೆಪದಿಂದ, ಪದ—ಆಶ್ರಯವೆನಿಸಿಕೊಂಡು,

೪೪ ಉತ್ತರ—ಇನ್ನುಮೇಲಿನ, ಜನರ್—ಜನೋಲೋಕವೆ, ಮುಖ—ಮೊದಲಾದ,.... ಳಲಿ+ಒಂದಿರುವ—ಪ್ರಾಪ್ತವಾಗಿರುವ, ....ದೌರ್ಬಲ್ಯ+ಅಂತರಂಗ—ಭೋಗಾಭಿಲಾಷೆಯೆಂಬ ಮನಸ್ಸಿನ ಬಲಹೀನತೆಯಿಂದ ಪುಣ್ಯಫಲಗಳಾದ ಆ ಲೋಕಗಳು ಆರ್ಜಿತವಲ್ಲದೆ ಬೇರೇನು?

೪೫ ....ಯಿಂದ+ಆಗದಿರ್ಪ—ಮನುಷ್ಯರಿಗೆ ಮೀರಿದ, ಶರೀರಕಷ್ಟಂಗಳನು+ಒಡರ್ಚಿ—ಕೂಡಿ ಅನುಭವಿಸಿ, ದಿವಿಷತ್+ಪುರಂ....(ದೇವಲೋಕಂ)ಗಳನು+ಐದಿ—ಹೊಂದಿದ ಆ ಜನರಲ್ಲಿ, ಸಾರಿದರು—ಹೊಂದಿದರು, ಮತ್ತೆ ಕೆಲರು+ಈರಸೆಗೆ—ಭೂಲೋಕಕ್ಕೇ, ಮಗುಳ್+ಇಳಿ(ದು ಬಂ)ದರು+ಎಂದೇ ಭೂರಿ (ಉದಾರ)....ಂದ+ಅನಿತ್ಯವು+ಅದು.

ಧ್ಯಾನ ಯೋಗ ಜಪ ಕ್ರಿಯಾನು ।
ಷ್ಠಾನದಿಂದಳವಟ್ಟ, ಚಿತ್ತಗ ।
ತಾನುರಾಗಹೃತಂಗಳಾಯಾ ಲೋಕ ಭೋಗಗಳು ॥
ಊನವಾಗಭಿವೃದ್ಧವವು, ದು ।
ರ್ಮಾನಸದ ಭೋಗ್ಯಂಗಳವು, ದುಃ ॥
ಖಾನುಭವ ಹೇತುಗಳು ಕರ್ಮಸಮಯ ಯುಗಲದಿಂದ ॥ ೪೬ ॥

ಮನದ ಭೋಗಸ್ಥಾನವಾಯಾ ।
ಜನಪದಂ ವಿಬುಧರ; ತದರ್ಥಂ ।
ತನುವಿರಲ್ಕನುಬಂಧ ಬರ್ಪುದು ನಾಲ್ಕು ತೆರನಾಗಿ ॥
ಜನರ ಮೂಲದಿ, ವಿಷಯಮೂಲದಿ, ।
ಘನ ಸಮಯದಿಂ ಕರ್ಮದಿಂದವ ।
ರನುಸರಣೆಯಿಂ ಸುಖಕೆ ವಿಪರೀತತ್ತ್ವವೊಂದುವದು ॥ ೪೭ ॥

ಅಲ್ಲದಿದ್ದರೆ ದೈತ್ಯರಿಂದನು ।
ವಲ್ಲದಂತಃಶತ್ರುಗಳ ಸಂ- ।
ಫುಲ್ಲ ದೋಷೋದಯದೊಳಪ್ಪುದು ಪೀಡೆಯೆಡವಿಡದೆ ॥
ಅಲ್ಲವೇ ಕೃತಪುಣ್ಯ ತೀರ ।
ಲ್ನಿಲ್ಲಲೀಸದು ತತ್ಪ್ರದೇಶಸೊ ।
ಳಿಲ್ಲವವರಿಂ ಸೌಖ್ಯವಾದರು ತುಚ್ಛಮನದಾಳ್ಕೆ ॥ ೪೮ ॥

---

೪೬ ಚಿತ್ತಗತ—ಚಿತ್ತವನ್ನು ಹೊಂದಿರುವ, ಅನುರಾಗ(ದಿಂದ)+(ಆ)ಹೃತಂಗಳು—ಸಂಪಾದಿಸಿದವುಗಳಾದ್ದರಿಂದ ಅವು ತಮ್ಮಲ್ಲಿ. ಊನವಾಗಿ—ಕೊರತೆಯನ್ನು ಹೊಂದಿ, ಅಭಿವೃದ್ಧವು+ಅವು, ಕರ್ಮಸಮಯ—ದೈಹಿಕ ಮತ್ತು ಮಾನಸಿಕವೆಂಬ, ಯುಗಲ—ಉಭಯ ಕ್ರಿಯೆಗಳಿಂದಲೂ ತನಗೆ ಬಂದು ಜತೆಗೂಡುವವು.

೪೭ ಜನಪದಂ ವಿಬುಧರ—ಕ್ರಿಯೆಯ ಫಲಗಳಾದ ಆ ದೇವಲೋಕಗಳು, ತದರ್ಥಂ—ಆ ಕರ್ಮಫಲಭೋಗಗಳನ್ನು, ತನುವಿರಲ್ಕೆ—ಈ ಶರೀರದಿಂ'' ಅನುಭವಿಸುವಾಗ, ಅನುಬಂಧ—ಭೋಗ ವಿಘ್ನಗಳು-ಜನರಿಂದಲೂ ಕಾಲವಿಶೇಷದಿಂದಲೂ ಮತ್ತು ತನ್ನ ಪಾಪಕರ್ಮದಿಂದಲೂ ಆ ತುಚ್ಛ ವಿಷಯುಗಳ ಅನುಸರಣೆಯಿಂದಲೂ ಎಂದು ತಮ್ಮೊಳಗೆ ಅವು ನಾಲ್ಕುತೆರನಾಗಿ ಬರುವವು, ವಿಪರೀತತ್ತ್ವಂ+ಒಂದುವದು—ಸುಖಕ್ಕೆ ಬದಲು ದುಃಖವೆ ತನಗೆ ಹೊಂದುತ್ತಿರುವುದು !

೪೮ ಅನುವಲ್ಲದ+ಅಂತಃಶತ್ರುಗಳ—ತನ್ನಸುಖವಿರೋಧಿಗಳಾದ ಮನಸ್ಸಿನ ಹಗೆಗಳೆಂಬ, ಸಂಫು...ದೊಳು—ಅರಳಿ ತನ್ನೊಳಗೆ ಚೆನ್ನಾಗಿ ಉಬ್ಬಿಕೊಂಡಿರುವ ಈ ದೋಷಗಳಿಂದಲಾದರೂ ಪೀಡೆಯು ತನಗೆ+ಅಪ್ಪುದು, ಅಲ್ಲವೆ—ಅಥವಾ. ಕೃತಪುಣ್ಯ ತೀರಲ್+ತತ್+ಪ್ರದೇಶವೊಳು ತನಗೆ ನಿಲ್ಲಲು+ಈಸದು—ಕೊಡುವದಿಲ್ಲ. ಹೀಗಿರುವ ಕಾರಣ, ಅವರಿಂ—ಆ ದೇವತೆಗಳು, ಕರ್ಮಫಲಗಳು ಎರಡರಿಂದಲೂ ಸೌಖ್ಯವು ಎಂದಿಗೂ ಇರುವದಿಲ್ಲವು. ಆದರೂ ಇರುವವೆಂಬುದು ಮನಸ್ಸಿನ ಹಳೆಯ ಚಾಳಿಯು ಮಾತ್ರವಷ್ಟೆ ?

ನಿರುಪಮಾನ ಬ್ರಹ್ಮತತ್ತ್ವವೆ ।
ಶರಧಿಯಾಗುಳ್ಳವಗೆ ನಾನಾ ।
ಗಿರಿಗಳೇ ಪೇರ್ನೊರೆಗಳರ್ಕೇಂದುಗಳೆ ದೀಪ್ತಿಗಳು ॥
ನೊರಜುಗಳು ಪಲತೆರದ ಲೋಕಾಂ ।
ತರಗಳೀ ಭುವನಗಳ ಶೋಭೆಯೆ ।
ಮರುಮರೀಚೀ ನಿಮ್ನಗಾ ನಿರ್ಝರತರವ್ಯೂಹಂ ॥ ೪೯ ॥

ಜಂಗಮ ಸ್ಥಾವರ ಶರೀರಗ ।
ಳಿಂಗುಚಿತಮಹ ಜನಿಮುಖಗಳೇ ।
ಭಂಗಗಳು, ಚೇತನರೆ ಯಾದೋ ವರ್ಗವೆನಿಸುವದು ॥
ಹಿಂಗದಿಹ ಗಂಭೀರವೇ ಶಾ ।
ಸ್ತ್ರಂಗಳಾಶಯ ವಿದಕೆ ತಿಳಿವಿನ ।
ಲಿಂಗವೇ ನಿರ್ಮಲತೆ ಶಾಂತಿಯೇ ಶೀತವಾಗಿಹುದು ॥ ೫೦ ॥

ತಡಿಯನುಳಿದೀ ಸಾಗರದೊಳೊ ।
ಗ್ಗೊಡೆಯದವ, ನಾನಾಪ್ರಕಾರವ ।
ಪಡೆದ ವರ್ಷಗಳೆಂಬ ಗುಳ್ಳೆಗಳಲ್ಲಿ ಬಾಳುತಿಹ ॥

---

೪೯ ನಿರುಪಮಾನ—ತನಗೆ ಮತ್ತೊಂದರ ಹೋಲಿಕೆಯಿಲ್ಲದ ಬ್ರಹ್ಮತತ್ತ್ವವೇ ತಾನಾಗಿರುವ ಜ್ಞಾನಿಯೆಂಬ ಶರಧಿಗೆ—ನಾನಾ ಗಿರಿಗಳೆ ಮಹಾ ತರಂಗಗಳು! ಅರ್ಕೇಂದುಗಳೆ—ಸೂರ್ಯ ಚಂದ್ರರೇ ತನ್ನ ಕಣ್ಣಿನ ಜ್ಯೋತಿಗಳು! ಹಲವು ಲೋಕ ಲೋಕಾಂತರಗಳೇ ತನ್ನಲ್ಲಿ ಕಾಣುವ ನೊರಜುಗಳು—ಸಾಲುಸಾಲುಗಳಾಗಿ ತನ್ನೊಳಗೆ ಗುಂಪುಕಟ್ಟಿರುವ ಕಿರುಸೊಳ್ಳೆಗಳು! ಈ ಭುವನಗಳ ಶೃಂಗಾರಾದಿಗಳೇ ಬಿಸಿಲ್ಗುದುರೆಯ ನಿಮ್ನಗಾ—ತಗ್ಗಿನಲ್ಲಿ ಹರಿಯುವ ತೊರೆಗಳ ಸಾಲುಸಾಲುಗಳು! ಹೀಗೆ ಆ ಜ್ಞಾನಿಯು ಶೋಭಿಸುತ್ತಿರುವನು! ಅಲ್ಲದೆ,

೫೦ ಜ್ಞಾನಿಯೆಂಬ ಆ ಸಮುದ್ರವು ಜಡ ಚೇತನ ಜೀವರಿಗೆ ಸಲ್ಲುವ ಹುಟ್ಟು ಹೊಂದುಗಳೇ ತನ್ನ ಅಲೆಗಳಾಗಿಯೂ, ಚೇತನ ಜೀವರೇ ಜಲಚರಗಳಾಗಿಯೂ, ಶಾಸ್ತ್ರಗಳಾಶಯವೇ ಹಿಗ್ಗುತಗ್ಗುಗಳಿಲ್ಲದ ತನ್ನ ಗಾಂಭೀರ್ಯವಾಗಿಯೂ, ತನ್ನ ಸ್ವರೂಪದ ತಿಳಿವೆಂಬ ಕುರುಹೆ ತನ್ನ ನಿರ್ಮಲತೆಯಾಗಿಯೂ, ಹೃದಯದ ಪ್ರಶಾಂತತೆಯೇ ತನ್ನ ಮೇಲಿನ ತಂಪಾಗಿರುವ ಶೀತವಾಗಿಯೂ ಶೋಭಿಸುವ ಜ್ಞಾನಿಯು—ತನ್ನ ಸ್ವರೂಪವಾಗಿರುವ—

೫೧ ತಡಿಯುನು+ಉಳಿದ—ತನಗೆ ಅಂಚಿಲ್ಲದಿರುವ, ತನ್ನ ಸರ್ವಾತ್ಮವಾದ ಬ್ರಹ್ಮಾತ್ಮತತ್ತ್ವವೆಂಬ ಅಖಂಡಾನಂದವೆಂಬ, ಈ ಸಾಗರದೊಳು ಸದಾಮುಳುಗಿ ತನ್ಮಯನಾಗಿರುವ ಅವನು, ಒಗ್ಗು—ಒಂದಾಗಿರುವ, ಚೆನ್ನಾಗಿ ಹೊಂದಿಕೆಯಾಗಿ ತನ್ನಲ್ಲಿ ಸಂದಿಲ್ಲದೆ ತುಂಬಿರುವ ಅದನ್ನು, ಒಡೆಯದವ—ಚದುರಿಸದವ, ಒಂದು ನಿಮಿಷವಾದರು ಅದನ್ನು ಬಿಟ್ಟಗಲದವ, ಅಥವಾ ಒಗ್ಗು+ಒಡೆಯದವ—ಜ್ಞಾನಿಯು ತನಗೊಪ್ಪಾಗಿರುವ ಅದನ್ನು ಬಿಟ್ಟು, ಹೊರಗಿನ ಪ್ರಪಂಚದಲ್ಲಿ ವಿಶ್ವಾಸ ಹೊಂದದ ಅವನು, ಮಳೆಯ ನೀರುಗುಳ್ಳೆಗಳಲ್ಲಿ ತೋರಿ ಕ್ಷಣಜೀವಿಗಳಾದ ಕ್ಷುದ್ರ ಜಂತುಗಳಿಗೆ ಸರಿಗಟ್ಟಿರುವ ಜಡಶರೀರಿಗಳಾದ ಈ ನರಕ್ರಿಮಿಗಳ ಭೋಗಪದವಿಗಳನ್ನು ಬಯಸುವನೆಂಬುದು

ಜಡ ಶರೀರ ಕ್ರಿಮಿ ಪದವಿಯಂ ।
ಬಿಡದೆ ಬಯಸುವನೇ ಇದೆತ್ತಣ ।
ನುಡಿ ಚಿದಂಬರನಪ್ಪನಪರಿಚ್ಛಿನ್ನನಾಗುವಿನಿಂ ॥ ೫೧ ॥

ಹಾಲಿನಲಿ ಕಾಲ್ದೊಳೆಯಲಲಸುವ ।
ಮೇಲಡಿಯ ಪುರುಷೋತ್ತಮಂಗನು ।
ಕೂಲವೇ ಪಂಕಪ್ರದೇಶದೊಳಿಚ್ಛೆಯದರಂತೆ ॥
ಕಾಲಕರ್ಮದ ತಲೆಯ ತುಳಿದ ವಿ ।
ಶಾಲಮತಿಮಂತನಿಗೆ ಲೋಕದ-।
ಕೋಳವೇ ಬಂಧಿಪುದು ವಿಬುಧೇಶ್ವರರ ಬಲ್ಪಿಂದ ॥ ೫೨ ॥

ಪಸುಳೆಗಳು ಮೋಹಿಸುವ ವಾಕ್ಯ ।
ಪ್ರಸರ ಪಂಡಿತಗಣ್ಯವೇ ತಾ ।
ಮಸಿಯೊಳೊಂದುವ ಕತ್ತಲೆಗೆ ದಿವದಲ್ಲಿ ಬೆಳವಿಗೆಯೆ ॥
ಕಸವರವ ಪಿಡಿಗಿಲ ಪೊಡೆಯ ಬೀ ।
ಳ್ಗಸವ ತರುವುದೇ ಕೊಂಡು ಧೀರನ ।
ಮುಸುಕುವದೆ ಲೋಕಾಂತರಭ್ರಮೆಯೆಂದನಾಚಾರ್ಯಂ ॥ ೫೩ ॥

ಜಡೆಯ ಧರಿಸಿ ತರಕ್ಷು ಚರ್ಮವ ।
ನುಡುತ ಭಸಿತವ ಪೂಸಿ ಲಾಕುಳ ।
ವಿಡಿದು ಮಸಣದೊಳಿರ್ದು ನೃಕಪಾಲದೊಳುಣುತ್ತಿರಲು ॥

---

ಹೇಗೆ? ಎಂದರೆ ಅವನು ಚಿದಾಕಾಶನೂ ದೇಶಕಾಲಾದಿ ಅನಾತ್ಮಗಳಿಂದ ಖಂಡಿಸದವನೂ ಆಗುವಿನಿಂ—ಆಗಿರುವದರಿಂದ ಬಯಸಲಾರನೆಂದು ಭಾವವು.

೫೨ ....ಕಾಲು(ಗಳನ್ನು)+ತೊಳೆಯಲು+ಅಲಸುವ ಅವನಿಗೆ, ಪಂಕಪ್ರದೇಶವೊಳು—ಕೊಚ್ಚೆಯಲ್ಲಿಚ್ಛೆಯುಂಟಾಗದಿರುವಂತೆ, ವಿಶಾಲಮತಿಮಂತನಿಗೆ—ದೇಹೇಂದ್ರಿಯ ಅನಾತ್ಮಗಳಲ್ಲಿ 'ನಾನು' ಎಂಬ ಪರಿಚ್ಛಿನ್ನಜ್ಞಾನದ ಸಂಕುಚಿತ ಬುದ್ಧಿಗಳನ್ನೆಲ್ಲ ತೊಲಗಿಸಿಕೊಂಡು ಸರ್ವಾತ್ಮಭಾವದಿಂದ ವಿಶಾಲಹೃದಯನಾದ ಜ್ಞಾನಿಗೆ ದೇಹಾಭಿಮಾನಿಗಳನ್ನು ಬಂಧಿಸುವಂತೆ ಆ ಜ್ಞಾನಿಯನ್ನು. ಕೋಳವೇ—ಬೇಡಿಯೇ ಬಂಧಿಪುದು? ಎಂದರೆ, ಇಂದ್ರಾದಿ ದೇವತೆಗಳ ಬಲದಿಂದಲಾದರೂ ಅದು ಬಂಧಿಸಲಾರದೆಂದು ಭಾವ.

೫೩ ಹಸುಳೆಯ ಮಕ್ಕಳನ್ನು ಬೆರಗುಮಾಡುವ ಮಾತುಗಳು ಪಂಡಿತರ ಗಣನೆಗಿಲ್ಲದಿರುವಂತೆ; ರಾತ್ರಿಯಲ್ಲಿ ಸರಿಬಪ್ಪುವ ಕತ್ತಲೆಗೆ ಹಗಲಿನಲ್ಲಿ ತೊಂದುವದಕ್ಕಿಲ್ಲದಂತೆ; ಹೊಟ್ಟೆಯಿಂದ ಹೊರಗೆ ಬಿದ್ದ ಕಸ—ಮಲವನ್ನು ಗುಡಿಸಿ ತರುವ ಪಿಡಿಗಿಲ—ಕಸಬರಿಕೆಯು, ಕಸವರವ—ಬಂಗಾರವನ್ನು ಗುಡಿಸಿಕೊಂಡು ತರುವದಕ್ಕಿಲ್ಲದಿರುವಂತೆ; ಜನಸಾಮಾನ್ಯರನ್ನು ಮುಸುಕುವ ಲೋಕಾಂತರ—ಜನ್ಮಾಂತರದ ಹುಟ್ಟುಹೊಂದುಗಳ ಭ್ರಾಂತಿಯು ಧೀರನಾದ ಜ್ಞಾನಿಯನ್ನೆಂದಿಗೂ ಮರೆ—ಆಶ್ರಯ—ಮಾಡುವದಿಲ್ಲ. (ಗೀತಾ ೨–೧೩)

೫೪ ತರಕ್ಷು—ಹುಲಿಯ, ಭಸಿತ—ಭಸ್ಮವನ್ನು, ತ್ರಿಶೂಲವೆಂಬ, ಲಾಕುಳವು—ಕೋಲನ್ನು

ಒಡೆಯನೆಂಬುದ ಕೆಡಿಸಿಕೊಳ್ಳದ ।
ಬೆಡಗನಾಂತ ಮೃಡಾಣಿಯಾಣ್ಮಂ ।
ಕೊಡಲೆಮಗೆ ಕಡೆಗಣ್ಣ ಕುಡಿಯಿಂ ನೋಡಿ ಶಿವಪದಮಂ ॥ ೫೪ ॥

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೊಳ್ವೈರಾಗ್ಯ ಸ್ವರೂಪಮಂ
ಪೇಳಿದ ಹತ್ತನೆಯ ಸಂಧಿ ಸಂಪೂರ್ಣಂ (ಪದ ೫೩೧)

## ಶಮಾದಿ ಷಟ್ಕನಿರ್ಣಯು—ಹನ್ನೊಂದನೆಯ ಸಂಧಿಯು

ಸೂ॥ ಆದರಿಸಲಳವಪ್ಪುದಿಲ್ಲಿ ಶ ।
ಮಾದಿಷಟ್ಕಂ ರಾಗವಳಿದ ಶು ।
ಭೋದಯಂಗಾತ್ಮಾಭಿರತಗೆ ಮುಮುಕ್ಷುವಿಂಗಧಿಕಂ ॥ ಪ ॥

ತಮ್ಮ ಕೆಲಸಂ ಕೆಡುವದಾಗಿರ ।
ಲೊಮ್ಮೆಯೂ ಪರತಾಪವಳಿಯ- ।
ಲ್ಕೆಮ್ಮದಿರಲಿತರರಲಿ, ಸಾಧುಗಳಿಗೆ ವಿಪತ್ತಿಯೆನೆ ॥
ಸಮ್ಮತಿಸಿ ತಕ್ಷಣದೊಳವದಿರ ।
ಸೊಮ್ಮ ಸೆಳೆಯಲ್ಕಂಘಮಿಪ ಖಲ ।
ರಮ್ಮರದು ಸಜ್ಜನರು ಪೇಳುವದೀ ಕಥಾಶ್ರುತಿಯ ॥ ೧ ॥

ಶಮೆಯುತಗೆ ವನಮೃಗಂಗಳು ಮೃದು ।
ಸುಮುಖವಪ್ಪವು ಮಹಿಷ ಹರಿ ಮು ।
ಖ್ಯ ಮುದವತ್ಪಶುಗಳು, ರಸಾಯನವಾದ ಸಂಪದದಿಂ ॥

---

ತನ್ನ ಕೈಯಲ್ಲಿ ಶಿವನು ಇಡಿದು, ನೃ—ನರರ, ಬೆಡಗನು+ಆಂತ—ಆಶ್ಚರ್ಯಪ್ರಾಯನಾಗಿರುವ, ಮೃಡಾಣಿ—ಪಾರ್ವತಿಯನ್ನು, ಆಣ್ಮಂ—ಆಳುತ್ತ ಆ ಗಿರಿಜೆಗೆ ಪತಿದೇವನಾದ ಆ ಶಿವನು ತನ್ನ ಕಡೆಗಣ್ಣಿನ ಕುಡಿಯಿಂದ ನೋಡಿ ನಮಗೆ ತನ್ನ ಶಿವಪದವನ್ನು ಕೊಡಲಿ!

ಸೂ॥ ಆದರಿಸಲು+ಅಳವಪ್ಪುದು—ಸಾಧ್ಯವಾಗುವದು, ರಾಗವು+ಅಳಿದ ಶುಭೋದಯಂಗೆ + ಆತ್ಮ + ಅಭಿರತಗೆ—ಅಭಿಪ್ರಾಯಪೂರ್ವಕವಾಗಿ ಆತ್ಮನಲ್ಲಿಯೇ ಮನಸ್ಸಿನಿಂದ ಒಂದಾಗಿ ಬೆರೆತ ಪುಣ್ಯೋದಯನಿಗೆ.

೧ ಪರತಾಪವು+ಅಳಿಯಲ್—ಪರಿಹರಿಸುವದಕ್ಕಾಗಿ, ಕೊಂಚವಾದರು ತನ್ನ ಮನಸ್ಸಿನಲ್ಲಿ, ಕೆಮ್ಮದೆ—ಯೋಚಿಸದಿದ್ದರೂ ಇರಲಿ, ಸಾಧುಗಳಿಗೆ ವಿಪತ್ತೆಂದ ಮಾತ್ರಕ್ಕೆ ನೆರವಾಗಬೇಕು. ಹೀಗಲ್ಲದ, ಸೊಮ್ಮಸೆಳೆಯಲ್ಕೆ+ಅಂಘಮಿಪ—ಸಂಭ್ರಮದಿಂದಾತುರಕೊಳ್ಳುವ, ಖಲರಂ+ಮರದು.

೨ ....ಸುಮುಖ—ಸಂತೋಷದಿಂದ ಎದುರಿಸುವವು, ಮಹಿಷ—ಕಾಡುಕೋಣ, ಹರಿ—ಸಿಂಹ, ಸರ್ಪ, ಕಪಿಗಳು, ಮತ್ತು ಪಶುಗಳು ಕೂಡ, ಮುದವತ್—ತಮ್ಮ ಪ್ರೀತಿಯನ್ನು ಸೂಚಿ

ಸಮರಸವ ಪಡದೈದ ನತಿಹರು ।
ಷಮನು ಮನುಜಂ ಚಿತ್ತದೊಡನೀ ।
ಶಮಿಯ ತೆರದಿಂದೆಂದನಾ ರಾಘವಗೆ ವಿಧಿಪುತ್ರ ॥ ೨ ॥

ತಪಸಿಗಳ ಮಧ್ಯದಲಿ ಬಹುಯ ।
ಜ್ಞವನು ಮಾಡಿದವರಲಿ ನೃಪರಲಿ ।
ಕವಿಗಳಲಿ ಬಲವಂತರಲಿ ಶಮಿಯೇ ವಿರಾಜಿಸುವಂ ॥
ಭುವನದೊಳು ಶಮಿಯಾರೆನಲ್ದುಃ ।
ಖವ ಸುಖವನೆಳಸದವ, ಪಂಚ ವಿ ।
ಧವ ಬಳಸದೀ ವಿಷಯಗಳೊಳಿರ್ತೆರದ ಭೋಗದಲಿ ॥ ೩ ॥

ಮರಣಯುದ್ಧೋತ್ಸವಗಳಲಿ ಚಂ-।
ದಿರ ರುಚಿಯನೊಳಗೊಂಡ ಹಿಮ ಶೀ ।
ಕರದ ಹಾಗಿಹುದಾರಮನವವನೇ ಮಹಾ ಶಾಂತಂ ॥
ಗುರುಗಳಿಂ ತತ್ತ್ವಜ್ಞರಿಂ ಸ ।
ತ್ಕರಿಸಿ ಬೈಚಿಟ್ಟರ್ಥವಿದು ನೀಂ ।
ಪೊರೆಯ ಲತಿಘನನಪ್ಪೆ ಎಂದಂ ಮುಸಿಪನಾಸ್ಥಲದೆ ॥ ೪ ॥

ಶಮವದಾವುದೆನಲ್ಕೆ ಚಿತ್ತ ।
ಭ್ರಮಣಮಂ ಕಳಿದಿರ್ಪುದದು ಸಾ ।
ಧ್ಯಮೆ ಎನಲ್ದುಃಖಸಾಧ್ಯವು ವಹ್ನಿಯಿಂದತ್ಯುಷ್ಣಂ ॥

---

ಸುವವು, ಪಡೆದು+ಐದನು—ಹೆಚ್ಚಿನ ಈ ಸಂತೋಷವನ್ನು ಹೊಂದಲಾರನು, ಪ್ರಶಾಂತಚಿತ್ತ ದೊಡನೆ+ಈ ಶಮಿಯ ತೆರದಿಂದ, ....ವಿಧಿಪುತ್ರ—ಬ್ರಹ್ಮನ ಪುತ್ರನಾದ ವಸಿಷ್ಠನು.

೩ ....ನಲು+ದುಃಖ....ವನು+ಎಳಸದವ—ಬಯಸದವನೆಂದು ತಿಳಿಯಬೇಕು. ಪಂಚ ವಿಧವ—ಶಬ್ದಾದಿ ಪಂಚವಿಷಯಗಳನ್ನಾಗಲಿ, ಅವುಗಳಿಂದುಂಟಾಗುವ ಸುಖದುಃಖವೆಂಬ, ಇರ್ತೆರದ—ಇಬ್ಬಗೆಯ ಭೋಗಗಳನ್ನಾಗಲಿ ಭೋಗಿಸುವದಕ್ಕೆಂದು ಸಿದ್ಧತೆಯನ್ನು ಹೊಂದದವನು (ವಾಸಿಷ್ಠ ಉ॥ ಸ॥ ೮–೧೧)

೪ ....ರುಚಿಯನು—(ತಿಂಗಳು ಬೆಳುಕನ್ನು) + ಒಳಗೊಂಡ + ಹಿಮಶೀಕರದ—ಮಂಜಿನ ತುಂತುರುವಿನ ಸಣ್ಣ ಹನಿಗಳಂತೆ, ಬೈಚಿಟ್ಟ—ರಹಸ್ಯಪಡಿಸಿ ಭದ್ರಮಾಡಿಟ್ಟ, ಅರ್ಥವು +ಇದು, ಆ ಸ್ಥಲದೆ—ವಾಸಿಷ್ಠದಲ್ಲಿ.

೫ ಶಮವು+ಅದು + ಆವುದು+ಎನಲ್ಕೆ, ಚಿತ್ತಭ್ರಮಣ ...ರ್ಪುದು—ಶಮವೆಂದರೆ ಅದು ಚಿತ್ತದ ಹರಿದಾಟವನ್ನೆಲ್ಲ ಕಳೆದುಕೊಂಡಿರುವದು,.....ಎನಲ್+ದುಃಖಸಾಧ್ಯವು, ವಹ್ನಿ.... –ಬೆಂಕಿಗೂ ಹೆಚ್ಚಿನ ಉಷ್ಣವು, ಹಿಮಕರನಿಗಿಂ—ಚಂದ್ರನಿಗೂ ಹೆಚ್ಚಿನ, ಶೈಲ....ಕ್ಷರ—ಬೆಟ್ಟ ಗುಡ್ಡಗಳ ಸಂಚಾರಕ್ಕಿಂತಲೂ ಕಷ್ಟದ ಮಾರ್ಗವು, ಭಿದುರಖಂಡವನು–ವಜ್ರದ ಚೂರುಗಳಿಗೂ, ಕರ್ಕಶಂ—ಕಠಿನತರ, ....ಮುಂಮಿಗಿಲು—ಮೂರರಷ್ಟು ದೊಡ್ಡದು.

ಹಿಮಕರನಿಗಿಂ ಶೀತ, ಶೈಲ |
ಕ್ರಮಣಕಿಂ ದುಶ್ಚರ, ಭಿದುರಖಂ |
ಡಮನು ನೋಡಾ ಕರ್ಕಶಂ ಮೇರುವಿಗೆ ಮುಂಮಿಗಿಲು || ೫ ||

ಕಡಲ,ಪಾನಕ್ಕಿಂದ ಮೇರುವ |
ತೊಡರಿ ಕೀಳ್ವುದಕಿಂದ ವಾಯುವ |
ತಡೆದು ನಿಲಿಪುದಕಿಂದ ದುರ್ನಿಗ್ರಹಮಮರ್ತ್ಯರಿಗು ||
ಜಡ ಮನುಜ ಚಲವೆಷ್ಟೆನುತ ನೆರೆ |
ನುಡಿದವಾ ವಾಶಿಷ್ಠ ಗೀತೆಗ |
ಳೊಡನೆ ಸಾಧಿಪುದೆಂತೆನಲ್ಕಲ್ಲಿಹುದದಕ್ಕಂಗಂ || ೬ ||

ವಿರತಿಯಿಂದಭ್ಯಾಸದಿಂದೇ |
ನೆರೆಯಬಹುದೀ ಮನವನೆಂದೊಡ |
ನೊರೆದನಾ ಶ್ರೀಕೃಷ್ಣನರ್ಜುನಗಾರ್ಜವಂ ಮಿಗಿಲು ||
ವಿರತಿಯರ್ಥಂ ಪೇಳೆ ಪಟ್ಟುದು, |
ವರ ಶಮಾಕರವಾದ ನೇರ್ಪಿನ |
ತೆರವು ಪೇಳಲ್ಕುಚಿತಮೆನೆ ವಾಸಿಷ್ಠಮಿಹುದಿಲ್ಲಿ || ೭ ||

ಅದರ ಚಿಂತನಮದರ ಕಥೆ ಮ |
ತ್ತದರ ಬೋಧ ಪರಸ್ಪರಂ ಬ್ರ- |
ಹ್ಮದ ಪರಾಯಣಮಲ್ಲಿಯಾವುದದಲ್ತೆ ಅಭ್ಯಾಸ ||

---

೬ ಕಡಲ—ಸಮುದ್ರವನ್ನೆ, ದುರ್ನಿಗ್ರಹಂ + ಅಮರ್ತ್ಯರಿಗು—ದೇವತೆಗಳಿಂದಲಾದರು ನಿಗ್ರಹಿಸುವದು ಬಹು ಕಷ್ಟವು ಇನ್ನು, ಜಡ—ಬುದ್ಧಿಬಲವಿಲ್ಲದ, ....ಪುದು+ಎಂತೆನಲ್ಕೆ+ಅಲ್ಲಿ ಹುದು+ಅದಕ್ಕೆ ಬೇಕಾದ ಉಪಾಯವು.

೭ ನೆರೆಯೆ—ನಿಗ್ರಹಿಸಿ ಅದನ್ನು ಹತ್ತಿರಕ್ಕೆ ತರಬಹುದು, ಎಂದು+ಒಡನೆ+ಒರೆದನು+ಆ ಶ್ರೀಕೃಷ್ಣನು+ಅರ್ಜುನಗೆ+ಆರ್ಜವಂ....—ಸರಳಹೃದಯದ ಋಜುಭಾವವನ್ನೆ ಮುಖ್ಯವಾಗಿಟ್ಟುಕೊಂಡು ಅವನು ಹೇಳಿರುವನು. ವಿರತಿಯ ನಿಶ್ಚಿತಾರ್ಥವನ್ನು ಹಿಂದಿನ ಸಂಧಿಯಲ್ಲಿಯೆ ಹೇಳಿದ್ದಾಯಿತು. ವರ—ಹೆಚ್ಚಿನ, ಶಮವನ್ನು ಹುಟ್ಟಿಸುವದಕ್ಕೆ, ನೇರ್ಪಿನ—ಸರಿಯಾಗಿ ಗೊತ್ತಾದ ಒಂದು, ಆಕರ—ಕಾರಣವಾಗಿರುವ, ತೆರವು—ಮಾರ್ಗವನ್ನು ಈಗ ತಾವು, ಪೇಳಲ್ಕೆ+ಉಚಿತಂ+ಎನೆ—ಎಂದು ಕೇಳಲು,

೮ ಅದರ—ಬ್ರಹ್ಮದ, ಬೋಧ—ತಂತಮ್ಮ ಅನುಭವಗಳನ್ನು ಒಬ್ಬರಿಗೊಬ್ಬರು ಸಹಕರಿಸಿ ಬೋಧಿಸುವದು, ....ನನು+ಉಳಿಯದೆ—ವೈರಾಗ್ಯವನ್ನು ಬಿಡದೆ, ಮದಗಳನ್ನೆಲ್ಲ ಸಂಪೂರ್ಣ ಬಿಟ್ಟು ಕಳಿಯದವರು, ಬ್ರಹ್ಮಾಭ್ಯಾಸಕ್ಕೆ ಮಧ್ಯಮರು !

ತಚ್ಚಿಂತನಂ ತತ್ಕಥನಮನ್ಯೋನ್ಯಂ ತತ್ಪ್ರಬೋಧನಂ |
ಏತದೇಕ ಪರತ್ವಂಚ ಬ್ರಹ್ಮಾಭ್ಯಾಸಂ ವಿದುರ್ಬುಧಾಃ || ವಾಸಿಷ್ಠ ||

ಅದರೊಳುರುವೈರಾಗ್ಯಪಟು ಸಂ।
ಪದವನುಳಿಯದೆ ಯಾರವಮತಿ ಸಂ।
ಮದಗಳನು ನೆರೆಕಳಿಯದಿರ್ಪುದವರಲ್ತೆ ಮಧ್ಯಮರು ॥ ೮ ॥

ಲೇಶಮಾತ್ರಂ ವಿಷಯಗಳೊಳವ।
ಕಾಶಮಂ ಕೊಟ್ಟರೆ ಮನಸ್ಸಿಗೆ।
ಕೋಶಗೃಹದಂದದಲಿ ಸಕಲಾರ್ಥಗಳ ತುಂಬುವದು ॥
ಆಶಿಸುವದಿದ ಬಳಸಲೆಂದರೆ।
ಕೀಶದಂದದಿ ವಿಷಯ ಭೂಜ ನಿ।
ವೇಶದಲ್ಲಿಯೆ ವಾಸನಾಶಾಖೆಯಲಿ ತಿರುಗುವದು ॥ ೯ ॥

ತಿಳಿಯತಕ್ಕುದರಲ್ಲಿ ಮಾಯೆಯ।
ಕಳತೆಯಂ ನಯ ಯುಕ್ತಿಮುಖದಿಂ।
ಘಳಿಸುವರು ಯಾರವರೆ ಮೊದಲೀ ವಿಕೃತಿಯಾತ್ಮನಲಿ ॥
ಫಲಿಸಲಿದು ಚಿನ್ಮಯವೆ ಎಂದೇ।
ತಿಳಿದವರು ದೃಶ್ಯಕ್ಕಸಂಭವ।
ಮುಳಿಯೆ ರಾಗದ್ವೇಷತಾನವಿಯಾದ ಶಕ್ತಿಯನು ॥ ೧೦ ॥

ಯಾರು ವರಿಸುವರವರು ಬ್ರಹ್ಮಾ।
ಕಾರಯೋಗಾಭ್ಯಾಸಗಳಿನ।
ಲ್ಜಾರುವದೆ ವಾಸನೆಯು ಜಂತುಗಳಲ್ಲಿ ಪ್ರಾಕೃತಕಂ ॥

---

೯ ಕೋಶಗೃಹ—ಉಗ್ರಾಣದ ಮನೆಯಂತೆ, ಜಗತ್ತಿನ ವಿಷಯಗಳನ್ನೆಲ್ಲ ಈ ಮನಸ್ಸು ತನ್ನೊಳಗೆ ತುಂಬಿಕೊಳ್ಳುವದು, ಕೀಶ—ಒಂದು ಕಪಿಯಂತೆ, ....ಭೂಜನಿವೇಶದಲ್ಲಿ—ಅದು ವಿಷಯಗಳೆಂಬ ಗಿಡಮರಗಳಲ್ಲಿಯೇ ತಾನು ಸಿಕ್ಕಿಬಿದ್ದು.

೧೦ ತಿರಸ್ಕಾರಕ್ಕೆ ಯೋಗ್ಯವಾದ ಈ ಜಗತ್ತಿನ ಕಳವೆಯಂ—ನಿಸ್ಸಾರತೆಯನ್ನು, ನಯ—ವೇದಾಂತಶಾಸ್ತ್ರ ಯುಕ್ತ್ಯನುಭವಗಳಿಂದಲೂ, ಸೃಷ್ಟಿಗೆ ಮೊದಲು ಒಬ್ಬನೆಯಿದ್ದ ಆತ್ಮನಲ್ಲಿ ಅಹಂಕಾರಾದಿ ಅವ್ಯಕ್ತದವರೆಗಿನ ಒಟ್ಟಿನ ಅನಾತ್ಮದ, ಈ ವಿಕೃತಿಯು—ಜಗತ್ತೆಂಬ ಕಾರ್ಯವು, ಆ ಸನ್ನಾತ್ಮನಿಂದಲೇ ಹುಸಿನಾಮ ರೂಪಿನ ಶರೀರದಿಂದ, ಫಲಿಸಲು—ಹೊರತೋರಿಕೊಂಡಿದ್ದರೂ ತನ್ನ ಪರಮಾರ್ಥದಲ್ಲಿ ಅದು, ಚಿನ್ಮಯವೆ—ಅದ್ವಿತೀಯಾತ್ಮನೆಂಬುದೇ ದಿಟವೆಂದು ತಿಳಿದವರು, ದೃಶ್ಯಕ್ಕೆ+ಅಸಂಭವಂ—ತನ್ನಾತ್ಮನಿಗಿಂತ ಅದು ಬೇರಿಲ್ಲವೆಂದು ತಮ್ಮಲ್ಲಿ ನಿಶ್ಚಯಿಸಿ, ಉಳಿಯೆ—ಅದನ್ನು ಬಿಟ್ಟು ತಮ್ಮಾತ್ಮನಲ್ಲಿಯೇ ಉಳಿದು ನಿಂತವರೆ ಜ್ಞಾನಿಗಳು, ಹಾಗಿಲ್ಲದೆ ಯಾರಾವರೆ ರಾಗದ್ವೇಷಗಳನ್ನು, ....ತಾನವಿ—ವಿಸ್ತರಿಸುವ ಶಕ್ತಿಯನ್ನು ಸತ್ಯವನ್ನಾಗಿ,

೧೧ ವರಿಸುವರು—ಸ್ವೀಕರಿಸಿ ಬ್ರಹ್ಮಾಕಾರವೃತ್ತಿಯನ್ನೆ ನಿರಂತರವೂ ಅಭ್ಯಾಸಮಾಡುತ್ತಿದ್ದರು, ಆ ಶಕ್ತಿಯು ಇವರನ್ನು ಬಿಟ್ಟು, ಜಾರುವದೆ—ಪಕ್ಕ ಸರಿಯುವದೆ? ಪ್ರಾಕೃತಕಂ—ತನಗೆ ಸ್ವಭಾವವಾಗಿ ಬಂದಿರುವ, ವಿಧಿಕೃತ—ಪಾಪಕರ್ಮಗಳ ಹಿನ್ನೆಲೆಯುಳ್ಳ ಆ ವಾಸನೆಗಳಿಂದ

ಸಾರವಿಲ್ಲದ ಕೀವ ಮಕ್ಷಿಕೆ ।
ಸೇರುವವೊಲೀ ಬುದ್ಧಿ ವಿಧಿಕೃತ ।
ಘೋರರೀತಿಯನೈದುವದು ನಿಗ್ರಾಹ್ಯಮೆಂತಹುದು ॥ ೧೧ ॥

ಕೇಳದಾದರೆ ದೈವಮೆಂಬುದು ।
ಖೂಳ ಕರ್ಮಂ ತಾನೆಸಗಿದುದು ।
ಬೀಳನೈದಿದನೇಕ ಪೂರ್ವಭವಾಂತರಂಗಳಲಿ ॥
ತಾಳಿ ತಾಂ ನಡಸುವ ದಿನಂಗಳೊ ।
ಳಾಳಿದಾಯಾ ಕರ್ಮತತಿ ದೃಢ ।
ಮೂಲದಿಂ ಕೆಲವುಂಟದೃಢ ಮೂಲದಲಿ ಕೆಲವುಂಟು ॥ ೧೨ ॥

ಸುದೃಢ ಮೂಲವಸಾಧ್ಯವಲ್ಲದೆ ।
ಅದೃಢ ಮೂಲವಸಾಧ್ಯವಾಗದು ।
ಸುದೃಗುಪಸ್ಥಿತ ಕರ್ಮಗಳಿಗೀ ವಾಕ್ಯ ದೃಢವಾಗೆ ॥
ಸುದೃಢ ಮೂಲಕ ಕರ್ಮವುಂ ನೆರೆ ।
ಚದರಿ ಮೇಣಾ ಕರ್ಮದೇಹ ।
ಕ್ಕೊದಗಿದರೆ ಹೆರೆದೆಗೆಯದೆಂದೇ ಗುರುಗಳಾಡಿದರು ॥ ೧೩ ॥

ಭಾರತದೊಳೀ ಕರ್ಮಕಂ ಸಂ ।
ಸ್ಕಾರಪೂರ್ವಕ ಸತ್ಪ್ರಯತ್ನಂ ।
ಸಾರಲುಪಮರ್ದಂ ಘಟಿಪುದಿದಕೆಂದು ಪೇಳಿಹುದು ॥

---

ಈ ಬುದ್ಧಿಯು ಉಗ್ರರೂಪುಗೊಳ್ಳುವದರಿಂದ ವಾಸನೆಯನ್ನು ಸೋಂಕದಂತೆ ಆ ಬುದ್ಧಿಯನ್ನು ನಿಗ್ರಹಿಸುವದು ಹೇಗೆ?

೧೨ ಕೇಳು+ಅದಾದರೆ—ಆ ದೈವವೆಂಬುದು, ಖೂಳ—ನೀಚಕರ್ಮವು, ಎಸಗಿದುದು ತಾನೆ ಹಿಂದೆ ಮಾಡಿದ್ದು, ಬೀ(ಪಾ)ಳನು+ಐದಿದ—ಬಿದ್ದಿರುವದಾದ, ತಾಂ—ಆ ಕರ್ಮನಿಮಿತ್ತಕವಾದ ಈ ವಾಸನೆಗಳು ತನ್ನ ಬುದ್ಧಿಗೆ ಬಂದು ತಗಲುವವು. ಆಳಿದ—ತಾನು ಮಾಡಿದ, ಆ ಕರ್ಮಗಳ, ತತಿ—ಸಮೂಹವು.

೧೩ ದೃಢಮೂಲವಲ್ಲದ ಹಿಂದಿನ ಆ ಕರ್ಮವು (ತನ್ನಿಂದ ನಿವಾರಿಸುವದಕ್ಕೆ)+ಅಸಾಧ್ಯವು + ಆಗದು—ಆಗುವದಿಲ್ಲ, ಸುದೃಗ್+ಉಪಸ್ಥಿತ — ಜ್ಞಾನಿಗೂ ತನ್ನ ಕರ್ಮಗಳು ಹೀಗೆಯೆ ಭೋಗದಿಂದ ನಶಿಸುವವು, ತನ್ನ ಫಲಕ್ಕಾರಂಭಿಸಿ, ಚದರಿ—ಹರಡಿದ, ಮೇಣ್+ಆ ಕರ್ಮವು—ಈ ದೇಹಕ್ಕೆ ಅವಶ್ಯಂಭೋಕ್ತವ್ಯವಾಗಿ ಫಲ ಕೊಡುವದಕ್ಕೆ ಒದಗಿಬಂದರಂತು, ತನ್ನ ಫಲವನ್ನು ಕೊಡದೆ ಅದು ಎಂದಿಗೂ ಹೆರೆದೆಗೆಯದು—ಹಿಂಗುವದಿಲ್ಲವು.

೧೪ ಭಾರತದೊಳು+ಈ ಕರ್ಮಕಂ—ದೃಢಮೂಲವಾದ ಕರ್ಮಕ್ಕಾದರೆ, ಸಂಸ್ಕಾ.... ಯತ್ನಂ—ಸತ್ಕರ್ಮಗಳಿಂದ ತನ್ನನ್ನು ಸಂಸ್ಕರಿಸಿಕೊಳ್ಳುವದಕ್ಕೆ ಪ್ರಯತ್ನವನ್ನು, ಸಾರಲು—ಸಮೀಪಿಸಿಕೊಂಡು ತಾನು ಮಾಡಿಕೊಂಡರೆ, ಈ ಕರ್ಮಕ್ಕೂ, ಉಪಮರ್ದ(ನಾಶ)ಂ+ಘಟಿ

ತೋರುತಿರೆ ಶೈಥಿಲ್ಯಮಿದಕೆ ಪು ।
ರಾರಿ ಪೂಜಾಕರ್ಮವೇ ವೈ ।
ದೋರಿ ಭವದಿಂದಿವನನೆತ್ತುವುದೆಂದು ಪೇಳಿಹುದು ॥ ೧೪ ॥

ಮೇಲೆ ವಾಚಸ್ಪತ್ಯದಲಿ ನೆರೆ ।
ಬಾಲಕನ ತಿದ್ದಿಟ್ಟವೋಲ್ಪರಿ ।
ಶೀಲನಂಮಾಡಲ್ಕೆ ಮನವೊಗ್ಗುವದು ಬೇಸರದೆ ॥
ಶೀಲಮೇನೀ ಸಂಸೃತಿಯ ಸುಕ- ।
ರಾಲ ವಿಷಯಾರಣ್ಯದಲ್ಲಾ- ।
ಭೀಲ ಜನಿ ಮೃತಿ ಪೀಡೆಗಳ ಬಿಡು ಬಿಡು ಮನಃಸಖನೆ ॥ ೧೫ ॥

ಧೀರಸೇವಿತವಲ್ಲವಿದು ತ ।
ದ್ಧೀರ ಕ್ರಿಯೆಯೇಂ ದುಃಖದೆಯೆ ನಿ ।
ರ್ಧಾರಿಸಿದರೆಂದೇಕೆ ಶಮಮಯವಾದ ನಂದನಮಂ ॥
ಸೇರದೇ ದುರಿತಾಂಧಕಾರ ವಿ ।
ಕಾರಗರ್ಭವೆನಿಸುವ ಘನ ಸಂ ।
ಸಾರ ಗುಹೆಯಂ ಪೊಗುವೆ ಮಾಯಾಗಿರಿಯ ಕಟಕದಲ್ಲಿ ॥ ೧೬ ॥

---

ಪುಮ+ಇದಕೆ, ಹೀಗಲ್ಲದೆ ಕರ್ಮಗಳು, ....ಶೈಥಿಲ್ಯಂ—ಶಿಥಿಲವಾಗಿದ್ದಲ್ಲಿ, ... ವೈದೋರಿ—ಈಶ್ವರಾರಾಧನೆಯೊಂದೇ ಆ ಅದೃಥ ಕರ್ಮಗಳನ್ನು ಕೆಡಿಸಿ,ಸತ್ವಶುದ್ಧಿಯನ್ನು ಕೊಟ್ಟು ಗುರುವಿನ ಉಪಸತ್ತಿ-ಸನ್ನಿಧಿಯ ಪ್ರಾಪ್ತಿಯವರೆಗೂ ತನ್ನ ಫಲದ ರೂಪುಗೊಂಡು ಸಂಸಾರದಿಂದ ಇವನನ್ನು ಉದ್ಧರಿಸುವದು.

೧೫ 'ಮನಸ್ಸಿಗೆ ಹಿತೋಪದೇಶ'-ಓಲ್+ಪರಿಶೀಲನಂ—ಉತ್ತಮ ತಿಳಿವಳಿಕೆಯನ್ನು ಆಗಾಗ್ಗೆ ಒಲಿದು ಮನಸ್ಸಿಗೆ ಕೊಡುತ್ತಿದ್ದರೆ, ಮನಂ+ಒಗ್ಗುವದು—ಪಳಗಿ ತನಗೆ ಹೊಂದಿಕೆಯಾಗುವದು, ಶೀಲಂ (ಚೆಲುವು)+ಏನು? ಸುಕರಾಲ—ಮಹಾ ಭಯಂಕರದ, ಆಭೀಲಂ-ತನಗೆ ಬಹು ದುಃಖರೂಪವಾದ, ಜನಿಮೃತಿ—ಹುಟ್ಟುಹೊಂದುಗಳ.

೧೬ ....ವಲ್ಲವು+ಇದು—ವಿಷಯುಗಳ ಈ ಕಾಡಿನ ಸಂಚಾರ, ಹುಟ್ಟುಹೊಂದುಗಳ ಮೇಲಿಂದಮೇಲೆ ಬರುವ ಪೀಡೆ ಇವುಗಳು; ತತ್+ಧೀರಕ್ರಿಯೆ+ಏಂ—ಮನಸ್ಸಿನ ಪ್ರತಿಯೊಂದು ಕ್ರಿಯೆಗಳೂ, ದುಃಖದೆಯೆ—ಬರಿಯ ದುಃಖವನ್ನೆ ತಂದುಕೊಡುವವೆಂದೇ ಶಿಷ್ಟರೆಲ್ಲ ನಿರ್ಧರಿಸಿದರೆಂದು ಏಕೆ ತಿಳಿಯದಿರುವೆ? ವಿಷಯುಗಳ ಕೆಟ್ಟ ಚಾಳಿಯನ್ನು ಬಿಡಿಸುವ 'ಮನೋನಿಗ್ರಹವೆಂಬ, ಶಮ—ಪ್ರಶಾಂತಹೃದಯರೂಪವಾದ ಇಂದ್ರನ ಉದ್ಯಾನವಾದ ದೇವನಂದನವನ್ನು ಸೇರಿ ಸುಖಿಸೆಯಾ ? ದುರಿತ....ಗರ್ಭ—ಪಾಪಗಳೆಂಬ ಕತ್ತಲೆಯ ವಿಕಾರಗಳ ಗರ್ಭವೆನಿಸುವ ಮಾಯಾಪರ್ವತದ, ಕಟಕ—ನಡುವೆ, ತಪ್ಪಲು ಇವುಗಳಲ್ಲಿರುವ ಕಾರ್ಗತ್ತಲೆಯ ಸಂಸಾರಗುಹೆಯನ್ನು ಕುರಿತು ಏಕೆ ಒಳಪೊಗುವೆ?

ಕೀಳಿನಂಡವನೊಡೆದು ನಡೆದರು ।
ಮೇಲೆ ದೃಹಿಣಾಲಯುವ ಕಳಿದರು ।
ಕಾಲಬಾಧೆಯು ಬಿಡುವುದೇ ಕೈವಲ್ಯ ಸಿದ್ಧಿಪುದೆ ॥
ಲಾಲಸಂ ಕಡೆಗಾಣದನಕ ವಿ ।
ಶಾಲತರಮಾಗಿರ್ಪ ಭುವನದ ।
ಕೇಳಿಗಳು ದುಃಖಕ್ಕೆ ಪುಟ್ಟುವವಾಗವುನ್ನತಿಗೆ ॥ ೧೭ ॥

ವಿವಿಧ ಕಾವ್ಯಾಲಾಪದಲ್ಲಿಯು ।
ನವರಸಾಲಂಕಾರಗಳು, ರಾಂ ।
ಕವ ಮುಖಾಚ್ಛಾದ್ಯಗಳು ರಜತ ಸ್ವರ್ಣಬಿಂದುಗಳು ॥
ಸವಿಯನೆತ್ತಿಗೆ ಪತ್ತಿಸುವ ಮಾ ।
ಧವ ಲಸತ್ಪುಷ್ಪಗಳು, ನೇತ್ರೋ ।
ತ್ಸವವನಾಪಾದಿಸುವ ಲಲನಾಮುಖ್ಯರೂಪುಗಳು ॥ ೧೮ ॥

ಮಲಯ ಮಣಿಮಯ ಭೋಗ ನಾಗಾ ।
ವಲಿತ ಚಂದನ ಮುಖ್ಯ ಶುಭಪರಿ- ।
ಮಲದ ಘನದ್ರವ್ಯಗಳು ನಿನಗೆ ಸುಖಪ್ರದಗಳಲ್ಲ ! ॥
ಎಲೆ ಮನವೆ, ಸಾರಂಗ ಗಜ ಝಷ ।
ಶಲಭ ಮಧುಕರಗಳಿಗೆ ಘಟಿಸಿದ ।
ಫಲವದಾವುದೊ ಕೊಡುವದು ತಕ್ಕಥೆಯನಾಲಿಸಲು ॥ ೧೯ ॥

---

೧೭ ಕೀಳಿನ+ಅಂಡವನು+ಒಡೆದು—ಕೆಳಗಿನ ಲೋಕಗಳನ್ನು ಒಳಹೊಕ್ಕು ಭೇದಿಸಿದರೂ, ದೃಹಿಣಾಲಯು—ಬ್ರಹ್ಮ ವಿಷ್ಣ್ವಾದಿ ಲೋಕಗಳನ್ನು ಕಳೆದು ಮೇಲಕ್ಕೆ ಹೋದರೂ, ಲಾಲಸಂ—ಸಂಸಾರದಲ್ಲಿನ ಆಸಕ್ತಿಯನ್ನು ಕಡೆಗಾಣಿಸುವವರೆಗೂ, ಕೇಳಿ—ಜಗತ್ತಿನ ಭೋಗಗಳು ವಿನೋದಗಳು ದುಃಖವನ್ನು ಕುರಿತಿರುವವೆ ಹೊರತು ತನ್ನ ಶುಭವನ್ನು ಕುರಿತು ಆಗುವದಿಲ್ಲ.

೧೮ ಕಾವ್ಯಗಳು, ಅವುಗಳ ಆಲಾಪ—ಮಾತುಕಥೆಗಳಲ್ಲಿನ ಶೃಂಗಾರ ಹಾಸ್ಯ ವೀರ ಕರುಣ ಅದ್ಭುತ ಭಯಾನಕ ಬೀಭತ್ಸ ರೌದ್ರ ಶಾಂತ ಎಂಬ ನವರಸಗಳೂ, ಅಲಂಕಾರಗಳೂ, ರಾಂಕವ—ಉಣ್ಣೆಯ ಬಟ್ಟೆ—ಬನಾತು ಶಾಲುಗಳೂ, ಮುಖಾಚ್ಛಾದ್ಯ—ಬಾಗಿಲನ್ನು ಅಲಂಕರಿಸುವ ತೆರೆಗಳೂ ಬೆಳ್ಳಿ ಚಿನ್ನಗಳ ಬಿಂದುಗಳ ಮಣಿ ಮುತ್ತುಗಳ ತೋರಣಗಳೂ, ಪತ್ತಿಸುವ—ಹತ್ತಿಸುವ, ಮಾಧವ—ವಸಂತಋತುವಿನಲ್ಲಿ, ಲಸತ್—ಹೃದಯಂಗಮವಾಗಿ ಕಂಗೊಳಿಸುವ ಪುಷ್ಪವಿಶೇಷಗಳೂ, ನೇತ್ರೋತ್ಸವವನು—ನೇತ್ರಾನಂದವನ್ನು, ಆಪಾದಿಸುವ—ಕೊಡುವ, ಲಲನಾ—ವಿಲಾಸವತಿಯರಾದ ಸುಂದರಸ್ತ್ರೀಯರ,

೧೯ ಮಲಯ—ಸಂಫುಲ್ಲ—ಹೂವುಗಳಿಂದ ತುಂಬಿದ ಉದ್ಯಾನಗಳೂ, ಮಣಿಮಯ—ಉತ್ತಮ ಭೋಗಗಳೂ, ನಾನಾ....ವ್ಯಗಳು—ಶ್ರೀಗಂಧ ತಾಳೆ ನಾಗಸಂಪಿಗೆಗಳ ಪರಿಮಳದ್ರವ್ಯಗಳೂ, ಸುಖಪ್ರದ—ಸುಖವನ್ನೆಂದಿಗೂ ನಿನಗೆ ಕೊಡತಕ್ಕವುಗಳಲ್ಲ. ಏತಕ್ಕೆಂದರೆ ಸಾರಂಗ—

ದೇಹದಿಂ ಸುಖಮೆಂಬೆಯಾ ನಿ।
ರ್ವ್ಯೂಹದಿಂದನ್ವರ್ಥವದು, ನಿಜ।
ಗೇಹದಿಂ ಸುಖಮೆಂಬೆಯಾ ಪ್ರತ್ಯಕ್ಷದುಃಖಮಯಂ॥
ಗೇಹಿನಿಯದೆಶೆಯಿಂದ ಸೌಖ್ಯವ।
ನೂಹಿಸುವೆಯಾ ಮೃತ್ಯುದೇವತೆ।
ರೂಹುವಿಡಿದಿಲ್ಲಿಯೇ ದೊರಕಿದಳ್ಕೇಳು ಚನ್ನಾಗಿ ॥ ೨೦ ॥

ಇಂದು ಗೌರಿಯ ನೋಂಪಿ ಬಂದುದು,।
ತಂದೆ ತಾಯ್ಗಳ ಪುಣ್ಯದಿವಸ, ಮು।
ಕುಂದನ ವ್ರತವಿಂದು, ನಂಟರು ಬರುವರಾಗಿಹರು,॥
ನಂದನನು ಮದುವೆಗೆ ನೆರೆದ, ಮಗ।
ಳಿಂದು ಮೈನೆರೆದಳು, ಬರುವವ-।
ರ್ಬಂದರಿಂದಿಗೆ, ಗುರುಗಳಾರಾಧನೆ ಬರುತ್ತಿಹುದು ॥ ೨೧ ॥

ಬೆಲ್ಲದಚ್ಚುಗಳಿಲ್ಲ ತುಪ್ಪದ।
ಕಲ್ಲು ಮಡಕೆಗಳಿಲ್ಲ, ತೀರಿತು-।
ನೆಲ್ಲು, ಬಿಡದುಟ್ಟಿರುವ ಶೀರೆಗೆ ಹರುಕು ಕಾಣಿಸಿತು!॥
ಅಲ್ಲಿಗಲ್ಲಿಗೆ ಕಾಸು ನಡೆಯದೆ।
ನಿಲ್ಲುವುದೆ ವೆಚ್ಚಂಗಳಿಕ್ಕಿದ-।
ರೊಳ್ಳಿಯುವರೀ ನೆರೆಹೊರೆಗೆ ಬಳಿಕಿಕ್ಕದಿರಲಲ್ಲ ॥ ೨೨ ॥

---

ಜಿಂಕೆ, ಗಜ—ಆನೆ, ಝಷ—ಮೀನು, ಶಲಭ—ಪತಂಗದ ಹುಳು, ಮಧುಕರ—ದುಂಬಿ ಇವುಗಳು—ಶಬ್ದ, ಸ್ಪರ್ಶ, ರಸ, ರೂಪ, ಗಂಧಗಳಲ್ಲಿ ಒಂದೊಂದು ವಿಷಯದಿಂದಲೇ ಒಂದೊಂದು ಅಳಿದಿರುವಲ್ಲಿ ಕ್ಷಣವೂ ಬಿಡದಂತೆ ಸರಾಗದಿಂದ ಎಲ್ಲವನ್ನೂ ಬಳಸುವ ನಿನಗೆ ಆ ದುಷ್ಫಲಗಳೆಲ್ಲವೂ ಒಟ್ಟುಗೂಡಿ ಬರುವದರಲ್ಲಿ ಸಂಶಯವೇನಿದ್ದೀತು?

೨೦ ನಿರ್ವ್ಯೂಹ—ಸಂಶಯಕ್ಕೆಡೆಯಿಲ್ಲದಂತೆ, ದಹ್ಯತೆ+ಇತಿ—ದೇಹಃ, ಶೀರ್ಯತೆ+ಇತಿ-ಶರೀರಃ—ಎಂದು ದಹಿಸಿಹೋಗುವದು ದೇಹವು, ಕ್ಷೀಣಿಸಿ ನಶಿಸುವದು ಶರೀರವು ಎಂಬಿವು ಅದರ ಅನ್ವರ್ಥನಾಮಗಳು; ನಿಜಗೇಹ—ತನ್ನ ಮನೆಯಿಂದ, ಗೇಹಿನಿ—ಗೃಹಿಣಿಯಿಂದ, ರೂಹು ಆ ಮೃತ್ಯುದೇವತೆಯೇ ಈ ಸ್ತ್ರೀಯಳ ರೂಪಿನಿಂದ ಕಾಮಿನಿಯಾಗಿ ನೀನಿರುವಲ್ಲಿಯೇ ದೊರೆತು ಬಂದಿರುವಳು!

೨೧ ....ನೋಂಪಿ—ಮಂಗಳಗೌರಿಯ ವ್ರತ, ನೋಹಿ—ನೋಂಪು—ಹಬ್ಬ ಹರಿದಿವಸಗಳು;

೨೨ ಬಿಡದೆ+ಉಟ್ಟಿರುವ, ವೆಚ್ಚಂಗಳು+ಇಕ್ಕಿದರೆ+ಒಳ್ಳಿಯುವರು—ತಡಮಾಡದೆ ಅವರು ಕೇಳಿದ್ದನ್ನು ಕೊಡುತ್ತಿದ್ದರೆ ತಮಗೆ ಒಳ್ಳೆಯುವರಾಗಿರುತ್ತಾರೆ, ಬಳಿಕ+ಇಕ್ಕದಿರಲು+(ಅವರು ಒಳ್ಳೆಯುವರು) ಅಲ್ಲ.

ನೆರೆಯ ಸತಿಯರ ನೋಡಿ, ಬಣ್ಣದೆ ।
ಕೊರತೆಯೇ ಚಿನ್ನದಲಿ ಕುಂದೇ ।
ಹೊರಗೆ ಕಾಸಿಟ್ಟಾಡುವದನೊಳಗುಂಬ ಭೋಜನದೆ ॥
ಕರಗ ಕರಗದ ಬೆಣ್ಣೆ ಚಿಲಿಪಾ ।
ಲರೆಗಡೆದ ಮೊಸರಚ್ಚಬಿಳಿ ಸ ।
ಕ್ಕರೆ ಬಿಳಿಯ ಸಣ್ಣಕ್ಕಿ ಸಾಣಂಗಿಯನೆರೆದ ಬೇಳೆ ॥ ೨೩ ॥

ಬದುಕಿದರೆ ಮೇಣವರ ತೆರದಿಂ ।
ಬದುಕಬೇಕಲ್ಲದಿರೆ ಕೈಲಾ ।
ಗದ ಪುರುಷನಂ ಕೂಡಿಕೊಂಡೀ ಮನೆಯೊಳಿರುವದಕಿಂ ॥
ಬಿದಿರಮೆಳೆಯಲ್ಲಿರುವ ದೇವಾಂ ।
ಗದ ಮಿಗಂಗಳ ಬಾಳೆ ಲೇಸೆಂ ।
ದಿದಿರ ಗರತಿಯರಲ್ಲಿ ಪೇಳುವ ಹೆಂಡತಿಯ ಕೂಡೆ- ॥ ೨೪ ॥

ಬಾಳುವದು ಲೇಸೋ, ಯುಗುರ್ಗಳ ।
ಬಾಳಿನಿಂ ಹುಲಿಯಿಂದೆ ಬಿಡದೇ ।
ಕೀಳಿಸಿಯೆಕೊಳ್ಳುವದು ಲೇಸೋ, ತಿಳಿದವರಕೂಡೆ- ॥
ಹೇಳು, ಹೇಳದೆ ಇರ್ದರೊಳಗಿದ ।
ಮೇಳವಿಸಿದನುಭವದ ಚಿತ್ತದೆ ।
ತಾಳು ಎರಡರೊಳಾವುದೊಳ್ಳಿತೆನುತ್ತ ಬುದ್ಧಿಯಲಿ ॥ ೨೫ ॥

ಈ ಪರಿಯನಾರೈದು ತದ್ಗತ ।
ಚಾಪಲವನಿಳಿಕೈವುದೊಳಿತು ಕು ।
ರೂಪವಾದೀ ವಾಸನೆಯೆ ದುಃಖಕ್ಕೆ ನಿನಗಹುದು ॥

---

೨೪ ....ಬೇಕು+ಅಲ್ಲದಿರೆ—ಹಾಗೆ ಸುಖದಿಂದ ಬದುಕುವದಕ್ಕೆ ಶಕ್ತಿಗಿರದಿದ್ದರೆ, ....ಮೆಳೆ—ಹುಲ್ಲಿನ ಪೊದರುಮನೆಯಲ್ಲಿರುವ, ದೇವಾಗಂದ ಮಿಗಃ—ದೇವಮೃಗ—ಪುಲ್ಲೆ—ಜಿಂಕೆಗಳ ಸಂಸಾರವೇ ಲೇಸೆಂದು+ಇದಿರಮನೆಯ ಗರತಿ—ಸಂಸಾರದ ಯೋಗ್ಯರಾದ ಸ್ತ್ರೀಯರಲ್ಲಿ.

೨೫ ....ಇರ್ದರು+ಒಳಗೆ+ಇದ ಮೇಳವಿಸಿದ+ಅನು.... ತಾಳು—ಇದನ್ನು ನಿನ್ನ ಮನಸ್ಸಿನಲ್ಲಿಯೆ ಒಂದಕ್ಕೊಂದು ಹೊಂದಿಸಿ, ಎರಡರೊಳು+ಆವುದು+ಒಳ್ಳಿತು—ಒಳ್ಳೆಯದು, ಎನುತ್ತ—ಎಂಬುದನ್ನು ತಾಳಿಹಾಕಿ ಯೋಚಿಸಿನೋಡು!

೨೬ ....ಯನು+ಆರೈದು—ವಿಚಾರಿಸಿ, ತತ್+ಗತ—ಸ್ತ್ರೀಯೊಳಗಿನ, ಆ ಚಾಪಲವನು (ತನ್ನ ಮನಸ್ಸಿನಿಂದ ಹೊರಕ್ಕೆ ತೆಗೆದು) + ಇಳಿಕೈವುದು+ಒಳಿತು—ಕೆಳಕ್ಕೆ ಇಳಿಸಿಬಿಡುವದು ಶ್ರೇಯಸ್ಸಾಧನವು. ಏಕೆಂದರೆ ಕೃಪ-ಕದು-ಈ ದುರ್ವಾಸನೆಯು ದುಃಖವನ್ನು ಕೊಡುತ್ತಲ್ಲವೆ ನಿನ್ನ ಸುಖಕ್ಕೆ ಎಂದಿಗೂ ಇರುವದಿಲ್ಲವು, ಕಲಾಪಟುಗಳು—ಆತ್ಮವಿದ್ಯಾವಿಶಾರದರು, ಇಲ್ಲಿ—ಸಂಸಾರದ ದುರ್ವಾಸನೆಗಳು ತುಂಬಿರುವ ಈ ಅಂತಃಕರಣದಲ್ಲಿ, ಆತ್ಮವ್ಯವಚ್ಛೇದ+ಉಪಕರಣಂ—ಆತ್ಮ

ವೈಪರೀತ್ಯಂ ದೊರಕದಿಲ್ಲಿ ಕ |-
ಲಾಪಟುಗಳಾತ್ಮವ್ಯವಥೇ |
ದೋಪಕರಣಂ ಚಿತ್ತಮಿಲ್ಲೆಂದಿರ್ಪರಲ್ತೆ ನಿಜಂ || ೨೬ ||

ಎಂದು ಶ್ರುತದಿಂ ಕೆಲವು ಸಜ್ಜನ |
ರಿಂದ ಕೆಲವನುಭವಕೆ ತಮ್ಮೊಳು |
ಬಂದ ದುಃಖಶ್ರೇಣಿಯಿಂ ಕೆಲವಿನ್ನು ಖಲನಾಗೆ ||
ಮುಂದೆ ನರಕಂ ಬರ್ಪುದೆಂಬ ಭ-|
ಯಂದೊಡರ್ಪುದರಿಂದ ಕೆಲವಾ |
ನಂದವೈದುವೆ ಸಾಧಿಸಲ್ಕೀನೆಂಬ ರುಚಿಯಿಂದ || ೨೭ ||

ಮೆಲ್ಲಮೆಲ್ಲನೆ ಲಾಲಿಸಿದರಿದ |
ರಲ್ಲಿಯೆರಗದೆ ಪೋಪುದೇ ಬಿಡು- |
ಗಲ್ಲಿನಲ್ಲಿಡೆ ಜಲಘಟವ ನಿಮ್ನತೆಯು ಪಡೆವುದಲಂ ||
ಕಲ್ಲಿನಂತೆ ಅಸಮತೆಯಿದರೊಳ |
ಗಿಲ್ಲ ಕೇವಲ ಜಡವೆ ಚೈತ-|
ನ್ಯೋಲ್ಲಸತ್ಪ್ರಕೃತಿಯು ಮನಂ ಬರ್ಪುದು ಸುಮಾರ್ಗಕ್ಕೆ || ೨೮ ||

ಅದು ನಿಮಿತ್ತಂ ಪೊರಗಣಾನ |
ರ್ಥ್ಯದ ವಿಷಯಮೀಯದುದೆ ದಮವೆಂ |
ಬುದು, ದಮಂ ದೊರಕೊಂಬುದಾವುದರಿಂದೆನಲ್ತನಗೆ ||

---

ನನ್ನು ಈ ದೇಹಾದಿ ಅನಾತ್ಮಗಳಿಂದ ಬೇರಾಗಿ ವಿಂಗಡಿಸಿ ತಿಳಿಯುವದಕ್ಕೆ ಬೇಕಾಗಿರುವ ಉಪ—ಜ್ಞಾನಕ್ಕೆ ಸಮೀಪದ ಚಿತ್ತವೆಂಬ ಕರಣವೆ, ಇಲ್ಲ+ಎಂದಿರ್ಪರಲ್ತೆ—ಇರುವದಿಲ್ಲವೆಂದಲ್ಲವೆ? ಆ ಜ್ಞಾನಿಗಳ ನಿಶ್ಚಯವು.

೨೭ ಕೆಲವು+ಇನ್ನು ಖಲ—ಮೂರ್ಖನಾಗಿಯೆ ಸೀಸಿರುವದಾದರೆ, ಭಯವೇ ಬಂದು ನಿನಗಾಶ್ರಯಿಸುವದೆಂದು ಹೇಳುವದರಿಂದಲೂ, ನೀನು ಸಾಧಿಸಿದರೆ ಆನಂದವನ್ನೆ ಹೊಂದುವೆ ಎಂಬ ಸೂಕ್ತಿಗಳಿಂದ ಪ್ರೀತಿಯನ್ನು ಹುಟ್ಟಿಸುವ ಹಿತೋಕ್ತಿಗಳಿಂದಲೂ,

೨೮ ಲಾಲಿಸಿದರೆ + ಇದರಲ್ಲಿ + ಎರಗದೆ—ಬಂದು ಸೇರದೆಇದ್ದೀತೆ ಏನು? ಭಾವಿಯ ಕಟ್ಟೆಯಮೇಲೆ ಒಂದು ನೀರಿನ ಕೊಡವನ್ನಿಡುತ್ತಿದ್ದರೆ ಅಲ್ಲಿನ ಬಿಡುಗಲ್ಲಿನಲ್ಲಿಯು, ನಿಮ್ನತೆ—ಒಂದು ಗುಳಿಬೀಳುತ್ತೆಂದರೆ ಈ ಮನಸ್ಸಿನ ಗರ್ಭವು ಅಂಥ ಅಸಮತೆಯಿಂದ ಕೂಡಿ ಮೊರಟುಕಲ್ಲಿಗೆ ಸರಿದೂಗುವದಿಲ್ಲ. ಏಕೆಂದರೆ ಚೈತನ್ಯ+ಉಲ್ಲಸತ್+ಪ್ರಕೃತಿ—ಹೊರಗೆದ್ದು ಹೊಳೆಯುವ ಚಿದಾಭಾಸನೆಂಬ ಚೇತನಸ್ವಭಾವವುಳ್ಳದ್ದಲ್ಲವೆ ಈ ಮನಸ್ಸು?

೨೯ ಪೊರಗಣ+ಅನರ್ಥ್ಯದ—ತನಗೆ ಅನರ್ಥಗಳನ್ನೆ ಕೊಡುವ ಹೊರಗಿನ ವಿಷಯಗಳನ್ನು ತಂದು ಇಂದ್ರಿಯಗಳಿಗೆ, ಈಯುಮವೆ—ಕೊಡದಿರುವದೆ ದಮವು; ವಿದಿತ—ಶಾಸ್ತ್ರಾದೃಷ್ಟ, ಮದಿಂದ್ರಿಯ—ಈ ದುಷ್ಟೇಂದ್ರಿಯಗಳನ್ನು, ಆ ವಿಷಯಗಳಿಂದ ನಿಗ್ರಹಂ+ಅದ(ವದ)ಕೆ

ವಿದಿತ ಯಮಮುಖ್ಯಂಗಳಿಂ ಬಾ ।
ಹ್ಯದ ದುರಿಂದ್ರಿಯ ವಿಷಯ ನಿಗ್ರಹ ।
ಮದಕೆ ರೂಪಂ ನೋಡಲೇನಹುದಿದರ ದೆಶೆಯಿಂದ ॥ ೨೯ ॥

ಲಲಿತಚಿಂತಾಮಣಿಯ ಮಾತ್ರೆಯ ।
ಫಲವು ಪಥ್ಯ ನಿಷೇವಣದೊಳು- ।
ಜ್ಜ್ವಳಿಸುವಂದದಿ ಶಮಸುಖಂ ದೊರಕುವದು ದಮದಿಂದ ॥
ಅಳಿವುದೇ ಭಾವಂ ಹೃಷೀಕಂ ।
ಗಳಲಿ ತದಧಿಷ್ಠಾನ ಸುರರು ಇ ।
ರಲ್ಲಸಿತಾರ್ಥವೆನಲ್ಕೆ ಇದರರ್ಥವನು ಕರುಣಿಪುದು ॥ ೩೦ ॥

ತೆಳಿವ ತೆರದಿಂದೆಂದು ಕೇಳ ।
ಲ್ತಿಳಿವುದೈ ನಯನಕ್ಕೆ ಸೂರ್ಯಂ ।
ಬಲವದೀಶಂ ತನ್ನ ಸಂಕಲ್ಪವಿದು ರೆಪ್ಪೆಗಳ ॥
ಕಳೆಯೆ ಮುಚ್ಚಳಮಂ ಪುರೋಗತ ।
ಫಲಿತ ದೃಶ್ಯವ ಕಾಣಿಸುವ ವಿಧಿ ।
ಯುಳಿದು ಮಾಠರ ಪಿಂಗಲದೊಳಿಷ್ಟತೆಯನಾಡುವನೆ ॥ ೩೧ ॥

ದಿಗಧಿದೇವತೆಯರಿಗೆ ಕಿವಿಯೋ ।
ಳ್ಪೊಗಿಸುವೂಳಿಗ ಶಬ್ದಮಂ, ತ್ವ- ।
ಕ್ಕಿಗೆ ಸುಖಸ್ಪರ್ಶಮನು ತಾಂ ದುಃಸ್ಪರ್ಶಮಂ ತಂದು ॥

---

ರೂಪಂ+ನೋಡಲ್+ಏನು+ಅಹುದು—ಬಿಟ್ಟ ವಿಷಯಗಳಲ್ಲಿ ಪುನಃ ಇಂದ್ರಿಯಗಳು ಎರಗದಿರುವದೆ ದಮದಿಂದ ತನಗೆ ಸಿಕ್ಕಿದ ಫಲವು.

೩೦ ಪಥ್ಯನಿಷೇವಣದೊಳು+ಉಜ್ಜ್ವಳಿಸುವಂದದಿ—ಪಥ್ಯದಿಂದಲೇ ಮಾತ್ರೆಯ ಗುಣವು ತನಗೆ ಸಿಕ್ಕುವಂತೆ, ಭಾವಂ+ಹೃಷೀಕಂ—ಇಂದ್ರಿಯಗಳಿಗೆ ಬಂದ ತಮ್ಮ ಸ್ವಭಾವವು ಅವು ಬಿಟ್ಟಗಲುವದಕ್ಕಿಲ್ಲವಷ್ಟೆ? ಅಲ್ಲದೆ, ತತ್—ಆ ಇಂದ್ರಿಯಗಳನ್ನು ತಂತಮ್ಮ ವಿಷಯಗಳಲ್ಲಿ ಬಿಡದೆ ಪ್ರೇರಿಸುವ ಅಧಿಷ್ಠಾನವಾಗಿರುವ ಸುರರು ಅನುಕೂಲಿಸಿ ಎಚ್ಚತ್ತಿರಲು, ಇಂದ್ರಿಯ ನಿಗ್ರಹವೆಂಬುದು, ಲಸಿತಾರ್ಥಂ—ಬರಿಯ ಮೇಲ್ಬೋದಿಕಿನ ಗಿಲೀಟಿನ ಮಾತೆ ಸರಿ!

೩೧ ಬಲವದು+ಈಶಂ—ಅಧಿದೇವತೆ, ಕಳೆ....ಮಂ—ಕಣ್ಣು ತೆರೆಯಲು, ಪುರೋಗತ—ತನ್ನ ಕಣ್ಣೆದುರಿನಲ್ಲಿ, ಫಲಿತ—ಇರುವ, ವಿಧಿ—ನಿಯಮವನ್ನು, ಉಳಿದು—ಬಿಟ್ಟು, ಮಾಠರ—ಸೂರ್ಯನ ಪಾರ್ಶ್ವದೇವತೆಗಳು, ಸೂರ್ಯನು ಪಿಂಗಲದೊಳು—ಸುಸ್ತಿಬಡ್ಡಿ ಪ್ರೇರಿಸುವದು ತನಗೆ ಸಾಕಾಗಿ ಆ ನೇತ್ರವನ್ನು ತನ್ನ ವ್ಯಾಪಾರ ಬಿಟ್ಟು ಸುಮ್ಮನಿರಿಸುವದರಲ್ಲಿ ಇಷ್ಟಪಡುವನೇನು.

೩೨ ಶಬ್ದಮಂ ಕಿವಿಯೊಳ್+ಪೊಗಿಸುವಂತೆ ಮಾಡುವದೆ ದಿಕ್‌ದೇವತೆಗಳಿಗೆ ತಮ್ಮ ಊಳಿಗವು, ಕರಂ—ಚೆನ್ನಾಗಿ, ಪವನಗೆ—ವಾಯುವಿಗೆ, ಸಹಜಂ+ಆಗಿರಲಿ+ಇವರ್ಕಳ—ಈ ಇಂದ್ರಿಯಗಳು ತಂತಮ್ಮ ವ್ಯಾಪಾರಗಳನ್ನು ಉಳಿದು+ಅವು ಸುಮ್ಮನಿರಲ್ಕೆ ಬೇಕಾದ, ತೆರ—ದಾರಿಯನ್ನು

ತಗಲಿಸುವ ಕೃತ್ಯಂ ಕರಂ, ಪವ ।
ನಗೆ ಸಹಜವಾಗಿರಲಿವರ್ಕಗಳ ।
ಬಗೆಯೊಳುಳಿದವಿರಲ್ಕೆ ತೆರವುದ್ದಾಲಕಂ ಪೇಳ್ದಂ ॥ ೩೨ ॥

ಸತ್ತಿನಲಿ ನಿಲಿಸುವದು ಕರ್ಮವ ।
ಸತ್ತಿನಿಂ ಸೆಳೆದೊಂದುಪಾಯುವ ।
ಮತ್ತೆ ಯುಪರತಿ ಯಾವುದೆನೆ, ವಿಷಯಂಗಳಂ ನೋಡ ॥
ವೃತ್ತಿಯನ್ಯತೆಯೆಂದುವಿಾಶ್ವರ ।
ನತ್ತ ನಿಷ್ಕಾಮಕ್ರಿಯಾರ್ಥವ ।
ಪತ್ತಿಪುದು ವಿಹಿತಕ್ರಿಯೆಗಳಲಿ ಕಾಮನೆಯನುಳಿದು ॥ ೩೩ ॥

ಪರಮ ಪುರುಷಾರ್ಪಣಮನೀಷಾ ।
ಭರದಿ ಗೈವುದು, ನೋಡಲಾವುದು ।
ಪುರುಷ ತರ್ಪಣಮೆನಲು ನಾನಾವಸ್ತುಜಾಲದಲಿ ॥
ಪರಮನೈಕ್ಯಜ್ಞಾನದಿಂ ಬೇ ।
ರರತುದೇ ತತಲಪ್ತಿಯೆಂದು ।
ಚ್ಚರಿಸಿದುದು ವಾಸಿಷ್ಠದಲ್ಲಿಯ ಫಲ್ಗುನಾಖ್ಯಾನಂ ॥ ೩೪ ॥

ಕಾರಣವೆ ಯಮ ನಿಯಮಗಳ್ವೈ ।
ಕಾರಿಕ ನಿರೋಧವೆ ಶರೀರಂ, ।
ಕಾರಿಯತೆ ತದ್ವಾಸನಾ ಸಂಕ್ಷಯಮರತಿಗೆಂದು ॥

---

೩೩ ತಾನು ಮಾಡುವ ಕರ್ಮಗಳು ಲೋಕಾಂತರದ, ಅಸತ್ತಿನಿಂ—ತುಚ್ಛ ಫಲಗಳಿಂದ ಅದನ್ನು ಹಿಂದಕ್ಕೆ ಜಗ್ಗಿ ಸೆಳೆದು ಸತ್ತಿನಲ್ಲಿ ನಿಲ್ಲಿಸುವ ಉಪಾಯವನ್ನು ಉದ್ದಾಲಕನು ಹೇಳಿವನು (ಛಾಂ॥ ೬) ವೃತ್ತಿಯನ್ಯತೆ—ವಿಷಯಗಳು ತಮ್ಮ ಸ್ವಭಾವದಿಂದಲೆ ನಮ್ಮನ್ನು ಪರಮಾತ್ಮನಿಂದ ದೂರಕ್ಕೊಯ್ಯುವವೆಂದು ಇವನು ಬಗೆದು ಈಶ್ವರನತ್ತ ತಿರುಗಿ ವೇದವಿಹಿತವಾದ ಶುಭಕ್ರಿಯೆಗಳಲ್ಲಿ ಕಾಮನೆಯನ್ನೆಲ್ಲ ಬಿಟ್ಟು ನಿಷ್ಕಾಮಕರ್ಮಿಯಾಗಿ ಆ ಕ್ರಿಯೆಗಳ ಫಲಗಳನ್ನೆಲ್ಲವನ್ನೂ, ಈಶ್ವರನಿಗಾಗಿ ತಾನು, ಪತ್ತಿಪುದು—ಹತ್ತಿರ ಮಾಡಿ –

೩೪ ಮನೀಷಾ—ಬುದ್ಧಿಯು, ಭರದಿ—ಪ್ರಯತ್ನದೊಡನೆ ಅವನಿಗೆ ಅರ್ಪಣೆ ಮಾಡುವದು ಉಪರತಿಯು; ನೋಡಲು + ಆವುದು + ಪು ರುಷತರ್ಪಣಂ + ಎನಲು + ಪರಮನ + ಐಕ್ಯಜ್ಞಾನದಿಂ(ದ ಸಂಸಾರದ) + ಬೇರು + ಅರತುದೆ—ಭೇದಬುದ್ಧಿಯೆಂಬ ತಾಯ್ಬೇರನ್ನೆ ಚೆನ್ನಾಗಿ ಅರೆದು ನಾಶಪಡಿಸುವವೇ ನೈಜವಾದ ಈಶ್ವರನ, ತತಲಪ್ತಿ–(ಪೂಜಿ)ಯೆಂದು + ಉಚ್ಚರಿಸಿದುದು....

೩೫ ....ಯಮಗಳ್ + ವೈಕಾ....ಧವೆ—ಕರ್ಮಗಳನ್ನೆಲ್ಲ ಬಿಡುವದೆ, ಶರೀರಂ—ಉಪರತಿಯ ರೂಪು, ತತ್ + ವಾಸನಾಸಂಕ್ಷಯಂ + ಅರತಿಗೆ—ಉಪರತಿಗೆ, ಕಾರಿಯತೆ—ಫಲವು, ಎಂದು + ಇವಕೆ + ಆಕಾರಂ—ಈ ಉಪರತಿಯ ರೂಪವೆಂದು ತೋರಿದರು, ಉಚಿತ....ರಂ + ಆವುದು—ಮಾಡಬೇಕೆಂದ ಶಾಸ್ತ್ರೀಯ ಕರ್ಮಗಳನ್ನು ಬಿಡುವದು ಹೇಗೆ? ಗುರುವು ವಿಧಿಯ....

ತೋರಿದರು ಪ್ರಾಚೀನರಿದಕಾ ।
ಕಾರಮುಚಿತಕ್ರಿಯೆಗಳಿಗೆ ಪರಿ ।
ಹಾರಮಾವುದು, ವಿಧಿಯ ದೆಶೆಯಿಂದದ-ವೆ ಪರವೆಂದು　॥ ೩೫ ॥

ಬೇಸಗೆಯ ಡಾವರದೆ ಬೆಟ್ಟದ ।
ಹಾಸರೆಗಳಲಿ ಮಡುವಿನಲಿ ಕಡು ।
ಸೂಸುತಿಹ ಮಂಜಿನಲಿ ನಿಲಲು ತಿತೀಕ್ಷೆಯಲ್ಲವದು ॥
ವಾಸನೆಯ ಮುಖದಿಂದ/ಬರ್ಪಾ-।
ಯಾಸಮಂ ಸಹಿಸುವದೆ ಎಂದು ವಿ-।
ಕಾಸಮಂ ಮಾಡಿದರು ಫಲಿತಾರ್ಥವನು ಜಾನಿಗಳು　॥ ೩೬ ॥

ಕೆಲರು ಪ್ರತ್ಯಯದರ್ಥರುಚಿಯಂ ।
ಘೆಳಿಸಲಾಗದು ಸಹನವನ್ನೇ ।
ಘಳಿಪುದೆಂದರು ಮೇಲೆ ದುಃಖವ ಲೆಕ್ಕಿಸದುದೆಂದು ॥
ತಿಳಿದರದೆಯಭ್ಯಸ್ತಮಾಗಿಹ ।
ಬಲವ ಪಿಡಿದು ಪರೇಚ್ಛೆಯೆಂತಾ ।
ಗಲಿ ವಿಪತ್ತಿಯದಂ ಕುರಿತ್ತಳಲದುದೆ ದೃಢವಾಗಿ　॥ ೩೭ ॥

ತಿಜನಿಶಾತನೆ ಎಂಬ ಧಾತುವೆ ।
ಭಜಿಸಿದ ಪದಕ್ಕರ್ಥಮೆಂದ-।
ದ್ವಿಜರು ಪಂಡಿತರು ನೆರೆಧಾತ್ವರ್ಥದಲಿಯೆ ಅನಂತಂ ॥

---

—'ಯದ್ಯಥೇಹ....' ಎಂದು ಕೈವಲ್ಯವೇ ಮನುಷ್ಯನಿಗೆ ಪರಮ ಗತಿಯೆಂದೂ, ಕರ್ಮಫಲಗಳ ನಿಸ್ಸಾರತೆಯನ್ನು ಎತ್ತಿ ಮನಗಾಣಿಸುತ್ತ ಕ್ರಿಯೆಗಳ ತ್ಯಾಗವನ್ನು ಆ ಶ್ರುತಿಗಳೇ ಮುಖತಃ ಹೇಳಿ ವಿಧಿಸುತ್ತಿರುವದರಿಂದಲೂ ವಿರೋಧವಿಲ್ಲವು.

೩೬ ಡಾವರದೆ–ಬೇಸಿಗೆಯ ದಿನಗಳಲ್ಲಿ, ಬೆಟ್ಟಗುಡ್ಡಗಳ ಕೋಡುಗಲ್ಲುಗಳ ಹಾಸರೆ–ಹಾಸುಗಲ್ಲುಗಳಲ್ಲಿ ಆಹಾರಾದಿಗಳಿಲ್ಲದೆ ತಾನು ಉದ್ದನೆ ಮಲಗಿಬಿಡುವದು, ಕಡು—ಬಿಡುವಿಲ್ಲದೆ ಸುರಿಯುವ, ತಿತಿಕ್ಷೆಯೆಂಬುದರ ಫಲಿ(ನಿಶ್ಚಿ)ತಾರ್ಥಪ + ವಿಕಾಸಮಂ — ವಿವರವನ್ನು, ಜಾನಿ— ಬ್ರಹ್ಮಜ್ಞಾನಿಗಳು.

೩೭ ತಿತಿಕ್ಷಾಶಬ್ದಕ್ಕೆ ಬಂದ ಪ್ರತ್ಯಯದ ಅರ್ಥಸ್ವಾರಸ್ಯದ ಸವಿಯನ್ನಿಲ್ಲಿ ಹಿಡಿಯುವದಲ್ಲ, ಲೆಕ್ಕಿಸವಂತೆ ದುಃಖಗಳನ್ನು ಸಹಿಸುವದೇ ತಿತಿಕ್ಷೆಯು. ಮೇಲೆಮೇಲೆ ಬರುವ ದುಃಖಗಳನ್ನು ಸಹಿಸುವದಕ್ಕೆಂದು ಮಾಡುತ್ತಿರುವ ತನ್ನಭ್ಯಾಸ ತಿತಿಕ್ಷೆ ಎಂದಾಗಿದ್ದರೂ ಪರರ ಇಚ್ಛೆಯಂತೆ ಬರುವ ವಿಪತ್ತುಗಳನ್ನಾದರೂ ಕುರಿತು ಕಿಂಚಿತ್ತಾದರು ತನ್ನ ಮನಸ್ಸಿನಲ್ಲಿ ಅಳುಕಿಲ್ಲದಿರುವದೇ ಘನ ತಿತಿಕ್ಷೆ.

೩೮ 'ತಿಜೇಃಕ್ಷಮಾಯಾಂ' ಎಂಬ ಧಾತುವಿನಿಂದ ಹುಟ್ಟಿ, ತಿತಿಕ್ಷಿತುಂ+ ಇಚ್ಛಾ—ತಿತಿಕ್ಷಾ ಎಂಬ ರೂಪಕ್ಕೆ ಬಂದ ಆ ಪದವು—ಕ್ಷಮಿಸುವ, ಸಹಿಸಿಕೊಳ್ಳುವ—ಇಚ್ಛೆ ಎಂಬರ್ಥ ಕೊಡುತ್ತದೆ. ಭಜಿ....ರ್ಥಂ ಎಂದರ್+ ದ್ವಿಜರು–ಬ್ರಹ್ಮಜ್ಞಾನಿಗಳು ಕ್ಷಮೆಯೇ ತಿತಿಕ್ಷೆಯೆಂಬಪದಕ್ಕರ್ಥವೆಂದರು

ನಿಜವಿರಾಗಕ್ಕಿದುವೆ ಕೂರಿಮೆ- ।
ಯು ಜನಿಸಲ್ಕೊಡಗೂಡಿ ಕಾಮನ ।
ಗಜಬಿಜಿಯನಿಳಿಕೈವ ನಿರ್ಭರ ಶಕ್ತಿಯುಪ್ಪುದಲ ! ॥ ೩೮ ॥

ಪೊರಗೆ ಪ್ರಾರಬ್ಧದ ನಿಮಿತ್ತಂ ।
ವರಿಸಿ ಬಂದಡಹಾಯ್ವ ದುಃಖೋ- ।
ತ್ಕರೆಯೊಳಾದರು ಮೋಹವೈದಲಿ ಚಿತ್ತಮೊತ್ತರಿಸ- ॥
ಪರಿಪರಿಯ ರಾಗಾದಿಗಳನೇ ।
ಬೆರಸಿ, ಬುದ್ಧಿಯ ಸಕಲರಿಂ ಸ ।
ತ್ಕರಿಸಿಕೊಳ್ಳದ ವಿಕೃತಿಯಂ ನಿಗ್ರಹಿಪೆನೆನ್ನುವದೆ- ॥ ೩೯ ॥

ಘನ ತಿತಿಕ್ಷೆಯೆನುತ್ತದಂ ಕೆಲ ।
ರನುಮತಿಸಿದರು, ಬಾಹ್ಯನಿಗ್ರಹ ।
ಜನಿಸಲಂತರ್ನಿಗ್ರಹಕೆ ಸಾಧನವೆನುತ್ತೊಡನೆ- ॥
ಅನುಮತಿಸಿದರು ಕೆಲರು, ಸರ್ವರ ।
ಮನಕೆ ಸಮ್ಮತಮುತ್ತಮರ ವಾ-।
ಸನೆಯನೆಗ್ಗೊತ್ತುವದೆ ಚಿತ್ತದ ವಿಷಯನಿಕಟದಲಿ ॥ ೪೦ ॥

ಚಿತ್ತದೇಕಾಗ್ರತೆಯೆ ನೋಡ ।
ಲ್ಕುತ್ತಮು ಸಮಾಧಾನವದು ತಾಂ ।
ಪತ್ತಿದರೆ ಕೆಡದೆ ಮನದ ಚಾಂಚಲ್ಯಮಾಕ್ಷಣದೆ ॥

---

'ಧಾತೂನಾಮನೇಕಾರ್ಥಃ' ಎಂದು ಪಂಡಿತರು ಬಹ್ವರ್ಥರು ವೈರಾಗ್ಯವನ್ನು ಭದ್ರಮಾಡುವ, ಕೂರಿಮೆ—ಪ್ರೀತಿಯ ಒಡನಾಡಿಯೆಂದರೆ ಈ ಕ್ಷಮೆಯೆಂಬುವೇ ಬೇರಲ್ಲ, ಇದರ ಜತೆಯೊಂದಿದ್ದರೆ ಸಾಕು ಹೃದಯವನ್ನು ವಿಕಾರಪಡಿಸುವ ಮನ್ಮಥನ ಗದ್ದಲವೆಷ್ಟಿದ್ದರೂ ಎಲ್ಲವನ್ನೂ ನಿಮಿಷಮಾತ್ರನಲ್ಲಿ ನಿಲ್ಲಿಸುವ ಹೆಚ್ಚಿನ ಶಕ್ತಿ ತನಗುಂಟಾಗುವದರಲ್ಲಿ ಯಾವ ಸಂಶಯವೂ ಇಲ್ಲ.

೩೯ ವರಿಸಿ—ಹೊಂದಿ, ಬಂದು+ಅಡಹಾಯ್ವ—ತನ್ನ ನೆಮ್ಮದಿಗೆ ಅಡ್ಡಲಾಗಿ ಬರುವ, ದುಃಖದ+ಉತ್ಕರೆಯೊಳು (ಆಧಿಕ್ಯದಲ್ಲಿ)+ಆದರು, ಈ ಚಿತ್ತವು ಮೋಹವನ್ನು ಹೊಂದುತ್ತಿದ್ದರೂ, ಒತ್ತರಿಸ—ಬಲಾತ್ಕರಿಸಿ ತನ್ನನ್ನು ಎದುರಿಸುವ, ಬೆರಸಿ—ತನ್ನಲ್ಲಿ ಕೂಡಿಸಿಕೊಂಡು, ವಿಕೃತಿಯಂ—ಬುದ್ಧಿಯ ವಿಕಾರಗಳನ್ನೆಲ್ಲವನ್ನೂ,

೪೦ ಬಾಹ್ಯ—ಹೊರಗಿನ ಇಂದ್ರಿಯಗಳ, ನಿಗ್ರಹವು ಜನಿಸಲು+ಅಂತರ್—ಒಳಗಿನ ಮನೋನಿಗ್ರಹಕ್ಕೆ ಸಾಧನವೆಂದು ಕೆಲವರು, ವಿಷಯ ನಿಕಟರಾಶಿಯಲ್ಲಿನ ವಾಸನೆಯನ್ನೆಲ್ಲ, ನೆಗ್ಗೊತ್ತುವದೆ—ಸಣ್ಣಿಸಿ ಪುಡಿಮಾಡಿ ಅರೆದು ಚಿತ್ತದಿಂದ ಅದನ್ನು ಹೊರಕ್ಕೆ ಹಾಕುವದೆ ತಿತಿಕ್ಷೆಯೆಂಬುದು ಉತ್ತಮರೆಲ್ಲರ ಮನಕೆ ಸಮ್ಮತ.

೪೧ ಚಿತ್ತದ+ಏಕಾಗ್ರತೆಯೆ ನೋಡಲ್ಕೆ+ಅದು+ಉತ್ತಮ...., ತಾಂ ಪತ್ತಿದರೆ—ತನಗೆ ಅದು ಲಭಿಸಿ ಹತ್ತಿರವಾದರೆ, ಕಲ್ಪಾಂತಕಾಲದ ಮಹಾಕತ್ತಲೆಯಾಗಿದ್ದರೂ ಅದು, ಸರೋಜಪ್ರಿಯಂ—ಉದಯಿಸಿದ ಸೂರ್ಯನಿಗೆ....,

ಕತ್ತಲೆಯು ಕಲ್ಪಾಂತಕಾಲ ಮು ।
ಹತ್ತಿರ ಸರೋಜಪ್ರಿಯಂದಲೆ-।
ಯೆತ್ತೆ ಮಾರ್ಮಲೆವುದೆ ಮುಸುಂಕುವದೇ ಬದುಂಕುವದೆ ॥ ೪೧ ॥

ಆಶೆಯುಡಗದೆ ಚಿತ್ತದುಪಟಳ-।
ನಾಶಮಾಗದು, ತನ್ನಿರಾಶಾ ।
ವೇಶಮೆಂತೆನಲಾತ್ಮನಿಗೆ ಸಚ್ಚಿತ್ಸುಖಾತ್ಮನಿಗೆ ॥
ಈ ಶರೀರದ ಭೋಗತತಿಯ-।
ಭ್ಯಾಸವೇ ದೊರಕೊಳ್ಳದೆಂಬ ನಿ-।
ದೇಶವಳವಡೆ ಬರ್ಪುದೆಂದನುಭವಿಗಳುಸಿರಿದರು ॥ ೪೨ ॥

ಸ್ಥವಿರನಿಂಗುಪನೇತ್ರದಿಂ ಪಾ-।
ಟವವನೈದುವದೆಂತು ಗೋಚರ ।
ನಿವಹದಲಿ ದೃಗ್ಧರ್ಮವದರಂತೀ ಸಮಾಧಾನ-॥
ಕವಿವುದಾರನವರ್ಕಳಿಗೆ ದೋ ।
ಷವು ಗುಣವು ಸಮ್ಮರ್ದವೈದದಿ ।
ರುವುದು ಮತ್ತದರಿಂದ ಮೋಹಾಗತಿಗೆ ತೆರಪಿಲ್ಲಾ ॥ ೪೩ ॥

ಕತ್ತಲೆಗೆ ನಿಬಿಡತ್ವಮಾದರೆ-।
ಯೆತ್ತಲೂ ದೃಗ್ಧರ್ಮ ನಡೆಯದು ।
ಮತ್ತೆ ಶಿಥಿಲತೆಯೈದಲದರಲಿ ಬಿದ್ದನೇಣಿನಲಿ ॥

---

೪೨ ಚಿತ್ತದ+ಉಪಟಳ—ಉಪದ್ರವ, ತನ್ನಿರಾಶ+ಆವೇಶಂ+ಎಂತೆನಲು—ಆ ಆಶೆಗಳು ತನ್ನನ್ನು ಬಟ್ಟು ಹೇಗೆ ತೊಲಗುವವು? ಎಂದರೆ ಭೋಗತತಿಯ(—ರಾಶಿಯ)+ಅಭ್ಯಾಸ(ವಾಸನೆಯೆ)ವೇ + ತನ್ನಾತ್ಮನಿಗೆ+ಎಂದಿಗೂ ದೊರಕೊಳ್ಳದು+ಎಂಬ+ನಿರ್ದೇಶವು (ನಿಶ್ಚಯವು ತನಗೆ)+ಅಳವಡೆ+ಬರ್ಪುದೆಂದು+ಅನುಭವಿಗಳು+ಉಸಿರಿದರು.

೪೩ ಸ್ಥವಿರನಿಂಗೆ—ಮುದುಕನಿಗೆ, ಉಪನೇತ್ರ—ಕನ್ನಡಕದಿಂದ, ದೃಗ್—ನೇತ್ರಪಾಟವವೆಂಬ ಧರ್ಮವು, ಗೋಚರ—ಹೊರಗೆ ಕಾಣುವ ವಸ್ತುಗಳ, ನಿವಹ—ರಾಶಿಯಲ್ಲಿ, ಎಂತು+ಐದುವದು+ಅದರಂತೆ+ಈ ಸಮಾಧಾನವು+ಆರನು+ಕವಿವುದು (ಬಂದು ಸೇರುವದು)+ಅವರ್ಕಳಿಗೆ+(ಗುಣದೋಷಗಳ) ಸಮ್ಮರ್ದವು (ಸಂಬಂಧವು ಕೂಡ)+ಐದದೆ (ಆಗದೆ)+ಇರುವದು ಮತ್ತು+ಅದರಿಂದ ಮೋಹದ+ಆಗತಿಗೆ—ಬಂದು ತನ್ನನ್ನಾಶ್ರಯಿಸುವದಕ್ಕೆ, ತೆರಪು—ಅವಕಾಶವಿಲ್ಲವಾಗುವದು.

೪೪ ಕತ್ತಲೆಯು ಗುಂಪುಗೊಂಡು ನಿಬಿಡವಾಗಿದ್ದರೆ, ದೃಗ್—ಕಾಣುವ ನೇತ್ರಧರ್ಮವು ಎತ್ತಲೂ ನಡೆಯದು, ಆ ಕತ್ತಲೆಯಲ್ಲಿ ಶಿಥಿಲತೆಯು+ಐದಲು—ಕಮ್ಮಿಬಿದ್ದರೆ, ಚಿತ್ತಕೆ—ಮನಸ್ಸಿಗೆ, ಭುಜಗ—ಹಾವಿನ ಭೀತಿಯಾಗುವದು, ಇದು+ಉತ್ತರಿಸೆ—ಈ ನಸುಗತ್ತಲೆ ಅಳಿದು ಹೋದಲ್ಲಿ, ನೇಣುಂ (ಹಗ್ಗವು)+ಒಂದೇ ಉಳಿದಂತೆ;

ಚಿತ್ತಕಪ್ಪುದು ಭುಜಗಭೀತಿ ಯಿ-।
ದುತ್ತರಿಸೆ ತಮುವದರೊಡನೆ ಹಾ-।
ವೆತ್ತ ಪೋದುದೊ ನಿಂತುದೊಂದೇ ನೇಣು ಯಿದರಂತೆ ॥ ೪೪ ॥

ಮೋಹನೆಸಗಿದ ಕಳವಳಗಳಿಂ ।
ಮೋಹಿಸಿದ ಮನವೊಂದು ಕಡೆಯಲಿ ।
ಗೇಹಮಂ ಮಾಡದೆ ಅದು ಪೋಲಿಗನಂತೆ ಸುತ್ತುತಿರೆ ॥
ಈ ಹದನಿದಕ್ಕೆಂಬ ಶಾಸ್ತ್ರ ಸ-।
ಮೂಹದಿಂ ವಿಂಗಡಿಸಿ, ಮಾಯಾ ।
ದ್ರೋಹಮಂ ಕೆಡಿಸಲ್ಸಮಾಧಾನಂ ಬರುವದೊಡನೆ ॥ ೪೫ ॥

ನಿಗಮ ಗುರುವಾಕ್ಯಂಗಳಲಿ ನೆರೆ ।
ಸೊಗಸುತಿಹ ರತಿಯೇ ನುಡಿವರು-।
ಜ್ಜುಗವೆರಸಿ ಪಂಡಿತರು ಶ್ರದ್ಧಾನಾಮದಿಂದಿದನೆ ॥
ಜಗದೊಳಾವಂ ವರಿಪನೋ ಪೂ-।
ರ್ವಗಣಿತ ಶಮಾದಿಗಳ ಫಲಭೋ-।
ಗ ಗುರುತೆಯುನೈದಿದವನಪ್ಪಂ ಮುಕ್ತಿಭಾಜನನು ॥ ೪೬ ॥

---

೪೫ ತಾನಲ್ಲದ ದೇಹೇಂದ್ರಿಯ ಅನಾತ್ಮಗಳಲ್ಲಿ 'ನಾನು' ಎಂದು ಒಂದನ್ನೊಂದಾಗಿ ತಪ್ಪಾಗಿ ತಿಳಿದುಕೊಳ್ಳುವ ಅವಿದ್ಯೆಯು, 'ಅಜ್ಞಾನಮವಿದ್ಯಾಽಹಂಮತಿಃ....' 'ಅವಿದ್ಯಾಽಹಂಮತಿಃ....' (ಅ....)'ಅಜ್ಞಾನಂ ನಾಮ ಮಿಥ್ಯಾಮತಿರಹಂಕಾರಃ' '....ಜ್ಞಾನಾಭಾವಃ' 'ತತ್ಪ್ರತಿಷೇಧಾತ್ಮಕಮಜ್ಞಾನಮ್' 'ಐಕಾತ್ಮ್ಯಾಪ್ರತಿಪತ್ತಿರ್ಯಾ ಸಾವಿದ್ಯೇತಿ...., ಸಂಸೃತಿರ್ಯಾಬೀಜಂ....' (ನೈ॥೬॥) ಎಂದು 'ಜ್ಞಾನಾಭಾವರೂಪ,' 'ಜ್ಞಾನಅಸಹಿಷ್ಣುರೂಪ,' 'ಜ್ಞಾನಲಾಭಮಾತ್ರನಿವರ್ತ್ಯಶರೀರಿ' ಆಗಿರುವ ಅವಿದ್ಯೆಯೆಂಬ ಮೋಹನು+ಎಸಗಿದ—ಹೊರಚೆಲ್ಲಿದ, ಸಂಸಾರ ದುಃಖಗಳ ಕಳವಳಗಳಿಂದ ಮೋಹಿಸಿದ ಮನವು ಒಂದು ವಿಷಯದಲ್ಲಿಯಾದರೂ ಕಾಲೂರಿ ನಿಂತು, ಗೇಹಮಂ—ಮನೆಯನ್ನು ಮಾಡದೆ ಭ್ರಾಂತಿಗೆ ಪಕ್ಕಾಗಿ ತಲೆಗೆಟ್ಟ ಈ ಮನಸ್ಸು, ವಿಷಯದಿಂದ ವಿಷಯಾಂತರಗಳಲ್ಲಿಯೇ ಭ್ರಮಿಸುತ್ತಿರುವದು, ಈ ಹದನು+ಇದಕ್ಕೆ+ಎಂಬ ಶಾಸ್ತ್ರಗುರುಗಳದ್ವಾರ ಸರಿಯಾದ ಕಾರಣವನ್ನು ಅದಕ್ಕೆ ತೋರಿಸಿಕೊಟ್ಟು, ತಪ್ಪುತಿಳಿವಳಿಕೆಯಿಂದ ಅದನ್ನು ಪ್ಪರಿಸಿಕೊಂಡು, ....ದ್ರೋಹ—ಮಿಥ್ಯಾಜ್ಞಾನಗಳ ಮೋಸ ಅಪಕಾರಗಳನ್ನು, ಚಿತ್ತದ ಭ್ರಾಂತಿಗಳು ಒಂದರ ಮೇಲೊಂದು ಬಿದ್ದು ಮಾಡುವ ಹೋರಾಟದ ದಂಗೆಯನ್ನು; ಯುಕ್ತ್ಯನುಭವವಿಚಾರಗಳಿಂದ ಕೆಡಿಸಿಕೊಳ್ಳಲು ಸಮಾಧಾನವು ತಾನೇ ಬರುವದು.

೪೬ ರತಿಯೆ—ವಿಶ್ವಾಸವೆ, ನುಡಿವರು+ಉಜ್ಜುಗ—ಪ್ರಯತ್ನವನ್ನು, ವೆರಸಿ—ಬೆರಸಿ, ಜಗದೊಳು+ಆವಂ+ವರಿಪನೊ—ಸ್ವೀಕರಿಸಿದವನು, ಹಿಂದೆ ಹೇಳಿದ, ....ಗುರುತೆಯನು—ಶಮಾದಿಗಳ ಫಲವನ್ನು ಸವಿದುಂಡ ಗುರ್ತುಳ್ಳವನಾಗಿ,

೪೭ ಗುರುವಚನವೊಂದರಿಂದಲೇ ತನಗೆಂದಿಗೂ ಭವವಳಿಯದಾದ್ದರಿಂದ, ಆಚರಿತ

ಕೆಲರು ಪೇಳ್ವರಿದಕ್ಕೆ ಮಾಡ ।
ಲ್ಫಲಿಪುದಲ್ಲದೆ ಗುರುವಚನದಿಂ ।
ದಳಿಯದಾಚರಿತಾರ್ಥಮೆಂಬುದೆ ಶ್ರದ್ಧೆಯೆಂತೆಂದು ॥
ತಿಳಿದವರು ಕಂಡನುಭವಿಸಿ ನಿ-।
ರ್ಮಲ ದಯಾರಸದಿಂದ ದುಃಖಾ-।
ಕುಲರು ಬಾಳಲೆನುತ್ತ ಪೇಳ್ವಾಶಯದೆ ಕರೆಯುಂಟೆ ॥ ೪೭ ॥

ಮುಗಿಲಿಗಾದರು ನೋಡೆ ಶರಗುಂ।
ಟಗಲಮಂ ತಿಳಿಯಲ್ಕೆ ಬಹುದೀ ।
ಜಗತಿಯಲಿ; ರತ್ನಾಕರಕ್ಕಾಳವನು ಕಂಡವರು ॥
ಜಗದೊಳಿಹರೀ ರತ್ನಸಾನುವು ।
ನೆಗೆಯೆ ಪಟ್ಟದು ಕೆಲಬರಿಂ; ಧೀ ।
ರ ಗುರುವಚನಕ್ಕಾವುದೂಣೆಯಮುಂಟೆ ತಿಳಿಯಲ್ಕೆ ॥ ೪೮ ॥

ಮೇರುವೇ ಚಲಿಸಿದರು ಶರಧಿಯು ।
ನೀರದಲಿ ಧರೆ ಮುಳುಗಿದರು, ಶಶಿ ।
ಸೂರರೀಯುದಯಾಸ್ತಗಳಲುದಿಸುವದ ಮುಳುಗುವದ ॥
ಮೇರೆದಪ್ಪಿ ಹಿಮಾಚಲದೆ ತಲೆ ।
ದೋರಿ ಮಲಯದೊಳಡಗಿದರೆಯು ।
ಧೀರ ಗುರುವಚನಕ್ಕೆ ವಿಪರೀತತ್ವಮಾಗುವುದೆ ॥ ೪೯ ॥

ನಿಗಮದಭಿಮತವನ್ನೆ ಸುಪುರಾ-।
ಣಗಳುಪುರ್ವವದರ ಹೃದಯುವ ।
ನ್ನಗಲದೇ ದೇವರ್ಷಿಗಳ ಸ್ಮೃತಿತತಿಗಳೊಪ್ಪುವವು ॥

---

(ನತಯೇ)+ಅರ್ಥಂ—ಮುಖ್ಯವೆಂಬುದೆ ಶ್ರದ್ಧೆಯು, ದುಃಖ(ದಿಂದ)+ಆಕುಲರು—(ತುಂಬಿದ ಜನರು ಅದನ್ನು ಬಿಟ್ಟು, ಸುಖದಿಂದ)+ಬಾಳಲಿ+ಎನುತ್ತ, ಕರೆ—ಕಳಂಕ,

೪೮ ಮುಗಿಲಿಗೆ—ನೋಡಕ್ಕಾದರು, ಶರಗು (—ಕೊನೆ)+ಉಂಟು+ಅಗಲ.... ಬಹುದು ಈಜ..., ರತ್ನಾಕರ—ಸಮುದ್ರಕ್ಕೆ ಜಗದೊಳು+ಇಹರು+ಈ ರತ್ನಸಾನು—ಮೇರುಪರ್ವತವು, ....ಜನಕ್ಕೆ+ಆವುದು+ಊಣೆ—ನ್ಯೂನತೆ, ಕೊರತೆಯು;

೪೯ ಶಶಿಸೂರರು (—ಚಂದ್ರ ಸೂರ್ಯರು) ಈ+ಉದಯ+ಅಸ್ತ—ಪೂರ್ವ ಪಶ್ಚಿಮಗಳಲ್ಲಿ ಉದಿಸುವದು ಮತ್ತು ಮುಳುಗುತ್ತಿರುವದೆಂಬ, ಮೇರೆ—ತಮ್ಮ ಮರ್ಯಾದೆಯನ್ನು ಮೀರಿ ಅವರು ಉದಯಾಸ್ತಗಳನ್ನು ಹೊಂದಿದರೂ.

೫೦ ನಿಗಮದ (ವೇದಾಂತಗಳ)+ಅಭಿಮತವನ್ನೆ, ....ಗಳು+ಉಪುರ್ವವು, ....ಸ್ಮೃತಿತತಿ—(ನಾರದ ವ್ಯಾಸಾದಿಗಳ ಪುಣ್ಯಗ್ರಂಥ)ಗಳು+ಒಪ್ಪುವವು ಅಗಲದೆ+ಅದನು+ಅನು.... ಗಳು+ಉಪುರ್ವರು+ಅದಕ್ಕೆ....ವರು+ಆರು+ಈರೇಳು—ಹದಿನಾಲ್ಕು ಲೋಕಗಳಲ್ಲಿ ಕೂಡ.

ಅಗಲದದನನುಭವಕೆ ತಂದು ಗು ।
ರುಗಳುಸುರ್ವರದಕ್ಕೆ ಹಾನಿಯು ।
ಬಗೆವರಾರೀರೇಳುಲೋಕದೊಳಿರ್ಪ ಜೀವರೊಳು- ॥ ೫೦ ॥

ಎಂದು ನಿಶ್ಚಯವೆರೆದಿಹುದೆ ತಾ ।
ವೆಂದರಾದ್ಯರು ಶ್ರದ್ಧೆಯೆಂದದ ।
ರಿಂದ ಪಂಡಿತರಲ್ಲದವರುಂ ಕೆಲರು ಧನ್ಯತೆಯಂ ॥
ಹೊಂದಿರುವ ಪಕ್ಷದಲಿ ನರ ಮುಚು ।
ಕುಂದ ವಾಲ್ಮೀಕ್ಯಾದಿಗಳ ಚರಿ-।
ತಂ ದಿಟಕ್ಕಾಸ್ಪದವೆನುವ ದೆಶೆಯಲ್ಲಿ ಪೌರಾಣಂ ॥ ೫೧ ॥

ದಮವನುಪರತಿಯಂ ತಿತಿಕ್ಷೆಯ ।
ವಿಮಲ ಚಿತ್ತೈಕಾಗ್ರತೆಯನು-।
ತ್ತಮವೆನಿಪ ಶ್ರದ್ಧೆಯನು ಪಿರಿಯರ್ತತ್ತ್ವಮಂ ತಿಳಿದ ॥
ಶಮಕಿವಂಗಗಳೆಂದರೀಯಂ ।
ಗಮನು ದೃಢವಾಗೊಂದಿರುವ ತ ।
ಚ್ಛಮದೆ ನಿಂತವಗಪ್ಪುದಪವರ್ಗಾಖ್ಯಸಂಸಿದ್ಧಿ ॥ ೫೨ ॥

ಶಮವೆನಿಪ ಪುರುಷಂಗೆ ಪಾದಾ ।
ದ್ಯಮಲತರವಾಜಾನುವಾದಂ ।
ಗಮೆ ತಿಳಿಯೆ ಸುಶ್ರದ್ಧೆಯಿಲ್ಲಿಂದಾಕಟಿಯೆನಿಸುವ ॥
ಅಮರಿಕೆಯ ಸಂಹನನ ಮೇಕಾ-।
ಗ್ರಮನು ಪಡೆದುದು ಚಿತ್ತಮಾಹೃದ ।
ಯಮೆ ತಿತಿಕ್ಷೆಯೆನಿಸುವದಲ್ಲಿಂ ಕಂಠಪರ್ಯಂತಂ- ॥ ೫೩ ॥

ವ್ಯಾಪ್ತವಾಗಿರುವ ಪ್ರತೀಕವೆ ।
ದೀಪ್ತವಾದುಪರತಿಯು, ಇದರಿಂ ।
ದಾಪ್ತತೆಯನಾ ಬ್ರಹ್ಮರಂಧ್ರಾವಧಿಕವಾಗೊಂದಿ ॥

---

೫೧ ....ನಿಶ್ಚಯವು+ಎನೆದಿಹುದೆ--ಹೊಂದಿರುವದೆ, ....ಆದ್ಯರು--ಪೂರ್ವಿಕರು, ತಿಳಿದವರಲ್ಲದ ನರ--ಅರ್ಜುನ, ಮುಚುಕುಂದ (ಭಾಗ॥ ೧೦-ಉ॥೫೧) ವಾಲ್ಮೀಕಿ+ಆದಿ ಈ ಶ್ರದ್ಧಾಳುಗಳ....ದಿಟಕ್ಕೆ—ಹಿಂದೆ ನಡೆದದ್ದೆಂಬುದಕ್ಕೆ,

೫೨-೫೪ ಶಮಪುರುಷನಿಗೆ ಪಾದದಿಂದ+ಆಜಾನು-ತನ್ನ ಮೊಣಕಾಲಿನವರೆಗಿನ ಅಂಗವು-ಶ್ರದ್ಧೆಯು, ಅಲ್ಲಿಂದ ಆಕಟಿ—ನಡುವಿನವರೆಗಿನ, ಸಂಹನನಂ—ಶರೀರಕ್ಕೆ, ಅಮರಿಕೆಯು—ಸರಿಹೊಂದಿ, ಬಿಗಿಯಾಗಿ ಅಪ್ಪಿಕೊಂಡಿರುವ ಅಂಗ--ಚಿತ್ತ ಸಮಾಧಾನವು, ಹೃದಯವೆ—ತಿತಿಕ್ಷೆಯು, ಕಂಠದವರೆಗೆ ವ್ಯಾಪ್ತವಾಗಿರುವ ಶರೀರದ, ಪ್ರತೀಕವೆ--ಅವಯವದ ಭಾಗವೆ+ಉಪರತಿಯು,

ಕ್ಲಿಪ್ತವಾಗಿರ್ಪಂಗವೇ ದಮು ।
ವಾಪ್ತರಿಂತೆಂದಾಡಿದರು ಸಂ ।
ಸುಪ್ತ ಸಕಲೇಷಣರು, ಪಂಚವಿಭಾಗನೇಕಿದಕೆ ॥ ೫೪ ॥

ಇಲ್ಲದಿರಲಾಕಾಲು ನಡತೆಯು- ।
ದೆಲ್ಲಿ ಕಟಿಯಿಲ್ಲದಿರೆ ವೀರ್ಯವ- ।
ದೆಲ್ಲಿ ಹೃದಯಾಭಾವದೋಳ್ಪ್ರಾಣಾದಿಸಂಚಕವು-॥
ಎಲ್ಲಿಹುದು, ಕಂಠಸ್ಥಲವ ಕಳಿ ।
ದಲ್ಲಿ ಮಾತಿಂಗಾವುದಿಂಬಿದ ।
ರಲ್ಲಿ ತಲೆಯಂ ಕಳಿಯೆ ನಾಲ್ಕಿಂದ್ರಿಯಗಳಗಲುವವು ॥ ೫೫ ॥

ಸಕಲವಾದವಯವಗಳೆಲ್ಲಂ ।
ವಿಕಲವಾಗದಿರುವ ದಿನದಲೇ ।
ಪ್ರಕೃತಕಾರ್ಯದೊಳಿರದೆ ನಡವಳಿ ಗಾಡಸಂಪಾದ್ಯಂ ॥
ಅಕಟ ಕುಂದಿದರುಂಟೆ, ಹಾಗೀ- ।
ಸುಕೃತಿ ಶಮ ಪುರುಷಂಗೆ ದಮ ಮು-।
ಖ್ಯ ಕುಶಲಾಂಗಗಳಿರಲು ಮುಕ್ತಿನಗರದೆ ರಾಜಿಸುವಂ ॥ ೫೬ ॥

ಯಾರಿಗುಂಟು ಶಮಾದಿಷಟ್ಕಮ-।
ಸಾರಮಾದೀ ಭುವನ ಭೋಗ ವಿ ।
ಕಾರಮುಂಟದವರ್ಕಳಂತಃಕರಣಮುದರಿಂದ ॥

---

ಬ್ರಹ್ಮರಂಧ್ರದವರೆಗಿನ ಅಂಗವು—ದಮುವು ಇಂತೆಂದು ಸಂಸುಪ್ತ—ಅಳಿದುಹೋಗಿರುವ ಬಯಕೆಯುಳ್ಳ ಆಪ್ತರು ಆಡಿದರು. ಈ ಶಮುಪುರುಷನಿಗೆ ಪಂಚವಿಭಾಗವೇಕೆಂದರೆ—

೫೫ ವೀರ್ಯವು+ಅದೆಲ್ಲಿ ನಿಲ್ಲಬೇಕು? ಮಾತಿಂಗೆ+ಆವುದು+ಇಂಬು+ಇದರಲ್ಲಿ.... ಕಳಿಯೆ (ಶ್ರೋತ್ರ ತ್ವಕ್ಕು ಚಕ್ಷು ಘ್ರಾಣ ಎಂಬ) ನಾಲ್ಕು+ಇಂದ್ರಿಯಗಳು+(ತನ್ನನ್ನು ಬಿಟ್ಟು) ಅಗಲುವವು.

೫೬ ತನ್ನವಯವಗಳೆಲ್ಲ ವಿಕಲಂ+ಆಗಿರುವ—ಬಲ ಕುಗ್ಗಿ ಅವು ನಷ್ಟವಾಗಿಹೋಗದಿರುವಷ್ಟರಲ್ಲಿಯೆ ಜಾಣರಾದವರು ಮುಂದಿನ ತಮ್ಮ ವಿಶ್ರಾಂತಿಯ ಸುಖಜೀವನಕ್ಕಾಗಿ, ಪ್ರಕೃತ ಕಾರ್ಯ—ಬೇಕಾದ ವಸ್ತುಗಳನ್ನು ಸಂಪಾದಿಸುವ ಪ್ರಯತ್ನವು ಒಳ್ಳೆಯ ಶಿಸ್ತಿನಿಂದ ನಡೆಸಿ, ಗಾಢಸಂಪಾದ್ಯಂ—ಆ ಭೋಗ್ಯರಾಶಿಯನ್ನೆಲ್ಲ ಒಕ್ಕಡೆ ತಂದು ಬಹಳವಾಗಿ ಕೂಡಿಸಿಡುವರಲ್ಲವೆ? ಅಕಟ—ಅಯ್ಯೋ! ಮುದುಕನಾಗಿ ಆ ತನ್ನ ಬಲ ಕುಂದಿದರೆ ಆ ಕಾರ್ಯ ನಡೆಯುವದಕ್ಕುಂಟೆ? (ಭಾಗ ೭-೬-೧....೯)

೫೭ ಅವರ್ಕಳ—ಈ ಶಮದಮಾದಿ ಷಟ್ಕವುಳ್ಳವರ ಅಂತಃಕರಣಕ್ಕೆ ಅಸಾರವಾದ ಈ ಭುವನಭೋಗದ ವಿಕಾರವು ಅಂಟದು. ಅದರಿಂದ ಜಾಣನಾದವನು ತನ್ನಲ್ಲಿ ಸೇರಿರುವ ಈ ಸಂಸಾರಾನರ್ಥಕ್ಕೆ ನಿವೃತ್ತಿಯನ್ನು ಮಾಡಿಕೊಳ್ಳುವದು ಅವಶ್ಯವು. ಹಾಗಿಲ್ಲದಿದ್ದರೆ ಈ ಸಂಸಾರ

ಸೇರಿರುವನರ್ಥಕೆ ನಿವೃತ್ತಿಯ-।
ಸಾರಿಪುದು, ಮೇಣಿಲ್ಲದೊಡಮತಿ-।
ಸಾರದೊಲ್ತ್ರುಟಿತ್ರುಟಿಗೆ ಸಂಸೃತಿ ತಾಪ ಪೆರ್ಚುವದು ॥ ೫೭ ॥

ಅಂಗದಲಿ ಪರಿಣತಿಯನುಳಿದರ-।
ಸಿಂಗೆ ದಿನದಿನಕಡಸುವಂತೆ ಭ-।
ಯಂಗಳಿಂದೈಶ್ವರ್ಯ ಹಾನಿ ಪರಸ್ವಜನರಿಂದ ॥
ಲಿಂಗದೇಹಕ್ಕೊಂದುವದು ದೋ।
ಷಂಗಳುಪಚಯುನೆಂದು ಶಮ ಮು-।
ಖ್ಯಂಗಳಿಂ ಕೂಡಿರಲು ನರನಾಗುವ ಗಲಿತಭೀಮಂ ॥ ೫೮ ॥

ನೆನೆದುದಂ ಮಾಡುವದು ತಾಂ ಭೃ-।
ತ್ಯನತೆರದಿ; ಮಂತ್ರಿವೊಲು ಸುಗುಣಾ।
ಗುಣಗಳಂ ತರ್ಕಿಸುವ ಪಥದೊಳ್ನಿಲಿಪುದರಸಿನೊಲು ॥
ವಿನಯಮಂ ಪೊಂದಿಸುವದಿಂದ್ರಿಯ-।
ಗಣವ, ಗುರುವಿನೊಲರಿವ ಕೊಡುವದು।
ಮನವಿದೇ ಶಮ ಮುಖ್ಯದಿಂ ಕೂಡಿದರೆ ಪಿರಿದಾಗಿ ॥ ೫೯ ॥

ಇಂಗಿತವನಾರೈದು ಸುಖವಿಾ।
ವಂಗನೆಯೊಲಿದು ಲಾಲನೆಯ ಪೊರೆ।
ವಂಗದಲಿ ತಂದೆವೊಲು, ನಿರ್ವಂಚನೆಯಲರ್ಥವನು ॥
ಮಂಗಲಸ್ನೇಹವನು ಮಿತ್ರನ।
ಪಾಂಗಿನಿಂ ಮನವೊಂದೆ ಶಮ ಮು।
ಖ್ಯಂಗಳಿಂ ಬೆರದೊಂದಿಪುದು ಚಿತ್ತಂ ಮುಮುಕ್ಷುವಿಗೆ • ॥ ೬೦ ॥

---

ತಾಪವು ಅತಿಸಾರಪಂತೆ ತ್ರುಟಿತ್ರುಟಿಗೂ—ಲವಕಾಲದ ನೂರನೆಯ ಒಂದು ಭಾಗವಷ್ಟು ಅತ್ಯಲ್ಪ ಕಾಲವನ್ನಾದರೂ ತನಗೆ ಬಿಡದೆ, ಪೆರ್ಚುವದು—ಹೆಚ್ಚುತ್ತಲೇ ಹೋಗುತ್ತಿರುವದು.

೫೮ ಅರಸುತನಕ್ಕೆ ಬೇಕಾದ ನವನಿಧಿಗಳು ಹಣ ತುಂಬಿದ ಬೊಕ್ಕಸ, ಮಂತ್ರಿವರ್ಯರು ಈ ರಾಜ್ಯಭಾರದ ಸೂತ್ರಗಳಲ್ಲಿ ತನಗೆ, ಪರಿಣತಿಯನು—ಪೂರ್ಣತೆಯನ್ನು, ಉಳಿದ (ಬಿಟ್ಟಿರುವ) + ಅರಸಿಂಗೆ + ಪರಸ್ವಜನರಿಂದ + ಬಂದಭಯಂಗಳಿಂದ + ಐಶ್ವರ್ಯಹಾನಿಯು + ದಿನದಿನಕೆ + ಅಡಸುವಂತೆ—ಬಂದು ಸೇರುತ್ತಿರುವಂತೆಯೆ, ಶಮಾದಿಗಳಿಲ್ಲದವನ, ಲಿಂಗದೇಹಕ್ಕೂ ದೋಷಂಗಳ + ಉಪಚಯಂ—ರಾಶಿರಾಶಿಯಾಗಿ ಬಂದುಕೂಡುವದು, ಅವುಗಳುಳ್ಳವನಾಗಿದ್ದಲ್ಲಿ ನರನು ಗಲಿತಭೀಮಂ—ನಿರ್ಭಯನಾಗುವನು.

೬೦ ....ವನು + ಆರೈದ —ತನ್ನಲ್ಲಿ ವಿಚಾರಿಸಿ, ಸುಖಂ + ಈವ + ಅಂಗನೆಯಂತೆ ಈ ಮನಸ್ಸು ಕೂಡ ತನಗೆ ಸುಖ ಕೊಡುವದು, ಮಿತ್ರನಂತೆ ಶುಭವಾದ ಸ್ನೇಹವನ್ನೂ ಶಮಾದಿಗಳಿಂದ ಬೆರೆದು ಈ ಮನಸ್ಸೊಂದೇ ತನಗೆ ಹೊಂದಿಸುವದು.

ಅರಿಗಳಾರರ ಸಂದಣಿಯನೊ ।
ತ್ತರಿಸಲ್ಕೀ ಷಟ್ಕದಲಿ ರಕ್ತಿಯ ।
ವರಿಸಲಡಗುವವಲ್ಲದವು ಸುರನರ ಭುಜಂಗರಿಗೆ ॥
ಒರಿಯ ವೈರಾಗ್ಯದಲಿ ಪೋಪವೆ ।
ಗಿರಿಯಟಂಕಕ್ಷತವು ಘೋರ ಭಿ- ।
ದುರಹತಿಗೆ ಸರಿಬರ್ಪುದೇ ಪಾಸರೆಯ ಬಿಂಕದಲಿ ॥ ೬೧ ॥

ಕವಚದೋಲ್ದೇಹವನು, ಕಣ್ಣಂ ।
ಯವೆಯವೋಲ್ಕೋಶದೊಲು ಕತ್ತಿಯು, ।
ಗವಸಣಿಗೆವೊಲು ವೀಣೆಯಂ ರಕ್ಷಿಪುವು ಶಮಮುಖ್ಯಂ ॥
ಕವಿವ ದೋಷವನಂಟಿಸದೆ ಚಿ ।
ತ್ತವನವಶ್ಯಂ ಬೇಕು ಮೌಮು ।
ಕ್ಷವಕೆ ಕಾರ್ಯಂ ಸಾಧನಾಶ್ರಿತಮಸ್ತೆ ಲೋಕದಲಿ ॥ ೬೨ ॥

ಅರಿವು ತಲೆದೋರಿತು ವಿವೇಕಂ ।
ಸ್ಫುರಿಸೆ ವೈರಾಗ್ಯದಲಿ ಬಂದುದು ।
ದುರಿತವರ್ಗಕ್ಷಯ ಶಮಾದಿಗಳಿಂದ ನೈರ್ಮಲ್ಯಂ ॥
ಬೆರದುದಾಶಯಕೇಕೆ ಮೋಕ್ಷದೊ ।
ಳುರುಚಿ ನಾಲ್ಕನೆಯ ಸಾಧನೆಯನು ।
ತೊರೆದರಾಚಾರ್ಯಾದಿಗಳು ವೇದಾಂತಶಾಸ್ತ್ರದಲಿ ॥ ೬೩ ॥

---

೬೧ ಕಾಮಾದಿಗಳೆಂಬ ಅರಿಗಳಾರರ ಗುಂಪನ್ನು ಎದುರಿಸವಲ್ಲಿ ಈ ಶಮಾದಿಗಳನ್ನು ಸಂಪಾದಿಸಬೇಕೆಂದು ಅವುಗಳಲ್ಲಿ ರಕ್ತಿಯ—ಅನುರಾಗವನ್ನು ತಾನು ವರಿಸಿದರೆ ಅಡಗುವವದಲ್ಲದೆ ಅವು, ಭುಜಂಗರಿಗೆ—ಪಾತಾಳಲೋಕದವರಿಗೂ ಒಂದು ವೈರಾಗ್ಯದಿಂದ ಹೋಗುವವಲ್ಲ, ಬಿಂಕದ ಪಾಸರೆ—ಒಂದಕ್ಕೊಂದು ಒಂದುಗೂಡಿಕೊಂಡು ಬಿಸುಗೆಯಿಂದ ಪ್ರತಿಷ್ಠೆಯನ್ನು ಹೊಂದಿರುವ ಬೆಟ್ಟದ ಹಾಸುಗಲ್ಲುಗಳಲ್ಲಿ ತಮ್ಮ ಪದರಗಳನ್ನು ಬಿಚ್ಚಿಕೊಂಡು ಅವು ಶೀಳಾಗಬೇಕಾದಲ್ಲಿ, ಭಿದುರ ಹತಿಗೆ—ವಜ್ರದ ಪೆಟ್ಟಿಗಲ್ಲದೆ, ಟಂಕಕ್ಷತಕ್ಕೆ—ಕಲ್ಲುಳಿಗೆ ಅದು ಸರಿಬರ್ಪುದೇನು? ಎಂದರೆ ಎಳೆದ ಒಂದು ಗೆರೆಯಿಂದಲೇ ಎಂಥ ಕಲ್ಲನ್ನಾದರು ಶೀಳಬಲ್ಲ ವಜ್ರದ ಪೆಟ್ಟಿಗೆ ನೂರಾರುಸಲ ಕುಟುಕುವ ಕಲ್ಲುಳಿಯ ಪೆಟ್ಟನ್ನು ಸರಿಹೋಲಿಸುವದಕ್ಕಿರುವದಿಲ್ಲವಷ್ಟೆ?

೬೨ ಕವಿವ—ಆವರಿಸಿ ಮರೆಮಾಡುವ, ದೋಷವನು+ಅಂಟಿಸದೆ ಚಿತ್ತವನ್ನು ಶುದ್ಧವಾಗಿರಿಸಬೇಕಾದರೆ ಶಮಾದಿಗಳು+ಮೌಮುಕ್ಷವಕೆ—ತನ್ನ ಮುಮುಕ್ಷುತ್ವಕ್ಕೆ ಅವಶ್ಯ ಬೇಕು. ಲೋಕದಲ್ಲಿಯೂ ಸಾಧನವನ್ನಾಶ್ರಯಿಸಿಯೇ ಫಲ ಕಾಣುತ್ತಿದೆ.

೬೩ ಬೆರೆದುದು+ಆಶಯಕೆ—ಚಿತ್ತಕ್ಕೆ ನಿರ್ಮಲತ್ವ ಬಂದು ಜ್ಞಾನಪೂರ್ಣವಾಯಿತಷ್ಟೆ?

೬೪ ಟಂಕದ—ಬೆಸಿಯುವ ಬಿಡಿತಿಯ ಚಿನ್ನ ಬೆಳುಗಾರ, ತಾಪವಿಲ್ಲದ—ಕಾಯಿಸದೆ, ಬೆಚ್ಚುವದೆ—ಅದನ್ನು ಬೆಸಿಯುವುದಕ್ಕಿಲ್ಲದಂತೆ, ಸೂಪ—ಸುವ, ಸಾರು, ತೊವ್ವೆ, ಸೊಗಡು—

ತಾಪವಿಲ್ಲದ ಚಿನ್ನ ಟಂಕಣ ।
ರೂಪದಿಂ ಬೆಚ್ಚುವದೆ, ಬೇಯದ ।
ಸೂಪದೋಳ್ಳೊಗಡೊಸರಿಸಲೊಗ್ಗರಣೆ ಪತ್ತುವುದೆ, ॥
ರೂಪಮನ್ನಂ ಸ್ತ್ರೀಯುವತ್ವಾ-।
ಟೋಪದಿಂ ಬೆರತಿಪ್ಪ ಚಿತ್ತ ।
ಕ್ಕೇ ಪರಾಮರ್ಶಾದಿಗಳು ನಾಟುವವು ನಿಜವಾಗಿ ॥ ೬೪ ॥

ನೋಯದವಗೆಂದಿಗೆ ಮದಾಘಕ-।
ಪಾಯ ಬರ್ಪುದು ಬರ್ಪುದಾದರೆ ।
ಕಾಯಗಳವೀಚಿಯು ಶಿವದ್ರೋಹಿಗೆ ನಸಿಸುವುದೆಂದು ॥
ಕಾಯಭೋಗಕ್ಕೊಲಿದು ಸುರರು-।
ಚ್ಛ್ರಾಯ ದುಃಖವ ಪಡೆದರೆಂಬ ಕ-।
ಥಾಯುತೈತಿಹ್ಯಂಗಳೇನಿಲ್ಲವೆ ಜಗತ್ತಿನಲಿ ॥ ೬೫ ॥

ಅರಿಯುವವರ ವಿನಯದ ವಿವೇಕಕೆ ।
ಕೊರತೆಯೇ ವೈರಾಗ್ಯವಿಲ್ಲವೆ ।
ಬರಾಲುಚಿತವಾಗಿರ್ಪರೋಗದಲಿ ಕೂಡಿದವರಲ್ಲಿ ॥

---

ಸವಳು, ಓಸರಿಸಲ್—ಚೆನ್ನಾಗಿ ಬೆಂದು ಓರೆಯಾಗಿ ಮರೆಯಾಗದೆ ಅವುಗಳಲ್ಲಿಯೆ ಉಳಿದಿರಲು, ಒಗ್ಗರಣೆಯ ಕಂಪುನೆಯ ಗಮಲು ಅದಕ್ಕೆ ಬರಲಾರದಲ್ಲವೆ? ಅದರಂತೆಯೇ ರೂಪು, ಸಪಿಸವಿಯ ಭೋಜನಗಳು ಪ್ರೇಯಸಿಯಾದ ಕಾಮಿನಿ ಅನುಕೂಲ ವಯಸ್ಸು ಇವುಗಳ, ಅಟೋಪ–ಸಂಭ್ರಮದಿಂದ ಸೊಕ್ಕಿ ಹಿಗ್ಗಿರುವ ಈ ಮನಸ್ಸಿಗೆ ತತ್ತ್ವನಿಶ್ಚಯಕ್ಕೆ ಬದುಲು, ಚಿತ್ತವನ್ನು ಹೊಕ್ಕಿರುವ ಮನಮೆಚ್ಚಿನ ಆ ರೂಪಾದಿಗಳು ತವ್ಮ ಕಡೆಗೆ ಬರುವಂತೆ ಆ ಚಿತ್ತವನ್ನು ಹಿಂಜಗ್ಗಿ ಬಲವಾಗಿ, ಪರಾಮರ್ಶಾದಿಗಳು—ಸೆಳೆಯುವದು, ನೆನೆಸುವದು, ಭೋಗ ಸಂಸ್ಕಾರಗಳನ್ನು ಎಬ್ಬಿಸುವದು ಇವುಗಳಿಂದ ಆ ಚಿತ್ತವನ್ನು ಬಿಡದೆ+ಒಳಹೊಕ್ಕು, ನಾಟುವವು—ಚುಚ್ಚಿ ಬಾಧಿಸುವವು.

೬೫ ಸಂಸಾರದಲ್ಲಿ ನೋಯದಿರುವನಿಗೆ ಕುಲ ಶೀಲ ಧನ ರೂಪು ಯೌವನ ವಿದ್ಯೆ ತಪ ರಾಜ್ಯವೆಂಬ ಅಷ್ಟಮದಗಳ, ಓಘಕೆ—ಸಾಲುಗಳಿಗೆ ಅಪಾಯವೆಂದಿಗೆ ಬಂದೀತು? ಬರುವದಾದರೆ, ಒಂದನ್ನೊಂದು ಹಿಂಬಾಲಿಸಿ ಬರುವ ಕಾಯಗಳ ಹುಟ್ಟು ಹೊಂದುಗಳ, ವೀಚಿಯು+ಪರಂಪರೆಯ ಸಂಸಾರವೂ ಹೋಗಬಹುದು. ಶಿವದ್ರೋಹಿಗೆ—ಬ್ರಹ್ಮಹತ್ಯ, ಆತ್ಮಹತ್ಯಾದಿ ಮಹಾಪಾಪತಮಗಳು ಅಜ್ಞಾನಿಗೂ ನಶಿಸುವದು. ಎಂದರೆ ಜ್ಞಾನವಿಲ್ಲದೆ ಸಂಸಾರ ನರಕವಾಗಲಿ, ಭೋಗವಿನಃ ಅಜ್ಞಾನಿಗಳಿಗೆ ನಿಷಿದ್ಧ ಕರ್ಮಗಳಾಗಲಿ ನಾಶವಾಗುವಂತಿಲ್ಲ, ಸುರರು+ಉಚ್ಛ್ರಾಯ—ಪರ್ವತಾದಿಗಳ ಉದ್ಭವವಾದ, ಕಥಾಯುತ—ಕಥೆಗಳುಳ್ಳ, ಐತಿಹ್ಯಂ—ಇತಿಹಾಸಗಳು ಇಲ್ಲವೇನು?

೬೬ ಅರಿಯುವವರ....ವ್ಯವಹಾರಚತುರರಾದ ಅಜ್ಞಾನಿಗಳ, ವಿನಯ—ಸುಶಿಕ್ಷಿತವಾದ, ನಿರ್ಭರ—ತುಂಬಿದ, ಮೋಕ್ಷವೆಂಬ ಮನುಷ್ಯಜನ್ಮದ, ಮುಖ್ಯ ಕಾರ್ಯ—ಫಲವನ್ನು ಕುರಿತು ಆ ವಿವೇಕಾದಿಗಳು ಮಾತ್ರ ಇರುವದಿಲ್ಲವು.

ಪ ಮಹಂಸರೊಳಿಲ್ಲವೇ ನಿ-।
ರ್ಭರ ಶಮಾದ್ಯಂಗಳು, ಬೇಕಾ-।
ಗಿರಲಿ ಕಾರ್ಯಕ್ಕಿಲ್ಲವವರೋಳ್ಮೋಕ್ಷಮಂ ಕುರಿತು ॥ ೬೬ ॥

ಯಾರಿಗಂಕುರಿಸುವುದು ಮೋಕ್ಷದೆ ।
ಸಾರರುಚಿಯೆನೆ, ಭವದ ಬೇಗೆಯ-।
ಸಾರಿ ಮತ್ತನುಭವಿಸೆ ಬೆಂಕೆಗೆ ಬಿದ್ದವನ ತೆರದಿ ॥
ದೂರವಾಗೋಡುವಗೆ ಬಂದಾ-।
ನಾರಿ ನಿಲುನಿಲು ನಿಲ್ಲೆನುತ ಕೈ-।
ಯ್ಯಾರ ತಕ್ಕೈಸುವಳು ಬಿಗಿಯಪ್ಪುವಳು ಮುದ್ದಿಪಳು ॥ ೬೭ ॥

ತನ್ನ ದುಃಖದ ಕೇಡಿಗಂ ಸಂ- ।
ಪನ್ನತೆಯ ಸೌಖ್ಯಗುಂ ಬಯಸದ ।
ಬಿನ್ನಣಿಗರುಂಟೇ ಭುವನದಲಿ ಬೇಕೆನುವದುಂಟು ॥
ಚೆನ್ನೆಸೆಯದದರಲ್ಲಿ ತತ್ತ್ವಂ, ।
ಮನ್ನಲರಿಯರು, ತಿಳಿದರೇನು ವಿ- ।
ಭಿನ್ನಮೋಕ್ಷೇಚ್ಛೆಯೊಳು ಚಿತ್ತಂ ಸಹಜದೊಳ್ನಿಂದು ॥ ೬೮ ॥

ಬಂಧವೇ ತಾನೆನಿಸಿಕೊಂಡು ಧು- ।
ರಂಧರತೆಯೆಂ ವಹಿಸಿ, ವಿಕೃತಿಗೆ ।
ಸಂಧಿಯಾದ ವಿಷಯದಲಿರ್ಪಾಯಂತರಂಗವನು ॥
ಅಂಧರಂದದಿ ಬೇರೆನವ ಮತಿ- ।
ಗಂಧಮುಂಟದೆ ಕಾಣದರಿಗಾ-।
ತ್ಮಂ ಧರಿಸಿರಲಾ ಹೊಲೆಯನಾಹೊಲೆಯಲ್ಲಿ ತೋರುವುದೆ ॥ ೬೯ ॥

---

೬೭ ಯಾರಿಗೆ+ಅಂಕುರಿಸುವದು—ಹುಟ್ಟುವದು, ....ರುಚಿ—ಮೋಕ್ಷೇಚ್ಛೆಯು, ಸಾರಿ—ಹೊಂದಿ, ಮತ್ತು ಅನುಭವಿಸಿ ದೂರವಾಗಿ+ಓಡುವಗೆ ಬಂದು+ಆ ನಾರಿ—ಆ ಮೋಕ್ಷಾಂಗನೆ, ತಕ್ಕೈ(ಆಲಿಂಗಿ)ಸುವಳು.

೬೮ ಕೇಡಿಗಂ—ನಾಶವನ್ನು, ಸಂ....ಖ್ಯಗಂ—ಸಂಪತ್ತುಗಳ ಸುಖವನ್ನು, ಬಿನ್ನಣಿಗರು—ಪಂಡಿತರುಂಟೆ? ಇದು ನಿಂದಾಗರ್ಭಿತ ಗೌರವದ ಮಾತು. ಅದರಲ್ಲಿ ಕಾಲೂರಿ ನಿಂತಿರುವ ಬಯಕೆಯಲ್ಲವು. ಹೇಗೆಂದರೆ ಮೊದಲನೆಯದಾಗಿ ತತ್ತ್ವಕ್ಕಾಗಿ ಲೇಶವೂ ಪ್ರಯತ್ನ ಅವರಲ್ಲಿ ನಡೆದಿಲ್ಲವು, ವಿಭಿನ್ನ—ಬೇರೊಂದು ಬಗೆಯು.

೬೯ ಕರ್ತೃತ್ವಬುದ್ಧಿಯೇ ಬಂಧವೆನಿಸಿಕೊಂಡು, ಧುರಂಧರತೆ—ಕರ್ಮಗಳಲ್ಲಿ ಹೆಚ್ಚಿನ ದಕ್ಷತೆಯನ್ನು ವಹಿಸಿ, ವಿಕೃತಿಗೆ ಸಂಧಿ—ದ್ವಂದ್ವ ವಿಕಾರಗಳಿಗೆಲ್ಲ ಹೇತುವಾದ ವಿಷಯಗಳಲ್ಲಿ ನಿರಂತರವೂ ಅಂಟಿಕೊಂಡಿರುವ ಅಂತರಂಗ—ಅಂತಃಕರಣ (ಮುಕ್ತ ಆತ್ಮನು ಒಂದಕ್ಕೊಂದು ಬೆರೆಯುವವಲ್ಲ) ಎನುವ+ವ ತಿಗಂಧಂ+ಅಂಟದೆ+ಅಂಧರಂದದಿ+ಆತ್ಮಂ+ಧರಿಸಿರಲು—ಆ

ಕೌಳಿಕಕ್ಕೊಗ್ಗುವದು ಲೋಕಂ ।
ಕೌಳಿಕಕ್ಕೊಗ್ಗುವದುಪಾಸ್ಯ ವಿ- ।
ಶಾಲಮೋಹಕ್ಕೊಗ್ಗುವದು ತತ್ತ್ವವನು ಪೇಳಿದರೆ- ॥
ಕೇಳಲಾರದು, ಕೇಳಿದರು ತಾಂ ।
ತಾಳಲಾರದು ತಮ್ಮ ತಂದೆಯ ।
ಬಾಳಿಗೇನೆಡರಾಯಿತೋ! ಹೋಯಿತೊ ಸಮೃದ್ಧಾರ್ಥಂ! ॥ ೨೦ ॥

ಇಂತೆನುವ ದೆಶೆಯಿಂದ ಸಹಜದೆ ।
ನಿಂತ ರುಚಿ ಮುಕ್ತೀಚ್ಛೆಯದರಿಂ ।
ಶಾಂತನಾದಾತಂಗೆ ಪೂರ್ವೋಕ್ತ ತ್ರಿವಿಧಮುಂಟು ॥
ಸಂತತಂ ನಾಲ್ಕಾದ ಸಾಧನ- ।
ಮಂ ತಳೆದವಂಗಕ್ಕು ಬಾಹ್ಯಾ- ।
ಭ್ಯಂತರೋತಪ್ರೋತ ಚೈತನ್ಯೈಕರಸ ಸಾಂಮ್ರಾಜ್ಯಂ ॥೨೧ ॥

ಪರರ ಸೌಖ್ಯವ ನೋಳ್ಪನೇ ಸ- ।
ತ್ಪುರುಷ ಸಮಚಿತ್ತದಲಿ; ಪೇಣಾ ।
ಪುರುಷರುಚ್ಛ್ರಯಕಾಗಿ ದುಃಖವ ಸಹಿಪರಾರುಂಟು ॥
ಗರಲಮಂ ತಾಂಪೀರ್ದು ನಾಕೇ- ।
ಶ್ವರರ ಸಿರಿಯಂ ಪೊರೆದ ಲೋಕೋ- ।
ತ್ತರ ಯಶಸ್ವಿ ವಿಷಾಶನಂ ನಮಗೀಗೆ ಶಿವಪದಮಂ ॥ ೨೨ ॥

ಇನು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೋಳ್ ಶಮಾದಿಷಟ್ಕದ ಸ್ಥಿತಿಯಂ ಪೇಳಿದ ಹನ್ನೊಂದನೆಯ ಸಂಧಿ ಸಂಪೂರ್ಣಂ (ಪದ ೬೦೩)

---

ಆತ್ಮನನ್ನರಿಯುವದಕ್ಕಿಲ್ಲದಷ್ಟು ವಿಷಯಗಳಿಗೆ ಬೀಡಾಗಿ ಹೊಲಸಾಗಿರುವ ಆ ಹೊಲೆಯನ ಅಂತಃಕರಣದಲ್ಲಿ ಮೋಕ್ಷೇಚ್ಛೆಯು ತೋರುವದೆಂತು?

೨೦ ಈ ಲೋಕವು ಅನೃತವೆಂಬ ಕೌಳಿಕಕ್ಕೂ ಮೋಸರೂಪ ಕೌಳಿಕಕ್ಕೂ ಒಲಿದು ಒಗುವಂತೆ ದೇವತೆಗಳ ಉಪಾಸನೆಯ ಮೋಹಕ್ಕೂ ಬೆರಗಾದವರು ತತ್ತ್ವಕ್ಕಿಲ್ಲ! ಕೇಳಿದರೂ ಅದನ್ನು ತಾಳುವುದೂ ಇಲ್ಲ! ಅದರಿಂದ ತಮ್ಮಪ್ಪನ ಬಾಳಿಗೇ ಅಡ್ಡಿಯಾಯಿತೋ ತಾನು ಕೂಡಿ ರಾಶಿಹಾಕಿದ ಅರ್ಥಗಳು ಹೋಗಿಬಿಡುವವೆಂದೋ ತನ್ನಲ್ಲಿ ಅಳುಕುತ್ತಿರುವದು!

೨೧ ....ರುಚಿ—ಮುಕ್ತೀಚ್ಛೆಯು ಪೂರ್ವ ಸಂಸ್ಕಾರದಿಂದ ಸಹಜವಾಗಿ ಬಂದು ನಿಂತವನಲ್ಲಿ ವಿವೇಕ, ವೈರಾಗ್ಯ, ಶಮಾದಿ ಷಟ್ಕ ಎಂಬ ಈ ತ್ರಿವಿಧವು ತಪ್ಪದೆಯುಂಟು, ....ತಳೆದ+ಅವಂಗೆ+ ಬಾಹ್ಯ + ಅಭ್ಯಂತರ + ಓತಪ್ರೋತ—ಹಾಸುಹೊಕ್ಕಾಗಿ ಒಳಹೊರಗಳೆಲ್ಲೆಯೂ ತುಂಬಿರುವ ಚೈತನ್ಯೈಕರಸ—ಕೈವಲ್ಯವು ಅವನಿಗೆ ಅಕ್ಕು—ಆಗುವದು.

೨೨ ಪೇಳ್+ಆ ಪುರುಷರ+ಉಚ್ಛ್ರಯಕಾಗಿ—ಉನ್ನತಿಗಾಗಿ, ಗರಲ(ವಿಷ)ಮಂ+ ತಾಂ+ಪೀರ್ದು—ತಾನು ಕುಡಿದು, ನಾಕೇಶ್ವರರ ಸಿರಿಯಂ—ಇಂದ್ರಾದಿ ದೇವತೆಗಳಿಗೆ ಸ್ವರ್ಗದ

# ಅನುಬಂಧಚತುಷ್ಟಯನಿರ್ಣಯ-ಹನ್ನೆರಡನೆಯ ಸಂಧಿಯು

ಸೂ॥ ವಿಷನು ದುಃಖಾಧಾರಭವ ತಾಂ ।
ವಿಷದ ತಡಿಯಂ ಸಾರ್ಚಿಸಲ್ಕೀ ।
ವಿಷಯ ಸಂಬಂಧ ಪ್ರಯೋಜನಗಳ್ಪೇಳೆವವಿಲ್ಲಿ ॥ ಪ ॥

ಹೊಲೆಯರಿಗೆ ಕೊಡತಕ್ಕುದೇ ನಿ-।
ರ್ಮಲತರಃ ಕಪಿಲಾಪಯಃ ಪಾ-।
ಟಲ ಮನೋಹರ ಪಾಯಸಂ; ಪರರಿಂಗಿತನ ತಿಳಿದು ॥
ಬಳಲಿದರೆ ಮನಮರುಗಿ ಯಾವ-।
ತ್ಫಲದೊಳುಪಕೃತಿಗೆಳಸದಿರ್ಪೀ ।
ಖಲಶಿರೋಮಣಿಗಳಿಗೆ ಪೇಳದಿರಿ ೕಕಥಾಶೃತಿಯ ॥ ೧ ॥

ಜಯಿಪ ಮೊದಲೇ ಪೇಳ್ದುದಧಿಕಾ-।
ರಿಯ ಸುಲಕ್ಷಣವಾದುದಿಲ್ಲೀ ।
ನಯಕೆ ಬೇಕನುಬಂಧಚಾತುರ್ಯಂ, ಪರಮನಲ್ಲಿ- ॥

---

ತಮ್ಮ ದಿವ್ಯ ಸಂಪತ್ತನ್ನು ಕೊಟ್ಟು ಕಾಪಾಡಿದ, ಲೋಕೋತ್ತರ ಯಶಸ್ವಿ—ಅಸಾಧಾರಣ ಕೀರ್ತಿಯನ್ನು ಹೊಂದಿರುವ, ವಿಷ+ಅಶನಂ—ವಿಷವನ್ನುಂಡ ಆ ನಂಜುಂಡನು ಶ್ರೀಕಂಠೇಶ್ವರನು ತನ ನಿತ್ಯಮಂಗಲಪದವನ್ನು ನಮಗೆ, ಈಗೆ—ಕೊಟ್ಟು, ಸದಾಕಾಲವಲ್ಲಿಯೂ ಕಾಪಾಡಲಿ !

ಸೂ॥ ವಿಷಯಗಳು ಒಂದಕ್ಕೊಂದು ವಿಷಮ—ಸಹಿಸುವದಕ್ಕೆ ಇಲ್ಲದಂತಿರುವ ದುಃಖಗಳಿಗೆ ಆಸ್ಪದವಾಗಿರುವ ಈ ವಿಷಯಗಳೆಂಬ ವಿಷದ—ವಿಷಭರಿತವಾದ, ಈ ಭವ—ಸಂಸಾರವೆಂಬ ಕಡಲಿನ, ತಡಿಯಂ—ಆಚೆಯ ದಡವಾದ, ತಾಂ—ಆ ಬ್ರಹ್ಮವನ್ನು ಮುಮುಕ್ಷುಗಳಿಗೆ ಸುಲಭದಿಂದ, ಸಾರ್ಚಿಸಲ್ಕೆ—ಸಮೀಪಿಸಿ ಅನುಭವಕ್ಕೆ ಹೊಂದಿಸಿಕೊಡಬೇಕಾದರೆ ಅದಕ್ಕೆ ಬೇಕಾಗುವ ವಿಷಯ, ಸಂಬಂಧ, ಪ್ರಯೋಜನಗಳನ್ನು ಈ ಸಂಧಿಯಲ್ಲಿ ತಿಳಿಸಲ್ಪಡುವವು.

೧ ಕಪಿಲಾಪಯಃ—ಕಪಿಲ ಬಣ್ಣದ ಶ್ರೇಷ್ಠವಾದ ಹಾಲಿನಲ್ಲಿ ಮಾಡಿರುವ, ಪಾಟಲ—ಕೆಂಪೂ ಬಿಳುಪೂ ಬೆರೆತ ಗುಲಾಬಿ ಬಣ್ಣದ ದೇವಯೋಗ್ಯವಾದ ಪಾಯಸವನ್ನು; ಪರರು (ಹೆಚ್ಚಿನ ಕಷ್ಟಗಳಿಂದ)+ಬಳಲಿದರೆ (ಅವರ ಪರಿಹಾರಕ್ಕಾಗಿ ತನ್ನ)+ಮನಮರುಗಿ+ಅವರ+ಇಂಗಿತವ ತಿಳಿದು ಯಾವತ್+ಫಲದೊಳು—ತನ್ನ ಕೈಯ್ಯೆಲ್ಲಾಗುವ ಅಲ್ಪವಾದ, ಉಪಕೃತಿಗೆ—ಉಪಕಾರಕ್ಕಾಗದರು, ಎಳಸದಿರ್ಪ—ಮನಸ್ಸನ್ನು ಮಾಡದಿರುವ, ಈ ಖಲಶಿರೋಮಣಿಗಳಿಗೆ—ಕಡುನೀಚರ ಗುಂಪಿನ ಈ ಅಗ್ರೇಸರಂಗೆ,

೨ ಜಯಿಪ—ಈ ಸಂಧಿಯನ್ನು - ಪ್ರಾರಂಭಿಸುವದಕ್ಕಿಂತ ಮೊದಲೆ - ಐದನೆಯ ಸಂಧಿಯಲ್ಲಿಯೆ, ಇಲ್ಲಿ+ಈ ನಯಕೆ—ಈ ವೇದಾಂತಕಾವ್ಯಕ್ಕೆ ಭೂಷಣಪ್ರಾಯವಾದ ಅನುಬಂಧಗಳನ್ನು ತಿಳಿದುಕೊಂಡಿರಬೇಕಾದ, ಚಾತುರ್ಯಂ—ದಕ್ಷತೆಯು ತತ್ತ್ವಜಿಜ್ಞಾಸುವಿನಲ್ಲತ್ಯವಶ್ಯವು. ಜೀವಪರಮರಿಬ್ಬರಲ್ಲನುಸ್ಯೂತವಾಗಿರುವ ಯೋನಿ—ಸರ್ವಕಾರಣವಾದ ತತ್ತ್ವವೊಂದನ್ನೇ ಆ ಜೀವೇಶ್ವರರು ತಮ್ಮಲ್ಲಿ ಹೊಂದಿಸಿಕೊಂಡು ಶ್ರಯಿಪುದು—ಆಶ್ರಯಿಸಿಕೊಂಡಿರುವರು. ಈ

ಶ್ರಯಿಪುದೀ ಜೀವನಲಿ ಯೋನಿ-।
ದ್ವಯಮುದೇ ಗುರುಚರಣರಿಂದ ವಿ-।
ಷಯಮೆನುತ ಪೇಳಲ್ಪಡುಗುಮುದಬೆರೆಯೆ ಸುವ್ರತರು ॥ ೨ ॥

ಸಾಧುಸಂಗವೆ ಬೇಕು ತಾಪ- ।
ವ್ಯಾಧಿಯಂ ಶಿಕ್ಷಿಪೊಡೆ ಪೂರ್ಣ ಕ- ।
ಲಾಧರ ರಸೈಕತ್ವಮೇ ಎಂತಂತು, ಸಂಸೃತಿಯ- ॥
ಆಧಿಯಂ ತೊಲಗಿಪೊಡೆ ಮೇಣವ- ।
ರೇ ಧರಾತಲ ಚಂದ್ರರವದಿರ- ।
ಬೋಧವೇ ಪೀಯೂಷವದ ಸೇವಿಪರಮರರಹರು ॥ ೩ ॥

ತರಣಿಯಾಗುತಿಯೇ ತಮಿಸ್ರೋ-।
ತ್ಕರದ ಕಡೆಯೆಂತಂತು, ಸಜ್ಜನ ।
ವರರ ದರುಶನವೇ ನರರ ಬಂಧಕ್ಕೆ ಕಡೆಗಾಲಾ ॥
ಮರಣಮುತ್ಸವಮೆನಿಪುದಾಗುವ- ।
ದಿರಿಣಮೇ ಭಂಢಾರಮಾಪ-।
ದ್ಭರವೆ ಸಂಪತ್ತ್ರಕ್ಕುಮಾರ್ಯರ ಸಮಾಗಮಂ ದೊರೆಯೆ ॥ ೪ ॥

ಕರಗುವದು ನವನೀತ ತಾನೇ ।
ನೆರೆಯೆ ತಾಪವ; ಸಜ್ಜನಾಶಯ ।
ಕರಗುವದಲಾ ಪರರ ತಾಪಂಗಂಡು! ಮೇಣಿದಕೆ ॥

---

ಚೈತನ್ಯರೂಪದಿಂದ ಆ ಇಬ್ಬರ ಏಕತ್ವವೆ—ಈ ಕಾವ್ಯಕ್ಕೆ ವಿಷಯಂ+ಎನುತ+ಪೇಳಲ್ಪಡುಗುಂ+ಅದಬೆರೆಯೆ—ಪಡೆದುಕೊಳ್ಳುವಲ್ಲಿ, ಸುವ್ರತರು—ಮುಮುಕ್ಷುಗಳು

೩ ತಾಪ....ಪೊಡೆ—ಬಿಸಿಲಿನ ಬಳಲಿಕೆಯನ್ನು ಹೋಗಲಾಡಿಸಿಕೊಳ್ಳುವಲ್ಲಿ, ಪೂರ್ಣ ಕಲಾಧರ—ಹುಣ್ಣಿಮೆಯ ಚಂದ್ರನ, ರಸೈಕತ್ವಮೆ+ಎಂತು+ಅಂತು—ತಿಂಗಳಬೆಳಕೊಂದೇ ಬೇಕಾಗುವಂತೆ, ....ಆಧಿಯಂ—ಸಂಸಾರದ ಹೃತ್ತಾಪವನ್ನೂ, ಮೇಣ್+ಅವ....ಪ್ರರು—ಭೂಮಿಗೆ ಚಂದ್ರಪ್ರಾಯರು! ಅವದಿರ—ಅವರ ಜ್ಞಾನಬೋಧೆಯೆಂಬುದೆ, ಪೀಯೂಷ(ಅನೃತ)ವು+ಅದು+ಸೇವಿಪರು+ಅಮರರು+ಅಹರು.

೪ ....ಆಗತಿಯೇ—ಸೂರ್ಯೋದಯವೊಂದೇ, ತಮಿಸ್ರೋತ್ಕರದ+ಕಡೆಯೆಂತೊ+ಅಂತು—ಕತ್ತಲೆಯನ್ನೆಲ್ಲ ನಾಶಮಾಡುವಂತೆ, ಮರಣಂ+ಉತ್ಸವಮೆನಿಪುದು+ಆಗುವದು+ಇರಿಣಮೇ—ಈರಿಣಂ—ತನಗೆ ಹುಟ್ಟುಬಂದ ಕಡುದಾರಿದ್ರ್ಯದ ತನ್ನ ಹಾಳು (—ಶೂನ್ಯ) ಜೀವನವೆ—ಸಂಪೂರ್ಣ ಹಣಕಾಸುಗಳಿಂದ ತುಂಬಿದ ಧನದ ಭಂಡಾರವಾಗುವದು! ಆಪತ್+ಭರವೆ—ಮೈಮಾಸು ತುಂಬಿ ಸುಪಬಿಡದೆಇದ್ದ ವಿಪತ್ತುಗಳ ರಾಶಿಯೇ–ಹಿಡಿಸಲಾರದಷ್ಟು ನವನಿಧಿಗಳು ತುಂಬಿದ ಶಿರಿಸಂಪತ್ತಿನ ದಿವ್ಯಮಂದಿರವು ಅಕ್ಕುಂ—ಆಗಿಬಿಡುವದು! ಆರ್ಯರ–ಪೂಜ್ಯ ಸಜ್ಜನರ.

೫ ನವನೀತ (ಗವ್ಯಂ)—ಬೆಣ್ಣೆಯಾದದು, ತಾನೇ ಬಿಸಿಯನ್ನು, ನೆರೆಯೆ—ಹೊಂದಿದರೆ,

ಸರಿಯೆ ಗವ್ಯಮುದಂತಿರಲಿ ಸ-|
ತ್ಪುರುಷವರರಾಸಂಗಮೇ ಪ್ಲಾ-|
ವ ರಸಿಕರ್ಗೇತಕ್ಕೆ ದಾನಾಧ್ವರ ತಪಃಕೃತ್ಯಂ || ೫ ||

ಗಲಿತಹೃದಯಗ್ರಂಥಿಗಳು, ನಿ-|
ರ್ಮಲರು ಸಜ್ಜನರವರ ಸಂಗವೆ |
ಘಳಿಸತಕ್ಕ ಪದಾರ್ಥವೀ ಸಂಸೃತಿಯ ಸಾಗರವ ||
ಕಲುಷಜಲಮುತ್ತರಿಪೊಡವದಿರ |
ಲಲಿತ ಪದಧೂಳೀಕರಂಡಂ-|
ಗೊಳದೆ ಶಕ್ತನೆ ಮಾನವಂ ದುರ್ಮಾನವಂಗಸದಳ || ೬ ||

ಚಾರು ಸಂಘರ್ಷಣದೊಳ್ಪೈದುವ |
ದಾರಿಯಭ್ಯಾಸಾಬ್ದಶತದಿಂ |
ಸಾರಲಸದಳವವರ ಪೊರೆವುದು ಜೀವನವನಿತ್ತು ||
ಮಾರಣವೆ ವಿದ್ವಾಂಸರ ತಿರ-|
ಸ್ಕಾರವಾದುದರಿಂದವರುಮುಪ-|
ಕಾರಮಂ ಮಾಡುವರು ಚಿತ್ತಕ್ಕಿವರವರದಾದ || ೭ ||

---

ಸಜ್ಜನರ+ಆಶಯ—ಹೃದಯ ಮಾತ್ರ ಹಾಗಲ್ಲ, ....ವರರ+ಆಸಂಗಮೆ—ಸತ್ಸಂಗವೊಂದೇ ಒಂದು ಸಾಕು, ಅವೇ, ರಸಿಕರ್ಗೆ—ಆತ್ಮನ ನಿರ್ವಿಷಯಾನಂದದ ಸವಿ ಬಲ್ಲವರಿಗೆ. ಪ್ಲಾವ—ಪ್ಲವ ಸಂಸಾರವನ್ನು ದಾಟಿಸುವ ತೆಪ್ಪವಾಗುತ್ತೆ ಎಂದರೆ ಇನ್ನುಳಿದ ತಪಸ್ಸು, ದಾನ, ಅಧ್ವರ—ಯಾಗಾದಿ ಕ್ರಿಯೆಗಳು ಏತಕ್ಕೆ ಬೇಕಾದೀತು ?

೬ ಗಲಿತ—ಪಕ್ವಗೊಂಡು ಜ್ಞಾನದಿಂದ ಕಳಚಿಕೊಂಡಿರುವ, ಹೃದಯಗ್ರಂಥಿಗಳು—ಒಂದರಲ್ಲೊಂದು ಕಲೆಬೆರೆತುಕೊಂಡಿರುವ ಆತ್ಮಾನಾತ್ಮಗಳ ಅಧ್ಯಾಸದ ಹೃದಯದ ಕಗ್ಗಂಟುಗಳನ್ನುಳ್ಳ ಪೂರ್ಣ ತತ್ತ್ವಜ್ಞರು, ಸಂಸಾರಸಾಗರದ ಕಲುಷಜಲಂ—ಸುಲಭದಿಂದ ದಾಟುವದಕ್ಕಿಲ್ಲದ ನೀರನ್ನು ಕುರಿತು, ಉತ್ತರಿಪೊಡೆ—ಅನಾಯಾಸದಿಂದ ತಾನು ದಾಟುವಲ್ಲಿ, ಅವದಿರ—ಆ ಪೂರ್ಣ ತತ್ತ್ವದರ್ಶಿಗಳ ಪಾದಧೂಳಿನ, ಕರಂಡಂ—ಕರಡಿಗೆ—ಭರಣಿ ಒಂದನ್ನು ತಾನಾಶ್ರಯಿಸಿ ಅದನ್ನು ಕೈಗೊಳದೆ ಯಾರುತಾನೇ ಶಕ್ತರು ? ಎಂದರೆ ಖ್ಯಾತಿ ಗೌರವಾದಿಗಳೆಂಬ ಭಾರ—ಗುರುತ್ವವು ತನ್ನಲ್ಲಿ ಬಂದು ಬಹುಭಾರ ರೂಪನಾಗಿರುವ ದುರ್ಮಾನವಂಗೆ+ಅಸದಳ—ಅದು ಅಸಾಧ್ಯವು (ಭಾಗ ೭–೬–೯)

೭ ಬಲ್ಲವರಲ್ಲಿ ನಡಿಯುವ ತತ್ತ್ವನಿಶ್ಚಯ ನಿಮಿತ್ತದ ವಿಚಾರ ಚರ್ಚೆಯಿಂದ ತನಗೆ ಸುಲಭವಾಗಿ ಹೊಂದುವ ಮುಕ್ತಿಯ '<u>ರಾಜಮಾರ್ಗ</u>'ವನ್ನು ಸ್ವಂತವಾಗಿ ತಾನು ಮಾಡುವ, ಅಬ್ದಶತದಿಂ—ನೂರಾರು ವರ್ಷಗಳ ಅಭ್ಯಾಸದ ಬಲದಿಂದಲಾದರೂ, ಸಾರಲು—ಸಮೀಪಿಸಿ, ಅದನ್ನು ಹೊಂದುವದಕ್ಕೆ, ಅಸದಳವು—ಇಲ್ಲವು, ಅಸಾಧ್ಯವು. ಆದ್ದರಿಂದ ಜೀವನವನ್ನು ಕೊಟ್ಟು ಸಜ್ಜನರನ್ನು ಕಾಪಾಡಬೇಕು. ತಿರಸ್ಕಾರವೇ ಸಜ್ಜನರನ್ನು ಕೊಂದಂತೆ ಆಗುವದರಿಂದ ಅವರನ್ನು

ಜೀವನವು ದೇಹಕ್ಕೆ ಸದ್ಗುಣ-।
ಭಾವನವು ಚಿತ್ತಕ್ಕೆ. ಶತಸರ-।
ದಾವಧಿಕವಿದು ನೋಡಲದು ಕಲ್ಪಾವಧಿಕವವರೋಳ್ ॥
ಈ ವಿಧದ ಲಾಭವನು ಕೊಳ್ಳದ-।
ಗಾವಿಲಂಗೇನಿದ್ದರೇನವ-।
ದೇವ ಮನುಜ ಭುಜಂಗರೊಳಗಲ್ಲಾವ ಲೌಕಿಕನೊ! ॥ ೮ ॥

ಹರಿವ ತೊರೆಗಳ್ಸುರರ ಕುರುಪಿನ ।
ಕರುವು ಕಲ್ಮರ ಕಂಚುಗಳ್ದು-।
ರ್ದುರಿತಹಾರಕವಪ್ಪವೇಂ, ಭಾವನೆಯ ದೆಶೆಯಿಂದ; ॥
ಚರಿಸಿ ಚಿತ್ತವಿಕಾರಮಂ ಕ-।
ತ್ತರಿಸಿ, ಸಹಜಸ್ಥಿತಿಯನೂರೀ-।
ಕರಿಸುವೋಲ್ಮಾಡುವರ ಮನುಜರನೇನೆಲ್ಬಹುದು ॥ ೯ ॥

ಕುಶಲರಾಗತಿಗಿಂತ ಕಿಂಚಿ-।
ತ್ಕುಶಲಮಿಲ್ಲೆಣಿಸಲ್ಕೆ, ವಿಷಯಾ-।
ವಶರ ಸಂಗತಿಯೆಂದಿಗಾಗುವದೋ ಪುಮಾಂಸರಿಗೆ- ॥

---

ಎಂದಿಗೂ ಕೊಲ್ಲುವವಲ್ಲ. ಏಕೆಂದರೆ ಭೋಗದ ದುರ್ವಾಸನೆಗಳಿಂದ ಅವರದಾದ—ತಳಮುಟ್ಟದ ಈ ಸಂಸಾರಿಗಳ ಚಿತ್ತಕ್ಕೆ ವೈರಾಗ್ಯ ಬರುವಂತೆ ಆ ಸಜ್ಜನರು ಇವರಿಗೆ ಉಪಕಾರ ಮಾಡಬಲ್ಲರು.

೮ ಸಜ್ಜನರ ಸಂಗವೆ ಸಂಸಾರದ ಜನರಿಗೆ ಒಂದು ಶುಭಜೀವನವು, ಅಲ್ಲದೆ, ಸದ್ಗುಣಗಳಲ್ಲಿ ಚಿತ್ತವನ್ನು ಅದ್ದಿ ಮುಳುಗಿಸಿ ಅವರ ಭಾವನೆಯನ್ನು ಆ ಚಿತ್ತಕ್ಕೆ ಮಾಡುವವು. ಈ ಜನರು ಜ್ಞಾನಿಯನ್ನು ನೋಡುವ ನೂರು ವರುಷವೆಂಬ ಆ ಜ್ಞಾನಿಯ ದೇಹಮಾನದ ರಕ್ಷಣೆಯು ಕಾಲವು ಅಲ್ಪವಾಗಿದ್ದರೂ ಅವರನ್ನು ಸೇವಿಸಿದ ಆ ಪುಣ್ಯ ಮಾತ್ರ ಕಲ್ಪಾಂತದವರೆಗೂ ಆ ಜ್ಞಾನಿಗಳಲ್ಲಿದ್ದು ಶತಾಧಿಕ ಸಹಸ್ರಾಧಿಕವಾಗಿ ಅದು ಜನ್ಮಜನ್ಮಾಂತರಗಳಲ್ಲಿಯೂ ಉತ್ತಮ ಫಲವನ್ನು ಇವರಿಗೆ ಕೊಡುತ್ತಿರುತ್ತದೆ. ಇಂಥ ಲಾಭವನ್ನು ಕೊಳ್ಳದ ಗಾವಿಲಂಗೆ—ಹೆಡ್ಡನಿಗೆ, ಏನಿದ್ದರೆ+ಏನು? ಮನುಷ್ಯರೊಳಗೂ ಅವನು ಒಬ್ಬನಲ್ಲ!

೯ ....ಕುರುಪಿನ—ದೇವರ ಗುರುತಿನ, ಕರುವು—ಪ್ರತಿಮೆಗಳು, ದುರ್ದುರಿತ—ಕೆಟ್ಟ ಪಾಪಗಳನ್ನು, ಹಾರಕವು+ಅಪ್ಪವೆ+ಏನು—ಆ ಪ್ರತಿಮೆಗಳೆ ಕೆಡಿಸಿಬಿಡುವವೇನು? ಸದ್ಭಾವನೆಯಿಂದಲ್ಲವೆ ಅವು ಹೋಗಬೇಕು? ದೇವತೆಗಳಂತೆ ಭೂಮಿಯಲ್ಲಿ ಸಂಚರಿಸುತ್ತಿರುವ ಆ ಜ್ಞಾನಿಗಳು ಜನರ ಚಿತ್ತದ ಭೋಗವಿಕಾರಗಳನ್ನು ಕತ್ತರಿಸುತ್ತ, ಆ ಜನರಿಗೆ ಆತ್ಮನ ಸ್ಥಿತಿಯನ್ನು ಊರೀಕರಿಸುವವೋಲ್—ನೆಲೆಗೊಳುವಂತೆ ಮಾಡುತ್ತಿರುವ ಅವರನ್ನು ಏನೆನ್ನಬೇಕು!

೧೦ ಕುಶಲರ+ಆಗತಿಗಿಂತ—ಕ್ಷೇಮವನ್ನು ಹೊಂದಿದ ಜ್ಞಾನಿಗಳ ಶುಭಾಗಮನಕ್ಕಿಂತಲೂ ಹೆಚ್ಚಿನ ಮತ್ತೊಂದು, ಕುಶಲಂ+ಇಲ್ಲ+ಎಣಿಸಲ್ಕೆ ವಿಷಯ+ಅವಶರ—ವಶರಲ್ಲದ ಜ್ಞಾನಿಗಳ, ಸಂಗತಿ+ಎಂದಿಗೆ+ಆಗುವದೊ ಪುಮಾಂಸರಿಗೆ—ಮನುಷ್ಯರಿಗೆ, ಅದೇ ಶುಭಕಾಲವು, ಮತ್ತು ತನ್ನ ಜೀವಿತಕಾಲದೋಳ್+ರಸಪೂರಿತರು—ಮಲಮೂತ್ರಗಳ ಬಾಧೆಯನ್ನು ನೀಗಿಸಿಕೊಳ್ಳುವ

ದಶೆಯ ಕಾಲವದಾಗೆ ರಸಪೂ-।
ರಿಶರು ಜೀವಿತಕಾಲದೊಳ್ದು-।
ಪ್ಪಶುಜನವ್ಯಾಪೃತಿಯ ಕಳಿದಿರ್ಪುದೆ ಭವುಕ ಸಮಯಂ ॥ ೧೦ ॥

ಆದರವರೇಂ ಭಾವದಿಂ ಸಂ-।
ಮೋದವೃತ್ತ್ಯಶ್ವಾಸ್ಯರೆನೆ, ರಾ-।
ಗಾದರಣೆಯಂ ಕ್ರೋಧದುಪಟಳಮಂ ಕುಲೋಭತಯಂ ॥
ವೇದನೆಯ ಮೋಹದ ವಿಕಾರಕ-।
ಮಾದ ಜಾತ್ಯೌನ್ನತಿಯ ಮತ್ಸರ- ।
ವೈದಿದೊಳ್ಗುದಿಯಂ ಪಡೆಯದಿಪ್ಪವರೆ ಸಜ್ಜನರು ॥ ೧೧ ॥

ಕಾಮನಿಂ ನಲಕೂಬರ ಮಣಿ-।
ಗ್ರೀವ ಮುಖ್ಯಕ್ರೋಧದಿಂದೇ ।
ರಾವಣಾದಿಕ ದೈತ್ಯರಾ ದುರ್ಲೋಭ ಬಲದಿಂದ ॥
ಭೂವಲಯದೊಳ್ಕೌರವಾದ್ಯ-।
ರ್ದೇವರತಿ ಮೋಹದೆ ವಿಬುಧರನು-।
ಭಾವಶೂನ್ಯಕ್ರತುವಿನಲಿ ದಕ್ಷಪ್ರಜಾಪತಿಯು ॥ ೧೨ ॥

ಮದದೆ ಸುರನಾಥ ಪ್ರಮುಖರಾ-।
ಪದಮೊಡರ್ಚುವ ಮತ್ಸರದೆ ಘೋ-।
ರ ದಮವದ್ಯಮರಾಟ್ಪ್ರಥಮರು ವಿಪಾಯಮೊಂದಿದರು ॥

---

ಮಟ್ಟಿನ ಪಶುಸಾಮಾನ್ಯ ವ್ಯಾಪಾರದ ಮನುಷ್ಯರ ಸ ಗತಿಯನ್ನು ಕಳಿದುಕೊಂಡಿರುವದೇ, ಭವುಕ ಸಮಯಂ— ತನಗೆ ಶುಭಸನ್ನಿವೇಶದ ಉತ್ತಮ ಕಾಲವು (ಭಾಗವತ ೭–೭)

೧೧ ಆದರೆ ಅವರು ಯಾವ ಗುರ್ತಿನಿಂದ, ಸಂಮೋದವೃತ್ತ್ಯ—ಸುಖದಿಂದ, ಅಶ್ವಾಸ್ಯರು+ಎನೆ— ವಿಶ್ವಾಸವಿಟ್ಟು ತಿಳಿಯಬರುವರೆಂದರೆ? ರಾಗ ಮತ್ತು ಕ್ರೋಧ ಇವುಗಳ, ಉಪಟಳ —ಉದ್ರೇಕದ ಕಿರಿಕುಳವನ್ನೂ ಕುಲೋಭವನ್ನೂ ಮೋಹವಿಕಾರದ ವೇದನೆಯನ್ನೂ, ಸತ್ಕುಲ ಜನ್ಮನಿಮಿತ್ತದ ಮತ್ಸರವನ್ನೂ, ಐದಿದ—ಹೊಂದಿಬರುವ, ಒಳ್ಗುದಿಯಂ—ಮನಸ್ಸಿನ ತಾಪವನ್ನು, ಪಡೆಯದೆ ಇರುವವರೆ ಸಜ್ಜನರೆಂದು ತಿಳಿಯಬೇಕು.

೧೨ ಕಾಮನಿಂ—ಚೆಲುವೆಯರ–ದರ್ಶನ, ಸ್ಪರ್ಶನ, ಕ್ರೀಡಾ, ಕೀರ್ತನ, ಗುಹ್ಯಭಾಷಣ, ಸಂಕಲ್ಪ, ನಿಶ್ಚಯ, ರತಿ ಎಂಬ ಎಂಟುಬಗೆಯ ಮೈಥುನರೂಪ ಕಾಮದಿಂದಲೂ (ಭಾಗವತ ೧೦–೧೦); ಭೂವಲಯದೊ(ಭೂಮಿಯೊ)ಳ್+ಕೌರವಾದ್ಯರು+ದೇವ....ಬುಧರು+ಅನು.... ಕ್ರತು– ಮದದಿಂದ ಕ್ರಮ ಬಿಟ್ಟು ಮಾಡಿದ ಯಜ್ಞದಿಂದ ದಕ್ಷಬ್ರಹ್ಮನು.

೧೩ ....ಪ್ರಮುಖರು—ಇಂದ್ರಾದಿ ದೇವಮುಖ್ಯರು ಮತ್ತು (ಭಾಗವತ ೬) ಆಪದಂ+ ಒಡರ್ಚುವ—ದೇವತೆಗಳ ಪದವಿಗಳನ್ನು ಹೊಂದುವ ಮತ್ಸರದಿಂದ, ಘೋರದಮವತ್—ಉಗ್ರ ತಪಸ್ಸುಗಳನ್ನುಳ್ಳ, ಅಮರಾಟ್—ದೇವೇಂದ್ರಸಿಗೂ, ಪ್ರಥಮರು—ಮೊದಲಿನ ದೈತ್ಯ ದಾನವ

ಇದಿರಹರು ಲೋಕತ್ರಯದೆ ಬೇ-।
ಗುದಿಗೊಳದೆ ನಿಲಲಾರು ಶಕ್ತ-।
ರ್ಗದಗದಿಸದಂತರ್ವಿಪಕ್ಷರ ಕಾರ್ಯಮೊತ್ತರಿಸೆ ॥ ೧೩ ॥

ಅರಿಗಳಿದಿರಿಲಿ ನಿಂದು ದುರ್ಧರ-।
ತರ ಕೃತಿಯನೆಸಗುವರವರ ಕಂ-।
ಡಿರಬಹುದು ಕಡೆಸಿಡಿಯ ಬಹುದೊತ್ತರಿಸಿ ನಿಲಬಹುದು॥
ಸ್ಮರ ಮುಖಾದಿಗಳಿದಿರಿರದೆ ಸ-।
ತ್ಕರಿಸುವವರಂದದಲಿ ತೋರಿದ-।
ವರನೊಳಗೆ ತಂದಿರಿಸಿಕೊಂಡವರೆಸಗುತಿಹ ಕೃತಿಯುಂ· ॥ ೧೪ ॥

ತಾವೆ ಮಾಡುತ್ತಿರಲವರ್ಗೆ ಪ-।
ರಾವಮಾನಂ ಹಾನಿ ಬಂದೊಡೆ ।
ಜೀವಿತವನಾದರು ಬಿಡುವರಲ್ಲದೆ, ಕೆಡಿಸರವರಂ ॥
ಭಾವದೊಳಪೊಕ್ಕರಿಗಳೆಂಬನು-।
ಭಾವಮಂ ಕಾಣಿಸದಹಾಗೆ ದು-।
ರಾವರಣ ಸಂಚ್ಛಾದ್ಯರಾಗಿಹರಾವನಾನೋರ್ವಂ ॥ ೧೫ ॥

ಪರಮ ವೈರಾಗ್ಯಾಶ್ವಮಂ ನಿ-।
ರ್ಭರದೊಳೇರಿ ವಿವೇಕ ಕವಚಾ-।
ವರಿತನಾಗಿ ಗುರೂಕ್ತಿ ಖಡ್ಗದಿ ಕಾಮಮುಖರಾದ ॥

---

ರೆಲ್ಲರೂ, ವಿಪಾಯಂ+ಬಂದಿದರು—ತಾವು ಬಹು ಕಷ್ಟಕ್ಕೀಡಾದವರು, ಇದಿರಹರು—ಎದುರು ನಿಲ್ಲುವವರು ಯಾರು ? ಬೇಗುದಿಗೊಳದೆ—ದುಃಖದಿಂದ ಎದೆಗೆಡದೆ, ನಿಲಲು+ಆರು ಶಕ್ತರು+ಗದಗದಿಸದೆ—ಹಿಮ್ಮೆಟ್ಟಿ ಚಲಿಸದೆ, ಅಂತರ್ವಿಪಕ್ಷರ ಕಾರ್ಯಂ—ಎದುರಿಸುವದಕ್ಕಿಲ್ಲದ ಕಾಮಾದಿ ಒಳಶತ್ರುಗಳ ಚಿತ್ತವಿಕಾರಗಳು ಬಂದು ತನ್ನನ್ನು, ಒತ್ತರಿಸೆ—ಬಲಾತ್ಕರಿಸುವ ಕಾಲದಲ್ಲಿ ಎದುರು ನಿಲ್ಲುವದಕ್ಕೊಬ್ಬರಿಗೂ ಇಲ್ಲವೆಂದು ಭಾವವು.

೧೪ ದುರ್ಧರ....ಯನು—ಕಷ್ಟದಿಂದ ಸಹಿಸಬೇಕಾಗಿರುವ ಬಾಧೆಯನ್ನು, ಎಸಗುವರವರ–ಮಾಡುವವರನ್ನು, ಕಡೆಸಿಡಿಯ—ನಿಂತ ಸ್ಥಳದಿಂದ ಅವರನ್ನು ಚದುರಿಸಬಹುದು, ಒತ್ತರಿಸಿ—ಅತ್ತ ನೂಕಿ, ಸ್ಮರಮುಖಾದಿಗಳು—ಕಾಮಾದಿಗಳು, ತಾವು ಎದುರುನಿಲ್ಲದೆ, ತೋರಿದ+ಅವರನು (—ಆ ಕಾಮಾದಿಗಳನ್ನು, ಈ ಜನರ)+ಒಳಗೆ ತಂದಿರಿಸಿಕೊಂಡು+ಅವರು+ಎಸಗುತಿಹ ಕೃತಿ—ಮಾಡುತ್ತಿರುವ ಕಾರ್ಯವನ್ನು,

೧೫ ತಾವೆ (ಈ ಜನರೇ) ಮಾಡುತ್ತಿರಲು—ಅವರ್ಗೆ—ಆ ಕಾಮಾದಿಗಳಿಗೆ, ಭಾವ (ತಮ್ಮ ಮನಸ್ಸಿನ)ದ+ಒಳಪೊಕ್ಕ + ಅರಿಗಳು + ಎಂಬ+ಅನುಭಾವಮಂ+ಕಾಣಿಸದಹಾಗೆ ದುರಾ....ಗಿಹರು—ಹೀಗೆ ಕಪಟದ ಹೊದ್ದಿಕೆಯಿಂದ ಇರುವ ಅವರನ್ನು, ಅವನಾನು+ಓರ್ವ—ಯಾವನಾದರೊಬ್ಬ,

೧೬ ನಿರ್ಭರ—ಪರಮ ಸಂಭ್ರಮದಿಂದ, ....ಆವರಿತ—ವಿವೇಕವೆಂಬ ವಜ್ರಕವಚವನ್ನು

ಅರಿಗಳಂತಸ್ಥರ ವಿಭಾಡಿಪ |
ನರನೆ ಪುರಹರನಾದೊಡಂ ಪಾ-|
ಮರರ ದೃಷ್ಟಿಗೆ ತೋರ ಸಹಜಾಕಾರದಿಂದಂತಂ || ೧೬ ||

ಅವರು ಸಮಚಿತ್ತರು ನಿರೀಹೋ-|
ದ್ದವರು ವಿಗತೇಷಣರು ಶಾಂತರು |
ಶಿವಪದಜ್ಞರು ಧೂತಕಾಮರರಿಷ್ಟರಿಷ್ಟರಲಿ-||
ಭವಣಿಗೊಳ್ಳರು ತತ್ತ್ವದಿಂ ಕಾ-|
ಲವನು ಕಳಿವರ್ನ್ಯಸ್ತಕರ್ಮಫ-|
ಲ ವಿಭವರು ಸಂತುಷ್ಟರವದಿರೆ ಪರಮ ಸಾಧುಗಳು || ೧೭ ||

ಅವರನುಗ್ರಹವೆನ್ನನುಗ್ರಹ-|
ವವರ ಸಂಗತಿಯೆನ್ನ ಸಂಗತಿ-|
ಯವರ ತೋಷಣವೆನ್ನತೋಷಣಮವರ ದರ್ಶನನೆ-||
ಭವಸಮುದ್ರವ ದಾಂಟಿಸುವ ಸು-|
ಪ್ಲವಮೆನುತ್ತ ಧರಾಧರೇಂದ್ರನ |
ಕುವರಿಗೊರೆದಂ ಶಾಂಭವದೆ ಬಾಲೇಂದುಶೇಖರನು || ೧೮ ||

ಇದುವೆತಾಂ ವ್ಯತಿರೇಕ ಲಕ್ಷಣ-|
ಮುದಿತಮೇಧಾಶೀಲರಲಿ ಸ-|
ದ್ಹೃದಯರಲ್ಲನ್ವಯದ ಲಕ್ಷಣಮೆಂತೆನಲ್ಬಿಡದೆ ||

---

ತೊಟ್ಟು, ಗುರುಗಳ ಉಕ್ತಿ—ಉಪದೇಶವೆಂಬ, ಆರಿಗಳ+ಅಂತಸ್ಥರ—ಒಳಶತ್ರುಗಳನ್ನು ವಿಭಾಡಿಪ—ಹೊಡೆದು ಬಾಧಿಸುವ ನರನು ಸಾಕ್ಷಾಚ್ಛಿವನಾಗಿದ್ದರೂ ತನ್ನ ಆ ಶಿವನ ಸ್ವರೂಪದಿಂದ ಹೊರಗೆ ತೋರಿಕೊಳ್ಳುವದಿಲ್ಲ.

೧೭ ನಿರೀಹೋಪ್ದವರು—ಕ್ರಿಯೆಗಳನ್ನೆಲ್ಲ ಬಿಟ್ಟ ವಿಶ್ರಾಂತರು, ವಿಗತೇಷಣರು—ಏಷಣಾತ್ರಯುವಿಲ್ಲದವರು, ... ಜ್ಞರು—ಬಲ್ಲವರು, ಧೂತ—ಚೆನ್ನಾಗಿ ತೊಳೆಯಲ್ಪಟ್ಟ ಕಾಮವುಳ್ಳವರು, ಅರಿಷ್ಟರಿಷ್ಟರಲಿ—ತನಗೆ ಬಂದ ಶುಭಾಶುಭಗಳಲ್ಲಿ, ಭವಣಿ—ಬುದ್ಧಿಭ್ರಮಣೆಗೊಳ್ಳರ , ತತ್ತ್ವವಿಚಾರದಿಂದಲೇ ತಮ್ಮ , ಕಾಲವನು ಕಳಿವರ್+ನ್ಯಸ್ತಕರ್ಮಫಲ—ಮಾಡುತ್ತಿದ್ದರೂ ಕರ್ಮಫಲಗಳನ್ನೆಲ್ಲ ಬಿಟ್ಟಿರುವ, ವಿಭವರು — ಉತ್ಸಾಹಶಾಲಿಗಳು, ಸಂತುಷ್ಟರು + ಅವದಿರೆ—ಹೀಗಿರತಕ್ಕವರೇ,

೧೮ ತೋಷಣಂ—ಸಂತೋಷವೆ, ಎನ್ನ ತೋಷಣಂ—ನನ್ನ ಸಂತೋಷವು, ಸುಪ್ಲವಂ—ದೃಢವಾದ ದೋಣಿಯು, ಧರಾಧರೇಂದ್ರನ—ಪರ್ವತರಾಜನ ಕುಮಾರಿಯಾದ ಪಾರ್ವತೀದೇವಿಗೆ, ಒರೆದಂ—ಹೇಳಿದನು.

೧೯ ವ್ಯತಿರೇಕ—ಮತ್ತೊಬ್ಬರಲ್ಲಿ ಕಾಣುವದಕ್ಕಿಲ್ಲದ ಅನಿತರ ಸಾಧಾರಣ ಲಕ್ಷಣವನ್ನು, ಉದಿತಂ—ಹೇಳಲ್ಪಟ್ಟಿತು, ಮೇಧಾಶೀಲದಲಿ—ಬಲ್ಲ ಜ್ಞಾನಿಗಳಲ್ಲಿ, ಇನ್ನು ಅನ್ವಯದ—ಸ್ವಭಾವ

ಕದಡು ಖಂಡಿಸ ಯಮ ನಿಯಮ ಮು-।
ಖ್ಯದ ಸಮಾಹಿತ ವೃತ್ತಿಯೇ ಚಿ-।
ತ್ತದ ನಿಯತಿಯೆನಲಿಲ್ಲವೇ ಪಾತಂಜಲಂ ತತ್ತ್ವಂ ॥ ೧೯ ॥

ಆಗುವದು ವಿಜ್ಞಾನಶಾಸ್ತ್ರವಿ-।
ದಾಗಲದಕರ್ಥಾಂತರತ್ವಂ-।
ತಾಗುವದು ತಾಗಿರುವದೆಂತೆನೆ, ಯಮದಶಕವೆಂದು ॥
ಹಾಗೆ ನಿಯಮಂ ತತ್ಪ್ರಪಂಚ ವಿ-।
ಭಾಗವೆಂತೆನೆ, ತನ್ನೊಡನೆ ಸಮ-।
ವಾಗದಿರುವ ಪ್ರಾಣಿಗಳ ತಿರ್ಯಕ್ಸ್ವರೂಪಗಳ ॥ ೨೦ ॥

ತಿನಲು ಕೊಲುವದಿದೆಂದು, ಕಾರ್ಯವ-।
ನನುಗೊಳಿಸೆ ಕೊಲುತಿರುವುದೊಂದಾ-।
ಜನರಲಿರೆ ಪಶು ಕನಕ ನಾರೀ ಗ್ರಾಮ ಭೂಮಿಗಳು ॥
ಕನಲಿಕೊಂಡೆಳಕೊಂಬುದೊಂದದು ।
ಅನುಮತಿಗೆ ಬರದವರ ಕೊಂದೇ-।
ನೆನುವದೊಂದಿಳೆಯಲ್ಲಿ ಹಿಂಸೆಯೆನಿಸಿಕೊಳುತ್ತಿಹುವು ॥ ೨೧ ॥

ಇದನು ಬಿಟ್ಟಿರಬೇಕು ತಾನುಡಿ-।
ದುದಕೆ ಕಾಲಾಂತರದೆ ಜನರಿಂ-।
ದೊದಗಿದರು ಕೇಡದರ ದೆಶೆಯಿಂ ಮನೆಗೆ ಮನೆತನಕೆ ॥
ಸುದತಿಯರಿಗಾತ್ಮಜರಿಗಿಷ್ಟ ಸ-।
ಮುದಯಕಾದರು ತನ್ನ ದೇಹ-।
ಕ್ಕೊದಗಿದರು ಬಿಡದಿಹುದೆ ಸತ್ಯವು ಸಾಧುಸಮ್ಮತವು ॥ ೨೨ ॥

---

ದಿಂದಿರುವ ವಿಧೇಯವಾದ, ಲಕ್ಷಣಂ+ಎಂತೆನಲ್+ಬಿಡದೆ, ಕದಡು—ಚಿತ್ತದ ಹರಿದಾಟವನ್ನು, ಸಮಾಹಿತ—ಸಂಗ್ರಹಿಸಲ್ಪಟ್ಟ ಚಿತ್ತೈಕಾಗ್ರತೆಯೆಂಬುದೇ, ನಿಯತಿ—ಚಿತ್ತಸಂಯಮವೆಂದು, ತತ್ತ್ವಂ—ಶಾಸ್ತ್ರಪ್ರಕ್ರಿಯೆಯು,

೨೦ ಆಗುವ....ತತ್ವಂ—ಆದರೆ ವೇದಾಂತಕ್ಕನುಗುಣವಾಗಿ ಆ ಪ್ರಕ್ರಿಯೆಗೆ ಇಲ್ಲಿ ಬೇರೊಂದರ್ಥವೆ ಬಂದು, ತಾಗುವದು—ಸರಿಹೊಂದುವದು, ನಿಯಮವೂ ದಶವಿಧವೆ ಎಂದೂ, ತತ್+ಪ್ರಪಂಚ—ಅದರ ವಿವರದ ವಿಭಾಗ ಹೇಗೆಂದರೆ, ತಿರ್ಯ(ಗ್ಗಾಮಿ)ಕ್—ಅಡ್ಡಲಾಗಿ ನೀರಿನಲ್ಲಿ ಸಂಚರಿಸುವ ಏಡಿ, ಎಸಡಿ, ನಳ್ಳಿ, ಮೀನು ಮತ್ತು ಭೂಮಿಯಲ್ಲಿನ ಮೂಕ ಪಶುಪ್ರಾಣಿಗಳು, ಆಕಾಶದ ಪಕ್ಷಿವಿಶೇಷಗಳು;

೨೧ ಕಾರ್ಯವನು+ಅನುಗೊಳಿಸೆ—ಕೊಲೆಗೆ ಬೇಕಾದ್ದನ್ನು ಸಿದ್ಧಗೊಳಿಸುವದು, ಕನಲಿ—ಕೋಪದಿಂದ,

೨೨ ಸುದತಿಯರಿಗೆ+ಆತ್ಮಜರಿ(ಮಕ್ಕಳಿ)ಗೆ+ಇಷ್ಟಸಮುದಯಕ್ಕಾದರು—ತನ್ನಾಪ್ತ

ಬಿಡದಿರಲ್ಬೇಕಿದನು ಲೋಕದೊ-।
ಳೊಡವೆರದು ಸಂಚರಿಪ ಮಾನವ-।
ರಿಡುತಲೊಬ್ಬಳಿಯಲ್ಲಿ ಮರೆತರಃ ಬೆಳ್ಳಿ, ಚಿನ್ನಗಳ ॥
ಕೊಡುತ ಕೊಳ್ಳುತಲಿರುವ ವ್ಯಾಪೃತಿ-।
ಯೆಡೆಯೊಳೊಮ್ಮೆ ಮರೆದರು ತಾಂ ಕೈ-।
ದುಡುಕನಡಸದಿರುವುದೆ ನೆರೆದಾಸ್ತೇಯಮೆನಿಸುವದು ॥ ೨೩ ॥

ಪಾಲಿಸಲ್ಬೇಕಿದನು ಚಾರು ವಿ-।
ಶಾಲವಂಶದೊಳುದಿಸಿದವನಿವ-।
ನಾಲಯದೆ ತಿರುಗಾಡುತಿರ್ದರು ಮೋಸವಿಲ್ಲೆಂದು ॥
ಮೇಲೆ ನಂಬಿದ ಕರ್ಮನಿಷ್ಠರ ।
ಶಾಲೆಯೊಳಗೆಳೆವೆಣ್ಗಳಂಗಜ-।
ಕಾಲಮೇಘದೊಳೆಸವ ಮಿಂಚಿನ ಜಾಲದಂತಿರುವ ॥ ೨೪ ॥

ಅಂಗದವರನ್ನೋದಕದ ಮದ-।
ದಿಂ ಗಡಿಯ ಮೀರಿದ ಹೃಷೀಕಂ।
ಪೊಂಗುತಿರೆ, ಕಡೆಗಣ್ಣ ಕುಡಿಯಿಂ ನೋಡಿ ನೋಟಕ್ಕೆ-॥
ಇಂಗಿತಂ ತಿಳಿಯದಿರೆ ಹತ್ತಿರ-।
ಕಂ ಗಮಿಸಿ ನಸುನಕ್ಕು, ನಗೆಗಂ।
ಸಿಂಗರಂಬಡೆದೆಸೆವ ಲೀಲಾಳಾಪವಂ ಬೀರಿ ॥ ೨೫ ॥

---

ಬಂಧುಮಿತ್ರರಿಗಾವರೂ ಕೇಡು ತನ್ನ ದೇಹಕ್ಕೊದಗಿಬಂದರೂ ತಾನು ನುಡಿದ ಮಾತನ್ನು ಮಾತ ಎಂದಿಗೂ ಬಿಡದಂತಿರುವವೆ ಸತ್ಯ.

೨೩ ಬಿಡದೆ+ಇರಲ್+ ಬೇಕು+ಇದನು+ಲೋಕದೊಳು+ಒಡವೆರದು—ಮತ್ತೊಬ್ಬರನ್ನು ತಾನು ಜತೆಗೂಡಿ, ಮಾನವರು+ಇಡುತಲಿ+ಒಬ್ಬಳಿ—ಒಂದುಬಳಿಯಲ್ಲಿ, ವ್ಯಾಪೃತಿಯ+ಎಡೆಯೊಳು—ವ್ಯಾಪಾರದ ಅಂಗಡಿಗಳಲ್ಲಿ, ನೆರೆದ—ಅಧಿಕವಾದ, ಅಸ್ತೇಯಂ+ಎನಿಸುವದು.

೨೪ ಚಾರು (ಶುದ್ಧ) ವಂಶದೊಳು+ಉದಿಸಿದವನು+ಇವನು+ಆಲಯ .... ಶಾಲೆಯೊಳಗೆ+ಎಳೆವೆಣ್ಗಳು+ಅಂಗಜ—ಕಾಮನೆಂಬ ವರ್ಷಾಕಾಲದ ಕಾರ್ಮುಗಿಲಿನ ಮಿಂಚಿನ ಬಳ್ಳಿಗಳ ಸಾಲುಗಳಂತೆ ನೇತ್ರಾನಂದಕರವಾದ ರೂಪು ಶೀಲಾದಿ ಲಾವಣ್ಯಗಳಿಂದ ಕಂಗೊಳಿಸುವ ಗೌರವ ವರ್ಣದ ಕೋಮಲ ಶರೀರವುಳ್ಳ ಪ್ರಾಯ ನೆರೆದ ನವಕನ್ನಿಕೆಯರು.

೨೫ ಕಾಮವಿಕಾರಕ್ಕೆ ಪರವಶ ಹೊಂದಿ ಚಪಲಗೊಂಡಿರುವ, ಹೃಷೀಕಂಪೊಂಗುತಿರೆ—ತನ್ನ ಕೈಕಳಚಿಕೊಂಡು ಇಂದ್ರಿಯವು ಹೋಗುತ್ತಿರುವ ಆ ಕನ್ನಿಕೆಯರ, ನಗೆಗಂ—ಮಂದಹಾಸದ ನಸುನಗೆಗೂ, ಸಿಂಗರಂಬಡೆದು—ಅಲಂಕರಿಸಿಕೊಂಡು, ಎಸೆವ—ಹರಡುವ, ಬೀರುವ; ಲೀಲಾ—ವಿನೋದ ವಿಲಾಸ—ಕಾಮನ ಕೇಳಿವಿಶೇಷಗಳನ್ನು, ಆಳಾಪವಂ—ಮನಮೆಚ್ಚುವ ಗುಹ್ಯ **ಭಾಷಣೆ**ಗಳನ್ನು, ಬೀರಿ—ಹೊರಚೆಲ್ಲಿ,

ಅಡಕೆಲೆಯ ತಂದಿತ್ತು, ತುಪ್ಪದೊ-।
ಳಡಗೆಯಾದುದ ತಿನಿಸಿ, ಜನರಾ-।
ರೆಡಬಲದೊಳಿರದಿರಲು ಮೈಗಂ ಮೈಯ್ಯ ನೆರೆ ಚಾಚಿ ॥
ತುಡುಕಿ ಕೈಯಂ ಪಿಡಿದು, ಮುದ್ದಿಪ ।
ಕಡೆಯ ಕಾರ್ಯದೊಳೊಗ್ಗದಿಹುದನ-।
ಜಡರು ಪೇಳ್ವರು ಬ್ರಹ್ಮಚರ್ಯಮೆನುತ್ತ ಮನವುಟ್ಟಿ ॥ ೨೬ ॥

ಹರಿಯುದಂತಿಡಬೇಕಿದನು ಸಾ-।
ಗರಗಳುಬ್ಬೆದ್ದೊಡನೆ ಮೇರೆಯ ।
ಕರೆಯು ದಾಂಟಿದೊಡಂ ಶಿಲಾವರ್ಷಂಗಳೆಡೆಯೆಡೆಯೋಳ್-॥
ಹರಿಯಲಾಯುಧಧಾರೆಗಳ ಕಿರು-।
ಮುರುಕು ಬೀಳುತ್ತಿರ್ದೊಡಂ ಬೇ-।
ಸರಗೊಳದ ಸಜ್ಜನರ ಚಾರುಮನಂ ಮನಂಗೊಂಡು ॥ ೨೭ ॥

ಸಜ್ಜನರು ಪರತಾಪದಿಂದಂ ।
ಪಜ್ಜಳಿಪುದಂ ನೋಡಿ ಸಹಿಸದು ।
ಹೆಜ್ಜೆಹೆಜ್ಜೆಗೆ ಕರಗುವದು ನೀರಾಗಿಯದು ತಾನೆ ॥
ಮುಜ್ಜಗದೆ ದಯೆಯೆಂಬ ಪೆಸರಿಂ-।
ದುಜ್ಜಳಿಪುದಿದನಾವನಾತ್ಮ ವಿ-।
ಪಜ್ಜಯಕೆ ಸಂಪಾದಿಸುವನವನಮರರೋಳ್ಗಣ್ಯಂ ॥ ೨೮ ॥

ಧೀರರೊಳಗಿರುವಾರ್ಜವಂ ಕ-।
ರ್ಪೂರಮಂ ಸಮಮಾದೊಡಂ ಕ-।
ರ್ಪೂರಮಾಧಿಕ್ಯಂಬಡೆಯೆ ಕೊಲ್ಲುವದು ಘನತೆಯನು ॥

---

೨೬ ನೆರೆ—ನಿರ್ಭಯವಾಗಿ, ಚಾಚಿ—ತನ್ನ ಮೈಯ್ಯನ್ನು ಮುಂದಕ್ಕೊಡ್ಡಿ, ಸೋಕಿಸಿ; ತುಡುಕಿ—ತನ್ನ ಕೈಯ್ಯನ್ನು ಗಟ್ಟಿಯಾಗಿ ಹಿಡಿದು, ....ಕಾರ್ಯದೊಳು(—ಮಾತ್ರ ತನ್ನ ಮನಸ್ಸೆಂದಿಗೂ ಅದಕ್ಕೊಲಿದು)+ಒಗ್ಗದಿಹುದನು+ಅಜಡರು—ವಿವೇಕಿಗಳು.

೨೮ ಪರ (ಮತ್ತೊಬ್ಬರು ಕೊಡುವ) + ತಾಪದಿಂದಂ+ಪಜ್ಜಳಿಪುದಂ—ಉರಿಗೊಂಡು ಸಜ್ಜನರು, ಅಥವಾ ಅನ್ಯರು ಸಂಕಟಪಡುತ್ತಿದ್ದರೆ ಅದನ್ನು ಕಂಡು ಸಹಿಸದಿರುವದೆಂಬುದೆ, ಮುಜ್ಜಗದೆ—ಮೂರುಲೋಕಗಳಲ್ಲಿಯೂ ದಯೆಯೆಂಬ ಪೆಸರಿಂದ+ಉಜ್ಜಳಿಪುದು—ಮೇಲೆದ್ದು ಬೆಳಗುವದು ಇದನು+ಆವನು+ಆತ್ಮವಿಪತ್+ಜಯಕೆ—ತನ್ನ ಸಂಸಾರಾನರ್ಥದನಾಶಕ್ಕಾಗಿ, ಸಂಪಾದಿಸುವನು+ಅವನು+ಅಮರರೋಳ್+ಗಣ್ಯಂ—ದೇವತೆಗಳಲ್ಲೊಬ್ಬನಾಗಿ ಎಣಿಸಲ್ತಕ್ಕವನು.

೨೯ ಆರ್ಜವಂ—ಸರಳಹೃದಯವು, ಪ್ರಾಮಾಣಿಕತನವು; ಘನತೆ—ತನ್ನ ಸೇರಿದ ವಸ್ತುವಿನ ಅಧಿಕತ್ವವನ್ನು, ....ಸಂಗಂಬಡೆಯೆ—ಸತ್ಪುರುಷರ ಸಂಗ ಮಾತ್ರ, ತನಗೆಂದಿಗೂ ಕೊಲೆಯು—ಕೆಡಿಸುವದಿಲ್ಲವಾದ್ದರಿಂದ ಆ ಸತ್ಸಂಗವನ್ನೆ ಒಡನೆ ತಾನು ಅರಯಿ(ಹುಡುಕು)ವುದು+ಎಂದು +ಉಸಿರಿದರು.

ಧೀರರಸಂಗಂ ಬಡೆಯೆ ಕೊಲದೊಡ- ।
ನಾರಯಿವುದೆಂದುಸಿರಿದರು ವಿ-।
ಸ್ತಾರಗೀತಾ ಟೀಕೆಯಲಿ ಜ್ಞಾನೇಶ್ವರರ್ಭರದಿಂ ॥ ೨೯ ॥

ಕಲ್ಲಿನಲಿ ಬಿರುಪಿರ್ದೊಡಂ ಮರ-।
ದಲ್ಲಿ ಕಡು ಡೊಂಕಿರ್ದೊಡಂ ಎಳೆ-।
ಯಲ್ಲಿ ಕಸವೊತ್ತಿರ್ದೊಡಂ ಟಂಕದಲಿ ಬಾಚಿಯಲಿ ॥
ಮೆಲ್ಲನುಗುರ್ಗೊನೆಗಳಲಿ ತಿದ್ದ-।
ಲ್ಬಲ್ಲರೀ ನರರಲ್ಲನಾರ್ಜವ-।
ಮುಳ್ಳವರನಾರಿಂದ ತಿದ್ದಲ್ಕೂಡದಾಗಿಹುದು ॥ ೩೦ ॥

ಸರಳನಾಗಿರಬೇಕು ಮಾನವ-।
ನಿರುವಕಾಲದೊಳಿರದ ದೆಶೆಯಿಂ ।
ಹೊರಗೆ ಬಾಳುವ ಪುರಜನರ ಪರಿಜನರ ದೆಶೆಯಿಂದ-॥
ಕರಕರೆಯು ಬಂದೊದಗಿದರು ನಿ-।
ಷ್ಠುರ ವಚನದಿಂದವರ ಸಹಿಸ-।
ಲ್ಬರುವ ಮೇಧಾಸ್ಥಿತಿಯೆ ಕ್ಷಮೆಯದು ಬಿಡದಿರಲ್ಬೇಕು ॥ ೩೧ ॥

ಅಲ್ಪಹಾನಿಯು ಬರುತಲಿರಲದ-।
ನಲ್ಪವೆಂದೆನಿಸುವದು ಭೀತಿಯು ।
ಮೇಲ್ಪಿಡಿಯೆ ಚಿತ್ತಕ್ಕೆ, ಭೀತಿಯನರ್ಥಕಾರಣವು-॥
ಕಲ್ಪಿಸುವುದದರಿಂದ ಸಿಗಮುದ ।
ಜಲ್ಪದಿಂದಾರ್ಯಾನುಭವ ಸಂ-।
ಕಲ್ಪದಿಂ ಧೃತಿಯೊಂದೆ ಧರಿಸಲ್ಬೇಕು ಮೋಕ್ಷಾರ್ಥಿ ॥ ೩೨ ॥

---

೩೦ ಬಿರುಪು (ಬಿರುಸು-ಬಿರಿಸು-ಗಟ್ಟಿತನ)+ಇರ್ದೊಡಂ, ಟಂಕ—ಕಲ್ಲುಳಿ, ಬಾಚಿ—ಮರವನ್ನು ಕೆತ್ತುವ ಸಾಧನ—ಉಳಿ, ಮುಚ್ಚು; ತಿದ್ದಲ್+ಬಲ್ಲರು+ಈ ನರರಲ್ಲಿ+ಅನಾರ್ಜವಂ+ಉಳ್ಳವರನು+ಆರಿಂದ—ಯಾವನೊಬ್ಬನಿಂದಲೂ,

೩೧ ಸರಳನು—ನೇರಾದ ಹೃದಯನು,....ದೊಳು+ಇರದ—ಎಲ್ಲರಲ್ಲಿಯೂ ಅದು ಇರುವದಿಲ್ಲವಾದ್ದರಿಂದ, ಪರಿ(ತನ್ನ ನೆರೆಹೊರೆಯ)ಜನರ....ಂದ+ಕರಕರೆ–ವ್ಯಸನಗಳು, ಮೇಧಾಸ್ಥಿತಿ—ತನ್ನ ಬುದ್ಧಿಬಲವೊಂದೇ.

೩೨ ....ಲಿರಲು+ಅದ+ಅನಲ್ಪ(ಅಪಾರ)ವು+ಎಂದು, ....ಜಲ್ಪ(—ಶಾಸ್ತ್ರಕಥನ)ದಿಂದ+ಆರ್ಯ—ಗುರು ಮತ್ತು ಅನುಭವ ಇವುಗಳ ಹಿನ್ನೆಲೆಯಲ್ಲಿ ತನಗೆ ಜ್ಞಾನ ಬರುವವರೆಗೂ ಧೃತಿಯನ್ನು ತಾನು ಧರಿಸಿರಬೇಕು.

೩೩ ಒಯ್ಯನು (—ಸಂಭ್ರಮನು, ಕಾಂತಿಹೀನನು)+ಆಗುತೆ, ಒಯ್ಯನೊಯ್ಯನೆ—

ಕೈಯ್ಯಮಾರುಣ್ಣುವರು, ಕೆಲಬ-।
ರ್ಮೈಯ್ಯ ಮಾರುಣ್ಣುವರು, ಕೆಲಬ-।
ರ್ಪೊಯ್ಯನಾಗುತೆ ನಾಲಿಗೆಯನುಂ ಕಣ್ಣನುಂ ಕಾಲುಂ ॥
ಒಯ್ಯನೊಯ್ಯನೆ ತೂರಿ ಹೊಟ್ಟೆಯ-।
ನಯ್ಯೊ! ರಕ್ಷಿಸುತಿಹರವರ್ಕಳ-।
ಕಾರ್ಯದೊಳ್ಪಲಮಾವುದಾದುದು ಕಾರ್ಯಮೆಂದುದಕೆ! ॥ ೩೩ ॥

ಫಲಗಳೆಂಡಾಯ್ತಾವುದೆನೆ, ತಾಂ-।
ಸಲಹಿದೊಡಲೇನುಳಿದುದಿಲ್ಲಾ-।
ಕೆಲಸಗಳ ಮಧ್ಯದಲಿ ಪುಣ್ಯಕ್ಕಿಲ್ಲ ಬರವಣಿಗೆ ॥
ಖಲರ ಕೃತ್ಯವಿದೆಂದು ಭೈಕ್ಷವ ।
ಬಳಸುವುದು ಬಲ್ಲವನು, ಪರರಂ ।
ಬಳಲಿಸುವುದಲ್ಲಾತ್ಮಕಷ್ಟವನೈದಿಸುವುದಲ್ಲ ॥ ೩೪ ॥

ಹೊರಗೆ ಸೋರುವುದಿಂದ್ರಿಯಂಗಳ-।
ತೆರದ ಬಾಗಿಲ್ಗಳಲಿ ಮಲವದ-।
ನೊರಸುವದು ಶುಚಿಯಾದ ಮೃತ್ತಿಕೆಯಿಂದ ಜಲದಿಂದ-॥
ನರರು ಶೌಚಮೆನುತ್ತ ಪೇಳು-।
ತ್ತಿರುವರಿರಲದು ಲೌಕಿಕರ ಹಂ-।
ಡಿರಿಗೆ ಮೇಣವರಲ್ಲಿರುವ ಧನಕನಕ ವಾಹನಕೆ- ॥ ೩೫ ॥

ಅಪಹರಿಸಬೇಕೆಂದು ಹರಿದಾ-।
ಡಿಪ ಮನದ ಕಾಂಕ್ಷೆಯನು ವಿರತಿಯ ।
ಕಪಿಲಧಾರಾ ತೀರ್ಥದಿಂ ತಾಂ ತೊಳೆವುದೇ ಶೌಚಂ ॥
ನಿಪುಣ ಕೇಳ್ಯಮ ದಶಕವಿದು, ವಿ-।
ಷ್ಟಪದೊಳುತ್ತಮರಾಚರಿಸಿದ ನಿ-।
ರುಪಮ ಮಾರ್ಗವಿದಿದರೊಳನ್ವಯಮಾಗೆ ಸುಖಮಹುದು ॥ ೩೬ ॥

ಕೊಬ್ಬಿಸಲ್ಬಾರದು ತನುವನಿದ-।
ಕೊಬ್ಬರಾಸ್ತರಿರುವರೆ, ಕಾಲನ-।
ಹೆಬ್ಬಕಿದು ಕುರಿಯೆನಿಪುದಿದರಿಂದಿದರ ಸೊಕ್ಕಡಗೆ-॥

---

ಮೆಲ್ಲಮೆಲ್ಲನೆ, ತೂರಿ—ತುರುಕಿ, ....ಸುತ+ಇಹರು+ಅವರ್ಕಳ—ಅವರ, ಕಾರ್ಯಂ—ತನ್ನ ಕಾರ್ಯಗೌರವದ ಘನತೆಗೆ.

೩೬....೪೦ ವಿಷ್ಟಪದೊಳು –ಜಗತ್ತಿನಲ್ಲಿ, ಇದರೊಳು—ಈ ಯಮಾದಿಗಳಲ್ಲಿ, ಅನ್ವಯಂ—ತಾನು ಕೂಡಿಕೊಂಡರೆ; ೩೭–ಉಬ್ಬಸಂ—ನಾಶಪ್ರ, ಬಹುದು—ಬರುವನು, ನಿಬ್ಬಣಕೆ—

ಉಬ್ಬಸಂ ಬಹುದಖಿಲ ಪಾಪದ-।
ನಿಬ್ಬಣಕೆ ಮೇಣದು ವ್ರತಂಗಳ ।
ತಿಬ್ಬದುರಿಯಿಂ ಕೂಡಲದ ತಪವೆಂದು ಪೇಳುವರು ॥ ೩೭ ॥

ಆಗದಾಗುತ್ತಿರದು, ಮೇಣೊಡ-।
ನಾಗುವದು ಬಾರದೆ ನಿಲದು. ಸುಖ ।
ವಾಗುವಾಗೆಸೆಯದು ಕಿಟುಕು, ಕಿಟುಕೆಸೆವ ಕಾಲದಲಿ-॥
ಆಗದಾ ಸೊಗವಿದನರಿದು ಮನ-।
ಕಾಗಬೇಕೇ ವ್ಯಥೆಯೆನುತ ಚಂ-।
ನ್ನಾಗಿರುವುದೇ ಮತಿಯು ನಿಜಸಂತೋಷವೆನಿಸುವುದು ॥ ೩೮ ॥

ಈಗ ಮಾಡಿದ ಸುವ್ರತವು ಸ-।
ತ್ಯಾಗವುಂ ಪರಲೋಕದಲ್ಲಿ ಸ-।
ರಾಗವೆನಿಸಿ ಸಹಸ್ರ ಲಕ್ಷಾವಧಿಕವಾಗಿಹುದು-॥
ಭೋಗವಮಯದಿಂದೆಂಬ ಸುಪುರಾ-।
ಣಾಗಮೋಕ್ತಿಗಳಲ್ಲಿ ನಂಬಿಗೆ-।
ಯೋ ಗಮಿಪುದಾಸ್ತಿಕ್ಯವದಿದೆಂತೆಂಬ ನಾಮವನು ॥ ೩೯ ॥

ಚಿಪ್ಪುಗಳು ಮೌಕ್ತಿಕದ ಬಾಯ್ಬಿಡು-।
ತಿಪ್ಪತೆರದಿಂ ಸ್ವಾತಿ ವೃಷ್ಟಿಗೆ ।
ಸೊಪ್ಪಡಗಿದಾಶಯದಿ ದೀನ ಸಮೂಹವೀಕ್ಷಿಪುದು-॥
ಇಪ್ಪವನ ಕಣ್ಗೊನೆಯ ಮೊಗಮಂ ।
ತಪ್ಪದೇ ಕೈಯಿಂ, ತದರ್ಥವ-।
ನೆಪ್ಪುಗೊಂಡೀವವನೆ ಧನ್ಯನು ಮೂರುಲೋಕದಲಿ ! ॥ ೪೦ ॥

ದಾನವಿಲ್ಲದ ನರನು ಸುಫಲ ವಿ-।
ತಾನದಿಂ ಪೊರಗಾದ ತರು, ಕುಸು ।
ಮಾನುಕೂಲತೆಯಿಲ್ಲದಿಹ ವಾಸಂತಿಕೋದ್ಯಾನ,॥

---

ಸಮೂಹಕ್ಕೆ, ....ತಿಬ್ಬದುರಿಯಿಂ—ತೀವ್ರವಾದ ಉರಿಯಿಂದ; ೩೮-ಸುಖವಾಗುವಾಗ+ಎಸೆಯದು—ಹುಟ್ಟಿ ಶೋಭಿಸದು, ಕಿಟುಕು—ಚಿತ್ತವನ್ನು ಕ್ಷೋಭೆಪಡಿಸುವ ದುಃಖವು, ಕಿಟುಕು+ಎಸೆವ—ಉಂಟಾಗಿ ಶೋಭಿಸುವ, ಆಗದು+ಆಸೊಗಂ—ಆ ಸುಖವಾಗುವದಿಲ್ಲ, ಎಂಬಿದನು+ಅರಿದು; ೩೯-ಸತ್ಯಾಗವುಂ—ಸತ್ಪಾತ್ರದಾನವು, ಗಮಿಪುದು—ಹೊಂದುವದು; ೪೦-ಮುತ್ತಿನ ಚಿಪ್ಪುಗಳು ಸ್ವಾತಿ ಮಳೆಯಹನಿಗೆ ಬಾಯ್ಬಾಯಿ ಬಿಡುತ್ತಿರುವಂತೆಯೇ, ಸೊ(ಕ್ಕು)ಪ್ಪು+ಅಡಗಿದ——ದೈನ್ಯಮುಖವಿಟ್ಟು, ಈಕ್ಷಿಪುದು—ನೋಡುತ್ತಿರುವದು, ಇಪ್ಪವನ+ಕೊಡುವವನ, ನೆಪ್ಪು ನೆನಪು, ಗುರ್ತುಗೊಂಡು. ಈವವನೆ—ಕೊಡತಕ್ಕವನೆ.

೪೧ ಸುಫಲ....ಗಾದ-ಹೂಗಾಯಿ ಹಣ್ಣುಗಳಿಲ್ಲದ, ಸರ್ವಪದೀನ....ಅಪಾನಂ-ಬಿಸಿಲಿನಿಂದ

ಭಾನುವಿನ ಬೇಗೆಯಲಿ ಸರ್ವಪ-।
ದೀನವಾಗಿರುವಂಬುವಳಿದ ಅ-।
ಪಾನಮಾತ್ಮೇಶ್ವರನ ದೆಶೆಯಿಂ ತೊಲಗಿದೆಳೆವೆಣ್ಣು; ॥ ೪೧ ॥

ಅಡಿಯನಿಟ್ಟರೆ ತಡೆಯಲಾರದೆ ।
ಪೊಡವಿಯಂ ನೆರೆಗೈದ ತೇರೊಡ ।
ನೊಡೆದುದಿಬ್ಬಗೆಯಾಗಿಯಾಜಗದೀಶನೀ ಧರೆಯೋಳ್-॥
ಕುಡಿತೆ ನೀರಿಗೆ, ಕುಸುಮವೊಂದಕೆ, ।
ಕುಡಿಯ ಚಿಗುರಿಗೆ ಮೆಚ್ಚಿ ತಾಂ ಕೈ-।
ವಿಡಿದ ಜೀವರನೆಂಬ ನಿಗಮಾಗಮಂಗಳ ಕೇಳಿ- ॥ ೪೨ ॥

ಯಾಕೆ ಪೂಜೆಯ ಮಾಡರವದಿರ-।
ಲೋಕಲೋಕಂಗಳಲಿ ಗೈದ ಪು-।
ರಾಕೃತಕ್ಕೊಡವೆರೆಯದೋ ಪರಿಪಾಕವೀವರಿಗೆ! ॥
ನಾಕಪದವಿಯ ಬಯಸುವರೆ ಶಿವ-।
ಲೋಕಪದವಿಯ ಬಯಸುವರೆ ಜಗ-।
ದೇಕ ದೈವದ ಪೂಜೆಯಂ ಮಾಡುವರು ಬಲ್ಲವರು ॥ ೪೩ ॥

ಹಿಂದೆ ಮಾಡಿದ ದುರಿತ ವಿಪಿನಂ-।
ಬೆಂದುಹೋದುದು, ದಿನದಿನಕೆ ವೃಷ-।
ನಂದನಂ ಚಿಗುರುವುದು ಕುಸುಮಿಸುವದು ಫಲಿಸುತಿಹುದು, ॥

---

ನೀರೆಲ್ಲ ಬತ್ತಿಹೋಗಿರುವ ಕೆರೆಯು, ಆತ್ಮೇಶ್ವರನ—ಗಂಡನನ್ನಗಲಿರುವ ಎಳೆಯ ಪ್ರಾಯದ ಹೆಣ್ಣು—ಇವುಗಳಂತೆ ದಾನವಿಲ್ಲದ ನರನೂ ಶೋಭಿಸುವದಿಲ್ಲ.

೪೨ ಅಡಿಯ....ಯಿಂ—ಬಲಿಚಕ್ರವರ್ತಿಯನ್ನನುಗ್ರಹಿಸಿದ ತ್ರಿವಿಕ್ರಮನು (ಭಾಗವತ ೮–೧೮ ರಿಂದ ೨೨); ನೆರೆಗೈದ–ತನಗೆ ಸಮೀಪಿಸಿದ್ದ, ತೇರು+ಒಡೆದುದು+ಇಬ್ಬಗೆಯಾಗಿ(ಶಕಟಾಸುರನನ್ನು ಭಂಜನಪಡಿಸಿದ ಭಾಗವತ ೧೦–೭) ಆ ಜಗದೀಶ್ವರನು–ಶ್ರೀಕೃಷ್ಣನು, ಕುಡಿತೆ–ಒಂದು ಕೈಬೊಗಸೆಯ ನೀರಿಗೆ, ಕುಡಿಯ ಚಿಗುರಿಗೆ—ಚಿಗುರಿನ ಕೊನೆಯೊಂದಕ್ಕೆ, ಎಂದರೆ ಭಕ್ತಿಗೆ ಒಲಿದು ಕಾಪಾಡಿದನೆಂದು ಭಾವವು.

೪೩ ಅವದಿರ–ಆ ಜೀವರ, ಲೋಕಲೋಕಂಗಳಲಿ—ಜನ್ಮಜನ್ಮಾಂತರಗಳಲ್ಲಿ, ಗೈದ ಪುರಾಕೃತಕ್ಕೆ+ಒಡೆವೆರೆ......—ತನ್ನನ್ನು ಬಿಟ್ಟು ಇನ್ನೂ ಪಾಪವು ತೊಲಗಿಲ್ಲವೋ ಏನೋ? ನಾಕ—ಸ್ವರ್ಗ ಪರಾಭಕ್ತಿಯ ಸವಿ ಬಲ್ಲ ಭಕ್ತರು—ಪರಮಾತ್ಮನನ್ನು ಬಿಟ್ಟು, ಬ್ರಹ್ಮಲೋಕಾಂತದವರೆಗಿನ ದಿವ್ಯ ಸಂಪತ್ತುಗಳು, ಭೋಗವಿಶೇಷಗಳು, ಪುನರಾವೃತ್ತಿಯಿಲ್ಲದ ಕೈವಲ್ಯವು ಇವುಗಳಲ್ಲೊಂದನ್ನೂ ಬಯಸರು (ಭಾಗವತ).

೪೪....೫೪—ದುರಿತ ವಿಪಿನಂ—ಪಾಪದ ಕಾಡು, ವೃಷ—ಪುಣ್ಯದ ನಂದನವನವು, ಕಳೆ—ಶಾಂತಿಯೆಂಬ ಕಾಂತಿಯು ಹೊರಸೂಸುತ್ತಿರುವದು; ೪೫–ಶ್ರಾವಕರ—ತಿಳಿಸತಕ್ಕವರ, ಜಟಾ....

ಅಂದಿಗಂದಿಗೆ ಶಾಂತಿಕಳೆ ಬಾ-।
ಲೇಂದುಧರನ ಕೃಪಾ ಕಟಾಕ್ಷದಿ ।
ಮುಂದುವರಿವುದು ಪೂಜೆಯಂ ಬಿಡಬಾರದುತ್ತಮರು    ॥ ೪೪ ॥

ಯಾವನಿಂದಾದುದು ಜಗತ್ತಾ-।
ದೇವನದ್ಭುತಚರಿತವನ್ನೀ-।
ಶ್ರಾವಕರ ದೆಶೆಯಿಂದ ಕೇಳುವುದುತ್ತಮೋತ್ತಮವು ॥
ಶ್ರಾವಣ ಪ್ರತ್ಯಕ್ಷನಾದ ಜ-।
ಟಾವಬದ್ಧಕಪರ್ದಮಕುಟಂ ।
ದೇವಿಯರ ಕೈವಿಡಿದು ನಿಂದಿಹನವರ ಹೃದಯದಲಿ    ॥ ೪೫ ॥

ಜನರೊಡಂಬಡದಿರುವ ಕಾರ್ಯವ ।
ಮುನಿಗಳೊಪ್ಪದ ಕೆಲಸವನು ಜನ-।
ಜನಿತ ಶಾಸ್ತ್ರ ಪುರಾಣಗಳಲಾರೈದು ವೆಗ್ಗಳಿಸಿ ॥
ಮನವ ಮೋಹಕೆ ತಂದು ಮಾಡಿಪ ।
ಘನತರ ಪ್ರಾರಬ್ಧದೋಷಕೆ ।
ತೊನೆದು ತಪ್ಪಿಸಿಕೊಳ್ಳಲಾರದಿರಲ್ಕಿರಲಿ ಮನುಜಂ    ॥ ೪೬ ॥

ಉತ್ತಮರ ಕಂಡಾಗ ತಾಂ ತಲೆ-।
ಯೆತ್ತಿ ನಡೆಯಲ್ಬಾರದವದಿರೊ-।
ಳುತ್ತರಕೆ ಪ್ರತ್ಯುತ್ತರಂಗೊಡದಿರ್ಪನೇ ನರರೋಳ್-॥
ಉತ್ತಮನು, ಮೇಣ್ನಾಚಿಕೆಯ ಕಳಿ-।
ದೆತ್ತಲಾಂ ತಾಂ ಬಾಳಿದೊಡವಂ ।
ಕತ್ತೆಯಲ್ಲದೆ, ಮನುಜ ಜಾತಿಯೊಳುದಿಸಬಾರದಲ!    ॥ ೪೭ ॥

ಮುಳ್ಳುಪೊದೆಯಂ ಪೊಗಿಸಿ ರಂಭಾ-।
ಪಲ್ಲವವ ಹರಿಯದವೋಲೀಚೆಗೆ ।
ಕೊಳ್ಳಬಹುದಧಮರ ಮಹಾ ಪಾಷಂಡವರ್ತನರ ॥
ಬಲ್ಲವರ ಹಾಗಿರ್ದು ಸತ್ಯವ-।
ಪಲ್ಲವಿಸುವರಕೂಡಿ ಬುದ್ಧಿಗೆ ।
ಒಳ್ಳೆಯತನಂ ಕೂಡದೆಂಬುದೆ ಸುಮತಿಯೆನಿಸುವದು    ॥ ೪೮ ॥

---

ಮಕುಟಂ—ಗಂಗಾಜಲದಿಂದ ತೊಯ್ಯಲ್ಪಟ್ಟ ಮುಡಿಯೇ ತನ್ನ ಕಿರೀಟವಾಗುಳ್ಳ ಶಿವನು; ೪೬-ಜನಜನಿತ—ಒಬ್ಬರಿಂದೊಬ್ಬರಿಗೆ ತಿಳಿದುಬಂದಿರುವ, ಆರೈದು—ಹುಡುಕಿ, ವೆಗ್ಗಳಿಸಿ ಹೆಚ್ಚಿನವನಾಗಿ, ಘನ....ತೊನೆದು—ಬಲವಾದ ಪ್ರಾರಬ್ಧದೋಷಕ್ಕೆ ತೂಗು-ಕಟ್ಟು-ಬಿದ್ದು; ೪೮-ರಂಭಾಪಲ್ಲವ—ಬಾಳೆಯೆಲೆಯನ್ನು, ಪಲ್ಲವಿಸುವರ—ವಿಕಾಸಪಡಿಸತಕ್ಕವರ ಜತೆಗೂಡಿದ್ದರೆ ತನಗೆಂದಿಗೂ

ಮುಕುರದಲಿ ದಂತಾವಳಂ ಕಾ-|
ಣಿಕೆಗೆ ಬಂದಂದದಲಿ, ವಟತರು |
ಸುಕಣ ಭೂತಮೆನಿಪ್ಪದರ ಬೀಜದೊಳಗಿರುವಂತೆ ||
ಸಕಲ ಲೋಕಾತ್ಮಕ ಶರೀರನು |
ಶಕಲ ಚಂದ್ರಾಪೀಡ ಪಂಚಾ-|
ರ್ಣಕರಣದಲ್ಲಿರ್ಪನೆಂದು ಜಪಿಸುವದೆ ಜಪಮುಕ್ಕುಂ || ೪೯ ||

ಗುರುವಿನುಪದೇಶವನು ಪೊರ್ದದೆ, |
ಪೊರಗಿರದೆ ತಾನೆಲ್ಲಿ ಪೋಗು-|
ತ್ತಿರಲು ಬೆನ್ನಂ ಬಿಡದೆ, ನಿಲ್ಲದೆಯೊಂದುವೇಳೆಯಲಿ-||
ತಿರುಗುವಜಪಾ ಮಂತ್ರವನ್ನು-|
ಚ್ಚರಿಪುದುಂಟೇ ಹೀಗಿರುವುದೆಂ–|
ದರಿದುದೇ ಜಪವಕ್ಕು ಪ್ರಾಯಶ್ಚಿತ್ತಮಿದು ಭವಕೆ || ೫೦ ||

ಗುರುಪುರಸ್ಸರಮಾಗಿ ಮಂತ್ರಾ-|
ಕ್ಷರ ಸಮನ್ವಿತಮಾಗಿ ವ್ರತಮಂ |
ಧರಿಸಿದುದನಾ ಮರಣ ಪರ್ಯಂತಂ ನಡಸುತಿಹುದೆ-||
ಪರತರವ್ರತಮೆಂದರೀ ಶ್ರುತಿ-|
ಶಿರಗಳಿಂದವು ಭಸ್ಮಧಾರಣ-|
ವರಣಮೆ ಶಿರೋವ್ರತಮೆನುತ್ತಂ ತಮ್ಮಕರವೆತ್ತಿ || ೫೧ ||

ಯೋಗಶಾಸ್ತ್ರದೊಳಿಂತು ಬಹುವಿಧ-|
ಮಾಗಿ ಪೇಳಿದನಾ ಪತಂಜಲಿ |
ಯೋಗಿಯದನಹುದಹುದೆನುತ್ತೊಪ್ಪಿದರು ಮುನಿವರರು ||
ಭಾಗಿಸಿದರಿದ ಚಿತ್ತನೊಳಗದ-|
ರಾಗಮುನವೆಂತೆನಲು, ಕೇಳು ಸ-|
ರಾಗದಿಂದಚ್ಛೇದ್ಯನಾತ್ಮಂ ಸರ್ವಭಾವಗಳಿಂ- || ೫೨ ||

ಎಂದು ತಿಳಿವುದಹಿಂಸೆ, ಬೊಮ್ಮವಿ-|
ದೊಂದು ಸರ್ವದೆ ನಿತ್ಯವೆನುವದ-|
ರಿಂದ ಸತ್ಯಂ, ಭೂತವಿಕೃತಿಯ ತಾನೆನುತ ನಟಿಪಾ-||

---

ಸದ್ಬುದ್ಧಿಯು ಬರುವುದಿಲ್ಲ; ೪೯–ದಂತಾವಳಂ—ಹಲ್ಲುಗಳ ಸಾಲು ಕಂಡುಬಂದಂತೆ, ಸುಕಣ ಭೂತಂ—ತೀರ ಸಣ್ಣದಾದ, ಶಕಲಚಂದ್ರ—ಚಂದ್ರನ ರೇಖೆಯನ್ನೇ, ಆಪೀಡ—ತನ್ನ ಶಿರೋ ಭೂಷಣವಾಗುಳ್ಳ ಶಿವನು, ಪಂಚಾರ್ಣಕರಣ—ಶಿವಪಂಚಾಕ್ಷರಿಯಲ್ಲಿ; ೫೨–ಅದರ+ಆಗಮ ನವು–ಲಕ್ಷ್ಯಾರ್ಥಗಳು ಹೇಗೆಂದರೆ, ಅಚ್ಛೇದ್ಯನು+ಆತ್ಮಂ....–ಕಾರ್ಯವಾದ ಯಾವವಾದರೊಂದು

ಮಂದತೆಯ ಪರಿಹರಿಪುದಸ್ತೇ-।
ಯಂ, ದಿಟದ ವಸ್ತುವಿನ ಭಾವಂ-।
ಪೊಂದುವ ಮನಶ್ಚಾರಮೆಣಿಸಲ್ಬ್ರಹ್ಮಚರ್ಯಾಖ್ಯಂ; ॥ ೫೩ ॥

ತನ್ನಪಾಂಗಿಂ ಜಂತುಗಳ ಸಂ-।
ಪನ್ನಯನದಿಂ ನೋಳ್ಪುದೇ ದಯೆ-।
ಯನ್ನಿಗರೊಳಾತ್ಮೀಯರಲಿ ಸಮರೂಪಮಾರ್ಜವವು ॥
ಭಿನ್ನಮಾಗದ ಮತಿಯೆ ಪರಪೀ-।
ಡೌನ್ನತಿಯ ದೆಶೆಯಿಂದ ಕ್ಷಮೆ, ತಾ-।
ನೆನ್ನವದೆ ಬ್ರಹ್ಮಂ ಧೃತಿಯು ಮೇರುಭವನ್ಮತಿಯಿಂ; ॥ ೫೪ ॥

ಯಾರಿಗುಪಸೇಚನವು ಮೃತ್ಯುವಿ-।
ದಾರಿಗೋದನವಪ್ಪುದಗ್ರಜ-।
ವಾರರಾಟ್ಕುಲ ಮಾತನಾನೆಂಬುದೆ ಮಿತಾಹಾರ ॥
ಪಾರಮಾರ್ಥಿಕನಾದ ತನ್ನೊಳು ।
ಸೇರದೆಂದಿಗು ಮಲವೆನಿಪುದೇ-।
ಧೀರರೆಂಬರು ಶೌಚವೆಂಬುದ ನಿತ್ಯಶುದ್ಧವದು ॥ ೫೫ ॥

ತಿಳಿದವರು ತವೊಳಗೆ ತಾವು-।
ಜ್ಜ್ವಳಿಪ ಮಾತಿಂ ಪೇಳ್ವ ಯಮದ ವಿ-।
ಮಲ ದಶಕವಿದು, ಮುಂದೆ ಪೇಳ್ವ ನಿಯಮಕೆ ಭಾವಿಸಲು ॥
ಇಳೆಯೊಳಗೆ ನಡೆದಾಡುತಿಹ ನಿ-।
ರ್ಮಲ ಪುರಾಣಾದಿಕದೆ ಪೇಳಿಹ ।
ಬಳಕೆಯಂ ನೋಡಲ್ಕೆ ಛಾಯೆಯ ಬಿಡದೆ ವರ್ತಿಸುವ- ॥ ೫೬ ॥

---

ವಸ್ತುವಿಕಾರದಿಂದಲೂ ಛೇದ್ಯನಲ್ಲ; ೫೩-ಭೂತವಿಕೃತಿ—ಭೂತಗಳ ವಿಕಾರವಾದ ದೇಹೇಂದ್ರಿಯಗಳ ಸಂಘಾತವನ್ನು, ಮಂದತೆ—ದುಷ್ಟತೆಯನ್ನು, ದಿಟ....ಭಾವಂ—ತನ್ನ ಮತ್ತು ಇದೆಲ್ಲದರ ಪರಮಾರ್ಥವಾದ ಬ್ರಹ್ಮವನ್ನು ತನ್ನ ಸ್ವರೂಪವೆಂದು ಅನುಭವದಿಂದ ತಿಳಿದು ತನ್ನಿಷ್ಠನಾಗಿರುವವೇ ಬ್ರಹ್ಮಚರ್ಯವು; ೫೪-ತನ್ನಸಾಂಗಿಂ—ಉಳಿದವರನ್ನೆಲ್ಲ ತನ್ನಂತೆಯೇ, ಸಂಪನ್ನಯನದಿಂ—ಬ್ರಹ್ಮಾತ್ಮದ ಭಾವನೆಯಿಂದ ಸಂಭಾವಿತ ಕಣ್ಣಿನಿಂದ. ಅನ್ನಿಗರೊಳು+ಆತ್ಮೀಯರಲಿ—ತನ್ನವರಲ್ಲಿಯೂ ಅನ್ಯರಲ್ಲಿಯೂ, ಭಿನ್ನಿ....ತಿಯೆ—ತನ್ನ ಚಿತ್ತದಲ್ಲೇರುಪೇರಿಲ್ಲದಿರುವವೆ, ಪರಪೀಡೆಯ+ಔನ್ನತಿ—ಹೆಚ್ಚಿನ, ಮೇರುಭವನ್—ಮೇರುವಿನಂತೆ ನಿಶ್ಚಲಮತಿಯಿಂದಿರುವವೇ ಧೃತಿಯು.

೫೫ ಯಾರಿಗೆ—ಯಾವ ಬ್ರಹ್ಮಕ್ಕೆ ಈ ಮೃತ್ಯುವೆ, ಉಪಸೇಚನವು-ಉಪ್ಪಿನಕಾಯಿಯೂ ಮತ್ತು ಇದು+ಆರಿಗೆ+ಓದನವು—ಊಟದ ಅನ್ನವೂ ಆಗಿರುವನೋ, ಅಗ ಜ+ವಾರರಾಟ್+ಕುಲಂ—ಬ್ರಹ್ಮಾದಿ ದೇವತೆಗಳ ಸಮೂಹಕ್ಕೆಲ್ಲ, ಒಡೆಯ—ಪೂಜ್ಯನಾಗಿರುವ, ಆತನೆ—'ಆ ಬ್ರಹ್ಮವೇ ನಾನು' ಎಂಬದೇ ಶೌಚವು, ಬ್ರಹ್ಮಸ್ವರೂಪವಾಗಿರುವ ಇದು ನಿತ್ಯಶುದ್ಧವು.

ಪತ್ತುತೆರ ನಿಯಮವು ತಪಸ್ಸಂ-।
ಪತ್ತಿ ಮುಖ್ಯವ್ರತ ಚರಮವಾ-।
ಪತ್ತರೋಳ್ತಪವಾವುದೆನೆ, ನಾನಾರು ಸಂಸಾರಂ-॥
ಎತ್ತಣಿಂದಾಂ ಪೊರ್ದಿದೆನು ಕಡೆ-।
ಗೊತ್ತರಿಪುದೆಂತಿದನು ಎಂಬುದು-।
ಪಾತ್ತ ವಿಜ್ಞಾನಿಗಳು ತಪವೆಂತೆಂದು ಪೇಳುವರು ॥ ೫೭ ॥

ಸರಸಿರುಹಭವಲೋಕ ಪರ್ಯಂ-।
ತ ರುಚಿಯಂ ಕಳಿದತ್ತಣಿಂ ತನ-।
ಗುರವಣಿಪ ಪರಮನಲಿ ರತಿ ಸಂತೋಷವೆನಿಸುವದು ॥
ಗುರುವಚಃಶ್ರುತಿಗಳಲಿ ನಂಬಿಗೆ-।
ನೆರೆಯಲಾಸ್ತಿಕ್ಯವದು, ಪ್ರಿಯದಿಂ-।
ದೊರೆಯೆ ವಿದ್ಯೆಗೆ ಪಾತ್ರದಲ್ಲದು ದಾನವೆನಿಸುವದು ॥ ೫೮ ॥

ಏನುವಾಡಲ್ವಿಧಿ ಪುರಸ್ಕೃತ ।
ದಾನರಾಶಿಯ ಕರ್ತೃಭೋಕ್ತೃವಿ-।
ತಾನದೊಳ್ಫಲಭೋಗಪರಿಪಾಕವನು ಪಡೆವುದದು ॥
ಊನವಾಗದುದಿಲ್ಲಿ ವಿದ್ಯಾ-।
ದಾನವೊಂದೇ ಶೀಕ್ಷಿತಗೆ ನಿ-।
ತ್ಯಾನುಗತವಾಗಿಹುದು ಮೇಣದರಿಂದ ಮುಕ್ತನಹ ॥ ೫೯ ॥

ದಾನದೊಳಗುತ್ತಮವು ವಿದ್ಯಾ-।
ದಾನವೆನೆ, ತದ್ಭಾವ ಫಲವೇ ।
ಜ್ಞಾನವಪ್ಪುದರಿಂದಲಾ ಜ್ಞಾನಂ ವಿಚಾರಿಸಲು-॥

---

೫೭ ತಪಸ ಂ.... ಚರಮವು—ತಪಸ್ಸು ಮೊದಲು ವ್ರತದವರೆಗಿನ, ಆಪತ್ತರೊಳ್+ತಪಂ +ಆವುದೆನೆ,.... ಎತ್ತಣಿಂದ+ಆನ್-ನಾನು, ಪೊರ್ದಿದೆನು—ಹೊಂದಿದೆನು, ಕಡೆಗೆ+ಒತ್ತರಿಪುದು —ನೂಕುವುದು. ಎಂತು+ಇದನು ಉಪಾತ್ತ—ಸಂಪೂರ್ಣವಾಗಿ ಅಧ್ಯಾಸವನ್ನು ಕಳಿದುಕೊಂಡ,

೫೮ ಸರಸಿ.... ರ್ಯಂತ—ಸತ್ಯಲೋಕದವರೆಗಿನ ಭೋಗಗಳಲ್ಲಿ, ರುಚಿಯಂ—ಆಸಕ್ತಿಯನ್ನು ಮನಸ್ಸಿನಲ್ಲಿ, ಕಳಿದು+ಅತ್ತಣಿಂ—ಬಿಟ್ಟುಹೋದದ್ದರಿಂದ, ತನಗೆ+ಉರವಣಿಪ—ಮಿಗಿಲೆನಿಪ, .... ವಚಃ—ವಾಕ್ಯವಲ್ಲಿ, ನೆರೆಯಲು—ಚೆನ್ನಾಗಿರಲು, ಆಸ್ತಿಕ್ಯವು+ಅದು.

೫೯ ವಿಧ್ಯುಕ್ತವಾದ ಷೋಡಶ ೧೬ ದಾನಗಳನ್ನು ಎಷ್ಟೇ ಶ್ರಮಗೊಂಡು ತಾನು ನೆರವೇರಿಸಿದ್ದರೂ ಅವೆಲ್ಲವೂ ಆಧ್ಯಾಸಿಕವಾದ ಕರ್ತೃತ್ವಾದಿಗಳನ್ನಿಟ್ಟುಕೊಂಡೇ ನಾಶವಾಗುವ ಭೋಗಗಳನ್ನು ಕೊಡುವವು. ಬ್ರಹ್ಮವಿದ್ಯಾದಾನಮಾತ್ರ, ಊನವಾಗದುದು—ಹಾಗಲ್ಲವು, ತನ್ನ ಫಲವಲ್ಲಿ ವಿಕಾರವ ಕುಂದುಕೊರತೆಯನ್ನು ಹೊಂದುವದಲ್ಲ. ಏತಕ್ಕೆಂದರೆ ಅದು, ಶೀಕ್ಷಿತಗೆ—ಜ್ಞಾನವನು ಪರಿಗ್ರಹಿಸಿದವನಿಗೆ, ಅನುಭವಸ್ವರೂಪದಿಂದ ತನ್ನಲ್ಲಿ, ನಿತ್ಯಾನುಗತಂ-ನಿತ್ಯವೂ ಸೇರಿಕೊಂಡಿರುವ ನಿರ್ವಿಕಾರ ಆತ್ಮನೆಂಬ ಫಲಸ್ವರೂಪವಾಗಿ ನಿಂತುಬಿಡುವದರಿಂದ ಅವನು ನಿತ್ಯಮುಕ್ತನಾಗುವನು.

ತಾನೆನಿಪ ದೆಶೆಯಿಂದ ತತ್ಫಲ-।
ದಾನಂದಮಿತಿಯೆಣಿಪನಿಲ್ಲಜ-।
ನೋ! ನಲಿನನಾಭನೋ! ಪುರಾರಿಯೊ! ಬುದ್ಧಿದೃಕ್ಕಿಂದ ॥ ೬೦ ॥

ಕಾಮದುಪಹತಿಯಿಂದ ಕಂದದ ।
ಸೌಮನಸ್ಯಂ; ಸಟೆಯ ಕಲುಷ-।
ಶ್ಯಾಮಲತೆಯಂಟದಿಹ ಸಾರಸ್ವತಮಘವನೀವ-॥
ಭೀಮಹಿಂಸಾ ಚಂಡರಸ್ಮ್ಯ-।
ಸ್ಥಾಮಮಂ, ಪೊರ್ದಿರದ ತಾನವ-।
ಮೇ ಮಹೇಶ್ವರ ಪೂಜೆಯೆಂದರು, ನೈಮಿಷಾಶ್ರಯರು ॥ ೬೧ ॥

ಕೆಡದೆ ತಾನಾವಾಗ ತಿಳುಹ-।
ಲ್ಪಡದೆ, ಕಡೆಗಾಣಿಸದೆ, ಪೊರ್ದದೆ-।
ಜಡವ ನಚಲಿತವಾದ ಪ್ರತ್ಯಗ್ವಸ್ತುವವಧರಿಪ-॥
ನುಡಿಯ ತಾತ್ಪರ್ಯಂ ಶ್ರವಣ ಪಳೆ-।
ನುಡಿಯ, ಮೇಣೀ ಖಲರ ಪೊಲ್ಲದ-।
ನಡತೆಯಲ್ಲಿಯ ನಾಚಿಕೆ ಮಹಾಲಜ್ಜೆಯೆನಿಸುವದು ॥ ೬೨ ॥

ಆತಿಮಾರ್ಗಿಕಮುಖ್ಯ ಪಾಷಂ-।
ಡಾತಿಗರ ವೈದಿಕರ ವಿಶ್ವಾ-।
ಸಾತಿಶಯವೇ ಮತಿಯು, ಪರಿಪೂರ್ಣತ್ವವೇ ಜಪವು ॥

---

೬೦ ತತ್ಫಲದ ಆನಂದವನ್ನುಕುರಿತು ಇಂತಿಷ್ಟೇ ಸರಿಯೆಂಬ ಅದರ ಪರಿಮಿತಿಯನ್ನು, ಇಲ್ಲಿ+ಅಜನು—ಬ್ರಹ್ಮದೇವನು, ನಲಿನನಾಭನು—ವಿಷ್ಣುವು, ಶಿವನೂ ಮಾಡುವಂತಿರುವದಿಲ್ಲ.

೬೧ ಕಾಮದ ಉರಿಬೇಗೆಯಿಂದ ತನ್ನಲ್ಲಿ ಕುಂದಿ ಬಾಡಿ ವಿಕಾರವನು ಹೊಂದದೆ ಪ್ರಶಾಂತವಾದ ಮನಸ್ಸಿನ ಸ್ವಭಾವದ್ದಾಗಿಯೂ ಆಧ್ಯಾತ್ಮಿಕವಾದ ಮಿಥ್ಯಾವಿಷಯ ಭೋಗಗಳೆಂಬ ಕಶ್ಮಲಗಳ ರೂಪವಾದ ಬಳ್ಳಿಗಳ ಕಪ್ಪಿಲ್ಲದ ಚಿತ್ತೈಕಾಗ್ರತೆಯನ್ನು ಹಿಡಿದುಕೊಂಡು ಮೇಲೆದ್ದ ಕೇವಲಾತ್ಮಾನಂದದ ಬೆಳವಿಗೆಯಿಂದ ಮಹೇಶ್ವರಪೂಜೆಯೆಂಬುದು ಪರಿಶೋಭಿಸುತ್ತಿರುವದು. ಅಲ್ಲದೆ, ಅದು—ಕರಗಿಸಿ ದೇಹೇಂದ್ರಿಯಗಳನ್ನು ಬಸವಳಿಸುವ ಪಂಚಾಗ್ನಿ ವಿದ್ಯೆಯೇ ಮುಂತಾದ ಉಗ್ರತಪಸ್ಸುಗಳ ಉರಿತಾಪದ ಪ್ರಖರ ಕಿರಣಗಳ ಸೋಂಕಿಲ್ಲದೆ ವಸಂತಋತುವಿನ ತಂಗಾಳಿಯ ತಿಂಗಳ ಬೆಳಕಿನಂತೆ ಪ್ರಶಾಂತಹೃದಯ ಭಾವದ ಉತ್ತಮಸ್ಥಿತಿ ವಿಶೇಷವಾಗಿರುವದು.

೬೨ ಕಡೆ—ಕೊನೆಗಾಣಿಸದೆ, ಪೊರ್ದದೆ—ತಾನು ಹೊಂದದೆ, ಪ್ರತ್ಯಗ್ವಸ್ತುವು—ತನ್ನ ಬಹ್ವಾತ್ಮಧಾನವೊಂದೇ, ಪಳೆನುಡಿ—ಶ್ರುತಿಗಳ ತಾತ್ಪರ್ಯವೆಂದು ನಿಶ್ಚಯಿಸುವದೇ ಶ್ರವಣವು, ಪೊಲ್ಲದ—ಸಲ್ಲದ,

೬೩ ಆತಿಮಾ....ತಿಗರ—ವೇದವನ್ನು ತಿರಸ್ಕರಿಸುವ ನಾಸ್ತಿಕರಲ್ಲವ, ವೈದಿಕರ—ವೇದವಾದಿ—ಬ್ರಹ್ಮವಾದಿಗಳಲ್ಲಿ, ತಾನಲ್ಲದ ಶರೀರೇಂದ್ರಿಯಗಳಲ್ಲಿ 'ನಾನು' ಎಂಬ ಅವಿದ್ಯೆಯಿಂದ ಕಲ್ಪಿತವಾಗಿ

ಭೂತ ಮಿಥ್ಯಾಜ್ಞಾನ ಭಸ್ಮಸ-।
ಮೇತವೆ ವ್ರತಮಿಂತಿದಕೆ ವಿಪ-।
ರೀತಮಾದುದೆ ಲೋಕವಂಚನೆಯೆಂದನಾ ಸೂತ ॥ ೬೩ ॥

ಬಿಸಜ ಸಿದ್ಧಾದ್ಯಾಸನಗಳೇಂ-।
ರಸಿಕಸೇವ್ಯಮೆ ಮಾಳ್ಪುದಾಗಿರೆ ।
ಲಸದುದಾಸೀನತ್ವವೇ ನಿತ್ಯಾಸನಂ ತನಗೆ, ॥
ವಸು ರವೀಂದು ಸಿರಾಪ್ರದೇಶದೊ-।
ಳಸುನಿರೋಧಂ ಪ್ರಾಣಸಂಯಮ-।
ಮಸುರಕೃತ್ಯಂ ಕುಶಲರಾದವರಾಚರಿಸರಿದನು ॥ ೬೪ ॥

ತೋರುತಿಹ ಭುವನದಲಿ ಸತ್ಯದ ।
ತೋರಿಕೆ ಶರೀರಾನಿಲದ ತಡೆ; ।
ಮೀರಿರುವ ವಿಷಯಂಗಳಂ ಸಂಕೋಚನಂ ಗೈಯ್ಯೆ-॥
ಸಾರುವದೆ ಮೂಢರನು, ಪ್ರತ್ಯಾ-।
ಹಾರಮಾವುದನಾವುದಂ ತಾಂ-।
ಹಾರುವನೊ ಮನದಿಂದಲಾ ಯಾ ದ್ರವ್ಯಭಾಗದಲಿ ॥ ೬೫ ॥

ಸಾರತರ ತತ್ತ್ವಾವಗತಿಯೇ-।
ಧೀರಶಮ್ಮತವಾದ ಪ್ರತ್ಯಾ-।
ಹಾರ ಮಾವುದೆನಲ್ಕೆ ಧಾರಣೆ ಬಾಹ್ಯವಾಗಿರಲಿ-॥

---

ತೋರುತ್ತಿರುವ ಅಹಂಕಾರಾದಿ ಜಗದ್ಬೀಜಪವರೆಗಿನ ಅನಾತ್ಮವೆಲ್ಲವೂ ಕಡುಮಿಥ್ಯೆಯೆಂಬ ನಿಶ್ಚಿತ ಜ್ಞಾನದ ಭಸ್ಮಧಾರಣೆಯೇ ವ್ರತವು.

೬೪ ಬಿಸಜ—ಪದ್ಮ, ಸಿದ್ಧ+ಆದಿ—ಮುಂತಾದ ಆಸನಗಳು, ರಸಿಕ—ಆತ್ಮಾನಂದದ ಸವಿ ಬಲ್ಲ ಜ್ಞಾನಿಗಳಿಗೆ ಎಂದಿಗೂ ಸೇವ್ಯವಲ್ಲ ಲಸತ್—ಆ ಜ್ಞಾನಿಯಲ್ಲಿ ಪರಿಶೋಭಿಸುತ್ತಿರುವ ಆತ್ಮೇತರಗಳಲ್ಲಿನ ಉದಾಸೀನತ್ವವೇ, ವಸು—ತನ್ನ ಸಮೀಪದ, ರವಿ+ಇಂದು....ಮೂಗಿನ ಸೂರ್ಯ ಚಂದ್ರ ಎಂಬ, ಸಿರಾ—ನಾಡಿಗಳಲ್ಲಿ, ಅಸು—ತನ್ನ ಪ್ರಾಣವಾಯುವನ್ನು ತಡೆಗಟ್ಟುವದೆಂಬ, ಪ್ರಾಣಾಯಾಮಂ+ಅಸುರಕೃತ್ಯಂ.

೬೫ ....ಭುವನದಲಿ+ಅಸತ್ಯವೆಂಬ ನಿಶ್ಚಯ ಜ್ಞಾನವೇ, ಶರೀರ+ಅನಿಲದ ತಡೆ—ಪ್ರಾಣಾಯಾಮವು, ವಿಷಯಂ.... —ಇಂದ್ರಿಯಗಳನ್ನು ವಿಷಯಗಳಿಂದ ಬಿಗಿಹಿಡಿದು ಸಂಕೋಚಪಡಿಸುವಲ್ಲಿ, ಸಾರುವದೆ—ಹತ್ತಿರ ಬಂದು ಎಲ್ಲರಿಗೂ ದಕ್ಕುವದೇ ಏನು? ಇನ್ನು ಪ್ರತ್ಯಾಹಾರವೆಂದರೆ, ಅವುದನಾವುದಂ—ವಿಷಯಸಾಮಾನ್ಯವನ್ನು ಕುರಿತು ಮನಸ್ಸಿನಿಂದ, ತಾಂ—ತಾನು ಸೇರುತ್ತಿರುವನಷ್ಟೆ? ಅವುಗಳಲ್ಲೆಲ್ಲ—

೬೬ ತತ್ತ್ವಾವಗತಿಯೇ-ತನ್ನ ಮನಸ್ಸಿನಿಂದ ತತ್ತ್ವವನ್ನೇ ಎಡಬಿಡದಂತೆ ಕಾಣುತ್ತಿರುವದೇ.

ತೋರಲಾಂತರ್ಯದಲಿ ರೂಪ ವಿ-।
ಕಾರಮದ ಪೊತ್ತಿರುವದಲ್ಲ ವಿ-।
ಕಾರಿಯಹ ಪರವಸ್ತುನಾಂ ಸುರನಲ್ಲ ನರನಲ್ಲ ॥ ೬೬ ॥

ಯಕ್ಷ ರಾಕ್ಷಸ ಭೂತ ಕಿನ್ನರ-।
ಪಕ್ಷದೊಳಗಾರಲ್ಲ ಸಂಹನ-।
ನಾಕ್ಷಹೃಚ್ಚಿತ್ತಧುರಹಂಕಾರ ಚಯವಲ್ಲ ॥
ಅಕ್ಷವಲ್ಲೆನಲದುವೆ ಸಭ್ಯಾ-।
ಪೇಕ್ಷಣೀಯಮೆನಿಸುವ ಧಾರಣೆ-।
ಮೋಕ್ಷಪರಮಾರ್ಗದಲಿ ಚಿಂತ್ಯಂ, ಸಗುಣಮಾಗಿರಲು- ॥ ೬೭ ॥

ಜಾನಿಪುದು ವಸ್ತುವನು ಲೌಕಿಕ-।
ಮಾನವ ಧ್ಯಾನವದು, ತತ್ತ್ವ-।
ಧ್ಯಾನಮಾಧ್ಯೇಯಾತಿಗಂ ಪರಬೊಮ್ಮ ತಾನೆಂದು-॥
ಜಾನಿಪುದು, ವಿಶ್ವಸ್ಯದೋಳ್ಮನ-।
ಮೇನು ಪೊರ್ದದುದೇ ಸಮಾಧಿಯು ।
ಹೀನಜಾಡ್ಯಗಾರ್ತ್ಮವಿದರೊಳಗೆಂತಿರುವುದೆನಲು ॥ ೬೮ ॥

ಎರಡುಪಾಧಿಯ ಕಳಿಯೆ ಜೀವೇ-।
ಶ್ವರರೊಳ್ಳೈಕ್ಯಂ ಘಟಿಪುದಂ ನಿಜ-।
ಸ್ಫುರಿತಮಾದರಿವಂಕುರಿಪುದು ಸಮಾಧಿಯುತ್ತಮರ ॥

---

೬೭ ಸಂಹನನ—ದೇಹ, ಅಕ್ಷ—ನೇತ್ರಾದಿ ಇಂದ್ರಿಯವರ್ಗವೂ. ಹೃತ್—ಮನಸ್ಸು, ಬುದ್ಧಿ, ಚಿತ್ತ, ದುರಹಂಕಾರ ಎಂಬ, ಚಯ—ಈ ಅಂತಃಕರಣದ ವರ್ಗವೂ ನಾನಲ್ಲ ಹೀಗೆ ಅಕ್ಷವಲ್ಲ+ಎನಲು—ನೇತ್ರಾದ್ಯನಾತ್ಮವರ್ಗವಲ್ಲ-ಎಂಬ ಎಲ್ಲದರ ನಿಷೇಧರೂಪವಾದ ಅದುವೇ ಈ ತತ್ತ್ವಮಾರ್ಗದಲ್ಲಿನ ಧಾರಣೆಯು, ಸಭ್ಯಾಪೇಕ್ಷಣೀಯಂ—ಶಿಷ್ಟಸಮ್ಮತವೆಂದು ಚಿಂತ್ಯಂ—ಗ್ರಹಿಸಬೇಕು,

೬೮ ಒಂದು ವಸ್ತುವನ್ನು ಕುರಿತು ಮನಸ್ಸಿನಲ್ಲಿ ಚಿಂತಿಸುತ್ತಿರುವದನ್ನೆ ಲೋಕದಲ್ಲಿ ಧ್ಯಾನವೆಂಬುದು, ಇಲ್ಲಿ—ಧ್ಯಾನ ಆ ಧ್ಯೇಯ ಮುಂತಾದ ಭೇದವನ್ನು, ಅತಿಗಂ—ಮೀರಿರುವ 'ಪರಬ್ರಹ್ಮನೆ ನಾನು' ಎಂದು ಧ್ಯಾನಿಸುವದು, ವಿಶ್ವಸ್ಯದೋಳ್+ಮನಂ+ಏನುಂ—ಜಗತ್ತಿನಲ್ಲಿ ಏನನ್ನೂ ಈ ಮನಸ್ಸು, ಪೊರ್ದದುದೆ—ಸೇರದಂತೆ ತಡಗಟ್ಟುವದೇ ಸಮಾಧಿಯು ಇದು, ಹೀನಜಾಡ್ಯಗರ್(ಸಂಸಾರ ರೋಗವಿಲ್ಲದ ಅವರಿಗೆ)+ಆತ್ಮ....,

೬೯ ಜೀವ+ಈಶ್ವರ ಇವರೊಳು+ಐಕ್ಯಂ+ನಿಜಸ್ಫುರಿತಂ+ಆದ—ಅದ್ವಿತೀಯ ಬ್ರಹ್ಮವೊಂದನ್ನೇ ವಿಷಯೀಕರಿಸಿರುವ, ಅರಿವು+ಅಂಕುರಿಪುನು—ಮನಸ್ಸಿನಲ್ಲಿ ಹುಟ್ಟಿ ಮೂಡುವದೇ ಉತ್ತಮರ ಸಮಾಧಿಯು. ಇದಕ್ಕೆ ಮರಳಿ—ಮತ್ತೊಂದು ಲಕ್ಷಣವು-ದೇಹೇಂದ್ರಿಯ ಅನಾತ್ಮಗಳಲ್ಲಿ 'ನಾನು' ಎಂದು ಮಾಡಿಕೊಂಡಿರುವ ಅಧ್ಯಾಸರೂಪುಳ್ಳ ಅವಿದ್ಯೆಯ ಸಂಸಾರಿತ್ವಾದಿ ಧರ್ಮ

ಮರಳಿ ನಾಂ ಸಂಸಾರಿಯೆಂದುಂ, ।
ಸುರನರೋರಗಮುಖ್ಯನೆಂದುಂ, ।
ಚರಿಸದಾಶಯಮಾವುದದುವೆ ಸಮಾಧಿಯೆನಿಸುವದು ॥ ೧೯ ॥

ಇಲ್ಲಿ ಪೇಳ್ದ ಯಮಾಧಿಕಾರಿಗ-।
ಳಲ್ಲಿ ಯಾರೆಡೆಕಾಣರನ್ವಯ-।
ದಲ್ಲಿ ಪರಿಣತರವರು; ತಲ್ಲಕ್ಷಣದಿ ಲಕ್ಷಿತರು; ॥
ಬಲ್ಲವರ ಮಧ್ಯದೊಳಗವರೇ-।
ಬಲ್ಲವರು ಮೇಣವರ ಸಂಗತಿ-।
ಯೆಲ್ಲಿ ಲಭಿಸುವದಾಬಳಿಯೆ ಕೈವಲ್ಯ ಸಂಸ್ಥಾನಂ ॥ ೨೦ ॥

ಬಯಸರಾವುದನೈದದುದ, ವಾಂ-।
ಛಿಸುನಿರಿಸರೈದಿದುದರಲಿ ನಿ-।
ರ್ಭಯವದರ್ಥದಲವಭು ತುಷ್ಟರೆನಿಪ್ಪರವರಿಂದ ॥
ನಯವಿನಯ ಮುಖದಿಂದ ತಾನು ವಿ-।
ಷಯ ನಿಜವನರಿವರ್ಥವೆಂತೆನೆ ।
ಪ್ರಯತವಾದ ನಿಗಮ ಶಿರೋರ್ಥಂ ಜೀವಪರಮರಲಿ ॥ ೨೧ ॥

ಭೇದವೆಂಬುದುಪಾಧಿಕೃತಮೆಂ-।
ದೇ ದಿಟವ ಪೇಳಿದುದು ತತ್ತ್ವಂ-।
ವಾದದಿಂ ಸೋಹಂ ಪದ ಪರಾಮರ್ಶೆಯಿಂ ಸುದೃಢಂ ॥

---

ಗಳು ಎಂದರೆ ತನ್ನನ್ನು ಸುರ ನರ ಉರಗ—ಸರ್ಪಾದಿಗಳಲ್ಲೊಂದು ಎಂದು ಮುಂತಾಗಿ, ಚರಿಸದ—ತಪ್ಪಾಗಿ ಬಗೆಯದಿರುವ ನಿಶ್ಚಿತವಾದ ಮನಸ್ಸಿನ, ಆಶಯಂ+ಆವುದು+ಅದು ಸಮಾಧಿಯು.

೨೦ ಅನ್ವಯದಲ್ಲಿ—ಪರಂಪರೆಯಿಂದ ಬಂದ ಇವುಗಳಲ್ಲೊಂದಕ್ಕಾದರು ತಮ್ಮಲ್ಲಂತರವನ್ನು ಕಾಣದವರೆ, ಪರಿಣತರು—ಜ್ಞಾನದ ಪರಿಪಾಕದೆಶೆಗೆ ಬಂದಿಳಿದವರೆಂಬ, ತತ್—ಆ ಲಕ್ಷಣದಿಂದಲೇ,

೨೧ ಪಡೆಯದಿರುವವನ್ನು ಬಯಸುವದಿಲ್ಲ, ಒಬ್ಬರಾದರೂ ಪಡೆದುಕೊಂಡಿರುವ ವಿಷಯಗಳಲ್ಲಿ ಇಚ್ಛೆಯನ್ನು ಮಾಡುವದಿಲ್ಲ. ನಿರ್ಭಯವು+ಅದ+ಅರ್ಥದಲಿ—ಜ್ಞಾನಿಗಳು ಹೊಂದಿರುವ ತಮ್ಮ ಬ್ರಹ್ಮಾತ್ಮ ತತ್ತ್ವವು ಭಯವಿಲ್ಲದ್ದರಿಂದ ಅವರು—ನಿರ್ಭಯರು, ಸಂತುಷ್ಟರು+ಎನಿಪ್ಪರು+ಅವರಿಂದ, ನಯ—ವಿವೇಕಾದಿ ಜ್ಞಾನಸಾಧನಗಳಿಂದ ಸಂಸ್ಕೃತರಾಗಿ, ವಿಷ....ರ್ಥವು-ತನ್ನ ನಿಜವನ್ನರಿಯುವದು ಹೇಗೆಂದರೆ, ಪ್ರಯತಂ+ಆದ—ಇಂದ್ರಿಯಗಳನ್ನು ಬಿಗಿಹಿಡಿಯುವದೆಂಬ ತಪಸ್ಸಿನಿಂದಲೇ ತಿಳಿಯ ೇಕಾಗಿರುವ ನಿಗಮಶಿರೋರ್ಥಂ—ಶ್ರುತ್ಯರ್ಥವಾದ ತನ್ನ ಬ್ರಹ್ಮಾತ್ಮಭಾವವನ್ನು,

೨೨ ವಾದದಿಂ-ಸಯುಕ್ತಿಕವಾದ, ಸಃ+ಅಹಂ—ಎಂಬ ಈ ತತ್+ತ್ವಂ ಪದಗಳ+ಪರಾಮರ್ಶೆ — ವಿಚಾರದಿಂದಲೇ ಈ ಏಕತ್ವವು, ಸುದೃಢಂ+ಆದುದು—ಗಟ್ಟಿಗೊಂಡಿತು,

ಆದುದಿವರೊಳಖಂಡವಸ್ತುವ-।
ನಾದಿಸಚ್ಚಿತ್ಸುಖಮಯುವೆಯಾ-।
ಗೇ ದೆಶೆಯೊಳುಪಹತಿಯನೊಂದದೆ ಕಾಲವಸ್ತುಗಳಿಂ ॥ ೭೨ ॥

ಶಿವನೆ ಜೀವನು, ಜೀವನೇ ಶಿವ-।
ನವನೆ ನಿತ್ಯನು ಶುದ್ಧನದ್ವಯ-।
ನು ವಿಭು ಸುಖರೂಪನು, ನಿರಂಜನನಾತ ನಿರ್ಮುಕ್ತಂ ॥
ಭವ ಮಹಾಪ್ರಗ್ರಹದ ಕಟ್ಟಿಂ-।
ದವನೆ ಬೊಮ್ಮವವಂಗುಪಾಸ್ಯವೆ-।
ಸೆವ ಸುರಂಗನ್ಯೋನ್ಯ ಸಮರಸಮುಸಿರಿದುದು ನಿಗಮಂ ॥ ೭೩ ॥

ಅವನೆ ಯೋಷಿತ್ಪುರುಷನವನೇ ।
ಕುವರನವನೆ ಕುಮಾರಿ ನೋಡ-।
ಲ್ಕವನವನೆ ವೃಷ ವಿಷ್ಣು ರುದ್ರ ಬ್ರಹ್ಮನೆನಿಸುವನು ॥
ಅವನೆ ಚರು ಮಂತ್ರಾಜ್ಯ ಯಾಜಕ-।
ಸವನರೂಪಿಯಮೃತನುಮಾಗಿ ನಿ-।
ರವಯವಂ ಮೇಣವನೆ ಜೀವ ನಖಂಡಬೋಧಾಂಗಂ ॥ ೭೪ ॥

---

ಇವರೊಳು—ಈ ಜೀವೇಶ್ವರರಲ್ಲಿರುವ ತಮ್ಮ ಪರಮಾರ್ಥವು ಅಖಂಡವಸ್ತುಮಾತ್ರವು, ಅನಾದಿಯು, ಸಚ್ಚಿತ್ಸುಖಮಯವು ಆಗಿರುವದಲ್ಲದೆ, ಎಂದಿಗೂ ಉಪಹತಿಯನು+ಒಂದದೆ—ದೇಶಕಾಲವಸ್ತುಗಳಿಂದ ವಿನಾಶವನ್ನು ಅದು ಹೊಂದದೆ(ಪ್ರ॥ಭಾಷ್ಯ॥೪–೭–೬೪, ಮುಂ॥೧–೧–೩) ಇರುವದು.

೭೩ ನಿತ್ಯನು—ಕಾಲವನ್ನೇ ತುಳಿದವನು, ಶುದ್ಧನು—ಅಧ್ಯಾಸಕ್ಕೆ ಹೊರಚ್ಚಾದವನ, ಅದ್ವಯನು—ತನಗೆ ಎರಡನೆಯದಾಗಿ ಕಾಣುವ ವಿಕಾರಗಳು ವಸ್ತುಗಳು, ದೇಶಕಾಲಗಳು, ಕಾರ್ಯಕಾರಣ ನಿಮಿತ್ತ ನೈಮಿತ್ತಿಕಾದಿ ಭಾವಗಳು—ಎಲ್ಲವನ್ನೂ ಗರ್ಭೀಕರಿಸಿಕೊಂಡಿರುವ ಎಚ್ಚರಾದಿ ನಮ್ಮ ಈ ಅವಸ್ಥೆಗಳ ಎಲ್ಲೆಕಟ್ಟನ್ನೆ ಮೀರಿದ ಸ್ವಭಾವದವನು, ವಿಭುವು—ಎಲ್ಲವನ್ನೂ ತನ್ನಲ್ಲಿಯೇ ಅಡಕಮಾಡಿಕೊಂಡು, ಅನಾತ್ಮಗಳ ಒಟ್ಟಿನ ರೂಪಾದ ಆ ಎಚ್ಚರಾದಿ ಅವಸ್ಥೆಗಳ ಮತ್ತು ಅದರಲ್ಲಿನ ಪ್ರಪಂಚಗಳ ರೂಪಿನಿಂದಲೂ ಹೊಳೆಯುತ್ತಿರುವ ಪೂರ್ಣನು, ನಿರಂಜನನು—ತೆರೆಮರೆಗಳಿಲ್ಲದವನು, ಆತ....ಪ್ರಗ್ರಹ—ಪ್ರತಿಯೊಬ್ಬನಿಗೂ ಬಿಗಿದುಕೊಂಡಿರುವ ಹುಟ್ಟುಹೊಂದುಗಳ ಸಂಸಾರ ಕಟ್ಟಿನಿಂದ ನಿರ್ಮುಕ್ತನು, ಈ ಜ್ಞಾನಿಗೂ ಉಪಾಸ್ಯಗಳಾದ ದೇವತೆಗಳಿಗೂ ಶ್ರುತಿಗಳು (ಮುಂ॥ ೩–೧–೧೦, ೩–೨–೧) ಸಮರಸವನ್ನೇ ಹೇಳುತ್ತಿರುವವು.

೭೪ ಯೋಷಿತ್—ಹೆಂಗಸು, ವೃಷ—ಇಂದ್ರನು, ಚರು—ಹವಿಸ್ಸು, ಬಲಿಕೊಡುವ ವಸ್ತು; ಮಂತ+ಆಜ್ಯ—ತುಪ್ಪ, ಯಾಜಕ—ಋತ್ವಿಕ್ಕು, ಯಾಗ ಮಾಡುವವನು; ಸವನ—ಹವನ, ಹೋಮಸ್ವರೂಪನು; ಅಮೃತನುಂ—ಸುರಾಸುರರು ಸೇರಿ ಕ್ಷೀರಸಾಗರವನ್ನು ಮಥಿಸಿದಾಗ ದೊರೆತ ಅಮೂಲ್ಯ ವಸ್ತುವು, ಈ ಮೇಲಿನವುಗಳೆಲ್ಲ ಆತ್ಮನೇ ಆಗಿದ್ದರೂ ತನ್ನ ಪರಮಾರ್ಥದಲ್ಲಿ ಏನೊಂದೂ ಅಲ್ಲದ ಅವನು ನಿಷ್ಕಳಂಕನೇ ಆಗಿರುವನು; ಜೀವನು—ಎಲ್ಲಕ್ಕೂ ಒಡೆಯನು, ಅಖಂಡಬೋಧವೇ

ಅವನೆ ನೀಂ ನೀನವನೆನುವ ವೇ-।
ದವಚನವನಾರ್ಯೆಯಲೊಂದೇ ।
ಜವಳಿದೋರದು ತೋರ್ದರೋ ತ್ವಮುಹಂಪದಂಗಳಲಿ-॥
ಶ್ರವಿಪ ಲಕ್ಷ್ಯಾರ್ಥವೆ ತಿಳುವು ಕೂ-।
ಟವ ಕಳಿದ ತಚ್ಛಬ್ದದರ್ಥವ-।
ದುವೆ ಮರಳಿ ವಾಚ್ಯಾರ್ಥವಾದೀ ದೇಹ ಮುಖಗಳಿಗೆ ॥ ೭೫ ॥

ತ್ವಂಪದಾಹಂ ಪದಗಳಿಗೆ ನಿ-।
ಷ್ಕಂಪವತ್ತಚ್ಛಬ್ದದರ್ಥತೆ-।
ಯಂ ಪಿಡಿದು ಪೇಳದು, ನಿಗಮಮಿಲ್ಲೆಂತೆನಲ್ಪೇಳ್ಗುಂ ॥
ಸೊಂಪೆಸೆವುದವಿರುದ್ಧ ಚಿತ್ಪದ-।
ಮಂ ಪಿಡಿಯೆ, ವಾಚ್ಯಾರ್ಥಗತ ಭೇ-।
ದಂ ಪಳಿಯೆ ಮೂರನೆಯಸಿಪದದ ಭಾವದಿಂದಾಗ ॥ ೭೬ ॥

ಘನವೆನಿಪ ತಾದಾತ್ಮ್ಯದಾಪಾ-।
ದನೆಯಲೀ ಛಾಂದೋಗ್ಯವಾಕ್ಯಂ ।
ಜನಿಪುದಾತತ್ತ್ವಂ ಪದಂಗಳ ಲಕ್ಷ್ಯಾರ್ಥವಾಗಿರುವ ॥

---

ತನ್ನ ಅಂಗ–ಶರೀರವಾಗುಳ್ಳವನು, "ತ್ವಂ ಸ್ತ್ರೀ ತ್ವಂ ಪುಮಾನಸಿ ತ್ವಂ ಕುಮಾರ ಉತವಾಕುಮಾರೀ ತ್ವಂವೃದ್ಧೋ ದಂಡೇನ ವಂಚಸಿ ತ್ವಂ ಜಾತೋ ಭವಸಿ ವಿಶ್ವತೋಮುಖಃ" (ಶ್ವೇತಾಶ್ವೇತರ)

೭೫ ....ವರ+ಆರ್ಯೆಯಲು—ವಿಚಾರಿಸಲು ಬಂದೇ ಹೋಯಿತು, ಆ ತತ್ತ್ವದಲ್ಲಿ ಜೀವ ಈಶ್ವರರೆಂಬ, ಜವಳಿ–ಅವಳಿ–ಭೇದ, ತೋರುವದಿಲ್ಲ; ತತ್ತ್ವಂಪದಗಳ ಅರ್ಥಗಳಲ್ಲಿ ಶ್ರವಿಪ— ಹೊಂದ ಬಂದಿರುವ ಮತ್ತು ವಾಚ್ಯಾರ್ಥವನ್ನು ಕಳೆದು ನಿಂತ ಲಕ್ಷ್ಯಾರ್ಥದ ಭಾಗವನ್ನು ಸ್ವೀಕರಿಸಿ, ಕೂಟವ—ಅಭೇದವನ್ನು ತಿಳಿದುಕೊಳ್ಳದೆ, ತಿಳುಹು–ತತ್ತ್ವಜ್ಞಾನವು, ಈ ಮೊದಲೇ ಸರ್ವರಿಗೂ ತಿಳಿದಿರುವ ಭೇದವನ್ನೇ ವೇದವೂ ತಿಳಿಸುವದೆಂಬುದು ಯುಕ್ತವಾಗುವದೂ ಇಲ್ಲ.

೭೬ ಭೇದಕ್ಕಾಸ್ಪದವೆನಿಸಿ ತನಗೆ ಬೇಡವಾಗಿದ್ದರೂ ದುಃಖಗಳನ್ನೇ ಕೊಡುತ್ತಿರುವ ದೇಹಾದಿಗಳನ್ನು ಹಿಡಿದು ಹೊರಟಿರುವ, ತ್ವಂ+ಅಹಂ ಎಂಬ ಪದಗಳಿಂದ ತನಗಹಿತವಾಗಿರುವ ಆ ದೇಹಾದಿಗಳೆಂಬ ಅನಾತ್ಮಾರ್ಥಗಳು—ಹಿತಸಾಧನವನ್ನು ಹೇಳಹೊರಟಿರುವ ವೇದಗಳಿಗೆ ತಾತ್ಪರ್ಯ ಎನ್ನುವದಕ್ಕಿಲ್ಲ. ಏಕೆಂದರೆ ಅತ್ಯಂತ ಅಶುಚಿ ವಸ್ತುಗಳ ಖನಿಜವೆನಿಸಿರುವ ದೇಹಾದಿಗಳಿಂದ ಪರಮ ಹಿತದ ಆಶೆಯು ಯಾರಿಗೂ ಇರುವದಿಲ್ಲ. ಆಗುವ ಸಂಭವವೂ ಇಲ್ಲ. ಆದ್ದರಿಂದ ಆ ದೇಹೇಂದ್ರಿಯಗಳೆಂಬ ವಾಚ್ಯಾರ್ಥದ ಭೇದವನ್ನು ಅಸಿಪದದ ವಿಮರ್ಶೆಯಿಂದ ಕಳೆಯಲಾಗಿ ನಿಂತ ಅವಿರುದ್ಧವಾದ ಚಿತ್ಪದದ ಸ್ವೀಕಾರದಿಂದ ಜಿಜ್ಞಾಸುಗಳ ಹೃದಯದಲ್ಲಿ ನಿರತಿಶಯಾನಂದಾವಿರ್ಭಾವವಾಗುವದೆಂಬುದು ವಿಮರ್ಶಕರಲ್ಲಿ ನಿರ್ವಿವಾದವು.

೭೭ ಈ ಆತ್ಮೈಕತ್ವದಲ್ಲಿ ತತ್ತ್ವಮಸೀತ್ಯಾದಿ ವೇದವಾಕ್ಯಗಳು ಕೂಡ ಪ್ರಮಾಣವಾಗಿ ಬರುವಂತಿದ್ದರೂ,ಆ ಏಕತ್ವವು–ನೈಸರ್ಗಿಕವೋ? ಅಥವಾ ಆಗಂತುಕವೋ?ಎಂದುಮುಂತಾಗಿ ವಿತರ್ಕಿಸಿ

ಅನುಪಮಾತ್ಮಪ್ರಾಣಿಗಳದೇಂ-।
ಜನಿತವೋ ಕಲ್ಪನೆಯ ಸಹಜವ- ।
ನನುಕರಿಪುದೋ ಎನಲು ಸರ್ವಾನುಭವ ಸಂಸಿದ್ಧಂ ॥ ೭೭ ॥

ಇರ್ಪೆನಾನಾವಾಗ ನೋಡ-।
ಲ್ತೋರ್ಪೆ ನಾಂ ನಿಖಿಲ ಪ್ರಪಂಚದೊ-।
ಳೋರ್ಪಗಲಿರುಳ್ಗಳಲುಮಾಗೆನು ನಾಂ ಪ್ರಿಯವಿಷಯಂ ॥
ಬೇರ್ಪಡದು ಮಾನವರೊಳಿದು ಕಳಿ-।
ದಿರ್ಪ್ಪುದೇ ಸಚ್ಚಿತ್ಸುಖಂಗಳು ।
ಕರ್ಪ್ಪೆಸಗದಿಹ ಬೊಮ್ಮವದು ತಾನಲ್ಲವೇ ನೋಡೆ ॥ ೭೮ ॥

ವಾಕ್ಯವೃತ್ತ್ಯದ್ವೈತ ಮಕರಂ-।
ದೈಕ್ಯಸೂಚಕವಿದು ಸದರ್ಥಾ-।
ಲೋಕ್ಯದಿಂದಂ ಬ್ರಹ್ಮತತ್ತ್ವವನೇ ಪರೋಕ್ಷದಲಿ-॥
ಶ್ಲೋಕ್ಯಮೆನೆ ಸೆಳೆದೀ ಪದತ್ರಯ-।
ವಾಕ್ಯದಿಂ ವ್ಯಕ್ತಿಯಲಿ ಭೇದಿಸೆ ।
ಶಕ್ಯಮಪ್ಪುದು ಮೊದಲು ನಡು ಕಡೆಗಳಲಿ ವಸ್ತುವಿನ ॥ ೭೯ ॥

ಮತಿಯು ದೃಢಮಾಗದುದೆ ಭೇದ-।
ವ್ಯತಿಕರಂ, ವ್ಯಭಿಚರಿಸದದರಿಂ-।
ಸ್ಥಿತಮೆನಿಪುದಪರೋಕ್ಷವೆಂದುದು ಪಂಚದಶಿಯಲ್ಲಿ ॥

---

ಕೇಳುವದಲ್ಲ, ಏಕೆಂದರೆ ಮೊದಲೇ ಸರ್ವಾನುಭವ ಸಂಸಿದ್ಧವಾಗಿರುವದರಿಂದ ಅದು ಪ್ರಮಾಣ ವ್ಯಾಪಾರದಿಂದ ಹೊಸದಾಗಿ ಉಂಟಾಗತಕ್ಕದ್ದಲ್ಲ.

೭೮ ಒಂದುಕಾಲದಲ್ಲಾದರು ನಾನೆಂಬುದು ಇಲ್ಲದೆ, ಅಥವಾ ತೋರದೆ ಹೋಗುವದಿಲ್ಲ. ಅದರಂತೆ ಹಗಲು ರಾತ್ರಿಯ ಕಾಲಗಳಲ್ಲಾದರೂ ಪ್ರಿಯವಸ್ತುಗಳಲ್ಲಿ ಒಂದೂ ನಾನೆಂಬುದಲ್ಲ, ಜಗತ್ತಿನ ವಸ್ತುಗಳು ನನಗೆ ಪ್ರಿಯಗಳು, ನಾನು ಸುಖಸಾಧನವಾಗಿ ಯಾರೊಬ್ಬರಿಗೂ ಪ್ರಿಯನಲ್ಲ ಎಂಬುದು ಮಾತ್ರ ಒಬ್ಬರಲ್ಲಿಯೂ ಬದಲಾಯಿಸಿರುವದಿಲ್ಲ. ಅಲ್ಲದೆ ಸಚ್ಚಿತ್ಸುಖಗಳು ದೂರ ಬಿಟ್ಟು ಯಾವ ಜೀವವನ್ನೂ ಕಳಿದಿಲ್ಲ. ಆದ್ದರಿಂದ ಕರ್ಪು—ಕಲಂಕವಿಲ್ಲದ ಬ್ರಹ್ಮವೇ ನಮ್ಮೆಲ್ಲರ ಹುಟ್ಟು ಪರಮಾರ್ಥವೆಂಬುದನ್ನು ಈಗಲೇ ನಮಗೆಲ್ಲ ಕಾಣಬರತಕ್ಕದ್ದಾಗಿರುತ್ತೆ.

೭೯ ವಾಕ್ಯವೃತ್ತಿ+ಅದ್ವೈತ...., ಸದರ್ಥ....—ಬ್ರಹ್ಮವಿರುವದೆಂದು ಹೀಗೆ ಪರೋಕ್ಷಿಸಿ, ಶ್ಲೋಕ್ಯಂ—ಹೇಳುವವು ಎಂದು ಮೊದಲಾಗಿ, ವ್ಯಕ್ತಿ—ಏಕರಸವಾದ ತತ್ತ್ವದ ಶರೀರದಲ್ಲಿ, ತತ್+ತ್ವಂ+ಅಸಿ—ಎಂಬ ಈ ಪದಗಳುಳ್ಳ ವಾಕ್ಯಕ್ಕೆ ಹೊಂದದಿರುವ ಅರ್ಥಗಳಿಂದ ಬುದ್ಧಿಯನ್ನು ಭೇದಿಸುವದಕ್ಕೂ ಬರುವದು.

೮೦ ಭೇದವ್ಯತಿಕರಂ—ಭೇದಕ್ಕೆ ಬೇಕಾಗಿರುವ ಕಾರಣವು ದೊರೆತಿದ್ದಂತೆ ಸಂಶಯವುಳ್ಳ ಆ ಮನಸ್ಸಿಗೆ ಕಂಡರೂ ತತ್ತ್ವದಲ್ಲೆಂದಿಗೂ ಆ ಭೇದವು ನೆಲೆಯಾಗಿ ಕಾಲೂರುವಂತಿಲ್ಲ.

ಇತರವಹ ಪೂರ್ವೋಕ್ತವೆಲ್ಲಂ ।
ಶ್ರುತಿಶಿರೋದ್ವಾತ್ರಿಂಶದರ್ಥಾ-।
ಶ್ರಿತವೆನುತಲವಧರಿಪುದುತ್ತಮರಾದ ಪಂಡಿತರು ॥ ೮೦ ॥

ಪೊಂದತಕ್ಕುದದೇನು ಜೀವನ-।
ನೊಂದಿಸುವದಾತ್ಮನಲಿ, ಎರಡಾ-।
ಗೊಂದಿತೇ ಎನಲಲ್ಲ, ಬಂದುದುಪಾಧಿಕೃತವಾಗಿ ॥
ಮುಂದುಗೆಡಲದರಲ್ಲಿ ತೋರ್ಪಾ-।
ನಂದಘನವಸ್ತ್ವೈಕವೇ ಯಿದ ।
ರಿಂದವೆಂಬರ್ಥದಲಿ ಯ ಪ್ರತ್ಯಯಕೆ ತಾತ್ಪರ್ಯಂ ॥ ೮೧ ॥

ವಿಮಲ ಚಿತ್ತರಿದನ್ನೆ ಪ್ರತಿಪಾ-।
ದ್ಯವೆನುವರು ಪ್ರತಿಪಾದಕವೆ ನೈ-।
ಗನು ಶಿರೋ ಘಟಿತಾರ್ಥವಾದೀ ನಯವದಕೆ ನಾಮ-॥
ಅನುವ್ರ್ಪದೊಂದಿಪುದೆಂದು ಮೇಣೀ-।
ಯನುಲದಲ್ಲಿಯ ಯೋಗ ಸಂಬಂ-।
ಧನೆನುತಂ ಪೇಳಲ್ಪಡುಗು ಮೂರನೆಯ ಕರಣವಿದು ॥ ೮೨ ॥

ಇದರೊಳನಭಿವ್ಯಕ್ತಮಾದರೆ-।
ಹೃದಯುನಾಗದು ಸಿದ್ಧಿ ಯದರಿಂ ।
ವಿದುರರಿಂದೀ ನಯವನಭ್ಯಾಸಿಸಿ ಗುರುಗಳಿಂದ ॥

---

ದ್ವಾತ್ರಿಂಶತ್––೩೨ ಮೂವತ್ತೆರಡು, ಶ್ರುತಿಶಿರಃ—ವೇದಾಂತಗಳು ಕೂಡ ಇದನ್ನೆ ಕೈಯೆತ್ತಿ ಸಾರು ತ್ತಿರುವವು ಎಂದು ಜಿಜ್ಞಾಸುಗಳು ವಿವೇಕಿಸಬೇಕು.

೮೧ ಜೀವನನು (ದೇಹಾದಿಗಳಲ್ಲಿ ನಾನೆಂಬುದನ್ನು ಬಾಧೆಪಡಿಸುವ ಮೂಲಕ ತನ್ನಾತ್ಮನಲ್ಲಿ ಒಂದುಗೂಡಿಸಿ)+ಒಂದಿಸುವದು—ಸೇರಿಸುವದು ಎಂಬೀ ಏಕತ್ವವೊಂದನ್ನೇ ಮನುಷ್ಯನಿಂದ ಹೊಂದಲ್ತಕ್ಕದ್ದು, ಜೀವನೆಂದೂ ಪರಮನೆಂದೂ ತತ್ತ್ವದಲ್ಲಿಯೇ ನಿಜವಾಗಿ ಎರಡಾಗಿ ಒಡೆದೇ ಬಿಟ್ಟಿದ್ದರೆ ಅದು ಒಂದಿತೆ–ಒಂದಾಗಿ ಸೆರಿಹೊಂದುವದು ಹೇಗೆ?ಎನಲು+ಹಾಗಲ್ಲ,ಭೇದವೆಂಬುದು ಬರಿಯ ಉಪಾಧಿಯಿಂದಾಗಿರುವದಷ್ಟೆ? ಮುಂದುಗೆಡಲು—ದೇಹಾದಿ ಅನಾತ್ಮಗಳಲ್ಲಿ 'ನಾನು' ಎಂಬ ಈ ಮುಂದಿನ ಅಜ್ಞಾನವೊಂದು ಕೆಡಲಾಗಿ ಅಧ್ಯಾಸವೂ ಬಾಧಿಸಲ್ಪಡುತ್ತಿರಲು; ಆಗ+ ಅದರಲ್ಲಿ—ಆ ಜೀವೇಶ್ವರರ ಪರಮಾರ್ಥಸ್ವರೂಪದಲ್ಲಿ ವಸ್ತುವು ಸದಾ ಏಕವಾಗಿಯೂ ಆನಂದ ಘನಮಾತ್ರವಾಗಿಯೂ ತೋರ್ಪುದೆಂಬುದೇ ಆಶಯವು.

೮೨ ಈ ನಯವು—ಈ ವೇದಾನ್ತಶಾಸ್ತ್ರಕ್ಕೆ, ಅಮರ್ಪುದು—ಒಪ್ಪುವದು, ಈ ಗ್ರಂಥವು ತನ್ನ ವಿಚಾರದ್ವಾರ ಆ ಏಕತ್ತ್ವವನ್ನು,ಒಂದಿಪುದು–ಹೊಂದಿಸುವದು,ಹೀಗೆ ಈ ನಯ–ಗ್ರಂಥಕ್ಕೂ ಮತ್ತು ಬ್ರಹ್ಮಕ್ಕೂ ಪ್ರತಿಪಾದ್ಯ ಪ್ರತಿಪಾದಕ ಭಾವವು ಮತ್ತು ಜ್ಞಾನದ ಫಲಕ್ಕೂ ಅಧಿಕಾರಿಗೂ ಪ್ರಾಪ್ಯ ಪ್ರಾಪಕ ಭಾವ–ಸಂಬಂಧವೂ ಇರುವದು. ಇದು ಮೂರನೆಯ ಕರಣವು–ಅನುಬಂಧವು.

೮೩ ಇದರೊಳು+ಅನಬಿವ್ಯಕ್ತಂ+ಆದರೆ + ಹೃದಯಂ—ಮನಸ್ಸಿಗೆ ಈ ಅನುಬಂಧ

ಹೃದಯತಾಪಂಬೆತ್ತು, ಸಂಸಾ-।
ರದ ಭಯದಿ ಸಾಧಿಸಿದರಪ್ಪುದು-।
ಕದಡೆಸೆಯದೀಶಾತ್ಮರೈಕ್ಯಂ ವಸ್ತುಮಾತ್ರದಲಿ ॥ ೮೩ ॥

ತನಗನರ್ಥ ನಿವೃತ್ತಿಯಾಮೋ-।
ದನದವಾಪ್ತಿ ಯುಮಲ್ಲವೆ ಪ್ರಯೋ-।
ಜನವಿದರೊಳಾದ್ಯಕ್ಕೆ ಲಕ್ಷಣವೆಂತೆನಲ್ವಿಂದಂ ॥
ಜನನ ಮರಣಮಯ ಭವಸಾಗರ-।
ವನು ತರಿಪನವಗೆತ್ತಣದು ಮೋ-।
ಹನ ಮವಂ ಸ್ವಾಭಾವಿಕೈಕ್ಯಂ ಗಂಡ ದೆಶೆಯಿಂದ ॥ ೮೪ ॥

ನೈಗಮೇಶಾವಾಸ್ಯಗಳ ಸ-।
ದ್ಯೋಗದಿಂದಿಂತೆಂಬ ವೀರ್ಯವಿ-।
ಭಾಗ ರೂಪೋದಯ ಲಯ ಸ್ಥಿತಿಗಳ ತದರ್ಥಗಳಿಂ ॥
ಭೋಗ ಭೋಗ್ಯಂಗಳನು ನಿಜದೊಳ-।
ನಾಗತಂ ಸೃಷ್ಟಿಯೆನೆ, ತಿಳಿದವ-।
ನಾಗುವನೆ ಸಂಲಿಪ್ತನಾರ್ತನು ಭೋಕ್ತೃತೆಯನಲ್ಲಿ ॥ ೮೫ ॥

---

ಚತುಷ್ಟಯವು ತಿಳಿಯದಿದ್ದರೆ, ಆಗ ಈ ಗ್ರಂಥದ ಒಡಲು ತನಗೆ ಆಗದು+ಸಿದ್ಧಿ—ಸಿದ್ಧಿಸುವದಿಲ್ಲವಾದ್ದರಿಂದ, ಈ ನಯ—ಈ ಶಾಸ್ತ್ರವನ್ನು, ವಿದುರ—ಬಲ್ಲ ಗುರುಗಳಿಂದ, ....ಬೆತ್ತು—ಸಂಸಾರ ನೋವನ್ನು ಹೃದಯದಲ್ಲಿ ಹೊಂದಿ, ಕದಡು+ಎಸೆಯದ – ನಿರ್ದುಷ್ಟವಾದ, ಈಶ+ಆತ್ಮ-ಎಂಬಿಬ್ಬರ, ವಸ್ತು–ತತ್ತ್ವಮಾತ್ರದ ಸ್ವರೂಪದಲ್ಲಿ, ಐಕ್ಯ+ಅಪ್ಪುದು–ಏಕತ್ವವು ತನಗೆಸಿದ್ಧಿಸುವದು,

೮೪ ತನಗೆ+ಅನರ್ಥ....ಯುಂ+ಆಮೋದನದ–ಆನಂದದ, ಅವಾಪ್ತಿ—ಪ್ರಾಪ್ತಿಯೆಂಬುದಲ್ಲವೆ ಫಲ? ಇವರೊಳ್+ಆದ್ಯಕ್ಕೆ—ಮೊದಲನೆಯ ಅನರ್ಥ ನಿವೃತ್ತಿ ಎಂಬುದು, ಎಂತೆನಲ್+ವಿಂದಂ—ತತ್ತ್ವವನ್ನು ಬಲ್ಲ ಜ್ಞಾನಿಯು, ತರಿಪನು—ದಾಟಬಿಟ್ಟಿರುವದರಿಂದ, ಅವಗೆ+ಎತ್ತಣದು+ಮೋಹನಂ—ಮೋಹಮೂಲವಾದ ದುಃಖವು ಎಲ್ಲಿಂದ ಬಂದೀತು? ಬರುವದಿಲ್ಲವು. ಏಕೆಂದರೆ ಅವಂ+ಸ್ವಾಭಾವಿಕ+ಐಕ್ಯಂ+ಮನಗಂಡ ದೆಶೆಯಿಂದ.

೮೫ 'ಈಶಾವಾಸ್ಯಮಿದಗ್ಂ ಸರ್ವಂ....' (ಈಶ) ಈ ಜಗತ್ತೆಲ್ಲವೂ ಈಶ್ವರನಿಂದಲೇ ಮುಚ್ಚಲ್ಪಡತಕ್ಕದ್ದು ಎಂಬ, ವೀರ್ಯದ ಸದ್ಯೋಗ—ಜ್ಞಾನಮಾತ್ರದಿಂದಲೇ, ಜಗತ್ತಿನ ಉದಯಾದಿಗಳನ್ನೆಲ್ಲ, ಈಶ—ತನ್ನಾತ್ಮನಾಗುಳ್ಳ ಜ್ಞಾನಿಯು, ....ನಿಜದೊಳು—ತನ್ನ ಪರಮಾರ್ಥ ಸ್ವರೂಪದಲ್ಲಿ ಈ ಸೃಷ್ಟಿಯೆಂಬುದು ಎಂದೆಂದಿಗೂ, ಅನಾಗತ—ಉಂಟಾಗಿಯೇ ಇರುವದಿಲ್ಲ ಎಂಬ ನಿಶ್ಚಯಗೊಂಡ ಅವನಿಗೆ—ಅವಿದ್ಯಾಕ್ಷೇತ್ರದ—ಭೋಗ ಭೋಗ್ಯ ಭೋಕ್ತೃಗಳ ವಿಕಾರಗಳ ಲೇಪವಾಗಲಿ ಅಥವಾ ಆರ್ತನು—ಕಡುದುಃಖಗಳಿಂದ ಪೀಡಿತನಾಗಿರುವ ಕಳವಳತ್ವವಾಗಲಿ ಎಂದಿಗೂ ಆಗುವದೇ ಇಲ್ಲವು.

ಜೀವನಾರೋಪಕ್ಕನಾದಿ ತೋ-।
ರ್ಪಾವೃತಿಯುಃ ಕೆಡುತಿರಲು ಸಂಸ್ಕೃತಿ-।
ಗಾವನೆಲೆ, ಕರ್ತೃತ್ವಮುಖ ದುಷ್ಪ್ರಕೃತಿಗಾದೊಡೆಯೂ-॥
ಭಾವಿತಾಭಾವಿತಗಳಿತರ ಜ-।
ನಾನಕಾಶದೆ ಭಜಿಪವಲ್ತೆ ಕ-।
ಳೇವರವನವು ನಿತ್ಯಶುದ್ಧಂಗಾಗಲುಂಟೆ ಕರೆ ॥ ೮೬ ॥

ಓರ್ವನಾಗಿ ಮರುತ್ಪಥದವೋ-।
ಲ್ನಿರ್ವಿಕಾರನೆನಿಪ್ಪ ಪುರುಷನ-।
ಪರ್ವಲುಂಟೇ ಶೋಕಮೆಂಬುದರಿಂದ ಕಠವಲ್ಲಿ ॥
ಗೀರ್ವಿಶೇಷಂ ತೃಪ್ತಿದೀಪದ ।
ಗೀರ್ವಿಶೇಷಂ ತತ್ತ್ವಗೀತಾ-।
ಗೀರ್ವಿಶೇಷಾಧ್ಯಾತ್ಮರಾಮಾಯಣಗಳಲ್ಲಿಹುವು ॥ ೮೭ ॥

ಎರಡಳಿದರೇಂ ಜೀವ ಪರಮೇ-।
ಶರಲಿ ಮೇಣೀ ಭೌತಿಕ ಪ್ರ-।
ಸ್ಫುರಿತಮಿರಲೆರಡಲ್ಲವೇ ಯೆನೆ, ತೋರಲೀ ಭುವನ-॥

---

೮೬ ಶರೀರೇಂದ್ರಿಯಗಳಲ್ಲಿ 'ನಾನು' ಎಂಬೀ ರೂಪದ ಹುಸಿ ತೋರಿಕೆಯು ಜೀವನ ಅಸ್ತ್ರೋದಯಗಳಿಂದ ತನ್ನ ಪರಮಾರ್ಥಸ್ವರೂಪದಲ್ಲಿ, ತೋರ್ಪಾವೃತಿಯು—ಜೀವ ಜಗತ್ತುಗಳ ಅನಾತ್ಮದೃಷ್ಟಿಯ ಮುಮ್ಮೊರೆಯು ಕೆಡಲಾಗಿ, ಭೋಕ್ತೃ ಭೋಗ್ಯತ್ವಗಳೆಂಬ ಸಂಸಾರದ ಅಡಿಗಲ್ಲೇ ತಲೆಕೆಳಗಾಗಿಬಿಡುತ್ತಿರುವದು. ಸಂಸೃತಿಗಾಗಲಿ ಅದರ ರೂಪಾಂತರವಾದ ಕರ್ತೃತ್ವಾದಿಗಳೆಂಬ ಅನರ್ಥಕರವಾದ ತನ್ನ ಹುಸಿಯ ಸ್ವಭಾವಕ್ಕಾಗಲಿ ಆವ ನೆಲೆಯಿರುವದು? ಇನ್ನು ಭಾವಿತ+ಅಭಾವಿತಗಳು—ಶುಭಾಶುಭಗಳಾದ ಜ್ಞಾನಿಯ ಆಗಾಮಿ ಕರ್ಮಗಳು, ಇತರ....ವಲ್ತೆ—ವಂದಕ ನಿಂದಕರನ್ನು ಹೊಂದಿರುವವು ಅಲ್ಲವೆ, ಅವು ಕಳೆವರವನು—ಆ ಕರ್ಮದ ಫಲಗಳಾದ ಶರೀರಗಳೆಂಬ, ಕರೆ—ಮಲ, ದೇಹದ ಕಟ್ಟಳತೆಯ ಪರಿಚ್ಛಿನ್ನತ್ವ ಎಂಬುದು—ನಿತ್ಯಶುದ್ಧ ಜ್ಞಾನಿಗೆ ಆಗುವದಕ್ಕಿರುವದಿಲ್ಲ.

೮೭ ಭ್ರಾಂತರಲ್ಲಿ ಬೆರೆಯದೆ ಓರ್ವ—ಒಬ್ಬಂಟಿಗನಾಗಿ, ಮರುತ್+ಪಥದ ಓಲ್—ವಾಯುಮಾರ್ಗವಾಗಿರುವ ಆಕಾಶದಂತೆ ಅನಾತ್ಮದ ಸೋಂಕಿಲ್ಲದೆ ನಿರ್ವಿಕಾರನಾಗಿರುವ ಆ ಜ್ಞಾನಿಯಲ್ಲಿ—ಶೋಕ ಮೋಹ ಎಂಬ ಬಳ್ಳಿಗಳು, ಪರ್ವಲುಂಟೆ—ಇನ್ನು ಹಬ್ಬಿಕೊಳ್ಳುವದುಂಟೆ? ಎಂಬಲ್ಲಿ, ಗೀಃ+ವಿಶೇಷಂ—ಬೇರ್ಬೇರೆಯ ಪ್ರಮಾಣವಚನಗಳು ಹೇರಳವಾಗಿರುವವು.

೮೮ ಜೀವನು, ಪರಮನು ಎಂಬ, ಎರಡು—ಈ ಭೇದವೊಂದು ಅಳಿದರೆ ಏನು? ಈ ಭೌತಿಕಂ—ಭೂತಕಾರ್ಯಗಳಿಂದ ಭೇದವು ಉಳಿದೇ ಇರುವದು ಎಂದರೆ, ತೋರ....ಕರಂ—ಮೀರಿದ್ದು ಅನಾತ್ಮವು ತೋರಿಬಂದರೂ, ಅದರ ಸತ್ತಾಕಂ—ಅದು ಆತ್ಮನ ಸತ್ತೆಯನ್ನೇ ಹೊಂದಿರುವದಲ್ಲವೆ, ವಸ್ತ್ವಂತರವೆ—ಬೇರೊಂದು ವಸ್ತುವೇನು? ಎಂದರೆ—ಸ್ವಂತ ಸತ್ತೆಯಿಲ್ಲದ ಆ ಮಾಯಾವರಣ—ದೇಹೇಂದ್ರಿಯ ಅನಾತ್ಮ ಸಂಘಾತದಲ್ಲಿ ನಾನೆಂಬೀ ತಪ್ಪುತಿಳಿವು—ಅನಾತ್ಮಾಭಿ

ಕರ ಮುದರ ಸತ್ತ್ವಾತ್ಮಕಮಲ್ಲದೆ |
ಮರಳಿ ವಸ್ತ್ವಂತರವೆ ಮಾಯಾ-|
ವರಣ ವಿಕ್ಷೇಪಾದಿ ಕಾರ್ಯವಿದೇಕೆ ಸಂದೇಹ || ೮೮ ||

ಕಾರಣಾಪರರೂಪ ಕಾರ್ಯದ |
ತೋರಿಕೆಗೆ ನಿತ್ಯತ್ವವೇ ತ-|
ತ್ಕಾರಣಾತಿ ವಿಷಯಚರವೆ ಕಾರ್ಯಂ ತಿಳಿದುನೋಡೆ ||
ಕಾರಣಾನ್ಯದ್ಧ್ಯಾನಮುಹುದೇ-|
ಕಾರಿಯವು, ಭೇದವನು ಬಯಸುವ-|
ರಾರಿದರ ದೇಶದಲವರ್ಮೇಧಾ ವಿಹೀನರಲ್ತೆ! || ೮೯ ||

ರೂಪನಾಮುವ ಪಿಡಿದು ಭಿದೆಯಂ |
ಸ್ಥಾಪಿಸಲು ಬೇಕಾಯುಗಕ್ಕಂ |
ರೂಪರಹಿತಂ ನಾಮಾಸ್ಥಿತಂ ಪುಸಿಯಲ್ಲದುಳಿಯದು ||
ಈ ಪರಿಯೆಲೂಹಿಸಿದರೆಲ್ಲವು |
ಸೋಪನದ ಪಾಂಗಿಂ, ನಿಜಾವ-|
ಸ್ಥಾಪದವನಾಶ್ರಯಿಪವಲ್ಲದೆ ಮೇಲುಗಡೆಯಾಗಿ- || ೯೦ ||

---

ಮಾನವು ಮತ್ತು ಹೊರಗಿನ ದೃಶ್ಯಗಳ ಮಿಥ್ಯಾಜ್ಞಾನವು–ಎಂಬೀ ಈ ಉಭಯರೂಪ ಅದ್ವಿತೀಯಾತ್ಮನ ಮರೆಯು (ಮಾಂ|| ಕಾ|| ೪) ವಿಕ್ಷೇಪ—ಈ ನಿಮಿತ್ತಕವಾದ ಭೋಗವಿಕಾರ ಇವುಗಳ ವಾಸ್ತವವನ್ನು ಇದ್ದಂತೆ ಕಂಡಿರುವ ಜ್ಞಾನಿಗೆ ಅವುಗಳಿಂದ ಸಂದೇಹಕ್ಕೆ ಅವಕಾಶವಿರುವದಿಲ್ಲವು. ಅಜ್ಞಾನಿಯಾದವನು ಹೊಂದಿಕೊಂಡು ಅವುಗಳಲ್ಲಿ ತನ್ಮಯನಾಗಿದ್ದರು, ಹೊರಚ್ಚಾಗಿರುವ ಜ್ಞಾನಿಯು ಮಾತ್ರ ಈ ಹೊಸಪರಿಯ ದೃಶ್ಯದ ಉಡುಪುಗಳಿಂದಲೇ ತನ್ನಾತ್ಮನನ್ನು ಕಾಣುತ್ತ ಮತ್ತೂ ಸುಖದಿಂದಿರುವನು.

ಜಗಜ್ಜೀವಾದಿರೂಪೇಣ ಪಶ್ಯನ್ನಪಿ ಪರಾತ್ಮವಿತ್ |
ನ ತತ್ ಪಶ್ಯತಿ ತದ್ರೂಪಂ ಬ್ರಹ್ಮವಸ್ತ್ವೇವ ಪಶ್ಯತಿ (ಸೂ|| ಭಾ||)
ಕುತೋಽವಿದ್ಯೇತಿ ಚೋದ್ಯಂ ಸ್ಯಾನ್ನೈವ ಪಃ ಗ್ಧೇತ್ವಸಂಭವಾತ್ |
ಕಾಲತ್ರಯಾಽಪರಿಛಿತ್ತೇರ್ನಜೋರ್ಧ್ವಂ ಚೋದ್ಯಸಂಭವಃ (ನೈ. ಸಿ.)

೮೯ ತನ್ನ ಕಾರಣಕ್ಕಿಂತ, ಅಪರ—ಬೇರಲ್ಲದ ಕಾರ್ಯವು ಸತ್ಯವಾಗುವದಕ್ಕಿಲ್ಲ, ಅಥವಾ ತತ್+ಕಾರ....—ಆ ಕಾರ್ಯದ ಅರಿವು ತನ್ನ ಕಾರಣ ಬಿಟ್ಟು, ಬೇರೊಂದನ್ನು ಕುರಿತಿರುವದೂ ಇಲ್ಲ, ಕಾರಿಯವು—ಕಾರ್ಯವು, ಆದರೂ ಕಾರ್ಯಕಾರಣ ಎಂದು ನಾಮಮಾತ್ರದಲ್ಲಿ ಭೇದವನ್ನು ಹೊಂದಿರುವ ಇವುಗಳ, ದೇಶದಲಿ—ಬಳಿಯಲ್ಲಿ, ಭೇದವನ್ನು ಕಾಣುವವರು, ಮೇಧಾವಿಹೀನರಲ್ತೆ —ಬುದ್ಧಿಹೀನರಲ್ಲದೆ ಮತ್ತೇನು? ಏತಕ್ಕೆಂದರೆ—

೯೦ ....ಭಿದೆ—ಭೇದವನ್ನು ಸ್ಥಾಪಿಸುವಲ್ಲಿ, ಆ (ನಾಮರೂಪದ) ಯುಗಕ್ಕಂ—ಎರಡೆಂಬುದು ನಿಲ್ಲಬೇಕಾದರೆ, ಅವುಗಳಲ್ಲಿ ರೂಪನ್ನು, ರಹಿತಂ–ಬಿಟ್ಟು, ನಾಮ+ಅಸ್ಥಿತಂ—ಅಸ್ಥಿರಂ—ಹೆಸರೆಂಬುದೆ ಕಾಲೂರಿ ನಿಲ್ಲುವದಕ್ಕಿಲ್ಲವು, ಅದರಂತೆ ರೂಪವೂ ನಾಮವನ್ನು ಬಿಟ್ಟಿರುವದಕ್ಕಿಲ್ಲ

ನಿಲವು, ಮಧ್ಯದೊಳಾದರಿಂದಕಾ-।
ದಳಿವು ಕಾರಣಕಾಗದೇ ಎನ-।
ಲಳಿವುದೇ ಸತ್ತತ್ತ್ವಮಲ್ಲೇನನುಪಪತ್ತಿಯೆನೆ,॥
ಪೊಳೆವುದೆಂತೀ ಭುವನಮಿಲ್ಲದೊ-।
ಡುಳುಮೆ ಹಾಗೂ ತೋರ್ಪುದೆನಲೀ-।
ಮೊಲದ ಕೋಡಿನ ಬಿಲ್ಲ ಮಾರುಂಟಖಿಲ ಪುರಗಳಲಿ ! ॥ ೯೧ ॥

ತರ್ಕವೇನೀ ಬಳಿಯಲಾರ್ಯರ-।
ತೀರ್ಕಡೆಯೆ ಸಂಸೇವ್ಯಮೆನೆ, ಸಂ-।
ಪರ್ಕಮಿಲ್ಲಾವಸ್ತುವಿನಲೀ ಭೂತಕಾರಿಯದ ॥
ಒರ್ಕೆಲವಿದಕ್ಕಿಲ್ಲವದ ಬಿ-।
ಟ್ಟಿರ್ಕೆಗಾಕರಮಾ ವಿವರ್ತವೆ-।
ತೋರ್ಕುಮೆಂದಾಚಾರ್ಯಸಮ್ಮತಮಾತ್ಮಬೋಧದಲಿ ॥ ೯೨ ॥

ಬೊಮ್ಮದಾನಂದಂ ಪಡೆದು ಭಯ-।
ಮಂ ಮರೆಯ ದೇವಪ್ರಿಯನು, ಸಕ-।
ಲಂ ಮಿತಂ ತುಚ್ಛಂ ಸದಾಕ್ಷೇಪಾರ್ಹಮತಿಗರ್ಹ್ಯಂ ॥

---

ವಾಗಿರುವದು. ಎಂದರೆ ಒಂದಿನ್ನೊಂದನ್ನು ಬಿಟ್ಟಿಲ್ಲದ ಇವುಗಳಲ್ಲಿ ಒಂದಿನ್ನೊಂದನ್ನು ಎದುರು ಗೊಂಡೇ ಒಂದರಮೇಲೊಂದು ತನ್ನಕಾಲನ್ನೂರಿಕೊಂಡೇ ನಿಲ್ಲಬೇಕಾದ ನಾಮ ರೂಪ ಎಂಬೆರಡೂ ಪುಸಿಯಲ್ಲದೆ ಸತ್ಯವಾಗಿ ಉಳಿಯದು+ಅದು—ಎಂದರೆ ಅಧ್ಯಾಸದಿಂದ ಹುಸಿಗಟ್ಟಿದ ಆ ನಾಮ ರೂಪಗಳಲ್ಲಿ ಒಂದನ್ನು ಬಿಟ್ಟಿನ್ನೊಂದಿಲ್ಲದ ಅವುಗಳಲ್ಲೊಂದು ನಿಂತರೂ ಅದು ಸತ್ಯವಾಗುವಂತಿಲ್ಲ ಎಂಬುದನ್ನೂ ಇಲ್ಲಿ ಗಮನಿಸಬೇಕಲ್ಲದೆ, ಈ ಪೇಲವ ಯುಕ್ತಿಯನ್ನೇ ಸನಿಯುತ್ತ ಕೂರಬಾರದು ಎಂಬುದಕ್ಕೆ ಸೋಪಾನದಪಾಗಿಂ—ಕನಸಿನ ದೃಶ್ಯಗಳಂತೆ ಹುಸಿತೋರಿಕೆಯ ಶರೀರದ ಆ ನಾಮ ರೂಪುಗಳೆರಡೂ, ನಿಜಾ....ಲ್ಲದೆ—ತಮ್ಮ ನಿಜವಾದ ತತ್ತ್ವಮಾತ್ರವಾಗಿ ನಿಲ್ಲುವವಲ್ಲದೆ, ಅವು ಮೇಲು....ನಿಲವು—ನಾಮರೂಪಿನ ಹೊರಗಿನ ತಮ್ಮ ಕಲ್ಪಿತರೂಪಿನಿಂದ ಎಂದಿಗೂ ನಿಲ್ಲವು.

೯೧ ಇದಕೆ—ಈ ನಾಮರೂಪಕ್ಕೆ ಮಧ್ಯದಲ್ಲಾದ ಅಳಿವು ತನ್ನ, ಕಾರಣಕೆ+ಆಗದೆ+ ಎನಲು, ಆ ಸತ್ತತ್ತ್ವವೆಂದಿಗೂ ಅಳಿಯುವದಿಲ್ಲವೆಂಬಲ್ಲಿ, ಅನುಪಪತ್ತಿ—ಅಸಮಂಜಸವೇನೂ ಇರುವದಿಲ್ಲ. ಮತ್ತು ಉಳುಮೆಯೊಂದಿಲ್ಲದಿದ್ದರೆ, ಈ ಭುವನಂ+ಪೊಳೆವುದು+ಎಂತು? ಇದೂ ಆಗದೆಂದರೆ ಇದಕ್ಕೆ ದೃಷ್ಟಾಂತವನ್ನು ಹೇಳಿ ಹಾಸ್ಯಮಾಡುತ್ತಿದಾರೆ.

೯೨ ಆರ್ಯರ—ವೃದ್ಧರಾದವರ, ತೀರ್ಕಡೆ—ತೀರ್ಕೆ—ತೀರ್ಮಾನವೊಂದೇ; ಆ ವಸ್ತು—ಆ ಆತ್ಮನಲ್ಲಿ, ಭೂತಕಾರಿಯದ—ಭೂತಕಾರ್ಯಗಳಾದ ದೇಹಾದಿಗಳ, ಒರ್+ಕೆಲವು—ಅಕ್ಕಪಕ್ಕಗಳೊಂದೂ, ಇದಕ್ಕಿಲ್ಲವು+ಅದ—ಆ ಆತ್ಮತತ್ತ್ವವನ್ನು ಬಿಟ್ಟು, ಇರ್ಕೆಗೆ+ಆಕರಂ-ಇರುವದಕ್ಕೆ ಮತ್ತೊಂದು ಮೂಲವು ಆಶ್ರಯವು ಈ ಜಗತ್ತಿಗಿರುವದಿಲ್ಲವಾದ್ದರಿಂದಲೂ ಅದು ಆ ಬ್ರಹ್ಮದ ವಿವರ್ತವೇ ಆಗಿದ್ದುಕೊಂಡು ತಾನು, ತೋರ್ಕುಂ+ಎಂದು....,

೯೩ ಮರೆಯ—ಆಶ್ರಯಿಸುವದಿಲ್ಲ, 'ದೇವಪ್ರಿಯನು—"ತಂದೇವಾ ಬ್ರಹ್ಮಣಂ ವಿದುಃ"

ಸಮ್ಮತಂ ಶಾಸ್ತ್ರಂಗಳಲಿ ಪರ-|
ಬೊಮ್ಮಮೊಂದೇ ನಿಲುವದೆಂದಿದ-|
ಕಂ ಮುನಿಗಳನುಭವಮಿದೇ ರೀತಿಯಲಿ ವರ್ಣಿಸಿತು || ೯೩ ||

ವಸ್ತುಮಾತ್ರಾನಂದವಾಗಿ ನಿ-|
ರಸ್ತ ಭೇದಂ ಪುರುಷನಾರವ-|
ನೇ ಸ್ತುತಿಸಲಳವಾದ ಪರಶಿವ ನವನಿಗೀ ತೆರದ ||
ವಾಸ್ತುವದ ತುಚ್ಛೀಚ್ಛೆಯೆಂತುಟ-|
ನಸ್ತ ಚಿದಖಂಡಂಗೆ ಪರಿತೃ-|
ಪ್ತ ಸ್ತಿಮಿತಚಿತ್ತಂಗೆ ಎಂದುದು ಸಾಧುಬೋಧಾರ್ಯೆ || ೯೪ ||

ಇತರ ಶಾಸ್ತ್ರದೆ ತಿಳಿವ ಶಕ್ತಿಯು |
ಮತಿಗೆ ಮೇಣಧ್ಯಾತ್ಮಶಾಸ್ತ್ರ-|
ಸ್ಥಿತಿಯೊಳಗೆ ಜೀವೇಶರೈಕ್ಯವಪೇಳೆ ತಿಳಿಯದಿರೆ ||
ಗತಿಯದಾವುದವಂಗೆನಲ್ಪಶು-|
ಪತಿಯನೇ ಚನ್ನಾಗಿ ಭಜಿಸೆಂ-|
ದತಿಶಯುವ ಕಡು ಪೇಳಿ ಪಾಪಕ್ಷಯ ಮಾಡುವದು || ೯೫ ||

ವಾಸನಾ ಕ್ಷಯವಾದೊಡೆ ಚಿದಾ-|
ಭಾಸನಂ ಕೂಟಸ್ಥನಲ್ಲ-|
ಧ್ಯಾಸಮಂ ಮಾಡುವದು ತನಗೆ ತಾನು ಬಂದಿಹುದು ||

---

ಎಂದು—ದೇವಪೂಜ್ಯನಾದ ಆ ಬ್ರಹ್ಮಜ್ಞಾನಿಯು, "ಆನಂದೋ ಬ್ರಹ್ಮಣೋ ವಿದ್ವಾನ್ನಬಿಭೇತಿ ಕುತಶ್ಚನ" ಬ್ರಹ್ಮಸ್ವರೂಪದ ಆನಂದವನ್ನು ತನ್ನಾತ್ಮಸ್ವರೂಪದಿಂದ, ಬಲ್ಲ–ಹೊಂದಿದ ಜ್ಞಾನಿಯು ಏತಕ್ಕೂ ಅಂಜುವನಿಲ್ಲವೆಂಬ ಶ್ರುತಿಗಳು; ಮಿತಂ—ಮಿತಃ–ಹುಟ್ಟಿದ್ದು, ಇಂತಿಷ್ಟೇ ಸರಿಯೆಂದು ಪ್ರಮಾಣದಿಂದ ಗೊತ್ತುಮಾಡಿ ಅಳೆಯಲ್ಪಡತಕ್ಕದ್ದು, ತುಚ್ಛಂ—ಶೂನ್ಯವು, ಸದಾ+ಆಕ್ಷೇಪ—ಆರ್ಹಂ+ಅತಿಗರ್ಹ್ಯಂ—ಅತ್ಯಂತ ತಿರಸ್ಕಾರ್ಯವು;

೯೪ ತನ್ನಾತ್ಮವಸ್ತುವು ಆನಂದಮಾತ್ರವಾಗಿ, ನಿರಸ್ತ—ಭೇದವಿಲ್ಲದ, ಪುರುಷನು+ಆರ್ ಅವನೇ—ಆ ಜ್ಞಾನಿಯೊಬ್ಬನೇ, ಸ್ತುತಿಸಲು+ಅಳವಾದ—ಯೋಗ್ಯನಾದ, ....ಯ.ು+ಎಂತುಟು—ಎಷ್ಟುಮಾತ್ರದ್ದು? ಅನಸ್ತ ಚಿತ್—ಲೋಪವಿಲ್ಲದ ಜ್ಞಾನರೂಪನು, ಅಖಂಡನು. ಪರಿತೃಪ್ತ—ಎಲ್ಲಾಕಡೆಯಿಂದಲೂ ತೃಪ್ತಿಯನ್ನು ಹೊಂದಿರುವ, ಸ್ತಿಮಿತ—ತಿಮಿತ—ತನ್ನಲ್ಲಿ ಅಲುಗದೆ ನಿಂತ ನಿಶ್ಚಿತವಾದ ಚಿತ್ತನಿಗೆ;

೯೫ ಮತಿಗೆ+ಇರಲು+ಮೇಣ್+ಅಧ್ಯಾತ್ಮ....ಗತಿ (—ಮಾರ್ಗವು) ಯು+ ಅದು+ಆವುದು+ಅವರಿಗೆ+ಎನಲ್+ಪಶುಪತಿಯನೆ—ಶಿವನನ್ನೇ, ಭಜಿಸು–ಭಕ್ತಿಯಿಂದ ಆರಾಧಿಸುತ್ತ ಸೇವಿಸು, ಎಂದು+ಅತಿಶಯುವ—ಉಪಾಯಾಂತರವನ್ನು, ಕಡು—ಚೆನ್ನಾಗಿ ಹೇಳಬೇಕು.

೯೬ ವಾಸನಾಕ್ಷಯವು+ಆದೊಡೆ—ಗುರುವು ತನಗೆ ಮೊದಲು ಹೇಳಿದ್ದ ಆತ್ಮೈಕ್ಯವೇ

ಓಸರಿಸಿ ಪೇಳಿದೆರು, ಕೇಳದ |
ಮಾಸಿರುವ ಮತಿಯುಳ್ಳವರಿಗ-|
ಭ್ಯಾಸವಂ ಮಾಡಿಸದೆ ಸುಮ್ಮನೆ ವಿದುರರಿರಬೇಕು || ೯೬ ||

ಕೇಳಿ ಖತಿಗೊಂಡಿದಕೆ ಬದುಲಂ |
ಪೇಳುವರಿಗಿದನೊರೆಯಲಾಗದು |
ಪೇಳಹುದು ವಾಶಿಷ್ಠದೊಳಗಿವರೀರ್ವರಿಗೆ ಗತಿಯಂ ||
ಶೂಲದಿಂದಿರಿದಿರಿದು ಖರ ಕರ-|
ವಾಲದಿಂ ಕಡಿಕಡಿದು ಬೇಯಿಪ-|
ತೈಲಪೂರ್ಣಕಟಾಹ ನರಕಂ ಸತ್ಯಮಾಗೆಂದು || ೯೭ ||

**ಮುನಿಜನೋಕ್ತಿ ಪುರಾಣ ನಿಗಮೋ-|**
**ಪನಿಷದರ್ಥ ಸಮುಚ್ಚಯದಿ ಸಂ-|**
**ಜನಿತ ಸಿದ್ಧಾಂತವಿದು;** ಬಲ್ಲವರಿದನು ನೆರೆನಂಬಿ-||
ಮನನವಂ ಮಾಡಿದರೆ ನಿರ್ಮಲ-|
ರೆನಿಪರನುಭವಮುದಿಸೆ ಸಂಸೃತಿ-|
ಯನು ಪಳಿದ ಮತಿಯಿಂದ ಜೀವನ್ಮುಕ್ತರಾಗಿಹರು || ೯೮ ||

ಚಮುಕದಿಂದಖಿಲಾಧಿಪತ್ಯವ, |
ನಮುಕದಿಂದಖಿಲಾತ್ಮಭಾವವ-|
ನಮರ ಮನುಜ ಭುಜಂಗ ಮುಖರೋಲ್ಬಿತ್ತರಿಸುತಿರಲು ||

---

ಬುದ್ಧಿಗೆ ಬಂದು ಆಗ ಹಿಡಿಯುವದು; ತನಗೆ ತಾನು—ಒಂದು ಕಾರಣವಿಲ್ಲದೆ, ಸ್ವಭಾವದಿಂದಲೇ; ಓಸರಿಸೆ–ಸರಿಸರಿಯೆನ್ನುವಂತೆ ಅನುಭವಕ್ಕೊಪ್ಪಿಸಿಕೊಟ್ಟು, ಮಾಸಿರುವ–ಭೋಗವಾಸನೆಯೆಂಬಪಾಪದಿಂದ ಅಥವಾದುರಾಗ್ರಹವೆಂಬ ಕೊಳೆಯಿಂದ ಚಿತ್ತದೂಷಿತರಿಗೆ, ವಿದುರರು–ಬಲ್ಲತತ್ತ್ವಜ್ಞಾನಿಗಳು;

೯೭ ಕೇಳಿ ಖತಿಗೊಂಡು—ರೇಗಿಬಿದ್ದು,.... ಪೇಳುವರಿಗೆ+ ಇದನು + ಒರೆಯಲಾಗದು—ತತ್ತ್ವವು ಅದ್ವಿತೀಯವೆಂಬುದರಲ್ಲಿ ತಾಳ್ಮೆಯಿಲ್ಲದವರಿಗೂ, ತನಗೆ ಎದುರುಬಿದ್ದು ವಾದಿಸುವವರಿಗೂ ಆಗುವ ದುರ್ಗತಿಗಳನ್ನು; ಖರ—ಹರಿತವಾದ, ಕರವಾಲ—ಕೈಕತ್ತಿಯಿಂದ, ಕಟಾಹ—ಕೊಪ್ಪರಿಗೆಯು;

೯೮ ಹೀಗೆಲ್ಲವರ ಸಾರವಾದ ಅರ್ಥವನ್ನೆಲ್ಲವನ್ನೂ, ವೇದಾಂತಗಳು, ಸಮುಚ್ಚಯದಿ—ಒಕ್ಕಡೆ ತಂದು, ಅದನ್ನೆಲ್ಲ ಕೂಡಿಸಿ ಮಾಡಿದ್ದರಿಂದ; ಜನಿತ—ಹುಟ್ಟಿದ, ವೈದಿಕವಾದ ಉತ್ತಮ ಸಿದ್ಧಾಂತವಿದು; ನಿರ್ಮಲರು—ವಿಶಾಲಹೃದಯರೆಂದೆನಿಸಿಕೊಳ್ಳುವರು, .... ಪಳಿದ—ಸಂಸಾರವನ್ನು ತಿರಸ್ಕರಿಸಿದ ಬುದ್ಧಿಯಿಂದ ಅವರೇ ಜೀವನ್ಮುಕ್ತರೆನಿಸುವರು.

೯೯ ಸಂಕಲ್ಪಮಾತ್ರದಿಂದ ದಕ್ಷಿಣಾಮೂರ್ತಿಯ ರೂಪುಗೊಂಡ ಪರಮಶಿವನು—ಸನಕಾದಿಗಳನ್ನು ನೆವಮಾಡಿ ಸ್ವರ್ಗ ಮರ್ತ್ಯ ಪಾತಾಳದ ಎಲ್ಲಾ ಲೋಕದವರನ್ನೂ ಕುರಿತು—ಚತುರ್ಮುಖನವರೆಗಿನ ಅಖಿಲಾಧಿಪತ್ಯವನ್ನು ಕರ್ಮದಿಂದಲೂ, ಎಲ್ಲರಿಗೂ ಸ್ವತಸ್ಸಿದ್ಧವಾಗಿರುವ ಬ್ರಹ್ಮಾತ್ಮ

ವಿಮಲ ಶಿವಸಂಕಲ್ಪದಿಂ ತೋ-|
ರ್ದಮುಳನೊಂದದಖಂಡಸುಖ ಸಂ-|
ಭ್ರಮನುಮಾವಲ್ಲಭನೊಡರ್ಚುಗೆ ನಮಗೆ ಶಿವಪದಮಂ || ೯೯ ||

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೊಳನುಭಂಧಚತುಷ್ಟಯಮಂ
ಪೇಳಿದ ಹನ್ನೆರಡನೆಯ ಸಂಧಿಯು ಸಂಪೂರ್ಣಂ (ಪದ ೭೦೨)

## ತತ್ತ್ವವಿಚಾರ ನಿರ್ಣಯ—ಹದಿಮೂರನೆಯ ಸಂಧಿಯು

ಸೂ|| ಸಾರವಿಲ್ಲದ ಘೋರತರ ಸಂ-|
ಸಾರನುಂ ಜಯಿಸುವೊಡೆ, ತತ್ತ್ವವಿ-|
ಚಾರಮೇ ಪರಮಾರ್ಥಮೆಂದರುಹಲ್ಪಡುಗುಮಿಲ್ಲಿ || ಪ ||

ನೆರೆದ ಗೋಷ್ಠಿಯಲಾಗಲಾ ಯಾ-|
ಪುರುಷದರುಶನ ಸನ್ನಿಧಾನ |
ಸ್ಮರಣಗಳ್ದೃಗ್ದೇಹಚಿತ್ತಂಗಳನು ಪಿಡಿಯುತಿರೆ ||
ಮರುಳುವೆಣ್ಣೆಯ ತೆರದೊಳಂತಃ- |
ಕರಣದೋಳ್ಕುದಿಗೊಂಡು ಗುಣದೋ-|
ಳ್ಕರಡೆನಿಪ ಪಾಪಿಗಳಿಗರುಹದಿರೀ ಕಥಾಶ್ರುತಿಯ || ೧ ||

ಉದಿಪುದಪರೋಕ್ಷಾನುಭವವಿೊ-|
ಸದಮಲ ಗುರೂಕ್ತಿಯ ಪಿಡಿದು, ಭಾ-|
ವದೆ ವಿಚಾರದ ಮೂಲಕನೊ ಎನಲಾಗೆ ಸಂಖ್ಯಾನಂ-||

---

ಭಾವವನ್ನು ಕೇವಲ ಜ್ಞಾನದಿಂದಲೂ ಸಾಧಿಸುವ ಕ್ರಮವನ್ನು ವಿಸ್ತರಿಸುತ್ತಿರುವನು. ದ್ವೈತದ ಸೋಂಕಿಲ್ಲದ ಅಖಂಡ ಸುಖಸಂಭ್ರಮನು+ಉಮಾವಲ್ಲಭನೂ ಆಗಿರುವ ನಿತ್ಯಮಂಗಲಸ್ವರೂಪನಾದ ಅವನು ನಮಗೆ ಶುಭಪ್ರದನಾಗಲಿ (ಚಮಕ ನಮಕಗಳು ಶ್ರೀ ೧೯ ಕ್ಕೆ ಸೇರಿದ ಮಂತ್ರಗಳು)

೧ ನೆರೆ....ಗಳ್—ಸೇರಿದ ಜನರ ಗುಂಪಿನಲ್ಲಿ, ತನಗಿಂತಲೂ ಹೆಚ್ಚಿನ ಪುರುಷರ ಗೌರವ ಪೂಜಾದಿಗಳೆಂಬ ಹೆಚ್ಚಳದ ದರ್ಶನ ಸ್ಮರಣಾದಿಗಳು ಬಂದು ತನ್ನ ದೃಗ್—ನೇತ್ರಾದಿ ಇಂದಿಯಗಳನ್ನೂ ಮತ್ತು ದೇಹಮನ ಬುದ್ಧಿ ಚಿತ್ತಗಳನ್ನೂ ಹಿಡಿದು ನಿಂತ ಆ ಸಂಸ್ಕಾರಗಳಿಂದ, ಅಂತಃಕರಣದೋಳ್+ಕುದಿಗೊಂಡು—ತನ್ನ ಮನಸ್ಸಿನಲ್ಲಿ ಉರಿಗೊಂಡು, ತನಗಿಂತ ಮೇಲಿನವರ, ಗುಣದೋಳ್+ಕರಡು—ವ್ಯರ್ಥವಾದ ದೋಷಗಳನ್ನೆಣಿಪ....,

೨ ಅನುಭವವು, ಗುರೂಕ್ತಿ—ಗುರುವಿನ ವಾಕ್ಯದಲ್ಲಿ ವಿಶ್ವಾಸವನ್ನು ಇಡುವವರಿಂದ ಬರುವದೋ? ಅಥವಾ ವಿಚಾರದಿಂದ ತನಗೆ ಆಗುವದೋ? ಎನಲು+ಆಗೆ+ಸಂಖ್ಯಾನಂ—ಬಲ್ಲ ಗುರುಗಳಿಂದ ತನಗೆ ಲಭಿಸಿದ ವಿಚಾರ ಒಂದರಿಂದಲೇ, ಕರ....ದಂತೆ—ಅಂಗೈಯೊಳಗಣ ನೆಲ್ಲಿಯಂತೆ ತನಗೆ ಅನುಭವವು, ಒದಗುವದು—ಸಿದ್ಧಿಸುವದು, ಈ ಅರ್ಥದಲಿ—ಬರಿಯ ವಿಶ್ವಾಸವೊಂದೇ, ಪೊಂದದು—ಪೂರ್ಣವಾಗಿ ಸಾಕಾಗಿ ಬರುವದಿಲ್ಲ.

ಒದಗುವದು ಕರತಲ ಸಮಾಶ್ರಿತ-।
ಬದರದಂತೀ ಅರ್ಥದಲಿ ಪೊಂ-।
ದದು ಪರೋಕ್ಷ ಜ್ಞಾನಸಾಧನವಾದ ವಿಶ್ವಾಸಂ ॥ ೨ ॥

**ಇರಲದೇನವಿಚಾರವಿರ್ದರೆ।**
**ದೊರಕಬೇಡಿನ್ನೊಂದು ದೋಷೋ-।**
**ತ್ಕರವಿದೇ ಪ್ರತ್ಯಕ್ಷಮತಿಗಾಗುವದು ಪ್ರತಿಬಂಧ ॥**
ಗುರು ಚರಣರಿಂ ಪಂಚದಶಿ ವಿ-।
ಸ್ಫುರಿಪುದೆಂದಿದರಿಂದ ಶಾಸ್ತ್ರದ ।
ಪರಿಚಿತಿಯ ನಿರ್ಮಲತೆ ವೆತ್ತಮನೀಷಿಯಿಂ ಕಾರ್ಯಂ ॥ ೩ ॥

**ಧೀರನಿಂದ ವಿಚಾರವಾ ಸುವಿ-।**
**ಚಾರದಿಂ ತೀಕ್ಷ್ಣತೆಯ ಪೊರ್ದಿದು-।**
**ದಾರ ಬುದ್ಧಿಯು ಕಾಬುದಾತ್ಮನ ಸತ್ಯ ಮುಹಪದಮಂ ॥**
ಯಾರಮುದ್ದಿಂಗಳುಕದಿಹ ಸಂ-।
ಸಾರ ರೋಗಕ್ಕಿದುವೆ ಮದ್ದಿದ-।
ನಾರು ಸಾಧಿಪರಪ್ಪರುಲ್ಲಾಘಕರಂ ಜಗದೆ ॥ ೪ ॥

ಕೆಡದು ಕತ್ತಲೆಯಲ್ಲಿ ಬೆಳಕಿನೊ-।
ಳಡಗದೀಕ್ಷಿಸುತಿರ್ದೊಡಕ್ಷಿಗೆ-।
ತಡೆಯಿದೀ **ಚರ್ಚಾವಿಲೋಚನ**ವಾವ ಬಲಯುತವೊ! ॥

---

೩ ವಿಶ್ವಾಸವಿರಬೇಕೆಂಬುದು ಸರಿಯೆ, ಆದರು ಅವಿಚಾರವೊಂದಿದ್ದರೆ, ಸಾಕು+ದೊರಕ ಬೇಡಿನ್ನೊಂದ. ದೋಷ+ಉತ್ಕರವು—ಇದೇ ಎಲ್ಲಕ್ಕೆಲ್ಲ ದೋಷಗಳಿಗೂ ಹೆಚ್ಚಿನದು, ಪ್ರತ್ಯಕ್ಷ ಮತಿಗೆ—ಅನುಭವಕ್ಕೆ, ಆದ್ದರಿಂದಲೇ ಆಮೂಲಾಗ್ರ ಶಾಸ್ತ್ರವಿಚಾರದಿಂದಲೂ ಜ್ಞಾನಕ್ಕೆ ಬೇಕಾಗಿರುವ ಸಂಪೂರ್ಣ ಸಾಧನಗಳಿಂದಲೂ ನಿರ್ಮಲತೆಯನ್ನು, ವೆತ್ತ—ಪಡೆದುಕೊಂಡಿರುವ, ಮನೀಷಿಯಿಂ—ಬುದ್ಧಿಯಿಂದಲೂ ಕೂಡಿಯೇ ಜಿಜ್ಞಾಸುವಿಗೆ, ಕಾರ್ಯಂ—ಜ್ಞಾನಫಲವು ದೊರೆಯ ಬೇಕಾಗಿರುತ್ತದೆ.

೪ ಧೀರ—ಬಲ್ಲ ಒಬ್ಬ ಸದ್ಗುರುವಿನಿಂದಲೇ ಪ್ರಾಪ್ತವಾದ, ತೀಕ್ಷ್ಣ....ದುದು+ಆರ—ಸೂಕ್ಷ್ಮಬುದ್ಧಿಯು, ಕಾಬುದು—ಕಾಣುವದು, ....ದ್ದಿಂಗೆ+ಅಳುಕದಿಹ—ಅಂಜದಿರುವ, ....ಗಕ್ಕೆ+ಇದುವೆ-ಸಾರ್ವತ್ರಿಕ ಯುಕ್ತ್ಯನುಭವಕ್ಕೊಂದಿರುವ ವಿಚಾರಜನ್ಯವಾದ ಈ ಜ್ಞಾನವೊಂದೇ ಸರಿಯಾದ, ಮದ್ದು+ಇದನು+ಆರು—ಯಾರು, ಉಲ್ಲಾಘಃ+ಕರಂ—ಅತ್ಯಂತ ರೋಗವಿಲ್ಲದ, ಕುಶಲರು—ಪರಿಶುದ್ಧರು, ಅಪ್ಪರು—ಆಗುವರು,

೫ ....ನೊಳು+ಅಡಗದು + ಈಕ್ಷಿಸುತಿರ್ದೊಡೆ—ಎಷ್ಟು ನೋಡುತ್ತಿದ್ದರೂ ಅದರಿಂದ ಏನಾದರೊಂದು ಅಡ್ಡಲಾಗಿ ಬಂದು, ಅಕ್ಷಿಗೆ+ತಡೆಯದು+ಈ ಚರ್ಚಾವಿಲೋಚನವು—ವಿಚಾರವೆಂಬೀ ಕಣ್ಣು, ಜಡ....ರ್ಯ—ಸಮುದ್ರಕ್ಕಿಂತಲೂ ಆಳವಾದದ್ದು, ....ಷ್ಕಂಸ್ಯಂ—

ಜಡಧಿಯಿಂ ಗಾಂಭೀರ್ಯ, ಮೇರುವಿ-।
ನೆಡೆಗೆ ನೈಷ್ಕಂಪ್ಯಂ, ಸುಶೀತಲ-।
ಮುಡುಪಗಿಂದಾಧಿಕ್ಯಮಾಗಿದರಿಂದ ಕುಶಲರಲಿ- ॥ ೫ ॥

ಪುಟ್ಟುವುದು ನಿಜ ಚರ್ಚೆವಡೆಯ-।
ಲ್ಪಟ್ಟುದಾದರೆ ಯಾವನಿಂ ತಂ-।
ದಿಟ್ಟುಕೊಡುವುದು ನಿತ್ಯತೃಪ್ತಿಯನನ್ಯವೇಕಿನ್ನು ॥
ಘಟ್ಟಿಯಾಗಿದರಿಂದ ವಿರತಿಯು ।
ಪುಟ್ಟುತಿಹುದಾ ವಿರತಿಯಿಂದಿದು ।
ಪುಟ್ಟುವುದು ನೆರೆ ಭೂಜಬೀಜನ್ಯಾಯದಂದದಲಿ ॥ ೬ ॥

ಮತ್ತಮಿವು ತಮ್ಮೊಳಗೆ ತಾವೊ-।
ತ್ತೊತ್ತೆಯಿಂದರ್ಥಿಪವು ಮೇಘ ಸ-।
ರಿತ್ತರುಣ್ಯಧಿಪರವೊಲಿದಕೆ ನಿಜತ್ವಮೆಂತೆನಲು ॥
ಎತ್ತಣಿಂ ಬಂದುದು ಶರೀರಮು-।
ದಾತ್ತಮಾನಮಿದಾವುದಿದರಿಂ-।
ಪತ್ತೆಣಿಕೆಗೊಂಡಾನುಮಾರೆಂಬುದೆ ಪರಪ್ರಕೃತಿ ॥ ೭ ॥

ಸುಜನ ಸಂಗತಿ ಶಾಸ್ತ್ರ ವೈರಾ-।
ಗ್ಯ ಜಿತ ಲಾಲಸ ಮುಖ್ಯ ವೃತ್ತಿಯ ।
ಭಜಿಪುದೇ ಚರ್ಚೆಗೆ ಸದಂಗೋಪಾಂಗವೆನಿಸುವದು ॥

---

ಮೇರುವಿಗಿಂತಲೂ ನಿಶ್ಚಲವು, ....ಮುಡುಪಗಿಂದ—ಹಿಮಂತಋತುವಿನ ಚಂದ್ರನಿಗಿಂತಲೂ ಅತ್ಯಧಿಕವಾದ ಶೀತಲವು, ಕುಶಲ—ಜ್ಞಾನಿಗಳಲ್ಲಿ,

೬ ....ಟ್ಟುದು+ಆದರೆ—ಪೂಜ್ಯರಾದ ಗುರುಗಳಿಂದ ದೊರೆತ ವಿಚಾರದಿಂದಾಗುವ ನಿತ್ಯತೃಪ್ತಿಯನ್ನು ಮಿಕ್ಕಿನ ಮನುಷ್ಯರಲ್ಲಿ ಯಾರಿಂದಲೂ ತಂದುಕೊಡುವದಕ್ಕಿಲ್ಲದ್ದರಿಂದ ಈ ವಿಚಾರವನ್ನು ಬಿಟ್ಟು, ಇನ್ನು+ಅನ್ಯವು+ಏಕೆ? ಘಟ್ಟಿಯಾಗಿ+ಇದರಿಂದ—ಈ ತತ್ತ್ವವಿಚಾರದಿಂದ ವಿರತಿಯು, ಅದರಿಂದ ತತ್ತ್ವವಿಚಾರವು ಒಂದರಿಂದೊಂದು ಬೀಜಾಂಕುರನ್ಯಾಯದಿಂದ ಹುಟ್ಟಿ ತಮ್ಮೊಳಗೆ ಅವು ಗಟ್ಟಿಗೊಳ್ಳುವವು.

೭ ಮತ್ತಂ+ಇವು—ಇಷ್ಟೇಯಲ್ಲದೆ ಇವುಗಳು, ತಾವು+ಒತ್ತೊತ್ತೆಯಿಂದ—ಒಂದರ ಪಕ್ಕ ಇನ್ನೊಂದು ಸೇರಿಕೊಂಡೇ, ಅರ್ಥಿಪವು—ಬೆಳೆಯಲಿಚ್ಛಿಸುತ್ತಿರುವವು, ಮೇಘ....ಪರಬಲ್—ಒಂದಿನ್ನೊಂದರಿಂದ ವೃದ್ಧಿಯನ್ನೈದಲಿರುವ ಸಮುದ್ರ ಮತ್ತು ಮೇಘ ಇವುಗಳಂತೆ, ಇದಕೆ ನಿಜತ್ವಂ—ವಿಚಾರವೆಂಬುದು ಹೇಗೆ? ಎಂದರೆ, ಎತ್ತಣಿಂ—ಎಲ್ಲಿಂದ, ಉದಾತ್ತ (—ಉನ್ನತವಾದ ಅಭಿ)ಮಾನಂ+ಇದು+ಆವುದು+ಇದರಿಂದ ಪತ್ತೆಣಿಕೆಗೊಂಡ+ಆನುಂ—ಅಜ್ಞಾತದಶಮನಂತಿರುವ 'ನಾನು' ಎಂಬುದರ ನಿಜವೇನು? ಎಂಬುದೇ, ಪರಪ್ರಕೃತಿ—ವಿಚಾರವೆಂಬುದು,

೮ ಜಿತಲಾಲಸ—ಭೋಗಾಸಕ್ತಿಯನ್ನು ಗೆಲ್ಲುವವೇ, ಮುಖ್ಯ—ಈ ಮುಂತಾದ ವೃತ್ತಿಯು—

ನಿಜವನಾಲೋಕಿಪುದು, ತೃಷ್ಣೆಯ-।
ಖಜಿಪುದಪ್ಪುದು **ನಯನವೆಂದೇ** ।
ರಜವ ಬೆರೆಯದ ಸನ್ಮನಸ್ಕರ್ಪೇಳ್ದರಾರೈದು ॥ ೮ ॥

ಅಹುದು ಜೀವನ್ಮುಕ್ತನಾಮಕ-।
ಸಹಜಫಲ ವಿದಕವಧಿಯೆಂದಿಗೆ-।
ಬಹುದೆನಲು, ದೇಹಾತ್ಮಭಾವನೆಯಂತೆ ತನ್ನೊಳಗೆ-॥
ನಿಹಿತವಾಗಲ್ಕನುಭವವದೇ-।
ಗ್ರಹಿಪುದಿದನೆಂತೆನಲು, ದೇಶಕೆ ।
ಸಹಜವಾದಾಚಾರದಿಂ, ಬಂಧುಗಳ ಸಮ್ಮತಿಯಿಂ ॥ ೯ ॥

ಪೌರುಷದೆ ಬಹುದೋಷಗರ್ಹ್ಯವ ।
ಸಾರದಿಹ ಯತ್ನದಿ ಧನವ ತಾ-।
ನಾರಜಿಸಿ ಅದರಿಂದ ಸಂಪಾದಿಪುದು ಸಜ್ಜನರ ॥
ಚಾರುಸಂಗತಿ ದೊರಕಲವರ ವಿ-।
ಕಾರವಳಿವುದು ಭೋಗವಾಂಛೆಯ,।
ತೋರುವುದು **ಸುವಿಚಾರವದರಿಂ ಭೋಗ ಗರ್ಹಣದಿಂ** ॥ ೧೦ ॥

ಔಪನಿಷದರ್ಥಂ ಘಟಿಪುದಾ-।
ರೂಪಿನಿಂದಿದರಿಂದ ತೃಪ್ತಿ ದ-।
ಶಾಪಟುತ್ವಂ ನಿಲುವುದುರೆ ಮೇರುವಿನ ಭಾವದಲಿ ॥

---

ಸಾಧನೆಗಳನ್ನೂ, ಭಜಿವುದೆ—ಹೊಂದುವವೆಂಬುವೆ. ಚರ್ಚೆಗೆ—ತತ್ತ್ವವಿಚಾರಕ್ಕೆ, ನಿಜವನಾಲೋಕಿಪುದು—ತತ್ತ್ವವನ್ನು ಕ್ಷಣವೂ ಬಿಡವಂತೆ ಸರ್ವದಾ ತನ್ನ ಮನಸ್ಸಿನಲ್ಲಿಯೇ ಕಂಡುಕೊಳ್ಳುತ್ತಿರುವದು, ಖಜಿಪುದು—ಮಥಿಸಿ, ಬಂಧಿಸಿ, ನಿಗ್ರಹಿಸಿ—ಬಿಡುವದು; ಇವೆಲ್ಲ ಅಪ್ಪುದು ನಯನಂ—ತತ್ತ್ವವನ್ನು ತೋರಿಸುವ ವಿಚಾರದ ಕಣ್ಣಿಂದಾಗುವವು.

೯ ....ಫಲವು+ಇದಕೆ—ಈ ಆತ್ಮಾನಾತ್ಮ ವಿಚಾರಕ್ಕೆ, ಅವಧಿ....ಬಹುದು—ಬರುವದು? ಎನಲು, ನಿಹಿತ (—ಇಡಲ್ಪಟ್ಟ, ಬ್ರಹ್ಮಾತ್ಮಭಾವವು ತನ್ನೊಳಗೆ ಸ್ಥಿರ)ವಾಗಲ್ಕೆ + ಅನುಭವವು (ಕೊನೆಗಂಡಿತಾಗಿ ಅದೇ ವಿಚಾರಕ್ಕವಧಿಯು).

೧೦ ಗರ್ಹ್ಯವ—ಗರ್ಹ್ಯಃ-ನೀಚವಾದ ಬಹು ದೋಷಗಳನ್ನೂ, ಸಾರದಿಹ—ಹೊಂದದಿರುವ, ಋಜುವಾದ ಮಾರ್ಗದಿಂದಲೇ; ತಾನು+ಆರಜಿಸಿ—ಆರ್ಜಿಸಿ. ಚಾರು—ಮಂಗಲಕರವಾದ, ಸಂಗತಿ—ಸತ್ಸಂಗವು, ಭೋಗಗರ್ಹಣದಿಂ—ವಿಷಯ ಭೋಗಗಳನ್ನು ವಿಚಾರದ ಕಣ್ಣಿನಿಂದ ನೋಡಿ ಅಲ್ಲಗಳೆಯುವುದರಿಂದ.

೧೧ ಔಪನಿಷತ್+ಅರ್ಥಂ—ಆತ್ಮೈಕತ್ವವೆಂಬೀ ಉಪನಿಷದರ್ಥವು ತನಗೆ ಘಟಿಪುದು—ಸಿದ್ಧಿಸುವದು, ತೃಪ್ತಿದಶಾಪಟುತ್ವಂ ನಿಲುವದು+ಉರೆ—ಸಂಪೂರ್ಣವಾಗಿ ನಿರಂಕುಶಾನಂದವು ತನ್ನಲ್ಲಿ ಕಾಲೂರಿ ನೆಲೆಗೊಳ್ಳುವದು, ಪದವು . ಇದಕ್ಕಿಂತಲೂ ಹೆಚ್ಚಿನ ಪದವಿನ್ನೊಂದು ಇರುವದಿಲ್ಲ

ಆ ಪದಕ್ಕಿಂ ಪರಮು ಪದವಿಹು-।
ದೇ ಪರಾಮರ್ಶಿಸಲು ಬೇಕೆ ಇ-।
ದೇ ಪದದಿ ಸಾಧಿಪುದೆನಲ್ಪೇಳಲ್ಪಡುವುದಿಲ್ಲಿ ॥ ೧೧ ॥

ತನಗೆ ತೋರುವ ಭುವನಮೋ ತಾ-।
ನೆನುವ ಪದಕರ್ಥಮೆ ಎನಲ್ಕಾ-।
ನನ ಸರಸ್ಸ್ವಚ್ಛ ಶೈಲ ದೇಶ ನದೀ ನದಂಗಳಿಂದ ॥
ಘನವೆನಿಪ ದೆಶೆಯಿಂದ ಬಹು ಜೀ-।
ತನರ ನಿಜನಿಜ ಮೂರ್ತಿಮಾತ್ರದೆ- ।
ಜನಿಸುವಭಿಮಾನಾರ್ಜ್ಯವಸ್ತೂಪಭೋಗವಿದರಿಂದ- ॥ ೧೨ ॥

ಕೆಡುತ ಪುಟ್ಟುತ್ತಿರುವ ದೃಶ್ಯದ।
ಪಡೆಗಳೋಳ್ತನಗಾವ ವಿಕೃತಿಯ ।
ತೊಡರೆಸೆಯದಿಹ ದಿಕ್ಕಿನಿಂ ತಾನಲ್ಲ ಭುವನಮಯಂ ॥
ಒಡಲು ತಾನಲ್ಲವೆ ಎನಲ್ಕದು ।
ಜಡವು, ರೇತಃ ಶೋಣಿತ ಯುಗಂ-।
ಪಡೆಯೆ ಋತುಕಾಲದಲಿ ಪೆಣ್ಗಳ ಗರ್ಭದೇಶದಲಿ ॥ ೧೩ ॥

ಪೊರ್ದುಗೆಯ ಕಾಲಕ್ರಮದಿ ತಾಂ-।
ಪೀರ್ದು ಜನನೀ ಭುಕ್ತಭಕ್ತದೆ-।
ತೋರ್ದರಸದಿಂ ಪರಿಣಮಿಸಿದುದು ಧಾತುಸಪ್ತಕದೆ ॥

---

ಎಂಬಲ್ಲಿ ಸಂಶಯವಿಲ್ಲದ್ದರಿಂದ ಇದನ್ನು ಕುರಿತು ಪರಾಮರ್ಶಿಸಲುಬೇಕೆ ಏನು? ಇದೇ ಪದದಿ— ಈ ವಿಚಾರಮಾರ್ಗದಿಂದಲೇ,

೧೨ ಎನಲ್+ಕಾನನ—ಕಾಡು, ಸ್ವಚ್ಛ ಸರಸ್ಸು—ಸರೋವರಗಳು, ಶೈಲ—ಬೆಟ್ಟಗುಡ್ಡಗಳು, ನದೀ—ಹೆಣ್ಣುನದೀಗಳು, ನದಂ—ಹರಿಯುವ ಗಂಡುಹೊಳೆಗಳು. ಈ ಮುಂತಾದ್ದರಿಂದ ವಿಸ್ತರಗೊಂಡಿರುವ ಭುವನವು 'ತಾನು' ಎಂಬುದು ಒಬ್ಬರಿಗಾದರೂ ಸರಿಯೊಪ್ಪುವಂತಿಲ್ಲಎಂಬುವೇ ಅಲ್ಲ, ಬಹು....ಅಭಿಮಾನ+ಆರ್ಜ್ಯವಸ್ತು+ಉಪಭೋಗವು + ಇದರಿಂದ—ತಮ್ಮ ಶರೀರಾದಿಗಳಲ್ಲಿ ನೆಟ್ಟ ಅಭಿಮಾನದಿಂದ ಹಲವು ಜೀವರು ಮಾಡಿಕೊಂಡಿರುವ ಉಪಭೋಗ್ಯ ವಸ್ತುಗಳ ರಾಶಿಯೆಂಬುವೇ ಈ ಜಗತ್ತೆಂಬುದಾದ್ದರಿಂದ ಒಬ್ಬನಿಗೆ ಇದು ಸೇರುವದಕ್ಕಿರುವದಿಲ್ಲ.

೧೩ ಅದರಲ್ಲಿರುವ ದೃಶ್ಯದ ಪಡೆಗಳೋಳ್—ತಂಡತಂಡಗಳಾಗಿ ಕಂಡುಬರುವ ಪದಾರ್ಥಗಳಲ್ಲಿನ ಹುಟ್ಟು ಹೊಂದುಗಳ ವಿಕಾರಗಳ, ತೊಡರು+ಎಸೆಯದಿಹದಿಕ್ಕಿನಿಂ—ತೊಡಕುಗಳಲ್ಲೊಂದಾದರೂ ತನಗಾಗುತ್ತಿಲ್ಲ ಎಂಬುದು ಪ್ರತ್ಯಕ್ಷಸಿದ್ಧವಾದ್ದರಿಂದಲೂ ತಾನು ಭುವನಮಯನಲ್ಲವೆಂದು ಸರ್ವಾನುಭವಸಂಸಿದ್ಧವು.

೧೪ ಪೊರ್ದುಗೆಯ—ಋತುಕಾಲದ ರಕ್ತವನ್ನೆ ತನ್ನ ಹೊದ್ದಿಕೆಯನ್ನಾಗಿ ಮಾಡಿಕೊಂಡು, ಪೀರ್ದು—ಹೀರಿಕೊಂಡು, ಭಕ್ತದೆ—ಉಂಡ ಅನ್ನದಲ್ಲಿ, ಇರ್ದುದೇ ಮುನ್ನ—ನೊದಲಿತ್ತೇ ಏನು?

ಇರ್ದುದೇ ಮುನ್ನಾದರೇಂ ನುಡಿ-।
ಗಿರ್ದಪುದೆ ಸಾಮರ್ಥ್ಯ, ವಾಯುವ-।
ಪೊರ್ದಿ ಚರಿಪುದು ಕೆಲವು ಕಾಲಕ್ಕಳಿದುಪೋಗುವದು! ॥ ೧೪ ॥

ಉಂಟಹುದು ಪುಟ್ಟುವುದು, ಬೆಳೆವುದು, ।
ಕಂಟಕವ ಕಳೆದಿರ್ಪುದಿರುತಿರೆ-।
ಪಂಟಿಪುದು ನಾನಾವಿಧದ ರುಜೆಯಿಂ, ಕೆಡುವದೆಂಬ-॥
ಉಂಟು ವಿಕೃತಿಗಳಾರಿದಕೆ ಮೇ-।
ಣುಂಟು ವರ್ಣಾಶ್ರಮದ ಕರ್ಮದ-।
ನೇಂಟು, ತಾಪತ್ರಯದ ಕೋಟಲೆಯುಂಟು ಬಲವಾಗಿ ॥ ೧೫ ॥

ಅಶುಚಿಯಖಿಲ ಭಯಕ್ಕೆ ನೆಲೆವನೆ ।
ಶಿಶು ಕುಮಾರ ಸ್ಥವಿರ, ಕಾಲಾ-।
ವಶ ವಿಷಮ ಲೀಲಾ ಗಣಾರ್ಜಿತ ದುಃಖ ಸುಖನಿಕರಂ ॥
ಪಶು ತುರಿತಮೀ ಲಕ್ಷಣವ, ನಿಗ-।
ಮ ಶತಮೂರೀಕರಿಸಿತೇ ಸೌ-।
ಖ್ಯ ಶರಣದೆ, ಪರಮಾತ್ಮ ತತ್ತ್ವದೆ ಸರ್ವ ಭುವನದಲಿ ॥ ೧೬ ॥

ಅಲ್ಲವೀ ತನುವಾತ್ಮನದರಿಂ-।
ದಿಲ್ಲದಿಹತನು ವಿಲ್ಲದಿಹ ಭವ-।
ಮುಳ್ಳ ಶಬ್ದದ್ರವ್ಯಮಾತ್ಮನೆ, ಕರ್ಣಶಷ್ಕುಲಿಯಿಂ-॥

---

ಆದರೇಂ....ಈಗ ಕಂಡರೆ ತಾನೆ ಸತ್ಯವೇನು? ನುಡಿಗೆ(ಏನಾದರು ಎಂದರೆ ದೇಹವೆಂಬ ಮಾತಿಗೆ ಮಲಮೂತ್ರಾದಿಗಳನ್ನಾಗಲಿ, ಸಪ್ತಧಾತುಗಳನ್ನಾಗಲಿ ಬಿಟ್ಟು, ಒಂದು ಪದಾರ್ಥವನ್ನು ಗುರ್ತಿಟ್ಟು ಯಾರಿಂದಲಾದರು ತೋರಿಸಿಕೊಡುವದಕ್ಕೆ ಸಾಧ್ಯವು)+ ಇರ್ದಪುದೆ--ಇರುವದೆ? ಇಲ್ಲ, ಪೊರ್ದಿ–ಸೇರಿ

೧೫ ಕಂಟಕವಕಳೆದಿರ್ಪುದು—ಯೌವನವು, ಇರುತಿರೆ–ಕಾಣುತ್ತಿದ್ದಂತೆಯೆ, ಪಂಟಿಪುದು —ಬಗೆಬಗೆಯ ರೋಗರುಜಿನಗಳಿಗೆ ತಾನು ಸಿಕ್ಕಿಬಿದ್ದು, ಲಾಗಾ—ತಲೆಕೆಳಗಾಗಿ ತಾನು ಪರಟಿ ಹೊಡೆಯುತ್ತಿರುವದು, ವಿಕೃತಿ—ಷಡ್ಭಾವ ವಿಕಾರಗಳು, ಇದಕೆ—ಈ ದೇಹಕ್ಕೆ, ಮೇಣ್ (—ಮತ್ತು)+ ಉಂಟು—ಇರುತ್ತಿರುವದು;

೧೬ ಸ್ಥವಿರ—ಮುಪ್ಪು, ಕಾಲಾವಶ....—ಇಂದ್ರಿಯ ಭೋಗಗಳಿಗೆ ಜೋತುಬಿದ್ದು, ಕಾಮುಪರವಶನಾಗಿ ನಡೆದ ವಿಷಮಾವರ್ತನೆಗಳಿಂದ ಸಂಪಾದಿಸಿಕೊಂಡ ಸುಖದುಃಖಗಳ ರೂಪವಾದ ಉರಿಚಿಂತೆಗಳ, ನಿಕರಂ—ಸಾಲಿನ ಅತ್ಯಂತವಾದ ಕಡಲಿನಲ್ಲಿ ಸ್ವತಂತ್ರ ತಪ್ಪಿ ತೇಲಾಡುತ್ತಿರುವದೆಂಬಿ ಪಶುಗಳಿಗೆ, ತುರಿತಂ—ತುರಿಪ–ತುರಿಹ–ಕೂಡಲೆ ಸರಿಹೋಲುವ ಈ ಲಕ್ಷಣವನ್ನು, ನಿಗಮಶತಂ—ನೂರಾರು ಶ್ರುತಿಗಳಲ್ಲೊಂದಾದರು ತನ್ನಾತ್ಮನಿಗುಂಟೆಂದು, ಊರೀಕರಿಸಿತೆ–ಅಂಗೀಕರಿಸಿತೆ ಏನು? ಇಲ್ಲ. ಸೌಖ್ಯ....—ಸುಖಗಳನ್ನೆಲ್ಲ ಅನುಗ್ರಹಿಸುವ ತನ್ನ ಆತ್ಮತತ್ತ್ವದಲ್ಲಿ,

೧೭ ಈ ತನುವು+ ಆತ್ಮನು+ ಆಗುವದೆಂಬುದು ಎಂದಿಗೂ ಅಲ್ಲವು+ ಅದರಿಂದ+ ಇಲ್ಲದಿಹ

ನಿಲ್ಲದಿಹ ಲವಸಮಯವುಂ ಜಡ-।
ಮುಳ್ಳಗಗನ ಪ್ರಕೃತಿಯಿಂದಾ-।
ಯ್ತಲ್ಲಿ ಯಾಶ್ರುತಿ ಸಹಿತವಾಗದು ಸೂರಿಗಳಮತದೆ ॥ ೧೭ ॥

ಮೃದು ಕಠಿನ ವಸ್ತೂಪಯೋಗದೊ-।
ಳುದಿಸಿ, ಸಮ್ಮದಿಪೊಂದಲಾಗಿಯು ।
ತದುಪರೀಕ್ಷಣ ನಷ್ಟಮಪ್ಪೀ ಸ್ಪರ್ಶ ತಾನಲ್ಲ ॥
ಇದಿರಿನಲಿ ನೋಟದಲಿ ಗಾಢಂ-।
ಪುದಿದು ಕೆಡುವದರಲ್ಲಿ ಕೇಡನು-।
ಪುದುಗಿದೀ ಜಡರೂಪವಾಗುವದೇ ಪರಾತ್ಮಪದಂ ॥ ೧೮ ॥

ಲೋಲ ಸತ್ತಿಂ ಲೋಲವಾಗಿಹ-।
ನಾಲಿಗೆಯ ಮುಖದಿಂದ ಸೆಳೆಯ-।
ಲ್ತಾಳಿಯನ್ಯದ್ರವ್ಯನಿಷ್ಟಮೆನಿಸಿಯೆ ಲವಮಾದ ॥
ಲೋಲವಾಂತೀ ತುಚ್ಛರಸವಹು-।
ದೇ ಲಯೋದ್ಭವವಿಲ್ಲದಿಹ ಘನ-।
ಕಾಲಭೇದಗಳಾದ ವಿಕೃತಿಯನ್ಯೆದದಿಪ್ಪ ಪದಂ ॥ ೧೯ ॥

ಕ್ಷಯ ಜಡಾಶ್ರಿನಯುಕ್ತ ನಾಸಾ-।
ನಿಯತಿಯಿಂ ಪೇಲವಮು, ಮೂರ್ತಾ-।
ಶ್ರಯವನಾಂತೀ ಗಂಧವಾತುಮುಸಲ್ಲವೀ ಐದಂ ॥

---

ತನುವು+ಇಲ್ಲದಿಹ ಭವಂ+ಉಳ್ಳ—ಹುಟ್ಟಿ ಇರುವದೆಂಬ ವಿಕಾರಾತ್ಮಕವಾದ, ಶಬ್ದದ್ರವ್ಯಂ+ಆತ್ಮ(ನಾಗುವ)ನೆ? ಇಲ್ಲವು. ಶಿಲ್ಪ....ವುಂ+ಕರ್ಣ....ಯಿಂ—ಕಿವಿಯೊಳಗಿರುವ ಪೊಳ್ಳಿನಲ್ಲಿ ಬಿದ್ದು ಕೇಳಿಬರುವ ಶಬ್ದವು, ಜಡಂ+ಉಳ್ಳ....ಯ್ತು—ಆಕಾಶವೆಂಬ ಕಾರಣದಿಂದ ಹುಟ್ಟಿತು, ಅಲ್ಲಿ+ಆ ಶ್ರುತಿಸಹಿತಂ—ಕಿವಿಸಹಿತವಾದ ಆ ಶಬ್ದವು, ಸೂರಿ—ಜ್ಞಾನಿಗಳ ಮತದಲ್ಲಿ ಆತ್ಮನೆಂಬುದೆಂದಿಗೂ ಆಗದು,

೧೮ ....ವಸ್ತು(ಗಳ)+ಉಪಯೋಗದೊಳು+ಉದಿಸಿ—ಹುಟ್ಟಿಬಂದ ಈ ಸ್ಪರ್ಶವು, ಸಮ್ಮ....ಗಿಯು—ಚರ್ಮಕ್ಕೆ ಸೋಂಕಿ, ತತ್+ಉಪರೀಕ್ಷಣನಷ್ಟಮಪ್ಪ+ಈ ಸ್ಪರ್ಶ ತಾನಲ್ಲ, ಗಾಢಂ—ಬೇಗನೆ, ಪುದಿದು—ಸೇರಿಕೊಂಡು ಕೆಡುವದರಲ್ಲಿ ಮೊದಲನೆಯದಾದ, ....ಪುದುಗಿದ—ಬಾಧಿಸುವದೇ ತನ್ನ ಸ್ವರೂಪವಾಗಿ ಹೊಂದಿರುವ ಈ ಜಡರೂಪವು, ಪದಂ—ಹೊಂದಲ್ತಕ್ಕ,

೧೯ ಲೋಲ—ಪ್ರತಿಯೊಬ್ಬನಿಗೂ ತನ್ನಾತ್ಮನಾಗಿ ಪರಮಪ್ರಿಯನಾಗಿರುವ ಸತ್ತಿನಿಂದಲೇ, ಲೋಲಂ—ಅಲುಗಾಡುತ್ತಿರುವ ನಾಲಿಗೆಯು, ಮುಖ—ಮೂಲಕವಾಗಿಯೇ, ಬರಸೆಳೆಯಲ್+ತಾಳಿ—ಸವಿಯಲಿರುವ, ಅನ್ಯ....ಸಿಯೆ—ಆಹಾರಪದಾರ್ಥಗಳನ್ನು ತಾನು ಹೊಂದಿಕೊಂಡೇ, ಲವ....ಲೋಲಂ+ಆಂತ—ಚಂಚಲದ ಬರಿಯ ತೋರಿಕೆಯ ಲೇಶಮಾತ್ರದ ಈ ವ್ಯರ್ಥವಾದ, ರಸವು+ಅಹುದೇ ಘನಕಾಲ....—ಕಾಲದಲ್ಲಿ ತೋರಿಕೊಳ್ಳುವ ವಿಕಾರಗಳನ್ನು ತಾನೆಂದಿಗೂ ಹೊಂದದಿರುವ ಮತ್ತು ಎಲ್ಲರಿಗೂ ಪರಮಗತಿಯಾಗಿರುವ ಆತ್ಮನು.

೨೦ ....ನಿಯತಿ—ಮೂಗಿನಿಂದಲೇ ಗ್ರಾಹ್ಯನಾಗಿರುವ, ಪೇಲವಮು—ಹಗುರವು, ಮೂರ್ತಾ

ನಯಿಸಿರುವ ಬೇರಾವ ಪಂಚೇಂ-।
ದ್ರಿಯಗಳೇನಹುದೇ ಸ್ವಕಾರ್ಯಾ-।
ದ್ವಯ ಘನವ್ಯಾಪಾರದಿಂದಾಗದು ಸಹಜ ತತ್ತ್ವಂ ॥ ೨೦ ॥

ಅವಕೆ ದೇಹದೊಳುಂಟು ನಿಯಮಿತ-।
ಭವನಗಳು; ಬೇರ್ಬೇರೆ ಚೋದಿಪ-।
ದಿವಿಜರುಂಟರ್ಥಗಳಲಾತ್ಮೀಯಂಗಳಲ್ಲಿವಕೆ ॥
ಜವನಿಕೆಯು ಮನ ವದರದೆಶೆಯಿಂ-।
ವ್ಯವಹರಿಸುತಿರ್ಪವು ಸದಸದಂ-।
ಕವನು ಮೆಯ್ಯೊಳ್ಪೊತ್ತು ಜಾಗ್ರತ್ಸ್ವಪ್ನಗಳಲಿ ಕರಂ ॥ ೨೧ ॥

ಉಳುಮೆಯಿಲ್ಲದೆ ಮೊದಲು ಪಿಂಡದ ।
ಬಳವಿಗೆಯೊಳುಂಟಾದ ವಿಷಯಿಯ-।
ಕುಲವಿದಾಗುವದೆಂತು ನಿತ್ಯವಿಶುದ್ಧಕರ ತತ್ತ್ವಂ॥
ಚಲಗಳೆಣಿಸಲ್ ಕ್ಷುತ್ಪಿಪಾಸಾ-।
ಕುಲಿತಗಳ್ಚೇತನ ನಿಯಮ್ಯಗ-।
ಳಳುಕದೆಂತೀ ಪ್ರಾಣಿಗಳ್ಪರಮಾತ್ಮನಾಗುವವು ॥ ೨೨ ॥

ಗ್ರಾಮಪಾಲಕರಂತೆ ಧಾತು-।
ಗ್ರಾಮಗಳಿಗುಂಡನ್ನರಸವಂ-।
ಸ್ತೋಮದಿಂ ಹಂಚಿಡುತಲವಯವಗಳಲಿ ಸಂಧಿಗಳ ॥

---

ಶ್ರಯವನು+ಅಂತು—ರೂಪುಳ್ಳ ದ್ರವ್ಯವನ್ನಾಶ್ರಯಿಸಿರುವ, ಈ ಗಂಧವು+ಆತುಮನಲ್ಲವು+ಈ ಐದಂ—ಶಬ್ದಾದಿ ವಿಷಯುಗಳನ್ನು ಬಿಡದಂತೆ ಬಳಸುವ ಈ ಜ್ಞಾನೇಂದ್ರಿಯಗಳೈದು+ಸಹಜ ತತ್ತ್ವಂ+ಆಗದು.

೨೧ ಭವನ—ವಾಸದ ಗೋಳಕಗಳು, ಚೋದಿಪ—ನಿಯಮಿಸುವ, ದಿವಿಜರು—ದೇವತೆಗಳೂ ತಮಗುಂಟು, ಅರ್ಥಗಳಲಿ+ಆತ್ಮೀಯಂ (ತಂತಮ್ಮ ವಿಷಯ)ಗಳಲ್ಲಿ+ಇವಕೆ ಜವನಿಕೆ-ಜೊತೆಗಾರನು, ಸದಸದಂಕವನು–ವ್ಯಾವಹಾರಿಕವಾದ ಸತ್ಯ ಮತ್ತು ಅಸತ್ಯವೆಂಬ ಗುರುತಿನ ವಿಷಯಗಳನ್ನು, ಮೆಯ್ಯೊಳ್–ತಮ್ಮ ಪಕ್ಕದಲ್ಲಿ ಈ ಇಂದ್ರಿಯಗಳು, ಪೊತ್ತು–ಹೊತ್ತಿಕೊಂಡು, ಜಾಗ್ರತ್ಸ್ವಪ್ನಗಳಲ್ಲಿ ವ್ಯವಹರಿಸುತ್ತಿರುವಂತೆ ಮೂಢರಿಗೆಲ್ಲ, ಕರಂ—ಬಹು ಚೆನ್ನಾಗಿ ಕಂಡುಬರುತ್ತಿರುವವು.

೨೨ ಪಿಂಡದ....ಯೊಳು—ದೇಹವು ಹುಟ್ಟಿದಮೇಲೆ ಅದರಲ್ಲಿ ಉಂಟಾದ, ವಿಷಯಿಯ ಕುಲಂ—ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳ ಈ ಗುಂಪು ಆತ್ಮನಾಗುವದೆಂತು? ಚಲಗಳ್—ಪ್ರಾಣನಾದಿ ಕ್ರಿಯೆಗಳುಳ್ಳ ಪಂಚವಾಯುಗಳು, ಎಣಿಸಲ್—ಆತ್ಮನಾಗಬಹುದಲ್ಲ? ಎಂದರೆ ಅವು ಕ್ಷುತ್+ಪಿಪಾಸಾ+ಆಕುಲಿತ—ವ್ಯಾಕುಲವುಳ್ಳವುಗಳು, ಚೇತನನಿಯಮ್ಯಗಳ್—ಅವು ಜಡವು ಚೇತನದಿಂದಲೇ ನಿಯಮಿಸಲ್ಪತಕ್ಕವು ಹೀಗಿರುವಲ್ಲಿ, ಈ ಪ್ರಾಣಿಗಳ್—ಪ್ರಾಣನಾದಿ ವ್ಯಾಪಾರಗಳುಳ್ಳ ಈ ಪ್ರಾಣಾದಿ ಪಂಚವಾಯುಗಳು,

೨೩ ಗ್ರಾಮಪಾಲಕರಂತೆ—ರಾತ್ರಿಯ ಕಾಲದಲ್ಲಿ ಊರನ್ನು ಕಾಯಲಿರುವ ಪೋಲೀಸನವ

ನೇಮದಿಂದಳ್ಳಾಡಿಸುತ ದಶ-|
ನಾಮಕೇಂದ್ರಿಯಗಳನು ನಡಸುವ-|
ತಾಮಸ ಪ್ರಾಣಾದಿ ವಾಯುಗಳಾತ್ಮನಾಗಿರವು ॥ ೨೩ ॥

ವಾತವೇ ಪರಮಾತ್ಮನಾದರೆ |
ಭೂತಗಳ ನಾಲ್ಕರ ಕಳೆಯ ತಾ-|
ನಾತೊಡೆದು ಬೇರ್ಬೇರೆ ಪಂಚಾಕೃತಿಯ ತಾನ್ಪೈದಿ ॥
ಏತಕಿಹುದು ಬಹುತ್ವವಾತ್ಮನಿ-|
ಗೀ ತೆರದೆ ಸಕಲಾಗಮಂಗಳ |
ಕೇತನಂಗಳಲುಸುರಲಿಲ್ಲ ಮಹಾ ಮುನೀಶ್ವರರ ॥ ೨೪ ॥

ಒಂದು ರೂಪದೊಳೊಂದು ವಿಷಯವ-|
ತಂದುಕೊಂಡನುಭವಿಸಿದರೆ ಬೇ-|
ರೊಂದು ರೂಪದೊಳದನುಣುವದಕ್ಕಾಗದಿರಬೇಕು ॥
ಹಿಂದು ಮುಂದುಗಳುಂಟಿ, ಎಡೆದೆರ-|
ಪೊಂದುವದೆ ತನ್ನೊಳಗೆ ತನಗಿದ-|
ರಿಂದ ವಾಯುವಿಕಾರವಾತುಮನಲ್ಲವೆನಬೇಕು ॥ ೨೫ ॥

ಆಗದೀ ಕರ್ಮೇಂದ್ರಿಯಕೆ ಮೇ-|
ಲಾಗಿರಲ್ಕವರ್ಮಾಖ್ಯಪದ ಮೇ-|
ಣೀಗಲಿಂದ್ರಿಯ ಶಬ್ದಮಂ ಗಣಿಸಲ್ತದಿಂದ್ರಪದಂ ॥

---

ರಂತೆ ಶರೀರವನ್ನು ಕಾಯುತ್ತಿರುವ ಅಥವಾ ಚಂದ್ರನು ವನಸ್ಪತಿಗಳಿಗೆಲ್ಲ ರಸವನ್ನು ಹಂಚಿಕೊಡುತ್ತಿರುವಂತೆ ಸಪ್ತಧಾತುಗಳ, ಗ್ರಾಮ—ಸಮೂಹಕ್ಕೆಲ್ಲ ಉಂಡ ಅನ್ನರಸವನ್ನೂ ಹಂಚಿಕೊಡುತ್ತ ಈ ತಮ್ಮ ಉಪಕಾರವು ಅವುಗಳ, ಸ್ತೇಮ—ನೆನಪಿನಲ್ಲಿರುವಂತೆ, ನಾಮಕ—ಹೆಸರಿಸಿ, ತಾಮಸ—ಕೇವಲ ಜಡವಾಗಿರುವ,

೨೪ ವಾತ—ಪ್ರಾಣವಾಯುಗಳೇ, ....ನಾಲ್ಕರ—ವಾಯುಭೂತವನ್ನು ಬಿಟ್ಟು ಮಿಕ್ಕ ನಾಲ್ಕು ಭೂತಗಳ, ಕಳೆಯ—ಪಾದಾಂಶಗಳನ್ನು, ತಾನು+ಆತು+ಒಡೆದು—ವಾಯುಭೂತದ ಅರ್ಧವು ತನ್ನಲ್ಲಿ ಸೇರಿಸಿಕೊಂಡು ಉಂಟುಮಾಡಿರುವ, ಪಂಚಾಕೃತಿಯನು—ಈ ಪ್ರಾಣಾದಿ ವಾಯುಗಳು ತನ್ನಲ್ಲಿ ಐದು ಬಗೆಯ ರೂಪುಗಳನ್ನು ಏತಕ್ಕೆ ತಾನೆ ಆಗ ತಾನು+ಐದಿ—ಹೊಂದಿ ಇರುತ್ತಿತ್ತು? ಎಂದರೆ ಒಂದೇ ಆಗಿರಬೇಕಾಗಿತ್ತು ಎಂದು ಭಾವವು; ....ಕೇತನಂ—ಗುರ್ತಿನ ಪ್ರಮಾಣಗಳಲ್ಲಿ.

೨೬ ಕರ್ಮೇಂದ್ರಿಯಕೆ—ಚಲನಕ್ರಿಯೆಯುಳ್ಳ ವಾಯುಪಂಚಕಕ್ಕೆ ಈ ರೀತಿಯಿಂದ ಆತ್ಮತ್ವವಿರುವದಿಲ್ಲ, ಇಂದ್ರಪದವು—"ಇದಿಪರಮೈಶ್ವರ್ಯೇ" ಎಂಬ ಧಾತುವಿನಿಂದಾಗಿರುವದರಿಂದ ಅದು ಪರಮಾತ್ಮನನ್ನು ತಿಳಿಸುವಂತಿದ್ದರೂ ಕ್ರಿಯೆಯನ್ನು ತಿಳಿಸುವ ಕರ್ಮಪದವು ತನ್ನ ಪಕ್ಕದಲ್ಲಿ ಬಂದು ಸೇರಿರುವದರಿಂದಲೂ, ಇಂದ್ರಿಯ ಶಬ್ದವನ್ನು ಕುರಿತು ವಿಚಾರಿಸಿದರೆ ಆ ಇಂದ್ರಪದದ ಅರ್ಥವನ್ನು ಕರ್ಮಪದವು ಬಾಧಿಸಿಬಿಡುತ್ತಿರುವದರಿಂದಲೂ, ವಾಯುವಿಕಾರವು

ಆಗಲಾತ್ಮಪದಂ ವಿಬಾಡಿಸೆ ।
ಮೇಗಡೆಯ ಘೆಪ್ರತ್ಯಯಕೆ ತಾ-।
ನಾಗೆಸೆವ ಮುಳ್ಳದಿದನಿದು ವೌವಾತ್ಮನೆಂತಹುದು ॥ ೨೬ ॥

ಅದರೊಡನೆ ಸಂಬಂಧವಿಲ್ಲದೆ ।
ಪುದುಗದಿದು ತಾನಾಗಿಯುದರಿಂ ।
ಪದುಳವಾಗದೆ ವಿಕೃತಿಯೆನೆ ಜಲಬಿಂದುಸಂಸರ್ಗಂ ॥
ಪದುಮದಲನ್ಯೈದುವದೆ ನಿರ್ಮಲ-।
ವಿದುಮಲಂ ನಿತ್ಯವದು ಮಿಥ್ಯಾ-।
ಪದುವಿದವಯುವಿ ನಿರವಯುವದೇತದಕಿದಕೆ ಸಾಮ್ಯಂ ॥ ೨೭ ॥

ಅಂತರಂಗಾತ್ಮರಿಗೆ ಭೇದವ-।
ನೆಂತರಿವುದೆನೆ ಭೂತ ಕಲ್ಪಿತ-।
ವಂತರಂಗವೃತ್ತಿ ಭೇದವನೊಂದಿ ನಾಲ್ಕಾಯ್ತು ॥
ಚಿಂತನೆಯನವಧೃತಿಯ ಮಾನಹು-।
ನುಂ ತಳೆದು ನಿಶ್ಚಯವನೇ ತಾಂ-।
ಸ್ವಾಂತ ಚಿತ್ತಾಹಂಕೃತಿ ಮನೀಷಾಭಿಧಾನವನು ॥ ೨೮ ॥

ರಚನೆಯಿನ್ನೊಂದಿದಕೆ ಗಗನ-।
ಪ್ರಚುರಮಾದಂಶಮೆ ದುಸ್ಪಶನ-।
ಶುಚಿ ಕೃಪೀಟ ಧರಾಂಶಗಳನಾಶ್ರಯಿಸಲವರಿಂದ ॥

---

ಆತ್ಮನು+ಎಂತು+ಅಹುದು? ಕರ್ಮೇಂದ್ರಿಯಗಳಿಗೂ ಇದು ಹೊಂದುವಂತಿರುವದು.

೨೭ ಅದರೊಡನೆ—ಆತ್ಮನೊಡನೆ, ಪುದುಗದು+ಇದು—ಈ ವಾಯುಗಳು+ಆತ್ಮನನ್ನು ಬಿಟ್ಟು ತಮ್ಮ ವ್ಯಾಪಾರಗಳಲ್ಲಿ ಸ್ವತಂತ್ರವಾಗಿ ಅವು ಸೇರಿಕೊಳ್ಳುವಂತಿಲ್ಲವಾದ್ದರಿಂದ, ಪದುಳ.... ಯೆನೆ—ಆ ವಾಯುವಿಕಾರಗಳು ಆತ್ಮನಲ್ಲಿ ಕಾಲೂರುವದಕ್ಕಿಲ್ಲವೆ?ಎಂದು ಶಂಕಿಸುವದಕ್ಕಿರುವದಿಲ್ಲ ಹೇಗೆಂದರೆ ಜಲ....ದುವದೆ—ನೀರಿನಲ್ಲಿದ್ದರೂ ಪದ್ಮಪತ್ರವು ಆ ನೀರನ್ನು ಸೋಂಕದಿರುವಂತೆ ಆತ್ಮ ನಿಂದಲೇ ಚೇತನಗೊಳ್ಳುತ್ತಿರುವ ಆ ವಾಯುವಿಕಾರಗಳೂ ಅವನಿಗಿರುವದಿಲ್ಲ.

೨೮ ಅಂತರಂಗ ಮತ್ತು ಆತ್ಮ ಈ ಎರಡಕ್ಕೂ ಒಂದಕ್ಕೊಂದು ಕಲೆಬೆರಕೆಯಿಂದಾಗಿರುವ ಅಧ್ಯಾಸವನ್ನು ವಿವೇಕಿಸಿ, ಅವುಗಳಿಗಿರುವ ಭೇದವನ್ನು, ಎಂತು+ಅರಿವುದು+ಎನೆ, ಭೂತಗಳ ಸಮಷ್ಟಿ ಸತ್ವಾಂಶಗಳ ಕಾರ್ಯವಾದ ಆ ಅಂತರಂಗವು ಭೂತಕಲ್ಪಿತವು, ಚಿಂತನೆಯನು+ಅವಧೃತಿ+ಮಾನಮುನುಂ+ನಿಶ್ಚಯವನ್ನು ತನ್ನೊಳಗೆ ತಳೆದು ತಾಂ—ಆ ಅಂತಃಕರಣವೊಂದೇ ಸ್ವಾಂತ—ಮನ, ಚಿತ್ತ, ಅಹಂಕೃತಿ, ಮನೀಷಾ—ಬುದ್ಧಿ ಎಂಬ ಬೇರ್ಬೇರೆಯ, ಈ ಅಭಿಧಾನ—ಹೆಸರಿನ, ವೃತ್ತಿಭೇದವನು+ಒಂದಿ—ಕೂಡಿ ತನ್ನಲ್ಲಿ ನಾಲ್ಕಾಯ್ತು.

೨೯ ಆಕಾಶದ ಅರ್ಥವೇ ಜ್ಞಾತೃವು, ಅದರಲ್ಲಿ ಬಂದು ಸೇರಿದ ಸ್ಪರ್ಶ—ವಾಯು, ಶುಚಿ—ಅಗ್ನಿ, ಕೃಪೀಟ—ಜಲ, ಧರ—ಭೂಮಿ ಇವುಗಳ ಪಾದಾಂಶಗಳಿಂದ ಮನ ಬುದ್ಧಿ ಚಿತ್ತಾಹಂಕಾರಗಳು ಕ್ರಮದಿಂದಾದವು.

ಸುಚಯನಮೆ ಮನಮೆಂದು ಮತಿಯೆಂ-।
ದು ಚಲಚಿತ್ತಮಹಂಕೃತಿಯುಮೆಂ-।
ದು ಚಿರನಾಮ ವಿಶಿಷ್ಟಮಾದುದು ಕರಣಮಾಂತರವೇ- ॥ ೨೯ ॥

ಇದು ಸಮಷ್ಟಿ ವ್ಯಷ್ಟಿಯಿಂದಾ-।
ಗದು ಪರಂತತ್ತ್ವಂ; ವಿಚಾರಿವು-।
ದಿವರೊಳೇಕೀತೆರದಿ ಬಾಹುಲ್ಯೈಕ್ಯಭಾವಗಳಿಂ ॥
ಇದಕೆ ತತ್ತ್ವಂ ಘಟಿಪುದೇ ಎನ ।
ಲದಕೆ ಪೇಳಿದುದಲ್ಲ, ತಿಳಿಯ-।
ಲ್ಪದವಿದೇ ಬೇರೊಂದು ಬಳಿಯಲ್ಲಿಷ್ಟು ಘನವಿಲ್ಲ ॥ ೩೦ ॥

ಸಕಲವಾದಿಗಳಿಂಗೆ ಸಂದೇ-।
ಹಕಹಿದೇಬಳಿ ಯಾತ್ಮಸಾನ್ನಿ-।
ಧ್ಯಕವಿದೇ ಬಳಿ ಬಂದುದೀ ಭವವಿದ್ದರ ದೆಶೆಯಿಂದ ॥
ಸಕಲವಿದು ಪ್ರಜ್ಞಾನುಭೂತಿ ।
ಪ್ರಕಟವೆಸೆವನ್ನ ಬರ ದೃಢ ವೋ-।
ಹಕ ವಿದಳಿಯಲ್ತುಂದೆ ಭಯವಿಲ್ಲಾವಕಾಲದಲಿ! ॥ ೩೧ ॥

---

೩೦ ವಿಚಾರಿಪುದು+ಇದರೊಳು+ಏಕೆ+ಈ ತೆರದಿಂದ, ....ಬಹುತ್ವವೇಕೆ ಬರುತ್ತಿತ್ತು? 'ನಾನು' 'ನಾನು' ಎಂದೇ ಕಾಣುತ್ತಿರುವದಲ್ಲದೆ 'ನಾವುಗಳು' ಎಂದು ಒಬ್ಬನಲ್ಲಾದರೂ ಕಂಡು ಬರುತ್ತಿಲ್ಲವಾದ್ದರಿಂದ. ಇದಕೆ—ನಾಲ್ಕಾಗಿರುವ ಈ ಅಂತಃಕರಣಕ್ಕೆ ನಾನು ಎಂಬೀ ರೂಪಕ್ಕೆ, ....ಪದವಿದೇ—ಹುಡುಕಿ ಆತ್ಮನನ್ನರಿಯುವಲ್ಲಿ ಈ 'ನಾನು' ಎಂಬುದನ್ನು ಅಗಿದು ಇಲ್ಲಿಯೇ ಆತ್ಮನನ್ನು ನೋಡಬೇಕಲ್ಲದೆ, ಹೊರಗೆ ನೋಡುವದಲ್ಲವೆಂಬುದು ಭಾವವು. ನಾನೆಂಬ ಈ ಅಂತಃಕರಣದ ರೂಪನ್ನು ಬಿಟ್ಟರೆ, ಆತ್ಮನೇ ತಾನೆಂಬಂತೆ ಇಷ್ಟೊಂದು ನಮ್ಮಾತ್ಮನ ಸಮೀಪದಲ್ಲಿ ತೋರುವದು ಮತ್ತೊಂದಿರುವದೇ ಇಲ್ಲ. (ನೈ.ಸಿ.)

೩೧. ಆತ್ಮನಂತಿರುವ ಈ ಅಂತಃಕರಣದಲ್ಲಿಯೇ ವಾದಿಗಳಿಗೆಲ್ಲ ಸಂಶಯಗಳೂ ಆತ್ಮಭ್ರಾಂತಿಗಳೂ ತಲೆಯೆತ್ತಿಕೊಂಡಿರುವವು. ರತ್ನದ ಬೆಳಕಿನಿಂದ ರತ್ನವನ್ನೂ, ಪ್ರತಿಬಿಂಬದಿಂದ ನಿಜಮುಖವನ್ನೂ, ನೆರಳಿನಿಂದ ಪುರುಷನನ್ನೂ ಲೋಕದಲ್ಲರಿತುಕೊಳ್ಳುವಂತೆ; ತನ್ನ ಬ್ರಹ್ಮಾತ್ವಭಾವವನ್ನರಿಯುವದಕ್ಕೆ ತೀರ ಸಮೀಪದ ಈ ಆತ್ಮಾಭಾಸವು ಇಲ್ಲಿಯೇ ಕಾಣಬರುತ್ತಿರುವದು ಈ ಮಿಥ್ಯಾರೂಪದ ದೇಹಾದ್ಯನಾತ್ಮಗಳಲ್ಲಿನ 'ನಾನು' ಎಂಬ ಆತ್ಮಾಭಾಸದ ತಪ್ಪು ತಿಳಿವಳಿಕೆಯನ್ನು ಇಟ್ಟುಕೊಂಡೇ ಈ ಭವವು ತನಗೆ ಬಂದಿರುವದು. ಹಗ್ಗವನ್ನರಿಯುವವರೆಗೂ ಸರ್ಪವು ಹೆದರಿಸುತ್ತಿರುವಂತೆಯೇ ತನ್ನ ಪರಮಾರ್ಥದ ಅರಿವು ಬರುವವರೆಗೂ ದೇಹಾದ್ಯನಾತ್ಮಗಳಲ್ಲಿ 'ನಾನು' ಎಂಬ ಈ ಆತ್ಮಭ್ರಾಂತಿಯೂ ನಿಜವಾದಾತ್ಮನೆಂದೇ ಮೋಹಪಡಿಸುತ್ತ ಅದು ಎಲ್ಲರಿಗೂ ದುಃಖಪಡಿಸುತ್ತಿರುವದು, ಈ ಆತ್ಮಾನಾತ್ಮರ ಅಧ್ಯಾಸವಳಿಯಲು ಸಂಸಾರಭಯವೇ ಇನ್ನಿರುವದಿಲ್ಲವು. ನಾನೆಂಬೀ ರೂಪದ ಈ ಅಂತಃಕರಣವು ಅನಾತ್ಮಭ್ರಾಂತಿಗಳೆಲ್ಲದರ ಒಟ್ಟಿನ ಕವುಡಾಗಿರುವದು. ಆ ಲಿಂಗಭಂಗವೇ ಮೋಕ್ಷವೆಂದೆನ್ನುವದು.

ಅದಲಿತ ತುಷೋಲ್ಮುಕಗಳಿಂ ಕಾ-।
ಸಿದ ವರಾಯಃಪಿಂಡದಂತಾ-।
ಚಿದಧಿಕದ್ಯುತಿವೆತ್ತ ದೇಹ ಸಹಸ್ರಗಳ ಧರಿಸಿ ॥
ಅದರದರೊಳಾಯಾ ಸಮಯ ಭಾ-।
ಗದೊಳು ನಾನಾ ಕರ್ಮಗಳ ಗೈ-।
ದದರ ಫಲ ಭೋಗಗಳನನುಭವಿಸುತ್ತಿರುವರಲ್ತೆ ॥ ೩೨ ॥

ಒಮ್ಮೆ ಸುರದೇಹದಲಿ ದಿವಿಯ-।
ಲ್ಲೊಮ್ಮೆ ನರದೇಹದಲಿ ಭುವಿಯ-।
ಲ್ಲೊಮ್ಮೆ ಹರಿದೇಹದಲಿ ಪಾತಾಳದಲಿ ವಿಹರಿಪುದು ॥
ಒಮ್ಮೆ ತರು ಪಾಷಾಣ ಗುಲ್ಮತೆ-।
ಯಿಂ ವೆರದು ತನ್ನಲ್ಲಿ ಬೇಗುದಿ-।
ಗೊಮ್ಮೆ ಸಿಕ್ಕುವದೊಮ್ಮೆ ಸೊಕ್ಕುವದರ್ಥಲಾಭದಲಿ! ॥ ೩೩ ॥

ಪುಣ್ಯದಿಂ ಬಲಮೂಂತು ತಾನೆ ಶ-।
ರಣ್ಯನೆಂದುಂ ವಿದ್ಯೆಯಿಂದೇ-।
ಗಣ್ಯನೆಂದುಂ ತಪದ ಧೃತಿಯಿಂ ಪೂಜ್ಯನೆಂತೆಂದು ॥
ಅನ್ಯರಿಂ ನೋಡಾಂ ವಿಚಾರಿಸೆ।
ಮಾನ್ಯನೆಂದುಂ, ಸೇವ್ಯನೆಂದು, ವ-।
ದಾನ್ಯನೆಂದುಂ ಮೆರೆವುದೀ ಅಂತಃಕರಣವೊಂದೇ ॥ ೩೪ ॥

---

೩೨ ಅದಲಿತ—ಒತ್ತೊತ್ತಾಗಿ ದಟ್ಟವಾಗಿ ತನ್ನಲ್ಲಿ ಚೆನ್ನಾಗಿ ಹೊಂದಿಕೊಂಡಿರುವ ಭತ್ತದ ಹೊಟ್ಟು ಮತ್ತು ಬೆಂಕಿ ಹೊತ್ತುಕೊಂಡಿರುವ ಕೊಳ್ಳಿ ಇವುಗಳಿಂದ ಚೆನ್ನಾಗಿ ಕಾಸಿದ ಅಯಃ ಪಿಂಡದ—ಎಂದರೆ ಬೆಂಕಿಯೂ ಕಬ್ಬಿಣವೂ ಒಂದೇಆಗಿ ಕಂಡುಬರುತ್ತಿರುವ ಕಬ್ಬಿಣದ ಗುಂಡಿನಂತೆಯೇ, ಆ ಚಿತ್+ಅಧಿಕದ್ಯುತಿವೆತ್ತ—ಅಧಿಕವಾದ ಆತ್ಮನ ಆ ಬೆಳಕಿನಿಂದ ಹೊಳೆಯುತ್ತ ಆತ್ಮನೆಂದೇ ಕಂಡುಬರುತ್ತಿರುವ—ಮಿಥ್ಯಾತ್ಮ—ಹುಸಿಯ ಸ್ವರೂಪದ ಕಲ್ಪಿತಾತ್ಮನೆಂಬ ದೇಹಾದ್ಯನಾತ್ಮಗಳಲ್ಲಿ 'ನಾನು' ಎಂಬಿದು ನಿಜವಾದಾತ್ಮನಂತೆಯೇ ಕಾಣಬರುತ್ತಿರುವದು. ಆ ಆತ್ಮಾಭಾಸವನ್ನು ಹೊಂದಿರುವ ದೇಹ ಸಹಸ್ರಗಳನ್ನು ಈ ಮೇಲಿನ ಅನಾತ್ಮಾಭಿಮಾನಿಗಳು ಮತ್ತು ಮತ್ತೂ ಧರಿಸಿಕೊಳ್ಳುತ್ತಲೂ ತ್ಯಜಿಸುತ್ತಲೂ ಕರ್ಮತತ್ಫಲಗಳೆಂಬ ಈ ಭವಮಾಲೆಯಲ್ಲಿ ಸಿಕ್ಕಿಬಿದ್ದು ಈ ಸಂಸಾರದಲ್ಲಿಯೇ ನರಳುತ್ತಿರುವರು. (ಭಾಗವತ ೧೧–೩–೫....೭)

೩೩....೩೬ ದಿವಿ—ಸ್ವರ್ಗ, ಭುವಿ—ಭೂಮಿ, ಹರಿ–ಸಿಂಹ ಮುಂತಾದ ಮೃಗಗಳಾಗಿಯೂ ಪಾತಾಳದಲ್ಲಿ ಹರಿಯುವ ಸರ್ಪ ಮುಂತಾದವುಗಳಾಗಿಯೂ, ಗುಲ್ಮ—ಬಳ್ಳಿ; ೩೪–ಶರಣ್ಯನು—ರಕ್ಷಕನು, ನೋಡೆ—ವಿಚಾರಿಸುವಲ್ಲಿ, ಆನ್—ನಾನು, ವದಾನ್ಯ—ಬಹಳವಾಗಿ ದಾನವನ್ನು ಕೊಡುವವನು, ಒಳ್ಳೆಯ ಮಾತುಗಳನ್ನಾಡುವವನು; ೩೫–ಆಸುರವನು—ತನ್ನಲ್ಲಂತ್ಯಂತ ಕೀಳುಭಾವನೆಯನ್ನು, ಪೂಸಟೆ—ತನ್ನನ್ನುಹೀಗೆಲ್ಲ ಕೀಳಾಗಿ ಹೋಲಿಸಿಕೊಳ್ಳುತ್ತ, ಎನ್ನನು+ಉರು—ಚೆನ್ನಾಗಿ,

ಆಸುರವನಾಶ್ರೈಸಿ ತಾನೇ।
ದಾಸನೆಂದುಂ, ನೀಚನೆಂದಾ-।
ಯಾಸಿಯಂದುಂ ಬಗೆದು ಪೊರೆವುದನಾಥನಂ ಖಲನಂ ॥
ಪಾಸಟೆಯ ಪಿಡಿದೆನ್ನನುರು ಕೃಕ-।
ಲಾಸ, ವಾಯಸ, ರಾಸಭಗಳಿಂ-।
ದೇ ಸುರರನರ್ಥಿಸುವದೀ ಅಂತಃಕರಣವಲ್ತೆ ॥ ೩೫ ॥

ತನ್ನ ಕರ್ಮಸಮುಷ್ಟಿಯಿಂದು-।
ತ್ಪನ್ನವಾದ ಭುವನದ ಭೋಗವ-।
ಭಿನ್ನಭಾವದೊಳುಂಬೆನೆಂಬಭಿಮಾನವೊತ್ತರಿಸೆ ॥
ಕಣ್ಣಕಾಣದೆ ಮನುತೆಯೆಂಬುರಿ-।
ಗಣ್ಣಿಯಿಂ ಬಿಗಿವಡೆದು, ತಿಳಿವಿನ-।
ಬಣ್ಣವಂಟದೆ ಮಾಸಿದುದು ತಾನಂತರಂಗವಿದೇ- ॥ ೩೬ ॥

ರೂಪನಾಲ್ಕಾಗಿರಲಹಂಕಾ-।
ರೋಪಲಬ್ಧಿಗಳೊಂದು ತೆರವ-।
ನ್ನೇ ಪಡೆದು ವರ್ತಿಪವು ಹೃಚ್ಚಿತ್ತಂಗಳನ್ಯೋನ್ಯಂ-॥
ರೂಪವೊಂದಾಗಿರ್ಪವದರಿಂ-।
ದೀ ಪದಾರ್ಥದ್ವಯವೆ ಸಾಧನ-।
ತಾ ಪದವು ವೀರ್ಯಾಸು ಯುಗ್ಮಂ ಸಾರ್ದಿಹುದು ನಿತ್ಯಂ; ॥ ೩೭ ॥

ಮೋಹ ಮಲ ಮಾಯಾಭವಾಖ್ಯ-।
ವ್ಯೂಹಮಂ ತಾಳಿರ್ಪುದಿಚ್ಛಾ-।
ದಾಹ ದಗ್ಧವೆನಿಸುವ ಸಂಕಲ್ಪಂ ತದಂಕತೆಯಿಂ-॥

---

ಕೃಕಲಾಸ—ತೊಂಡೆಕ್ಯಾತ, ವಾಯಸ—ಕಾಗೆ, ರಾಸಭ—ಕತ್ತೆ; ೩೬-ತನ್ನ—ಎಲ್ಲಾ ಜೀವರ, ಒತ್ತರಿಸೆ—ಮಿತಿಮೀರಿ, ....ಗಣ್ಣಿ—ಗಂಟು—ಹಗ್ಗದ ಕುಣಿಕೆ; ....ಬಣ್ಣ—ಗಂಧವೂ,

೩೭ ಮನಬುದ್ಧಿ ಚಿತ್ತಾಹಂಕಾರ ಎಂಬ ಈ ರೂಪ(ಗಳಿಂದ ಕೂಡಿ ಒಂದು ಅಂತಃಕರಣವೇ ತನ್ನೊಳಗೆ)+ನಾಲ್ಕುಬಗೆಯಾಗಿರಲು, ಇವುಗಳಲ್ಲಿ—ಅಹಂಕಾರ (ಮತ್ತು)—ಉಪಲಬ್ಧಿ—ಬುದ್ಧಿಯು ಈ ಎರಡೂ ಸೇರಿ ಬುದ್ಧಿಯೆಂದೂ. ಹಾಗೆಯೆ, ಅನ್ಯೋನ್ಯಂ—ಒಂದರೊಡನೊಂದು ಕಲೆಬೆರತಿರುವ, ಹೃತ್ (—ಮನಸ್ಸು ಮತ್ತು)+ಚಿತ್ತವು ಎರಡೂ ಸೇರಿ—ಮನಸ್ಸೆಂಬ, ಒಂದು ರೂಪಂ+ಆಗಿರ್ಪವು+ ಅದರಿಂದ+ಈ ಪದಾರ್ಥದ್ವಯವೆ—ಈ ಮನ ಬುದ್ಧಿಯೆಂಬೆರಡೇ, ವೀರ್ಯ+ಅಸು—ಜ್ಞಾನೇಂದ್ರಿಯಪಂಚಕ ಮತ್ತು ಕರ್ಮೇಂದ್ರಿಯಪಂಚಕ ಎಂಬ, ಯುಗ್ಮಂ—ಈ ಉಭಯವರ್ಗವನ್ನೂ ಆ ಮನಸ್ಸು ನಿತ್ಯವೂ, ಸಾರ್ದು—ಸಮೀಪಿಸಿ, ಹೊಂದಿಕೊಂಡು ತಾನು ಸಹಕರಿಸುತ್ತಿರುವದು.

೩೮ ಮೋಹಮಲ ಮತ್ತು ಮಿಥ್ಯಾಜ್ಞಾನವೆಂಬ ಮಾಯೆಯ ಜನನ ಮರಣಗಳ, ವ್ಯೂಹ–

ರೂಹುಗೊಂಡಿರ್ಪುದು ಮನಂ, ಮನ-।
ದೇ ಹರಿವುದಖಿಲಾರ್ಥಗಳು ಬಹು-।
ವಾಹಿನಿಗಳಂಭೋನಿಧಿಯು ಸೇರ್ದಂತೆ ಗರ್ಭದಲಿ ॥ ೩೮ ॥

ಪಡೆದು ನಿಖಿಲಾರ್ಥಗಳ ತೃಪ್ತಿಯ ।
ಪಡದು, ವಿಷಯಾರಣ್ಯ ಮಾರ್ಗದೆ ।
ನಡೆದು ಧಾವತಿಗೊಳದು, ಭವಮಧ್ಯದಲಿ ಬಾಂಧವರಿಂ-॥
ಒಡವೆರೆದು ಸುಖಪಟ್ಟು ವಿರಹವ-।
ನೆಡೆಗೆಡೆಗೆ ಕೈಗೊಂಡು ಸೀಗಳಿ ।
ಗೊಡಲೆನಿಸಿ ತಲೆಬಾಗದಿಪ್ಪುದು ಚಿತ್ತವಲ್ತೆ ಕರಂ। ॥ ೩೯ ॥

ಸ್ವರಸ ಭಾವಿತವಾದ ಘನ ಪಾ-।
ದರಸದಂತೆ, ಭವಂಗಳಲಿ ಬೇ-।
ಸರದೆ ಮಾಡಿದ ಕರ್ಮವಾಸನೆಯಿಂದಲೊಂದಾಗಿ-॥
ದುರಿತವೋ! ವೃಷವೊ! ಭಯಂಕರ-।
ನರಕವೊ! ತ್ರಿದಶಾಲಯವೊ! ಪಾ-।
ಮರರ ಕೆಳೆಯೊ! ಪಂಡಿತೋಪಾಸ್ತಿಯೊ! ಭಜಿತ ವಿಷಯಂ ॥ ೪೦ ॥

ಯಾವ ಕರ್ಮವ ಮಾಡಲದಕನು-।
ಭಾವಮಾದ ಶರೀರವದಕನು-।
ಭಾವಮಾದ ಭುಜಿಕ್ರಿಯಾರ್ಹಂಗಳ ಸಮುಚ್ಚಯವು ॥

---

ಸಾಲು ಎಂಬ, ಆಖ್ಯ—ಹೆಸರಿನ ಭವಗಳನ್ನೂ ತಾಳಿರ್ಪುದಲ್ಲದೆ, ಆಶೆಗಳೆಂಬ, ದಾಹ—ಉರಿಬೇಗೆಗೆ ಅದು ಸಿಕ್ಕಿಬಿದ್ದು, ದಗ್ಧ—ಸುಟ್ಟುಹೋಗಿರುವ ಬೂದಿಯಂತೆ ವ್ಯರ್ಥವಾದ ಸಂಕಲ್ಪಗಳನ್ನೆ, ತತ್+ಅಂಕತೆಯಿಂ—ತನ್ನಲ್ಲಿರುವ ಆ ಗುರ್ತಿನಿಂದ, ರೂಹು—ರೂಪುಗೊಂಡಿರುವದು, ಬಹುವಾಹಿನಿ....—ಸಮುದ್ರವನ್ನು ಕುರಿತು ಹರಿಯುತ್ತಿರುವ ನದಿಗಳಂತೆ, ಮನದೆ—ಈ ಮನಸ್ಸಿನಲ್ಲಿಯೇ ಅಖಿಲಾರ್ಥಗಳೂ ಬಂದು ಸೇರುತ್ತಿರುವವು.

೩೯ ಪಡದು—ಪಡೆಯುವದಿಲ್ಲ, ಧಾವತಿ—ಆಯಾಸ, ಶ್ರಮ; ಒಡವೆರದು—ಜತೆಗೂಡಿ, ವಿರಹವನು+ಎಡೆಗೆಡೆಗೆ—ಆಗಾಗ್ಗೆ ಬಿಡದಂತೆ, ಸೀಕರಿಗೆ—ದುಃಖದ ಉರಿಬೇಗೆಗೆ, ಒಡಲೆನಿಸಿ—ತಗುಲಿಬಿದ್ದು ಸಂಕಟಪಡುತ್ತಿದ್ದರೂ, ಅಥವಾ ಸೀಕರಿಗೆ+ಒಡರು–ಸುಟ್ಟುಹೋಗಿರುವ ಸ್ಥಿತಿಗೆ ತಗುಲಿಬೀಳುತ್ತಿದ್ದರೂ ಅದನ್ನು ನೆನಸಿಕೊಳ್ಳದೆ ಅಚ್ಚ ಹೊಸ ಆಳಾಗಿ ಬಿಡುತ್ತಿರುವದು !

೪೦ ಭಜಿತ ವಿಷಯಂ—ವಿಚಾರಿಸಲ್ಪಡುತ್ತಿರುವ ಈ ಚಿತ್ತವು ತನಗೊಂದು ಗೊತ್ತಾದ ನೆಲೆಯಿಲ್ಲದ, ಸ್ವರಸ....ಂತೆ—ಸ್ವರಸಭಾವಿತ ಪಾದರಸವು ಒಂದಾಗಿ ಉಂಡೆಯಾದಂತೆ, ಸಂಸಾರದಲ್ಲಿ ಮಾಡಿದ ಕರ್ಮವಾಸನೆಗಳೆಲ್ಲದರ ಒಟ್ಟಿನ ರೂಪುಗೊಂಡಿರುವ ಆ ಚಿತ್ತವನ್ನುಕೂಡ ಪಾಪ ಅಥವಾ ಪುಣ್ಯ, ಉಗ್ರ ನರಕ ಅಥವಾ ಸ್ವರ್ಗ, ಪಾಮರರ ಸ್ನೇಹ ಅಥವಾ ಶಾಸ್ತ್ರಪಾರಂಗತರ ಪೂಜ್ಯ ವಿಷಯ ಇವುಗಳಲ್ಲಿ ಒಂದನ್ನಾಗಿ ಗೊತ್ತುಮಾಡುವದಕ್ಕಿಲ್ಲದಂತಾಗಿರುತ್ತದೆ.

೪೧ ....ಮಾಡಲು—ಮಾಡಿರುತ್ತಾನೋ, ಅದಕೆ+ಅನುಭಾವಂ+ಆದ–ತಕ್ಕಂತೆ ಅದಕ್ಕೆ

ಆ ವಿಷಯಮುಳ್ಳವರೆ ಸಖರದ-।
ಕಾವ ಕಾಲದೊಳಾವದೇಶದೊ-।
ಳಾವ ಫಲಮುದಯಿಸಲವರೊಳದರಂತೆ ವರ್ತಿಪುದು ॥ ೪೧ ॥

ಚಿತ್ತವಿದು ಚೆಂಬೊನ್ನು, ವಿಷಯದ।
ನೊತ್ತವೇ ಕರುವದರ ನೆನವೇ-।
ಬತ್ತಿಗೆಯ ನಿಗ್ಗಾವು, ಮೋಹದೊಳೆರೆಯಲದರೊಳಗೆ ॥
ಮತ್ತೆ ಬೇರೊಂದಾಕೃತಿಯ ತಾಂ-।
ಪತ್ತುವುದೆ ತದ್ರೂಪಮಾಗದೆ।
ಚಿತ್ತಕಿಂ ವಸ್ತ್ವಂತರವದೇಂ ಭಾವನಾಬದ್ಧಂ ॥ ೪೨ ॥

ಫಲ ಕುಸುಮಗಳಿಗೆಂತಭೇದಂ-।
ಫಲಿಸುವುದೊ ಚಿತ್ತಕ್ಕೆ ಕರ್ಮ-।
ಕ್ಕೊಲಿವುದಂತಧ್ಯಾಸವದರಿಂದುಜ್ಜ್ವಳಿಗಳ-॥
ಸ್ಥಲದೆ ವಿಕೃತಿಯು ತೋರದಂತು-।
ಜ್ಜ್ವಳಿಪುದೀ ಸಂಸಾರವೇ ಮನ,।
ಕಲುಷಮಯ ಮಾನಸವೆ ಭವಮಾಗಿಹುದು ಪುಸಿಯಲ್ಲ ॥ ೪೩ ॥

---

ಸರಿಗಟ್ಟಿರುವ, ಭುಜಿಕ್ರಿಯಾ+ಅರ್ಹಂ....—ಸರಿಹೊಂದುವ ಭೋಗ್ಯವಸ್ತುಗಳ ರಾಶಿಹೊಂದುವದು, ....ಯಂ+ಉಳ್ಳವರೆ+ಸಖರು+ಅದಕೆ—ಆ ಮನಸ್ಸಿಗೆ, ಆವ-ಯಾವ, ಉದಯಿಸಲು—ತನಗೆ ಪ್ರಾಪ್ತವಾಗಲು, ಅವರೊಳು—ಆ ಕರ್ಮಫಲಗಳಲ್ಲಿ,

೪೨ ಚಿತ್ತವೇ ಚೆಂಬೊನ್ನು—ಕೆಂಪ್ಪೊನ್ನು, ವಿಷಯಗಳ ನೊತ್ತವೇ ಕರುವು-ಮೂಷೆಯು, ಆ ವಿಷಯಗಳ ನೆನಪೆಂಬುದೇ ಬತ್ತಿಗೆಯ ನಿಗ್ಗಾವು—ಬೆಂಕಿಯು, ಈ ಬೆಂಕಿಯಿಂದ ಕಾಯಿಸಿ ಕರಗಿಸಿದ ಚಿತ್ತವೆಂಬ ಆ ಬಂಗಾರವನ್ನು ತನಗೆ ಸುಖಸಾಧನತಾ ಬುದ್ಧಿಯೆಂಬ ಮೋಹದೊಳು ಎರೆಯಲು, ಮುಚ್ಚಿದ ತನ್ನ ವಿಷಯಕ್ಕಿಂತಲೂ ಅದು ರೂಪಾಂತರವನ್ನು ಹೊಂದುವದಕ್ಕಿಲ್ಲ. ಈ ಚಿತ್ತ—ಈ ಮನಸ್ಸನ್ನು ಬಿಟ್ಟು, ದೇಹದ ಒಳಹೊರಗುಗಳಲ್ಲಿ ಬೇರೊಂದು ವಸ್ತುವೇ ಇರುವದಿಲ್ಲವಾದ್ದರಿಂದ ಎಲ್ಲವೂ ಭಾವನಾಬದ್ಧವು.

೪೩ ಹೂವಿನಿಂದ ಹುಟ್ಟಿಬಂದ ಫಲ ಮತ್ತು ಅದಕ್ಕೆ ಕಾರಣವಾದ ಕುಸುಮ—ಇವುಗಳಿಗೆ+ಎಂತು+ಅಭೇದಂ....ಫಲಿಸುವದೊ+ಅಂತು, ಒಂದಕ್ಕೊಂದು ಇಂಬಿನಿರುವ ಚಿತ್ತ ಮತ್ತು ಕರ್ಮಗಳಿಗೂ ಅಧ್ಯಾಸವು—ಒಂದರಲ್ಲೊಂದು ಕಲೆಬೆರೆತಿರುವ ಅಭೇದವು ಹಾಗೆಯೇ, ಒಲಿವುದು—ಒಪ್ಪುವದು, ಆದ್ದರಿಂದಲೇ ಇವುಗಳಲ್ಲಿ ಒಂದರಿಂದೊಂದಕ್ಕೆ ಭೇದವೆಂಬ, ವಿಕೃತಿ—ವಿಕಾರವು ಕಾಣುವದಕ್ಕೆ ಬರುವದಿಲ್ಲ. ಅಂತೆಯೇ ಈ ಸಂಸಾರವು ಮನಸ್ಸಿನ ರೂಪುಗೊಂಡು, ಉಜ್ಜ್ವಳಿಪುದು—ಮೇಲೆದ್ದು ಕಾಣುತ್ತಿರುವದು, "ಬಂಧಾಯ ವಿಷಯಾಸಕ್ತಃ" ಎಂಬಂತೆ ವಿಷಯಗಳಲ್ಲಾಸಕ್ತಿಯಿಂದ ತನ್ಮಯಗೊಂಡಿರುವ ಈ ಮನಸ್ಸೇ ಭವ ಬಂಧವೆಂಬಿದು ಪುಸಿಯ ಮಾತಲ್ಲ.

ಕಾಮುವೇ ಮಾನಸ; ಮನಸ್ಸೇ-|
ಕಾಮವಿಾ ಕಾಮೋದಕವನಾಂ-|
ತೇ ಮಹಾಸಂಸಾರ ವಿಷವೃಕ್ಷಂ ವಿಟಪಿಯಹುದು ||
ಕಾಮನಾಫಲ ಭೋಕ್ತೃವಾತ್ಮಾ-|
ರಾಮನೆಂಬ ಜ್ಞಾನದಿಂದೆ ಮ-|
ಹಾಮಯಂ ದೊರಕೊಂಡುದಾತ್ಮಂ ನಿರ್ವಿಕಾರಸುಖಂ || ೪೪ ||

ಮನದ ಮನನದ ಮಾತ್ರದಿಂ ತ್ರಿಭು-|
ವನಕೆ ಸೃಷ್ಟಿ ಸ್ಥಿತಿ ಲಯಂಗಳ |
ಘನ ವಿಕಾರಂದೋರ್ಪುದಲ್ಲದೆ ಲೋಕವೆಲ್ಲಿಯುದು ||
ಮನಮಿದೇ ಸ್ನೇಹಂ, ತಿಲಾಳಿ ಭು-|
ವನಮಿದೇ ಮನವ:ರಳಿ ತಿಲವೆಂ-|
ದೆನಿಪುದಾತ್ಮಂ ತೈಲಭೂತನು ಜಾನಿಗಳಿಗೆ ನಿಜಂ || ೪೫ ||

ಆನುವುದು ನಿರ್ಮಲತರ ದ್ರ-|
ವ್ಯಾನುಬಂಧದೆ ಬಿಂಬ ಮಚ್ಛಂ-|
ಭಾನುವಿನಹಾಗೀ ಮನೊದ್ರವ್ಯದೆ ಪೊಳೆವುದರಿವು ||

---

೪೪ ಬಯಕೆಗಳ ರಾಶಿಯಾದ ಈ ಮನಸ್ಸೆಂಬುದೆ, ಕಾಮಂ+ಈ ಕಾಮ(ವೆಂಬ)+ಉದಕವನು+ಅಂತೇ—ನೀರಿನಿಂದಲೇ ಈ ಸಂಸಾರವೆಂಬ ವಿಷವೃಕ್ಷವು, ವಿಟಪಿಯಹುದು—ಎಲೆಗಳಿಂದ ತನ್ನಲ್ಲಿ ವಿಸ್ತರಿಸಿಕೊಂಡು ಚಿಗುರುತ್ತಿರುವದು. ಇದು ಬಯಸಲ್ತಕ್ಕದ್ದು, ತಾನು ಅದರ ಫಲಭೋಕ್ತೃವು ಎಂಬ ಅಜ್ಞಾನದಿಂದ ಈ ಸಂಸಾರ ಮಹಾರೋಗವು ತನ್ನಲ್ಲಿ ಕಂಡರೂ ಆತ್ಮನು ಮಾತ್ರ ನಿರ್ವಿಕಾರಸುಖಸ್ವರೂಪನಾಗಿಯೇ ತನ್ನಲ್ಲಿ ಸುಖದಿಂದ ರಮಿಸುತ್ತಿರುವನು.

೪೫ ಮನಸ್ಸಿನ ಸಂಕಲ್ಪದಿಂದಲೇ ಸರ್ವ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳ ವಿಕಾರವು ತೋರುತ್ತಿರುವದಲ್ಲದೆ, ಅದಕ್ಕಿಂತಲೂ ಆ ಸೃಷ್ಟ್ಯಾದಿಗಳು ಬೇರೆಯಿರುವದಿಲ್ಲ. ಮನಸ್ಸೇ ಎಣ್ಣೆಯು ಭುವನವೆಂಬುದೇ ಎಳ್ಳಿನ ರಾಶಿಯು; ಪುನಃ ವಿಷಯವಾಸನಾದೂರವಾದ ಈ ಶುದ್ಧ ಮನಸ್ಸೆಂಬುದೆ ಎಳ್ಳಿನ ರಾಶಿಯು, ಮತ್ತು ಆತ್ಮನೇ ತೈಲಭೂತನು ಎಂದರೆ ಶುದ್ಧಮನಸ್ಸಿನಿಂದಲೇ ವಿಚಾರಮಾಡಿ ತನ್ನನ್ನು ಶೋಧಿಸಿ ನೋಡಿದರೆ ಬ್ರಹ್ಮಾತ್ಮಭಾವದಿಂದ ತನ್ನಾತ್ಮನು ಅದರಲ್ಲಿಯೇ ತೇಲಿಬರುತ್ತಿರುವನು. ಸಂಕಲ್ಪಮಾತ್ರದ ಇರುವುಳ್ಳ ಈ ಜಗತ್ತಿನಿಂದಲೇ ತನ್ನಲ್ಲಿ ರೂಪುಗೊಂಡಿರುವ ಈ ಮನಸ್ಸಿರುವದಲ್ಲದೆ, ಆ ದೃಶ್ಯದ ಹಂಗಿಲ್ಲದೆ ಅದು ಇರುವದೇ ಇಲ್ಲ. ಈ ಮನಸ್ಸನ್ನೆ ವಿಚಾರದಿಂದ ಕಡೆದು ನೋಡಿ, ಅಲ್ಲಿಯೇ ತನ್ನ ಪರಮಾರ್ಥವನ್ನು ಕಂಡುಕೊಳ್ಳಬೇಕು. ಅದು ಹೇಗೆಂದರೆ—

೪೬ ತಿಳಿಯಾಗಿ ಶುದ್ಧವಾಗಿರುವ ನೀರು ಮುಂತಾದವುಗಳಲ್ಲಿ ಸೂರ್ಯಾದಿಗಳ ಪ್ರತಿಬಿಂಬಗಳು, ಅಚ್ಛಂ+ಆನುವದು—ಶುದ್ಧವಾಗಿ ಕಂಡುಬರುವಂತೆಯೇ, ಶುದ್ಧ ಮನಸ್ಸಿನಲ್ಲಿಯೇ ತನ್ನ ಬ್ರಹ್ಮಾತ್ಮಭಾವದ ಅರಿವಾಗಬೇಕಾಗಿರುವದು. ಭೂಮಿಯಾಕಾಶ ಎಂಬ ಈ ಉಭಯವು, ಸಂಘಟಿತ—ಕೂಡಿದ್ದರಿಂದಾಗಿರುವ ಈ ಭುವನದ, ಒಳಗೆ-ಶರೀರಗಳು ಮತ್ತು ಹೊರಗೆ—ಅವುಗಳನ್ನು

ಭೂನಭಃ ಸಂಘಟ ಭುವನವುಭ-।
ಯಾನುಬಂಧಂ ಮಿಗಲೊಳಗೆ ಪೊರ-।
ಗೀ ನಿಯಮದಿಂ ಬಂದುದಚ್ಛಾನಚ್ಛತರಭಾವಂ ॥ ೪೬ ॥

ಚಿತ್ಸಹಾಯವನಾಂತ ಮಾನಸ-।
ಮತ್ಸುಖಕೆ ಕಾರ್ಯಂಗಳಹುದು, ಜ-।
ಗತ್ಸಮೂಹಕೆ ಕರ್ತೃವಿದು ದೋಷಗಳೆನಿಪ ತನ್ನ-॥
ಮತ್ಸರಾದಿಗಳುಬ್ಬಲಧಿಕಾ-।
ಪತ್ಸರಣಿಯೊಳ್ನೋವು ದೈದಿಯ-।
ನುತ್ಸವವನದರಿಂದ ವಿಧಿಕೋಶಂ ಮನೋಮಾತ್ರಂ ॥ ೪೭ ॥

ಶರಧಿಯಲಿ ಬೊಬ್ಬುಳಿಕೆಯಂದದಿ; ।
ಮೆರೆವುದಿರುವುದು ಕೆಡುವುದೀ ಮನ-।
ಪುರುಷನಲ್ಲಿದ ಬಿಟ್ಟು ಭೇದಂಗಾಣೆ ಭುವನದಲಿ; ॥
ತರಣಿಕುಲ ಪುಂಗವನೆ ಕೇಳೆಂ-।
ದೊರೆದರುಂಧತಿಯಾಣ್ಮನುಕ್ತಿಯು ।
ಪರಿಕಿಸಲ್ಭವಸಿಂಧುವೆಂತೆಂಬುದು ಮನೋಮಾತ್ರಂ ॥ ೪೮ ॥

ಎಲ್ಲಿ ನಗರ ವದೆಲ್ಲಿ ಭೂಪತಿ-।
ಯೆಲ್ಲಿ ಹಸ್ತ್ಯಶ್ವಾದಿ ಪಾಯ್ದಳ-।
ವೆಲ್ಲಿ ನಾನಾವರ್ಣದವರಿರುತಿರುವ ಬೀದಿಗಳು ॥

---

ಬಿಟ್ಟಿರುವದು ಎಂಬ ನಿಯಮದಿಂ—ಉಪಾಧಿಗಳಿಗೆ ಕಟ್ಟುಬಿದ್ದಿರುವ ಜ್ಞಾತೃತ್ವವೆಂದರೆ ಮಿಥ್ಯಾಜ್ಞಾನದಿಂದ ಜೀವಪರಮರಲ್ಲಿ, ಅಚ್ಛ+ಅನಚ್ಛತರಭಾವಂ—ಶುದ್ಧಾಶುದ್ಧ ಭಾವಗಳು ಇರುವಂತೆ ಕಂಡರೂ, ಉಭಯಾನ ಬಂಧಂ ಮಿಗಲು—ದೇಹೇಂದ್ರಿಯಗಳಲ್ಲಿ 'ನಾನು' ಎಂಬ ಈ ಅವಿದ್ಯಾಕಲ್ಪಿತವಾದ ಆ ಎರಡು ಉಪಾಧಿಗಳು ಮಿಥ್ಯೆಯೇ ಎಂಬ ನಿಶ್ಚಯದಿಂದ ಅವುಗಳನ್ನು, ಉಳಿದು—ಬಿಟ್ಟು, ನೋಡಿದರೆ ಆಗ ಅವಿದ್ಯೆಯು ಕಣ್ಣಿಗೆ ಮೊದಲು ಕಾಣುತ್ತಿದ್ದ ಆ ಅಚ್ಛಾನಚ್ಛತರ ಭಾವಗಳನ್ನು ಆ ಜೀವೇಶ್ವರರ ಪರಮಾರ್ಥಸ್ವರೂಪವು ಮಾತ್ರ ತನ್ನಲ್ಲೆಂದಿಗೂ ಹೊಂದದೆ ಶುದ್ಧವಾಗಿಯೇ ಇರುವದೆಂಬುದು ಮೇಲೆದ್ದು ಆಗ ಗೋಚರವಾಗುವದು. ಈ ರೀತಿಯಿಂದ ನಿತ್ಯನಿರ್ವಿಕಾರವಾದ ತನ್ನ ಬ್ರಹ್ಮಾತ್ಮಭಾವವು ತೋರಬೇಕಾದರೆ ಮನಸ್ಸಿನಲ್ಲಿಯೇ ಎಂಬುದು ಮರಿಯುವದಲ್ಲವಾದ್ದರಿಂದ ಆ ಮನಸ್ಸಿನ ನೈರ್ಮಲ್ಯವು ಜಿಜ್ಞಾಸುಗಳಿಗೆ ಅತ್ಯಗತ್ಯವು.

೪೭ ಚಿತ್ಸ....ಹುದು—ಆತ್ಮನ ಹೊಳಪಿನಿಂದ ಕೂಡಿರುವ ಮನಸ್ಸು ಜೀವನಿಗೆ ಹಲವು ಬಗೆಗಳಿಂದ ಸಹಕರಿಸುತ್ತಿರುವದು ಅಲ್ಲದೆ, ಅದೇ ಸರ್ವ ಜಗತ್ತಿಗೂ ಕರ್ತೃವಾಗಿರುವದು. ....ಉಬ್ಬಲು—ಅಧಿಕವಾಗಿ ತನ್ನಲ್ಲಿ ಗಡಿಯನ್ನು ಮೀರಲು ಆಗ ಮನಸ್ಸು, ಅಧಿಕ+ಆಪತ್+ಸರಣಿ—ವಿಪತ್ತುಗಳ ಸಾಲುಗಳಲ್ಲಿಯೇ ಸಿಕ್ಕಿಬಿದ್ದು ನಿರಂತರವೂ ನೋಯುತ್ತಿರುವದು, ಐದಿ+ಅನುತ್ಸವವನು—ಕುಗ್ಗಿದ ಸಂತೋಷದಿಂದ ತಾನು ಖಿನ್ನನಾಗಿ, ವಿಧಿಕೋಶಂ—ಬ್ರಹ್ಮಾಂಡವು,

೪೮....೪೯ ಪುರುಷನಲ್ಲಿ+ಇದ—ಈ ಮನಸ್ಸನ್ನು ಬಿಟ್ಟು, ಜಗತ್ತೆಂಬ ಭೇದಂ ಕಾಣೆನು,

ಅಲ್ಲಿ ಮೇಣವರವರ ನಡವಳಿ-।
ಯಲ್ಲಿ ಸಲುವ ಪದಾರ್ಥಗಳ ಕ-।
ಣ್ಣಲ್ಲಿ ಕಂಡಂದದಲಿ ಕನಸಿನಲುಂಟುಮಾಡುವುದು ॥ ೪೯ ॥

ಆನೆಯಾಗಟ್ಟುವುದು ಭಯಪ-।
ಟ್ಟೇನು ಗತಿಯೆಂದೋಡಿದರೆ ತೆರ-।
ಪೇನು ಸಿಕ್ಕದೆ, ಸಿಕ್ಕಿದಂದದಿ ತಪ್ಪಿದಂದದಲಿ ॥
ತಾನು ಸತ್ತಂದದಲಿ ಸತ್ತದ-।
ನೇ ನೆರೆಯದಂದದಲಿ ತೋರುವ-।
ಮಾನಸಕ್ಕಿಂದಿಂದ್ರಜಾಲವದುಂಟೆ ಭುವನದಲ್ಲಿ! ॥ ೫೦ ॥

ಸಟೆಗೆ ಮೊದಲನೆಪಾದ, ಬರುತಿಹ-।
ಕಿಟುಕಿಗಿಕ್ಕಿದ ಬೇರು, ಮೃತ್ಯುವ-।
ಗುಟುಕು, ಸಕಲಾಪತ್ತಿಗಳ ಪೆಣ್ಗಳಿಗೆ ತೌರೂರು, ॥
ಅಟಮುಟಿಸಿ ಕೈಲಿದ್ದ ವಸ್ತುವ ।
ಘಟಿಸದಂದದಿ ಮಾಳ್ಪಕಿತವರ-।
ಪಟಲವು ಈ ಮನವೆಂದು ಪೇಳುವರಹರೆ ಕೋವಿದರು ॥ ೫೧ ॥

ಇದ್ದರಿದು ತಂಡೋಪತಂಡದಿ ।
ಹೊದ್ದುವದು ದುಃಖಂಗಳವದಿರೊ-।
ಳಿದ್ದು ತಲ್ಲಣಗೊಂಬುದಂ ತಾನುಂಡು ತಿಳಿಯದಿದು ॥
ಇದ್ದರರಿವಿನ ಶಿಲುಕು ತಡಿಯೊಳ-।
ಗಿದ್ದು ಭಾವಿಯ ಚರಿಪ ಶಿಶು ಬಿಡ-।
ದೆದ್ದು ಬೀಳುವುದೇ ತದಂಬುವಿನಲ್ಲಿ ಭರವಿರಲು ॥ ೫೨ ॥

ಮಂಕಿಗಿದು ಗುರು; ಹೆಡ್ಡರನು ನಿಃ-।
ಶಂಕತೆಯೊಳಾಳಿದ ನೃಪಾಲಕ-।
ನಂಕೆಯಿಲ್ಲದ ಮಿಂಡಿ, ಕದ್ದೆಡಬಲದೆ ಧನಿಗೃಹದೆ-॥

---

ತರ....ವನೆ—ಎಲೈ ಶ್ರೀರಾಮನೆ! ಕೇಳು+ಎಂಪು+ಒರೆಪ+ಅರುಂಧತಿಯಾಣ್ಮನ—ವಸಿಷ್ಠನ. ಉಕ್ತಿ—ವಾಕ್ಯವನ್ನು, ಪರಿಕಿಸಲ್—ಪರಿಶೀಲಿಸಿದರೆ; ೪೯—ಹಸ್ತಿ+ಅಶ್ವಾದಿ—ಆನೆ ಕುದುರೆಯೇ ಮುಂತಾದ, ಪಾಯ್ದಳ—ಕಾಲಾಳುಗಳ ದಂಡುಗಳು; ೫೦—ತೆರಪು—ಆಶ್ರಯ, ತಾನೇ ಸತ್ತು ಬಿದ್ದಿರುವಂತೆಯೂ ಆ ತನ್ನ ಸಾವನ್ನು ತಾನೇ ಕಾಣುತ್ತಿರುವಂತೆಯೂ ಹೀಗೆಲ್ಲ....; ೫೧—ಕಿಟುಕಿಗೆ—ಮನಸ್ಸಿಗೆ ಬೇಸರಪಡಿಸುವ ನೋವುಗಳಿಗೆಲ್ಲ ಇಕ್ಕಿದ ತಾಯಿಬೇರು, ಅಟಮುಟಿಸಿ—ಕಪಟಪಡಿಸಿ, ಘಟಿಸದಂದದಿ—ತನ್ನ ಕೈಸೇರದಂತೆ, ಕಿತವರಪಲಟವು—ಮೋಸಗಾರರ ಗುಂಪು; ೫೨—ಮಂಕುಹಿಡಿದವರಿಗೆಲ್ಲ, ಹೆಡ್ಡರಿಗೆಲ್ಲ, ಹುಚ್ಚರಿಗೆಲ್ಲ; ಮಿಂಡಿ—ಮಿಂಡುಗಾತಿ, ಅತಿಕಾಮುಕಳು, ಸಂಕಲೆ—ಸಂಕೋಲೆಗೆ, ತಸ್ಕರಪಂಕ—ಕಾಮಾದಿಗಳೆಂಬ ಗುಪ್ತ ಅರಿಗಳು

ಸಂಕಲಿಗೆ ಒಳಗಾದ ಕಳ್ಳ, ಮಿ-।
ಡುಂಕುದಿಹ ಹೆಬ್ಬಾವು, ತಸ್ಕರ-।
ಪಂಕಭೂಮಿ ಯಿದಕ್ಕೆ ಸದ್ಗುಣವೆಂಬುದೇನುಂಟೆ ॥ ೫೩ ॥

ತಿಗರಿಯಂದದಿ; ಬರುವ ಘಾಳಿಗೆ-।
ತಗಿಲಿ ಮೇಲುಬ್ಬೆದ್ದು ಹಾರುವ-।
ಜಗತಿಯಣುರಾಶಿಗಳ ತೆರದಲಿ ಜುಮ್ಮನೇಳುವದು; ॥
ತಗಿಲಿದರೆ ಘನಕೋಪ ವದರಿಂ-।
ದಗಲುವುದು ವಂಶಾನುಗತ ಮಾ-।
ನಗತಿ ಯಸುಗತಿಯೆಂಬುದೆಳ್ಳನಿತುಂಟೆ ಬುದ್ಧಿಯಲಿ ॥ ೫೪ ॥

ಮತಿಯೆನುತ್ತಹಮೆನುತ ರೂಪ-।
ದ್ವಿತಯಮುಂ ಪಿಡಿದಿರ್ಪುದಿದರೋ-।
ಳ್ಮತಿಯೆ ಚಿನ್ಮಯಮಪ್ಪುದಹಮಾತ್ಮನನು ಪಿಡಿದಿಹುದು ॥
ಮತಿಯ ಮರವೆಯ ಮಾಟ ಲೋಕ-।
ತ್ರಿತಯದಭಿರತಿ, ಭೋಗ, ತತ್ಸಂ-।
ಗತಿಯಿದಂ ಬಿಟ್ಟಿಲ್ಲ ತೋರಲ್ತೋರ್ಕೆ ಮತ್ತೊಂದು ॥ ೫೫ ॥

ಇದಕೆ ಕಾಮಾದಿಗಳ ದೋಷಂ-।
ಪುದುಗೆ ಮೂರಡಸುವವು ಸಂದೆಗ ।
ಬದುಲು, ಬೇಕೆಂದೆಣಿಕೆಯೆಂಬಿವು; ಬದುಕಿನಿಂದಿವರು ॥

---

ವಾಸಿಸುವ ಪಾಪದ ಭೂಮಿಯು; ೫೪–ತಿಗರಿ—ಕುಂಬಾರನ ತಿಗುರಿಯು, ಜಗತಿಯಣ—ಮಣ್ಣು ಧೂಳಿನ ಕಣಗಳು, ತಗಿಲಿದರೆ—ತನ್ನ ಸಂಕಲ್ಪಕ್ಕಡ್ಡಿಯಾದರೆ. ....ಮಾನ—ತನ್ನ ಮನೆತನದಿಂದ ಬಂದಿದ್ದ ಗೌರವ, ಗತಿ—ಸದ್ಗತಿ, ಪುಣ್ಯಫಲ; ಅಸುಗತಿ—ಪ್ರಾಣದವರೆಗೆ ತನಗೆ ತೊಂದರೆಯು ಬಂದೀತು ಎಂಬ ಯೋಚನೆಯು, ಎಳ್ಳನಿತು—ಎಳ್ಳಿನಷ್ಟಾದರೂ ಅವಕ್ಕಿರುವದಿಲ್ಲವು.

೫೫ ಮತಿಯು+ಎನುತ+ಅಹಂ+ಎನುತ ರೂಪದ್ವಿತಯ–ಹೀಗೆ ತನ್ನಲ್ಲಿಬ್ಬಗೆಯ ರೂಪುಗಳನ್ನು ಈ ಮನಸ್ಸೊಂದೇ, ಪಿಡಿದಿರ್ಪುದು+ಇದರೋಳ್—ಈ ಎರಡು ರೂಪುಗಳಲ್ಲಿ, ಮತಿಯೆ ಚಿನ್ಮಯಂ+ಅಪ್ಪುದು+ಅಹಂ—ಇನ್ನು ಅಹಂಕಾರವಾದರೆ, ಲೋಕತ್ರಯದ ಕಾಂಕ್ಷೆಯು, ಅವುಗಳ ಪ್ರಾಪ್ತಿಯು ಮತ್ತು ಭೋಗಗಳು ಇವುಗಳೆಲ್ಲ...., ಮಾಟ—ಕಾರ್ಯವಲ್ಲದೆ, ಮರವೆಯನ್ನು ಬಿಟ್ಟು ಬೇರಾಗಿ ತೋರಲು, ಅವು ಎರಡನೆಯದಾಗಿರುವದಿಲ್ಲ.

೫೬ ಅವಿದ್ಯಾಕಾಮಕರ್ಮ ಎಂಬ ಸಂಸಾರಕಾರಣಗಳಾದ ದೋಷಗಳು ಬುದ್ಧಿಗೆ ಬಂದು, ....ಪುದುಗೆ—ಸೇರಲು, ಅದರಿಂದ ಸಂದೆ(ೕಹ)ಗ+(ಮತ್ತು ಒಂದಿನ್ನೊಂದೆಂದು ತಪ್ಪಾಗಿ ತಿಳಿದುಕೊಳ್ಳುವ) ಬದುಲು ಜ್ಞಾನ ಮತ್ತು ಬೇಕು (ಎಂಬೀ ಬಯಕೆಯ ರೂಪಾದ ಕಾರ್ಯದಿಂದ ಗೊತ್ತಾಗುವ ಅಜ್ಞಾನ—)+ಎಂಬೆಣಿಕೆಯ ಈ ಮೂರುಬಗೆಯ ಅಜ್ಞಾನಗಳು (ಗೀ. ಭಾ. ೧೩–೨; ಬೃ. ಭಾ. ೩–೩–೧; ಬೃ. ವಾ. ೪–೪–೭೪೭) ಬುದ್ಧಿಗೆ ಸರಾಗದಿಂದ, ಅಡಸುವವು—ಬಂದು ಸೇರಿಕೊಳ್ಳುವವು, ಬದುಕಿನಿಂದಿವರ—ಈ ಮೂರು ಬಗೆಯ ಅಜ್ಞಾನದೋಷಗಳ ನಿಮಿತ್ತ

ಉದುಭವಿಸಿದುದು ಘೋರ ಸಂಸಾ-।
ರದ ಮಹತ್ತಾಪಂ; ತದಂತವ ।
ಬಿದಿಯಕಲ್ಪಂ ಮರಳಲ್ಕೈದದದೇಂ ದೃಢೀಕೃತಮೊ! ॥ ೫೬ ॥

ಸರಳ ಶಾಂತ್ಯಾದಿಗಳ ಸಂಗಂ-।
ದೊರಕಲಿದರಿಂ ಮೋಕ್ಷವಲ್ಲದೆ ।
ಪರಪದಾರ್ಥದೊಳಾಗದಾಗ ವಿಚಾರಪತಿಯಪ್ಪಂ ॥
ಉರುವಿಚಾರನ ಬಲದಿ ಮತಿ ಸುಂ-।
ದರಿಯೊಳೊಗೆವಂ ಸದ್ವಿವೇಕಂ ।
ನಿರುಪಮಾನಾಮೃತ ಫಲಪ್ರದನಾಗಿ ಪುರುಷರ್ಗೆ ॥ ೫೭ ॥

ಪರಿಪರಿಯ ಸಂಕಲ್ಪತತಿಯೊ-।
ತ್ತರಿಸಲಿಲ್ಲದಿರಲ್ಕೆ ನಿಶ್ಚಯ-।
ವಿರದು ಕಾರ್ಯಾರಂಭವದರಿಂ ಬುದ್ಧಿಯೊಳ್ಬಗೆಯೆ -॥
ದುರಿತ ವಾಸನೆ ಕೇಡನೇ ತಾಂ-।
ತರುವದಿಲ್ಲದಿರಲ್ಕೆ ಶಾಂತಿಯೆ-।
ಮೆರೆವುದದರಿಂ ಘಟಿಪುದುತ್ತಮರಿಂದ ಪರಮಾರ್ಥಂ ॥ ೫೮ ॥

**ಈ ಮತಿಗಹಂಕಾರವೇ ನಿಜ-।**
**ವಾ ಮಹಾಹಂಕಾರದರ್ಥಮು-।**
**ನಾಮಯಂ ಪರಮಾತ್ಮ ಪದವದಕಿದಕೆ ಸಂಬಂಧಂ-॥**

---

ದಿಂದಲೇ ತನಗೆ ಸಂಸಾರತಾಪವು ಉದ್ಭವಿಸಿತು. ತದಂತವ—ಮೇಲಿನ ಅಜ್ಞಾನತ್ರಯ ನಿಮಿತ್ತವಾಗುಳ್ಳ ಆ ಸಂಸಾರದ ಬಿಡುಗಡೆಯು, ಬಿದಿ—ವಿಧಿ—ಬ್ರಹ್ಮನ ಒಂದು ಕಲ್ಪವೇ, ಮರಳಲು+ಐದದು—ಆಗುವಹಾಗಿರುವದಿಲ್ಲ—ಎಂದರೆ ಅದು ನಿಜವಾಗಿ ಹುಟ್ಟಿರತಕ್ಕದ್ದಲ್ಲವಾದ್ದರಿಂದಲೂ (ಮಾಂ.ಕಾ. ೧-೧೭) ಅಜ್ಞಾನದಿಂದ ತಲೆಯೆತ್ತಿದ ಅದು ಸಮ್ಯಗ್ಜ್ಞಾನದಿಂದಲೇ ಹೋಗಬೇಕಾಗಿರುವದರಿಂದಲೂ ಆ ಜ್ಞಾನವನ್ನು ಬಿಟ್ಟು ಅನ್ಯಥಾ ನಾಶವಾಗುವದಕ್ಕಿಲ್ಲವೆಂದು ಭಾವವು. ಅಜ್ಞಾನಕಾರ್ಯವಾಗಿದ್ದರೂ ಮತ್ತೊಂದಕ್ಕೆ ಹೋಲಿಸುವದಕ್ಕಿಲ್ಲದಿರುವ ಅದು ತನ್ನೊಳಗೆ ಇನ್ನೆಷ್ಟು ಗಟ್ಟಿಯೋ ಹೇಳುವದಕ್ಕಿರುವದಿಲ್ಲ!

೫೭ ಪರಪದಾರ್ಥ—ಬೇರೊಂದರಿಂದ ಎಂದಿಗೂ ಆಗದು, ಆಗ—ಶಾಂತ್ಯಾದಿಗಳು ತನಗೆ ದೊರೆತಿರುವಾಗ, ಬುದ್ಧಿಯೆಂಬ ಸುಂದರಿಯೊಳು+ಒಗೆವಂ—ಸದ್ವಿವೇಕವೆಂಬ ಪುತ್ರನು ಜನ್ಮಿಸುವನು, ....ಅಮೃತ—ನಿತ್ಯಮುಕ್ತಿಯೆಂಬ,

೫೮ ....ತತಿಯು—ತಂಡತಂಡಗಳಾಗಿ, ಒತ್ತರಿಸಲು—ಒಕ್ಕಡೆ ಬಂದು ಗುಂಪುಸೇರಲು, ಇಲ್ಲ....ಯವು—ನಿಶ್ಚಿತ ಜ್ಞಾನವಿಲ್ಲದಿರಲು, ಇರ....ಭವು—ಮುಕ್ತಿಯಿಲ್ಲದ್ದರಿಂದ, ಬಗೆಯೆ—ವಿಚಾರಿಸುವಲ್ಲಿ, ತಾಂ—ಆ ವಾಸನೆಗಳು ಬುದ್ಧಿಯಲ್ಲಿ ಇಲ್ಲದಿರಲ್ಕೆ+ಶಾಂತಿಯೆ+ಮೆರೆವುದು—ಬೆಳಗುವದು, ಉತ್ತಮ(ರಾದ ಸತ್ಪುರುಷ)ರಿಂದ ತನಗೆ ಪರಮಾರ್ಥವು, ಘಟಿಪುದು—ಸಿದ್ಧಿಸುವದು.

೫೯ ಅನಾಮಯಂ—ಭವ ಮಹಾರೋಗವಿಲ್ಲದ ಪರಮಾತ್ಮಪದವೇ—"ಸರ್ವೋऽಹಂ,

**ಏಮುಖದೊಳಿಹುದೆಂದು ತಿಳಿಯದು-|**
**ದೇ ಮರವೆ, ಗುರುಮೂಲದಿಂದದ-|**
**ನೇ ಮಥಿಸಿ ತಿಳಿಯಲ್ಕೆ ಚಿದಚಿದ್ಗ್ರಂಥಿ ಬಿಚ್ಚುವುದು ॥ ೫೯ ॥**

ಅಹಮಿಗಿದಮಿಂಗೈಕ್ಯವೊ ಭಿದೆ-|
ಯಿಹುದೊ ಎಂದಾರೈಯ್ಯೆ ನಯ ಗುರು-|
ವಿಹಿತಮಾರ್ಗದೊಳಿಲ್ಲ ತೇಜಸ್ತಿಮಿರಗಳಹಾಗೆ ॥
ಅಹಮೆಯಾಂತರ ಮಿದಮೆ ಬಾಹ್ಯಂ, |
ಗ್ರಹಿಪುದದು ಗ್ರಾಹ್ಯವಿದು ದ್ರಷ್ಟ್ರುವ-|
ದಹುದಿದುವೆ ದೃಶ್ಯಂ ವಿಚಾರಿಸಲಹುದೆ ಸಂಪರ್ಕಂ ॥ ೬೦ ॥

ಇದಮಿಗರ್ಥ ಘಟಾದಿಗಳು, ತಾ |
ನದಕಹಮಿಗರ್ಥಂ ಸಮಸ್ತರೊ-|
ಳಿದಕೆ ನೋಸವ ಕಾಣರಾದ್ಯರ್ತತ್ತ್ವದರ್ಶಿಗಳು ॥
ಇದಮೆಸೆವುದೆಲ್ಲಂ ಜಡಂ, ನ-|
ಶ್ಯದ ಪ್ರಪಂಚ ಮಹಮೆಸೆವುದೆ-|
ಲ್ಲದುನೆ ನಿತ್ಯಾತ್ಮಸ್ವರೂಪಂ ಸಹಜಮಾಗಿಹುದು ॥ ೬೧ ॥

---

ಪೂರ್ಣೋऽಹಂ'' ಎಂಬ ಮಹಾಹಂಕಾರವು, ಇದೇ ನಿಜಂ—ಬುದ್ಧಿಯ ಪರಮಾರ್ಥವು, ಈ ಬುದ್ಧಿ ಮತ್ತು ಆತ್ಮ ಎಂಬೆರಡಕ್ಕೂ ಸಂಬಂಧವು, ಏಮುಖದೊಳು+ಇಹುದು—ಹೇಗೆ ಉಂಟಾಗಿರುವದೆಂಬುದನ್ನರಿಯದ ಜ್ಞಾನಾಭಾವವೆಂಬುದೇ ಮರವೆಯು; ಅದನ್ನೆ ಗುರುಗಳಲ್ಲಿ ವಿಚಾರದಿಂದ, ಮಥಿಸಿ—ಕಡೆದು, ತಿಳಿಯಲ್ಕೆ ಕೂಡಲೆ ಒಂದಿನ್ನೊಂದರಲ್ಲಿ ಕಲೆಬೆರತುಕೊಂಡು ಅವಿಚಾರಸಿದ್ಧವಾಗಿದ್ದ, ಚಿತ್+ಅಚಿತ್—ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸವೆಂಬ ಅವಿದ್ಯೆಯ, ಗ್ರಂಥಿ—ಹೃದಯದ ಕಗ್ಗಂಟು ಕಳಚಿಕೊಳ್ಳುವದು.

೬೦ ನಯ—ಶಾಸ್ತ್ರ, ಯುಕ್ತಿ ಮತ್ತು ಗುರುಗಳಿಂದಲೂ, ವಿಹಿತ—ಬೋಧಿಸಲ್ಪಟ್ಟ ಮಾರ್ಗದಿಂದ ಅಹಮಿಗೂ ಮತ್ತು ಇದಮಿಗೂ ಒಂದೆಂಬ ಐಕ್ಯವಿರುವದೊ ಅಥವಾ, ಭಿದೆ—ಭೇದವೇ ಇರುವದೋ? ಎಂದು+ಆರೈಯ್ಯೆ ಕತ್ತಲೆ ಬೆಳಕುಗಳಂತೆ ಅವುಗಳಿಗೆ, ಸಂಪರ್ಕಂ—ಒಂದರೊಡನೊಂದು ಕೂಡಿರುವ ಐಕ್ಯ ಎಂಬುದು ಇಲ್ಲವೇಇಲ್ಲ. ಅನೇತಕ್ಕೆಂದರೆ 'ನಾನು' ಎಂಬ ಅಹಮೆಯು—ಆಂತರವು ಮತ್ತು ಗ್ರಹಿಪುದು—ಗ್ರಾಹಕವಾದ ದ್ರಷ್ಟ್ರುವಾಗಿರುವದು; 'ಇದು' ಎನ್ನುವ ಇದಮೆಯು—ಹಾಗಿರುವದಿಲ್ಲವಾದ್ದರಿಂದಲೆ ಅವುಗಳಿಗೆ ಸಂಪರ್ಕವಿರುವದಿಲ್ಲ.

೬೧ ಅಹಮಿಗೆ+ಅರ್ಥವಾದ 'ತಾನು' ಎಂಬುದು 'ನಾನು', 'ನಾನು'—ಎಂದು ಪ್ರತಿಯೊಬ್ಬನಲ್ಲಿಯೂ ಕಡಿವಡೆಯದಂತೆ ಏಕವಾಗಿ ತೋರಿಕೊಳ್ಳುವ ತಂತಮ್ಮ ಆತ್ಮನಾಗಿರುವದು. ಆದ್ಯರು—ಪೂಜ್ಯರಾದ, ಇದಂ + ಎಸೆವುದು+ಎಲ್ಲಂ—ಬಿಡಿಬಿಡಿಯಾಗಿಯೂ, ಅಹಮು—ಎಂಬುದು ಮಾತ್ರ ಎಲ್ಲರಲ್ಲಿಯೂ ಏಕವಾಗಿ ತಂತಮ್ಮ ಸ್ವರೂಪದಿಂದ ಆತ್ಮನಾಗಿಯೂ ಇರುವದು.

ಅಂತರಂಗವಿದೊಂದಿದಕೆ ಮುಖ-।
ಮುಂತಿರುವದೊಂದೊಡನೆ ಕಾಯದಿ ।
ಹಿಂತಿರುವದೊಂದಿದರೊಳಗೆ ಹಿಂದಿರುವಹಂಕಾರಂ-॥
ಅಂತರಾತ್ಮನ ಪಿಡಿದಿರುವದು, ।
ಸ್ವಾಂತವಿದು ಭೌತಿಕವ ಪಿಡಿದಿಹು-।
ದೆಂತೆಣಿಸಲಿದರಲ್ಲಿ ತೋರ್ಪುದು ನಿಯತ ಲಕ್ಷಣವು- ॥ ೬೨ ॥

ಇದು ತೊಗಲು ಮಾಂಸವಿದು ಕೀಕಸ-।
ವಿದು ರಕುತವಿದು ಶುಕ್ಲ ವಟಿ ತಾ-।
ನಿದು ರಸವಿದೆಂದೆನಿಸಿಕೊಂಬವಹಂ ಪದಾರ್ಥಗಳೇಂ ॥
ಇದು ಮರುತ್ಪಂಚಕವು ಶಬ್ದಾ-।
ಸ್ಪದಕವಿದು ಸಮ್ತ್ವಂ ದೃಗಾಖ್ಯಮಿ-।
ದಿದುವೆ ಘ್ರಾಣಂ ರಸನೆಯಿದು ಎಂದೆನಿಸಿಕೊಂಡಿರುವ ॥ ೬೩ ॥

ಇವು ವಚಃ ಕರ ಪದ್ಗುದಾನಂ।
ದ ವಸತಿಗಳೆಂದೆನಿಸಿಕೊಂಡಿರು-।
ವವು ವಿವೇಚಿಸಲಹಮಿಗರ್ಥಂಗಳೆ; ಮನಸ್ಸಿನಲಿ-॥
ಭವಿಪ ರಾಗಾದಿಗಳೆ ಕಾರ್ಯ-।
ಪ್ರವಣ ಹೃನ್ಮತಿ ಚಿತ್ತಗಳೆ ಬೇ-।
ರವು ಗೃಹಿಗೆ ಗೃಹದಂತೆ ತೋರ್ಪವಹಮ್ಮಿಗಲ್ಲರ್ಥಂ ॥ ೬೪ ॥

---

೬೨ ಅಂತರ ಗವೆಂಬ ಮನಸ್ಸೊಂದೇ ಅಂತರ್ಮುಖ ಮತ್ತು ಬಹಿರ್ಮುಖ ಎಂದು ತನ್ನಲ್ಲಿ ಅದು ಇಬ್ಬಗೆಯಾಗಿರುವದು, ಸ್ವಾಂತ—ಮನಸ್ಸಿನ ಅಹಮಾಕಾರವೆಂಬ ಅಂತರವೃತ್ತಿಯು ಆತ್ಮನನ್ನೂ, ಇದು ಎಂಬ ಬಾಹ್ಯವೃತ್ತಿಯು ಹೊರಗಿನ ಭೌತಿಕ—ಭೂತಕಾರ್ಯಗಳನ್ನು ಪಿಡಿದು ವಿಷಯೀಕರಿಸುತ್ತಿರುವವು. ಈ ಬಾಹ್ಯವೃತ್ತಿಯಲ್ಲಿ ಆತ್ಮನ, ನಿಯತ—ಒಂದು ಗೊತ್ತಾದ ಲಕ್ಷಣವು, ಎಣಿಸಲ್+ಎಂತು+ತೋರ್ಪುದು?

೬೩ ಕೀಕಸ—ಎಲುಬು, ವಟಿ—ಹಗ್ಗದಂತೆ ಬಿಗಿದುಕೊಂಡಿರುವ ನರಗಳು, ಅಹಂ....—ನಾನೆಂಬಾತ್ಮನಾಗುವವೇನು? ಮರುತ್—ವಾಯು, ಶಬ್ದಾಸ್ಪದಕವು—ಶ್ರೋತ್ರವು, ಸಮ್ತ್ವಂ—ತ್ವಕ್ಕು, ದೃಗ್—ನೇತ್ರ ಎಂಬ, ಆಖ್ಯಂ—ಈ ಹೆಸರಿನ,

೬೪ ವಚಃ—ವಾಕ್, ನಾಲಿಗೆ; ಪದ್—ಪಾದಗಳು, ಗುದ—ಪುರೀಷಸ್ಥಾನ, ಆನಂ....ವಸತಿ—ಯೋನಿ ಮತ್ತು ಪುರುಷೇಂದ್ರಿಯ ಇವುಗಳು, ಎಂದೆನಿ....ವವು—ಕರ್ಮೇಂದ್ರಿಯಗಳಿವು. ವಿವೇಚಿಸಲು+ಅಹಮಿಗೆ—ಆತ್ಮನೆಂಬ ಪದಕ್ಕೆ ಅರ್ಥಂಗಳೆ ಏನು? ಅಲ್ಲ. ಇನ್ನು ರಾಗಾದಿಗಳುಳ್ಳ ಮನಸ್ಸು, ಹೃತ್—ಅಹಂಕಾರ, ಮತಿ, ಚಿತ್ತ ಇವುಗಳೇನಾದರು ತನ್ನಾತ್ಮನಾಗುವವೇನು? ಏತಕ್ಕೆಂದರೆ ತನಗೆದುರಿಟ್ಟು ತೋರುತ್ತಿರುವ ಇವು ಯಜಮಾನನಿಗೆ ಮನೆಯಂತೆ ತನಗಿಂತ ಬೇರೆಯೇ ಆಗಿರುವವು. ಆದ್ದರಿಂದಲೇ ಅಹಮಿಗೆ-ಆತ್ಮನೆಂಬುವದಕ್ಕೆಂದಿಗೂ ಅರ್ಥವಲ್ಲ.

ಯಾವುದೆನಲಹಮರ್ಥ ತಾನೇ-।
ಭಾವಿಸಲು, ತದಹಂಕೃತಿಯೆ ಜ-।
ನ್ಮಾವಲಂಬನವಾಯಿತೇತಕ್ಕೆನಲಿದಮಿಗರ್ಥಂ-॥
ಯಾವುದದ ತಾನೆಂದ ದೆಶೆಯಿಂ-।
ನೋವು ಬಂದುದು, ಸತ್ಯಮುಳಿದವ-।
ನಾವನಾಗಲಿ ಕೆಡದೆ ಬಾಳುವದೆಲ್ಲಿ ಲೋಕದಲಿ! ॥ ೬೫ ॥

ಸಕಲ ಕಾರಣ ತಾನು, ತನ್ನಿಂ-।
ಸಕಲವಿಹುದಡಗುವದೆಂತೆಂ-।
ಬಕುಟಿಲಾಹಂಕಾರವೊಂದೀ ತೋರ್ಪ ಜಗವೆಲ್ಲ-॥
ಸಕುಟಿಲವಿದಕ್ಕೆನಗೆ ತಾದಾ-।
ತ್ಮ್ಯೈಕತೆ ಘಟಿಸದೆನುವಹವೊಂದೀ-।
ವಿಕೃತಿ ಮಸ್ತಕಶೂಲಮೆಂದುಸುರಿದರು ತಪಸಿಗಳು ॥ ೬೬ ॥

ಆನಖಾದಿ ಶಿಖಾಂತಮಾದಭಿ-।
ಧಾನಚಿಹ್ನಿತಮಾದ ತನುವೇ-।
ತಾನೆನುವ ದುರಹಂಕೃತಿಯೆ ವರ್ಜ್ಯಂ ತಿಳಿಯೆ ತುಚ್ಛಂ ॥
ಮಾನವೇ ವಿಗ್ರಹವು, ಮುಖವೇ-।
ಸ್ನಾನ, ಸಂಸಕ್ತಿಯೆ ಕಳತ್ರವ-।
ನೂನಮತಿಯೇ ಭೋಜ್ಯ, ಗುಣಗಳೆ ಸಾಧನಗಳಿದಕೆ; ॥ ೬೭ ॥

---

೬೫ ತಾನೇ—'ನಾನು' ಎಂಬ ತನ್ನಾತ್ಮನೇ, ತತ್+ಅಹಂ....ಯಿತು—ಹಾಗಾದರೆ, ಆ 'ನಾನು' ಎಂಬುದು ಏಕೆ ಜನ್ಮಕ್ಕೆ ಕಾರಣವಾಯಿತು? ಎನಲು+ಇದಮಿಗೆ+ಅರ್ಥಂ—ತಾನಲ್ಲದ ದೇಹೇಂದ್ರಿಯಗಳಲ್ಲಿ ನಾನು—ದಪ್ಪನೆ ಇರುವವನು, ಕೇಳುವವನು, ಒಕ್ಕಣ್ಣನು, ಮೂಕನು, ಮೋಟುಗೈಯವನು, ಎಳವನು ಎಂದುಮುಂತಾಗಿ ಮಾಡಿಕೊಂಡಿರುವ ಅನಾತ್ಮಾಭಿಮಾನದಿಂದ ಸಂಸಾರ ನೋವು ಬಂದುದು; ಸತ್ಯಂ+ಉಳಿದವನು—ಕೈಬಿಟ್ಟವನು, ಆವನು...ಯಾವನಾಗಲಿ,

೬೬ ಸರ್ವಕಾರಣನಾದ ತನ್ನಿಂದಲೇ ಇವೆಲ್ಲವೂ ಉಂಟಾಗಿರುವದು. ಜೀವಿಸಿಕೊಂಡಿರುವದು ಮತ್ತು ಆ ತನ್ನಲ್ಲಿಯೇ ಎಲ್ಲವೂ ಬಂದು ಅಡಗುತ್ತಿರುವದು ಎಂಬ, ಅಕುಟಿಲ—ಋಜುವಾದ ಪೂರ್ಣಾಹಂಕಾರವೊಂದು, ಮತ್ತು ಸಕುಟಿಲವಾದ ಮಾಯೆಯ ಹುಸಿ ತೋರಿಕೆಯಾದ ಈ ಜಗವೆಲ್ಲವೂ ಮತ್ತೊಂದು ಎಂದರೆ ಸಳ್ಳು; ಹೀಗಾಗಿರುವದರಿಂದ ಇದಕ್ಕೆ+ಎನಗೆ+ತಾದಾತ್ಮ್ಯೈಕತೆ—ಬಂದೆಂಬುದು—ದೇಹಾದ್ಯನಾತ್ಮಗಳಲ್ಲಿ 'ನಾನು' ಎಂಬ ಮಿಥ್ಯಾಭಿಮಾನವು ಎಂದಿಗೂ ಘಟಿಸದೆಂಬೀ ನಿಶ್ಚಿತಜ್ಞಾನರೂಪವಾದ ತನ್ನ ವಾಸ್ತವಸ್ವರೂಪದಲ್ಲಿ ನೆಲೆನಿಂತ, ಅಹಂ—'ಅಸಂಗನೇನಾನು' ಎಂಬ ಜ್ಞಾನವೊಂದೇಬಂದು, ವಿಕೃತಿ....—ಸಂಸಾರ ದುಃಖಗಳ ಸರ್ವ ವಿಕಾರಗಳಿಗೂಶೂಲವು.

೬೭ ಆ ನಖಾದಿ ಶಿಖಾಂತಂ—ಕಾಲುಉಗುರಿನಿಂದ ತಲೆಯುವರೆಗಿನದೆಂದು; ಅಭಿಧಾನ ಚಿಹ್ನಿತಮಾದ—ಹೆಸರಿಸಿಕೊಂಡಿರುವ ಶರೀರವನ್ನು 'ನಾನು' ಎಂಬ ದುರಹಂಕಾರವು ವ್ಯರ್ಥವಾದ್ದು

ಎನ್ನ ಬರವಿದಮರ್ಥದಲಿ ತಾ-।
ನೆನ್ನುವದು ನೆಲೆಗೊಂಡು ಬಲಿತಿಹು-।
ದನ್ನ ಬರ ಸಂಸಾರಕವಧಿಯು ಕೂಡದೆಣಿಸಿದರೆ ॥
ಇನ್ನೆಸೆಯುವೇ ತಂತ್ರ ಜಾಲಗ-।
ಳಿನ್ನಲುರೆ ವಲ್ಮಿಕದ ಘಾತಿಯು ।
ಪನ್ನಗ ಕ್ಷೋಭೋಪಪಾದಕವೇ ಬರಿಯಮಾತು ॥ ೬೮ ॥

ಗರಳವನ್ನೊಳಪೊಗಿಸಿ ಬೇವಿನ-।
ತಿರುಳು ಮೊದಲಹ ತಿಕ್ತ ಕಲ್ಕವ-।
ನರೆದು ಮೆತ್ತಿದರಾಗುವುದೆ ದೇಹಕ್ಕೆ ಜೀವಿತವು ॥
ಪರಿಪರಿಯ ದೃಶ್ಯವನು ನುಂಗಿರು-।
ತಿರಲಹಂಕೃತಿ, ಬಹಿರುಪಾಸ್ತಿಯು-।
ಸುರರ ಭವಸಂಹಾರಕೆನೆ, ಮೇಣಿರ್ದರಿದು ಚೋದ್ಯಂ ! ॥ ೬೯ ॥

ತಾನವನುಳಿದಿರೇ ಪರೋಕ್ಷ-।
ಜ್ಞಾನವೇನಪವರ್ಗಮಂ ಕೊಡ-।
ಲಾನಲಾಪುದೆ, ದೃಶ್ಯಮಯನಾಗಿರಲಹಂಕಾರ ॥

---

ರಿಂದ ತನ್ನಿಂದ ಬಿಡಲ್ತಕ್ಕದ್ದೆಂಬುದಕ್ಕೆ ಸಂಶಯವಿಲ್ಲ. ಈ ಅಹಂಕಾರಕ್ಕೆ—ಅಭಿಮಾನವೇ—ಶರೀರವು, ಮುಖವೇ—ಸ್ಥಾನವು, ವಿಷಯಗಳಲ್ಲಿ ಬಲವಾಗಿ ಹೊಂದಿಕೊಂಡಿರುವ ಮೋಹಾಸಕ್ತಿಯೇ—ಕಳತ್ರ—ಹೆಂಡಿತಿಯು, ಇವಳಲ್ಲಿ ಅನುರಕ್ತನಾಗಿರುವದೇ—ಸಕಲ ಭೋಗ್ಯಗಳು, ಗುಣತ್ರಯಗಳೇ—ಭೋಗಸಾಧನಗಳು;

೬೮ ದೇಹೇಂದ್ರಿಯಗಳಲ್ಲಿ 'ನಾನು' ಎಂಬ ಮಿಥ್ಯಾಭಿಮಾನವು ಮನುಷ್ಯರಿಗೆ ನೆಲೆಗೊಂಡಿರುವವರೆಗೂ ಅವರ ಸಂಸಾರಕ್ಕವಧಿಯಿರುವದಿಲ್ಲವು. ಹುತ್ತವನ್ನು ಬಡಿದರೆ ಹಾವು ಸಾಯದಿರುವಂತೆ ತನ್ನ ಫಲವಲ್ಲಿ ಅನ್ಯಥಾ ಸಿದ್ಧವಾದ ಕರ್ಮೋಪಾಸನಾದಿ ಸಾಧನಾಂತರಗಳಿಂದ ಮಿಥ್ಯಾಜ್ಞಾನಸಿದ್ಧವಾದ ಸಂಸಾರಾನರ್ಥಗಳಿಗೆ ಎಂದಿಗೂ ಪರಿಹಾರವಿರುವದೇಇಲ್ಲ. ಹೇಗೆಂದರೆ–

೬೯ ಗರಳವನ್ನು + ಒಳಪೊಗಿಸಿ—ಹೊಟ್ಟೆಗೆ ವಿಷವನ್ನು ತಿಂದು ಸತ್ತುಬಿದ್ದಿರುವ ಮನುಷ್ಯನ ಶರೀರಕ್ಕೆ; ಶರೀರವಿಡಿದು ಅಹಂಕಾರದವರೆಗಿನ ಅನಾತ್ಮಾಭಿಮಾನದಿಂದ ಈ ಅಹಂಕೃತಿಯು ಪರಿಪರಿಯ ಅನಾತ್ಮಗಳನ್ನೆಲ್ಲ ನುಂಗಿ, ಅವನ್ನೆಲ್ಲವನ್ನೂ ತನ್ನೊಳಗೆ ಮಾಡಿ ಅರಗಿಸಿಕೊಂಡಿರಲು, ಹೊರಗಡೆಯಲ್ಲಿ ಮಾಡಿದ ದೇವತೆಗಳ ಉಪಾಸನೆಗಳು ಭವಸಂಹಾರಕ್ಕೆ ಇದ್ದರೆ ಇದಕ್ಕಿಂತ ಬೆಡಗಿನ್ನೊಂದಿರುವದಿಲ್ಲ.

೭೦ ತಾನು + ಅವನು + ಉಳಿವರೆ—ಒಳಹೊರಗಿನ ಆ ಕ್ರಿಯೆಗಳನ್ನು ಜ್ಞಾನಕ್ಕಾಗಿ ಮಾಡವೆ ಬಿಟ್ಟಿದ್ದರೂ, .... ವೇನು + ಅಪವರ್ಗ—ಕೈವಲ್ಯವನ್ನೇನಾದರು ಅದು, ಕೊಡಲು + ಆನಲಾಪುದೆ—ಕೊಡುವುದೇನು? ಇಲ್ಲ. ಏತಕ್ಕೆಂದರೆ ಈ ಅಹಂಕಾರವು—ದೇಹಾದ್ಯನಾತ್ಮಗಳಲ್ಲಿಯೇ ಒಂದಾಗಿ ಬೆರತು ತನ್ಮಯನಾಗಿರುವದೆಂಬುದು ಪ್ರತ್ಯಕ್ಷಸಿದ್ಧವಾಗಿರುವದು. ಇವನ್ನು ಪರೋಕ್ಷ

ಜ್ಞಾನದಿಂ ದೃಙ್ಮಾತ್ರವಾಗಲ-।
ದೇ ನಿಕೃಂತಕವಹುದು ಭವವ-।
ಲ್ಲೀ ನಿಚಯಕಿದ ಬಿಟ್ಟು ಮಾರ್ಗವದೇನು ಭುವನದಲಿ! ॥ ೭೦ ॥

ನಿರ್ವಿಶೇಷ ಸುಖಸ್ವರೂಪವ ।
ಪರ್ವಿದಲ್ಲದಹಂಕೃತಿಯ ದುಃ-।
ಖೌರ್ವಿಯುಮ್ಮಳವಡಗದೀ ಭವಸಿಂಧು ಮಧ್ಯದಲಿ ॥
ನಿರ್ವಿಕಲ್ಪಾತ್ಮಾಂಬರದೆ ತಾಂ-।
ತೋರ್ವುದಭ್ರದ ತೆರದಿ ಜಡ ತಾಂ-।
ದುರ್ವಿಗಾಹದೊಳಿಲ್ಲದಿರಲಾಗಿಹುದದೇ ತಾನು ॥ ೭೧ ॥

ಇಂತು ದುರ್ಘಟವಾದಹಂಕೃತಿ-।
ಯಂತವುಳ್ಳುದು ತಾನನಂತಂ, ।
ಸ್ವಾಂತವಿನಿಮಯಮದು ವಿಗಳಿತಸ್ವಾಂತನೇ ತಾನು ॥
ಅಂತರಂಗ ವಿವೇಕದಿಂದರಿ-।
ದಂತುಮಂ ಚಿನ್ಮಾತ್ರ ತಾನೆಂ-।
ಬಾಂತರಾಳಿಕ ತತ್ತ್ವವಿರೆ ಕೃತಕೃತ್ಯನಪ್ಪ ನರಂ! ॥ ೭೨ ॥

---

ಜ್ಞಾನವು ಕಳಿಯಲಾರದೆಂಬುದು ಯುಕ್ತವೂ ಆಗಿರುವದು. ಆದ್ದರಿಂದ ಸರ್ವಾತ್ಮೈಕತ್ವಜ್ಞಾನದಿಂದ ಜ್ಞಾನಮಾತ್ರ ಶರೀರನಾಗಿ ತಾನು ಉಳಿದುಕೊಂಡಿರಲು, ಅದೇ ನಿಕೃಂತಕವಹುದು—ಕುಡುಗೋಲು, ಮಚ್ಚು—ಆಗುವದು; ಭವವಲ್ಲೀ ನಿಚಯಕೆ—ಬಿಡುವಿಲ್ಲದಂತೆ ಮೇಲಿಂದಮೇಲೆ ತನಗೆ ಹೊಂದುತ್ತಿರುವ ಹುಟ್ಟು ಹೊಂದುಗಳೆಂಬ ಬಳ್ಳಿಗಳ ಸಾಲಿಗೆ, ಇದನ್ನು ಬಿಟ್ಟು ಅವನು ಕತ್ತರಿಸಿ ಬಿಸುಡುವದಕ್ಕೆ ಬೇರೊಂದು ಮಾರ್ಗವಿರುವದೇಇಲ್ಲ.

೭೧ ....ಪರ್ವಿದಲ್ಲದೆ—ತನ್ನಲ್ಲಿ ಹೊಂದಿಸಿ ತುಂಬಿಕೊಂಡಲ್ಲದೆ, ಅಹಂ....ದುಃಖ+ಉರ್ವಿಯ—ವಿಸ್ತಾರದ, ಉಮ್ಮಳವ—ಕಳವಳವು, ಅಡಗದು+ಈ ಭವ....; ನಿರ್ವಿಕಲ್ಪ+ಆತ್ಮನೆಂಬ+ಅಂಬರದೆ—ಆಕಾಶದಲ್ಲಿ, ತಾಂ—ಅದು, ತೋರ್ವುದು+ಅಭ್ರದ—ಮುಗಿಲಿನಂತೆ ಜಡವಾದ, ತಾಂ–ಆ ಅಹಂಕಾರವು, ದುರ್ವಿಗಾಹದೊಳು–ಹೃದಯದ ಬಹಳವಾದ ಆಳದಲ್ಲಿ ಹೂತು ಗೂಢವಾಗಿ ಅವಿತುಕೊಂಡಿರುವ ಆತ್ಮನಲ್ಲಿ ಅದು, ಇಲ್ಲದಿರಲು—ಪರಮಾರ್ಥವಾಗಿಲ್ಲದಿದ್ದರೂ ಆ ಆತ್ಮನ ಅರಿವಿಲ್ಲದಾಗ, ಅದೇ—ಅಯಾತ್ಮನೇ. ತಾನು+ಆಗಿಹುದು—ಆಗಿರುವಂತೆ ತೋರಿ ಎಲ್ಲರಿಗೂ ಮೋಹಗೊಳಿಸುತ್ತಿರುವದು!

೭೨ ಬೆಳಕಿನಲ್ಲಿ ಕತ್ತಲೆಯಂತೆ ಆ ಅಹಂಕಾರವೂ ಆತ್ಮನಲ್ಲಿ, ಇಂತು ದುರ್ಘಟವಾದ—ಎಂದಿಗೂ ತಾನು ಘಟಿಸುವದಕ್ಕಿಲ್ಲದ ಅದು, ಸ್ವಾಂತವಿನಿಮಯಂ—ಮನಸ್ಸಹಿತವು, ತಾನು—ಇನ್ನು ಆತ್ಮನಾದರೆ, ವಿಗಳಿತಸ್ವಾಂತನು—ಮನಸ್ಸಾಗಲಿ ಹೃದಯವಾಗಲಿ ಇಲ್ಲದವನು ಎಂಬುದನ್ನು, ಅಂತ....ಂದ—ಬುದ್ಧಿಯ ವಿವೇಕಬಲದಿಂದ ಅರಿತು, ಅಂತುಮಂ—ಹಾಗೂ ಚಿನ್ಮಾತ್ರ ಆತ್ಮನೇ ತಾನೆಂಬ, ಆಂತರಾಳಿಕ—ಯಾವದಕ್ಕೂ ಅಂಟದೆ ತಟಸ್ಥವಾಗಿರುವ ತತ್ತ್ವದ ನಿಶ್ಚಯಗೊಂಡಿರೆ,

ಈವರಿಗು ಪೇಳಿದುದು ದೇಹದ ।
ಭಾವದನುಬಂಧಕ್ಷತಿಯು; ಭುವ-।
ನಾವಳಿಯ ಜನನಕ್ರಮದಿ ತಾಟಸ್ಥ್ಯಮೆಂತೆನಲು, ॥
ಜೀವ ಜಗ ಪೇಳಲ್ಪಡುವದುರು-।
ಭಾವ ಚಿತ್ಸುಖಮಾದ ವಸ್ತು ಕ-।
ಲಾ ವಿಶೇಷವನಾಂತ ಪ್ರಕೃತಿಯೆ ತ್ರಿಗುಣರೂಪಿಣಿಯು ॥ ೭೩ ॥

ಸತ್ವಶುದ್ಧ್ಯವಿಶುದ್ಧಿಯಿಂ ಮಾ-।
ಯಾತ್ವವನವಿದ್ಯಾತ್ವದಿಂ ತಾಂ-।
ದ್ವಿತ್ವಮಾಗಿರುತಿಹ ದು, ಮೋಹಾದ್ವಿವಿಧದೊಳಗೀಶಂ ॥
ಸತ್ವದಿಂ ಮಾಯೆಯನು ವರಿಸಿ, ಮ-।
ಹತ್ವಮುಳ್ಳವನಾಗಿ ಸರ್ವ-।
ಜ್ಞತ್ವದಿಂ ತದ್ಭಿಂಬನಾಗಿರುತಿಹನು ಪತಿಯಾಗಿ ॥ ೭೪ ॥

---

೭೩ ಇಲ್ಲಿಯವರೆಗೆ—ದೇಹಬಂಧನದ ನಾಶೋಪಾಯವನ್ನು ತಿಳಿಸಿದ್ದಾಯ್ತು, ಈಗ ಈ ಲೋಕಗಳ ಸೃಷ್ಟ್ಯಾದಿ ಜನನ ಕ್ರಮದಿಂದ ಹೇಳುವ, ತಟಸ್ಥಲಕ್ಷಣಂ+ಎಂತೆನಲು—ಜೀವ ಜಗತ್ತುಗಳ ಪರಮಾರ್ಥವಾದ, ಭಾವ—ಸತ್ತು, ಚಿತ್ತಾನಂದ ವಸ್ತುವಿನ, ಕಲಾ—ಆಭಾಸವಿಶೇಷವನ್ನು, ಆಂತ—ಹೊಂದಿರುವ,

೭೪ ತಾಂ—ಅವಿದ್ಯಾಕಲ್ಪಿತ ಆ ಪ್ರಕೃತಿಯನ್ನು ಹುಸಿಯ ಶರೀರದ ಮಾಯೆಯೆಂದು ತಿಳಿಯಬೇಕೆಂದು ಶ್ರುತಿಯು"ಮಾಯಾಂತು ಪ್ರಕೃತಿಂ ವಿದ್ಯಾನ್ಮಾಯಿನಂತುಮಹೇಶ್ವರಂ...."

ವಿಶೇಷವಿಚಾರ—ಜಗತ್ತೆಂಬುದು ಹುಟ್ಟಿರುವ ಒಂದು ಕಾರ್ಯವಲ್ಲ (ಮಾಂ. ಕಾ. ೧–೧೭) ಕಾರ್ಯವೆಂಬುದು ಕಾರಕಗಳಿಂದಲೇ ಹೋಗುವದಲ್ಲದೆ, ರಜ್ಜು ಸರ್ಪದಂತೆ ಜ್ಞಾನಮಾತ್ರದಿಂದ ಹೋಗುವದಲ್ಲ; ಎಲ್ಲವನ್ನೂ ಬ್ರಹ್ಮವೆಂದು ತಿಳಿಯಬೇಕೆಂಬ ಶ್ರುತಿಗಳ ಉಪದೇಶಕ್ಕೆ ಕಾರ್ಯಕಾರಣ ದ್ವೈತವು ಸತ್ಯವೆಂಬುದು ವಿರುದ್ಧವು. 'ಜಗತ್ತೆಲ್ಲವೂ ಬ್ರಹ್ಮಕಾರ್ಯ' ಎಂಬ ಶ್ರುತಿಮತವನ್ನೊಪ್ಪಿದರೆ—'ಬ್ರಹ್ಮಜ್ಞಾನದಿಂದ ಇದೆಲ್ಲವೂ ಬ್ರಹ್ಮವೇ' ಎಂದು ತಿಳಿಯುವದಕ್ಕೆ ಬರುತ್ತದೆ. ಮಣ್ಣಿನ ಜ್ಞಾನದಿಂದ 'ಮೃತ್ಕಾರ್ಯವೆಲ್ಲ ಮಣ್ಣೇ' ಎಂದು ತಿಳಿದುಬರುವಂತೆ ಕುಲಾಲಚಕ್ರಾದಿಗಳು ಹಾಗೆಂದು ತಿಳಿಯುವದಕ್ಕಿರುವದಿಲ್ಲವಷ್ಟೆ? ಬ್ರಹ್ಮವ್ಯತಿರಿಕ್ತ ಜಗತ್ಕಾರಣ ವಾದದಲ್ಲಿ—ಬ್ರಹ್ಮಜ್ಞಾನದಿಂದ ಬ್ರಹ್ಮಸ್ವರೂಪವಾಗಿ ನೆಲೆನಿಲ್ಲುವದಕ್ಕಿಲ್ಲದ ಈಶ್ವರ, ಜಡಪ್ರಕೃತಿಯೇ ಮುಂತಾದ ಆ ಸದ್ವ್ಯತಿರಿಕ್ತ ಜಗತ್ಕಾರಣಗಳೂ ಅವುಗಳ ಕಾರ್ಯಗಳೂ ಬ್ರಹ್ಮಕ್ಕಿಂತ ಬೇರೆಯಾಗಿಯೇ ನಿಲ್ಲುವವು. ಜ್ಞಾನ ಬಂದವರು ಕೂಡ ಆ ಸದ್ಭಿನ್ನ ಜಗತ್ಕಾರಣಗಳಲ್ಲಿಯೇ ಬೆರೆಯಬೇಕಾಗುವವು. ತನಗೆ ಬೇಕಿಲ್ಲವಾದರೂ ಆ ಪ್ರಕೃತಿಯ ಜಡತ್ವಾದಿಗಳನ್ನೂ ಅವನು ಹೊಂದಬೇಕಾಗುವವಲ್ಲವೆ, ಬೇರೊಬ್ಬನಾದ ಆ ಈಶ್ವರನಿಂದ ಹುಟ್ಟುಹೊಂದುಗಳ ಸಂಸಾರದಲ್ಲಿಯೂ ತಾವು ಮತ್ತೆ ಮತ್ತೆ ನಿಯುಕ್ತರೂ ಆಗಬೇಕಾಗಿ ಬರುವನೆಂಬ ಈ ಅನಿಷ್ಟಪರಂಪರೆಯು ದುಷ್ಫಲಗಳು ಹೊಂದಬೇಕಾದ್ದನಿವಾರ್ಯವು. 'ಬ್ರಹ್ಮವೇ ಜೀವಜಗತ್ಕಾರಣ' ಎಂಬ ಶ್ರೌತಪಕ್ಷವಲ್ಲಾದರೋ—ಆಧ್ಯಾಸಿಕ ಜಗತ್ಕಾರಣತ್ವದಿಂದ ಬ್ರಹ್ಮದಲ್ಲಿ ವಿಕಾರದ ಅಂಜಿಕೆಯಿರುವದಿಲ್ಲವಾದ್ದರಿಂದ ನಿರ್ವಿ

ಆಯವಿದ್ಯೆಗೆ ಸಿಲುಕಿ ತಚ್ಚಿ-।
ತ್ರಾಯತನವಂ ಪಿಡಿದನೇಕ ವಿ-।
ಧಾಯನಂಗಳ ಮೆಟ್ಟಿ ಬೊಮ್ಮವೆ ಜೀವನಾಮಕದಿಂ ॥
ಕಾಯವಂ ವರಿಸಜ್ಞನಾಗಿರ-।
ಲೀಯವಿದ್ಯೆಯೆ ಕಾರಣ ತನು-।
ಪ್ರಾಯವಾದುದು, ಬಂದುದವಕೀ ಸ್ಥೂಲ ಸೂಕ್ಷ್ಮಗಳು ॥ ೨೫ ॥

ಸಕಲವೆಲ್ಲ ತಮಃಪ್ರಧಾನ-।
ಪ್ರಕೃತಿಯಿಂದೀಶಾಜ್ಞೆಯಿಂ ಭೂ-।
ಮಿ ಕ ದಹನ ಮರುದಂಬರಮಯಂ ಜೀವಭೋಗಾರ್ಥಂ ॥
ಸುಕರಮಾಗುದುಭವಿಸಿದುದು ಸಾ-॥
ತ್ವಿಕಗಳಾದಾ ಭೂತಜನ್ಯಾಂ-।
ಶಕಗಳಿಂ ಜ್ಞಾನೇಂದ್ರಿಯದ ಪಂಚಕವು ಪುಟ್ಟಿದುದು ॥ ೨೬ ॥

ಆ ಹೃಷೀಕೋಪಾಧಿಯಂತಿದು-।
ರೂಹು ತಾಳಿದುದಂತರಂಗಂ।
ಊಹೆಯಿಂ ಮನಮೆಂದು, ನಿಶ್ಚಯದಿಂದ ಮತಿಯೆಂದು ॥

---

ಕಾರತ್ವವು ಆ ಬ್ರಹ್ಮದಲ್ಲಿ ಅಕುಂಠಿತವಾಗಿರುವದು ಶ್ರುತಿಗಳಿಗೂ ಅವಿರುದ್ಧವು. ಈ ರೀತಿಯಿಂದ ಈಶ್ವರ ಜಗತ್ತುಗಳ ನಿರ್ವಾಹಕ್ಕಾಗಿ ಅನಧ್ಯಾಸಿಕ ಜಗತ್ಕಾರಣಗಳನ್ನು ದ್ವೈತಿಗಳಾದ ಸಾಂಖ್ಯಾದಿಗಳಂತೆ ನಿಷ್ಪ್ರಪಂಚ ಬ್ರಹ್ಮಾತ್ಮಪರಗಳಾದ ವೇದಾಂತಗಳಲ್ಲಿ ತರಬೇಕಾದ್ದವಶ್ಯಕವು ಕಾಣುವದಿಲ್ಲ (ಬ್ರ. ಸೂ. ೧-೧-೨೨ ಭಾಷ್ಯ); ವಸ್ತುಗತಿಯಿಂದ ಬ್ರಹ್ಮವು ನಿರುಪಾಧಿಕವು, ಅದ್ವಿತೀಯವು ಆಗಿದ್ದರೂ ಅದರಲ್ಲಿ—ಮಿಥ್ಯಾಜ್ಞಾನಕಲ್ಪಿತ ಜಗತ್ಕಾರಣತ್ವವೆಂಬ ಈಶ್ವರತ್ವ ಹೊಂದುವುದಕ್ಕಡ್ಡಿಯೂ ಇರುವದಿಲ್ಲ.

೨೫ ತತ್+ಚಿತ್ರ+ಆಯ....ಡಿದು—ಆ ಮಿಥ್ಯಾಜ್ಞಾನಕಲ್ಪಿತ ಶರೀರಗಳೆಂಬ ಬೇರ್ಬೇರೆಯ ಆಶ್ರಯಗಳನ್ನು ಹಿಡಿದುಕೊಂಡವನಾಗಿ, ಅನೇಕವಿಧ+ಆಯನಂ—೮೪ ಲಕ್ಷ ಯೋನಿಗಳ ಮಾರ್ಗಗಳನ್ನೆಲ್ಲ, ....ವರಿಸಿ—ಸ್ವೀಕರಿಸಿ ತಾನು ಅಜ್ಞನಾಗಿರಲು, ಹೀಗೆ ಭವಮಾಲೆಗೆ ಅಧ್ಯಾಸರೂಪಗೊಂಡ ಈ ಅವಿದ್ಯೆಯೇ ಕಾರಣವಾಯಿತು.

೨೬ ಕ—ಜಲ, ದಹನ—ಅಗ್ನಿ, ಮರುತ್—ವಾಯು, ಅಂಬರ—ಆಕಾಶ ಎಂಬಿವುಗಳ, ಮಯಂ—ವಿಕಾರಗಳು-ವಿಷಯಗಳೆಲ್ಲವೂ, ಸುಕ....ಂ + ಆಗಿ+ ಉದುಭವಿಸಿದುದು—ಹುಟ್ಟುಗಟ್ಟಿತು, ಅಲ್ಲದೆ ಆ ಭೂತಗಳ ಬಿಡಿಬಿಡಿಯಾಗಿರುವ ಸಾತ್ವಿಕಾಂಶಗಳಿಂದ ಒಂದೊಂದಾಗಿ ಜ್ಞಾನೇಂದ್ರಿಯಗಳೈದು ಹುಟ್ಟಿದವು. ಸಮಷ್ಟಿ ಸತ್ವಾಂಶಗಳಿಂದ ಹುಟ್ಟಿದ ಅಂತಃಕರಣವು ಸಂಕಲ್ಪದಿಂದ ಮನಸ್ಸು, ನಿಶ್ಚಯದಿಂದ ಬುದ್ಧಿಯೂ ಆಯಿತು.

೨೭ ಆಹೃಂ....ಂತೆ—ಹೀಗೆ ಹುಟ್ಟಿದ ಆ ಜ್ಞಾನೇದ್ರಿಯಗಳಂತೆಯೆ, ಮೋಹರಿಸಿದ-ಬಿಡಿಬಿಡಿಯಾಗಿರುವ ರಜೋಂಶಗಳಿಂದ, ....ಷಯವ್ಯೂಹಂ—ಒಂದೊಂದರಂತೆ ಪಂಚಕರ್ಮೇಂ

ಮೋಹರಿಸಿದ ರಜೋಂಶದಿಂದೇ-।
ರೂಹುಗೊಂಡುದು ಕರ್ಮವಿಷಯ-।
ವ್ಯೂಹಮಿವರಿಂದಾದುದಾ ಪ್ರಾಣಾದಿ ವಾಯುಗಳು ॥ ೭೭ ॥

ಅನಿಲವೈದೀರ್ಛೈದು ವಿಷಯಂ-।
ಮನ ಮತಿಗಳೆರಡಿವರ ಕೂಟದಿ ।
ಜನಿಸಿದುದೆ ಲಿಂಗಂ; ನಿದಾನಶರೀರಗಪ್ರಾಜ್ಞಂ; ॥
ಅನುಸರಿಸಲಿದರಲ್ಲಿ ತೈಜಸ-।
ನೆನುವ ನಾಮುವನಾಂತ ಭುವನದೊ-।
ಳೆಣಿಕೆವೆತ್ತ ಹಿರಣ್ಯಗರ್ಭಾಖ್ಯೆಯನು ಪರಮೇಶ ॥ ೭೮ ॥

ವ್ಯಷ್ಟಿಯಿಂದೀ ಜೀವನಿಲ್ಲಿ, ಸ-।
ಮಷ್ಟಿಯಿಂ ಪತಿಯಲ್ಲಿ ಭೇದದಿ ।
ದೃಷ್ಟರಾದರ್ಬಳಿಕ ವಿಯದಾದಿಗಳನಾ ದೇವಂ-॥
ಪಿಷ್ಟಮಂ ಪೋಳೆಸಿಸಿ, ಪೋಳೆಂ-।
ದಷ್ಟದರ್ಧವಮಾಡಿ. ಪ್ರಥಮದೊ-।
ಳಿಷ್ಟ ತೆರದೊಳಗಾದುದಿಪ್ಪತ್ತೈದು ತತ್ತ್ವಗಳು ॥ ೭೯ ॥

---

ದ್ರಿಯಗಳೂ. ಇವರ ವ್ಯೂಹದಿಂದ—ಸಮಷ್ಟಿ ರಜೋಂಶಗಳಿಂದ ಪಂಚಪ್ರಾಣಗಳು ಸಹ, ರೂಹುಗೊಂಡುದು—ರೂಪುಗೊಂಡಿತು.

೭೮ ಅನಿಲ—ಪಂಚವಾಯುಗಳು, ಈರೈದು—ಹತ್ತಾದ, ವಿಷಯಂ—ಇಂದ್ರಿಯಗಳು, ....ಗಳು+ಎರಡು (ಸಹ ಕೂಡಿದ)+ಇವರ—ಇವುಗಳ ಒಟ್ಟಿನ, ಕೂಟದಿ—ಗುಂಪಿನಿಂದ ಹುಟ್ಟಿದ್ದೇ ಲಿಂಗಶರೀರವು; ನಿದಾನಶರೀರ—ಜ್ಞಾನಲಾಭದಿಂದಲೇ ಸಂಪೂರ್ಣ ತೊಡೆದುಹೋಗುವ ಅವಿದ್ಯೆಯನ್ನು,ಗ—ಹೊಂದಿದ್ದರೂ ತನ್ನ ಸ್ವರೂಪದಲ್ಲಿಮಾತ್ರ ಮರವೆಯ ಚೂರೂ ಸೋಂಕಿಲ್ಲದ, ಪ್ರಾಜ್ಞ—ಪ್ರಜ್ಞಾನಘನ—ಅತ್ಯಂತ ಸ್ಫುಟವಾಗಿ ಮಿಗಿಲೆನಿಸಿದ ಬರಿಯರಿವಿನ ಗಟ್ಟಿಯೆನಿಸಿಕೊಂಡೇ ಇರುವ, ಸೌಷುಪ್ತಾತ್ಮನ—ಸಂಪ್ರಸಾದನೆಂಬ ಶ್ರುತಿಸಿದ್ಧ ಹೆಸರಿನಿಂದ ತನ್ನ ನೈಜವಾಗಿರುವ ಬ್ರಹ್ಮಾತ್ಮ ಭಾವದಲ್ಲಿಯೇ ಚೆನ್ನಾಗಿ ಶೋಭಿಸುತ್ತಿರುವ ಸಾಕ್ಷಾತ್ಪರಮೇಶ್ವರನೂ, ನಿರಂಜನನೂ, ನಿರುಪಾಧಿಕನೂ ಆಗಿರುವ ನಮ್ಮ ಆತ್ಮದೇವನೊಬ್ಬನೇ, ಇದರಲ್ಲಿ—ಈ ವ್ಯಷ್ಟಿಲಿಂಗಶರೀರ ಮತ್ತು, ಭುವನದೊಳು+ಎಣಿಕೆವೆತ್ತ—ಸಮಷ್ಟಿ ಲಿಂಗಶರೀರ ಇವುಗಳಲ್ಲಿ 'ನಾನು' ಎಂಬ ಅವಿದ್ಯಾಕಲ್ಪಿತ ಮಿಥ್ಯಾಭಿಮಾನವು ಅನುಸರಿಸಲು—ತೈಜಸನೆಂದೂ ಮತ್ತು ಹಿರಣ್ಯಗರ್ಭನೆಂದೂ ನಮ್ಮ ಒಬ್ಬಾತ್ಮನೇ, ಅಖ್ಯೆಯನು—ಆ ಹೆಸರನ್ನು, ಆಂತನು—ಹೊಂದಿರುವನು,

೭೯ ಇಲ್ಲಿ—ಒಂದು ಶರೀರದಲ್ಲಿ ಜೀವನೆಂದೂ, ಪತಿಯು+ಅಲ್ಲಿ—ಅವುಗಳ ಸಮಷ್ಟಿಯಲ್ಲಿ ಒಡೆಯನೆಂದೂ ಹೀಗೆ ಭೇದಂ ಬಂದಂದದಿ+ದೃಷ್ಟರು+ಆದರ್—ಕಾಣಬರುತ್ತಿರುವರಲ್ಲದೆ, ಅವರ ತತ್ತ್ವದಲ್ಲಿ ಮಾತ್ರ ಭೇದಗಂಧವೂ ಸುಳಿದಿರುವದಿಲ್ಲ.

ಮೇಲೆ ಹೇಳಿದ ಇಂದ್ರಿಯ ಪ್ರಾಣಾಂತಃಕರಣಗಳಿಗೆ ಕಳಿಮ, ನಿಂತ, ವಿಯತ್-ಆಕಾಶಾದಿ

ಲಿಂಗದವಯವ ದೇವತೆಗಳಿ ಕು-।
ರಂಗಪಾಣಿಗೆ ಸೂಕ್ಷ್ಮತನುವದು ।
ಲಿಂಗದಿಂ ಜನ್ಮಂಗಳೆತ್ತುವಕಾಯ ಸಂತತಿಯು-॥
ಅಂಗರಂಗ ಕ್ರಿಯೆಗಳಾತನ-।
ಲಿಂಗತನುವಿಂ ನಡೆವವಡಗುವ-।
ವಿಂಗಿತಜ್ಞರು ಪೇಳ್ವರಿದಕದು ಬೀಜವೆಂತೆಂದು ॥ ೮೦ ॥

ಇದು ಸಮಷ್ಟಿಯ ತಾಳಿ ಭುವನದ ।
ಪದವೆನಿಸಿದುದು ವಿಗ್ರಹಗಳಾ-।
ದುದು ಕರಂ ವ್ಯಷ್ಟಿಯ ಪಿಡಿದು; ವೈಶ್ವಾನರಾಖ್ಯೆಯನು-॥
ಅದರೊಳಾಂತ ಮಹೇಶ, ತೈಜಸ-।
ನಿದರೊಳಾಂತನು ವಿಶ್ವನಾಮವ-।
ನಿದು ವಿಚಿತ್ರವನೇಕರೂಪವು ಎನ್ನ ಬರನನ್ನಂ ॥ ೮೧ ॥

ಭೋಗಭೂಮಿಗಳಾದ ಭುವನಗ-।
ಳಾಗು ಜೋಗಿನ ಭೋಗ್ಯಗಳ ಸಂ-।
ಯೋಗದಿಂ ರುಚಿವೆತ್ತು, ರುಚಿಯಿಂ ಮಾಡಿ ಕರ್ಮಗಳ-॥

---

ಭೂತಗಳ ತಮೋಗುಣಪ್ರಧಾನದ ಭಾಗಗಳಲ್ಲಿ ಒಂದೊಂದನ್ನೂ ಎರಡೆರಡು ಮಾಡಿ, ಎರಡನೆಯ ಆ ಭಾಗಗಳನ್ನು ನಾಲ್ಕುನಾಲ್ಕರಂತೆ ಪುನಃ ಮಾಡಿ ಆಮೇಲೆ ಆ ಅಂಶವನ್ನು ತಂತಮ್ಮ ಭೂತವನ್ನು ಬಿಟ್ಟು, ಮಿಕ್ಕ ಭೂತಗಳ ಅರ್ಧ ಅರ್ಧಗಳಲ್ಲಿ ಬೆರೆಯಿಸುವದರಿಂದ ಹುಟ್ಟಿದ ೨೫ ತತ್ತ್ವಗಳ ಈ ಸ್ಥೂಲ ಶರೀರದ ಪಂಚೀಕರಣದ ಪ್ರಕಾರವು ವೇದಾಂತಗ್ರಂಥಗಳಲ್ಲಿ ಪ್ರಸಿದ್ಧವು.

೮೦ ನಮ್ಮ ಈ ಲಿಂಗ(ಶರೀರ)ದ+ಅವಯ(ವಗಳಾದ ೧೭ ತತ್ತ್ವಗಳನ್ನು ಬಿಡದಂತೆ ಪ್ರೇರಿಸುತ್ತಿರುವ) ದೇವತೆಗಳಿ+ಕುರಂಗಪಾಣಿಗೆ—ಈಶ್ವರನಿಗೆ ತನ್ನ ಸೂಕ್ಷ್ಮಶರೀರವು, ಈ ಜೀವರು ಲಿಂಗಶರೀರದಿಂದ ಧರಿಸುವ ಸ್ಥೂಲದೇಹಗಳೆಲ್ಲಕ್ಕೂ, ಅಂಗರಂಗ—ತಮ್ಮ ಲಿಂಗಶರೀರ ಪ್ರಧಾನವಾದ ಕ್ರಿಯೆಗಳೇ ಕಾರಣಗಳು; ಈ ಸರ್ವಕ್ರಿಯೆಗಳೂ, ಆತನ ತನುವಿಂ—ನಮ್ಮ ಲಿಂಗದೇಹದ ೧೭ ತತ್ತ್ವಗಳ ದೇವತೆಗಳ ಸಮೂಹವೆಂಬ ಈಶ್ವರನ ಲಿಂಗದೇಹದಿಂದಲೇ, ನಡೆ(ದವುಗಳಾಗು)ವವು+(ಮತ್ತು)ಅಡಗುವವು+ಎಂದು+ಇದಕೆ—ನಮ್ಮ ಲಿಂಗದೇಹದ ಈ ಕ್ರಿಯೆಗಳಿಗೆಲ್ಲಕ್ಕೂ, ಅದು—ಈಶ್ವರನ ಆ ಲಿಂಗಶರೀರವು ಇದರಿಂದ ಕಾರಣವಾಯ್ತು ಎಂದು, ಇಂಗಿತಜ್ಞರು—ಕರ್ಮದ ಮರ್ಮಜ್ಞರು ಹೇಳುವರು.

೮೧ ೨೫ ತತ್ತ್ವಾತ್ಮಕವೇ ನಮ್ಮ ಸ್ಥೂಲಶರೀರವೆಂಬುದು. ಜಗತ್ತಿನ ಆ ಸ್ಥೂಲಶರೀರಗಳ ಒಟ್ಟಿನ ಸಮಷ್ಟಿರೂಪವೆ ಈಶ್ವರನ ಸ್ಥೂಲಶರೀರವು; ಅವುಗಳಲ್ಲೊಂದು ಜೀವನ ಶರೀರವಾಯ್ತು. ಹಿರಣ್ಯಗರ್ಭೇಶ್ವರನು — ವೈಶ್ವಾನರನೆಂದೂ, ತೈಜಸನು—ವಿಶ್ವನೆಂದೂ ಅವುಗಳಲ್ಲಿ ಹೆಸರಿಸಿಕೊಂಡರು. ಜೀವನ ಶರೀರವು—ಅನೇಕವು; ಸಮಷ್ಟಿ ಸ್ಥೂಲಶರೀರಗಳೆಂಬ ವಿರಾಟ್ಪುರುಷೇಶ್ವರನ ಶರೀರವು ಏಕರೂಪವು. ಈ ಉಭಯ ಶರೀರಗಳಿರುವವರೆಗೂ—

೮೨ ಕರ್ಮಫಲಗಳ ಭೋಗಸ್ಥಾನವೆನಿಸಿರುವ, ಭುವನ—ಲೋಕಗಳು—ವಿಭಿನ್ನ ಶರೀರಗಳು—

ಆಗಲಾಯಾ ಕರ್ಮಫಲಗಳ-।
ಭೋಗಿಸುತ ದೇಹಗಳನೆತ್ತುತ।
ಸಾಗರಾವರ್ತಭ್ರಮತ್ಕೀಟಂಗಳಂತಿಹವು ॥ ೮೨ ॥

ಇರುತಿರಲ್ಕಂತಖಿಲ ಜನ್ಮಾಂ-।
ತರದೆ ಮಾಡಿದ ಪುಣ್ಯಕರ್ಮೋ-।
ತ್ಕರದಿ ಕೇವಲ ಸಾರಮಾಗಿಹ ಶಂಭು ಪೂಜನದಿಂ ॥
ವರಮುಖ ಜ್ಞಾನ್ಯರ್ಚ್ಯೆಯಿಂದಾ-।
ಶರಧಿ ತಟವೆಂದೆನಿಪ ವಿರತಿಯ-।
ಪರಮ ಶಾಂತಿಯ ತೀರವೃಕ್ಷಛಾಯೆಯೈದುವರು! ॥ ೮೩ ॥

ಆತುಮನ ಕಳೆವೆತ್ತ ಹೃದಯಂ-।
ಚೇತನಾ ಚಿತ್ರದ ಸಮಷ್ಟಿಯೆ ।
ಭೂತವಿಲ್ಲಿಹ ಜೀವಸಂಜ್ಞೆಗೆ ಗುರುವನುಗ್ರಹದಿಂ-॥
ಖ್ಯಾತ ಪರಮಾತ್ಮ ಸ್ವರೂಪವ-।
ನೇ ತಿಳಿದು, ವಿಶ್ರಾಂತಿಯೈದುವ-।
ರೀ ತೆರದೆ ಎಂದಲ್ಲವೆ ತತ್ತ್ವವಿವೇಕಮುಸಿರಿದುದು ॥ ೮೪ ॥

---

ಇವುಗಳಲ್ಲಿ ಬಗೆಬಗೆಯ ಭೋಗ್ಯವಿಷಯಗಳನ್ನು ಬಿಡುವಿಲ್ಲದಂತೆ ಜೀವನು ಸವಿಸವಿದು ರುಚಿಯಿಂದ ಮತ್ತು ಪ್ರೇರಿತನಾಗಿ ಆ ಭೋಗಕ್ಕಾಗಿಯೇ ಮತ್ತೆಮತ್ತೆ ಕರ್ಮತತ್ಫಲಗಳಲ್ಲಿ ಒಂದರಿಂದೊಂದಕ್ಕೆ ಅವನು ಹಾರುತ್ತಲೂ, ವಿಭಿನ್ನ ದೇಹಗಳನ್ನು ಹಿಡಿದುಕೊಳ್ಳುತ್ತಲೂ ನೀರಿನ ಸುಳಿಗಳಲ್ಲಿ ಸಿಕ್ಕಿಬಿದ್ದು ಗರ್ರನೆ ತಿರುಗುತ್ತಿರುವ ಹುಳುಗಳಂತೆ ಈ ಜೀವರು ಸಂಸಾರಸಾಗರದ ಜನನ ಮರಣಗಳಲ್ಲಿಯು ಸುತ್ತುತ್ತಿರುವರು.

೮೩ ಇಂತು+ಇರುತಿರಲ್ಕೆ+ಅಂತ+ಅಖಿ....ರ್ಮ+ಉತ್ಕರದಿ-ಅಧಿಕ ಪುಣ್ಯವು ತನಗೆ ಫಲ ಕೊಡುವದಕ್ಕಾಗಿ ಕೂಡಿಬಂದದ್ದರಿಂದ, ....ಜ್ಞಾನಿಯ+ಅರ್ಚೆ—ಪಾದದ ಅರ್ಚನೆ,ವಂದನೆ ಭಜನೆಗಳಿಂದ, ಸಂಸಾರ ಶರಧಿ—ಸಾಗರದ, ತಟಂ—ದಡವೆಂದೆನಿಸಿಕೊಂಡಿರುವ ವಿರತಿಯೆಂಬ ತೀರದಲ್ಲಿರುವ ಪರಮ ಶಾಂತಿರೂಪ ವೃಕ್ಷದ ಬುಡವನ್ನಾಶ್ರಯಿಸಿದ ಜೀವರು ಅದರ ನೆಳಲಿನಲ್ಲಿ ಸುಖದಿಂದ ವಿಶ್ರಮಿಸುವರು.

೮೪ ಇಲ್ಲಿ ಶಂಕರಭಗವತ್ಪಾದರು ದೇಹಾದ್ಯನಾತ್ಮಗಳಲ್ಲಿ 'ನಾನು' ಎಂದು ಹೊಳೆಯುವ ಆತ್ಮಾಭಾಸನನ್ನೇ ಲೋಕಾನುಭವಸಮ್ಮತವಾಗಿ ಜೀವನೆಂದು ಹೇಳಿರುವರು. ಹುಸಿಯು ಈ ಜೀವತ್ವದ ರಹಸ್ಯ ಇಟ್ಟುಕೊಂಡೇ ಬಲ್ಲವರು—ಆತ್ಮಾನಾತ್ಮಗಳಲ್ಲಿ ಒಂದರಿಂದೊಂದನ್ನು ಶಾಸ್ತ್ರಾನುಭವ ವಿಚಾರಗಳಿಂದ ವಿಭಜಿಸಿ, ಸತ್ಯ ಮಿಥ್ಯೆಗಳನ್ನೂ ಒಂದರಿಂದೊಂದನ್ನು ವಿಂಗಡಿಸಿ ದೇಹಾದಿಗಳಲ್ಲಿನ ಆ ನಾನೆಂಬ ಆತ್ಮಾಭಾಸ ರೂಪವಾದ ಜೀವತ್ವವನ್ನು ಬಾಧಿಸಿಕೊಂಡು, ಔಪನಿಷತ್ಪುರುಷನನ್ನು—ಸರ್ವಾತ್ಮೈಕತ್ವವನ್ನು—ಎಂದರೆ ಸರ್ವ ಜೀವ ಜಗತ್ತುಗಳ ಆತ್ಮೈಕತ್ವವನ್ನು ಸದ್ಗುರು ಪ್ರಸಾದದಿಂದ ಮನವರಿಕೆ ಮಾಡಿಕೊಂಡವರಾಗಿ ತಮ್ಮ ಬ್ರಹ್ಮಾತ್ಮ ಸ್ವರೂಪದಲ್ಲಿಯೇ ಅನಾಯಾಸದಿಂದ ವಿಶ್ರಮಿಸಿಕೊಳ್ಳುವರು.

ಸಕಲ ಪೂರ್ವೋಕ್ತಾತ್ಮರಿವರಿಂ ।
ಪ್ರಕಟಿಸಿದ ಸೃಷ್ಟ್ಯಾದಿ ಕಾರ್ಯ-।
ಪ್ರಕರದಿಂದುಂಟಾಯ್ತು ಯಮಲಾಖ್ಯಾಕ ವಸ್ತು ಪರಂ ॥
ಅಕಟಕಟ! ನಿರ್ದ್ವಂದ್ವ ನಿತ್ಯಾ-।
ತ್ಮಕನು ಪುರುಷನೆನುವ ನಿಗಮ ವಾ-।
ಕ್ಯಕೆ ಗತಿಯದೇನೆನಲು, ಪೇಳಲ್ಪಡುಗುಮಮಲಾರ್ಥಂ ॥ ೮೫ ॥

ಕರಣವಿದ್ದ ಬಳಿಯಲಿ ಸಿಲುಕಿದ ।
ಪರಮನಾದರೆ ಜೀವನಿದರಿಂ-।
ಹೊರಗಿರುವ ಪರತತ್ತ್ವವೇಂ ತದ್ದೋಷದೂಷಿತವೊ! ॥
ಇರದಿರಲ್ಕಾ ಬಳಿಯೊಳಗೆ ತ-।
ದ್ದುರಿತಮದರಂತಿದು ಎನುವದ-।
ಕ್ಕಿರದೊ ಮುಖದಲಿ ನಾಲಿಗೆ ಪ್ರತಿವಾದಿವರ್ಗದಲಿ ॥ ೮೬ ॥

ಬೊಮ್ಮವಹ ತನ್ನಿಂದ ಶಕ್ತಿಯ-।
ಸಮ್ಮಿಳಿತದಿಂ ಹಂಚದಿಹ ಗಗ-।
ನಂ ಮೊಗಂದೋರಿದುದು ರಜ್ಜುವಿನಲ್ಲಿ ಸರ್ಪದೊಲು, ॥

---

೮೫ ಪೂರ್ವೋಕ್ತ + ಆತ್ಮರು—ಜೀವೇಶ್ವರರು, ....ಯಮಲ+ಆಖ್ಯಕ—ಜೀವೇಶ್ವರವೆಂಬ ಹೆಸರಿನ ಭೇದ ಕಾಣುವಂತಿದ್ದರೂ, ವಸ್ತು—ಪರಮಾರ್ಥ ಮಾತ್ರ ಅಭೇದಕ್ಕಾಂತ, ಪರಂ—ಹೊರಚ್ಚಾಗಿಯೇ ಇರುವದು. ಅಕಟ+ಅಕಟ—ಭೇದವುಂಟೆನ್ನುವದು ಪರಮಾನ್ಯಾಯವು! ಹೇಗೆಂದರೆ ಅಧ್ಯಾಸದ ಗರ್ಭವನ್ನು ಹೊಕ್ಕಿರುವ ಆ ಭೇದವು ತತ್ತ್ವವನ್ನು ಸೋಕುವದಕ್ಕಿಲ್ಲ.... ಭೇದವೆಲ್ಲ ಮಿಥ್ಯಾಜ್ಞಾನ ಪರಿಕಲ್ಪಿತವಾದ್ದರಿಂದ ಆ ಅಧ್ಯಾಸವನ್ನೆ ಹೆಸರಿಲ್ಲದಂತೆ ತನ್ನಲ್ಲಿ ಅಳಿಸಿ ಹಾಕಿರವ ಆತ್ಮನಿಗೆ ಎರಡನೆಯದು ಸಿಕ್ಕುವಂತೆಯೇ ಇಲ್ಲದ್ದರಿಂದ ಭೇದದ ಸಂಭಾವನೆಗೂ ಅವಕಾಶವಿರುವದಿಲ್ಲ. ಆದ್ದರಿಂದ ಅವನು ನಿರ್ದ್ವಂದ್ವನು, ಕಾಲದ ಕಲ್ಪನೆಯನ್ನೆ ತನ್ನಲ್ಲಿ ಒರೆಸಿ ಹಾಕಿರುವ ನಿತ್ಯಾತ್ಮಕನು; ಇವನನ್ನು ಬಿಟ್ಟರೆ ಮಿಕ್ಕೇನೂ ಇರುವದೇಇಲ್ಲವಾದ್ದರಿಂದ ಅವನು ಸರ್ವವೂ ತಾನೇಆಗಿ ಪೂರ್ಣರೂಪದಿಂದ ತೋರಿಕೊಳ್ಳುವ ಪುರುಷನು ಎಂಬ ಶ್ರುತಿವಾಕ್ಯಗಳೂ ಇರುವವು. ಆದ್ದರಿಂದ ನಿರ್ಮಲವಾದ ಏಕತ್ವವನ್ನು ಈಗ ಹೇಳಲ್ಪಡುತ್ತೆ.

೮೬ (ದೇಹೇಂದ್ರಿಯ ಅಂತಃ)ಕರಣವು+ಇದ್ದ ಬಳಿಯಲಿ ಸಿಲುಕಿದ ಪರಮನು—ಜೀವನು (ಎಂದು) + ಆ(ಗುವದಾ)ದರೆ+ಇದರಿಂ (ಈ ಸಂಘಾತಕ್ಕಿಂತಲು)+ಹೊರಗಿ....ತವೋ ! ಹಾಗಿರದಿರಲ್ಕೆ+ಆ ಬಳಿಯೊಳಗೆ—ಆ ಹೊರಗಿನ ಪರಮಾತ್ಮಸ್ವರೂಪದಲ್ಲಿ, ತತ್+ದುರಿತಂ—ಆ ಸಂಸಾರದೋಷವು, ಈ ಅನಾತ್ಮಗಳ ಕಟ್ಟಿನಲ್ಲಿ ಕಾಣುವ ಇದು—ಈ ಜೀವನ ಪರಮಾರ್ಥವು ಅದರಂತೆಯೇ ಏಕಾಗಿರಬಾರದು?

೮೭ ಬ್ರಹ್ಮಾತ್ಮಸ್ವರೂಪನಾದ ತನ್ನ ಈ ಪ್ರತ್ಯಗಾತ್ಮನಲ್ಲಿ, ಶಕ್ತಿ....ದಿಂ—ಅವಿದ್ಯಾಕಲ್ಪಿತ ಮಾಯೆಯಿಂದ, ಹಂಚದಿಹ—ಅಪಂಚೀಕೃತವಾದ, ಗಗನಂ—ಆಕಾಶವು, ಹುಮ್ಮಿ—ಗರ್ವಿಸಿ, ತಾನು ವಿಸ್ತರಿಸಿಕೊಂಡು;

ಹವ್ಮಿ ತೋರುವ ಸರ್ಪ ರಜ್ಜುವ-।
ನೆಮ್ಮದುಂಟೇ ಎಂದು ಪೇಳ್ದುದು ।
ಸಮ್ಮತಿಯ ಮೂಲವ ವಿಭೇದಿಸಿ ಸೂತಸಂಹಿತೆಯ ॥ ೮೭ ॥

ವಸ್ತುಸತ್ಯಾ ಶೂನ್ಯಕಾರ್ಯ ಸ-।
ಮಸ್ತ ಭೂತವಿಕಾರವೆಲ್ಲಿಹು-।
ದಸ್ತಿತೆಯ ಪಿಡಿದಿರಲು ಚಿನ್ನವದಕ್ಕೆ ಬಹುರೂಪ-॥
ವಿಸ್ತರಿಸಲುಚಿತಂ, ವಿಕಾರ-।
ಕ್ಕಸ್ತವಾಗಲು ಪೋಪುದೇ ಭೂ-।
ರಿಸ್ತಿಮಿತ ಸತ್ವಂ ದ್ವಿತೀಯಕ್ಕಿಂಬೆಸೆವುದೆಲ್ಲಿ ॥ ೮೮ ॥

ಮಾಯೆಯೊಳ್ಪ್ರತಿಬಿಂಬಿಸೀಶನು-।
ಮಾಯಿಯಾದನು, ಕಾರಣಾಭಿಧ-।
ಕಾಯದಲಿ ಜೀವತ್ವಮಾಂತ, ತಮಃಪ್ರಧಾನಮಹ-॥
ಈಯಶೇಷಾಕಾರದಿಂ ಭೋ-।
ಗ್ಯಾಯತನವಾದಂ, ಕಡೆಗೆ ನಿ-।
ರ್ಮಾಯನೆನಿಸುವ ನೂರ್ಣನಾಭಿಯ ಪುಳುವಿನಂದದಲಿ ॥ ೮೯ ॥

---

೮೮ ಬ್ರಹ್ಮವೊಂದೇ ಪರಮ ಸತ್ಯವು. ಕಾರ್ಯಜಾತವೆಲ್ಲವೂ ಶೂನ್ಯ—ಪರಮಾರ್ಥ ಸತ್ಯವಲ್ಲ, ಬ್ರಹ್ಮದ ಅಸ್ತಿತೆಯನ್ನುಳಿದು ಅದು ಇರುವದು ಹೇಗೆ? ಇರುವ ಚಿನ್ನವನ್ನೇ ಬಹುರೂಪಗಳಿಂದ ಒಡವೆಗಳಾಗಿ ವಿಸ್ತರಿಸಲು+ಉಚಿತವಲ್ಲದೆ ಇಲ್ಲದಿರುವದನ್ನು ವಿಸ್ತರಿಸುವದು ಹೇಗೆ? ಒಡವೆಗಳೆಂಬ ಆ ವಿಕಾರಕ್ಕೆ ಅಸ್ತವಾಗಲು, ಇಷ್ಟುಮಾತ್ರದಿಂದ ಭೂರಿ—ಬಂಗಾರವು ಪೋಪುದೆ ಏನು? ಇಲ್ಲ. ಅದರಂತೆಯೆ, ಸ್ತಿಮಿತ—ಎಂದೆಂದಿಗೂ ಅಲುಗಾಡದಿರುವ ಭೂರಿ ಸತ್ವಂ—ಜೀವರಿಗೆಲ್ಲ ಪರಮ ಪ್ರಾಣವಾಗಿರುವ ಬ್ರಹ್ಮಸತ್ಯತ್ವವು ಕೂಡ ದೇಹಾದಿಗಳ ನಾಶದಿಂದಲಾಗಲಿ ಅಥವಾ ಅವ್ಯಕ್ತದವರೆಗಿನ ಪ್ರಪಂಚದ ನಾಶದಿಂದಲಾಗಲಿ ನಾಶವಾಗುವಂತಿಲ್ಲ.

೮೯ ದೇಹೇಂದ್ರಿಯಗಳಲ್ಲಿ 'ನಾನು' ಎಂಬೀರೂಪದ ಸರ್ವಾನರ್ಥಕಾರಣ ಎಂಬ ಅಭಿಧ–ಹೆಸರಿನ, ಅಜ್ಞಾನದಿಂದ ಜೀವತ್ವಂ+ಆಂತ—ಹೊಂದಿದನು, ಮತ್ತು ಆ ಅವಿದ್ಯಾಕಲ್ಪಿತ ಮಾಯೆಯಿಂದ ಈಶ್ವರತ್ವವನ್ನು ಕೂಡ ತನ್ನಾತ್ಮನೆ ಹೊಂದಿರುವನು. ಅಲ್ಲದೆ, ಭೂತಗಳ ತಮೋಂಶಗಳಿಂದ ಜಗತ್ತಿನ ಭೋಗ್ಯ ವಿಷಯಗಳ ಒಟ್ಟಿನ ರಾಶಿಯು ಮತ್ತು ಅದಕ್ಕೆ ಸಲ್ಲುವ ವಿಚಿತ್ರ ಶರೀರಗಳು ಎಂಬ ಈ ಜಗದ್ರೂಪದಿಂದ ಜೀವರಿಗೆಲ್ಲ ತಾನೇ, ಭೋಗ್ಯ+ಆಯತನಂ—ಭೋಗಾಸ್ಪದನೂ –ಭೋಗಸ್ಥಾನನೂ ಆಗಿ, ಈ ಎಲ್ಲಾ ರೂಪಿನಿಂದಲೂ ಆ ಆತ್ಮನೊಬ್ಬನೇ ಅಜ್ಞಾನದಿಂದ ಕಂಡುಬರುತ್ತಿರುವನು. ತನ್ನ ಆಹಾರಕ್ಕೆಂದು ಜೇಡರ ಹುಳುವು ಪ್ರಾಣಿಗಳ ಬೇಟೆಗೆ ಮಾಡಿಕೊಂಡಿದ್ದ ತನ್ನ ನೂಲು ಬಲೆಯೂ ಅದರಲ್ಲಿ ಸಿಕ್ಕಿ ತೂಗುಬಿದ್ದಿರು ಅನೇಕ ಕೀಟಾದಿ ಪ್ರಾಣಿಗಳೂ—ಇಷ್ಟೆಲ್ಲವನ್ನೂ ಕ್ಷಣಮಾತ್ರದಲ್ಲಿ ನುಂಗಿ ನಿಂತ ಆ ಊರ್ಣನಾಭಿಯಂತೆ ಅವಿದ್ಯಾಮಾತ್ರವ ಶರೀರವುಳ್ಳ ನೇಲಿನ—ಜೀವೇಶ್ವರ ಜಗದ್ರೂಪಗಳನ್ನೆಲ್ಲ ಜ್ಞಾನಮಾತ್ರದಿಂದ ತನ್ನತಯೇ ಒರೆಸಿ ಹಾಕಿ

ಜನಿಸಲುಚಿತಸ್ಥಲಮೆನಿಸಿದಂ।
ಘನತಮಃ ಪ್ರಕೃತಿಸ್ಥಲದೆ ಚೇ-।
ತನ ಭುವನರಾಶಿಗಳು ಮಾಯೋಪಾಧಿಯಿಂ ತಾನೆ-॥
ಜನಿಗಭಿನ್ನನಿಮಿತ್ತ ಕಾರಣ-।
ನೆನಿಸಿದಂ ಪರಮಾತ್ಮ ನಿಲ್ಲಿಹು-।
ದು ನಿಗಮಶಿರೋ ವಾಕ್ಯಮವಿಕಲವಾಗಿ ಬೋಧಿಸುತ ॥ ೯೦ ॥

ಅನುಪದತ್ವದಲೇ ಬಹುಸ್ಯಾ-।
ಮೆನುವ ಪದದಿಂ ದೈಕ್ಷತತದೇ-।
ವೆನುವ ಪದದಿಂ ಮಿಗಿಲುಪಾದಾನಂ ನಿಮಿತ್ತತ್ವಂ ॥
ಸುನಯ ಸಜ್ಜನರೂಢಮಾಯ್ತು-।
ನ್ನೆಣಿಸಿ **ಸರ್ವಂ ಖಲ್ವಿದಂ ಬ್ರ-**।
**ಹ್ಮ ನಿಜನೆಂಬುದರಿಂ** ದೃಢಂ ನೆಲೆಗೊಂಡುದಾಯರ್ಥಂ ॥ ೯೧ ॥

ತಿಳಿವು, ತಿಳಿಯಲ್ತಕ್ಕ ವಸ್ತುವು, ।
ತಿಳಿವವನು ಮೂರಲ್ಲ; ತಾನಾ-।
ದುಳುಮೆಯೆಂದೇ ಪೇಳಿದುದು ಬೋಧಾರ್ಯೆಯೊಳು ಗ್ರಂಥಂ ॥
ತಿಳಿವಿಹುದು ತಿಳಿವಷ್ಟೆ ಲೋಕಂ ।
ತಿಳಿವಿನ ವಿವರ್ತವದು, ಮನವಿದು-।
ತಿಳಿವಿನಾಕೃತಿಯದುವೆ ತಾನೆಂಬಲ್ಲಿ ವಾಸಿಷ್ಠ ॥ ೯೨ ॥

---

ಕೊಂಡು ಕಡೆಗೆ ನಿರ್ಮಾಯಿಯಾಗಿ ತಾನೊಬ್ಬನೇ ಉಳಿದುಕೊಳ್ಳುವನು (ಪೂರ್ಣಮದಃ ಪೂರ್ಣಮಿದಂ....ಭಾಗವತ ೧೧-೯-೧೬....೨೧)

೯೦ ಅದ್ವಿತೀಯ ಬ್ರಹ್ಮಾತ್ಮತತ್ತ್ವವೊಂದೇ ತನ್ನಲ್ಲಿ ಜೀವೇಶ್ವರ ಜಗತ್ತುಗಳ ರೂಪುಗೊಂಡು ಅವಿದ್ಯೆಯಿಂದ ಕಂಡುಬರುತ್ತಿದ್ದರೂ ತಾನು ಮಾತ್ರ, ಉಚಿತಸ್ಥಲಂ—ತಕ್ಕ ನಿರ್ವಿಕಾರನು, ನಿರುಪಮನು—ಆಧ್ಯಾತ್ಮಿಕ ಜಗತ್ಕಾರಣನೆಂಬ ಜಗದ್ವಿಲಕ್ಷಣಕಾರಣನೆಂಬಲ್ಲಿ, ಅವಿಕಲಂ—ಸಂದಿಲ್ಲದಂತೆ ಶ್ರುತಿಗಳು ಪ್ರಮಾಣಗಳಾಗಿ ಬರುವವು.

೯೧ 'ಅಹಮೇಕಂ ....' — ನಾನೊಬ್ಬನೇ ಬಹುರೂಪನಾಗಬೇಕೆಂದೆಣಿಸಿಕೊಂಡಿತು; 'ತದೈಕ್ಷತ....' ತನ್ನಲ್ಲಿ ಯೋಚಿಸಿ ಹೀಗೆ ತನ್ನನ್ನೇ ಬಹುರೂಪಗಳನ್ನಾಗಿ ಮಾಡಿಕೊಂಡಿತು; 'ತತ್ಸೃಷ್ಟ್ವಾ ತದೇವಾನುಪ್ರಾವಿಶತ್' ಎಲ್ಲವನ್ನು ಸೃಷ್ಟಿಸಿ, ಅದರಲ್ಲಿ ಜೀವರೂಪದಿಂದಲೂ ತಾನೇ ಒಳಹೊಕ್ಕಿತು; 'ಸರ್ವಂ ಖಲ್ವಿದಂ ಬ್ರಹ್ಮ' 'ನೇಹನಾನಾಸ್ತಿ ಕಿಂಚನ' 'ನಾತ ಕಾಚನಭಿದಾಸ್ತಿ....' ಮುಂತಾದ ಈ ಶ್ರುತಿಗಳು ಬ್ರಹ್ಮದಲ್ಲಿ ಭೇದಗಂಧವಿರುವದಿಲ್ಲವೆಂದೂ, 'ಇದೆಲ್ಲವೂ ಬ್ರಹ್ಮವೇ, ಎಂದೂ ನಿಸ್ಸಂಶಯವಾಗಿ ಮುಕ್ತಕಂಠದಿಂದ ಸಾರುತ್ತಿರುವವು.

೯೨ ತಿಳಿವು ಒಂದೇ ಎಂದೆಂದೂ ಇಹುದು-ಇರತಕ್ಕದ್ದು, ಮಿಕ್ಕ ಈ ಲೋಕಲೋಕಾಂತರಗಳು ಬರಿಯ ಆ ತಿಳಿವು ಮಾತ್ರವಲ್ಲದೆ, ಅದಕ್ಕಿಂತ ಬೇರೆಯಿರುವದಿಲ್ಲವು. ಅಲ್ಲದೆ ಈ ಲೋಕಗಳು

ಕೇಳಿ ಸುರರೆ, ಜ್ಞಾನವಿದರ ವಿ-|
ಶಾಲಕಾರ್ಯಂ ಬ್ರಹ್ಮವಲ್ಲದೆ |
ಮೇಲೆ ಬೇರೊಂದುಂಟೆ ಎಂದುಸುರ್ದಂ ಸರೋಜಭವಂ ||
ಈ ಲಲಿತ ಸೂಚ್ಯಕ್ಕೆ ಬೇಕನು-|
ಕೂಲ ನಿಗಮ ಪ್ರಬಲವಾಕ್ಯ ಸು-|
ಶೀಲವಾಗೆನೆ ಚಮಕವಾರೈವುದು ವಿಬುಧರಿಂದೆ || ೯೩ ||

ತರ್ಕವದು ಕಾರಣಕೆ ಕಾರ್ಯವ-|
ತೋರ್ಕೆಗೈವುದು ಭಿದೆಯ ಹೃತ್ಸಂ-|
ಪರ್ಕಮಾದನುಭೂತಿಯಿಂ ಪ್ರಾಪ್ಯವೆ ಪರಂತತ್ತ್ವಂ ||
ಕರ್ಕಶದಿ ದುರ್ಯುಕ್ತಿಯಿಂದ ವಿ-|
ತರ್ಕಿಸಿದರೇನವರೆ ಶಾಲ್ಮಲಿ-|
ಗಿರ್ಕೆಯಂದೀ ಬಳಿಯ ಸಾತ್ಯವತೇಯ ಬೋಧಿಸಿದ || ೯೪ ||

ಇಚ್ಛೆಯುಂಟೆರಡಿದ್ದರಿಲ್ಲದೊ-|
ಡಿಚ್ಛೆಯಿಲ್ಲವದಿಲ್ಲದೊಡೆ ಮನ-|
ವಚ್ಛವಾಗಾತ್ಮಾನುರೂಪಂ ಬಡೆವುದಿಲ್ಲದಿರೆ–||
ಅಚ್ಛವಾಗಲನಚ್ಛವಾಗಲಿ-|
ತುಚ್ಛಮನವೆರಡುಂಟೆ ತ್ರಿಜಗ-|
ತ್ಕಚ್ಛ ನಿರ್ಗತ ನಿತ್ಯ ಚಿದ್ರಸವಿರ್ಪುದನವದ್ಯಂ || ೯೫ ||

---

ಮತ್ತು ಮನಸ್ಸು—ತನ್ನ ಸ್ವರೂಪವನ್ನು ಅಳಿಸಿಕೊಳ್ಳದಂತೆ ಬೇರೊಂದು ಬಗೆಯಲ್ಲಿ ತೋರಿಕೊಳ್ಳುವ ಆ ಬ್ರಹ್ಮರೂಪ ತಿಳಿವಿನ+ಆಕೃತಿ—ರೂಪವಲ್ಲದೆ ಬೇರೊಂದಲ್ಲವು.

೯೩ ಇದರ—ಈ ಬ್ರಹ್ಮದ ವಿಸ್ತಾರ ರೂಪಾದ ಪ್ರಪಂಚವೆಂಬ ಕಾರ್ಯವು....ಎಂದು+ಉಸುರ್ದಂ—ಹೇಳಿದನು, ಸರೋಜಭವಂ—ಬ್ರಹ್ಮದೇವನು, ಈ ಲಲಿತ ಸೂಚ್ಯಕ್ಕೆ—ಮಂಗಲಕರವಾದ ಈ ಸಿದ್ಧಾಂತಕ್ಕೆ ಪ್ರಮಾಣವನ್ನು ಬಯಸುವವರು ಒಲ್ಲವರಲ್ಲಿ, ಚಮಕಂ—ವೇದಾಂತಗಳನ್ನು ಓದಬೇಕು.

೯೪ ತರ್ಕವು ಕಾರ್ಯಕಾರಣ ಭೇದವನ್ನು ತಿಳಿಸುವಂತಿದ್ದರೂ ಸಾರ್ವತ್ರಿಕಾನುಭವೈಕಗಮ್ಯವಾದ ಪರಮತತ್ತ್ವವನ್ನು ತರ್ಕದ ದುರ್ಯುಕ್ತಿಗಳಿಂದ ಹೋರಾಟದ ಟಗರುಗಳಂತೆ ಖಂಡಿಸುವ ಉತ್ಸಾಹಶಾಲಿಗಳು ಹೂಗಾಯಿ ಹಣ್ಣುಗಳಿಲ್ಲದ ಬೂರುಗದ ಹೆಮ್ಮರಕ್ಕೆ ಹೋಲುವವರು!

೯೫ ತನಗೆರಡನೆಯದಿದ್ದರೆ ಇಚ್ಛೆಯು, ಅದಿಲ್ಲದಿದ್ದರೆ ಇಚ್ಛೆಯೇ ಇರುವದಿಲ್ಲ. ಇಚ್ಛೆಯಿಲ್ಲದ, ಅಚ್ಛ–ಸ್ವಚ್ಛವಾದ ಮನಸ್ಸು ಆತ್ಮನ ರೂಪವೇ ಆಗಿಬಿಡುವುದು. ಶುದ್ಧಾಶುದ್ಧ ಮನಸ್ಸುಗಳೆಂಬುದಿಷ್ಟೇ ಹೊರತು, ಅಚ್ಛ—ಸ್ವಚ್ಛ, ಅನಚ್ಛ—ಅಸ್ವಚ್ಛ ಎಂದೆರಡು ಬಗೆಯಿಂದ, ತುಚ್ಛ—ಮೊದಲಿನಲ್ಲಿ ತಾನೇ ಇಲ್ಲದಿರುವ ಈ ಮನಸ್ಸಿನಲ್ಲಿ ಆ ಭೇದವು ಇರುವದೇಇಲ್ಲ. ಆದ್ದರಿಂದ. ತ್ರಿಜಗತ್—ಮೂರು ಲೋಕಗಳೂ, ಕಚ್ಛ—ಕಚ್ಚಾ—ಅಸಿದ್ಧ ವಸ್ತು, ಪ್ರಮಾಣ ಪ್ರಮೇಯ

ಯಾರಿಗೀ ಯರ್ಥದಲಿ ಅನುಭವ-|
ಮೋರುಗುಡಿಪದೊ ಝುಷ ಕಮಠ ಕುಂ-|
ಭೀರ ಯಾತಾಯಾತ ಸಂಕ್ಷುಬ್ಧೋರ್ಮಿಯಾಗಿರದ-||
ವಾರಿಧಿಯಪಾಂಗಿನಲಿ; ಚಿತ್ತಾ-|
ಕಾರವೆಸೆಯದೆ ಚಿತ್ಸುಖಂ ಮೈ-|
ದೋರಿಹುದು ವಟಮೂಲನಿಲಯಾನುಗ್ರಹದ ದೆಶೆಯಿಂ　|| ೯೬ ||

ಶ್ರೀಗುರುವಿನ ಕಟಾಕ್ಷ ಸುಧೆ ಸಂ-|
ಯೋಗಿಸಿದ ನರನಮರನನಿಮಿಷ-|
ರಾಗಲಾಪರೆ, ಪಾಲ್ಗಡಲ ತಿಳಿಯಿಂದಮರರಿಲ್ಲಿ-||
ಹೇಗೆನಲ್, ದೃಶ್ಯಕ್ಕೆ ದಾನವ-|
ನಾಗಿಸಿದುದೋ, ತನ್ನ ಮೋಸವ-|
ಸಾಗಿಸಿದುದೋ ಮುಖ್ಯವೆರಡರೊಳರಿವುದುತ್ತಮರು　|| ೯೭ ||

---

ಪ್ರಮಾತೃಗಳ ಒಟ್ಟಿನ ಸಿವುಡೇ ಜಗತ್ತಾದ್ದರಿಂದ ಪ್ರಮಾಣಗಳಿ ದಲಾಗಲಿ ತನ್ನ ಸ್ವಂತ ಇರುವಿನಿಂದಲಾಗಲಿ ಈ ಜಗತ್ತು ಸಿದ್ಧಿಸುವದಕ್ಕಿಲ್ಲ. ಅಥವಾ ಆದ್ದರಿಂದಲೇ, ತ್ರಿಜಗತ್+ಕಜ್ಜ— ಮೂರು ಲೋಕಗಳಿಗೂ ಬ್ರಹ್ಮವೇ ಮೂಲವಸ್ತುವು. ಅದರಲ್ಲಿ ಚಿದ್ರಸಂ—ಚಿದಾನಂದರೂಪವು, ನಿರ್ಗತ—ಸಂದುಬಿಡವೆ ನಿತ್ಯವೂ ಹೊಂದಿರತಕ್ಕದ್ದಲ್ಲದೆ, ಅದು ಅನವದ್ಯಂ (—ನಿರ್ದುಷ್ಟವೂ) +ಆಗಿರ್ಪುದು.

೯೬　....ಭವಂ+ಓರುಗುಡಿಪುದೊ—ಒಕ್ಕಡೆ ಬಂದು ರಾಶಿಯಾಗಿ ನೆಲೆಗೊಂಡಿ ಎವದೋ, ಝುಷ—ತಿಮಿಂಗಿಲು-ದೊಡ್ಡ ಮೀನು, ಕಮಠ—ಆಮೆಗಳು, ಕುಂಭೀರ—ಮೊಸಳೆ ಈ ಮುಂತಾದವುಗಳಿಂದ, ಯಾತ—ಚಲನೆಯಾಗಿ ಪರ್ವತಾಕಾರವಾಗಿ ಮುಗಿಲು ಮುಟ್ಟುವಂತೆ ಮೇಲೆದ್ದ, ಆಯಾತ—ಉದ್ದನೆಯ, ಊರ್ಮಿ—ಅಲೆಗಳಿಂದ, ಸಂಕ್ಷುಬ್ಧಂ+ಆಗಿರದ—ತನ್ನಲ್ಲಿ ಚಲಿಸದ, ನಿಶ್ಚಲ ವಾರಿಧಿ—ಶಾಂತಿಸಾಗರದಂತೆ ಗಂಭೀರಸ್ವಭಾವದ ಮತ್ತು, ಆಕಾರಂ+ಎಸೆಯದೆ—ತನ್ನಲ್ಲಿ ವಿಕಾರ ಹೊಂದದೆ ಇರುವ ಚಿತ್ತವುಳ್ಳ ಅವರಿಗೆ ದಕ್ಷಿಣಾಮೂರ್ತಿಯ ಅನುಗ್ರಹದಿಂದ, ಚಿತ್+ಸುಖಂ+ಮೈದೋರಿ+ಇಹುದು—ಸಾಕ್ಷಾತ್ಕಾರವಾಗಿರುವದು.

೯೭　ಶ್ರೀಗುರು....ರನು—ಸದ್ಗುರುವಿನ ಅನುಗ್ರಹದಿಂದ ಜ್ಞಾನಾಮೃತವನ್ನು ಸೇವಿಸಿದ ಮನುಷ್ಯನು, ಅಮರನು+ಅನಿಮಿಷನು—ದೇವತೆಗಳಾಗಿ ತಾವೂ ಸಾವಿಲ್ಲದವರು, ಆಗಲಾಪರೆ— ಆಗಬಲ್ಲರೆ? ಏಕೆಂದರೆ ಅಮರತ್ವವೆಂಬುದು ಪಾಲ್ಗಡಲ ತಿಳಿಯಿಂದ—ಹಾಲುಸಮುದ್ರದ ಸಾರವಾದ ಅಮೃತದಿಂದಲ್ಲವೇ ದೊರೆಯಬೇಕು? ಎಂದರೆ, ನಿಜ; ಇಲ್ಲಿ—ಅಹಂಕಾರಾದಿ ಅವ್ಯಕ್ತದವರೆಗಿನ ಅನಾತ್ಮದ ಒಟ್ಟನ್ನೇ ಸಂಪೂರ್ಣವಾಗಿ ಬ್ರಹ್ಮಾತ್ಮಜ್ಞಾನದ ಕತ್ತಿಯಿಂದ, ದಾನವನು+ಆಗಿಸಿದುದೊ +ಕತ್ತರಿಸಿ ಕೆಡಹಿಬಿಟ್ಟಿರುವದೋ ಅಥವಾ ದೇಹೇಂದ್ರಿಯ ಅನಾತ್ಮಗಳಲ್ಲಿ ಹುಸಿಯ ರೂಪುಗಟ್ಟಿದ 'ನಾನು' ಎಂಬೀ, ತನ್ನ ಮೋಸವ—ತನ್ನ ಮಿಥ್ಯಾತ್ಮನನ್ನೇ ವಂಚಿಸಿಬಿಟ್ಟಿರುವದೋ ಎಂಬಿರಡರಲ್ಲೊಂದರಿಂದ ಜಿಜ್ಞಾಸುಗಳು ಇಲ್ಲಿನ ಅಮರತ್ವವನ್ನು ಗುರ್ತಿಸಬೇಕು.

ಶಿವನೆ ಗುರು; ಗುರುವೇ ಪರಾತ್ಪರ |
ಶಿವನಿವನ ಕಾರುಣ್ಯ ಚಾಂದ್ರೀ-|
ಲವದಿ ಪೋದುದು ಘೋರಸಾಂಸಾರಿಕ ತಮುಸ್ಸಂಘ||
ಸವನಿಪುದು ತತ್ಪೂಜೆಯಿಂದಿದು |
ಭುವನ ಪಿತನಹ ಗೀಷ್ಪತಿಯು ವಾ-|
ಸವಗುಸುರ್ದಂ ಸತ್ಯಮೆಂದಾಂತರ್ಯ ಪೂರ್ವಕದಿಂ || ೯೮ ||

ದೋಷ ವಿಷಯಗ್ರಹಣದೊಳಗಭಿ-|
ಲಾಷವಿಲ್ಲದ ಚಿತ್ತವಿೂ ಪೀ-|
ಯೂಷಗೌರದ್ಯುತಿಯ ಪಡೆದಿಹುದೆಂಬ ಭಾವವನು-||
ಪೋಷಿಸುವ ಹಿಮುಶುಭ್ರದೇಹ ವಿ-|
ಶೇಷದಿಂ ಗೌರೀಂದು ಗಂಗಾ-|
ಶೇಷರಿಂದೊಪ್ಪುವ ಮಹೇಶಂ ಕೊಡಗೆ ಶಿವಪದನುಂ || ೯೯ ||

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೊಳಾತ್ಮವಿಚಾರಮುಂ ಪೇಳಿದುದು
ಹದಿಮೂರನೆಯ ಸಂಧಿ ಸಮಾಪ್ತಂ ( ಪ|| ೮೦೧ )

## ಜೀವನ್ಮುಕ್ತಿ ಪುರಸ್ಸರ ವಸ್ತುಸ್ಥಿತಿ ನಿರ್ಣಯ-೧೪ನೆಯ ಸಂಧಿಯು

ಸೂ|| ಇರಲು ಬಿಡುಗಡೆ ದೇಹ ಮೂರೋ-|
ಸರಿಸೆ ಬಿಡುಗಡೆ ಸಹಜವಸ್ತುವಿ-|
ನಿರವು ಪೇಳಲ್ಪಡುವದಿಲ್ಲಿ ಮುಮುಕ್ಷು ಮೋದಾರ್ಥಂ || ಪ ||

---

೯೮ ಕಾರುಣ್ಯ—ಕರುಣೆಯೆಂಬ, ಚಾಂದ್ರೀಲವದಿ—ಲೇಶಮಾತ್ರದ ತಿಂಗಳ ಬೆಳಕಿನಿಂದ, ಸಂಸಾರಾನರ್ಥಕಾರಣಗಳಾದ ಅಜ್ಞಾನ, ಮಿಥ್ಯಾಜ್ಞಾನ, ಸಂಶಯಜ್ಞಾನ ಎಂಬ, ತಮುಸ್ಸುಗಳ+ಸಂಘ—ಈ ಒಟ್ಟು, ಸವನಿಪುದು—ತನಗೆ ಸಿದ್ಧಿಸುವದು, ತತ್—ಆ ಗುರುವಿನ, ಪೂಜೆಯಿಂದ+ಇದು-ಸರ್ವಾನರ್ಥ ನಿವೃತ್ತಿ ಮತ್ತು ಪರಮಾನಂದಪ್ರಾಪ್ತಿಯೆಂಬ ಈ ಪರಮ ಪುರುಷಾರ್ಥವು, ಭುವ....ಗೀಃ+ಪತಿ—ಚತುರ್ಮುಖನು, ವಾಸವಗೆ—ಇಂದ್ರನಿಗೆ, ಉಸುರ್ದಂ—ಹೇಳಿದನು, ಸತ್ಯಂ+ಎಂದು+ಆಂತರ್ಯಪೂರ್ವಕದಿಂ-ಹೃತ್ಪೂರ್ವದಿಂದ,

೯೯ ಪರ: ಗುಣದೋಷ ಗ್ರಹಣಗಳಲ್ಲಿ, ಅಭಿಲಾಷ—ತನ್ನ ಒಲವಿಲ್ಲದ ಚಿತ್ತವು, ಈ ಪೀಯೂಷ—ಈ ಅಮೃತಕ್ಕೆ ಸರಿಹೋಲುವ, ಗೌರ—ಶುಭ್ರವಾದ, ದ್ಯುತಿ—ಕಾಂತಿಯನ್ನು ಪಡೆದಿಹುದೆಂಬ ಭಾವವನ್ನು ತೋರಿಸುವಂತೆ, ಶಿವನೂ ಶುಭ್ರದೇಹವಿಶೇಷದಿಂದೊಪ್ಪಿ—ಗೌರಿ ಇಂದು ಗಂಗಾ ಮತ್ತು ಹಿಮ—ಶೀತಲ ಶರೀರದ ಸರ್ಪ ಇವುಗಳಿಂದ ಶೋಭಿಸುವ ಆ ಮಹೇಶನು ತನ್ನ ಶಿವಪದವನ್ನು ಕೊಟ್ಟು ನಮ್ಮನ್ನು ಕಾಪಾಡಲಿ.

ಸೂ|| ಆತ್ಮವಸ್ತುವಿನ ಸ್ವಭಾವವನ್ನನುಸರಿಸಿ ದೇಹೇಂದ್ರಿಯಗಳ ಬಿಡುಗಡೆಯು ತಾನಾಗಿಯೇ ಅವನಿಗೆ ಇರಲು—ಇದ್ದರೂ, ಅಜ್ಞಾನದಿಂದ ಮತ್ತೆ, ಓಸರಿಸೆ—ನಮ್ಮಾತ್ಮನ ಪಕ್ಕಕೆ ಅವು

ನೀಚರಾರನಭಿಜ್ಞರವರೊಳು-।
ನೀಚರಾರತಿಹೇಯ ಕಾಯ ಕ-।
ಲಾ ಚತುರ ವರ್ಣಾದ್ಯಹಂಕೃತಿಯುಕ್ತರವರೊಳಗೆ-॥
ನೀಚರಾರನ್ಯಾಯಹೃತ ಪರ-।
ಕಾಚ ಜೀವಿತವಂತರವರಲಿ-।
ಸೂಚಿಸದೆ ಸಜ್ಜನರು ಬಾಳುವುದೀ ಕಥಾಶ್ರುತಿಯ ॥ ೧ ॥

ಚಾರುತರವಾಗಿರುವ ತತ್ತ್ವವಿ-।
ಚಾರದಿಂದಲವಿದ್ಯೆಕೆಡೆ ತ-।
ತ್ಕಾರಿಯವೆಯಾಗಿರ್ಪ ದೇಹಾದಿಗಳು ಲಯಿಸುವವು॥
ತೋರುವೀ ತೋರ್ಕೆಗೆ ಘಟಿಸೆ ಲಯ-।
ವಾರು ಜೀವನ್ಮುಕ್ತರೆನೆ, ಸುವಿ-।
ಚಾರದಿಂದಜ್ಞಾನವಂತಃಶಕ್ತಿಯಡಗಿದುದು ॥ ೨ ॥

ಗರುಡಮಂತ್ರೋಚ್ಚರಣದಿಂದೇ-।
ನರತುದೇ ವಿಷ, ವಿಷದ ಮಾರಕ-।
ಭರಮಡಗಿದುದು; ಪೋದುದೇ ಕಗ್ಗತ್ತಲೆಯ ಮೊತ್ತ-॥

---

ಸಂದುಬಂದಿರುವವು. ಆತ್ಮಾನಾತ್ಮಗಳ ವಿವೇಕಜ್ಞಾನದಿಂದ ಆ ದೇಹಾದಿಗಳನ್ನು ಪುನಃ ಆತ್ಮನ ದೆಶೆಯಿಂದ, ಓಸರಿಸೆ—ಹೊರಕ್ಕೆ ತೆಗೆದುಹಾಕಿಬಿಡುವವೆಂಬೀ ರೂಪದ ಅನಾತ್ಮತ್ವದ ನಿಶ್ಚಯ ವೆಂಬ, ಆ ಬಿಡುಗಡೆ—ಆ ಸದ್ಯೋಮುಕ್ತಿಯನ್ನು, ಸಹ....ನ+ಇರವು—ಆತ್ಮನ ಸ್ವರೂಪವನ್ನು, ಮೋದಾರ್ಥಂ—ಸಂತೋಷ-ಪರಮ ಹಿತಕ್ಕೆ ಎಂದು,

೧ ನೀಚರು+ಆ(ಯಾ)ರು+ಅನಭಿಜ್ಞರು—ತನ್ನನ್ನರಿಯದವರು, ಅತಿ....ತುರ-ಅತ್ಯಂತ ಅಶುಚಿಯ ತನ್ನ ದೇಹದಲ್ಲಿ ಭೋಗಕೌಶಲ ಬುದ್ಧಿವುಳ್ಳವರು, ಬ್ರಾಹ್ಮಣಾದಿ ವರ್ಣಗಳ ಅಭಿಮಾನ ಮಾತದವರು ಇನ್ನೂ ನೀಚರು,ಅವರಿಗಿಂತಲೂ ನೀಚರು+ಆರು+ಅನ್ಯಾಯದಿಂದ+ಪರಕಾಚ —ಮತ್ತೊಬ್ಬರ ಕಾಸನ್ನು, ಹೃತ—ಅಪಹರಿಸಿಕೊಂಡೇ ಜೀವಿಸಿಕೊಂಡಿರತಕ್ಕವರು ಎಂದರೆ ಇವರು ಎಲ್ಲರಿಗಿಂತಲೂ ಕಡುನೀಚರೆಂದು ಭಾವ.

೨ ಚಾರುತರ—ತನ್ನ ಹೃದಯಕ್ಕೊಪ್ಪಾಗಿರುವ, ಕೆಡೆ—ಕೆಡಲಾಗಿ, ತತ್+ಕಾರಿಯವ— ಅದರ ಕಾರ್ಯಗಳಾದ ದೇಹಾದಿಗಳೂ ನಾಶವಾಗುತ್ತಿರುವವು, ಇನ್ನು ಜೀವನ್ಮುಕ್ತರು ಯಾರು? ಎಂದರೆ, ವಿಚಾರಜನಿತ ತತ್ತ್ವನಿಶ್ಚಯದಿಂದ ಅಜ್ಞಾನವೊಂದು ಹೋಯಿತಲ್ಲದೆ, ಮೊದಲೇ ಇಲ್ಲದ ದೇಹಾದಿಗಳಿಗೇನೂ ಅಳಿವಾಗಲಿಲ್ಲ.

೩ ....ದ+ಅರತುದೆ—ಹಾವಿನ ವಿಷವು ಅರೆಯಲ್ಪಟ್ಟಿತೆ ಏನು? ಇಲ್ಲ. ಮತ್ತೇನಂದರೆ, ....ಮಾರಕಭರಂ—ಕೊಲ್ಲುವ ಅಧಿಕವಾದ ವೇಗ ಮಾತ್ರ ಆ ವಿಷದಲ್ಲಡಗಿತಷ್ಟೆ? ... ಮೊತ್ತ— ಸಾಲು, ದಟ್ಟನಾದ; ಸರಸಿಜ—ಕಮಲಕ್ಕೆ, ಆಪ್ತ—ಮಿತ್ರನಾದ ಸೂರ್ಯನ ಅಂಜನದಿಂದ, ದಷ್ಟಿ—ಕಣ್ಣಿಗೆ ಕಾಣಿಸದಂತಿದ್ದ ತೆರೆಯು ಮಾತ್ರ ಹರಿಯಿತಷ್ಟೆ? ಮೂಲ+ಅಂಕುರಂ—ಸಾಕ್ಷಿ,

ಸರಸಿಜಾಪ್ತಾಂಜನದಿ ದೃಷ್ಟಿಯು-|
ತೆರೆ ಹರಿದುದಿದರಂತೆ ಮೂಲಾಂ-|
ಕುರಮವಿದ್ಯೆಯೆ ಕೆಟ್ಟುದೀ ತತ್ತ್ವವಗಾಹನದಿಂ || ೩ ||

ಈ ನಿಮಿತ್ತದಿ ದೇಹದಿರ್ಕೆಗೆ-|
ಹಾನಿಯಿಲ್ಲದ ಬಳಿಕ ಸಿದ್ಧಿಸ-|
ಲೇನು ವಿಸ್ಮಯಮಿಲ್ಲಿ ಜೀವನ್ಮುಕ್ತಿ ಯಿದರಿರವು-||
ಏನೆನಲ್ಕೇ ಭಾವದಿಂ ಸ |
ನ್ಮಾನವತ್ಪ್ರಾಪ್ಯಕ್ಕೆ ಪ್ರಾಪ್ತತೆ |
ತಾಸೊಡಂಬಟ್ಟಿತೊ ಮರಳಿ ಬಗೆಗಿಲ್ಲದಾಯ್ತಾಸ್ತೆ! || ೪ ||

ಏನು ಮಿಷದಿಂ ನಿರ್ವೃತಿಗೆ ಸಂ-|
ಸ್ಥಾನವಾವುದು, ಪರಮುಮಾದುದು-|
ತಾನೆ ಜೀವನ್ಮುಕ್ತಿ ಪದವೆಂದರ್ಮಹಾತ್ಮಕರು ||
ಆ ನಿರಂಜನ ಲಾಭವಿಲ್ಲದ-|
ಮಾನವನ ಬಾಳಿನವೊಲೀ ವೃಗ-|
ಕಾನನದ್ರುಮ ಪಕ್ಷಿಗಳು ಬದುಕಿಲ್ಲವೇ ನೋಡೆ || ೫ ||

ಯಾರ ಬಾಳಿನ ಮುಂದೆ ಬರದತಿ-|
ಘೋರ ದುಃಖವವರದೆ ಜೀವಿತ! |
ತೀರದಾಯಾಸವನು ಪಡುವವರಂತೆ ಲೋಕದಲಿ-||

---

ಹೊಂದುಗಳುಳ್ಳ ದೇಹಾಂಕುರಗಳಿಗೆ ತಾಯಿಬೇರಿನಂತಿದ್ದ, ಅವಿದ್ಯೆ—ವಿದ್ಯೆಯುಲ್ಲದ್ದು—ವಿದ್ಯೆಯಿಂದ ಹೋಗುವ ಆತ್ಮಾನಾತ್ಮಗಳನ್ನು ಒಂದನ್ನೊಂದರಲ್ಲಿ ಕಲೆಬೆರಕೆ ಮಾಡಿಕೊಂಡಿರುವ ತಪ್ಪು ತಿಳಿವಳಿಕೆಯ ರೂಪದ ಅಧ್ಯಾಸವು; ಈ ತತ್ತ್ವದ+ಅವಗಾಹನ—ಸಮ್ಯಕ್ ಜ್ಞಾನದಿಂದ ಕೆಟ್ಟು ಹೋಯಿತಲ್ಲದೆ, ಪುನಃಕಾಣಿಕೆಗಿಲ್ಲದಂತೆ ದೇಹೇಂದ್ರಿಯಗಳನ್ನೇನೂ ಆ ಜ್ಞಾನವು ಅಳಿಸಿಹಾಕಲಿಲ್ಲ.

೪ ದೇಹದ+ಇರ್ಕೆಗೆ—ಇರುವಿಕೆಗೆ, ....ಯು+ಇದರ+ಇರವು+ಏನು+ಎನಲ್ಕೆ—ಜೀವನ್ಮುಕ್ತಿಗೆ ಕುರುಹು ಏನು? ಏಭಾವದಿಂದ....—ತನ್ನ ಸ್ವರೂಪವಾಗಿ ನಿತ್ಯಸಿದ್ಧವಾಗಿದ್ದ ಆತ್ಮನನ್ನೇ ವೇದಪ್ರಮಾಣದಿಂದ ಅಜ್ಞಾನದ ಅಪಹಾರ ಮಾತ್ರವಾಗಿ ಈಗ ಪಡೆಯಲ್ಪಟ್ಟಿತಾಗಿ, ಹುಸಿ ತೋರುಗಾಣಿಕೆಯ ದೃಶ್ಯಗಳಲ್ಲಿ, ಬಗೆಗೆ—ಮನಸ್ಸಿಗಿದ್ದ ಮೊದಲಿನ, ಆಸ್ತೆ—ವಿಶ್ವಾಸವು ತಪ್ಪಿತು ಎಂಬುದು ಈಗ ವಿಶೇಷ;

೫ ಏನುಮಿಷದಿಂ—ಇದನ್ನು ಯಾವ ಕುರುಹಿನ ನೆಪದಿಂದ ತಿಳಿಯಬೇಕು? ಅಲ್ಲವೆ, ಈ ನಿರ್ವೃತಿಗೆ—ಜೀವನ್ಮುಕ್ತಿಗೆ ನೆಲೆಯಾದರು ಯಾವದು? ಎಂದರೆ, ಪರಮುಂ+ಆದುದು—ಪರಮಾತ್ಮನಾಗಿ ತಾನುಳಿದುಕೊಂಡಿರುವವೇ; ಆ ನಿರಂಜನನ—ತನ್ನಲ್ಲೆಂದಿಗೂ ಆವರಣ ಸೋಂಕಿಲ್ಲದ ಆ ಬ್ರಹ್ಮಾತ್ಮತತ್ತ್ವದ, ಕಾನನ—ಕಾಡಿನ, ದ್ರುಮ—ಗಿದ ಮರ ಬಳ್ಳಿಗಳೂ,

೬ ತೀರದ—ಕೊನೆಗಾಣುವದಕ್ಕಿಲ್ಲದ, ಕರಟ—ಕ ಕ ಎಂದು ರಟ—ಕೂಗುವ ಕಾಗೆ,

ಕ್ರೂರಮೃಗ ಗರ್ದಭ ಕರಟ ಭೂ-।
ದಾರ ಕುರ್ಕುರ ಫೇರು ಪೇಚಕ-।
ವಾರಮಿಲ್ಲವೆ ಎಷ್ಟು ಪರ್ಯಂತಂ ನಿಜಾರಬ್ಧಂ! ॥ ೬ ॥

ಸಾಕದಂತಿರಲಾವ ಜೀವನು ।
ಮೋಕಮುಳ್ಳವನೆನಲು, ತತ್ತ್ವವಿ-।
ವೇಕಮುಳ್ಳವನೇ, ದೃಢಂಗೊಳಿಸುವೊಡೆ ಈ ಸ್ಥಿತಿಯಂ-॥
ಏಕಮಾದ ವಿಧಂಗಳಿಂದಲ-।
ನೇಕ ಲಕ್ಷಣ ಪೇಳೆ ಪಟ್ಟುದ-।
ದೇಕೆನಲ್ಮುಮುಕ್ಷುವದೆ ಸಂಭವಿಸೆ ವಿಶ್ವಾಸಂ; ॥ ೭ ॥

ಎಂದಳಿವುದೀ ಭವದ ಬಂಧನ-।
ವೆಂದಿಗಳಿವುದು ಸಂಸೃತಿಯು ಕ-।
ಟ್ಟೆಂದು ಕೇಳಿದ ಫಲ್ಗುನಂಗೊರೆದಂ ಯದೂದ್ವಹನು ॥
ಹಿಂದೆ ಹೇಳಿದ ತೆರದೊಳಲುಗದೆ-।
ನಿಂದವಗೆ ಕಡೆಗಾಲದಲ್ಲಿಯು-।
ಮಿಂದುವೊಂದೇ ತೆರದ ನಿರ್ವಾಣಂ ಘಟಿಪುದೆಂದು; ॥ ೮ ॥

ಇದಕೆ ವಿದ್ಯಾರಣ್ಯರೊಡನಾ-।
ಡಿದರು ಸದ್ರೂಪತ್ವದಿಂ ಖಂ-।
ಡದ ಬಗೆಯನೊಳಕೊಳ್ಳದೊಂದಹ ವಸ್ತುವಿಗೆ ಸಟೆಯ-॥

---

ಭೂದಾರ—ಭೂಮಿಯನ್ನು ಶೀಳುವ ಕಾಡುಹಂದಿಯು, ಕುರ್ಕುರ—ಕುಕುರ—ನಾಯಿ, ಫೇರು—ಪೇರವ—ನರಿ, ಪೇಚಕ—ಗೂಬೆಯೇ ಮುಂತಾದ, ವಾರಂ—ಈ ಸಮೂಹವೇನು? ನಿಜಾರಬ್ಧಂ—ತಂತಮ್ಮ ಕರ್ಮ ಮುಗಿಯುವವರೆಗೂ ಜೀವಿಸಿಕೊಂಡಿರುವದಿಲ್ಲವೆ ಏನು?

೭ ಮೋಕಂ—ಸಂಸಾರಬಂಧದಿಂದ ಬಿಡುವುಗೊಂಡು ಪೂರ್ಣ ವಿಶ್ರಾಂತಿಯನ್ನು ಹೊಂದಿದವನು? ಏಕಮಾದ—ಜೀವನ್ಮುಕ್ತಿಯೊಂದನ್ನೆ, ಅನೇಕ ವಿಧಂಗಳಿಂದ ಅದು+ಏಕೆ ಪೇಳಲ್ಪಟ್ಟುದು+ಎನಲ್+ಈ ಸ್ಥಿತಿಯಂ ದೃಢಂಗೊಳಿಸುವೊಡೆ, ಮತ್ತ ಮಿದರಲ್ಲಿ ಮುಮುಕ್ಷುಜನಂಗಳಿಗೆ, ವಿಶ್ವಾಸಂ+ಸಂಭವಿಸೆ—ನೆಲೆನಿಲ್ಲುವದಕ್ಕಾಗಿಯೂ ಹೇಳಲ್ಪಟ್ಟಿತು ಎಂದು ಉತ್ತರವು.

೮ ಎಂದು—ಎಂದಿಗೆ, ಯಾವಾಗ? ಅಳಿವುದು+ಈ ಭವದ ಬಂಧನವು+ಎಂದಿಗೆ+ಅಳಿವುದು! ಫಲ್ಗುನಂಗೆ—ಅರ್ಜುನನಿಗೆ, ಒರೆದಂ—ಹೇಳಿರುವನು, ಯದು+ಉದ್ವಹನು—ಯಾದವರಿಗೆಲ್ಲ ಪರಮ ಸಂತೋಷದಾಯಕನಾದ ಶ್ರೀಕೃಷ್ಣನು; ....ತೆರಧೊಳು+ಅಲುಗದೆ—ಸಂಶಯಗ್ರಸ್ತನಾಗಧೆ (ಭಗವದ್ಗೀತೆ ೨-೭೨)

೯ ಆತ್ಮಾನಾತ್ಮಗಳು ಒಂದರಲ್ಲೊಂದು ಕಲೆಬೆರತಿರುವ ನೈಸರ್ಗಿಕವಾದ ಅಧ್ಯಾಸವೆಂಬ ಐಕ್ಯಭ್ರಮೆಗೆ—ಅವುಗಳ ತತ್ತ್ವನಿಶ್ಚಯರೂಪ ಭೇದಜ್ಞಾನವೇ ಅಂತಕಾಲವಲ್ಲದೆ, ಪ್ರಾಣೋತ್ಕ್ರಮಣವಲ್ಲ (ಪಂಚದಶೀ ೨-೧೧೪) ಮುಕ್ತಿಯೂ ಇದಕ್ಕಿಂತ ಬೇರೊಂದಿರುವದೂ ಇಲ್ಲ.

ಪದರದೆರಡಾದ ಪ್ರಕೃತಿಗೆ ಬೆ-।
ರದ ಬೆರಕೆಯೆಂದಳಿದುದಂದಿಗೆ-।
ಯೊದಗಿದುದು ಪರಮುಕ್ತಿಯಿದ ಬಿಟ್ಟರದು ಮತ್ತೊಂದು ॥ ೯ ॥

ಎಂದರಿದಕೇನಭಿಮತವೆನಲ್ ।
ಸಂದ ಪ್ರಾರಬ್ಧದ ಶರೀರಕೆ ।
ಬಂದೊದಗುವದು ಮೃತ್ಯುವಾ ಕಾಲದೊಳಗೀ ಜೀವಂ-॥
ತಂದುಕೊಂಡೇನೇನ ನೆನದುದ-।
ರಿಂದ ಬಿಡುಗಡೆಯೈದುವನೊ, ಫಲ-।
ವೊಂದುವನು ತತ್ತತ್ಪದಾರ್ಥದ ಸತ್ಯವಾಗೆಂಬ- ॥ ೧೦ ॥

ವಚನರಾಶಿಯು ಶಾಸ್ತ್ರಗಳ ನಿ-।
ರ್ವಚನಮಂ ಮಾಡುವುದು, ಪ್ರಾಕೃತ-।
ನಿಚಯದೊಳಗೀ ಯರ್ಥವೆಂದೇ; ಗುರುವೆ ಜಗದೊಳಗೆ-॥
ವಚಿಸೆ ಪ್ರಾಕೃತನೆಂದು ಯೋಗ್ಯತೆ-।
ಯ ಚರಿಸುತಿರುವ ಆತನಾರೆನೆ,।
ಶುಚಿವಿನಸ್ಕನೆ ಕೇಳು, ವ್ಯಕ್ತ್ಯೋಕ್ತಿಯಲಿ ಪೇಳುವೆವು ॥ ೧೧ ॥

ಅಂತರಂಗಕ್ಕಾತ್ಮನಿಗೆ ತೆರ-।
ಪಂ ತಿಳಿಯದವರಾರೊ ಸರ್ವಜ-।
ನಾಂತರಾಲಿಕರೆಲ್ಲರುಂ ಪ್ರಾಕೃತರೆನಿಸುತಿಹುದು ॥
ಇಂತೆನಲ್ಬಹುದೇ ಉಪಾಸನೆ-।
ಯಿಂ ತೊಲಗುವದು ಬಂಧವೆಂದು ನಿ-।
ರಂತರಂ ಬಹುವೇದ ಮೂರ್ಧಗಳುಸುರುತಿರುವುದಲ ॥ ೧೨ ॥

ಆದರಾಲಿಸು ಯತ್ನಮಂ ಬೇ-।
ಕಾದ ತೆರದಿಂ ಮನದೆ ಯೋಚಿಸಿ ।
ಗೈದ ಸುವಚನವೃತ್ತಿಯಂ ಮೇಣೆಂತು ಮಾಡಿದೊಡಂ ॥

---

೧೦ ಅಭಿಮತ—ಪ್ರಮಾಣಗಳು, ಸಂದ—ಪಕ್ವವಾಗಿ ತನಗೆ ಫಲಕ್ಕೆ ಬಂದು ಸಂದಿದ್ದ, ಇದರಿಂದ—ಪ್ರಾಪ್ತವಾಗಿರುವ ಈ ಶರೀರದಿಂದ, ತತ್+ತತ್+ಪದಾರ್ಥದ—ಕೊನೆಯಗಾಲದ ಭಾವನೆಗನುಗುಣವಾಗಿ ಬರುವ ಜನ್ಮವೆಂಬ ಫಲವನ್ನು ತಾನು ಹೊಂದುವದು ಸತ್ಯ (ಭಗವದ್ಗೀತೆ ೮–೬)ಎಂಬುದರಿಂದ ಬ್ರಹ್ಮನಿಶ್ಚಯದಿಂದ ತನ್ನ ಬ್ರಹ್ಮಾತ್ಮನಲ್ಲಿಯೇ ಸದಾ ಒಂದಾಗಿದ್ದ ಜ್ಞಾನಿಗೂ ಶರೀರಾಂತರವಿಲ್ಲವೆಂದು ಭಾವವು.

೧೨ ಅತ್ಯಂತ ಬೇರ್ಬೇರೆಯ ಅಂತರಂಗಕ್ಕೂ ಆತ್ಮನಿಗೂ ಒಂದಕ್ಕೊಂದಕ್ಕಿರುವ,ತೆರಪಂ—ಬಿಡುವು—ಭೇದವು ಎಂದರೆ ನೈಜವಾದ ಅವುಗಳ ಸ್ವಭಾವಸಿದ್ಧ ತತ್ತ್ವವನ್ನು ಇದ್ದಂತೆ ತಿಳಿಯದವರೆಲ್ಲರೂ, ಆಂತರಾಳಿಕರು—ಪ್ರಾಕೃತರೆಂಬುದೇ ಸರಿ, ಮೂರ್ಧ—ಶ್ರುತಿಗಳು,

೧೩ ....ಗೈದ+ಐಸು—ಚೆನ್ನಾಗಿ ತಿಳಿದು ವಿಧಿಯನ್ನನುಸರಿಸಿ ಮಾಡಿದ ಕರ್ಮೋಪಾಸನೆ

ತೀದ ಕರ್ಮಕೆ ಪುಣ್ಯಲೋಕದ |
ಭೇದದಲಿ ಫಲ ಭೋಗವಲ್ಲದೆ, |
ಹಾದಿಯಿನ್ನೊಂದಿರದುಪಾಸಕನಿಗೆ ವಿಚಾರಿಸಲು || ೧೩ ||

ಅರ್ಚಿರಾದಿ ಗತಿಯನು ಬಿಡದೆ ತೊ-|
ಡರ್ಚಿರುವ ಧೂಮಾದಿ ಗತಿಯನು |
ಚರ್ಚಿಸಿದರಾಚಾರ್ಯರಾ ಪದವಿಯನು ಪಡೆದವರೆ-||
ಪೇರ್ಚಿದೊಂದಾನೊಂದು ಮೋಸದ |
ಚುರ್ಚುಗೊಳ್ಳಿಯ ಸೂಡಿನಿಂ ಭವ-|
ವರ್ಚಿಸಿದರೆಂದಖಿಲ ಪೌರಾಣಂಗಳಿರುತಿಹವು || ೧೪ ||

ಭವದೆ ವಿಷಯೋರಗದ ರುಚಿ ಗರ-|
ಲವನು ಸೇವಿಸಿ ಮತ್ತಮಾದ ಮ-|
ನವನು ಕೂಡಿದ ಜೀವರಿಂಗಾಯಾಸ ಕಾರಣವೆ-||
ದಿವಸ ವಿಪುಲ, ಸ್ಥೇಯಮಾದಾ-|
ಯುವು, ಶರೀರವು, ಸನ್ನಯಲಸ-|
ಚ್ಛ್ರವಣವನ್ಯಜ್ಞಾನಮಿದರಿಂದಾದುದಾವೃತ್ತಿ || ೧೫ ||

ಫಲದ ಆಕಾಂಕ್ಷೆಯನು ತಪದಿಂ |
ನಿಲಿಸದೇ ತಾನಾಗಿ ಭೋಗ-|
ಕ್ಕೊಲಿಮೆಯಡಗಿಹುದೆಲ್ಲಿ ಜೀವನ್ಮುಕ್ತನಾ ಮನುಜ; ||

---

ಗಳಿಗೆಲ್ಲ ಲೋಕಾಂತರಗಳಲ್ಲಿ ಅನಿತ್ಯಫಲವಲ್ಲದೆ ನಿತ್ಯಕೈವಲ್ಯವಿರುವದಿಲ್ಲ.

೧೪ ತೊಡರ್ಚಿರುವ—ಜೊತೆಮಾಡಿ ಶ್ರುತಿಗಳಲ್ಲಿ ಹೇಳಿರುವ, ಪೇರ್ಚಿದ—ಗಳಿಸಿದ, ತನಗೆ ಸೇರಿಬಂದ; ಚುರ್ಚು—ಚುಚ್ಚಿ ತಿವಿಯುವ ಉರಿಗೊಳ್ಳಿಯ, ಸೂಡಿನಿಂ—ಬೆಂಕಿಯಿಂದ ಸುಡಿಸಿಕೊಂಡು ಮತ್ತೆ ಈ ಭವವನ್ನೇ ತಪ್ಪದಂತೆ, ಅರ್ಚಿಸಿದರು—ಸೇವಿಸಿ ಹೊಂದಿದರು.

೧೫ ಸರ್ಪದಷ್ಟ ಜನರಿಗೆ ವಿಷವು ತಲೆಗೇರುವಂತೆ ಸಂಸಾರವಿಷಯಗಳೆಂಬ, ಉರಗ—ಈ ಸರ್ಪಗಳ ವಿಷವೇರಿದ ಜೀವರೂ ತಾವು ಮದಿಸಿದ ಮನಸ್ಸಿನವರಾಗಿಬಿಟ್ಟಿರುವದರಿಂದ ತಮ್ಮ ಪೂರ್ವದ ಪುಣ್ಯಫಲಗಳಾದ–ದೀರ್ಘಾಯುಷ್ಯವು, ಹೆಚ್ಚಿನ ತಮ್ಮ ದಿನಗಳೂ, ಶರೀರಾದಿ ಸಿರಿ ಸಂಪತ್ತುಗಳ ಭಾಗ್ಯಗಳೂ ಉತ್ತಮ ತಿಳಿವಳಿಕೆಯ ಶಾಸ್ತ್ರಶ್ರಮ—ಕುಶಲವಿದ್ಯೆಗಳು, ಬಗೆಬಗೆಗಳಿಂದ ತನ್ನ ಸುಖಕ್ಕೆ ಅಣಿಪಡಿಸುವ ಪ್ರಪಂಚಜ್ಞಾನದ ವಿಸ್ತಾರವೂ ಈ ಮುಂತಾದವುಗಳೆಲ್ಲ ತಮಗೆ ದೊರೆತಿದ್ದರೂ ವಿಷಯಭೋಗಗಳ ನಂಜೇರಿದ ಈ ಕಡು ಪಾಮರ ಜನರಿಗೆ ಅವು ಜನ್ಮಕ್ಕೇ ಸಹಕರಿಸುತ್ತಿರುವದರಿಂದ ಆಯಾ ಸಕಾರಣಗಳೇ ಆದವು!

೧೬ ಸಾಧನಾಂತರದಿಂದಲ್ಲದೆ ಭೋಗಕ್ಕೆ(ಂದಾತುರಗೊಳ್ಳುವ)+ಒಲಿಮೆಯು ತನ್ನಷ್ಟಕ್ಕೆ ತಾನೆ ಎಲ್ಲಡಗಿರುವದೋ, ಬಿಡದಂತೆ ವ್ಯವಹಾರಗಳಲ್ಲೆಲ್ಲ ತಾವು ತೊಡಗಿದ್ದರೂ ಯಾರ ಚಿತ್ತದಲ್ಲಿ ಸರ್ವ ಜೀವರ ಪರಮಾರ್ಥವೊಂದೇ ನಿಶ್ಚಿತಾನುಭವದಿಂದ ಮಾರುಹೊಳೆಯುತ್ತಿರುವದೋ ಅವರೇ ಜೀವನ್ಮುಕ್ತರು.

ಬಳಸುತಿರ್ದರು ಕ್ರಿಯೆಯ ಭೂತಂ-।
ಗಳ ನಿಜವೆ ವಿಜ್ಞಾನದಿಂ ಮಾ-।
ರ್ಪೊಳೆವುದೇ ಚಿತ್ತದಲಿ ಜೀವನ್ಮುಕ್ತನಾ ಮನುಜ ॥ ೧೬ ॥

ವಿಷಯಲಾಭ ಕ್ಷಯಗಳಲಿ ತ-।
ತ್ಸುಷಮ ವೈವರ್ಣ್ಯಗಳನಾವ ಪು-।
ರುಷನ ಮುಖವೊಂದಿರದು ಜೀವನ್ಮುಕ್ತನಾ ಮನುಜ ॥
ವಿಷಮ ರಾಗದ್ವೇಷ ಭಯ ಕಾ-।
ಲುಷಿತ ಮನವೆ ಶರನ್ನಭಸ್ತಾ-।
ವಿಷತೆಯೊಂದಿಹುದೆಲ್ಲಿ ಜೀವನ್ಮುಕ್ತನಾ ಮನುಜ ॥ ೧೭ ॥

ಮರದು ಲೋಕವ ನೆಚ್ಚರೊಳಗೆ-।
ಚ್ಚರವೆ ಲೋಕವನರಿದು ಮೋಹದ-।
ತಿರುಳ ಸುಟ್ಟವನಾವ ಜೀವನ್ಮುಕ್ತನಾ ಮನುಜ ॥
ಇರದಹಂಕೃತಿಯೆಲ್ಲಿ ದೋಷವ-।
ಬೆರೆಯದಿಹ ಮತಿಯೆತ್ತ ಕರಣಾ-।
ಕರಣವೆಸೆಯಲ್ಕಹನು ಜೀವನ್ಮುಕ್ತನಾ ಮನುಜ ॥ ೧೮ ॥

ಅಂಜಿಸದು ಜಗವಾವನಂ, ಜಗ-।
ವಂಜದಾವವನಿಂದಲವನೆ ನಿ-।
ರಂಜನಂ ತಾನಾಗಿ ಜೀವನ್ಮುಕ್ತನಾ ಮನುಜ ॥

---

೧೭ ತತ್+ಸುಷಮ+ವೈವರ್ಣ್ಯ—ಚಿತ್ತದ ಆ ಸೊಗಸು ಮತ್ತು ವಿವರ್ಣ—ಕುಂದು ಕೊರತೆಗಳ, ವಿಕಾರಗಳನು + ಆವ .... ಮುಖ—ಒಂದಿರದು—ಹೊಂದಿರುವದಿಲ್ಲವೋ, ಮತ್ತು ಯಾರಲ್ಲಿ ತನ್ನ ಹುಟ್ಟುಗುಣದಿಂದಲೇ ಕಲುಷಿತವಾಗಿರುವ ಮನಸ್ಸು, ಶರನ್ನ.... ಷತೆ+ ಒಂದಿಹುದು ಶರತ್ಕಾಲದ ಆಕಾಶದಂತೆ ನಿರ್ಮಲವನ್ನು ಹೊಂದಿರುವದೊ ಅವರು—ಜೀವನ್ಮುಕ್ತರು.

೧೮ ಎಲ್ಲರೂ ಅಜ್ಞಾನನಿದ್ರೆಯಿಂದ ಕನವರಿಸುತ್ತಿದ್ದರು, ಭಾವನಾಮಾತ್ರದ ಆ ಮಿಥ್ಯಾ ಎಚ್ಚರವು ತನಗಿಲ್ಲದೆ, ಲೋಕವ ಮರದು—ಕನವರಿಕೆಯ ರೂಪದಿಂದ ಹುಸಿತೋರಿಕೆ ಮಾತ್ರ ಎಂಬ ದೃಢನಿಶ್ಚಯದಿಂದ ಇಡಿಯ ಅನಾತ್ಮಲೋಕವನ್ನೆಲ್ಲ ಅರೆದುಬಿಟ್ಟು, ತನ್ನ ಚಿತ್ತದಲ್ಲಿ ಇಲ್ಲವಾಗಿಸಿಕೊಂಡು ಮೋಹದ ತಾಯ್ಬೇರನ್ನೆ ಸುಟ್ಟವನು (ಭಗವದ್ಗೀತೆ ೨–೬೯) ಜೀವನ್ಮುಕ್ತನು. ದೇಹಾದ್ಯನಾತ್ಮಗಳಲ್ಲಿ 'ನಾನು' ಎಂಬ ಅಹಂಕೃತಿ—ಮಿಥ್ಯಾಭಿಮಾನದ ಅಧ್ಯಾಸವು ಎಲ್ಲಿ+ ಇರದು—ಕಳಚಿಕೊಂಡಿರುವದಲ್ಲವೆ, ದೋಷ ಬೆರೆಯದ ಬುದ್ಧಿಯೆಲ್ಲಿರುವದೊ (ಭಗವದ್ಗೀತೆ ೧೮–೧೭) ಅವರು ಮುಕ್ತರು. ವೃತ್ತಿಗಳಿಂದ ಕೂಡಿರುವ ಮನಸ್ಸೆಂಬ ಕರಣವು ಎತ್ತ—ಎಲ್ಲಿ ಬ್ರಹ್ಮವಾಗಿಬಿಟ್ಟದ್ದರಿಂದ ಅಕರಣವಾಗಿ ಎಸೆಯಲ್ಕೆ—ಶೋಭಿಸುತ್ತ ಕೊನೆಗಂಡಿರುವದೋ ಅವರೇ ಜೀವನ್ಮುಕ್ತರು.

೧೯ ಮಂಜು ಮತ್ತು ಸೀಗಳಿ (?)—ಸೀಕರಿ—ಸುಟ್ಟುಹೋಗುತ್ತಿರುವ ಬೆಂಕಿಯ ಉರಿ

ಮಂಜೆಸೆಯಲುರಿಯಲ್ಲಿ ಸೀಗಳಿ-।
ಮಂಜಿನಲ್ಲಿರಲೊಂದು ವಿಸ್ಮಯ-।
ಪುಂಜಮುದಿಸದ ಧೀರ! ಜೀವನ್ಮುಕ್ತನಾ ಮನುಜ ॥ ೧೯ ॥

ನಷ್ಟ ಸಂಸಾರಾಂಕುರನು ಕಲೆ-।
ಯೆಷ್ಟಿರಲ್ನಿಷ್ಕಲನು, ಸಹೃದಯ-।
ನಷ್ಟೆ ತಾಂ ನಿಶ್ಚಿತ್ತ ಜೀವನ್ಮುಕ್ತನಾ ಮನುಜ॥
ಅಷ್ಟರೊಳ್ವ್ಯವಹರಿಸುತಿರ್ದರು ।
ದೃಷ್ಟ, ಪರಧನ ಹಾನಿಯವೊಲಪ-।
ಕೃಷ್ಟತಾಪ ಸಮೇತ ಜೀವನ್ಮುಕ್ತನಾ ಮನುಜ ॥ ೨೦ ॥

ತಿರುಹಿಬಿಟ್ಟ ಕುಲಾಲಚಕ್ರದ ।
ಪರಿಯಲಾ ಪ್ರಾರಬ್ಧ ಮಾತ್ರದೊ ।
ಳಿರುವ ತನುವಾವನದು ಜೀವನ್ಮುಕ್ತನಾ ಮನುಜ ॥
ಸುರ ನರಾದಿ ಶರೀರ ಭೇದಗ-।
ಳಿರಲಿ ತತ್ತ್ವಾಭೇದ ದೃಷ್ಟಿ-।
ಸ್ಥಿರತೆಯೆಲ್ಲಿರುತಿಹುದು ಜೀವನ್ಮುಕ್ತನಾ ಮನುಜ ॥ ೨೧ ॥

ಅವರ ವರ್ತನೆಯೆಂತಿರುವುದೆನೆ, ।
ಭವದೆ ದೃಶ್ಯತ್ಯಾಗ, ಶೋಭಾ-।
ಭವುಕ ದೃಷ್ಟಿಯನೊಂದಿ ನಿತ್ಯಂ ಸ್ವಸ್ಥರಾಗಿಹರು! ॥

---

ಎಂಬಿವು ಒಂದರಲ್ಲೊಂದು ವಿಪರೀತವಾಗಿ ಕಂಡರೂ....ಪುಂಜಂ+ಉದಿಸಿದ—ಅಚ್ಚರಿಗೊಳ್ಳದ ಧೀರನೇ ಜೀವನ್ಮುಕ್ತನು.

೨೦ ....ಸಂಸಾರ+ಅಂಕುರನು—ಅನಾದಿಕಾಲದಿಂದಲು ತನಗೆ ಹೊಂದಿ ಬರುತ್ತಿದ್ದ ದೇಹ ಸಂತಾನ—ಪರಂಪರೆಗಳು, ಅವುಗಳಲ್ಲಿ 'ನಾನು' ಎಂಬ ಅಧ್ಯಾಸವು; ದಶೇಂದ್ರಿಯಗಳು ಪಂಚ ಪ್ರಾಣಗಳು ಮತ್ತು ಮನಸ್ಸೆಂಬ ಈ ಆಧ್ಯಾಸಿಕವಾದ ೧೬ ಕಲೆಗಳು ತನ್ನಲ್ಲಿ ಕಂಡುಬಂದರು ತಾನು ಮಾತ್ರ ಅವುಗಳಲ್ಲೊಂದೂ ಇಲ್ಲದಿರುವ ನಿಷ್ಕಲನೇ ಆಗಿರುವನು. ಬೇರೊಬ್ಬರ ಧನಧಾನ್ಯಾದಿ ಗೃಹಸಂಪತ್ತುಗಳ ಹಾನಿಯು ತನಗಿಲ್ಲದಿರುವಂತೆ ಜ್ಞಾನಿಯು ಎಲ್ಲರಂತೆ ವ್ಯವಹರಿಸುತ್ತಿದ್ದರೂ ತನ್ನೊಳಗೆ ಮಾತ್ರ ಅಪಕೃಷ್ಟ—ಕ್ಷೀಣಿಸಿಹೋಗಿರುವ ಸಂಸಾರತಾಪವುಳ್ಳವನೇ ಜೀವನ್ಮುಕ್ತನು.

೨೧ ಕನಸಿನ ಪುರುಷರಲ್ಲಿ ಒಬ್ಬನಿಂದ ಮತ್ತೊಬ್ಬನಿಗೆ ಭೇದವಿಲ್ಲದಿರುವಂತೆ ಅಧ್ಯಾಸದಲ್ಲಿ ಮೈಗಟ್ಟಿದ ಪ್ರಮಾಣಗಳು ಕಂಡ ಭೇದವೂ ಭೇದವಲ್ಲವೆಂದುಪೇಕ್ಷಿಸಿದ ಆ ಸುರನರಾದಿ ಶರೀರ ಭೇದಗಳು ತನಗೆ ಬೇಕಾದಂತೆ ಕಂಡುಬರುತ್ತಿರಲಿ, ತನ್ನ ಮನಸ್ಸು ಮಾತ್ರ ವಿಚಾರದಿಂದ ಒಳ ಹೊಕ್ಕು—ತತ್ತ್ವ+ಅಭೇದ ಒಂದರಲ್ಲಿಯೇ ನಿಂತ ದೃಷ್ಟಿವುಳ್ಳವನೇ ಜೀವನ್ಮುಕ್ತನು.

೨೨ ಭವದೆ—ಸಂಸಾರದ ದೃಶ್ಯವಿಷಯಗಳಲ್ಲಿ, ತ್ಯಾಗ—ವಿರಸಬುದ್ಧಿಯಿಂದ ಹೊರಗಡೆಯಲ್ಲಿರುವ ಜ್ಞಾನಿಯು, ತನ್ನೊಳಗೆ—ಭವುಕ—ಶುಭ, ಮಂಗಲಕರವಾದ ಬ್ರಹ್ಮದ; ದೃಷ್ಟಿಯನು

ಸ್ವನೆದಿಹುದು ದುಸ್ತೃಷ್ಣೆಯೊಳಗು-।
ದ್ಭವಿಸಿದುದು ಪೊರಗಾಸೆ, ಕರ್ತೃ-।
ತ್ವವನುಳಿದ ತನಗೊಳಗೆ ಬಾಹ್ಯದೆ ವಿವಿಧ ಸಂರಂಭ ॥ ೨೨ ॥

ಅದ್ಯತನಗತ ಭಾವಿ ವಿಷಯದ-।
ಪದ್ಯೆಯೊಳಗಭಿಲಾಷವೊಂದೇ-।
ಭೇದ್ಯವಾಗಿಹುದೆಣಿಕೆಗಂ ರತಿವಾಸನಾಶೆಗಳ ॥
ಪದ್ಯದಿಂ ಕ್ರಮವಾಗಿ ಯಿವರಿಂ-।
ಹೃದ್ಯವಿೂಯಿೂ ವಸ್ತುತತಿಯೆಂ-।
ಬುದ್ಯಮವ ನಾರರಿವರವರಲಿ ನಿರ್ವಿಕಲ್ಪರಲಿ ॥ ೨೩ ॥

ತರಣಿಯಖಿಲವ ಪೀರ್ದುಂ, ವೈಶ್ವಾ-।
ನರನು ನಿಖಿಲವ ನುಂಗಿ, ವಿಶ್ವನಿ-।
ಕರವ ಮುಟ್ಟಿ ಸಮಿೂರಣನು ಪರಿಶುದ್ಧನಾದಂತೆ; ॥
ದುರಿತ ಪುಣ್ಯಪ್ರದ ಜಗದ್ವ್ಯವ-।
ಹರಣಮಧಿಕಂಬೆತ್ತು ನಿರ್ಲೇ-।
ಪರು ಮಹೇಶ್ವರರವರ ಕೃತಿ ದೌಷ್ಟ್ಯವೆಪವಿತ್ರತರಂ! ॥ ೨೪ ॥

ಪೇಲವಾಚಾರವೆ ಮೃದುತ್ವವ-।
ತಾಳಿ ಜೀವನ್ಮುಕ್ತರಿರುತಿರೆ, ।
ಕಾಲ ಸಾತ್ಕೃತವಾಗಲವರ ಶರೀರಗಳ್ತಿಳಿಯೆ-॥

---

+ಒಂದಿ—ಹೊಂದಿ ಸ್ವಸ್ಥರಾಗಿರುವವರು,....ಳಗೆ+ಉದ್ಭವಿಸಿದುದು+ಪೊರಗೆ+ಆಶೆ, ಕರ್ತೃತ್ವವನು+ಉಳಿದ—ತನ್ನೊಳಗೆ ಬಿಟ್ಟಿರುವ, ....ಸಂರಂಭ—ಸಮಾರಂಭವುಳ್ಳವರು ಜೀವನ್ಮುಕ್ತರು.

೨೩ ಮುಂದಿನ ಯೋಚನೆಯ ಗಂಧವಿಲ್ಲದೆ, ದೊರೆತಷ್ಟನ್ನೆ ನಿಶ್ಚಿಂತರಾಗಿ ಸುಖದಿಂದುಣ್ಣುತ್ತಿರುವ ಆ ಜ್ಞಾನಿಗಳಲ್ಲಿ—ಕಾಮವು, ಭೋಗವಾಸನೆಗಳು, ಅನುರಾಗವು ಎಂಬಿವು ಎಣಿಸುವದಕ್ಕಿದ್ದರೂ ನಿರ್ವಿಕಲ್ಪರಾದ ಅವರು ನಿಸ್ಸಂಗರಾಗಿರುವರು. ಆದ್ದರಿಂದಲೇ ಜ್ಞಾನಿಗಳ-ಮಾರ್ಗವಾಗಲಿ, ಪ್ರಿಯವಸ್ತುವಾಗಲಿ, ಪ್ರಯತ್ನಗಳಾಗಲಿ ಆಕಾಶದಲ್ಲಿ ಹಕ್ಕಿಗಳ ಹೆಜ್ಜೆಯನ್ನು ಕಾಣುವದಕ್ಕಿಲ್ಲದಿರುವಂತೆ ಜ್ಞಾನಿಗಳಲ್ಲಿಯೂ ಅವುಗಳನ್ನು ಗುರ್ತಿಸುವದಕ್ಕಿಲ್ಲ.

೨೪ ತರಣಿ—ಸೂರ್ಯ (ಭಾಗ....೧೧-೭-೫೦). ....ಪೀರ್ದು—ತಾನು ಹೀರಿಕೊಂಡರೂ, ವೈಶ್ವಾನರ—ಅಗ್ನಿ (ಭಾ....೧೧-೭-೪೫,೪೬), ಸಮೀರಣ—ವಾಯು (ಭಾ....೧೧-೭-೪೮), ....ಬೆತ್ತು—ಹೊತ್ತುಕೊಂಡು ಅಧಿಕವಾಗಿ ನಡೆಸುತ್ತಿದ್ದರೂ, ಮಹೇಶ್ವರರು—ನಿಸ್ಸಂಗರಾದ ಜ್ಞಾನಿಗಳು ಸರ್ವಸಮರ್ಥರು. ಕೃತಿ—ಅವರ ವರ್ತನೆಯು, ದೌಷ್ಟ್ಯವೆ—ದೂಷಿತವೇನು? ಎಂದರೆ ಅದು ಸ್ವೇಚ್ಛಾಚಾರವಾಗುವದೇಇಲ್ಲವೆಂದು ಭಾವವು. (ಭಾಗ....೧೧-೭....೯)

೨೫ ಪೇಲವ—ಸರ್ವಸುಲಭವಾದ ಆಚಾರವೆ? ಕಾಲಸಾತ್ಕೃತಂ+ಆಗಲು—ಕಾಲವಶವಾಗಿ ಅಳಿಯಲು, ಆಗ ಅವರ ಶೀಲಂ-ಸ್ವಭಾವವು, ತಮ್ಮ ನೈಜಸ್ವರೂಪವು; ಎಂತಿಹುದು+ಎನಲ್,

ಶೀಲವೆಂತಿಹುದವರೆನಲ್ವಾ-।
ತೂಲ ಮಸ್ಪಂದತೆಯ ಗಗನ ವಿ-।
ಶಾಲ ಭಾಗದೊಳ್ಬೆದಿದಂತಿರ್ಪರು ಸುಖಾತ್ಮಕನು ॥ ೨೫ ॥

ಉದಿಸನಡಗನು ಸವೆಯನಿರವಿ-।
ಲ್ಲದೆ ಮೆರೆಯ ದೂರಸ್ಥನಾಗುಪ-।
ಪದಗ ನಾಗಹಮರ್ಥಮಾಗಿದಮರ್ಥವಾಗ ನಿಜಂ ॥
ಇದಕೆ ಗಂಗಾಧರ ಮುನಿಪ ಗೀ-।
ರ್ಮೃದುಲ ಭಾಷಿತ ವಿವೃತಿಯಿಹುದುರು-।
ಪದ ಪದಂಗಳಿಗೆಲ್ಲ ಲಾಕ್ಷಣಿಕಾನುಭವಗಮ್ಯಂ ॥ ೨೬ ॥

ಬೆಳಗು ಕತ್ತಲೆ ಪೆಸರು ರೂಪಂ-।
ಗಳು ನಿಯಮ ದೃಗ್ದೃಷ್ಟಿ ದೃಶ್ಯಂ-।
ಗಳು ಮಹಾಭೂತ ಪ್ರಕೃತಿಗುಣ ಧರ್ಮಕರ್ಮಗಳು ॥
ಬಳಸಲಸದಳವಾದುದೇನೊಂ-।
ದುಳುಮೆಯುಂಟದು ತಾನೆ ತಾನಾ-।
ದುಳುಮೆಯೆಡದೆರಹಿಲ್ಲದಿರ್ಪನಖಂಡ ಚೈತನ್ಯಂ ॥ ೨೭ ॥

ಬದ್ಧ ನಾನೆಂಬಾಗ ಭೂತ ಸ-।
ಮೃದ್ಧಿಯೇನೇನಿರ್ದುದೋ ಹೃ-।
ದ್ಬುದ್ಧಿ ಸೂತ್ರಾಕೃಷ್ಟಮಾಗಾಗಿರ್ಪುದೇವಿಕೃತಿ ॥

---

ವಾತೂಲಂ+ ಅಸ್ಪಂದತೆಯ—ಚಲನೆಯನ್ನುಳಿದ ವಾಯುವು ವಿಶಾಲವಾದಾಕಾಶದಲ್ಲಿ ಒಂದಾದ ಸುಖಾತ್ಮಕರು—ದೇಹವಳಿದ ಜ್ಞಾನಿಗಳು, ಪೂರ್ಣವಾದ ಚಿದಾಕಾಶದಲ್ಲೊಂದಾಗಿರುವದು.

೨೬ ....ಯನು+ ಇರನಿಲ್ಲದೆ + ಇರುವಿಕೆಯಿಲ್ಲದೆ, ದೂರಸ್ಥನು+ ಆಗ—ದೂರದಲ್ಲಿರುವವನಾಗುವದಿಲ್ಲ, ಉಪಪದಗನು+ ಆಗ—ಬೇರೆನಿಸಿ ತನ್ನ ಹತ್ತಿರವಿರುವವನೂ ಆಗುವದಿಲ್ಲ,ಅಹಮರ್ಥಂ+ ಆಗನು+ ಇದಮರ್ಥಂ+ ಆಗನು ಎಂಬೀಪದಗಳು ಲಾಕ್ಷಣಿಕ ಎಂಬುದಕ್ಕೆ ಗಂಗಾ.... ವಿವೃತಿ—ತ್ರಿಯಂಬಕ ಗುರುಗಳು ಬರೆದ ಗ್ರಂಥವನ್ನು ನೋಡಬೇಕು.

೨೭ ದೃಗ್ + ದೃಷ್ಟಿಗೆ—ಕಣ್ಣಿಗೆ ಕತ್ತಲೆ ಬೆಳಕುಗಳು, ನಾಮ(?)ರೂಪುಗಳು ನಿಯಮದಿಂದ ಕಂಡುಬರುತ್ತಿರುವವು. ಆಕಾಶಾದಿ ಭೂತಗಳು, ಪ್ರಕೃತಿಯ ಗುಣಗಳು, ಧರ್ಮಕರ್ಮಗಳು ಎಲ್ಲವನ್ನೂ ಮೀರಿದ ಉಳುಮೆಯೇ ತಾನಾಗಿರುವನು, ಎಡದೆರಹು—ಎಡತೆರಪು—ತನ್ನಕ್ಕಪಕ್ಕಗಳಲ್ಲಿ ಬಿಡುವು ಇಲ್ಲದಿರ್ಪನು, ಮತ್ತು ಅಖಂಡಚೈತನ್ಯಮಾತ್ರನು.

೨೮ 'ನಾನು' ಸಂಸಾರಬದ್ಧನೆಂಬಲ್ಲಿ ಭೂತಗಳ ಸಮೃದ್ಧಿ—ಕಾರ್ಯಗಳಾದ, ಹೃತ್—ಮನ, ಬುದ್ಧ್ಯಾದಿಗಳು ಮತ್ತು ಶರೀರೇಂದ್ರಿಯಗಳು ತನ್ನಲ್ಲಿ ಕಂಡುಬರುತ್ತಿದ್ದದ್ದು ಸರಿಯಷ್ಟೆ? ನಾನು ಎಂದು ಮಾಡಿಕೊಂಡಿದ್ದ ಅವುಗಳಲ್ಲಿನ ಅಧ್ಯಾಸವೆಂಬ, ಸೂತ್ರ—ದಾರದಿಂದ ನಮ್ಮ ಪ್ರತ್ಯಗಾತ್ಮನು ಆ ಅನಾತ್ಮವರ್ಗಗಳಲ್ಲಿ, ಆಕೃಷ್ಟಂ—ಎಳೆಯಲ್ಪಟ್ಟು ಬಿಗಿಮಾಡಿದ ಪುಟ್ಟುಹೊಂದು

ಸಿದ್ಧನಾದಾಮೇಲೆ, ಘನ ಸಂ-|
ಸಿದ್ಧಿ ಬೇರೊಂದೊಂದಿತೇ, ಪರಿ-|
ಶುದ್ಧ ಸತ್ತೇ ಚಿತ್ತು, ಚಿತ್ತೇ ಸುಖ, ಸುಖವೆಯಾತ್ಮಂ || ೨೮ ||

ನಿರತಿಶಯಸುಖವಾದ ಸಾಕ್ಷಾ-|
ಚ್ಚರಮ ತತ್ತ್ವವೆ ಯಾವುದೊಂದೀ-|
ಪರಿಪರಿಯ ಲೀಲಾ ವಿಕೃತಿಗೆಡೆಯಾಯ್ತದೇ ತತ್ತ್ವಂ ||
ವರನೆನುತ್ತೇ ಪುರುಷನಂಗವ-|
ವರಿಸಿಯುಪಲಕ್ಷಿಸಲು ಪಟ್ಟಿ-|
ತ್ತಿರದಿರಲ್ಕೆ ಕಳೇಬರಂ ತತ್ತತ್ತ್ವವೆಂತೆನಲು, || ೨೯ ||

ಮನದ ವೃತ್ತಿಕ್ಷಯದೆ ತನ್ನಯ |
ತನುವೆನಿಪ ನಾನಾ ಭುವನ ವಾ-|
ಸನೆಯಳಿಯೆ ನಿಜಗುಣವೆರಸಿಯವಸಿಷ್ಠಮಾಗಾವ-||
ಘನಮಿಹುದರೂಪವದು, ಕುರುಹಿನ-|
ಕೆನೆಗೆ ನಿಲುಕದವಾಚ್ಯವದು, ಚೇ-|
ತನವೆ ತಾನೆಂದೆನಿಪುದಾ ವಸ್ತುವೆ ಪರಮ ತತ್ತ್ವಂ || ೩೦ ||

ಯಾವುದರಿವಿನ ನಿಜಕೆ ದೃಶ್ಯವ-|
ನಾವರಿಸದಂಟದೆ ಬೆರೆಯದಿಹ-|
ಭಾವಮುಂಟದು ತಾನೆ ಶಬ್ದಾದೀಂದ್ರಿಯಾರ್ಥಗಳ-||

---

ಗಳ ಕಟ್ಟುವಡೆದು ತನ್ಮಯನಾಗಿ ಅವುಗಳಲ್ಲಿಯೇ ನಿಂತುಬಿಟ್ಟಿದ್ದನಷ್ಟೆ, ಅದೇ ಆತ್ಮನಿಗೆ ಸಂಸಾರ ಬಂಧದ ವಿಕೃತಿಯೆಂಬುದು: ಮತ್ತೊಂದಿರುವದಿಲ್ಲ. ಆ ಅಧ್ಯಾಸವೆಂಬ ಸಂಸಾರಬಂಧದ ಈಗ ಬಿಡುಗಡೆಯನ್ನು ಹೊಂದಿದ ಬಳಿಕ, ಘನ ಸಂಸಿದ್ಧಿ—ಮುಕ್ತಿಯೆಂಬುದು ಒಂದಿನ್ನೊಂದನ್ನು ಬಿಟ್ಟಗಲದ ಸತ್ತು ಚಿತ್ತು ಸುಖಗಳು ತನ್ನ ಸ್ವರೂಪವಾಗಿರುವ ಆತ್ಮನೇ ತಾನಾಗುಳಿದುಕೊಳ್ಳುವದಕ್ಕಿಂತಲೂ ಬೇರೊಂದೆಂಬುದು ಹೊಂದುವದೇ ಇಲ್ಲ.

೨೯ ಸಾಕ್ಷಾತ್+ಚರಮ—ಪರಮಗತಿಯಾಗಿರುವ, ಅಧ್ಯಾಸವನ್ನು ಬಿಡಿಸಿಕೊಂಡು ತನ್ನಾತ್ಮನನ್ನು ತಿಳಿಯುವ ರೀತಿ ಹೇಳಿದ್ದಾಯಿತು. ಸುಲಭವಾದ ಮತ್ತೊಂದು ಪ್ರಕಾರವನ್ನು ಹೇಳಬೇಕು?

೩೦ ಹುಟ್ಟು ಹೊಂದುಗಳುಳ್ಳ ಮನಸ್ಸಿನ ವೃತ್ತಿಗಳನ್ನು ಗುರ್ತಿಟ್ಟುಕೊಂಡು ಮತ್ತು ಹೊರಗಿನ ವಾಸನೆಗಳನ್ನೆಲ್ಲ ಬಿಟ್ಟು ಅಂತರ್ಮುಖನಾಗಿ ಜಿಜ್ಞಾಸುವು ಆತ್ಮನನ್ನರಿಯಬೇಕು. ಆಗ ಆತ್ಮನು ಮತ್ತೂ ಹೇಗಿರುವನು? ಎಂದರೆ ನಿಜಗುಣವೆರಸಿ—ತನ್ನ ನಿರ್ವಿಕಾರಸ್ವರೂಪದಲ್ಲಿಯೇ ಅವಶಿಷ್ಟನಾಗಿ ನೆಲಸಿರುವ, ಘನಂ+ಇಹುದು—ನಿರತಿಶಯವಾದಾತ್ಮತತ್ತ್ವವು-ತಾನು ರೂಪಿಲ್ಲದ್ದು, ಇಂಥದ್ದೆಂದು ಗೊತ್ತಾದ ಒಂದು ಕುರುಹಿನ, ಕೆನೆಗೆ—ಸತ್ವಕ್ಕೆ, ನಿಲುಕದ+ಅವಾಚ್ಯವು—ತನ್ನ ನಾಲಿಗೆಯಿಂದ ಅದನ್ನು ಹೀಗೆಂದು ವಚಿಸುವದಕ್ಕಿಲ್ಲದ್ದು.

೩೧ ಆವರಿಸದು—ಮೇಲ್ಮುಸಕುವದಿಲ್ಲ, ಅಂಟ....ಭಾವಂ—ಅಧ್ಯಾಸಕ್ಕೆ ಹೊರಚ್ಚಾಗಿರುವದರಿಂದ ಅನಾತ್ಮ ಸೋಂಕಿಲ್ಲದ ಸದಾತ್ಮನು ಚೇತೋಭಾವಂ-ಜೀವನಾಗಿ ತೋರಿಕೊಳ್ಳುತ್ತಿರುವ,

ಸೇವಿಸದೆ, ದೇಹವನು ಪಿಡಿದೇ ।
ಜೀವಿಸುತ ವರ್ತಿಸುವ ಚೇತೋ ।
ಭಾವಮಾಗಿರುತಿರ್ಪುದಾ ವಸ್ತುವೆ ಪರಮ ತತ್ತ್ವಂ ॥ ೩೧ ॥

ಕನಸಿನುಪಟಳವಿಲ್ಲದಾಂತರ-।
ವೆನಿಪ ಜಡವಂಟದ ಮನಸ್ಸಂ-।
ಜನಿತ ಜಾಗ್ರದ್ವಾಸನಾ ಪಂಕಿಲವೆಸಗದಿರ್ಪ ॥
ಘನತರದ ನಿದ್ರೆಯು ನಿಜಂ ತಾ-।
ನೆನಿಪುದಾವುದೊ ಸಕಲ ಜಗತೀ-।
ಜನನ ಲಯಕಾರಣವದಾ ವಸ್ತುವೆ ಪರಮ ತತ್ತ್ವಂ ॥ ೩೨ ॥

ಮನದ ಬುದ್ಧಿಯ ವೃತ್ತಿಗಳ ಕ-।
ರ್ಮನಿಯಮದಿ ಭೇದಿಸಿ ತಿಳಿದ ವೇ-।
ದನವೆಯಲ್ಲದೆ ಧೃತವಿಶೇಷಮದಾವುದಲ್ಲಿ ಪರಂ- ॥
ಅನುಪಮವು ಅದು ದೃಕ್ಕು, ತೇಜೋ-।
ಘನಂ ಅದರಿಂದಖಿಲ ಚೇತನ-।
ವೆನಿಸಿಕೊಂಡಿರುತಿರ್ಪುದಾ ವಸ್ತುವೆ ಪರಮ ತತ್ತ್ವಂ ॥ ೩೩ ॥

ವ್ಯವಹರಿಪರಖಿಲಾರ್ಥ ಸಿದ್ಧ-।
ವ್ಯವಹೃತಿಯಲೇ ಯಾವುದಲುಗದೆ-।
ಶಿವ ಶರಾಸನದಂತಿಹುದು, ಭೂತಗಳ ಸಂತತಿಯಿಂ-॥
ಕವಿಯದಾಕಾಶದೊಳಗಾಕಾ-।
ಶವೆಯೆನಿಸಿ, ನಿರ್ಲೇಪವಮಾಗಿಯೆ ।
ಶಿವಮೆನಿಪುದಾ ನಿತ್ಯಮಹ ವಸ್ತುವೆ ಪರಮ ತತ್ತ್ವಂ ॥ ೩೪ ॥

---

೩೨ ಉಪಟಳ—ಉಪದ್ರವ, ಜಡವು—ಅನಾತ್ಮ, ಅಜ್ಞಾನವು; ಪಂಕಿಲ—ವಾಸನೆಯೆಂಬ ಕೆಸರುಳ್ಳ ಪ್ರದೇಶವು, ಎಸಗದಿರ್ಪ—ಸೋಕುವದಕ್ಕಿಲ್ಲದ, ಘನತರದ—ಗಾಢನಿದ್ರೆಯು; ಜಗತೀ—ಈ ಸರ್ವ ಜಗತ್ತಿನ ಜೀವರ,

೩೩ ....ಕರ್ಮ—ವಿಕಾರಗಳನ್ನೆಲ್ಲ ಭೇದಿಸಿ, ಒಳಹೊಕ್ಕು—ಅದನ್ನರಿಯುವ ಬರಿಯ ಜ್ಞಾನಮಾತ್ರ ಸ್ವರೂಪವಲ್ಲದೆ, ಧೃತ—ತನ್ನಲ್ಲಿಯೆ ಎಲ್ಲವನ್ನು ಎತ್ತಿ ಹಿಡಿದುಕೊಂಡಿರುವ, ವಿಶೇಷಂ+ಅದು+ಆವುದಲ್ಲಿ, ಪರಂ+ಅನುಪಮವು+ಅದು ದೃಕ್ಕು—ಎಲ್ಲವನ್ನು ನೇರಾಗಿ ಬೆಳಗುವ, ತೇಜೋಘನಂ—ಅಧಿಕವಾದ ಬೆಳಕು.

೩೪ ಶಿವಶರಾಸನ—ಶಿವನ ಬಿಲ್ಲಾದ ಮೇರುವಿನಂತೆ, ....ಸಂತತಿಯಿಂ—ಶರೀರೇಂದ್ರಿಯಗಳಿಂದ,

೩೫ ತ್ರಿಪುಟಿಗೆ—ಜ್ಞಾತೃ ಜ್ಞಾನ ಜ್ಞೇಯಗಳ ಮುಕ್ಕುಪ್ಪೆಗೆ, ವಪುವಿನಿಂ—ಚೇತನ ಶರೀರಗಳಿಂದ ಅನುಮೇಯವು—ಊಹಿಸಿ ತಿಳಿಯತಕ್ಕದ್ದು, ಈಪಾದಪ—ತನ್ನ ಬೇರಿನಿಂದ ನೀರನ್ನು

ತ್ರಿಪುಟಿಗಾಶ್ರಯವಾವುದಾವುದು-।
ವಪುವಿನಿಂದನುಮೇಯವೀ ಪಾ-।
ದಪಗಳಲ್ಲಿಯ ನಿಜವೆಯಾವುದು ಬೋಧಮಯವಾಗೆ ॥
ಅಪರಿಮಿತ ಸಂಕಲ್ಪ ದೋಷ-।
ವ್ಯಪಗತಮದಾವುದು, ವಿರಿಂಚಿ ।
ತ್ರಿಪುರಭಿದ್ಧರಿಮುಖ ಚಿದವಗತಮಾವುದದು ಬ್ರಹ್ಮಂ ॥ ೩೫ ॥

ಹೀಗೆ ಹೇಳಿದ ಶುದ್ಧ ತತ್ತ್ವವೆ ।
ಭೋಗಮಂತಂ ವಡೆಯೆ ಪ್ರಾರ-।
ಬ್ಧಾಗತಿಯ ತಾವಾಗಿರುವರಧ್ಯಾತ್ಮತತ್ಪರರು ॥
ಈಗಲೋ, ತಾವಾಗಿ ಚಿತ್ತದ ।
ವೇಗವಿಲ್ಲದೆ, ತೋರ್ಕೆಯಿಂ ಪೊರ-।
ಗಾಗಿರದೆ ನಿರ್ಭಂಗವಾರಿಧಿಗಳಂತಿರುವರೈಸೆ ॥ ೩೬ ॥

ಆದುದಿಷ್ವಾಗುತ್ತಿರುವದಿ-।
ಷ್ಟಾದರಾಗಲ್ತಕ್ಕುದಿಷ್ಟೆಂ-।
ದೈದಿ ಭೋಗ್ಯದ್ರವ್ಯಗಳಲುಪಯೋಗ್ಯ ವಸ್ತುಗಳ-॥
ಬೀದಿಯೊಳಗೋಡಾಡುತಿಹ ಮನ-।
ವೈದೆ ನಾಶವನಾ ಬಳಿಕ ಜಗ-।
ದಾದಿ ಮೂಲಪ್ರಕೃತಿಯೆಂಬ ಮುದುಕಿಯ ಕೈಲಿರುವ-। ॥ ೩೭ ॥

---

ಕುಡಿಯುವ ಗಿಡ ಮರ ಬಳ್ಳಿಗಳೆಂಬ ಸ್ಥಾವರಜೀವರ, ಭೋಧ—ಬರಿಯ ಜ್ಞಾನವಾಗಿರುವ, ....ವ್ಯಪಗತಂ—ತನ್ನನ್ನು ಬಿಟ್ಟು ಸಂಪೂರ್ಣ ಕಳೆದುಹೋಗಿರುವ, ವಿರಿಂಚಿ—ಬ್ರಹ್ಮನು, ತ್ರಿಪುರ ಭಿದ್—ಶಿವನು, ಹರಿ—ವಿಷ್ಣುವು, ಮುಖ—ಮೊದಲಾದ ಈ ಧೇವತಾಮುಖ್ಯರಲ್ಲೆಲ್ಲ ಭಿಡದಂತೆ, ಅವಗತಂ—ಅನುಸರಿಸಿಕೊಂಡಿರುವ, ಚಿತ್—ಜ್ಞಾನವಸ್ತುವೇ ಪರಬ್ರಹ್ಮವು.

೩೬ ಈ ಲಕ್ಷಣಗಳುಳ್ಳ ಪರಿಶುದ್ಧಾತ್ಮತತ್ತ್ವವೆ ತಮ್ಮ ಸ್ವರೂಪವಾಗಿರುವ ಜ್ಞಾನಿಗಳು, ಪ್ರಾರಬ್ಧ (ಕರ್ಮದಿಂದ ತಮಗೊದಗಿ)+ಆಗತಿ—ಬಂದಿರುವ, ಭೋಗಂ+ಅಂತಂ+ಒಡೆಯೆ—ಕೊನೆಗಾಣಲಾಗಿ, ಅಧ್ಯಾತ್ಮತತ್ಪರರು—ತನ್ನೊಳಗಿನ ಆತ್ಮಪರಾಯಣರು, ಈ ಮೊದಲೇ ತಮ್ಮ ಸ್ವರೂಪದಿಂದ ಸ್ವತಸ್ಸಿದ್ಧವಾಗಿದ್ದ ಶುದ್ಧ ತತ್ತ್ವ—ಆಧ್ಯಾಸಿಕಮಲವಿಲ್ಲದ ಪರಮಾರ್ಥಬ್ರಹ್ಮವೇ ತಾವಾಗಿ ನಿಲ್ಲುವರು; ಪೊರಗಾಗಿರದೆ—ಚಿತ್ತನಿರೋಧಾದಿಗಳಿಲ್ಲದೆ, ನಿರ್ಭಂಗವಾರ್ಧಿ—ಅಲೆಗಳಿಲ್ಲದ ಶಾಂತಿಸಾಗರದಂತಿರುವರು!

೩೭ ಕ್ಷಣವೂ ಬಿಡದಂತೆ ಭೋಗ್ಯವಿಷಯಗಳಲ್ಲಿಯೇ ಸಂಚಾರವುಳ್ಳ ಈ ಮನಸ್ಸು—ಒಳಹೊಕ್ಕು ಆ ವಿಷಯಗಳ ಯೋಗ್ಯತೆಗಳನ್ನೆಲ್ಲ ಪರಿಶೀಲಿಸಿ, ವಿವೇಕದ ಸರಿತಕ್ಕಡಿಗಿಟ್ಟು ಅವುಗಳನ್ನು ತೂಗಿಸಿ ನೋಡಿಕೊಂಡಿರುವ ತಾನು ನಿಸ್ಸಾರತೆಯನ್ನು ಮನಗಂಡದ್ದರಿಂದ ತಾನು ಆ ವಿಷಯಗಳಲ್ಲಿ ಉದಾಸೀನತ್ವವನ್ನು ವಹಿಸಲು—

ಕೋಲು ಮುರಿದುದು, ನಾಮರೂಪದ-।
ಕಾಲೆರಡು ನಡೆದಾಡುವದಕೆ ವಿ-।
ಶಾಲ ಬಲ ಬರದಾಯ್ತು, ಸದಖಂಡ ಪ್ರಬೋಧವನು-॥
ಹೇಳಿದಾಕ್ಷಣ ಗುರುವದೆರಡರ-।
ಕೀಲು ಕಳಿದಿರ್ದುದು, ಕಳೆದ ಕೀ-।
ಲ್ಗೆಳಿಗೆಯು ಬರತಕ್ಕುದಾದರೆ ಹರೆಯವಾಗುವದೆ ॥ ೩೮ ॥

ಇನ್ನು ಮಾಯೆಗೆ ಮಾಯೆಯೆಂಬುದೆ-।
ಸೊನ್ನೆಯಾ ಸೊನ್ನೆಯ ಮೊದಲಿಗೆರೆ-।
ಯನ್ನು ಸೊನ್ನೆಯೊಳಿರಿಸೆ ಪೇಳುವಳೆಣಿಕೆಗಳವಡದೆ ॥
ಸೊನ್ನೆಯರ್ಥವದೀಶನಾತನೆ ।
ಸೊನ್ನೆಯಾದರೆ ಮುಂದೆ ಬಳವಿಗೆ-।
ಗಿನ್ನಿಹುದೆ ನಾನಾ ವಿಕಾರನದೆಲ್ಲಿ ತಿಳಿಯಲ್ಕೆ; ॥ ೩೯ ॥

ಇದುವೆ ನೆಲೆಯೆಂದಿನಿಪ ಕೈಲಾ-।
ಸದಲಿ ದೇವರ್ಕಳಿಗೆ ವ್ಯೆದೋ-।
ರಿದನು ರುದ್ರಾಧ್ಯಾಯ ಪಾರಾಯಣದ ಬಲದಿಂದ ॥
ಇದಿರೊಳಂತರ್ಧಾನವಮಂ ಸಾ-।
ರಿದನವರ್ಕಳ ಶಂಭುವೆಂತೆಂ-।
ಬುದರ ದೆಶೆಯಿಂದಹ ನಿರಂಜನನೀಗೆ ಶಿವಪದವಮಂ ॥೪೦॥

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೋಳ್ ಜೀವನ್ಮುಕ್ತಲಕ್ಷಣ ಪುರಸ್ಸರ ವಸ್ತುಸ್ಥಿತಿಯಂ ಪೇಳಿದ ಹದಿನಾಲ್ಕನೆಯ ಸಂಧಿ ಸಮಾಪ್ತಂ (ಪ॥ ೮೪೧)

---

೩೮ ....ಗುರುವು+ಅದು+ಎರಡರ—ಆ ಕಾಲುಗಳೆರಡರ, ಕೀಲು+ಕಳಿದಿರ್ದುದು— ಕಳಿಚಿಕೊಂಡಿತು, ಕಳಚಿಕೊಂಡಿರುವ ಆ ಕೀಲ್ಕೆ+ಏಳಿಗೆ—ಬಲವು,ಹರೆಯ–ಪುನಃ ಆ ಮಾಯೆಗೆ ಪ್ರಾಯ ಬಂದೀತೆ?

೩೯ ಮೊದಲಿಗೆರೆ—೧ ಎಂಬ ಸೊನ್ನೆಯ ಈ ಮೊದಲಿನ ಗೀಟನ್ನು ಸೊನ್ನೆಯ ಪಕ್ಕದಲ್ಲಿಟ್ಟರೆ—೧೦,೦,೦೦೦, ....ಏಕ, ದಶಕ, ಶತಕ, ಸಹಸ್ರ, ದಶಸಹಸ್ರ ಎಂದು ಪ್ರಾರಂಭಿಸಿ ಅನಂತ, ಮಹಾನಂತ, ಊರ್ಧ್ವ, ಪರಾರ್ಧ ಎಂದು ಸೊನ್ನೆಯ ರೂಪದ ಆ ಮಾಯೆಯು ಅಗಣಿತ ಸಂಖ್ಯೆಯಾಗಿಬಿಡುತ್ತಿರುವದು! ಹೀಗೆ ಮಾಯೆಯೂ ಈಶ್ವರನೂ ಸೊನ್ನೆಯ ರೂಪಾಂತರವಾದರೆ ಇನ್ನು ಸೃಷ್ಟಿ ಎಂಬುದೆಲ್ಲಿ ಬಂತು ?

೪೦ ಭಕ್ತಿಭಾವದಿಂದ ಪಠಿಸಿದ ಸ್ತೋತ್ರದಿಂದ ಕೈಲಾಸದಲ್ಲಿ ಪ್ರತ್ಯಕ್ಷನಾದ ಶಿವನನ್ನು ದೇವತೆಗಳು ಸಂದರ್ಶಿಸಿದರೂ, ತಾವು ಅತಿಶಯದ ಪದವೀಧರರೆಂಬ ಅಭಿಮಾನದ ತೆರೆಯು ಬಿದ್ದ ಕೂಡಲೆ ಆ ದೇವತೆಗಳಿಗೆ ಶಿವನು ಮರೆಗೊಂಡಿದ್ದರು ತನಗೇ ಮಾತ್ರ ಆ ತೆರೆಮರೆಗಳೊಂದೂ ಇಲ್ಲದ ಆ ನಿರಂಜನನು ರಕ್ಷಿಸಲಿ.

ಓಂ ತತ್‌ಸತ್

# ಬ್ರಹ್ಮವಿಶ್ರಾಂತಿ ನಿರ್ಣಯ—ಹದಿನೈದನೆಯ ಸಂಧಿಯು

ಸೂ ॥ ಇಲ್ಲಿ ನಿಖಿಲ ತ್ಯಾಗದಿಂ ನಿಜ-।
ದಲ್ಲಿ ವಿಶ್ರಾಂತಿಯು ಮನಸ್ಸಿಗೆ ।
ಪಲ್ಲವಿಪ ದೆಶೆಯಿಂದ ಪೇಳಲ್ಪಡುವದತಿಗಾಢಂ ॥ ಪ ॥

ಮನದೆ ಕಾಂಕ್ಷೆಯ ಕಪ್ಪು, ವಚನದೆ ।
ಘನರ ನಿಂದೆಯ ಕಪ್ಪು, ಕಾಯದೆ-।
ಮನೆಯ ಮುರಿದನ್ಯರ ತದರ್ಥದಿ ಜೀವಿಸುವ ಕಪ್ಪು-॥
ತನಗಿನಿತು ಜಡೆಗಟ್ಟಿರಲ್ಸ-।
ಜ್ಜನರ ಮಧ್ಯದೆ ಳುಳ್ಳಿರುವ ನೂ-।
ತನರು ಜಂಗಮರವರ್ಗುಸಿರದಿಹುದೀ ಕಥಾಶ್ರುತಿಯ ॥ ೧ ॥

ಬಂದುದೀ ಸಂಸಾರ ವಾಸನೆ-।
ಯಿಂದ ಮನಕಾವಾಸನೆಯು ತಾ-।
ನೊಂದೆರಡು ರೂಪಾಗಿಹುದು ಪರಿಶುದ್ಧಮಯವಾಗಿ-॥
ಒಂದು, ನಾನಾ ವಿಕೃತಿಮಯವಮಾ-।
ಗೊಂದು ಮೊದಲನೆಯದೆ ನಿವೃತ್ತಿಯ-।
ತಂದುಕೊಡುವದು, ಎರಡನೆಯದೀವುದು ವಿಪತ್ತಿಯನು ॥ ೨ ॥

ಯಾವ ವಾಸನೆ ಇರಲು, ಜನ್ಮಗ-।
ಳಾವರಿಸದಾತುಮನ, ಭರ್ಜಿತ-।
ಯಾವ ಆವಸಿತಗಳ ತೆರದಿಂ ಭೋಗಮಾತ್ರದಲುರೆ-॥
ಜೀವಿಪುದರಿಂ ಶುದ್ಧಮೆಂದೇ ।
ಭಾವಿಸಲ್ಪಟ್ಟುದು ವಿಬುಧರಿಂ-।
ದೀ ವಿಶೇಷಾಸ್ಥೆಯೆ ಸುಜೀವನ್ಮುಕ್ತಿಪದಮಹುದು ॥ ೩ ॥

---

ಸೂ॥ ಪಲ್ಲವಿಪ—ವಿಕಾಸವಾಗುವದರಿಂದ, ಅತಿಗಾಢಂ—ಉರುಸಂಭ್ರಮದಿಂದ,

೧ ಕಪ್ಪು—ದೋಷ, ಘನ—ಅಧಿಕ ಪೂಜ್ಯರ, ತದರ್ಥದಿ—ಪರರ ಸ್ವತ್ತಿನಿಂದಲೇ,

೨ ನಾನಾವಿಕೃತಿ—ಬಗೆಬಗೆಯ ಭೋಗವಿಕಾರಗಳಿಂದ ಅಶುದ್ಧವಾಗಿರುವ ಮತ್ತೊಂದು, ನಿವೃತ್ತಿ—ಬಂಧ ಬಿಡುಗಡೆಯನ್ನು, ವಿಪತ್ತಿಯನು+ಈವುದು—ತನಗೆ ತಂದುಕೊಡುವದು,

೩ ಆವರಿಸದು—ಬಂದು ತನಗೆ ಮುಸುಕುವದಿಲ್ಲವೋ, ಭರ್ಜಿತ—ಹುರಿದ, ಆವಸಿತಗಳ—ಧಾನ್ಯ, ಕಾಳು ಇವು ಪುನಃ ಮೊಳೆಯುವುದಕ್ಕಿಲ್ಲದಿರುವಂತೆ, ಜೀವಿಪುದರಿಂ—ಕೊನೆಗಾಣುವದರಿಂದ, ಈ ವಿಶೇಷ+ಆಸ್ಥೆಯೆ—ಆಸ್ಥಾ—ತನ್ನಾತ್ಮನಲ್ಲಿಯೇ ವಿಶ್ರಮಿಸಿಕೊಂಡಿರುವದೆಂಬ ತತ್ಪರತ್ವ ಸ್ಥಿತಿ ವಿಶೇಷವೇ ಜೀವನ್ಮುಕ್ತಿಯು.

ಮಲಿನ ವಾಸನೆಯೆ ಮರವೆನಿಪುದು ।
ಬಲಿದುದಭಿಮಾನದಿ ಶರೀರಂ ।
ಕಳಿದ ಕಾಯಂಗಳೆ ಪಲಾಶಗಳದುವೆ ಘನಶಾಖೆ-॥
ಮೊಳೆವ ಜನ್ಮಸಹಸ್ರಮೇ ಕೆಂ-।
ದಳಿರಗೊಂದಣ ಜನ್ಮಮಧ್ಯದೊ-।
ಳೊಲಿವ ಸುಖದುಃಖಗಳು, ಭೇನಾತಪಗಳರಿಯಲ್ಕೆ- ॥ ೪ ॥

ವ್ಯಕ್ತಿಯಿರ್ದುದೆ ಮನಕೆ ಜೀವ-।
ನ್ಮುಕ್ತಿ, ಸತ್ಸಾಕಾರದಿಂದಾ-।
ವ್ಯಕ್ತಿಯಿಂ ತೋರದುದೆ ತಿಳಿಯೆ ವಿದೇಹತೆಯನಾಂತ-॥
ಮುಕ್ತಿ, ಮೈತ್ರ್ಯಾದಿಗಳೊಡನೆ ಸಂ-।
ಪೃಕ್ತನಾಗಿಹ ಚಿತ್ತದಿಂದನು-।
ಷಿಕ್ತನಾಗದು ಕೇಡಿದಲ್ತೆ ವಿಶುದ್ಧವಾಸನೆಯು ॥ ೫ ॥

ಪೊಸತೆನಿಪ ಪೂಸುಗ್ಗಿಯಲಿ ಕ-।
ಣ್ಗೆಸೆವ ಗೊಂಚಲವಿಂಡಿನಂತೆ; ವಿ-।
ಲಸಿತವಾಗಿರ್ಪುದು ಮಹಾ ಸಂಸ್ಕಾರಮದರಿಂದ-॥

---

೪ ಮಲಿನವಾಸನೆ ಎಂಬುದೇ ಹೆಮ್ಮರವು. ದೇಹಾದ್ಯನಾತ್ಮಗಳಲ್ಲಿ ಸಂದುಬಿಡದಂತೆ ತುಂಬಿರುವ ನಾನೆಂಬಭಿಮಾನದಿಂದ ಅದರ ಶರೀರವು ದೃಢಮೂಲವಾಗಿ ಬಲಿತುಕೊಂಡಿತು. ಕಳಿದುಹೋಗಿರುವ ಹಿಂದಿನ ಕಾಯಂಗಳೇ ಉದುರಿದ ಹಣ್ಣೆಲೆಗಳು, ಮುಂದೆ ಮೊಳೆಯುವ ಸಾವಿರಾರು ಜನ್ಮಗಳೇ ಶಾಖೋಪಶಾಖೆಗಳು, ಸಂಸಾರದಲ್ಲಿ ಬಿಡುವಿಲ್ಲದಂತೆ ತನ್ನನ್ನು ಎದುರಿಸುವ ಸುಖದುಃಖಗಳೇ ಅದರ ಕೆಂದಳಿರು ಗೊಂದಣ—ಒಂದಕ್ಕೊಂದು ಸಂದುಬಿಡದಂತೆ ಬೆಳೆದುಕೊಂಡಿರುವ ಕೆಂಚಿಗುರಿನ ಗೊಂಚಲಗಳು, ಇದನ್ನೆಲ್ಲ ನಿಮಿಷಮಾತ್ರದಲ್ಲಿ ಒಣಗಿಸಿ ನಾಶಪಡಿಸುವದರಲ್ಲಿ ಶುದ್ಧವಾಸನೆಯೆಂಬುದು ಶಿಶಿರಋತುವಿನ, ಭೇನ+ಆತಪ—ಸೂರ್ಯನ ಕಡು ಬಿಸಿಲಿನಂತಿರುವದು. ಆ ಶುದ್ಧವಾಸನೆಯು ಎಂದರೆ—

೫ ಮನಸ್ಸಿದ್ದರೆ ಜೀವನ್ಮುಕ್ತಿಯು; ಆ ಮನಸ್ಸು ಪುನಃ ತನ್ನಲ್ಲಿ ತೋರಿಕೊಳ್ಳದೆ, ಸತ್ಸಾಕಾರ—ಬ್ರಹ್ಮವಾಗುಳಿದುಕೊಳ್ಳುವದೇ ವಿದೇಹಮುಕ್ತಿಯು—ಎಲ್ಲರಂತೆ ತಾನೂ ಬದುಕಿದ್ದಂತೆ ಇಲ್ಲಿಯೆ ಜ್ಞಾನದಿಂದ ತನಗೆ ದೊರೆಯುವಮುಕ್ತಿಯೆ ಜೀವನ್ಮುಕ್ತಿಯು; ಅಶರೀರಾತ್ಮ ಜ್ಞಾನಕ್ಕಿಂತ ಮುಕ್ತಿ ಬೇರಲ್ಲವೆಂಬುದಾಚಾರ್ಯಮತವು. ಮೈತ್ರಿ, ಮುದಿತೆ, ಉಪೇಕ್ಷೆ, ಕರುಣೆ ಎಂಬೀ ಜ್ಞಾನರಕ್ಷೆಗಳಿಂದ ಚಿತ್ತವು, ಸಂಪೃಕ್ತಂ—ಒಡಗೂಡಿದ್ದರೆ ಅದರಿಂದ, ಅನುಷಿಕ್ತಂ+ಆಗದು—ತನ್ನನ್ನನುಸರಿಸಿಕೊಂಡು ಕೇಡಾಗುವದಿಲ್ಲ.

೬ ಉದ್ಯಾನವನದಲ್ಲಿ ವಸಂತಋತುವಿನ ಹೊಸಹೂವಿನ ಸುಗ್ಗಿಯ ಕಾಲದಲ್ಲಿ ಎಲ್ಲೆಲ್ಲಿಯೂ ಸುವಾಸನೆಯನ್ನು ಬೀರುತ್ತ ಕಂಗೊಳಿಸುವ ಹೂಗೊಂಚಲುಗಳ ಹಿಂಡಿಲುಗಳಂತೆ ಅನಂತಜನ್ಮಗಳಲ್ಲಿ ತಾನು ಅನುಭವಿಸಿದ ಭೋಗಗಳ, ವಿಲಸಿತ—ವಿಚಿತ್ರವಾಗಿ ಹೊಳೆಯುವ ಉದ್ಬುದ್ಧ

ಕೆಸರೊದಗದೇ ಎನೆ, ಸಮಸ್ತಾ-।
ಭ್ಯಸದ ಕರ್ಮಫಲಂಗಳಜ್ಞಂ-।
ಗೆಸೆವವಾಯಾ ಜನ್ಮಕೋಟಿಗಳಲ್ಲಿ ದುರ್ಭೋಗ್ಯಂ ॥ ೬ ॥

ಜ್ಞಸಿಗೆ ತದ್ಧೇತು ಕ್ಷಯಂ ಸಂ-।
ಜನಿಸಿದುದರಿಂದೆಲ್ಲವುಂ ಶುಭ-।
ಮೆನಿಸಿತೆಂತೆನಲೈದು ರುತ್ವಂತರ ಮಿತರಮಾದ-॥
ದಿನದ ಷಷ್ಮಿಯ ಭಾವಂ ಎಂತು-।
ಮನನಗನ್ಯಮೊ ಹಾಗೆಯಾ ನಾ-।
ಸನೆಯು ಕೇಡೆಂತಹುದೆನಲ್ಕದು ವಿಪತ್ತಿಯಿಂದಹುದು ॥ ೭ ॥

ಪರಿಮಿತಾವಯವಿಯಲ! ತಾನೆಂ-।
ಬರುಹು ಮಾಜಲು, ಬ್ರಹ್ಮವೇ ವಿ-।
ಸ್ಫುರಿಪುದಖಿಲಾಕಾರದಿಂನೆಂಬಂತರನುಭವದಿಂ ॥
ಮರಳಿ ಪುಟ್ಟದು ಜನನ ಮರಣಾ-।
ಕರವೆನಿಪ ವಾಸನೆಯು, ವಾರಿಧಿ-।
ಮರು ವಿಷಯದೊಳಗೆಸೆಯದಂದದಿ ಜಲಚರ ಪ್ರಚರಂ ॥ ೮ ॥

---

ಸಂಸ್ಕಾರಗಳು ಮೇಲೆದ್ದವುಗಳಾಗಿ ಚಿತ್ತದ ಉದ್ಯಾನವನದಲ್ಲಿ ತನ್ನದೇಆದ ನೂತನ ಶೋಭೆಯನ್ನು ವಿಸ್ತರಿಸುತ್ತಿರಲು,ಅದರಿಂದ ಜ್ಞಾನಿಯ ಚಿತ್ತವು ಕರಗಿ ನೀರಾಗುವದಲ್ಲದೆ,ಭೋಗೇಚ್ಛೆಯ ತುರಿಗಜ್ಜಿಯಿಂದ ಅದು ಬಾಯ್ನೀರನ್ನೂ ಕರಿಯಬಹುದಲ್ಲವೆ? ಎಂದರೆ, ನಿಜ—ಅಜ್ಞಾನಿಗಳಲ್ಲಿ ಕೋಟಿಗಟ್ಟಲೆಯ ಜನ್ಮಗಳಲ್ಲಾದರು ಆ ಭುಕ್ತ ಭೋಗ ವಾಸನೆಗಳನ್ನು ಅನುಭವಿಸಿ ಮುಗಿಸುವದಕ್ಕೆ ಅವರಿಗೆ ಕಷ್ಟವೇ ಸರಿ, ಆದರೆ—

೭ ಆ ಸಂಸ್ಕಾರಗಳನ್ನು ಬಲಪಡಿಸುವ ಅಧ್ಯಾಸವೇ ಜ್ಞಾನಿಗಳಲ್ಲಿ ಕಳಿದುಹೋಗಿಬಿಟ್ಟಿರುವದರಿಂದ ತಮ್ಮೊಳಗೆ ಬಲಗುಂದಿದ ಆ ಸಂಸ್ಕಾರಗಳಿಂದ ಆ ಜ್ಞಾನಿಗಳಿಗೆ ಕೆಡಕಾಗುವದಕ್ಕೆ ಬದಲಿ ಆ ವಾಸನೆಗಳೂ ಶುಭಪ್ರಾಯಂಗಳೆ ಆಗಿ ಶೋಭಿಸುತ್ತಿರುವವು. ಎಂದರೆ ಕಳೆದ ವಸಂತಾದಿ ಐದು ಋತುಗಳ ಮುಂದಿನ ಶಿಶಿರಋತುವಿನಲ್ಲಿ ಬಿಸಿಲಿನ ಬೇಗೆಯಿಂದ ಒಣಗಿ ರಸವಿಲ್ಲದ ಶುಷ್ಕ ವದಸ್ಪತಿಗಳಂತೆ ತಮ್ಮೊಳಗೆ ಬಲಗುಗ್ಗಿದ ಆ ವಾಸನೆಗಳೂ ನಿಶ್ಚೇಷ್ಟಿತವಾಗಿರುವವು. ಹಾಗಾದರೆ ತನಗೆ ವಾಸನೆಗಳಿಂದ ಕೆಡಕು ಉಂಟಾಗುವದು ಹೇಗೆ? ಎಂದರೆ, ವಿಪರೀತ ತಿಳಿವಳಿಕೆಯಿಂದ ಎಂಬುದು ಉತ್ತರವು.

೮ ಈ ದೇಹವು ಇಂತಿಷ್ಟೇ ಸರಿಯೆಂಬ ಪರಿಮಿತಿಯುಳ್ಳ ಅವಯವಿಯುಲ್ಲವೆ? ಅದರಲ್ಲಿ 'ನಾನು' ಎಂದು ತಲೆಯೆತ್ತಿದ ಆತ್ಮನ ಹುಸಿಯು ರೂ(ಪು)ಹು ಮಾಜಲು—ಆತ್ಮಾನಾತ್ಮಗಳನ್ನು ಕುರಿತಿರುವ—ಸತ್ಯ ಮಿಥ್ಯೆ ಎಂಬ ವಿವೇಕ ಜ್ಞಾನದಿಂದ ಅದನ್ನೊಮ್ಮೆ ತಾನು ಒರಸಿಹಾಕಲು, ಅಧ್ಯಾಸವೊಂದನ್ನು ತೊಡೆದುಹಾಕಲು ಆಗ ಜನನ ಮರಣಗಳಿಗೆ, ಆಕರ—ಉತ್ಪತ್ತಿಸ್ಥಾನವಾಗಿದ್ದ ಅನಾತ್ಮಗಳಲ್ಲಿ ನಾನೆಂಬ ಆ ವಾಸನೆಯು ಕೂಡ ವಾರಿಧಿಜಲಚರ—ಸಮುದ್ರದಲ್ಲಿ ಸಂಚರಿಸುವ

ಇದಕೆ ಸಾಧನವಾವುದತಿ ಶಾಂ-|
ತಿದವೆನಲ್ಕಾರ್ಯರ ಸಮಾಗಮ-|
ವದಕೆ ಮುಖ್ಯೋಪಾಯವೇನೆನೆ, ಸರ್ವ ಸಂನ್ಯಾಸ;||
ಅದರ ಬಗೆಯೆಂತೆನೆ ಶಿಖಿಧ್ವಜ-|
ಸುದತಿಯಾತನವಾದದೊಳ್ಪೇ-|
ಳಿದುದು ತತ್ತ್ವರಹಸ್ಯವೆಲ್ಲ ಸಮಗ್ರವೆಂದೆಸಿಸಿ || ೯ ||

ಗೋಚರದ ಕಾಲಾಟವೇವರಿ-|
ಗೂ ಚರಿಸುತಿರ್ಪುದೋ ಮನಕಾ-|
ಯಾ ಚಟುಲ ದೋಷಾತಿರೇಕಂ ಬಿಡದು ನಿಜವಾಗಿ ||
ನೀಚವಿದರನುಸರಣ ವೆಂದಖಿ-|
ಲಾಚರಣವಂ ಬಿಡುವುದೇ ವಿ-|
ದ್ಯಾ ಚತುರ ಶೀಲತೆಯೆನಲ್ಕಲ್ಲವದುಪಾಯಾನ್ಯಂ- || ೧೦ ||

ಯಾವುದೆನೆ ಮುಖ್ಯಾರ್ಥ, ಪಶು ಧನ |
ಭೂ ವನಿತೆಯರ ಬಿಡುವುದಲ್ಲ, ಕ-|
ಳೇ ವರವ ಸಂತ್ಯಜಿಪುದಲ್ಲವಿದೇಕೆನಲ್ರಾಗ-||
ಆವರಿಸಿ ಯಿಹುದಾಗಿ ಫಲಸಂ-|
ಭಾವನೆಯೊಳದರಿಂದ ಜನ್ಮಶ-|
ತಾವಳಿಯೊಳುಣಬೇಕು ದುಃಖ ಸಹಸ್ರದೊಡಗುಡಿ || ೧೧ ||

---

ಪ್ರಾಣಿಗಳು ಮರುಮರೀಚಿಕೆಯಲ್ಲಿ ತೋರುವದಕ್ಕಿಲ್ಲದಿರುವಂತೆ ಪುನಃ ಹುಟ್ಟುವದಿಲ್ಲವು.

೯ ಇದಕೆ—ಈ ವಾಸನೆಯ ತ್ಯಾಗಕ್ಕೆ, ಸಾಧನಂ+ಆವುದು+ಅತಿಶಾಂತಿಯು+ಇದವೆನಲ್ಕೆ—ಈ ಅತಿಶಾಂತಿಯಾವುದು? ಎಂದರೆ, ಆರ್ಯರ—ಸತ್ಪುರುಷರ ಸಮಾಗಮವೇ;

೧೦ ....ಲಾಟಂ+ಏವರಿಗೂ....ರ್ಪುದೊ—ನೇತ್ರಾದಿ ಇಂದ್ರಿಯಗಳಿಗೆ ತಂತಮ್ಮ ದೃಶ್ಯಗಳು ಕಾಣುತ್ತಿರುವವರೆಗೂ, ಮನಕೆ+ಆಯಾಯ ವಿಷಯಗಳ, ಚಟುಲ—ಬಲವಾದ ದೋಷ ಮತ್ತು ಆ ದೋಷವನ್ನು, ಅತಿರೇಕಂ—ಮೀರಿದ ಗುಣ ಇವುಗಳು ಬಿಡುವಂತಿಲ್ಲವಾದ್ದರಿಂದ, ನೀಚಂ+ಇದರ+ಅನುಸರಣಂ—ಈ ಇಂದ್ರಿಯ ಭೋಗಗಳನ್ನನುಭವಿಸುವದೆಂಬುದೇ ಕಡು ನೀಚವಾದದ್ದೆಂದು ಬಗೆದು ಅದಕ್ಕಾಗಿರುವ, ಅಖಿಲಾಚರಣಮಂ—ತನ್ನ ವ್ಯವಹಾರಗಳನ್ನೆಲ್ಲ ಸಂಪೂರ್ಣ ಕೈಬಿಡುವದೇ, ವಿದ್ಯಾ....ಲತೆ—ಜ್ಞಾನನಿಷ್ಠೆಯು, ಎನಲ್ಕೆ+ಅಲ್ಲವು+ಅದು+ಅನ್ಯಂ+ಉಪಾಯಂ.

೧೧ ಈ ಜ್ಞಾನನಿಷ್ಠೆಯ ರೂಪದ ಸರ್ವತ್ಯಾಗ—ಎಂಬ ಶಬ್ದಕ್ಕೆ ಮುಖ್ಯಾರ್ಥವು ಯಾವುದು? ಎಂದರೆ ಕಳೆವರ—ಈ ದೇಹತ್ಯಾಗವೂ ಅಲ್ಲ, ಇವೇಕೆಂದರೆ ಈ ದೇಹತ್ಯಾಗ ಮಾಡುವಲ್ಲಿಯೂ ಎಂದಿನಂತೆ ತನ್ನಲ್ಲನುರಾಗವುಳಿದುಕೊಂಡಿರುವದು. ಅದರಿಂದ, ಜನ್ಮಶತ+ಆವಳಿಯೊಳು—ನೂರಾರು ಜನ್ಮಗಳ ಸಾಲುಗಳಲ್ಲಾದರು ತನ್ನಲ್ಲಿ ನಿಂತ ಆ ರಾಗದ ವಿಷಯಗಳನ್ನು ತಾನು ಉಣಬೇಕು.

ಬಿಡ ಬಹುದ ತನಗಿಷ್ಟವಾಗಿರ-|
ದೊಡವೆಗಳ ಲಕ್ಷ್ಯೋಪಲಕ್ಷ್ಯವ; |
ಬಿಡುವುದಾಗದು ತನಗೆ ಹಿತವಾಗಿರುವ ವಸ್ತುಗಳಂ ||
ಅಡಕವಾಗದರಲ್ಲಿ ತನಗಹ-|
ಮಡದಿಯರ ಮಕ್ಕಳುಗಳಂ ನೆರೆ-|
ಬಿಡರು, ಸಮಯಂ ಬಂದರಂತವರಂ ಬಿಡುತ್ತಿಹರು ! || ೧೨ ||

ಮೂಢರಿಗೆ ತಾನೆಂದೆನಿಸಿ, ಸು-|
ಪ್ರೌಢರಿಗೆ ತನ್ನಯದೆನಿಸಿ; ಅತಿ-|
ಗಾಢರಾಗಕ್ಕೊಡಲೆನಿಪ ಒಡಲುಗಳೊಳಂಗಗಳಂ- ||
ವ್ಯೂಢ ಸಂಕಲ್ಪಂ ಸುರತಿಯುಲಿ-|
ರೂಢಮಾಗಲ್ಕೀವರೊಡಲನು-|
ಗೂಢಮತಿಯಿಂ ರಕ್ಷಿಸುವರಂತಾ ಶರೀರವನು- || ೧೩ ||

ಉತ್ತರಾಪಥದಲ್ಲಿ ಬಳಿಕ ವಿ-|
ಯತ್ತರಂಗಿಣಿ, ಯಮುನೆ, ಧಾತನ-|
ಮತ್ತಕಾಶಿನಿ ಕೂಡಿದೆಡೆಯೊಳು, ಶ್ರೀಗಿರಿಯ ಝುರಿಯೋಳ್-||
ಒತ್ತರಿಸುವರು ಸುರರ ಪದವಿಯ-|
ಚಿತ್ತದಲಿ ಬಲು ಬಯಸಿ, ಮಗುಳವ-|
ರೆತ್ತುವರು ಜನ್ಮಂಗಳನು ಬಿಟ್ಟರ್ಥವಲ್ಲವಿದು || ೧೪ ||

ಹೀಗೆನಲ್ಕಿನ್ನೇನು ಸರ್ವ-|
ತ್ಯಾಗಮೆನೆ ಚಿತ್ತವನುಳಿವುದೇ-|
ತ್ಯಾಗ, ಮಿಕ್ಕವರಿಂದಲಾದ ತ್ಯಾಗ ಭೋಗದದಂ ||

---

೧೩ ಅತಿಗಾಢರಾಗಕ್ಕೆ+ಒಡಲು (ಮುಖ್ಯವೆಂದು)+ಎನಿಪ, ಒಡಲುಗಳೊಳು—ತನ್ನ ಸ್ಥೂಲ ಸೂಕ್ಷ್ಮ ಶರೀರಗಳಲ್ಲಿ, ಅಂಗಗಳಂ—ಮಾಂಸಖಂಡಗಳಿಂದ ಕೊಬ್ಬಿಸಿ ಪುಷ್ಟಿಗೊಳಿಸಿರುವ ಇಂದ್ರಿಯಗಳನ್ನು, ತಾನು ಮೋಹದಿಂದ ವ್ಯೂಢ—ಕೂಡಿ ಮಾಡಿಕೊಂಡಿರುವ ಸಂಕಲ್ಪದಿಂದ, ಸುರ....ಗಲ್ಕೆ—ಸಂಸಾರಸುಖಕ್ಕೆಂದು ಕಡು ಮಮತೆಯಿಂದ ಕಾಪಾಡಿಕೊಂಡಿದ್ದ ತಮ್ಮ ಒಡಲನ್ನು ತಾವಾಗಿಯೇ ಕೈಬಿಟ್ಟು, ಈವರು—ಕೊಡುತ್ತಿರುವರು;

೧೪ ಉತ್ತರಾಪಥದಲ್ಲಿ—ಗೋದಾವರಿಯಲ್ಲಿಯೂ, ವಿಯತ್ತರಂಗಿಣಿ—ಗಂಗಾನದಿಯಲ್ಲಿಯೂ, ಧಾತನಮತ್ತಕಾಶಿನಿ—ಸರಸ್ವತಿಯಿಂದ ಕೂಡಿರುವ ಇವುಗಳ ಸಂಗಮಗಳಲ್ಲಿಯೂ ಅಂಥ ತಮ್ಮ ಶರೀರವನ್ನು ತಾವಾಗಿಯೆ, ಒತ್ತರಿಸುವರು—ತಮ್ಮ ಕೈಯಿಂದಲೇ ತಳ್ಳುವರು.

೧೫ ಚಿತ್ತವನು+ಉಳಿವುದೇ—ಬಿಡುವದೇ ಸರ್ವತ್ಯಾಗವಲ್ಲದೆ, ಮಿಕ್ಕವರಿಂದಲಾದ—ಮಿಕ್ಕ ತ್ಯಾಗಗಳು ಸಂಸಾರಭೋಗಗಳನ್ನೆ ತನಗೆ, ದದಂ—ಕೊಡತಕ್ಕವುಗಳು, ....ಅಟ(-ಪ್ರವೃತ್ತಿಗಳ ವ್ಯಾಪಾರ)ವಿಲ್ಲದ+ನ+ಆಗಸ್—ಪಾಪವೆಂಬ ಕಿಲ್ಬಿಷ ಇಲ್ಲದ, ಅಥವಾ ಸಾಗಸವು—

ಆಗಮಂಗಳ ಆಟವಿಲ್ಲದ ।
ನಾಗಸಮೆ ನಿರ್ದ್ವಂದ್ವಮದು ಚೇ-।
ತೋ ಗತದಲಾಗುವದು ವಿಧಿ ಹರಿ ರುದ್ರ ಸಂಭಾವ್ಯಂ ॥ ೧೫ ॥

ಪರಮು ಜೀವರ ಭೇದವೆಂಬುದು ।
ಪರಮು ತಾತ್ವಿಕ ಭೇದವೆಂತೆಂ-।
ಬೆರಡು ಭೇದಂ ಚಿತ್ತದೊಳಗಿಹುದದುವೆ ವಿಷವೃಕ್ಷ ॥
ಮಿರುಪವಾಸನೆ ರೂಪ ವಿದಕಂ-।
ಕುರಮೆ ಮತಿ, ರಾಗಾದಿಗಳು ವಿ-।
ಸ್ಫುರಿಪ ಶಾಖಾದಿಗಳು, ಬೀಜಮುಹಂಕೃತಿಯು ಸತ್ವಂ ॥ ೧೬ ॥

ಕೊನೆಯ ಸವರಿದರೊಡನೆ ಕಾರಣ-।
ವೆನಿಪವಿದ್ಯೆಯ ಬಲದೊಳೆಂದಿನೊ-।
ಲೆಣಿಕೆಗೊಂಬವು ಕೊನೆಗಳವು ರಾಗಾದಿನಾಮಕಗಳ್ ॥
ಹನನಮಂ ಮಾಡಿದರೆ ಮೂಲವ ।
ಜನಿಸದಾ ಶಾಖಾವಯವ ವಾ-।
ಸನೆಯ ರೂಪಂ ಚಿತ್ತವೃಕ್ಷದ ಮರಳಲಬ್ದ ಶತಂ ॥ ೧೭ ॥

ಯಾರು ನಾನೆಂದೆಂಬ ತತ್ತ್ವವಿ-।
ಚಾರವೇ ದಾವಾನಲಂ ಸಂ-।
ಸಾರವೃಕ್ಷವನುರುಹುವದು ಸತ್ಯವಿದು ಸರ್ವಮತಂ ॥
ತೋರುತಿಹುದೇಕಿಷ್ಟುಬಲ ಪಿದ-।
ಕಾರಮೂಲದಿ ಬಂದುದೆನೆ, ಗಂ-।
ಭೀರ ಕೇಳ್ವೆ ಸತ್ಯಕಿನ್ನೊಂದುಂಟೆ ಸತ್ವತಮಂ ॥ ೧೮ ॥

---

ಆಕಾಶಕ್ಕೆ ಸಮನಾದ, ನಿರ್ದ್ವಂದ್ವಂ—ತನಗೆರಡನೆಯದಿಲ್ಲದ, ತನ್ನ ಪ್ರತ್ಯಗಾತ್ಮಸ್ವರೂಪದಿಂದ ನೆಲೆನಿಲ್ಲುವದೆಂಬ ಆ ಚಿತ್ತತ್ಯಾಗವೆಂಬುದು ಚೇತೋಗತದಲಿ-ಮನಸ್ಸನ್ನು ಹೊಂದಿರತಕ್ಕ ವಿಚಾರದಿಂದ ಮಾತ್ರ ಮಾಡುವದಕ್ಕೆ ಬರುವ ಇದು ಬ್ರಹ್ಮಾದಿ ತ್ರಿಮೂರ್ತಿಗಳಿಗೂ ಪೂಜ್ಯತರವು.

೧೬ ಭೇದವೆಂಬ ಆ ವಿಷವೃಕ್ಷಕ್ಕೆ, ಸತ್ವಂ-ಗಟ್ಟಿಯಾದ ಬೀಜವೆಂದರೆ ತಾನಲ್ಲದ ದೇಹೇಂದ್ರಿಯುಗಳಲ್ಲಿ 'ನಾನು' ಎಂದು ಅವಿವೇಕದಿಂದ ತಾನು ಮಾಡಿಕೊಂಡಿರುವ ಮಿಥ್ಯಾಮತಿ-ಮಿಥ್ಯಾಭಿಮಾನರೂಪಿವಾದ ಅಹಂಕೃತಿಯಲ್ಲದೆ, ಬೇರಲ್ಲ; ೧೭-ಸಂಸಾರಾನರ್ಥಗಳಿಗೆಲ್ಲ ಪರಮಕಾರಣವೆನಿಪ + ಅವಿದ್ಯೆಯೆಂಬ ಆತ್ಮಾನಾತ್ಮಗಳ ಅನ್ಯೋನ್ಯಾಧ್ಯಾಸರೂಪವಾದ, ಮೂಲವ—ಈ ತಾಯ್ಬೇರನ್ನೇ ಆ ಆತ್ಮಾನಾತ್ಮಗಳ ವಿವೇಕಜ್ಞಾನದಿಂದ ಹನನವನ್ನು ಮಾಡಿಬಿಟ್ಟರೆ, ಆಮೇಲೆ ಮರಳಲ್+ ಅಬ್ದಶತಂ—ನೂರಾರು ವರುಷಗಳೇ ಕಳೆದರೂ ಪುನಃ ರಾಗಾದಿಗಳೆಂಬ ರಜೋಗುಣದಿಂದ ಮೊಳೆದೋರುವ ಆ ಶಾಖೆಗಳು ಜನ್ಮಿಸುವದಕ್ಕಿರುವವೇ ಇಲ್ಲ.

೧೮....೨೩ ದಾವಾನಲಂ—ಕಾಡುಕಿಚ್ಚು; ೧೯-ರೋದಸಿ—ಭೂಮ್ಯಾಕಾಶಗಳು,ವಹ್ನಿ—

ಸತ್ಯದಿಂದಿರುತಿಹವು ವೇದವು ।
ಸತ್ಯದಿಂದಿರುತಿಹವು ರೋದಸಿ ।
ಸತ್ಯದಿಂದೆಡೆಯಾಡುವುದು ನಕ್ಷತ್ರಮಂಡಲವು ॥
ಸತ್ಯವೆಂದರೆ ವಹ್ನಿ ಸರ್ಪಾ-।
ದಿತ್ಯವರ್ಯರಳುಂಕುವರು, ವಿಧಿ-।
ಕೃತ್ಯಮಿದರಿಂ ಬಾಳಿಕೊಂಡಿಹುದೆಂದನಾಚಾರ್ಯಂ ॥ ೧೯ ॥

ಪೂರುಷನೆ ತಾನೆನಿಸಿಕೊಂಬನು ।
ಬೇರಿರಿಸಿ ಯವನಂ ಪ್ರಕೃತಿಯ ವಿ-।
ಕಾರಮಂಟಸಿಯವಗೆ ಮತ್ತೆ ವಿಕಾರವನ್ನೆಕರಂ ॥
ಪೂರುಷನೆನುತ್ತಾಡಿಯಿದಕಧಿ-।
ಕಾರವನು ಕಲ್ಪಿಸಿ, ಬಹುಸ್ಮೃತಿ ।
ವಾರದಿಂ ಕರ್ಮಂಗಳಂ ನೆರೆ ಮಾಡಿ ಬಲವಾದ- ॥ ೨೦ ॥

ಸಾರವಲ್ಲದ ಮೋಹದಿಂ ಸಂ-।
ಸಾರದುಪಹತಿ ಬಂದುದದರಿಂ-।
ಸೇರಿದುದು ಫಲಭೋಗ ಕರ್ತೃತ್ವಾಭಿಮತಿಯಲ್ಲಿ ॥
ತೋರಿದರೆ ಪುಸಿಯಾಗಿ ದುರಹಂ-।
ಕಾರವೀ ದೇಹ ತ್ರಯದೆ ಸಂ-।
ಚಾರಮಂ ಮಾಡುವದಿದೇನಿದರಿಂ ಭಯಂ ಬರದೆ- ॥ ೨೧ ॥

ಎನಲು, ಸಮ್ಯಕ್ತತ್ತ್ವಬೋಧವು-।
ಜನಿಸೆ ಪೊರ್ದದು ಭೀತಿ, ನೆಳಲಿನ ।
ಘನ ಪಿಶಾಚವು ಬಾಲಗಲ್ಲದೆ ವಿಬುಧಗೆಲ್ಲಿಯದು ॥
ಮನದ ಸಂಕಲ್ಪೈಕ ಕೃತಕ ಭು-।
ವನಮೆ ಪುಸಿ, ಪುಸಿಯಾದ ವಸ್ತುವ-।
ನನುಸರಿಸಿ ಸತ್ಯಕ್ಕೆ ಬಾಧೆಯೆ ಪಾಮರೋಕ್ತಿಯಿದು ! ॥ ೨೨ ॥

ಜನಿಸತಕ್ಕುದು ಜನಕನಿಂದ ಭು-।
ವನಮಿದೆಂಬರಿದೇ ಭ್ರಮೆಯು; ಕಾ-।
ರಣವಿವರ್ತಮಿದಲ್ತೆ ನಿತ್ಯಾದ್ವೈತ ಶುದ್ಧರಿಗೆ ॥

---

ಬೆಂಕಿ, ಸರ್ಪ + ಆದಿತ್ಯವರ್ಯರು + ಅಳುಂಕುವರು—ಅಳುಕು—ಅಂಜುವರು, ವಿಧಿಕೃತ್ಯಂ—ಬ್ರಹ್ಮನ ಸೃಷ್ಟಿಯಾದ ಈ ಜಗತ್ತೆಂಬುದೇ; ೨೧-ಉಪಹತಿ—ತೊಂದರೆ, ಕರ್ಮ ಮತ್ತು ತತ್ಫಲಗಳಲ್ಲಿ ಕರ್ತೃತ್ವ ಭೋಕ್ತೃತ್ವಗಳೆಂಬಿವು ಮಿಥ್ಯಾಧ್ಯಾಸದಿಂದ ತನ್ನಾತ್ಮನಲ್ಲಿ ತೋರಿಕೊಂಡಿರುವವು, ಸರ್ವಾನರ್ಥಕರವಾದ ದುರಹಂಕಾರವು, ದೇಹತ್ರಯದೆ — ದೇಹೇಂದ್ರಿಯಾಂತಃಕರಣಗಳಲ್ಲಿ ನಾನೆಂಬ ಈ ಮಿಥ್ಯಾನಾತ್ಮಾಭಿಮಾನದಿಂದ ಯಾರಿಗೆತಾನೆ ಸಂಸಾರಭಯವು ಬರುವದಿಲ್ಲ? ೨೨-ಪೊರ್ದದು-ಹೊದ್ದದು—ಪುನಃ ಹೊಂದದು; ವಿಬುಧಗೆ-ತಿಳಿವಳಿಕೆ ಬಂದವನಿಗೆ, ೨೩-ಜನಕ-

ಜನಕನಲ್ಲವೆ ಪದ್ಮ ಭವನೆಂ-।
ದೆಣಿಸಲಾದರೆ, ಪದ್ಮಸಂಭವ-।
ಜನಿಸಿದನು ತತ್ಕಾರಣವನೇನೆಂದು ಚಿಂತಿಪುದು ॥ ೨೩ ॥

ಬೇರೆ ಮೂರ್ತ್ಯಂತರವ ಬಗೆದರೆ ।
ಕಾರಣವ ಕುರಿತಿವನೆಯವಶಾ-।
ರೀರ ಭೇದವ ಬಗೆದರದು ಭೂತದ ವಿಕೃತಿ ಸಾಮ್ಯಂ ॥
ಹಾರಲನ್ಯವನಲ್ಲಿ ಗಳಿತ ವಿ-।
ಕಾರಮಾದದ್ವೈತ ಪೂರ್ಣಾ-।
ಧಾರ ಸಚ್ಚಿತ್ಸುಖಗಳಿಂ ಲಕ್ಷಿತನೆ ಮುಂದಿಹುದು ॥ ೨೪ ॥

ಎರಡೆಣಿಕೆಗೊಳದಿರ್ಪ ದೆಶೆಯಿಂ-।
ದಿರುವುದೇ ಕರ್ತೃತ್ವಮಲ್ಲಿ ವಿ-।
ಕರಿಸದಿಹ ಬಗೆಯಿಂದ ಭೋಕ್ತೃತ್ವಂ ಘಟಿಪುದೆಂತು ॥
ಕರಣ ಮುಖಮಾಗೆಸೆಯಲಂತಃ-।
ಕರಣವದರಿಂದಾಗ ಮಾಯಾ-।
ಸ್ಫುರಣೆಯಲ್ಲದೆ. ತನ್ನ ಮುಖಮಾಗಲ್ಕಿದೆಲ್ಲಿಯದು ॥ ೨೫ ॥

---

ಬ್ರಹ್ಮನಿಂದ, ಶುದ್ಧರಿಗೆ—ಜ್ಞಾನಿಗಳಿಗೆ, ನಿತ್ಯಾದ್ವೈತವಸ್ತುವೇ ಈ ಸರ್ವಜಗತ್ತಾಗಿ ತೋರುತ್ತಿರುವದೆಂಬ, ವಿವರ್ತಕಾರಣಂ+ಇದಲ್ತೆ....ಇದಲ್ಲವೆ? ಎಣಿಸಲಾದರೆ—ವಿಚಾರದಿಂದ ತಿಳಿದುಕೊಳ್ಳುವದಾದರೆ,

೨೪ ಹೀಗೆ ಒಂದಕ್ಕಿನ್ನೊಂದು ಕಾರಣವಾಗಿ ಬರುವ ಶರೀರಭೇದವುಳ್ಳ ಆ ಮೂರ್ತಿವಿಶೇಷಗಳಲ್ಲೆಲ್ಲ ಭೂತವಿಕಾರವೆಂಬುದು ಸಮವಾಗಿ ಬಂದು, ಅವುಗಳಲ್ಲೊಂದರಲ್ಲಿಯೂ ಕಾರಣದ ನೆಲೆಯು ನಿಲ್ಲುವುದಕ್ಕಿರುವದಿಲ್ಲ. ಈ ದೋಷಪರಿಹಾರಕ್ಕಾಗಿ, ಅನ್ಯವನು ಹಾರಲು+ಅವನಲ್ಲಿ—ಕಾರ್ಯಕಾರಣವಿಕಾರವಿಲ್ಲದ ಆಯಾತ್ಮನಲ್ಲಿ, ವಿಕಾರಂ—ವಿಕಾರವನ್ನೆಲ್ಲ ಸಂಪೂರ್ಣವಾಗಿ, ಗಳಿತಂ—ನುಂಗಿ, ತಿನ್ನಲ್ಪಟ್ಟು ನಿಂತ ಸಚ್ಚಿತ್ಸುಖಸ್ವರೂಪನಾದ ತಾನು ಪೂರ್ಣವೂ ಅದ್ವೈತವೂ ಸರ್ವಾಧಾರವೂ ಆಗಿರುವದು ಅದೇ ತನ್ನೆದುರಿನಲ್ಲಿ ಬಂದು ನಿಲ್ಲುವದು.

೨೫ ಕಾಲದೇಶಗಳಲ್ಲಿ ಬರುವ ಎರಡೆಂಬೆಣಿಕೆಯ ಸಂಖ್ಯೆಯನ್ನೇ ಕೊಳದೆ—ತಾನು ತೆಗೆದುಕೊಳ್ಳದೆ, ತನ್ನಲ್ಲಿ ಪ್ರವೇಶಿಸುವದಕ್ಕಿಲ್ಲದೆ; ಇರ್ಪದೆಶೆಯಿಂದ+ಅಲ್ಲಿ—ಅಂಥ ಆತ್ಮನಲ್ಲಿ ಕರ್ತೃತ್ವವಿರುವದಿಲ್ಲವು. ವಿಕರಿ....ಂದ—ವಿಕಾರವನ್ನು ಹೊಂದದವನಾದ್ದರಿಂದ ಅವನಲ್ಲಿ, ಭೋಕ್ತೃತ್ವವು + ಎಂತು+ಘಟಿಪುದು? ಅಂತಃಕರಣವೆಂಬುದು ಜೀವನಿಗೆ—ಹೊರಮುಖದ ಕರಣವು ಆಗಿಬಿಟ್ಟಿರುವದು. ಅದರಿಂದ, ಮಾಯಾ—ಹುಸಿತೋರಿಕೆಯ ಶರೀರದ ಹೊರಗಿನ ದೃಶ್ಯಗಳ ಸ್ಫುರಣೆಯಾಗುತ್ತಿರುವದಲ್ಲದೆ, ಪ್ರಮಾಣಗಳನ್ನೆಲ್ಲವನ್ನೂ ನುಂಗಿ ನಿಂತು ಮತ್ತು ಪ್ರಮಾತ್ರಾದಿ ವ್ಯವಹಾರವನ್ನೆಲ್ಲ ತನ್ನಲ್ಲಿ ಹೆಸರಿಲ್ಲದಂತೆ ಅಳಿಸಿಹಾಕಿಬಿಟ್ಟಿರುವ ಪ್ರಮಾಣಗಳಿಂದಳಿಯುವದಕ್ಕಿಲ್ಲದ ಅಪ್ರಮೇಯನೂ ಅದ್ವೈತಸ್ವರೂಪನೂ ಆದ, ತನ್ನ ಮುಖಂ—ತನ್ನನ್ನರಿಯುವದಕ್ಕೆ ಅಂತರಂಗನೆಂಬ ಸಾಧನವು, ಆಗಲ್ಕೆ+ಇದು+ಎಲ್ಲಿಯದು—ಎಷ್ಟುಮಾತ್ರದ್ದು?

ವೇದಶಿರತಾತ್ಪರ್ಯವಮಂ ಸಂ-।
ಪಾದಿಸಲು, ಸದಭಿನ್ನಮಮಂ ಉಪ-।
ಪಾದಿಸುವುದಲ್ಲದೆ, ವಿಭೇದಕ್ಕಾವುದವಕಾಶ ॥
ಆದಿಯಲ್ಲವಲಗ್ನದಲಿ ಸುಖ-।
ಮಾದ ಚಿತ್ತೇ ಕಡೆಯಲೊಂದು ವಿ-।
ವಾದ ದೋಷಾಚ್ಛಾದ್ಯವಾಗದೆ ಪೊಳೆವ ದೆಶೆಯಿಂದ ॥ ೨೬ ॥

ಆಗಲಿ ಪುಟ್ಟಲಿ ಬೆರದು ಪುಟ್ಟಲಿ ।
ಬಗೆಯೊಳನುಭವ ವೆರಡರೋಳ್ಬಾ-।
ವಗತವಾಗಿಯೆ ನಾಮರೂಪಂ ತೋರ್ಪುದಲ್ತೆ ಕರಂ॥
ವಿಗಮಮುಂಟೇ ಭಾವ ವಸ್ತುವ ।
ತಗಲಿ ದಿಕ್ಕಾಲಾದಿಗಳು ಪೇ-।
ರ್ಚುಗೆಯ ಕೊರತೆಯ ತಂದಿಡಲ್ಬಲಗಳೆ ಶಿವಂಶಿವವೆ ! ॥ ೨೭ ॥

ಗುಡ ರಸೈಕ ವಿಮರ್ದದಿಂ ವಿಂ-।
ಗಡಿಸಿಕೊಂಡಿಹ ಭಕ್ಷ್ಯಗಳವಂ-।
ಗಡದೆ ಮಧುರಕೆ ಭೇದಮುಂಟೇ ಸ್ಫುಟಪರೂಷಿಯಲಿ ॥

---

೨೬ ಜೀವನು ಮತ್ತು ಅವನ ಕರ್ತೃತ್ವಾದಿ ಧರ್ಮಗಳು,ಕರ್ಮೋಪಾಸನಾದಿಗಳು, ಬ್ರಹ್ಮಲೋಕಾಂತದವರೆಗಿನ ಅವುಗಳ ಫಲಗಳು, ಇದನ್ನು ನಿಯಮಿಸುವ ಈಶ್ವರನು ಎಂಬ ಇಡಿಯ ಜಗತ್ತಿನ ಸೃಷ್ಟಿಯನ್ನು ಹೇಳುತ್ತಿರುವದು—ಇದೆಲ್ಲವೂ ಬ್ರಹ್ಮದಿಂದ ಹುಟ್ಟಿಬಂದಿರುವವರಿಂದ ಬ್ರಹ್ಮವಲ್ಲದೆ, ಮತ್ತೊಂದಾಗುವದಕ್ಕಿಲ್ಲ. ಆದ್ದರಿಂದ ಆ ಜೀವೇಶ್ವರ ಜಗತ್ತುಗಳು ಬ್ರಹ್ಮವೇ ಎಂಬ ತನ್ನ ಹುಟ್ಟುತಾತ್ಪರ್ಯವನ್ನು ಶ್ರುತಿಗಳು ಗಟ್ಟಿಗೊಳಿಸುವದಕ್ಕೆಂದೇ ಈ ಮೇಲಿನ ಸೃಷ್ಟಿಯನ್ನು ಹೇಳಿರುವವೆ ಹೊರತು, ಅದು ಸತ್ಯವೆಂಬುದಕ್ಕಲ್ಲ. ಏಕೆಂದರೆ ಸೃಷ್ಟಿಯು ಸತ್ಯವೆಂದೆಲ್ಲಿಯೂ ಹೇಳಿರುವದಿಲ್ಲ. ಶ್ರುತಿಗಳಲ್ಲಿ ಹೇಳಿರುವದೆಲ್ಲ ಸತ್ಯವೆನ್ನುವದು ಯುಕ್ತವಾಗುವದೂ ಇಲ್ಲ. ಇನ್ನು ವಿಭೇದಕ್ಕೆ+ಆವುದು+ಅವಕಾಶ? ಆದಿಯಲ್ಲಿ+ಅವಲಗ್ನದಲಿ—ಈ ಸರ್ವ ಜಗತ್ತಿನ ಆದ್ಯಂತಗಳಲ್ಲಿಯೂ ಸುಖಸ್ವರೂಪವಾದ ಚಿತ್ತೊಂದೇ ಇರುವದಲ್ಲದೆ, ಈಗಲೂ—ವಿವಾದಗಳಿಂ ಪ್ರತಿವಾದಿಗಳು ತಾವು ಸೋತು ನಿಂತಕಡೆಯಲ್ಲಿಯೂ ಉಳಿದು ನಿಲ್ಲುವ ಅದು ನಡುವೆ ಬಂದ ವಿವಾದ ದೋಷಗಳಿಂದ ಎಂದಿಗೂ ಆಚ್ಛಾದ್ಯಂ—ಮರೆಯಾಗದೆ ಸೃಷ್ಟಿಗೆ ಮೊದಲಿದ್ದಂತೆ ಈಗಲೂ ತಾನು ಏಕಮೇವಾದ್ವಿತೀಯವಾಗಿದ್ದುಕೊಂಡೇ ಸರ್ವರ ಆತ್ಮನಾಗಿ ಬೆಳಗುತ್ತಲಿರುವದು.

೨೭ ಈ ಜಗತ್ತೆಂಬುದು ಬ್ರಹ್ಮವನ್ನು ಬಿಟ್ಟೇಹುಟ್ಟಿರಲಿ ಅಥವಾ ಅದರಲ್ಲಿ ಸೇರಿಯೇಆಗಿರಲಿ, ಅದರ ಒಟ್ಟಿನ ರೂಪಾದ ನಾಮರೂಪಗಳು ಮಾತ್ರ ಮನಸ್ಸಿನ ಮಂಡಿಗೆಯಂತೆ ಬರಿಯ ವಿಕಲ್ಪವಲ್ಲದೆ, ಮನಸ್ಸನ್ನು ಬಿಟ್ಟು ಅವಿರುವವಕ್ಕೆಡೆಯೇ ಇರುವದಿಲ್ಲ. ಮತ್ತು ಇರುವ ಆತ್ಮನಿಂದಲೇ ಜೀವಿಸಿಕೊಂಡಿರುವ ದಿಕ್ಕಾಲದೇಶಾದಿಗಳು ಕೂಡ ತಮ್ಮ ಜೀವನಾಧಾರವಾದ ಸದ್ವಸ್ತುವಿನಲ್ಲಿ ಯಾವ ಹೆಚ್ಚು ಕುಂದುಗಳನ್ನೂ ತಂಡಿದಲಾರವು.

೨೮ ....ಗಳ + ಅವಂಗಡವೆ—ಬೆಲ್ಲದ ಭಕ್ಷ್ಯಗಳಲ್ಲಿ, ....ಪರುಷಿ—ಎದ್ದು ಕಾಣುವ

ಒಡವೆರದ ಶುಚಿಯಿಂದ ಸೇವಿಸ-।
ದೆಡೆಯದುಂಟೇ ಸತ್ತ್ವನಿಂ ಬೇ-।
ರ್ಪಡಿಸಿಕೊಂಡಿಹ ಭೂತವಿಕೃತಿಗಳೆತ್ತ ತೋರುವವು ॥ ೨೮ ॥

ಅದುವೆ ಸದಖಂಡಂ ಜಗಚ್ಚಿ-।
ತ್ರದ ವಿಕಾರಂ ಚಿತ್ತಭಿತ್ತಿಯೊ-।
ಳೊದಗಿ ತೋರ್ಪುದು- ಚಿತ್ತವಿಲ್ಲದೊಡಿಲ್ಲ ಸಂಸಾರ ॥
ಭಿದೆಯು ಜೀವವ್ಯಾಪೃತಿಯು, ಮೇ-।
ಣಿದರ ಸಂಕಲ್ಪವನು ನಿತ್ಯಾ-।
ಭ್ಯುದಿತ ವಿಜ್ಞಾನದಿಂ ಕಳಿದವ ಲೂನದೋಷನಹಂ ॥ ೨೯ ॥

ಇಲ್ಲದಿಹ ಭುವನದಲಿ ಕಲ್ಪಿತ-।
ವೆಲ್ಲವೂ ಮಾನಸಿಕವದು, ತಡಿ-।
ಯಲ್ಲಿ ನಿಂತವನ ಸ್ವರೂಪವಧೋಮುಖತ್ವವನು- ॥
ನಿಲ್ಲದೈದಿಸುವಂತೆ ಜಲದಲಿ; ।
ಬಲ್ಲವಿಕೆಯಿರೆ ತೋರುತಿರ್ಪುದಿ-।
ದಲ್ಲಮೆಂಬಾಶಯುದಿ ದೃಢತರವಾಗಿ ತೋರಿದೊಡಂ ॥ ೩೦ ॥

ಹುಲ್ಲಿನಂದದಿ ಸಾರವಿಲ್ಲದ ।
ನಿಲ್ಲದಿಹ ಮಾಯಾವಿಕೃತಿ ನಾ-।
ನಲ್ಲವೆಂಬವಬೋಧವಾವಾತಂಗಲುಗದಿಹುದೊ ॥
ಬಲ್ಲವರ ಗೊಂದಣದೊಳವನೇ ।
ಬಲ್ಲವಂ ದಾನಿಗಳೊಳವನೇ-।
ಬಲ್ಲಿದಂ ಪೇರ್ವಡೆದ ಸತ್ಯತ್ಯಾಗಿಯೆಂದೆನಿಸಿ! ॥ ೩೧ ॥

---

ಅವುಗಳ ಸವಿಯಲ್ಲಿ, ಒಡವೆರದ—ಒಡಗೂಡಿರುವ, ಶುಚಿ—ಸಂತೋಷದಿಂದ, ಭೂತವಿಕೃತಿ (ಕಾರ್ಯ)ಗಳು+ಎತ್ತ....;

೨೯ ಜಗತ್ತೆಂಬ ವಿಕಾರರೂಪವಾದ ಈ ಚಿತ್ರವು, ಚಿತ್ತ—ಮನಸ್ಸೆಂಬ, ಬಿತ್ತಿ (-ಗೋಡೆ) ಯೊಳು+ಒದಗಿ—ಸೇರಿಕೊಂಡು ತಾನು ತೋರುತ್ತಿರುವದು, ಭಿದೆ—ಭೇದವೆಂಬುದು ಜೀವ ವ್ಯಾಪೃತಿಯು—ಜೀವನಲ್ಲಿರತಕ್ಕದ್ದು, ಈ ಮನಸ್ಸಿನ ಸಂಕಲ್ಪ ವಿಕಲ್ಪಗಳನ್ನೆಲ್ಲ, ನಿತ್ಯ+ಅಭ್ಯುದಿತ—ನಿತ್ಯಸ್ಫುರಿತವಾದ ತನ್ನ ಸ್ವರೂಪಜ್ಞಾನದಿಂದ ಕಳಿದು ನಿಂತವನು, ದೋಷಗಳನ್ನೆಲ್ಲ ಲೂನ—ಕತ್ತರಿಸಿ ಹೊರಕ್ಕೆ ಹಾಕಿದ ಪರಿಶುದ್ಧ ಸ್ವರೂಪನು.

೩೦ ನಿಲ್ಲದೆ+ಐದಿಸುವಂತೆ—ತಿಳಿಗೊಳದ ತಡಿಯಲ್ಲಿ ನಿಂತ ಪುರುಷನ ಶರೀರವು ಆ ನೀರಿನಲ್ಲಿ ತಲೆಗೆಳಗಾಗಿ ಕಾಣುತ್ತಿರುವಂತೆ; ಅದ್ವಿತೀಯಾತ್ಮನೇ ತಾನೆಂಬ ಬಲ್ಲವಿಕೆಯಿರೆ ಇದಲ್ಲಂ+ಎಂಬ+ಆಶಯು....;

೩೧ ....ವಿಕೃತಿ—ಬರಿಯ ಮಿಥ್ಯಾಜ್ಞಾನ ಸಿದ್ಧವಾಗಿರುವ ತನ್ನ, ಶರೀರೇಂದ್ರಿಯ ಸಂಘಾತದಲ್ಲಿ 'ನಾನು' ಎಂಬುದು ಸರಿಯಲ್ಲ, ಎಂಬ+ಅವಬೋಧವು—ತತ್ತ್ವನಿಶ್ಚಯವು; ಆವಾತಂಗೆ+

ಪೊಂದದೇ ಪೊಂದಿದೊಲು ಮಾಯೆಯ-।
ತಂದಿರಿಸಿದೀ ಚಿತ್ತಮಂ ಕಡೆ-।
ಗೊಂದಿಸಿದ ಮಾನವನುದಾರನು ಭುವನಮಧ್ಯದಲಿ! ॥
ಪೊಂದಿ ಬೇರಾಗಿರುವ ನಶಿಸುವ ।
ಮುಂದಿರುವ ದೇಹಾದಿಗಳ ದೃಢ-।
ದಿಂದ ಬಿಟ್ಟವನೇ ವದಾನ್ಯನಜಂತುಸಾಮಾನ್ಯಂ! ॥ ೩೨ ॥

ಇಂತು ತತ್ತ್ವವಿವೇಕದಿಂ, ತ-।
ನ್ನಂತರಂಗಕೆ ಸಾಕ್ಷಿಯೆಂದು, ನಿ-।
ರಂತರಾನಂದಘನನು ಎಂದು ಮತಿದಯಿತನೆಂದುಂ ॥
ಶಾಂತರಾಗೋದ್ರೇಕನಾದವ, ।
ಶಾಂತಿಯಂ ಪಡೆವಾತ್ಮಪದ ವಿ-।
ಶ್ರಾಂತಿಯಿಂದಿರುತಿರ್ಪ ಸರ್ವತ್ಯಾಗ ಫಲಭಾಜಂ! ॥ ೩೩ ॥

ಕೇಡಡಸದಾರಿಂಗೆ, ಧರ್ಮವ-।
ಮಾಡುವರಿಗವರೀ ಶರೀರದ-।
ಬೀಡನುಳಿಯಲ್ಕಮರರು, ಅಕಾಲದ ವಿಪತ್ತಿಯಲಿ-॥

---

ಅಲುಗದಿಹುವೊ-ನಿಶ್ಚಯಗೊಂಡಿರುವದೊ, ಗೊಂದಣ-ಸಭೆಯಲ್ಲಿ ಬಲ್ಲಿದಂ-ಉದಾತ್ತದಾನಿಯು,

೩೨ ಮಾಯೆ—ಇಂದ್ರಿಯ ಪ್ರಜ್ಞೆಗಳು, ಸಂಸಾರ ವಿಷಯಗಳ ಅರಿವುಗಳು, ತನ್ನ ಶರೀರೇಂದ್ರಿಯಗಳಲ್ಲಿ 'ನಾನು' ಎಂಬ ನಿಸ್ಸಂಧಿ ಬಂಧನರೂಪದ ಅವಿದ್ಯೆಯನ್ನು (ಬೃ. ೨-೫-೧೯, ಮತ್ತು ಭಾಷ್ಯ; ಭಾಗವತ ೧೦-೪೮-೨೭; ೧೧-೩-೩....೧೬; ೧೨-೬-೨೯,೩೦; ೧೨-೧೦-೨; ಯಾಸ್ಕರ ನಿಘಂಟು) ಮತ್ತು ಅದರ ತಳಗಟ್ಟಿನಲ್ಲಿ ಹುಟ್ಟಿದೋರಿದ—ಈ ಜಗತ್ತಿನ ಏಕದೇಶದಲ್ಲಿ ಮಾತ್ರ ನಾನಿರುವವನೆಂದೂ, ಮತ್ತು ನಾನು—ಭೋಗ್ಯಭೋಗಗಳುಳ್ಳ ಭೋಕ್ತೃವೆಂದೂ ಈ ಬಗೆಬಗೆಯ ರೂಪುಗಳಿಂದ ವಿಸ್ತರಗೊಂಡಿರುವ ಮಾಯೆಯನ್ನು ನಿಜವಾಗಿ ನಾನು ಪೊಂದದೆಯಿದ್ದರೂ ಅವಿಚಾರಸಿದ್ಧ ಅಜ್ಞಾನಮಾತ್ರದಿಂದ ತಾನು ಪೊಂದಿದೊಲು, ತನ್ನಲ್ಲಿ ತಂದಿರಿಸಿದ ಈ ಚಿತ್ತವನ್ನು, ಕಡೆಗೆ+ಒಂದಿಸಿದ—ನೂಕಿರುವ ಮನುಷ್ಯನೇ ಉದಾರನು; ನಾಶೋನ್ಮುಖನಾಗಿದ್ದು ತನಗಿಂತ ಬೇರೆಯಾಗಿರುವ ದೇಹೇಂದ್ರಿಯಗಳು ಅಜ್ಞಾನದಿಂದ ತನ್ನಲ್ಲಿ ಹುಟ್ಟಿಗೂಡಿದರೂ ತನಗೆದುರಿಟ್ಟು ಕಾಣುತ್ತ ಮುಂದಿರುವ ಈ ಸಂಘಾತವನ್ನು 'ನಾನಲ್ಲ' ಎಂಬ ನಿಶ್ಚಿತಜ್ಞಾನದಿಂದ ಅನಾತ್ಮವನ್ನಾಗಿ ಹೊರಗೆ ಬಿಟ್ಟವನು, ವದಾನ್ಯನು—ಮಹಾ ದಾನಿಯು, ಅಜಂತುಸಾಮಾನ್ಯಂ-ಅವನನ್ನು ಮನುಷ್ಯಸಾಮಾನ್ಯನೆಂದೆಣಿಸತಕ್ಕದ್ದಲ್ಲ.

೩೩ ಆನಂದಘನ—ಆನಂದದ ಘಟ್ಟಿಯೇ ತನ್ನ ಶರೀರವಾಗುಳ್ಳವನೆಂದೂ. ....ದಯಿತನು—ಗಂಡನು, ಬುದ್ಧಿಗೆ ತನ್ನಾತ್ಮೇಶ್ವರನಾಗಿರುವ ಪರಮಪ್ರಿಯನೆಂದೂ, ಭಾಜಂ—ಭಾಜನನು, ಹೊಂದಿದವನು;

೩೪ ಕೇಡು+ಆರಿಂಗೆ+ಅಡಸದು+ಯಾರನ್ನು ಬಂದು ಕೇಡು ಆಶ್ರಯಿಸುವದಿಲ್ಲ?

ಖೋಡಿಯೋಗುತ್ತಿರಲವರ್ಕಳ ।
ನೋಡಿ ದಯೆಯಿಂ ಬಹುವಿಧದಿ ಕಾ-।
ಪಾಡಿದ ಮಹೇಶ್ವರನೆಮಗೆ ಪಾಲಿಸುಗೆ ಶಿವಪದಮಂ ॥ ೩೪ ॥

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೊಳ್ ಬ್ರಹ್ಮವಿಶ್ರಾಂತಿಯಂ
ಪೇಳಿದುದು ಹದಿನೈದನೆಯ ಸಂಧಿ ಸಮಾಪ್ತಂ (ಪ॥ ೮೭೫)

## ಸಪ್ತಭೂಮಿಕಾ ನಿರ್ಣಯ—ಹದಿನಾರನೆಯ ಸಂಧಿಯು

ಸೂ॥ ಸಪ್ತಭಾವಾಜ್ಞಾನ ಭೂಮಿಯ. ।
ಸಪ್ತಭಾವ ಜ್ಞಾನ ಭೂಮಿಯ, ।
ಕ್ಲಿಪ್ತವಾದನುಭೂತಿಗೋಸುಗ ವಿಸ್ತರಿತಮಿಲ್ಲಿ ॥ ಪ ॥

ಭಾವನಾ ಮಂತ್ರ ಸ್ಮೃತಿಗಳಿಂ ।
ದೇವತಾವಾಹನೆಯನಾಂತ ಶಿ-।
ಲಾ ವಿಶೇಷ ಪ್ರತಿಮೆಗಳಲಾಸಕ್ತಿಯಂ ಬಿಟ್ಟು ॥
ಜೀವ ಮುಖದಿಂ ಗೈದ ಸತ್ಕೃತಿ ।
ಯಾವುದದು ಶಿವತೃಪ್ತಿಯೆಂಬನು-।
ಭಾವಮುಳ್ಳವರಿಂಗೆ ಸೂಚಿಪುದೀ ಕಥಾಶ್ರುತಿಯ ॥ ೧ ॥

ವ್ಯವಹೃತಾತ್ಮ ಶ್ರಾಂತಿಯಂ, ಸ-।
ಧ್ರುವಮೆನಿಸುವೊಡೆ, ಸಂವಿದೇಕೋ-।
ತ್ಸವ ಪರಾಯಣಮೆನಿಪ ಭೂಮಿಕೆ ಬೇಕು ವಿರತರಿಗೆ ॥

---

ಎಂದರೆ, ಧರ್ಮವನ್ನು ಮಾಡುವವರಿಗೆ ಎಂದು ಉತ್ತರವು; ....ಬೀಡನು—ಸಂಸಾರ ಬಂಧನದ ಗೂಡು—ಶರೀರವನ್ನು—ಆತ್ಮಾನಾತ್ಮಗಳು ಒಂದರಿಂದೊಂದನ್ನು ವಿಂಗಡಿಸಿ ತಿಳಿಯುವ ತತ್ತ್ವಜ್ಞಾನದಿಂದ, ತನ್ನ ಶರೀರೇಂದ್ರಿಯಗಳಲ್ಲಿ ಅನಾತ್ಮತ್ವ ನಿಶ್ಚಯ ಮಾಡಿ ಆವುಗಳನ್ನು ನಾನಲ್ಲವೆಂದು ಕೈಬಿಟ್ಟು ಶ್ರುತಿಸಿದ್ಧ ಅಮರತ್ವವನ್ನು ಹೊಂದಬೇಕೆಂಬುದು ನಿಜವಾಗಿದ್ದರೂ, ಕರ್ಮದಿಂದ ಅಮರರಾಗಿ ತಮ್ಮ ಪುಣ್ಯವಿನ್ನೂ ಉಳಿದಿರುವ ಆ ದೇವತೆಗಳು ಸ್ವರ್ಗಲೋಕವಲ್ಲಿ ತಮಗೊಪಗಿಬಂದಿದ್ದ ರಾಕ್ಷಸರ ಉಪದ್ರವದಿಂದ ತಮ್ಮ ಮನಸ್ಸಿನಲ್ಲಿ ಖೋಡಿ—ಸಂತೋಷದಿಂದ ಕುಗ್ಗಿದವರಾಗಿ ಕಳವಳಗೊಂಡವರನ್ನು ದಯೆಯಿಂದ ಕಾಪಾಡಿದ ಶಿವನು ನಮ್ಮನ್ನು ರಕ್ಷಿಸಲಿ.

ಸೂ॥ ಏಳು ಅಜ್ಞಾನಭೂಮಿಕೆಗಳನ್ನು ಮತ್ತು ಸಪ್ತಜ್ಞಾನ ಭೂಮಿಕೆಗಳನ್ನು ಕುರಿತು ಈ ಸಂಧಿಯಲ್ಲಿ ಅವುಗಳ ಕ್ಲಿಪ್ತಂ+ಆದ—ಇಂತಿಷ್ಟೇ ಸರಿಯೆಂಬ ನಿರ್ಣಯವನ್ನು, ಅನುಭೂತಿ—ಅನುಭವಕ್ಕೋಸ್ಕರ ವಿಸ್ತರಿಸಲ್ಪಟ್ಟಿದೆ.

೨ ಪೂರ್ವೋಕ್ತ ಆತ್ಮವಿಶ್ರಾಂತಿಯನ್ನು ಜಿಜ್ಞಾಸುಗಳು ಗಳಿಸುವಲ್ಲಿ ವಿರಕ್ತರಿಗೆ ಅನಂದಾವಿರ್ಭಾವವನ್ನು ಪಡಿಯಿಸುವ, ಸಂವಿತ್+ಏಕ—ಒಂದು ಜ್ಞಾನಭೂಮಿಕೆಗಳೇ ಬೇಕು. ಇದಕ್ಕಾಗಿ ಅಜ್ಞಾನಭೂಮಿಕೆಗಳನ್ನು ಮೊದಲು ವಿವರಿಸಲಾಗುವದು. ಏತಕ್ಕೆಂದರೆ ಮೊದಲು

ಭುವನವಿಹುದಜ್ಞಾನ ಭೂಮಿಯ ।
ಭವನದಲಿ, ಸಪ್ತಭಿದಾಚೈ-।
ತ್ಯವಿದು, ಪ್ರತ್ಯೇಕಂ ಶತಾಧಿಕ ಭೇದವಾಂತಿಹುದು ॥ ೨ ॥

ಬಿಳಿಯ ಗಾಜಿನ ಮಣ್ಣಿನಂದದಿ ।
ಬೆಳಗುತಿಹುದೇ ಸತ್ವಗುಣವದು, ।
ತುಳಿದ ಮಣ್ಣಿನ ತೆರದೊಳಿಹುದು ರಜೋಗುಣದ ರೀತಿ ॥
ತುಳಿಯದಿಹ ಮಣ್ಣಿನವೊಲಿರ್ಪುದೆ ।
ಕಳೆಯನುಳಿದ ತಮೋಗುಣಂ ಪ-।
ಜ್ಜ್ವಳಿಪ ನೇಸರ ಢಾಳವಿದರೊಳು ಬೆರೆಯಲೆಂತಿಹುದು ॥ ೩ ॥

ಅಂತಿಹುದು ಪರಮಾತ್ಮನಲ್ಲಿ ನಿ-।
ರಂತರ ಸ್ಫುಟ ಚಿತ್ತು ಬುದ್ಧಿಯ-।
ನುಂ ತಗುಲಿ, ಮಾನಸವ ಸೇವಿಸಿ, ಚಿತ್ತಮಂ ಭಜಿಸಿ, ॥
ಅಂತರಂಗದೊಳಾಗ ಮತಿಯಲಿ ।
ನಿಂತಿರುವ ಚಿದವಸ್ಥೆ ಜಾಗ್ರ-।
ತ್ಸಂತತಿಯು, ಮಾನಸದೆ ಸ್ವಪ್ನಂ, ಚಿತ್ತದಲಿ ಸುಪ್ತಿ; ॥ ೪ ॥

ಒಂದನೆಯದೇ ಬೀಜ ಜಾಗ್ರ-।
ತ್ತೆಂದು ಪೇಳಲ್ಪಡುಗು, ಜಾಗ್ರ-।
ತ್ತೆಂದೆರಡನೆಯದೇ, ಮಹಾಜಾಗ್ರತ್ತೆನಿಕು ತ್ರಿತ್ವಂ-॥
ಎಂದು, ಜಾಗ್ರತ್ಸ್ವಪ್ನವೆ ಚತು-।
ರ್ಥಂ, ದಿಟವು ಸ್ವಪ್ನವು ಶರಧ್ವಜ-।
ವೆಂದೆನಿಕು, ರಸಸಂಜ್ಞಿಕವೆ ತಾಂ ಸ್ವಪ್ನಜಾಗ್ರತ್ತು ॥ ೫ ॥

---

ತಿಳಿದಲ್ಲದೆ ಅವುಗಳನ್ನು ಬಿಡುವದಕ್ಕಾಗುವದಿಲ್ಲ ಜಗತ್ತೆಲ್ಲವೂ ಇವುಗಳಲ್ಲಿರುವದು. ಅಜ್ಞಾನ ಕ್ಷೇತ್ರದ ಇವು ಒಂದೊಂದೂ ಹಲವು ಕವಲುಗಳಾಗಿ ಒಡೆದುಕೊಂಡು ತಮ್ಮೊಳಗೆ ನೂರಾರು ಭೇದವುಳ್ಳವುಗಳಾಗಿರುವವು.

೩ ಕಳೆಯನು + ಉಳಿದ—ಬೆಳಗುವದಕ್ಕಿಲ್ಲದ, ಜ್ಞಾನವು ತನ್ನಲ್ಲಿ ಹೊಳೆಯುವದಕ್ಕಿಲ್ಲದಿರುವ ತಮೋಗುಣವು; ಪಜ್ಜ್ವಳಿಪ—ಪ್ರಜ್ವಲಿಸಿ ಬೆಳಗುವ, ನೇಸರಢಾಳ—ಸೂರ್ಯನ ಪ್ರಕಾಶವು.

೫ ತ್ರಿತ್ವಂ—ಮೂರನೆಯದು, ಶರಧ್ವಜ—ಐದನೆಯದು, ರಸಸಂಜ್ಞಿಕ—ಆರನೆಯದು, ಚಿತ್ತವನ್ನೆ—ತನ್ನಾತ್ಮನನ್ನೆ ತನಗಿಂಬಾಗುಳ್ಳ ಬುದ್ಧಿಯು ತನ್ನ ವಿವಿಧ ವೃತ್ತಿಯ ವಿಕಾರಗಳಿಂದ, ಜಾಗ್ರತ್+ಸಂತತಿ—ಬೀಜಜಾಗ್ರತ್ತು, ಜಾಗ್ರತ್ತು, ಮಹಾಜಾಗ್ರತ್ತು ಎಂದೂ, ಅದೇ ಚಿತ್ತವನ್ನಾಶ್ರಯಿಸಿರುವ ಮನಸ್ಸಿನೊಳಗೆ—ಜಾಗ್ರತ್ಸ್ವಪ್ನ, ಸ್ವಪ್ನ, ಸ್ವಪ್ನಜಾಗ್ರತ್ತು ಎಂದೆನ್ನಿಸಿಕೊಂಡದ್ದಲ್ಲದೆ, ಹಾಗೆಯೇ—

ಏಳನೆಯದೆ ಸುಷುಪ್ತಿಕಂ ಸಂ-।
ಜ್ಞಾಳಿಯಿಂದೀ ಸಪ್ತ ವಸುಧಾ-।
ಪಾಳಿ ತಮ್ಮೊಡವೆರೆಯೆ ತಾವಖಿಲಂಗಳಾಗಿಹುವು; ॥
ಪೇಳಲಸದಳವವರ ಭೇದದ-।
ಶೀಲಮಂ, ವೃತ್ತಿಯ ವಿಕಾರವ-।
ತಾಳಿ, ದೃಶ್ಯಾನೇಕ ಸಂಪರ್ಕದ ವಿಶೇಷಗಳಿಂ ॥ ೬ ॥

ವಾರಿಧರದಂದದಲಿ; ನಾನಾ-।
ಕಾರವಾಗುವ ಚಿತ್ತ ತತ್ತ್ವ ವಿ-।
ಕಾರವೀ ಸಪ್ತಕ್ಷಮೆಗಳಿದನರಿಯೆ ನಿಜವಾಗಿ-॥
ತೋರುವೀ ಸಚರಾಚರಂ ಮರು-।
ವಾರಿಯಂದದಿ; ಚಿಂತ್ಯಮಹುದು ವಿ-।
ಚಾರಪರನಿಂಗೀ ಭುವನಮುದರಂದವೆಂತೆನಲು ॥ ೭ ॥

ಪೆಸರಮೇಲಿಡದಪ್ರತರ್ಕ್ಯಮೆ-।
ನಿಸುವ ನಿರ್ಮಲವಾದ ಚೇತನ-।
ವೆಸಗಲಾತ್ಮನ ಮನೋಮುಖಾದ್ಯಭಿದಾನ ಕೊಡಲೆನಿಸಿ ॥
ಎಸೆಯಲದು ಮುಂದಪ್ಪ ಭೂತದ-।
ವಿಸರದೊಳು, ಕೃತಕೃತ್ಯರಿಂ ಭಾ-।
ವಿಸಿಕೊಳಲ್ಪಟ್ಟುದು ಯಥೋಕ್ತಜ್ಞಾಪನಂ ಹಾಗೆ ॥ ೮ ॥

---

೬ ಚಿತ್ತದಲ್ಲಿ ಸುಷುಪ್ತಿಕಂ—ಸುಪ್ತಿಯೆಂದೆನಿಸಿಕೊಂಡಿತು, ಈ ಅಜ್ಞಾನಭೂಮಿಕೆಗಳು–ಹೊರಗಿನ ದೃಶ್ಯಸಂಪರ್ಕವಿಶೇಷಗಳಿಂದಾದವು. ಈ ವೃತ್ತಿ ವಿಕಾರಗಳ ಒಳವಿವರಗಳನ್ನು ಕುರಿತು ಯಾರಿಗೂ ಇಂತಿಷ್ಟೇ ಸರಿಯೆಂಧೆಣಿಸುವದಕ್ಕಿರುವದಿಲ್ಲ.

೭ ವಾರಿಧರ—ಮುಗಿಲಿನಂತೆ ತಮ್ಮಲ್ಲಿ ವಿಭಿನ್ನ ವಿಕಾರಗಳನ್ನು ಹೊಂದುತ್ತಿರುವ ಮತ್ತು ಚಿತ್ತವಿಕಾರಾತ್ಮಕಗಳಾದ, ಈ ಸಪ್ತಕ್ಷಮೆ—ಈ ಏಳು ಭೂಮಿಕೆಗಳನ್ನು ತಿಳಿದುಕೊಳ್ಳುವಲ್ಲಿ ಮನೋಗೋಚರವಾದ ಇಡಿಯ ಭುವನವೇ ಮರುಮರೀಚಿಕೆಯಂತೆ ನಿಸ್ಸಾರವೆಂದು ಉಪೇಕ್ಷಿಸಲ್ಪಟ್ಟು, ಆತ್ಮತತ್ತ್ವವೊಂದೇ ಅರಿಯಲ್ಪಡುವದು—

೮ ಇಂಥದ್ದೆಂದು ತನ್ನನ್ನು ಹೆಸರಿಸುವದಕ್ಕಾಗಲಿ, ತರ್ಕಿಸುವದಕ್ಕಾಗಲಿ ಇಲ್ಲದೆ ನಿರ್ಮಲವಾಗಿರುವ ಚೇತನವು ಒಂದೇಒಂದು. ಅದೇ ಈ ಮನ ಬುದ್ಧಿ ಚಿತ್ತಾಹಂಕಾರಗಳೆಂದು, ಎಸಗಲು–ಹೆಸರಿಸಿಕೊಂಡಿರುವದು ಅಲ್ಲದೆ, ಈ ಭೂಮಿಕೆಗಳು ಮತ್ತು ಜಗತ್ತು ಎಂಬ, ವಿಸ್ತರ—ಈ ಗುಂಪಿನ ರೂಪಿನಿಂದಿರುವ ಇದೆಲ್ಲವೂ ತಾನೊಂದೇ ಆಗಿ, ಎಸೆಯಲು, ತನ್ನ ನಿಜದಲ್ಲಿ ಮಾತ್ರ ತತ್ತ್ವಕ್ಕಿಂತ ಇದು ಯಾವದೂ ಬೇರಿಲ್ಲವೆಂಬುದು ಜ್ಞಾನಿಗಳ ಪ್ರತ್ಯಕ್ಷ ಅನುಭವ.

ಹೀಗೆ ರಜೋಗುಣ ತಮೋಗುಣಗಳ ವೃತ್ತಿಗಳ ಹರಿದಾಟದ ರೂಪಗಳಿಂದಿರುವ ಅಜ್ಞಾನದ ಈ ಸಪ್ತಭೂಮಿಕೆಗಳು ಸಂಸಾರಬಂಧರೂಪವಾಗಿಯೂ ಭೇದಕ್ಕಾಸ್ಪದವಾಗಿಯೂ ಇರುವವು. ಮೊದಲು ತಿಳಿದಲ್ಲದೆ ಪರಿತ್ಯಜಿಸುವದಕ್ಕಿಲ್ಲದ್ದರಿಂದ ೧೭ರವರೆಗೂ ಇದನ್ನೆ ವಿವರಿಸುತ್ತಿದಾರೆ—

ಇದಕೆ ಕವಲಿಲ್ಲದ ಸಮಯದೊಳ-।
ಗುದಿಸಿ, ಇವನಾಂ ನನದು, ನೋಡ-।
ಲ್ಕಿದು ನಿಖಿಲಮಾತ್ಮೈಕ ಸೌಖ್ಯಪ್ರದಮೆನುವದಕ್ಕೆ ॥
ಪದಮೆನಿಪುದಾವುದೊ ವಿಚಾರಿಸ-।
ಲದುವೆ ಜಾಗ್ರತ್ತೆನಿಪುದದರಿಂ, ।
ಮೊದಲೆ ತಾನಿಲ್ಲದ ನಿಮಿತ್ತಂ ಪಿಡಿದು ಬುಧರಿಂದ ॥ ೯ ॥

ಇವನೆ ನಾನೈ ಈ ಪದಾರ್ಥ-।
ಪ್ರವಣದಿಂದಲಿ ವರಿಸಿರಿಯ ರೂ-।
ಪವವರಿಸಿಕೊಂಡಿರ್ದೆನಾಚರಿಸಿದೆನು ಧರ್ಮವನು ॥
ಶಿವಮಯವ, ದುರಿತವನು, ಬಿಡದನು-।
ಭವವಿದರ ಮುಂದೆಂಬ, ನಿಶ್ಚಯ-।
ವವತರಿಸಲನುತಾಂ ಮಹಾಜಾಗ್ರತ್ತೆನಿಸಿಕೊಳ್ಳುಂ ॥ ೧೦ ॥

ಅಂಕುರಿಸಲಂಕುರಿಸದಿರಲಿ ಕ-।
ಳಂಕ ವಿಷಯಾಕಾರಮಾಗಿ-।
ರ್ದುಂ, ಕರಂ ತಾನಾತ್ಮಗತ ಕಾಮಾದಿ ವೃತ್ತಿಗಳ-॥
ಅಂಕಣದೊಳಾಡುತ್ತ, ತತ್ತ-।
ತ್ಸಂಕಟಾಸಂಕಟದಿ ಕಾಲಮ-।
ನುಂ ಕಳಿವುದೆನಿಸುವುದು ಜಾಗ್ರತ್ಸ್ವಪ್ನವೆಂತೆಂದು ॥ ೧೧ ॥

ಘನತರಸ್ಪೃಹಣೀಯಮೆಂದಾ-।
ತ್ಮ ನಿಯತಾರ್ಥಂ ಥಾರ್ಯಮಾಗಿ-।
ರ್ದು, ನಿಯಮದಿ ನಾನಾ ವಿಷಯಗಳ ಚಿತ್ತಮೊತ್ತರಿಸಿ ॥
ದಿನ ಸಹಸ್ರವ ಮುರಳಿ ಕಂಡಾ-।
ಗೆಣಿಕೆತೋರದ ಕಾಲಮುಳ್ಳ, ಮ-।
ನನವಿಶೇಷಮದಾವುದದು ತಾಂ ಸ್ವಪ್ನವೆನಿಸುವುದು ॥ ೧೨ ॥

---

೯....೧೬ ಭೇದದ ಕವಲಿಲ್ಲದಾಗ. ನಿಖಿಲ—ಇದೆಲ್ಲವೂ, ಆತ್ಮ—ತನ್ನ ಸುಖವೊಂದಕ್ಕೇ ಸಂಬಂಧಪಟ್ಟದ್ದೆಂದೂ, ಪದಂ—ಇಂಬು, ಎನಿಪುದು+ಆವುದೋ; ೧೦-ನಾನು+ಈ+ಈ ಪದಾರ್ಥಗಳಲ್ಲಿ, ಪ್ರವಣ—ಸಿಕ್ಕಿಬಿದ್ದ ಮನಸ್ಸಿನಿಂದ, ವರಿಸಿ—ಸ್ವೀಕರಿಸಿ, ಧರಿಸಿ; ಶಿವ—ಶುಭ ರೂಪಮಾದ, ಅವತರಿಸಲು—ಉಂಟಾಗಲು; ೧೧-ಕಳಂಕ—ದೋಷ ಬುದ್ಧಿಯು, ಎಂದರೆ ಗುಣದೋಷಗಳನ್ನೆ ಗಮನಿಸದೆ, ತಾನು ಕಲ್ಪಿಸಿಕೊಂಡ ಮನಸ್ಸಿನ ವಿಷಯಗಳಲ್ಲಿಯೂ ಕಾಮಾದಿ ವೃತ್ತಿಗಳಲ್ಲಿಯೂ ಮತ್ತು ಸುಖ ದುಃಖಗಳಲ್ಲಿಯೂ ಅನವರತ ತೇಲಾಡುತ್ತಿರುವದೆಂಬುದೆ ಜಾಗ್ರತ್ಸ್ವಪ್ನವು; ೧೨-ಘನ....ೀಯಂ—ತನ್ನ ಹೃದಯಕ್ಕೊಪ್ಪಾದವೆಂದು, ಆತ್ಮ....ರ್ಥಂ—ತನ್ನ ಸುಖಕ್ಕೇ ವಿಾಸಲೆಂದೂ ಬಗೆದು, ಸಹಸ್ರಾವಧಿಕ ದಿನಗಳೇ, ಒತ್ತರಿಸಿ—ನೂಕಿ, ಕಳೆದುಹೋಗಿ

ಜಾಗರಣವಾಸನೆಯೆ ಕನಸಿಂ-।
ಗಾಗದುವೆ ದೃಢವಲ್ಲ ಹಾಗಿ-।
ರ್ದೇ ಗಮಿಸಿದೊಂದೊಂದು ಕನಸು ಸಹಸ್ರ ವಾಸರಮಂ-॥
ನೀಗಿ, ಜಾಗ್ರತ್ಕಾಲದೊಳ್ತಾ-।
ನಾಗಿ ತೋರುವುದಾವುದದು ಬಲ-।
ವಾಗಿ ನಿದ್ರಾಜಾಗರಣಮೆಂದೆನಿಸಿಕೊಂಡಿರ್ಕುಂ ॥ ೧೩ ॥

ಮರಣ ಮೂರ್ಛಾ ಸುಪ್ತಿ ಸಾಮ್ಯಂ-।
ವೆರದು, ಜಾಗ್ರತ್ಕಾಲದಲಿ ವಿ-।
ಸ್ಫುರಿಸದೇ ಮುಂದಪ್ಪ ದುಃಖಕ್ಕೊಡಲೆನಿಸಿ ಮನದ-॥
ಮೆರೆವುದಾವುದವಸ್ಥೆಯದ ಭಾ-।
ಸ್ವರ ವಿವೇಕಿಗಳೆಣಿಕೆಗಂ ತಂ-।
ದಿರಿಪರು ಸುಷುಪ್ತಕಮೆನುತ ಪೆಸರಿಟ್ಟ ನೀತಿಯಲಿ; ॥ ೧೪ ॥

ಭೇದವೇನಾದ್ಯಂತಗಳಲಿಹ-।
ಮೇದಿನಿಗಳಿಂಗೆನಲು, ಸಮತೆಯ-।
ನೈದಿರಲಿಯುನ್ಮಿಲನಂ ಪ್ರಾಥಮಿಕವಿರಾದ್ವೈತಂ ॥
ಐದೆ ಸಮ್ಮೇಳನ ಮದಂತ-।
ರ್ಮೇದವಿದು, ನಿಸ್ಸಾರಮದನಾ-।
ಸಾದಿತಮಿದಾಸಾದಿತಮುದಗ್ರಾಶ್ರಯದ ಕೂಡೆ ॥ ೧೫ ॥

ಉದಿಪ ಸತ್ವದ ಕೂಡೆ ಬೆರದಿ-।
ಪ್ಪುದು ಮನಂ, ಮನದೊಡದೆ ಕೂಡಿಹು-॥
ದದ ಕೆಡುಪ ಸತ್ವದಲಿ ಕೂಡಿದ ಬುದ್ಧಿ ಬುದ್ಧಿಯಲಿ-॥
ಚದರದಿಹುದಿದು ನೋಡೆ ಭೇದದ ।
ಪದಕೆ ದೃಷ್ಟಮೆಯಲ್ಲದಿನ್ನೊಂ-।
ದೊದಗದಾವಿರ್ಭಾವಮಿಲ್ಲದಕಾರಣಂ ಗುಣಕೆ ॥ ೧೬ ॥

---

ದ್ದರೂ; ಎಣಿಕೆ ತೋರದ—ಆ ವಿಸ್ತಾರದ ಕಾಲವನ್ನೆ ಒಂದು ನಿಮಿಷವನ್ನಾಗಿ ಮಾಡಿ ಕಾಣುವ, ....ವಿಶೇಷಂ—ಮನಸ್ಸಿನ ಒಂದು ಬಗೆಯೇ ಸ್ವಪ್ನ; ೧೩–ಹಾಗಿ....ಸಿದ—ಎಚ್ಚರ ವಾಸನೆಯು ಕನಸಿಗೆ ಕಾರಣವಾಗದಿದ್ದರೂ, ಸಹ....ರಮಂ—ತನಗೆ ಕನಸಾಗಿ ಬಹುಕಾಲವೆ—ಕಳಿದುಹೋಗಿದ್ದರೂ ಅವುಗಳಲ್ಲಿ ಕಂಡದ್ದನ್ನೆ ಎಚ್ಚರದಲ್ಲಿ ಕಂಡಂತಾದರೆ ಅದು ನಿದ್ರಾಜಾಗರಣವು; ೧೪–....ವೆರದು—ಬೆರದು, ಅವುಗಳ ಎಂದರೆ ಸಾಮ್ಯವನ್ನು ತಾನು ಹೊಂದಿ ತನ್ನಲ್ಲಿ ತಿಳಿವೇ ತೋರದ ಹೆಚ್ಚಿನ ತಾಮಸ ಸ್ಥಿತಿಯೇ ಸುಷುಪ್ತಕವು; ೧೫–ಭ್ರಾಂತಿಯ ಮನಸ್ಸನ್ನು ಹೊಕ್ಕ ಇವು ಕೇವಲ ಸಂಕಲ್ಪ ವಿಕಲ್ಪಗಳ ಶರೀರಗಳಾಗಿ ಚರಿಸಲ್ತಕ್ಕವು, ನಿಸ್ಸಾರವಾದ್ದರಿಂದ ಅವು ಬಿಡಲ್ತಕ್ಕವು; ೧೬–ಈ ಭೂಮಿಕೆಗಳು ಸತ್ವಗುಣದ ಸೋಂಕಿಲ್ಲದವು. ಮಿಕ್ಕ ಗುಣಗಳ ಮಿಶ್ರದಿಂದ ತೋರಿದರೂ

ಎಂತು ತರು ಶಾಖೆಗಳು, ಖಗಗಳ-।
ಸಂತತಿಗೆ ಸಂಚಾರಯೋಗ್ಯಗ-।
ಳಂತರಂಗದ ವೃತ್ತಿಗಳಿಗೆ ವಿಹಾರಯೋಗ್ಯಗಳು ॥
ಅಂತರಾಂತರ ದೇಶ ಭುವನ ಗು-।
ಣಾಂತಕಾಲಿಕ ದೇಹಗಳು ಮಿಗೆ-।
ಜಂತು ಜಾಲದ ಸಹಜವಿವು, ವಿಧಿಚೋದಿತಗಳಲ್ಲ; ॥ ೧೭ ॥

ಅವರೆ ಕೃತಕೃತ್ಯರು ವಿಚಾರಿಸಿ-।
ದವರೆ ಧನ್ಯರು ಮೆಟ್ಟಲಿವರಿಂ-।
ಭವಮೆಸೆವುದೆಂತೆಂಬ ಭಯಮುಳ್ಳವರೆ ಸಾಧುಗಳು ॥
ವ್ಯವಹರಿಸಿ ಕೇಡಿಲ್ಲದಿಹ ಮಾ-।
ರ್ಗವನಿವರೊಳೀಕ್ಷಿಸಿದವರು ಬ-।
ಲ್ಲವರು; ಸರ್ವಕ್ಕಿವರೆ ಗುರುಚರಣರ್ಕಳಿದು ಸತ್ಯಂ ॥ ೧೮ ॥

ವೃತ್ತ್ಯುಪಹಿತ ಜ್ಞಾನದಿಂದಲ-।
ಸತ್ಯವಾದರು ಸತ್ಯರೂಪ-।
ಪ್ರತ್ಯಯವನಭಿನಯಿಸಿಕೊಂಡಿರುತಿರ್ಪುದೀ ಪದವು ॥
ಅತ್ಯಯೋದಯಮಿಲ್ಲದಿಹ ಭಾ-।
ಸ್ವತ್ಯದರ್ಥಂ ತಾನೆನುವ ಸಂ-।
ವಿತ್ಯದಗ್ರಂ ಪಡೆಯೆ ತೋರದು ಭಾವವಾವುದದೆ ॥ ೧೯ ॥

---

ಬರಡುರೂಪಾಗಿ ತಮ್ಮಲ್ಲಿ ಹುರುಳಿಲ್ಲದ ಭೇದದ ತೋರುಗಾಣಿಕೆಯ ಮೊದಲ ಕಾಣಿಕೆಗಳು; ೧೭–ಖಗ–ಪಕ್ಷಿಗಳ, ಸಂತತಿಗೆ—ಗುಂಪಿಗೆ, ಜೀವರ ದೇಹಧಾರಣೆ ಮತ್ತು ಸಂಸಾರಬಂಧ ಎರಡಕ್ಕೂ ಇವು ಸಹಜವಾಗಿಯೇ ಕಾರಣವಾಗಿ ಬಂದಿರುವವು. ವಿಧಿ—ಇವು ಬ್ರಹ್ಮನಿಂದ ಆದ ಸೃಷ್ಟಿಯಲ್ಲವು.

೧೮ ಈ ಅಜ್ಞಾನಭೂಮಿಕೆಗಳನ್ನು ಮೆಟ್ಟಿದವರೇ ಕೃತಕೃತ್ಯರು! ಇವರಿಂ ಭವಂ+ಎಸೆವುದು—ಉಂಟಾಗುವದು, ವ್ಯವ....ವನು+ಇವರೊಳು—ವೃತ್ತ್ಯಾತ್ಮಕವಾಗಿರುವ ಈ ಭೂಮಿಕೆಗಳಲ್ಲಿ ಮನಸ್ಸುಳ್ಳವರಾದವರು ಅವುಗಳಲ್ಲಿ ಸಾಕ್ಷಿಯನ್ನು, ಈಕ್ಷಿಸಿ—ಕಂಡುಕೊಂಡವರಾಗಿ,ಬಂಧದ ಕೇಡಿಲ್ಲದಂತೆ ಮಾಡಿಕೊಂಡವರೇ: ಸರ್ವಕ್ಕೆ—ಜಗತ್ತಿನ ಜೀವರಿಗೆಲ್ಲ, ಇವರೆ....ಣರ್ಕಳ್—ಪೂಜ್ಯಪಾದರು.

೧೯ ವೃತ್ತಿ+ಉಪಹಿತ—ಹುಟ್ಟು ಹೊಂದುಗಳುಳ್ಳ ವೃತ್ತಿಗಳನ್ನು ಲಕ್ಷಿಸಿ, ಅವುಗಳ ಸಾಕ್ಷಿಯನ್ನು ಗುರ್ತಿಸಿಕೊಂಡ ಜ್ಞಾನದಿಂದ, ಅಸತ್ಯಂ–ತನ್ನಲ್ಲಿಲ್ಲವಾದರೂ ಆ ವೃತ್ತಿಗಳು ಮಾತ್ರ ಎಂದಿನಂತೆ ತನ್ನಲ್ಲಿ,ಸತ್ಯರೂಪ....–ಇರುವವೆಂದೇ ತೋರಿಕೊಳ್ಳುತ್ತ ತನ್ನನ್ನುವಂಚಿಸುತ್ತಿರುವವು. ಅವುಗಳ ಅರಿವು ಮಾತ್ರ ಹಾಗಲ್ಲ. ಏತಕ್ಕೆಂದರೆ ತನ್ನಲ್ಲೆಂದಿಗೂ ಅದು, ಅತ್ಯಯೋದಯ—ಉದಯಾಸ್ತಗಳನ್ನು ಹೊಂದದಿರುವದು. ‹ಆ ನಿರ್ವಿಕಾರ ಚೈತನ್ಯಮಾತ್ರ ನಾನು' ಎಂಬ, ಸಂವಿತ್+ಉದಗ್ರಂ+ಪಡೆಯೆ–ಅಜ್ಞಾನದಲ್ಲಿಯೇ ಕೊನೆಗಂಡುನಿಂತ ಪುರುಷನಿಗೆ ವೃತ್ತ್ಯಾತ್ಮಕ

ಎಲ್ಲಿ ನಿಂದಿಹ ಜೀವರಿಗೆ ಸಂ-।
ಫುಲ್ಲಮಾಗದು ಶೋಕಲತಿಕಾ-।
ಪಲ್ಲವಂ, ವಿಜ್ಞಾನ ಭೂಮಿಗಳೇಳವತಿರಮ್ಯಂ ॥
ಸಲ್ಲಲಿತ ಬೋಧಾಢ್ಯರಾದವ-।
ರೆಲ್ಲರಾಚರಿಸಿದ ಸರಣಿಯಿದ-।
ರಲ್ಲಿ ನಿಷ್ಠಿತರಾದವರೆ ಪರಿತೃಪ್ತರೆನಿಸುವರು ॥ ೨೦ ॥

ನರ ಸುರ ಭುಜಂಗಾದಿಗಳೊಳೊಂ-।
ದಿರುತಿರಲ್ಬೇಕದಕೆ ದೇಹಂ-।
ಸ್ಫುರಿಸಬೇಕದರಲ್ಲಿ ಪುಣ್ಯವಿಶೇಷದಿಂ ಬುದ್ಧಿ ॥
ಪರಿಪರಿಯ ಭವಗಳಲಿ ಮಾಡಿದ-।
ದುರಿತವರ್ಗಕ್ಕೊಡನೆ ಪರಿಪಾ-।
ಕ ರಸಕಾಲಂ ಗೂಡಬೇಕಾಗಪ್ಪುದೀ ಭೂಮಿ ॥ ೨೧ ॥

ಧರೆಯು ಮೊದಲನೆಯದೆ ಸುಖೇಚ್ಛೆಯು, ।
ಎರಡನೆಯದು ವಿಚಾರಣೆಯು, ಭಾ-।
ಸುರಮೆನಿಪ ಮೂರನೆ ಯಿಳೆಯೆ ಮಾನಸಿಯು ಹಾಗೆ-॥
ಸ್ಫುರಿಪ ಸತ್ವಾಪತ್ತಿ ನಾಲ್ಕನೆ-।
ಧರಣಿ, ಪಂಚಮಿಯೆ ಪ್ರಸಕ್ತಿ, ವಿ-।
ಕರಿಸದರ್ಥದಭಾವನೆಯೆ ತಾನಾರನೆಯದಕ್ಕುಂ ॥ ೨೨ ॥

ಏಳನೆಯದೇ ತುರ್ಯಗಾಮಿನಿ-।
ಪೇಳೆ ಪಡುಗುಮಿವೇತದಂಕದಿ !
ಹೋಲೆ ಮೇಲೊಂದೊಂದು ಗುಣವೃದ್ಧಿಯನು ಪಡೆದಿಹವು ॥

---

ವಾಗಿರುವ ಈ ಅಜ್ಞಾನಭೂಮಿಕೆಗಳು ಎಂದಿನಂತೆ ಸತ್ಯವಾಗಿ ತೋರಿಕೊಳ್ಳುವದಿಲ್ಲ. ಆ ಉಳು ಮೆಯ+ಭಾವಂ+ಅವುದು+ಅದೇ ತಾನು.

೨೦ ಸಂಫುಲ್ಲಂ—ಅರಳಿ ತನ್ನಲ್ಲಿ ಎಂದಿಗೂ ಪುನಃ ಅವು ಹಬ್ಬಿಕೊಳ್ಳುವದಿಲ್ಲವೊ, ....ಪಲ್ಲವಂ—ದುಃಖದ ಬಳ್ಳಿಯ ಚಿಗುರುಗಳು, ....ಗಳು + ಏಳು+ಅವು+ಅತಿ ರಮ್ಯಂ, ಬೋಧ+ಆಢ್ಯರು—ಸಮೃದ್ಧರು, ಸರಣಿ—ಮಾರ್ಗ,

೨೧ ಭುಜಂಗ+ಹಾವು–ದೇವಲೋಕದ ಸಂಪತ್ತಿಗೂ ಮಿಗಿಲೆನಿಸಿರುವ ಪಾತಾಳಲೋಕಗಳ ನ್ನೆಲ್ಲ–ಪುಣ್ಯದ ಜನ್ಮಗಳನ್ನೆಲ್ಲವನ್ನೂ, ಒ(ಹೊ)ಂದಿರುತಿರಲ್–ತಾನು ಪಡೆದು ಅನುಭವಿಸಿ ಮುಗಿಸಿ ಕೊಂಡಿರುವ ಚರಮಜನ್ಮವು ತನಗೆ ಬಂದು, ....ಪರಿಪಾಕರಸ–ನಿವೃತ್ತಿಯ ಕಾಲವುಬಂದಿರಬೇಕು.

೨೩ ....ಡುಗುಂ+ಇವು+ಏತತ್—ಈ, ಅಂಕದಿ—ಶ್ರೇಷ್ಠದ, ಪರಿವಿಡಿಯ—ಕ್ರಮದ, ಲಸತ್—ಶೋಭಿಸುವ, ಲಕ್ಷಣಂ+ಇದಕ್ಕೆ + ಅನುಕೂಲಂ+ಆಗಿಹುದೆಂತು+ಎನಲ್ಕೆ+ಅಭಿ ಯುಕ್ತ—ಬಲ್ಲವರ,

ಮೂಲವಾಗಿಹ ಪರಿವಿಡಿಯು ಬಿಡ-।
ದೇ, ಲಸಲ್ಲಕ್ಷಣವಿದಕ್ಕನು-।
ಕೂಲವಾಗಿಹುದೆಂತೆನಲ್ಕಭಿಯುಕ್ತ ಮತವೆಂದು ॥ ೨೩ ॥

ಕಾಯ ಪುತ್ರಾದಿಗಳು ಮೇಘ-।
ಛಾಯೆಯೊಲು ಕೆಡುತಿರ್ಪರೆಂಬುದ-।
ನೀಯಖಿಲ ದೃಶ್ಯ ಪ್ರದೇಶದೆ ಕಂಡು, ಮೂಢನೊಲು-॥
ನೋಯದಿರ್ದಪೆನೇಕೆ, ಗತಿಯಿ-।
ನ್ನೇಯುಪಾಯದಿ ತನಗಹುದೊ ಎಂ-।
ಬಾಯತಿಯೊಳೊಡವೆರೆದ ಮತಿಯೆ ಸುಖೇಚ್ಛೆಯೆನಿಸುವುದು ॥ ೨೪ ॥

ನಯ ಸುಜನ ಸಂಪರ್ಕದಿಂ, ನಿ-।
ರ್ಣಯಿಸಿದ ವಿರಾಗಮುಖವಾಗಿ, ನಿ-।
ರಯ ಸಮುಚ್ಚಯ ಯಾತನಾದದವೆಂದು ವಾಸನೆಯ-॥
ಜಯಿಸೆ, ಪೂರ್ವಾಚಾರ್ಯ ಚರಿತ ಸ-।
ದಯನಮಂ ಪಾಲಿಸೆ ಸದಾಚಾ-।
ರಯುತತೆಯೆ ಮಾನಸಕೆ ಸಂಖ್ಯೆಯೆನಿಕ್ಕುಹಿತನಾಗಿ ॥ ೨೫ ॥

ತನಗೆ ಶ್ರೇಯಃ ಕಾಮವಽಂ ಚೇ-।
ತನವಿಮರ್ಶೆಯು ದೊರಕೊಳಲು ವಾ-।
ಸನೆಗೆ ಶೈಥಿಲ್ಯಂ ಘಟಿಪುದನುಭೂತ ವಿಷಯಗಳ ॥
ದಿನದಿನಕ್ಕದರಿಂದ ಸುಖಮೇ-।
ಜನಿಪುದಂತರ್ಮುಖತೆಯೈದಿದ-।
ಮನಕದುವೆ ಪೇಳುವರು ತನುಮಾನಸಿಯೆನುತ ಬುಧರು ॥ ೨೬ ॥

---

೨೪ ....ರೆಂಬುದನು+ಈ ನಿಖಿಲ ದೃಶ್ಯಪ್ರದೇಶದೆ—ಸರ್ವತ್ರವು ಕಾಣುತ್ತಿದ್ದರೂ ನಾನು ತಿಳಿಗೇಡಿಯೆಂತಾಗಿಬಿಟ್ಟಿರುವೆನಲ್ಲ! ವಿವೇಕವನ್ನು ಮಾಡಿ ಮನಸ್ಸಿನಲ್ಲಿ, ನೋಯದೆ+ಇರ್ದಪೆನು+ಇದೇಕೆ? ಎಂದು ತನ್ನ ಮೌಢ್ಯಕ್ಕೆ ಪಶ್ಚಾತ್ತಾಪ ಮಾಡುತ್ತಲೂ, ಇನ್ನುಮುಂದಾದರು ತನ್ನ ಸದ್ಗತಿಗೆ, ಏ—ಯಾವ ಉಪಾಯವಿರುವದು? ಎಂದೂ, ಆಯತಿ—ದೀರ್ಘಾಲೋಚನೆಯಲ್ಲಿಯೇ ತನ್ನ ಮತಿಯು ಅನವರತವೂ, ಒಡವೆರದು—ಸೇರಿಕೊಂಡಿರಲು 'ಸುಖೇಚ್ಛೆ'ಯು.

೨೫ ಗುರು ಶಾಸ್ತ್ರಗಳ ಉಪದೇಶದಿಂದ ತನಗೆ ವೈರಾಗ್ಯ ಬರಲು, ಈ ಸಂಸಾರ ಭೋಗ ವಾಸನೆಗಳು—ಹೆಚ್ಚಿನ ನರಕರಾಶಿಗಳಲ್ಲಿಯೇ ಬಿಡದಂತೆ ತನಗೆ ಕಡುಯಾತನೆಗಳನ್ನು, ದದಂ—ಕೊಡುತ್ತವೆ ಎಂದು ಬಗೆದ ತನ್ನ ಮನಸ್ಸಿನಿಂದ, ಆ ದುರ್ವಾಸನೆಗಳನ್ನು ಜಯಿಸಿ, ಚರಿತ—ಆಚರಿಸಲ್ಪಟ್ಟ, ಸದಯನಮಂ—ಶಿಷ್ಟಾಚಾರವನ್ನು, ಚಾರ—ವಿಚಾರವನ್ನು ಸದಾಕಾಲದಲ್ಲಿಯೂ ಮಾಡುತ್ತಿರುವದೆ, ಸಂಖ್ಯೆಯು—'ಸುವಿಚಾರಣೆ' ಎಂದು, ಎನಿಕ್ಕು—ಎನ್ನಿಸಿಕೊಳ್ಳುವದು.

೨೬ ತನ....ಮುಂ—ಮುಮುಕ್ಷುತೆಯು, ಚೇತ....ರ್ಶೆ—ತತ್ತ್ವವಿಚಾರವೂ, ಘಟಿಪುದು+ಅನುಭೂತ—ಹಿಂದನುಭವಿಸಿದ್ದ ವಿಷಯವಾಸನೆಗಳು ತಮ್ಮೊಳಗೆ ಬಲಗುಂದಿ ಕ್ಷೀಣಿಸುವವು.

ತರಣಿ ಕೇತುಸ್ತಂಭದಲಿ ಕುಳಿ-।
ತಿರುವ ವಾಯಸದಂತೆ; ವಿಷಯ-।
ಕ್ಕೆರಗದ ಸ್ವಾರಸ್ಯದಿಂದಿರುತಿರಲು ನಿಜಪದದೆ-॥
ಬೆರದು, ತದ್ಗತ ಸುಖವ ಸೇವಿಸಿ, ।
ಮರಳಿ ಮತ್ತೊಂದ್ವೆದದಿಹ ಭಾ-।
ಸ್ವರ ಮತಿಯ ಪೇಳುವರು ಸತ್ವಾಪತ್ತಿಯೆಂತೆಂದು ॥ ೨೭ ॥

ಈ ಧರಾತಿಶಯಂ ಮಿಗಲ್ನಿಜ ।
ಬೋಧದಿಂ ಪೊರಗಾದವೆಲ್ಲವು-।
ಬಾಧಿಸಿಕೊಳುತ್ತಿರ್ಪ ಗೆಶೆಯಿಂ ಶುದ್ಧ ಸತ್ವಮಯಂ-॥
ಮೇಧೆ ವಿಷಯಾಸಂಗ ವಿರಹವೆ ।
ಸಾಧು ಫಲವಾಗುಳ್ಳುದಾಗಲು-।
ಪಾಧಿ ವರ್ಜಿತರದನು ಸಂಸಕ್ತಿಯೆನುವರು ಭರದಿಂ ॥ ೨೮ ॥

ಅರಗಲೀಯ್ದಿದನೆಯ ಸಂಸ-।
ಕ್ತಿ ರುಚಿ ಚಿತ್ತಕ್ಕಾವುದಾದರು ।
ಮಿರುಪಿನಿಂ ಮೋಹಕವೆನಿಸದಖಿಲ ಪ್ರಪಂಚದಲಿ ॥
ಪೊರಗೊಳಗೆ ತೋರದೊಡವಾವುದು ।
ಪರರ ಯತ್ನಂ ವಿಡಿದು ತನಗೊ-।
ತ್ತರಿಸಲೆಚ್ಚರು ದೇಹ ಮಾತ್ರ ಗ್ರಾಹ್ಯ ವಿಷಯದಲಿ ॥ ೨೯ ॥

ಅದು ಪದಾರ್ಥಾಭಾವನಾ ನಾ-।
ಮದಲೆಸವುದದರಿಂದ ಭೇದಂ-।
ವಿದರಣಂ ಪಡೆಯಲ್ಕೆ ಯಾವುದು ನಿಜಮದರೊಳಿರದೆ-॥
ವಿದುರರೆಂಬರು ತುರ್ಯಗೆ ಯೆನು-।
ತ್ತದನದೇ ವಿಗತಾವಯವಿ ಮೋ-।
ಕ್ಷದ ಸಹಜಮೆಂತೆಂದು ವಿಜ್ಞಾನೈಕ ಚೇತನರು ॥ ೩೦ ॥

---

೨೭ ತರಣಿ—ಸಮುದ್ರ ಮಧ್ಯದ ನೌಕೆಯ, ಕೇತು—ಧ್ವಜಸ್ತಂಭದಲ್ಲಿ ವಾಯಸ—ಕಾಗೆಯಂತೆ,

೨೮ ಈ ಧರಾ....ಗಲ್—ಈ ಭೂಮಿಕೆಯನ್ನು ಮೀರಲು, ನಿಜ....ಲ್ಲವು—ಅನಾತ್ಮದೃಶ್ಯವೆಲ್ಲವೂ ‹ಮಿಥ್ಯೆಯೇ ಸರಿ' ಎಂದು ಭಾವಿಸಿಕೊಂಡಿದ್ದರಿಂದ, ಶುದ್ಧ....ಮೇಧೆ—ಸತ್ವಮಯವಾದ ಬುದ್ಧಿಗೆ ಆಗ ಸುಲಭದಿಂದ ದೊರೆತುಬಿಟ್ಟಿರುವ ವಿಷಯಗಳ, ಆ ಸಂಗವಿರಹ—ಅಗಲುವಿಕೆ ಎಂಬುದೆ, ಸಾಧು....ಒಳ್ಳೆಯ ಫಲಭಾಜನದ ಈ ಸ್ಥಿತಿಯನ್ನೇ 'ಸಂಸಕ್ತಿ' ಎಂದೆನ್ನುವರು.

೨೯—೩೦—ಅರಗಲ್+ಈ ಐದನೆಯ, ಚಿತ್ತಕ್ಕೆ+ಆವುದಾದರು, ಮಿರುಪಿನಿಂ—ಮಿರುವಿನಿಂ—ಪ್ರಕಾಶದಿಂದ, ತನ್ನ ಶರೀರೇಂದ್ರಿಯಗಳನ್ನು ಕಡೆದು ವಿಕಾರವನ್ನು ಪಡಿಸಲಾರದು, ತನಗೆ+ಒತ್ತರಿಸಲು—ಬಲಾತ್ಕಾರದಿಂದ ಎಚ್ಚರ ಬರಲು; ೩೦ ....ದಲಿ+ಎಸವುದು—ಶೋಭಿಸುವದು,

ಅಲ್ಲ ದೇಹವನುಳಿದಿರುವ ಬಳಿ-।
ಯಲ್ಲಿ ಮೋಕ್ಷಮಿದೇಕೆ, ದೇಹಂ ।
ಪಲ್ಲವಿಪ ಕಾಲದಲಿ ಲಯಿಸುವ ಸಮಯದೊಳಗುಂಟೆ! ॥
ಉಳ್ಳ ಲಿಂಗಶರೀರಮಿಲ್ಲದೊ-।
ಡಿಲ್ಲವಾಯ್ತು ನೋಡಲದರಿಂ ।
ಬಲ್ಲವಿಕೆ ಬಂದಲ್ಲಿ ಶಕ್ತಿನಿಪಾತವೇ ಮೋಕ್ಷಂ ॥ ೩೧ ॥

ಇಲ್ಲವಾದುದಕಿರದು ಬಂಧಮು-।
ದಿಲ್ಲಿದಾ ಬಳಿಯೇ ಸ್ವರೂಪಂ-।
ಪಲ್ಲವಿತವದ್ಗುಣ ಮನೋಭಾಸುರ ಶರೀರಾದ್ಯಂ-॥
ಉಳ್ಳ ಕಾಲದೊಳಾವುದೋ ತ-।
ನ್ನಲ್ಲಿ ತೋರ್ಪವರಿಪ್ಪನ ವಿಚಾ-।
ರೋಲ್ಲಸದ್ದಸೆಯದು ವಿದೇಹಾಮೃತವೆನಿಕು ಪೆಸರಿಂ ॥ ೩೨ ॥

ಆದರೆಲೆ ಸದ್ಗುರುವೆ ಸಂಶಯ ।
ವಾದುದೊಂದದ ಪೇಳುವೆನು, ನೀ-।
ವಾದರದಿ ಲಾಲಿಸಿ. ತದಂತವಗೈಸಿಕೊಡಬೇಕು ॥
ಮೇದಿನಿಯ ಮಧ್ಯದಲಿ ಬಂದುದ-।
ನಾದಿ ಬೋಧಂ ಓರ್ವಗಾತಗೆ-।
ತೀರದುದಿಲ್ಲಾ ವಾಸನೆಯ ಸಾಂತತ್ಯವವಗೆಂತು- ॥ ೩೩ ॥

---

....ವಿವರ....ಕ್ಕೆ—ಭೇದವು ಶೀಳಿ ನಾಶವಾಗಲು, ವಿದುರರು—ಬಲ್ಲ ಜ್ಞಾನಿಗಳು, ವಿಗತಾವಯವಿ—ಅಶರೀರ ಮುಕ್ತಿಯು;

೩೧ ....ವನು+ಉಳಿದಿರುವ—ಬಿಟ್ಟಿರುವ ಸಾವಿನಲ್ಲಿ ಮೋಕ್ಷವಿಲ್ಲ, ಹೇಗೆಂದರೆ ನಿತ್ಯವಾದ್ದರಿಂದ ಅದು ಹುಟ್ಟಿ ಪುನಃ, ಪಲ್ಲವಿಪ—ವಿಕಾಸವಾಗಿ ಚಿಗುರುವ ಮತ್ತು ಈ ದೇಹವಳಿದು ತನಗೆ ಮರಣವಾಗುವ ಈ ಕಾಲಗಳಲ್ಲಿ ಮೋಕ್ಷವಿರುವದು. ಹೊಂದುವದಿಲ್ಲವಾದ್ದರಿಂದ ಜ್ಞಾನದಿಂದ ತನ್ನ ಲಿಂಗಶರೀರವಿಲ್ಲವಾಗಲು, ಸ್ಥೂಲದೇಹವು ತಾನಾಗಿಯೇ ಇಲ್ಲವಾಯ್ತು. ಈ ಕಾರಣದಿಂದ ಅಜ್ಞಾನ ಹೋಗಿ ತನಗೆ ಬಂದ ಜ್ಞಾನವೇ (ಮುಂ ೨-೧-೧೦) ಮೋಕ್ಷವು.

೩೨ ಮೊದಲು ಕೊನೆಗಳಲ್ಲಿ ತಾನಿಲ್ಲದ ಶರೀರವು ಬಂಧವಲ್ಲದ್ದರಿಂದ ಆ ದೇಹದ ಮರಣವು ಸಂಸಾರ ಬಿಡುಗಡೆಯೂ ಆಗುವಂತಿಲ್ಲ. ಮರಣವಾದರೂ ಬೇರೊಂದು ರೂಪಿನಿಂದ ಆ ಶರೀರವು ತನಗೆ ಮುಂದೆ ಸೇರಲಿರುವದು. ಆದರಿಂದ ಶರೀರದ ತಾತ್ಕಾಲಿಕ ವಿಯೋಗವು ಮುಕ್ತಿಯಾಗುವದಕ್ಕಿರುವದಿಲ್ಲ. ಪಾರಿಶೇಷನ್ಯಾಯದಿಂದ ತಾನು ಬದುಕಿರುವಾಗಲೇ ವಿಚಾರಫಲವಾಗಿ ತನಗೆ ಬರುವ ಅಶರೀರಾತ್ಮಜ್ಞಾನವೆಂಬುದೇ ವಿದೇಹಾಮೃತ ಎಂದು ಸಿದ್ಧಿಸಿತು.

೩೩ ತತ್+ಅಂತವ+ತಾವು ಆ ಸಂಶಯದ ನಾಶವನ್ನು ನನಗೆ ಮಾಡಿಕೊಡಬೇಕು! ಅನಾದಿ—'ನಾನು ನಿತ್ಯಮುಕ್ತನು' ಎಂಬ, ಬೋಧಂ....ದುದು+ಆತಗೆ+ತೀರದುದು—ಆ ವಾಸನೆಗಳು ತೀರಿ ಮುಗಿದುಹೋದದ್ದು ಮಾತ್ರ ಇಲ್ಲ, ....ಸಾಂತತ್ಯವು—ವಾಸನೆಗಳ ಪರಂಪರೆಯು,

ಉದಿಸುವುದು ನಾಲ್ಕನೆಯ ಭೂಮಿಯ-|
ಮೊದಲುಗೊಂಡೇಳನೆಯ ಭೂಮಿಯ |
ಪದವ ಮೆಟ್ಟುವ ಯೋಗ್ಯತೆ ಯೆನಲ್ಕೇಳಿ ಗುರುವರ್ಯಂ ||
ಸದಯನಾಗಿರುವ ತ್ರಿಯಂಬಕ-|
ನುದಿತ ಭಾನು ಪ್ರಸರಣಂ ಮೇ-|
ಲೊದಗಿದುದು ನರಸಾರ್ಯ ಹೃದಯಾಂಭೋಜವಕ್ತ್ರದಲಿ || ೩೪ ||

ಇಲ್ಲಿಯೇ ನಿಲಬೇಕು. ಮತ್ತಿ-|
ನ್ನೆಲ್ಲಿ ಹೋಗಲ್ಬಾರದೆಂದದ-|
ರಲ್ಲಿ ತಡದ ಮನೋವಿಲಾಸಂ ಯೋಗವಲ್ಲದಲೆ-||
ಸಲ್ಲಲಿತ ವಿಜ್ಞಾನವುಲ್ಲದ-|
ರಲ್ಲಿ ಬಂದ ಸಮಾಧಿ ಯೋಗದಿ-|
ಪಲ್ಲವಿಸಿ ನಿಂದಿರ್ದುಪಾಧಿ ತದುತ್ಥವಾಗಿರುವ- || ೩೫ ||

ಯಾವುದಾನೊಂದುಂಟು ಸುಖವದು |
ಜೀವ ಲೋಕದೆ ಸಾತಿಶಯವದ-|
ನೇ ವಿಚಾರಿಸಿ ತಿಳಿದೆ, ಹಾಹಾ! ಬಿಡು ಬಿಡಿದ ಕೇಳು ||
ಜೀವತೆಗೆ ಎಲ್ಲಿಂದ ಬಂದುದು |
ಸಾವಕಾಶವದಲ್ಲವೆಂದದ-|
ಕಾವಲಂಬ್ಯದಿ ನಿಲಲು ಸತ್ವಾಪತ್ತಿಯೆನಿಸುವದು || ೩೬ ||

---

೩೪ ....ತ್ರಿಯಂಬಕನ+ಉದಿತಭಾನುಪ್ರಸರಣಮುಂ-ತ್ರಿಯಂಬಕ ಗುರುರೂಪಸೂರ್ಯನ ದಯೆಯೆಂಬ ಅರುಣೋದಯವು ನರಸಾರ್ಯರ ಹೃದಯವೆಂಬ ಅಂಭೋಜವಕ್ತ್ರದಲಿ-ತಾವರೆಯ ಮೇಲೆ ಬಿದ್ದು—ತನ್ನ ಉತ್ತರವು ಬಂದು ಆ ಶಿಷ್ಯನ ಹೃದಯದಾವರೆಯು ಅರಳಿತು!

೩೫ ಇನ್ನೊಂದರಲ್ಲಿ ಹೋಗದಂತೆ ವೃತ್ತಿಗಳನ್ನು ಪ್ರಯತ್ನದಿಂದ ತಡೆಗಟ್ಟುವದು ಯೋಗವು, ಎಂದಿಗೂ ಅದು ಜ್ಞಾನವಲ್ಲ; ಏಕೆಂದರೆ ಸಂಸಾರಾನರ್ಥದ ಕಾರಣವಾದ ಅಜ್ಞಾನವು ಒಣಗಿಹೋಗದೆ, ಅಲ್ಲಿಯೂ ತಾನು ಪಲ್ಲವಿಸಿ—ಚಿಗುರಿಕೊಂಡೇ ಇರುವದು. ಆದ್ದರಿಂದ ಪ್ರಯತ್ನಮಾಡಿ ಶರೀರಾದಿ ಅನಾತ್ಮಗಳನ್ನು ತಾನು ಅಮುಕಿ ಬಿಗಿಹಿಡಿದುಕೊಂಡಿದ್ದರಿಂದ ಮೇಲೆದ್ದು ತೋರುವ—

೩೬ ಆ ಸುಖವು ಮನುಷ್ಯಾನಂದವನ್ನೆ ಕಡೆಗಣಿಸಿ ನಿಂತಿರುವದು ನಿಜವಾದರು, ನೀನು ತಿಳಿದ.ಕೊಂಡಿರುವ ಅದು—ದೃಶ್ಯವಾಗೆದುರಿಟ್ಟು ತನಗೆ ಕಂಡದ್ದರಿಂದ ತನ್ನಾತ್ಮನಾಗಿ ನೆಲೆ ನಿಲ್ಲುವದಕ್ಕಿರುವದಿಲ್ಲವಾದ್ದರಿಂದ ಅದನ್ನು ಕೈಬಿಟ್ಟು, ಈಗ ಜ್ಞಾನನಿಷ್ಠೆಯನ್ನು ಕೇಳು—ಎಲ್ಲಿಂದ ಈ ಜೀವನು ಹೊರಕ್ಕೆ ಬಂದು ತೋರಿಕೊಳ್ಳುತ್ತಿರುವನೊ? ಆ ಆತ್ಮತತ್ತ್ವವೇ 'ನಾನು' ಎಂಬುದರ ಪರಮಾರ್ಥವು, ಎಂದು ಭಾವಿಸಿ ತನ್ನಿಷ್ಠನಾಗಿ ನೆಲೆನಿಲ್ಲುವದೇ ಜ್ಞಾನನಿಷ್ಠೆಯಲ್ಲದೆ ಮತ್ತೊಂದಲ್ಲ.

ತೋರುತಿರಲಖಿಲ ಪ್ರಪಂಚವು ।
ತೋರಲೀ ಕಾಮಾದಿ ವರ್ಗವು ।
ಸಾರಿದಂತರ್ವೃತ್ತಿ ಚಿತ್ತಿಗೆ ವಿಷಯವೇನಹುದೆ ॥
ಈ ರಸಾದಿಕ ಭೂತಕಾರ್ಯವಿ-।
ಕಾರವೆಂಬುದೆ ಸತ್ತಿಗಿಲ್ಲವು ।
ಆರಯಲ್ಸದ್ಭಿನ್ನವಾಗೊಂದಿಲ್ಲವೆಂದರಿಯೆ:- ॥ ೩೭ ॥

ಅದುಕಣಾರನೆಯದು, ವಿಚಾರಿಸ-।
ಲಿದುಕಣಾ ಏಳನೆಯದಿದರೋಳ್ ।
ಹೃದಯವಿದ್ದರೆ ಬಾಧೆಯೇನದರೊಳಗೆ ಕಾಮಾದಿ- ॥
ಮದ ಮುಖರ್ಕಳಿರಲ್ಕವರಿನಿಂ-।
ದೊದಗುತಿಹ ಕೇಡೇಂ ಹುರಿದ ಮು-।
ದ್ಗದಲಿ ಭೋಜ್ಯತೆಯಲ್ಲದಂಕುರಿಸಲ್ಕೆ ಬಲವುಂಟೆ ॥ ೩೮ ॥

ಈ ಪರಿಯ ಭೂಮಿಕೆಗಳಭ್ಯಾ-।
ಸೋಪ ಲಕ್ಷಿತ ಚಿತ್ತರಾದ ಮ-।
ಹಾ ಪುರುಷರೇ ವಂದ್ಯರರ್ದಿತ ವಿಷಯ ಶತ್ರುಗಳು ॥
ಆ ಪದಕ್ಕಿಂದ್ರಾದಿಗಳ ಭೋ-।
ಗೋಪಲಾಲಿತ ರಾಜ್ಯ ಭೂತಿಗ-।
ಳೀ ಪಲಾಲಪ್ರಾಯವಾಗಿಹುದಿದುವೆ ಸತ್ಯತರಂ। ॥ ೩೯ ॥

---

೩೭ ಪ್ರಪಂಚವು, ಕಾಮಾದಿ ವೃತ್ತಿಗಳು ಮತ್ತು ಈ ನಿಖಿಲಾಕಾರದಿಂದ, ಸಾರಿದ—ಹೊರ ಹೊಮ್ಮಿ ತೋರಿಕೊಳ್ಳುತ್ತಿರುವ, ಅಂತರ್ವೃತ್ತಿ—ಮನೋವಿಕಾರ—ಇವುಗಳು ಎಷ್ಟುಬೇಕಾದರು ತಲೆಯೆತ್ತಿ ತಾವು ಇಟ್ಟಣಿಸುತ್ತಿರಲಿ! ಅವನ್ನೆಲ್ಲ ಬಿಡದಂತೆ ಬೆಳಗುತ್ತಿರುವ ಚಿತ್ತಿಗೇನಾದರೂ ಅವು ವಿಷಯವಾಗಿ ಅದನ್ನು ವಿಕಾರಪಡಿಸಬಲ್ಲವೇನು? ತೋರುತ್ತಿದ್ದಂತೆಯೆ ಅಳಿಯಲಿರುವ ಅವುಗಳಿಂದ ಆ ಚಿತ್ತಿಗೆ ವಿಕಾರದ ಅಂಜಿಕೆಯೇ ಇರುವದಿಲ್ಲ. ಇಷ್ಟೇ ಅಲ್ಲ, ಈರಸಾದಿಕ—ಶಬ್ದಾದಿ ಈ ವಿಷಯಗಳ ವಿಕಾರವೆಂಬುದೇ ಸತ್ತಿಗೆ ಮೊದಲಿರುವದಿಲ್ಲ. ಏಕೆಂದರೆ ಆರೈಯ್ಯಲ್—ವಿಚಾರ ಮಾಡಿದರಂತು ಅವುಗಳಲ್ಲೊಂದಾದರೂ ಸದ್+ಭಿನ್ನವಾಗಿಲ್ಲ.

೩೮ ಮನಸ್ಸೊಂದಿದ್ದರೆ ಸಾಕು, ಆ ಮನಸ್ಸಿನಲ್ಲಿ—ಕಾಮ, ಮದ+ಆದಿಮುಖರ್ಕಳ್+ಇರಲ್ಕೆ—ಅವುಗಳ ಸಂಸ್ಕಾರಗಳಿದ್ದರೆ, ಅವರಿನಿಂದ+ಒದಗುತಿಹ—ಬರಬಹುದಾದ ಬಾಧೆಯಾವದೂ ಇರುವದಿಲ್ಲ ಹೇಗೆಂದರೆ ಹುರಿದ, ಮುದ್ಗ—ಹೆಸರುಕಾಳು ತಿನ್ನುವದಕ್ಕಲ್ಲದೆ, ಮೊಳೆಯುವಲ್ಲಿ ಅದಕ್ಕೆ ಬಲವಿಲ್ಲದಂತೆ ಆ ಸಂಸ್ಕಾರಗಳೂ ಜನ್ಮಾಂಕುರವನ್ನು ಕುರಿತು ಜ್ಞಾನಿಗಿರುವದಿಲ್ಲ.

೩೯ ವಂದ್ಯರು + ಅರ್ದಿತ—ಹೊಡೆಯಲ್ಪಟ್ಟ, ಆಪದಕ್ಕೆ—ಆತ್ಮನಿಷ್ಠೆಗೆ ಇಂದ್ರಾದಿ ದೇವತೆಗಳ ದಿವ್ಯ ಸಂಪತ್ತುಗಳು, ಪಲಾ—ಅಕ್ಕಿ ತೆಗೆದ ಹೊಟ್ಟಿನಂತೆ ಬರಿಯ ಜಳ್ಳೆಂಬುದೇ ಸತ್ಯತರಂ—ಪರಮ ಸತ್ಯವು.

ಮೊದಲ ವರ್ಣವೆ ವೈಪ್ರವದು ಸ-।
ತ್ವದ ಖನೀಭೂತಂ, ತದಧಿಕಾ-।
ರದಲಿ ಜೀವಂಗಿತರರಿಂದಹುದರ್ಚ್ಯಚರಣತ್ವಂ ॥
ಇದಕೆ ನಾನಧಿದ್ಯೆವಮೆಂತೆಂ-।
ಬುದನು ಮುಕ್ತಿ ಕ್ರಿಯೆಯನಾಳ್ವನೆ-।
ವದಿ ಮೆರೆವ ಭರ್ಗಂ ನಮಗೆ ಕರುಣಿಸುಗೆ ಶಿವಪದಮಂ ॥ ೪೦ ॥

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೊಳ್ಸಪ್ತಭೂಮಿಕೆಗಳಂ
ಪೇಳಿದುದು ಹದಿನಾರನೆಯ ಸಂಧಿ ಸಮಾಪ್ತಂ (ಪ|| ೯೧೫)

## ಜೀವನ್ಮುಕ್ತ ಪೂಜಾಫಲ ನಿರ್ಣಯ-೧೭ನೆಯ ಸಂಧಿಯು

ಸೂ॥ ಅಂತವಿಲ್ಲದ ನಿಜಪದದಿ, ವಿ-।
ಶ್ರಾಂತಿಯಂ ಸಾಧಿಸಿದ ಘನ ವೇ-।
ದಾಂತದಿತ್ತಿಗೆ ಫಲನಿರೂಪಣಮಾಚರಿಪುದಿಲ್ಲಿ ॥ ॥ ಪ ॥

ಇತರ ಸಾಧಾರಣಮೆನಿಸದಿಹ-।
ಕೃತಿಯನೆಸಗುವ ಮಂತ್ರ ದೇವ-।
ವ್ರತ ತಪಶ್ಚರಣ, ಛಲದ ಶಾಂಬರಿಯ ನೆರೆ ಕಲಿತ-॥
ಯತಿಗಳನು, ಭೋಗಿಗಳ, ನಾನಾ-।
ಮತವಿಶಿಷ್ಟರ ಪಶುಗಳಿಂದುಪ-।
ಮಿತರೆನುವ ಧೀರರಿಗೆ ಪೇಳುವದೀ ಕಥಾಶ್ರುತಿಯ ॥ ೧ ॥

---

೪೦ ಹುಟ್ಟಿ ಜ್ಞಾನಕ್ಕಾಗಿಯೇ ತಾವು ಜೀವಿಸಿಕೊಂಡಿರುವ ಜ್ಞಾನಿಗಳು ಸಕಲ ಜೀವರಿಗೂ ಜ್ಞಾನವೆಂಬ ಪರಮ ಮಂಗಲವನ್ನು ಹರಸುತ್ತ ಜಗನ್ಮಂಗಲಕ್ಕೆಡೆಯಾಗಿರುವರಲ್ಲದೆ, ಜ್ಞಾನಸಾಧನಗಳೆಲ್ಲದರ ಸತ್ವದ ಖನಿಜದಂತೆಯೂ ಇರುವ ಆ ವೇದಮೂರ್ತಿಗಳ ಚರಣವು ಸರ್ವರಿಗೂ ಅರ್ಚ್ಯವು. ಈ ಉಚ್ಚ ಪೂಜ್ಯತಮತ್ವಕ್ಕೆ ಅಡಿಗಲ್ಲಿನಂತೆ ನಾನೇ ಮೊದಲನೆಯವನೆಂಬುದನ್ನು ನಿಯತದಿಂದ ತನ್ನನ್ನು ಗೊತ್ತುಪಡಿಸಿಕೊಳ್ಳುತ್ತಿರುವ ಶಿವನು—ಸನಕಾದಿಗಳ ನೆವವಿಡಿದು ಇಡಿಯ ಲೋಕಕ್ಕೇ ದಕ್ಷಿಣಾಮೂರ್ತಿಯ ರೂಪದಿಂದ ಜ್ಞಾನವನ್ನನುಗ್ರಹಿಸುತ್ತಿರುವನು. ಸರ್ವಲೋಕೈಕ ಗುರುವಾಗಿ ಮತ್ತು ಮುಕ್ತಿಯೆಂಬ ಸತ್ಯವನ್ನಾಳುತ್ತ ಆ ಮುಕ್ತಾಂಗನೆಯನ್ನು ವರಿಸಿದ್ದರೂ ತಾನು ಮಾತ್ರ ವೈರಾಗ್ಯಚಕ್ರವರ್ತಿಯಾಗಿಯೇ ಮೆರೆವ ಆ ಭರ್ಗನು ತನ್ನ ಶಿವಪದವನ್ನು ನಮಗೆ ಕರುಣಿಸಲಿ.

ಸೂ॥ ವೇದಾಂತಶಾಸ್ತ್ರವೆಂಬ, ದಿತ್ತಿ–ದೀಪ್ತಿ–ದಿವ್ಯಜ್ಯೋತಿಗೆ ಫಲ ನಿರೂಪಿಸಲಾಗುವದು.

೧ ಇತರ....ದಿಹ—ಕೆಲವರು ಮಾತ್ರ, ಕೃತಿಯನು + ಎಸಗುವ—ಮಾಡಬಹುದಾದ, ಛಲ—ಚಲದ, ಜನರನ್ನು ಬೆರಗುಪಡಿಸಿ ಮೋಸಮಾಡುವ ಖೇಚರಿ, ಭೂಚರಿ, ಶಾಂಭವೀ ಮುಂತಾದ ಈ ಕಪಟರೂಪದ ಮುದ್ರೆಗಳನ್ನು; ನಾನಾಮತವಿಶಿಷ್ಟರ—ತಮ್ಮದೆ ಒಂದಾದ ವಿಧಿ

ಜ್ಞಾನಕಿಂ ಪೆರತಿಲ್ಲ ಪಾಪದ-।
ಕಾನನವ ಸುಡುವನಲವಂಥಾ-।
ಜ್ಞಾನ ಶಾಸ್ತ್ರಾಭ್ಯಾಸಮಂ ಒಮ್ಮಾಸ ಷಣ್ಮಾಸ-॥
ಮಾಣದೊಂದಬುದವನು ಮಾಡ-।
ಲ್ಕೇನದಲ್ಪಂ ಉರುವ ಕಲುಷಮು-।
ನೂನ ಕಿಲ್ಬಿಷವಡಗುವದು ಪರಿವಿಡಿಯುನನುಗಮಿಸಿ ॥ ೨ ॥

ನಂಬಿ ಯಾವವನಭ್ಯಸಿಪ ನರ-।
ನಂ ಬಿಡುವುದೀ ಸಂಸರಣ ಭಯ-।
ವೆಂಬ ನಾವಂ, ಜ್ಞಾನಮಾಹಾತ್ಮ್ಯವನು ಪರಿಗಣಿಸಿ-॥
ಎಂಬರುಪನಿಷದರ್ಥಮೇ ಜ್ಞಾ-।
ನಂ; ಬರಡು ಮಿಕ್ಕವವೆನುತ್ತೆ ತ್ರಿ-।
ಯಂಬಕಾದ್ಯಧ್ಯಾತ್ಮನಿಷ್ಠರಹಾರ್ದಮಿರುತಿಹರು ॥ ೩ ॥

ಲವ ಶುಚಿ ಪ್ರಭೆಯಧಿಕ ತಾಮಸ-।
ನಿವಹಮಂ ಪರಿವಂತೆ; ವೇದನ ।
ಲವದಿ ಪಾಪ ಸಹಸ್ರವಡಗುವದೆಂದು ತಲೆಯಿಡದೆ, ॥
ಪ್ರವಿಮಲ ಜ್ಞಾನವಿದು ಯಾರ ವ-।
ಶವನು ಸಾರಿಹುದವನೆ ಸಾಕ್ಷಾ-।
ಚ್ಛಿವನು, ತದ್ದೂಷಕರು ಕಲ್ಪನಿರಯ ನಿವಾಸಿಗಳು ॥ ೪ ॥

---

ನ್ನಾಭಿಪ್ರಾಯವುಳ್ಳವರನ್ನೂ, ಪಶುಗಳಿಂದ+ಉಪಮಿತರು—ಪಶುಗಳಿಗೆ ಅವರು ಸರಿಹೋಲುವವರೆನ್ನುವ....;

೨ ಪೆರತಿಲ್ಲ—ಬೇರೆಯಿರುವದಿಲ್ಲ, ....ಕಾನನವ—ಕಾಡನ್ನೆಲ್ಲ ಸುಡುವ, ಅನಲವು—ಕಾಡಗಿಚ್ಚು, ....ಸಮಂ+ಒಮ್ಮಾಸ—ಒಂದು ತಿಂಗಳು, ಷಣ್ಮಾಸ–ಆರು ತಿಂಗಳು, ಅಥವಾ ಮಾಣಧೆ—ಬಿಡದಂತೆ ನಿರಂತರವೂ, ಒಂದು+ಅಬುದ– ವರ್ಷದ ಕಾಲವನ್ನಾದರೂ, ಮಾಡಲ್ಕೆ+ಏನು ಅದು+ಅಲ್ಪಂ—ಅಧಿಕವಲ್ಲ, ಕೊಂಚಮಾತ್ರವೇ ಆಗುವದು. ಏಕೆಂದರೆ ಅದರಿಂದ, ಉರುವ—ಅಧಿಕವಾದ ಪಾಪದೋಷಗಳೆಲ್ಲವೂ, ಅನೂನ—ಸಂಪೂರ್ಣವಾಗಿ ತಾವು, ಪರಿವಿಡಿಯುನು—ಬಂದ ದಾರಿಯನ್ನನುಸರಿಸಿ ತೊಲಗುವವು.

೩ ಈ ಸಂಸರಣ—ಈ ಸಂಸಾರ, ....ಎಂಬನು+ಆವಂ—ಯಾವನಾದರೆ, ಪರಿಗಣಿಸಿ—ಮನದಂದುಕೊಂಡು, ಉಪನಿಷತ್ತುಗಳ ಅರ್ಥವಾದ ಜ್ಞಾನವೊಂದೇ ಗಟ್ಟಿಯಾಗಿ ನಿಲ್ಲುವ ಪರಮ ಪುರುಷಾರ್ಥವಲ್ಲದೆ, ಮಿಕ್ಕೆಲ್ಲವು ಬರಡು—ನಿಸ್ಸಾರ, ಟೊಳ್ಳು, ಬಂಜೆಯೆಂತೆ ಫಲಕೊಡತಕ್ಕವುಗಳಲ್ಲ ಎಂದು ತ್ರಿಯಂಬಕರಾದಿಅಧ್ಯಾತ್ಮನಿಷ್ಠರೆಲ್ಲ ಅಹಾರ್ದಂ–ಅಹಾರ್ಯ:–ನಿಶ್ಚಿಂತರಾಗಿರುವರು.

೪ ಲವ–ಕ್ಷಣಕಾಲದಲ್ಲಿ ಹುಟ್ಟಿದ, ಶುಚಿ–ಸೂರ್ಯನ ಪ್ರಭೆ–ಬಿಸಿಲು-ಕಿರಣದ ಕಾಂತಿಯು, ಅಧಿಕ....ಹಮಂ—ಬಹುವಾದ ಕತ್ತಲೆಯ ಗುಂಪೆಲ್ಲ ಇನ್ನಿಲ್ಲವೆಂಬಷ್ಟು ನಿಶ್ಶೇಷವಾಗಿ, ಪರಿವಂತೆ–

ಸುಕೃತಿಯಾಗಲಿ, ದುಷ್ಕೃತಿಯೆನಿಸ-।
ಲಿ, ಕಠಿನನು ಕೋಮಲನೆನಿಸಲಿ, ಭ-।
ವುಕವಿಮುಕ್ತ್ಯಭ್ಯಾಸರತನೇ ಪೂಜ್ಯನೆನಿಸುವನು ॥
ಪ್ರಕಟಿಸಲ್ಕೇನಾತ್ಮ ತತ್ತ್ವವ-।
ಯುಕುತಿಯಿಂದರಿದವನ ಸತ್ಪಾ-।
ದ ಕಣರೇಣುವಿನಿಂದ ನಿಖಿಲ ಚರಾಚರಂ ಪೂತಂ ॥ ೫ ॥

ಜ್ಞಾನಿಯಾವನ ಗೃಹಕೆ ಬಹನ ನಿ-।
ದಾನದಿಂದಾತನ ಪಿತೃಗಳು-।
ದ್ದಾನ ಹರ್ಷಿತರಾವ ಬಣ್ಣಿಪನಮರರೊಳ್ಗಣ್ಯಂ ॥
ಮಾನವಾವನ ಸಹಜದಲಿ ವಿ-।
ಜ್ಞಾನವೈದುವದವನ ದೃಕ್ಪಥ-।
ಕೇನು ಬೀಳ್ವುದೊ ಸರ್ವ ಕಿಲ್ಬಿಷದಿಂದದೇ ಮುಕ್ತಂ ॥ ೬ ॥

ಲಲಿತ ಸತ್ಯಾತ್ಮಾಬ್ಧಿಯಲಿ ನೆರೆ-।
ಮುಳುಗಿತಾವನ ಚಿತ್ತವಾತನ-।
ಕುಲವೆ ಪೂತಂ ಜನನಿ ಧನ್ಯಳಿಳೆಯುಮವನ ದೆಶೆಯಿಂ-॥

---

ಹರಿದು ನಾಶಮಾಡುವಂತೆ, ವೇದನಲವದಿ—ಜ್ಞಾನಲಾಭಮಾತ್ರದಿಂದಲೇ, ಸಾರಿಹುದು—ತನ್ನನು ಭವಕ್ಕೆ ಬಂದು ಸಮೀಪಿಸಿರುವದೊ, ತತ್+ದೂಷಕರು—ಆ ಜ್ಞಾನಿಯನ್ನು ದೂಷಿಸುವವರು, ಬ್ರಹ್ಮನ ಒಂದು ಕಲ್ಪಕ್ಕಾದರು ಕೊನೆಗಾಣದಿರುವ, ನಿರಯ—ನರಕವಾಸಿಗಳು.

೫ ಭವುಕ—ಅನಾತ್ಮದೃಷ್ಟಿಯನ್ನಗಲಿಸಿ, 'ತಾನೇ ಪರಮಾತ್ಮನು' ಎಂಬ ಶುಭಸಂದೇಶವನ್ನು ತನಗಿತ್ತು, ವಿಮುಕ್ತಿ—ಬಂಧದ ಬಿಡುಗಡೆಯನ್ನು ಮಾಡುವದೇ ವೇದಾಂತಶಾಸ್ತ್ರವು. ಅದರಲ್ಲಿಯೇ ಪರಾಯಣನಾಗಿ ತತ್ತ್ವವಿಚಾರವನ್ನೆ ತನ್ನ ಜೀವನದ ಉಸುರಾಗುಳ್ಳ ಆ ಪುಣ್ಯಪುರುಷನು ಪುಣ್ಯ ಪಾಪದ ಕ್ರಿಯೆಗಳಲ್ಲಿಯೂ ಮತ್ತು ಕಠಿನ ಅಥವಾ ಅನುಕೋಮಲ ಹೃದಯವೆಂಬ ಈ ಸ್ವಭಾವಗಳಲ್ಲಿಯೂ ಹೇಗಿದ್ದರು ಅವನಿಗೆ ಬಾಧಕವಿಲ್ಲ. ಸರ್ವಥಾ ಅವನು ಪೂಜ್ಯನೆಂಬುದಕ್ಕೆ ಸಂಶಯವಿನ್ನಿಲ್ಲ. ಹೆಚ್ಚು ಮಾತೇನು? ತನ್ನಾತ್ಮನ ನಿಜವನ್ನು ಶ್ರದ್ಧಾಭಕ್ತಿಗಳಿಂದ ನಂಬಿದ್ದರು ಆ ಪುಣ್ಯಪುರುಷನ ಪಾದರಜವು—ಚರಾಚರ ಜಗತ್ತಿನ ಜೀವರನ್ನೆಲ್ಲ ಪಾವನಮಾಡುವದೆಂದಬಳಿಕ ಇನ್ನು ಜ್ಞಾನವೇ ಬಂದು, ವಸುಧೆಯೇ ತನ್ನ ಕುಟುಂಬವಾಗುಳ್ಳ ಆ ಉದಾರಚರಿತನ ಹಿರಿಮೆಯನ್ನು ಕುರಿತು ಹೇಳುವುದಿನ್ನೇನು?

೬ ಅನಿದಾನ—ತನಗೆ ಅನೀರಿಕ್ಷಿತವಾಗಿ, ಪಿತೃವು—ತನ್ನ ಪಿತೃದೇವತೆಗಳು, ಉದ್ದಾನ—ಉದ್ದಾಮ—ಕೊಂಚವು ತಡೆಯಿಲ್ಲದಂತೆ ಆ ಕೂಡಲೇ, ಅಥವಾ ಉದ್ಯಾನಂ—ತಮ್ಮ ಮಕ್ಕಳ ಲಾಭದ ಸಂಪೂರ್ಣ ಪ್ರಯೋಜನವನ್ನು ತಾವು ಹೊಂದಿ ಅಪರಿಮಿತಾನಂದಿಗಳಾಗಿ ಅವರು ಹರ್ಷಿತರಾಗಿಬಿಡುವರು! ಅವ....ಪನು—ಭಕ್ತಿ ವಿಶ್ವಾಸಗಳಿಂದ ಜ್ಞಾನಿಯನ್ನು ಸ್ತೋತ್ರಮಾಡುವ ನರನು ಅಮರರೊಳಗೆ ಒಬ್ಬನೆಂದು ಪರಿಗಣಿಸಲ್ಪಡುವನು. ಎಲ್ಲೆಡೆಗಳಲ್ಲಿಯೂ ತನ್ನಾತ್ಮ ತತ್ತ್ವವನ್ನೇ ಕಾಣುವ ಸ್ವಭಾವವುಳ್ಳವನ ದೃಷ್ಟಿಗೆ ಯಾವದೇ ಗೋಚರವಾದರೂ ಅದು ಸರ್ವದೋಷಗಳಿಂದಲೂ ಮುಕ್ತವು (ಭಾಗವತ ೧೦–೪೮–೩೫)

ಫಲಿತ ಪುಣ್ಯವತಿಯು, ಕರಂ ಕಂ।
ಗೊಳಿಸಿದವನಾವವ ಸುರೇಶ್ವರ-।
ರೊಳಗೆ ಸೇರುವನಾತನನು ಧನ್ಯರೊಳು ಧನ್ಯನನು- ॥ ೭ ॥

ಕಂಡು ಯಜಿಸದೆ, ವಂದಿಸದೆ, ಮುಂ।
ಕೊಂಡು ಕೈಂಕರ್ಯವ ನೊಡರ್ಚದೆ ।
ಶೌಂಡರಾಗಿ ಶರೀರ ಮಾತ್ರ ಸುಖೋಪ ಭೋಗ್ಯಗಳ-॥
ಕೊಂಡು ಕೊಡುವ ನರಾಧಮರ ಬಲ-।
ಗೊಂಡೆಸವರಮೃತವನು ವರ್ಜಿಸಿ-।
ಕೊಂಡವರು ಹಾಲಾಹಲವನಲ್ಲದೆ ವಿಚಾರಿಸಲು ॥ ೮ ॥

ಯವೆಯು ಹಳಚುವ ಕಾಲವಾವನ-।
ಭವನದಲ್ಲಿಹನಾತ್ಮವಿದನಾ-।
ಭವನವೇ ಸಾರ್ಧ ತ್ರಿಕೋಟಿ ತೀರ್ಥ ಸಂಶ್ರಯಣಂ॥
ಅವು ವಿರಳದಿಂ ಬಾಹ್ಯದೊಳಗಿರು-।
ವವು ಸಮಾಕೃಷ್ಟಂಗಳಾಗೈ-।
ಕ್ಯವನು ಪಡೆದೆಂತೊಬ್ಬಳಿಯಲಿಹುದೆನಲು, ತಾತ್ವಿಕನ- ॥ ೯ ॥

---

೭ ಸತ್ಯಾತ್ಮನೆಂಬ, ಅಬ್ಧಿ—ಸಮುದ್ರವು, ಪೂತಂ—ಪವಿತ್ರವು, ಜನನಿ ಧನ್ಯಳು+ಇಳೆ....ವತಿ—ಪಾದ ಸೋಕಿದ ಭೂಮಿಯೂ ಪುಣ್ಯಕ್ಷೇತ್ರಗಳಲ್ಲೊಂದಾಯ್ತು? ಕಂಗೊಳಿಸಿದವನು+ಆವ+ಅವ—ಅವನು.

೮ ಯಜಿಸದೆ—ಪೂಜಿಸದೆ, “ಯಂ ಯಂ ಲೋಕಂ ಮನಸಾ ಸಂವಿಭಾತಿ ವಿಶುದ್ಧ ಸತ್ವಃ ಕಾಮಯತೇ ಯಾಂಶ್ಚ ಕಾಮಾನ್ । ತಂ ತಂ ಲೋಕಂ ಜಯತೇ ತಾಂಶ್ಚ ಕಾಮಾಂಸ್ತಸ್ಮಾದಾತ್ಮಜ್ಞಂ ಹ್ಯರ್ಚಯೇದ್ ಭೂತಿಕಾಮಃ” (ಮುಂ, ೩-೧-೧೦) “ಉಪಾಸತೆ ಪುರುಷಂ ಯೇಹ್ಯಕಾಮಾಸ್ತೇ ಶುಕ್ರಮೇತದತಿವರ್ತನ್ತಿ ಧೀರಾಃ” (ಮುಂ, ೩-೨-೧)ಎಂದು ಶ್ರುತಿಯು—ಜ್ಞಾನಿಯ ಪೂಜೆಯಿಂದ ಜ್ಞಾನದವರೆಗಿನ ಮನೋಭೀಷ್ಟಗಳೆಲ್ಲವೂ ತನಗೆ ಸಿದ್ಧಿಸುತ್ತೆಂದು ಹೇಳುತ್ತಿದೆ; ....ವನು+ಒಡರ್ಚದೆ—ಜ್ಞಾನಿಯನ್ನು ಭಕ್ತಿಭಾವಗಳಿಂದ ಸೇವಿಸದೆ, ಶೌಂಡರು—ಕೊಬ್ಬಿದ ಮನುಷ್ಯರು ತಾವು ನರಾಧಮರಲ್ಲೊಬ್ಬರಾಗಿ, ಎಸವರು—ಆಗುವರು, ಅಲ್ಲದೆ, ತನ್ನ ಕೈಯಲ್ಲಿದ್ದ ಅಮೃತವನ್ನು ಕೊಟ್ಟು, ಮಹಾ ಹಾಲಾಹಲ ವಿಷವನ್ನು ಕೊಂಡ ಹೆಡ್ಡನಂತೆ ಜ್ಞಾನಿಯ ಸುಲಭ ಪೂಜೆಯಿಂದ ಸುರೇಶ್ವರರಲ್ಲೊಬ್ಬರಾಗಿರಬಹುದಾದ ಭಾಗ್ಯವನ್ನು ಕಳೆದುಕೊಂಡ ಈ ಪುಣ್ಯಹೀನರು ಪಾಮರರಲ್ಲಿ ಹುಟ್ಟಿನ ಕಡು ಭಾಗ್ಯಹೀನರಲ್ಲವೆ ಜೀರಲ್ಲಿ!

೯ ಜ್ಞಾನಿಯು ಕಣ್‌ರೆಪ್ಪೆಗಳನ್ನು ಹಳಚುವಷ್ಟು ಅಲ್ಪಕಾಲವಿದ್ದರು ಆ ಮನೆಯು ಜಗತ್ತಿನಲ್ಲಿರುವ ಮೂರುವರೆಕೋಟಿ ಪುಣ್ಯತೀರ್ಥಗಳಿಗೆಲ್ಲಕ್ಕೂ ಆಶ್ರಯವಾಗುವದು. ಹೊರಗಡೆ ಅವು ವಿರಳವಾಗಿ ಬೇರ್ಬೇರೆಯಾಗಿರುವವು. ತಾತ್ವಿಕನ—ತತ್ತ್ವನಿಷ್ಠನಾಗಿರುವ ಜ್ಞಾನಿಯಲ್ಲಿ ಸಮಾಕೃಷ್ಟಂ—ಅವೆಲ್ಲವೂ ಬಂದು ಸೇರಿಕೊಂಡಿರುವವೆಂಬುದನ್ನು ಹೇಗೆ ತಿಳಿಯಬೇಕು? ಎಂದರೆ—

ಶ್ರೀಗಿರಿಯು ಕೇತಾರ ಕಾಶೀ-।
ಭಾಗವು, ಕುರುಕ್ಷೇತ್ರತಲವು, ಪ್ರ-।
ಯಾಗವು, ಚಿದಂಬರವು ಕಮಲಾಲಯವು ಪರಿವಿಡಿಯಿಂ-॥
ಆಗಿಹವು-ಮಸ್ತಕ ನಿಟಾಲೋ-।
ರ್ಣಾಗುರುಸ್ತನ, ವತ್ಸದ ಹೃದ ಮ-।
ಹಾ ಗಣೇಶ ಸ್ಥಾನಗಳ್ಪರಮೇಶನದರಿಂದ ॥ ೧೦ ॥

ಸಕಲ ತೀರ್ಥಾತ್ಮಕನ ಕಂಡೊಂ-।
ದು ಕಡೆಯಲಿ ಸೇವಿಸದ ಪಾಪಾ-।
ತ್ಮಕರ ಸಾಮ್ಯವ ಕಾಣೆ ಭುವನತ್ರಯದ ಮೂಢರಲಿ ॥
ಅಕಟಕಟ! ಪೇಳಿದರು, ಲಘು ಕಾಂ-।
ಚಕೆ ಮಹಾ ಮಾಣಿಕ್ಯಮಿತ್ತವ-।
ನ ಕಲೆಯಲ್ಲಿಯ ತೌಲ್ಯವ ಪುರಾತನರು ಪೇಳುವರು ॥ ೧೧ ॥

ಆತುಮನ ವಿಶ್ವಾಸಮಂ ಕೆಡಿ- ।
ಪೀ ತೆರದ ತೀರ್ಥಾಶ್ರಯಣ ಮ-।
ಜ್ಞಾತ ತತ್ತ್ವರದಲ್ಲದಾರಾಧಿಸರು ತಾತ್ವಿಕರು ॥

---

೧೦ ಶ್ರೀಗಿರಿಯು, ಕೇತಾರ—ಕೇದಾರನಾಥನೆಂಬ ಯಾತ್ರೆಯ ಪುಣ್ಯಸ್ಥಳವು, ಕಾಶಿಯು, ಕುರುಕ್ಷೇತ್ರವು, ಪ್ರಯಾಗವು, ಚಿದಂಬರವು, ಕಮಲಾಲಯವು—ಕೊಲ್ಹಾಪುರವು ಅಥವಾ ಅನಂತಶಯನವು ಎಂಬ ಈ ಪುಣ್ಯಕ್ಷೇತ್ರಗಳೆಲ್ಲವೂ ಜ್ಞಾನಿಯಾದ ಮಹಾತ್ಮನಿಗೆ—ಶಿರಸ್ಸು, ನಿಟಲ—ಹಣೆ, ಊರ್ಣ+ಆಗೆ—ಕಣ್ಣುಗಳ ನಡುವೆ ಯಿರುವ ಸುಳಿ—ಭ್ರೂಮಧ್ಯವು, ಹೃದಯವು, ಉರುಸ್ತನ—ಎದೆಯ ಉಬ್ಬುಗಳು, ವತ್ಸವು—ನಾಭೀವತ್ಸವು, ಮಹಾಗಣೇಶಸ್ಥಾನ—ಮೂಲಾಧಾರವು ಎಂದು ಶರೀರದ ಅವಯವಗಳಲ್ಲಿ ಪರಿವಿಡಿಯಿಂದ ಹೀಗೆ ಒಂದೊಂದಾಗಿರುವದರಿಂದ ಆ ಜ್ಞಾನಿಯು ಪರಮೇಶ್ವರನೇ, ಬೇರೊಬ್ಬನಲ್ಲ.

೧೧ ಹೀಗೆ ಸಕಲ ಪುಣ್ಯಕ್ಷೇತ್ರ ತೀರ್ಥಗಳನ್ನೆ ತನ್ನ ಶರೀರ—ಸ್ವರೂಪವಾಗುಳ್ಳ (ಭಾಗವತ ೧೦—೪೮—೩೧, ೧೨—೧೦—೨೩ ರಿಂದ ೨೫) ಪರಮ ಪವಿತ್ರಮೂರ್ತಿಯಾಗಿರುವ ಜ್ಞಾನಿಯನ್ನು ಕಡೆಗಣಿಸಿ, ಜಡತೀರ್ಥಗಳನ್ನು ಅರಸುವವರು ನಿಷ್ಪ್ರಯೋಜನವಾದ ಗಾಜಿನ ಕಲ್ಲಿಗಾಗಿ ಮಹಾ ಮಾಣಿಕ್ಯವನ್ನೆ ಕೊಟ್ಟುಬಿಡುವ ದಡ್ಡನಿಗೆ, ತೌಲ್ಯ—ಸರಿಹೋಲತಕ್ಕವರೆಂದು ದೊಡ್ಡವರು ಹೇಳಿದರು.

೧೨ ....ಕೆಡಿಪ—ಅನರ್ಥರೂಪುಳ್ಳ ದೇಹೇಂದ್ರಿಯಗಳಲ್ಲಿ ನಾನೆಂಬೀ ತಪ್ಪುಭಾವನೆಯನ್ನೆ ತನಗೆ ಚೆನ್ನಾಗಿ ಕಾಲೂರಿಸಿಕೊಟ್ಟು, ಅವುಗಳ ರೂಪಿನಿಂದಲೇ ತನ್ನನ್ನು ನಿರಂತರವು ಪರಿಭಾವಿಸುತ್ತಿರುವಂತೆ ಎಚ್ಚರಿಸುತ್ತ, ನಿತ್ಯಶುದ್ಧ ಬುದ್ಧ ಮುಕ್ತಸ್ವಭಾವವಾದ ತನ್ನ ಪರಮಾರ್ಥ ಸ್ವರೂಪದ ಸ್ವತಸ್ಸಿದ್ಧಾತ್ಮನನ್ನೆ ತನ್ನಲ್ಲಿಲ್ಲದಂತೆ ಮಾಡಿ ಮರೆಯಿಸುವ, ಈ ತೆರ....ಣಂ—ತೀರ್ಥನಿಷೇವಣವು, ಅಜ್ಞಾತತತ್ತ್ವರದಲ್ಲದೆ—ಶರೀರೇಂದ್ರಿಯಗಳ ರೂಪಿನಿಂದ ತಮ್ಮನ್ನು ಬಗೆಯುತ್ತಿರುವ ತತ್ತ್ವವನ್ನರಿಯದವರಿಗಲ್ಲದೆ, ಖ್ಯಾತರು—ತಾತ್ವಿಕರು—ತಮ್ಮ ಮತ್ತು ಇಡಿಯ ಜಗತ್ತಿನ ಪರಮಾರ್ಥವನ್ನೆ

ಖ್ಯಾತರಿಂದಾಚರಿತಮೇ ಪುರ-|
ಘಾತಗಭಿಮತಮದರಿನಿಂ ಪರಿ-|
ಪೂತಮಾಗದು ಚಿತ್ತ ಬಾಹ್ಯಕ್ಷೇತ್ರ ತೀರ್ಥಗಳಿಂ ॥ ೧೨ ॥

ಆದರಾಗದೆ ದೇಹಮೆನೆ ಸಂ-|
ಪಾದಿಸಲಿ ವಾರುಣಿಯ ಘಟಕೆ ಘ-|
ನಾದರದಿ ಶತವಾರ ನೀರ್ಮಜ್ಜನವು ಶುದ್ಧತೆಯ ॥
ಐದುವದೆ! ಪುಸಿ ಬಿಡು ಬಿಡೇತಕ-|
ನಾದಿ ದುರ್ವಾಸನೆಯ ತೊಡಕಿ-|
ನ್ನಾದರಾತ್ಮವೇ ತೀರ್ಥವೆಂದಂ ಗುರುವಿಗುಮೆಯಾಣ್ಮಂ ॥ ೧೩ ॥

ಯತಿಯ ಪೂಜಿಸಲಾತನಂಘ್ರಿ-|
ಚ್ಯುತ ಸಲಿಲಮಂ ಧರಿಸಲನುಸಂ-|
ಗತಿಯ ನಾವಗ ವಡೆಯಲಭಿವಾದನಮೆಸಗೆ ಮುದದಿಂ ॥
ವಿತತ ಸೌಖ್ಯವನೈದುವರು, ನಿ-|
ಶ್ಚಿತಮೆನುವ ಬಳಿಯಲ್ಲಿ ಸಕಲ-|
ಶ್ರುತಿ ಶಿರೋವಾಕ್ಯಗಳು ಪ್ರಾಮಾಣ್ಯಂಗಳಾಗಿಹವು ॥ ೧೪ ॥

ಸೂತಸಂಹಿತೆ ಯೊವರಿಗು ವಿ-|
ಖ್ಯಾತನಾತ್ಮನೆ ನದಿ ನಿಯಮವೇ-|
ನೂತನೋದಕ ಸತ್ಯವೇ ಹ್ರದಶೀಲವೀ ತಡಿಯು, ॥

---

ಮನಗಂಡವನು ಆಚರಿತಮೆ—ಸೇವಿಸಲ್ಪಟ್ಟದ್ದೇನು? ಆ ತೀರ್ಥಗಳನ್ನು ಆರಾಧಿಸರು ಎಂಬುದು, ಪುರಘಾತಿಗೆ—ಶಿವನಿಗೂ, ಅಭಿಮತಂ + ಅದರಿನಿಂ + ಪರಿಪೂತಂ (ಅತ್ಯಂತ ಪರಿಶುದ್ಧವು) + ಆದು....;

೧೩ ವಾರುಣಿ—ಹೆಂಡವನ್ನು ತುಂಬಿದ ಗಡಿಗೆಯನ್ನು ಪಾವನಕರವಾದ ತೀರ್ಥರಾಜಗಳಲ್ಲಿ ಶತ....ಜ್ಜನವು—ಬಿಡದೆ ನೂರಾರುಬಾರಿ ಮುಳುಮುಳುಗಿಸಿ ಮೇಲೆತ್ತಿದರೆ ತಾನೆ ಏನು ಶುದ್ಧವಾಗುವದಕ್ಕುಂಟೆ? ತೊಡಕು+ಇನ್ನಾದರು+ಆತ್ಮನೆ ಅಥವಾ ಆತ್ಮನ ಜ್ಞಾನವೊಂದೇ ತೀರ್ಥವು.

೧೪ ಆತನ+ಅಂಘ್ರಿ....ಮಂ–ಪೂಜಿಸಿದ ಪಾದತೀರ್ಥವನ್ನು ತನ್ನ ಶಿರಸ್ಸಿನಲ್ಲಿ ಧರಿಸಲು (ಭಾಗವತ ೧೦–೪೮–೩೫), ಅನು....ಯನು—ಜ್ಞಾನಿಗಳ ಸತ್ಸಂಗವನ್ನು, ಆವಗವಡೆಯಲು—ಯಾವಾಗಲೂ ಹೊಂದಿರಲು, ಅಭಿವಾದನಂ+ಎಸಗೆ—ತನ್ನ ಹೆಸರು ಮುಂತಾದ ಪ್ರವರವನ್ನು ಹೇಳಿ, ಅವರ ಪಾದಗಳನ್ನು ಹಿಡಿದು ನಮಸ್ಕರಿಸಲು, ವಿತತ—ವಿಸ್ತಾರವಾದ ಎಲ್ಲಾ ಸೌಖ್ಯಗಳನ್ನೂ ತಪ್ಪದೆ ಹೊಂದುವರು.

೧೫ ಆತ್ಮನೆ ನದಿಯು, ನಿಯಮವೆ ಅದರ ನೀರು, ಸತ್ಯವೆಂಬುದೆ ಹ್ರದ—ಅದರ ಆಳವು, ಶೀಲವೆ ದಡವು ಎಂತಲೂ, ಮತ್ತು ಪೂತ—ನಿರ್ಮಲ ದಯೆಯೆ ತನ್ನಲೆಗಳಾಗಿರುವ ಆತ್ಮನೆಂಬ ಸಮುದ್ರದಲ್ಲಿ ತನ್ನ ಮನಸ್ಸು ಮುಳುಗಿದವನು ಜ್ಞಾನಿಯೆಂತಲೂ ದಾಶಾರ್ಹಂ—ಶ್ರೀಕೃಷ್ಣನು,

ಪೂತದಯೆಯೇ ಲಹರಿಯಾಗಿರು-।
ವಾತುಮನ ಸಿಂಧುವಿನೊಳುದ್ಯ-।
ಚ್ಚೇತವಮಂ ನದ್ದೆಂದನಾ ಧರ್ಮಜಗೆ ದಾಶಾರ್ಹಂ ॥ ೧೫ ॥
ಜ್ಞಾನವನ್ನುಳಿದಿಹ ಪವಿತ್ರ-।
ಸ್ಥಾನಮುಂಟೇ ವಿವಿಧ ಲೋಕ ವಿ-।
ತಾನದಲಿ, ತದ್ಭಾನವೆಲ್ಲಿಹುದಲ್ಲಿಹುದು ನೋಡೆ-॥
ಸೂನಶರಹರ ಮುಖ್ಯ ದಿವಿಜ-।
ಸ್ಥಾನಮುಂ, ಗಂಗಾದಿ ವೇಣೀ-।
ಶ್ರೇಣಿಯುಂ, ಕಾಶ್ಯಾದಿ ದಿವ್ಯಕ್ಷೇತ್ರ ಸಂತತಿಯುಂ ॥ ೧೬ ॥
ತೋರಿತೇ ಮೊದಲೀ ವಿಕಾರವು ।
ಪಾರಮಾರ್ಥಿಕ ದೃಷ್ಟಿಯಿಂ ಮುಂ-।
ದೋರುವುದೆ ಕೃತಕೃತ್ಯನಿಗೆ ಸಂಸಾರ ದೋಷವಿದು ॥
ತೋರುತಿಹುದಿಪ್ಪನ್ನೆಗಂ, ತಾಂ-।
ತೋರುವುದೆ ತಿಳಿದಾಗಲೆಂದು ವಿ-।
ಚಾರಸಿಯೆ ಭಜಿಸಿದ ನರರ್ಗಹುದವ್ಯಯಸ್ಥಾನ ॥ ೧೭ ॥
ವರನು ವರ್ಯ ವರೀಯಸನು ನಿ-।
ರ್ಭರ ಸಮಾಧಿ ಸ್ಥಿತವರಿಷ್ಠನು ।
ಪುರುಷರಿವರೇ ನಾಲ್ವರಿವದಿರೊಳಿರಲಿ ವಾಸನೆಯ-॥
ಸ್ಥಿರತೆ ಶಿಥಿಲತೆ, ಮೋಕ್ಷವೊಂದೇ-।
ಪರಿಯೊಳಿಹುದದರಿಂದ ನಾಲ್ವರು-।
ಪುರುಷರಿವರರ್ಚ್ಯರು ಮುಮುಕ್ಷುಗಳಾದ ಬುಧರಿಂದ ॥ ೧೮ ॥
ಪರಮ ತತ್ತ್ವಜ್ಞಾನಿಯು ಗದಾ-।
ಧರನ ದೆಸೆಯಿಂ, ರುದ್ರನಿಂ, ಭಾ-।
ಸ್ಕರ ಮುಖಾದಿತ್ಯಾಳಿಯಿಂ ನನ್ನಿಂದ ಸಂಪೂಜ್ಯಂ ॥

---

೧೬ ಉಳಿದಿಹ—ಬಿಟ್ಟಿರುವ, ವಿತಾನ—ಸಾಲುಗಳಲ್ಲಿ, ತತ್+ಭಾನಂ+ಎಲ್ಲಿಹುದು—ಆ ಜ್ಞಾನವಿರುವಲ್ಲಿಯೆ, ಸೂನಶರಹರ—ಕಾಮನನ್ನು ಸುಟ್ಟು ನಾಶಪಡಿಸಿದ ಶಿವನೆ ಮುಂತಾದ ದೇವ ಶ್ರೇಷ್ಠರ ವಿಹಾರದ ಸ್ಥಾನ ವಿಶೇಷಗಳಾದ ಮೇರು, ಮಂದಾರ, ಮಲಯಾಚಲಾದಿ ಪುಣ್ಯಪರ್ವತ ಗಳೂ ಗಂಗಾದಿ ಪುಣ್ಯನದೀನದಗಳ, ಶ್ರೇಣಿ—ಒಟ್ಟಿನ ಸಾಲು,

೧೭ ಈ ಸಂಸಾರ ವಿಕಾರವೆಂಬುದು ಸೃಷ್ಟಿಗೆ ಮೊದಲಾಗಲಿ ಅಥವಾ ಅಜ್ಞಾನ ಬಿಟ್ಟಾಗಲಿ ಇರುವದೇ ಇಲ್ಲ; ....ಹುದು+ಇಪ್ಪನ್ನೆಗಂ—ತನ್ನನ್ನರಿಯುವವರೆಗೂ ತೋರಿಕೊಳ್ಳುತ್ತಲೇ ಇರುವದು, ತಾಂ—ಅದು, ಭಜಿಸಿದ—ವಿಚಾರದಿಂದ ತನ್ನಾತ್ಮನನ್ನು ಹೊಂದಿದ, ನರರ್ಗೆ+ಅಹುದು ಅವ್ಯಯಸ್ಥಾನೆ—ಮುಕ್ತಿಯು.

೧೮ ಗದಾಧರ–ವಿಷ್ಣುವಿನಿಂದಲೂ, ಭಾಸ್ಕರಮುಖ–ಸೂರ್ಯನೇ ಮುಂತಾದ, ಆದಿತ್ಯಾಳಿ–

ಪರಮ ತತ್ತ್ವಜ್ಞಾನಿ ಯಾವ-।
ಲ್ಲಿರುವನಲ್ಲಿಯೆ ಮುಕ್ತಿಫಲ ಗೋ-।
ಚರಿಪುದಿಂತಪ್ಪಾ ಮಹಾತ್ಮನ ಪೂಜಿಸಿದ ನರರ-॥ ॥೧೯॥

ಪತ್ತಿನುಜ್ವಲ ಪಾದುಕೆಗಳಂ-।
ಪೊತ್ತಿಹೆನು ನಾನೆಂದು ಸುರರಿಗೆ-।
ಬಿತ್ತರಿಸಿದನು ಕಮಲಪೀಠನು ಬ್ರಹ್ಮಗೀತೆಯಲಿ॥
ಇತ್ತರಾದರೆ ಶ್ರದ್ಧೆಯಿಂ ಸಂ-।
ಪತ್ತಿಯಂ ಪ್ರಾಣಗಳ ತನುವಂ-।
ವಿತ್ತ ಮುವರವಸರಕೆ ಸುರರ್ಗೆ ಸುರರ್ಕಳವರಲ್ತೆ! ॥೨೦॥

ಧ್ಯಾನಮುಖ ಮಾನಸಿಕಮುಂ ಸಂ-।
ಮಾನಮುಖ ವಾಚಕಮು ಮೂರ್ಧ್ನ-।
ಸ್ಥಾನಮುಖ ಕಾಯಿಕಮುಮಾಗವು ಪುಟಲನಿವಾರ್ಯಂ-॥
ಜ್ಞಾನಕದರಿಂ ಪರಮತತ್ತ್ವ-।
ಜ್ಞಾನಿ ಸಿಶ್ರೂಷೆಯೆ ನಿಸರ್ಗ ನಿ-।
ದಾನವೆಂದಮರರ್ಗೆ ಶಪಥಂಗೈದನಜ್ಜಭವಂ ॥೨೧॥

ಇಂತೆಸೆವ ಸದ್ಗುರುವಿನಿಂ ವೇ-।
ದಾಂತದಿಂದ ಪರೋಕ್ಷ ವಿಜ್ಞಾ-।
ನಂ ತಿರಂ ಜನಿಸಿದೊಡೆ ಸರ್ವಾಘಂ ಕ್ಷಯಿಪುದಾಗ-॥

---

ಸರ್ವದೇವ ಸಮೂಹದಿಂದಲೂ, ಚತುರ್ಮುಖ ಬ್ರಹ್ಮದೇವನಾದ ನನ್ನಿಂದಲೂ.... (ಭಾಗವತ ೧೨–೧೦–೨೦....೨೨)

೨೦ ಪತ್ತಿನ—ಹತ್ತಿರದ, ಪೊತ್ತಿಹೆನು—ಶಿರಸ್ಸಿನಲ್ಲಿ ನಾನು ಧರಿಸಿಕೊಂಡಿರುವೆನು, ಬಿತ್ತರಿಸಿದೆನು—ವಿಸ್ತರಿಸಿದನು, ಕಮಲಪೀಠನು—ಬ್ರಹ್ಮದೇವನು, ಇತ್ತರಾದರೆ—ಭಕ್ತಿಯಿಂದ ಕೊಟ್ಟರೆ, ಮತ್ತು ಪ್ರಾಣಗಳ+ತನುವಂ—ಆಯುಷ್ಯದ ಕಾಲವೆಲ್ಲವೂ ತಮ್ಮ ದೇಹವನ್ನು ಜ್ಞಾನಿಗಳ ಸೇವೆಗಾಗಿ ವಿನಿಯೋಗಿಸುವದಲ್ಲದೆ, ವಿತ್ತಮುಂ—ಹಣಕಾಸು ಮುಂತಾದ್ದನ್ನೂ ಸಮಯವರಿತು, ಅರ್ಪಿಸಿ ಅವರನ್ನು ಸೇವಿಸಿದವರು ದೇವತೆಗಳಿಗೂ ಪೂಜ್ಯರೆಂಬುದಕ್ಕೆ ಸಂಶಯವಿನ್ನಿಲ್ಲವು.

೨೧ ಕರಣತ್ರಯದ ಕ್ರಿಯೆಗಳಲ್ಲೊಂದಾದರು ಜ್ಞಾನಕ್ಕೆ ಕಾರಣವಲ್ಲ. ಪ್ರತಿಯಾಗಿ ಅದಕ್ಕೆ ವಿಘ್ನಗಳಾದ್ದರಿಂದ ಅವುಗಳನ್ನು ಜಿಜ್ಞಾಸುವು ತನ್ನ ಕೈಬಿಟ್ಟು, ನಿಸರ್ಗ—ತನಗೆ ಸ್ವಭಾವಸಿದ್ಧವಾಗಿರುವ ಮುಕ್ತಿಗೆಂದು ಜ್ಞಾನಿಗಳ ಶುಶ್ರೂಷೆಯೊಂದೇ ನೇರಾದ, ನಿದಾನ—ಪರಮಕಾರಣವೆಂದು ನಿಶ್ಚಯಿಸಿ ಸ್ವೀಕರಿಸಬೇಕೆಂಬುದನ್ನು, ಅಬ್ಜಭವಂ—ಬ್ರಹ್ಮದೇವನು ತಾನು ಕೈಯೆತ್ತಿ ದೇವತೆಗಳಿಗೆ ಸಾರಿದನು.

೨೨ ಇಂತು+ಎಸೆವ—ಶೋಭಿಸುವ, ತಿರಂ—ಸ್ಥಿರಗೊಂಡು, ಮುಂತೆಸೆಯಲು—ಮುಂದೆಯುಂಟಾಗಲು, ತರಿಪುದು—ದಾಟುವುದು, ಆದರೆ ನಯದಿಂ—ಶಾಸ್ತ್ರಗಳಲ್ಲಿ ತನ್ನ ಪಾಪಪರಿಹಾರ

ಮುಂತೆಸೆಯಲಪರೋಕ್ಷ ವಿಜ್ಞಾ-।
ನಂ ತರಿಪುದೀ ಭವವ; ನಯದಿಂ-।
ಶಾಂತಿಯಂ ಪೇಳಿದುದು ದುರಿತಕ್ಕಾವ ಬಗೆಯೆನಲು, ॥ ೨೨ ॥

ಎಲ್ಲಿಯಪರೋಕ್ಷಾನುಭವಿಗೀ-।
ಕ್ಷುಲ್ಲಕಾಂಹಸ್ಸಂಘಮಿಾ ತೆರೆ-।
ಮಿಲ್ಲದ ಪರೋಕ್ಷಾರ್ಥ ಜಿಜ್ಞಾಸುವಿಗೆ ದೊರಕೊಳಲು ॥
ಖುಲ್ಲಮಾದಘ ಮದ ಕೆಡಿಸೆ ಬಲ-।
ವಿಲ್ಲ ಪ್ರಾಯಶ್ಚಿತ್ತ ಶತಗಳಿ-।
ಗಲ್ಲವೇ ಮೇಲಾವುದೆನೆ ಮುನಿಗಳೆ ನೈಮಿಷದೆ- ॥ ೨೩ ॥

ರೌಮಹರ್ಷಣಿಯೆಂದ ವೇದನ-।
ಮೇ ಮಹಾಶಾಂತಿಯು, ನಿಜದ ತ-।
ನ್ನೇಮವೆಂತೆನೆ, ಶಾಸ್ತ್ರ ಗುರು ವಿಶ್ವಾಸಪೂರ್ವಕದಿಂ ॥
ಈ ಮಹಾದೇವನೆ ಸಮಸ್ತಮ-।
ನಾಮಯಂ ತತ್ತತ್ತ್ವಮೆಂದು-।
ದ್ದಾಮ ಭಾವನೆಯುದಿಸೆ ಘಟಿಕಾ ಮಾತ್ರಮೆಡಬಿಡದೆ ॥ ೨೪ ॥

---

ಕ್ಕಾಗಿಯೇ ಪ್ರಾಯಶ್ಚಿತ್ತಗಳನ್ನು ಬೇರ್ಬೇರೆಯಾಗಿ ವಿಧಿಸಿರುವದರಿಂದ ಆ ಪಾಪಗಳು ಜ್ಞಾನದಿಂದಲೇ ಹೋಗಿಬಿಡುವದೆಂದರೆ ಅದನ್ನು ನಂಬುವದು ಹೇಗೆ?

೨೩ ಅಪ....ವಿಗೆ+ಈ ಕ್ಷುಲ್ಲಕ(ವಾದ) + ಅಂಹಃ—ಪಾಪಗಳ, ಸಂಘಂ—ರಾಶಿಯು ಜ್ಞಾನಿಗೆ ಸೋಕುವದಿಲ್ಲವೆಂಬುದು ಹಾಗಿರಲಿ, ಈ ತೆರಮಿಲ್ಲದ—ಈ ಅಪರೋಕ್ಷ ಜ್ಞಾನವಿನ್ನೂ ಬಂದಿಲ್ಲದ, ಅರ್ಥ–ಆತ್ಮವಸ್ತುವಿನ ಪರೋಕ್ಷ ಜ್ಞಾನಮಾತ್ರ ಬಂದಿರುವ ಮನುಷ್ಯನನ್ನೆ ಕೈಬಿಟ್ಟು ತೊಲಗುತ್ತಿರುವ ಜ್ಞಾತಾಜ್ಞಾತರೂಪ ಉಭಯ ವಿಧದ, ಅಘಂ—ಪಾಪಗಳುಂಟಷ್ಟೆ? ಖುಲ್ಲಂ+ಆದ—ನೀಚವಾದ ಈ ಪಾಪಗಳನ್ನು ಕೆಡಿಸುವದಕ್ಕೂ ಒಟ್ಟಗೆ ಸೇರಿದ ಆ ನೂರಾರು ಪ್ರಾಯಶ್ಚಿತ್ತಗಳಿಗೇ ಬಲ್ಲವಿಲ್ಲವೆಂದರೆ ಜ್ಞಾನಕರ್ಮಗಳಲ್ಲಿ ಇನ್ನು ಮೇಲಾವುದು ಕೀಳಾವುದು ಎಂಬುದನ್ನು ಹೇಳಬೇಕಿಲ್ಲ.

೨೪ ರೌಮಹರ್ಷಣಿ—ರೋಮಹರ್ಷನ (ಭಾಗವತ ೧೦–ಉ॥ ೭೯–೧೭....೪೦) ಮಗ ಸೂತಪೌರಾಣಿಕನು, ವೇದನಮೆ—ಜ್ಞಾನವೊಂದೇ ಮಹಾಶಾಂತಿಯು, ತತ್—ಆ ಜ್ಞಾನದ, ನೇಮ—ನಿಜಸ್ವರೂಪವು, ಅದೆಂತು+ಎನೆ—ಹೇಗೆಂದರೆ, ತಂತಮ್ಮ ಆತ್ಮರೂಪದಿಂದ ಸರ್ವರಲ್ಲಿಯೂ ಕಡಿವಡೆಯದಂತಿರುವ ಚೈತನ್ಯರೂಪ ಈ ಮಹಾದೇವನೇ ಈ ಸಮಸ್ತವೂ ಆಗಿರುವನಲ್ಲದೆ, ಅನಾಮಯಂ—ಸಂಸಾರರೋಗವಿಲ್ಲದವನೂ ಆಗಿ, ಕ್ಷಣವೂ ಬಿಟ್ಟಗಲದಿರುವ ನನ್ನ ಪರಮಾರ್ಥಸ್ವರೂಪನೆಂಬ, ಉದ್ದಾಮ–ಉದ್ದಾನ–ತಡೆ-ಸಂಶಯ ವಿಪರೀತಭಾವನೆಗಳ ಅಡ್ಡಿಯಿಲ್ಲದೆ ನಿಶ್ಚಿತವಾಗುದಿಸಿದ, ತತ್+ತತ್ತ್ವಂ—ಆ ಜ್ಞಾನದ ಸಮ್ಯಕ್ ಸ್ವರೂಪದ ಭಾವನೆಯು ಒಂದು ಘಳಿಗೆಯಷ್ಟುಕಾಲ ತನಗುದಿಸಿಬಂದರು ಸಾಕು ಅಷ್ಟರಿಂದಲೇ ಲೌಕಿಕ ವೈದಿಕ ಸಮಸ್ತ ಕ್ರಿಯೆಗಳ ಪುಣ್ಯಫಲಗಳೂ ತನ್ನ ಕೈಗೆ ಬಂದು ಸೇರುವವು.

ದುರಿತಕೋಟಿಗಳುರಿದು ಹೋಹವು, ।
ಪರಮ ಪುರುಷನೆ ವಿಶ್ವಮಯನೆಂ-।
ಬರುಹು ತಲೆದೋರಲು ದಿನಾರ್ಧಂ ಗುರುವಿನನುಮತಿಯಿಂ ॥
ವರಿಸದೇ ವಿಪರೀತಮಂ ಮನ-।
ವೆರಸಿ ಮಾಡಿದ ಪಾತಕಾವಳಿ ।
ಹರವುದುತ್ತಮಘಾತಿಯಿಂದೆಂತೋ ಸುಕೃತ ಶತಕಂ ॥ ೨೫ ॥

ಸಕೃದುಪಾಸ್ತಿಯ ಮೂಲದಿಂದೇ ।
ಸಕಲ ಪಾತಕಮುಳಿವುದಾದರೆ ।
ವಿಕರಿಸದ ವಸ್ತುವಿನ ಸಮ್ಯಕ್ತತ್ತ್ವ ಸಂಖೆಯಲಿ ॥
ಪ್ರಕಟಿಪುದೆ ಭವ ಭೀತಿ ಸಾಕದು ।
ಬಕುತಿಯಿಂ ಜಡನಾದೊಡಂ ಪಠಿ-।
ಸೆ ಕಲುಷಂ ತೊಲಗುವದು ಚಿತ್ತಕ್ಕಾರ್ಯಮೆಂತಂತೆ; ॥ ೨೬ ॥

ಕಾಲಕರ್ಮಜನಾನುರೋಧದ-।
ಮೂಲದಿಂದಾದೊಡೆಯು ಮುಕ್ತ್ಯನು-।
ಕೂಲ ತರ್ಕ ಕಥಾಪ್ರಸಂಗಂ ದೊರಕೆ ಮಾನವಗೆ ॥
ಲೋಲನಾಗಿರಲಖಿಲ ವಿಷಯ ವಿ-।
ಶಾಲ ಭೋಗದೊಳವಗೆ ಸಂಖ್ಯಾ-।
ಶೀಲವೆಡೆಗೊಂಡುದರ ದೆಶೆಯಿಂ ಮುಕ್ತನಾಗುವನು! ॥ ೨೭ ॥

---

೨೫ ಆ ಸಂಶಯ ವಿಪರೀತ ಭಾವನೆಗಳನ್ನು ತಾನು ವರಿಸದೆ, ....ವೆರಸಿ—ಬೆರಸಿ, ಒಟ್ಟು ಗೂಡಿದ, ಆವಳಿ—ರಾಶಿಯನ್ನೆಲ್ಲ, ಹರವುದು—ನಾಶವಾಗಿಬಿಡುವದು, ಅದು ಹೇಗೆಂದರೆ, ಉತ್ತಮ ....—ಸಜ್ಜನರ ಕೊಲೆಯಿಂದ ನೂರಾರು ಪುಣ್ಯಗಳು ಕೂಡ ಹೆಸರಿಲ್ಲದಂತೆ ತಮ್ಮಲ್ಲಿ ಅಳಿಸಿ ಹೋಗುವಹಾಗೆ.

೨೬ ಸಕೃತ್ + ಉಪಾಸ್ತಿ—ಒಂದಾವರ್ತಿ ಮಾಡಿದ ಪರಮಾತ್ಮನ ಧ್ಯಾನದಿಂದಲೇ ಸಮಸ್ತ ಪಾಪಗಳೂ ಹೋಗುವಂತಿದ್ದರೆ. ವಿಕರಿಸದ - ವಿಕಾರವಿಲ್ಲದ ವಸ್ತುವಿನ ತತ್ತ್ವಜ್ಞಾನವೆ ತನಗೆಆಗಿಬಿಟ್ಟರೆ ಭವಭೀತಿ ತಲೆಯೆತ್ತುವದಕ್ಕಿಲ್ಲವೆಂಬುದು ಹಾಗಿರಲಿ, ಜಡನಾದೊಡಂ—ವಿವೇಕ ವಿಲ್ಲದೆ ಬರಿಯ ಭಕ್ತಿ ವಿಶ್ವಾಸಗಳಿಂದ ವೇದಾಂತ ಗ್ರಂಥಗಳನ್ನು ತಾನು ಪಠಿಸುತ್ತಿದ್ದರೂ ಅದು ಇವನನ್ನು ಪುನೀತನನ್ನಾಗಿಸುವದು; ಚಿತ್ತಕ್ಕೆ+ಆರ್ಯಂ+ಎಂತೊ+ಅಂತು—ಗುರುಶಾಸ್ತ್ರ ಗಳಿಂದ ಸುಸಂಸ್ಕೃತನಾಗಿ ಮಾಡುವ ಸತ್ಕ್ರಿಯೆಗಳು—ಮನ ಇಂದ್ರಿಯಗಳ ದುಷ್ಟಪ್ರವೃತ್ತಿ ಗಳಿಂದ ಚಿತ್ತಕ್ಕಾಗಿದ್ದ ಆ ದುಷ್ಟ ಸಂಸ್ಕಾರಗಳ ಕೊಳೆಯನ್ನೆಲ್ಲ ತೊಳೆದು ಆ ಮಾನವರ ಚಿತ್ತವನ್ನು ಸಂಸ್ಕರಿಸಿ ಶುದ್ಧಪಡಿಸುವಂತೆ ಎಂದು ಭಾವವು.

೨೭ ಕಾಲಕರ್ಮ ಮತ್ತು ಜನರನ್ನು ಅನುರೋಧ—ಅನುಸರಿಸಿ ತಾನು ಪ್ರಸನ್ನಪಡಿಸಿ ನಡೆಯುವದು—ಇವುಗಳಲ್ಲಿ ಯಾವದರಿಂದಲಾದರು ಸರಿಯೆ, ಮುಕ್ತಿ....ಂಗಂ—ಆತ್ಮವಿಚಾರವು

ಎಂತು ತತ್ತ್ವಾಭ್ಯಾಸವಳವಡ-।
ದಂತರಂಗಕ್ಕಾ ಸಮಯದೋ-।
ಳ್ಮುಂತೆಸಗಿದ ವಿಚಾರದಿಂ ಮೋಕ್ಷಂ ಘಟಿಪುದೆನಲು, ॥
ಚಿಂತಿಸುವನೇ ಬೀಳ್ವದಕೆ ಮರ-।
ನಂ ತುದಿಯೊಳೇರಿದವ ಮುರಿದರೆ-।
ನಿಂತ ಕೊನೆ ಬೀಳದೇ ನಿಲುವಲ್ಲುಂಟೆ ಸದುಪಾಯಂ ॥ ೨೮ ॥

ಹಲವು ಕಾಲಗಳಿಂದ ಬಂದೀ-।
ಕಲುಷವಾಸನೆ ತತ್ತ್ವ ಚಿಂತೆಯ ।
ಬಳಿಯೊಳಲ್ಲದೆ, ಸವೆಯುದದರಿಂ ಸಾಧುತರ ನಯಮುಂ ॥
ಘಳಿಪುದದನೇ ನೋಡುತಿರೆ ನಿ-।
ರ್ಮಲತೆಯಂ ಪೊಂದುವುದು ಮನಮು-।
ಜ್ವಲ ಶರತ್ಕಾಲದೆ ನಿರಾವಿಲ ಸಲಿಲ ರಸದಂತೆ ॥ ೨೯ ॥

ಘನ ಪರೋಕ್ಷ ಬ್ರಹ್ಮಮತಿಯದು ।
ಜನಿಸೆ ಗುರು ಶಾಸ್ತ್ರಗಳ ಮುಖದಿಂ-।
ತನಗೆ ಮಾಳ್ಪುದು ಬುದ್ಧಿಪೂರ್ವಕವಾಗಿ ಭವಭವದೆ ॥
ಎನಿತೆನಿತು ಮಾಡಿದ ಮಹಾ ಪಾ-।
ಪ ನಿಚಯದ ಕಾನನವ ಸುಡುವದ-।
ಕನಲನೆಂಬರು ಪಂಚದಶಿಯಲಿ ಮತ್ತಮಿದರಲ್ಲಿ ॥ ೩೦ ॥

---

ಮತ್ತು ಅದರಿಂದ ಕೊನೆಮುಟ್ಟಿದ ನಿಶ್ಚಿತಜ್ಞಾನವೂ ಯಾವರೀತಿಯಿಂದಲಾದ ೨ ತನಗೆ ದೊರೆತರೆ ಸರಿ, ಅಷ್ಟರಿಂದಲೇ ಆ ಮನುಷ್ಯನಿಗೆ ಹೊರಗಿನ ಕುರುಹುಗಳಲ್ಲೊಂದಾದರು ಲೆಕ್ಕಿಸುವಂತಿಲ್ಲದೆ ಮುಕ್ತಿಯು ತಾನಾಗಿಯೇ ಸ್ವತಸ್ಸಿದ್ಧವು.

೨೮ ನಿರಂತರವೂ ತತ್ತ್ವಾಭ್ಯಾಸದಿಂದ ಸಂಸ್ಕೃತವಾಗದಿರುವ ಅಂತರಂಗಕ್ಕೆ ತನ್ನ ಮನಸ್ಸಿಗೆ, ಆ ಸಮಯದೋಳ್+ಮುಂತೆಸಗಿದ—ಮೊದಲು ತಾನು ಮಾಡಿದ್ದ ತತ್ತ್ವವಿಚಾರದಿಂದಲೇ ತನಗೆ ಮುಕ್ತಿ ಹೇಗಾಗುತ್ತದೆ? ಎಂದರೆ ದೇಹಾತ್ಮ ಜ್ಞಾನವನ್ನು ಬಾಧಿಸುವ ಕಡು ನಿಶ್ಚಿತ ಜ್ಞಾನಬಂದವನು ಮುಕ್ತಿಯನ್ನು ಇಚ್ಛಿಸದಿದ್ದರೂ ತಾನು ಮುಕ್ತನೇ ಆಗಿಬಿಡುವನು—

ದೇಹಾತ್ಮಜ್ಞಾನವಜ್ಜ್ಞಾನಂ ದೇಹಾತ್ಮ ಜ್ಞಾನಬಾಧಕಂ ।
ಆತ್ಮನ್ಯೈವಭವೇದ್ಯಸ್ಯ ಸನೇಚ್ಛನ್ನಪಿ ಮುಚ್ಯತೇ ॥

೨೯ ....ನಯಮುಂ—ಪೂಜ್ಯ ವೇದಾಂತಗ್ರಂಥವನ್ನೆ ಕ್ಷಣವೂ ಬಿಡದಂತೆ ತಾನು ನೋಡುತ್ತಿದ್ದರೆ, ಮನಂ+ಉಜ್ವಲ—ಶರದೃತುವಿನ ಬೆಳುದಿಂಗಳಿನ ದಿನಗಳಲ್ಲಿ ಸರೋವರಗಳ, ನಿರಾ....ರಸ—ಜಲವು ನಿರ್ಮಲವಾಗಿರುವಂತೆ; ವಾಸನಾಮಲವಿಲ್ಲದ ಅವನ ಮನಸ್ಸು ಕೂಡ ನಿರ್ಮಲತೆಯನ್ನು ಹೊಂದುವದು.

೩೦ ....ಮತಿ—ಜ್ಞಾನ, ನಿಚಯ—ತಾನು ಮಾಡಿ ಕೂಡಿಸಿ ಹಾಕಿದ್ದ ರಾಶಿಯ, ಕಾನನ-

ಎಣಿಸಲಪರೋಕ್ಷಾತ್ಮ ಮತಿಯದು |
ಜನಿಸೆ ಗುರುಶಾಸ್ತ್ರಗಳ ಮುಖದಿಂ |
ತನಗೆ, ಭವಕೆ ನಿದಾನವಾದಜ್ಞಾನ ತಾಮಸಕೆ-॥
ಇನನಲಾ! ಗ್ರೀಷ್ಮರ್ತುವಾಧ್ಯಂ-|
ದಿನ ನಿರಾವರಣಾಭ್ರಮಧ್ಯದ-|
ಘೃಣಿಯನುಳ್ಳನುತಾಗ ವಿದ್ಯಾರಣ್ಯರಾಡಿದರು ॥ ೩೧ ॥

ಉಪನಿಷನ್ನಯಮುಳಿದು ಕಾಲ-|
ಕ್ಷಪಣಮುಂಟೆ ವಸ್ತ್ವನನ್ಯಂ-|
ತ್ರಿಪಥದೊಳಗದು ಪೃಥುಲ ಪುಣ್ಯಂಗಲ್ಲದೊಂದಿರದು ॥
ಅಪರಿಮಿತಮುಂಟವರೊಳೀ ಸಾ-|
ರ ಪದ ಸಂಗ್ರಹ ಮಾತ್ಮನಿಧಿ ದೃ-|
ಷ್ಟಿಪಟು ಸಿದ್ಧಾಂಜನಮೆನುತ್ತಾರ್ಯರಿಗೆ ಸಮ್ಮತವು ॥ ೩೨ ॥

ಈ ನಯಾ ಸುಧಾರುಚಿ ಚಿದಭ್ರ-|
ಸ್ಥಾನವಂತಂ ವಿಮಲ ಪಾದಂ |
ಜ್ಞಾನರೂಪಾಮೃತ ಶರೀರಂ ತಾಪ ಸಂಹರಣಂ ॥

---

ಕಾಡನ್ನು, ....ದಿ+ಅನಲ—ಕಾಡಗಿಚ್ಚಿನಂತೆ, ಮತ್ತಂ—ಇದರಲ್ಲಿ—'ಜ್ಞಾನ ಸರ್ವಸ್ವಸಂಗ್ರಹ' ಎಂಬ ಸಂಸ್ಕೃತ ಗ್ರಂಥದಲ್ಲಿಯೂ,

೩೧ ನಿದಾನಂ—ಸಂಸಾರ ಕಾರಣವಾದ ಅಜ್ಞಾನಗತ್ತಲೆಗೆ, ಗ್ರೀಷ್ಮ....ಣಿಯನು–ಸೆಕೆಯ ಕಾಲದ ನಡುಹಗಲಿನ ಪ್ರಚಂಡರಶ್ಮಿಗಳುಳ್ಳ, ಇನನಲಾ—ಸೂರ್ಯನಲ್ಲವೆ? (ಪಂಚದಶಿ ೧–೬೪).

೩೨ ತನ್ನ ಪರಮಾರ್ಥಸ್ವರೂಪವನ್ನು ಕುರಿತಿರುವ ಉಪನಿಷತ್ತೆಂಬ ಅಧ್ಯಾತ್ಮಶಾಸ್ತ್ರದ ವಿಚಾರವನ್ನು ಕೈಬಿಟ್ಟು, ಬುದ್ಧಿವಂತರು ತಮ್ಮ ಕಾಲವನ್ನು ವ್ಯರ್ಥಮಾಡುವದೆಂದಿಗೂ ಸರಿಯಲ್ಲ. ಏತಕ್ಕೆಂದರೆ ಮನುಷ್ಯ, ಪಿತೃ, ದೇವ ಎಂಬ ಈ ಲೋಕತ್ರಯಗಳ ಪ್ರಾಪ್ತಿ ಮಾರ್ಗಗಳಲ್ಲಿಯೇ ಬಹಳಮಟ್ಟಿಗೂ ತಮ್ಮ ಹೆಜ್ಜೆಯನ್ನಿಟ್ಟು ನಡಿಯಲಿರುವ ಮಾನವರಿಗೆ ಆ ಸದ್ವಿಚಾರವು ಸಿಕ್ಕಬೇಕಾದರೆ ಅನಂತಕೋಟಿ ಜನ್ಮಗಳಲ್ಲಿ ಮಾಡಿದ, ಪೃಥುಲ—ಅಗಲ—ವಿಸ್ತಾರವಾಗಿರುವ ಹೆಚ್ಚಿನ ಪುಣ್ಯದ ಬೆಂಬಲವಿದ್ದವನಿಗಲ್ಲದೆ, ಮತ್ತೊಬ್ಬನಿಗೆ ಅದು ಎಂದಿಗೂ ಒಂದಿರದು—ಹೊಂದುವದಲ್ಲವೆಂಬುದು ನಿಸ್ಸಂಶಯವು. ವೇದಾಂತಗ್ರಂಥಗಳ ಸಾರವನ್ನೆಲ್ಲ ಒಕ್ಕಡೆ ತಂದು ಸಂಗ್ರಹಿಸಿರುವ ಈ ವಿವೇಕಾಭರಣವು–ತನ್ನಾತ್ಮನಿಧಿಯನ್ನು ಹೊರಗೆತ್ತಿ ಕಾಣಿಸುವದರಲ್ಲಿ, ದೃಷ್ಟಿಪಟು—ಬುದ್ಧಿಯ ಅರಿವಿನ ನೋಟವನ್ನು ಹೆಚ್ಚಿಸಿ ಅದನ್ನು ಚುರುಕಾಗಿ ಮಾಡುವದರಲ್ಲಿ, ಸಿದ್ಧಾಂಜನ+ಎನ+ತ್ತ+ಆರ್ಯರಿಗೆ—ತತ್ತ್ವದರ್ಶಿಗಳಾದ ಜ್ಞಾನವೃದ್ಧರಿಗೆಲ್ಲ ಇದು ಸಮ್ಮತವು.

೩೩ ಈ ವೇದಾಂತಕಾವ್ಯವೆಂಬ ಚಂದ್ರನ ವಿಚಾರವೆಂಬ ಕಿರಣಾಮೃತವನ್ನು ಸವಿದುಂಡ ಕುಶಲನಾದ ಪುಣ್ಯಪುರುಷನು ತಾನು—ನಿತ್ಯನಿರ್ವಿಕಾರವೂ ಅನಂತಪ್ರಕಾಶರೂಪವೂ ಆಗಿರುವ ಚಿದಾಕಾಶ ಬ್ರಹ್ಮವನ್ನೆ ತನ್ನ ನಿಲಯವನ್ನಾಗಿ ಮಾಡಿಕೊಂಡಿದ್ದರೂ ಹೊರಗೆ ಮಾತ್ರ ಅನಿಕೇತ

ಮಾನಮುಖ್ಯಾವರಣ ಸಂಜ್ಞಿಕ |
ಭೂ ನಭೋ ವಿಸ್ಫುರಿತ ಕಲನುಪ-|
ಮಾನಬಾಹ್ಯಂ ನಿರ್ಜಿತಾಸ್ತೋದಯ ಯುಗಂ ಮೆರೆವಂ || ೩೩ ||

ಥಾಳಿಸೇತತ್ತಂತ್ರ ಚಂದ್ರ ವಿ-|
ಶಾಲ ಶಾಂತಿ ಜ್ಯೋತ್ಸ್ನಿಕಾ ಸಂ-|
ಮೇಳದಿಂ ಮುಕ್ತ್ಯಂಗನಾ ಸಮರಸ ಸುಖಸ್ಥಿತಿಯಿಂ ||
ಶೀಲನಾಗಿಹನಾವನಾತನ |
ಬಾಳಿಕೆಗೆ, ಬ್ರಹ್ಮಾದಿ ದಿವಿಷ-|
ತ್ಪಾಲ ಭೋಗಂ ಜಲಧಿಯಲಿ ಶೀಕರದ ಹಾಗಿರ್ಕುಂ || ೩೪ ||

ಭುವನ ಸಕಲ ಪ್ರಾಪ್ತ ಭೋಗೇ-|
ಧ್ಮವ ದಹಿಸಿ ಕುಡಿ ಚಾಚುತಿಹ ಕಾ-|
ಮ ವಿಷಯೇಚ್ಛಾ ಜ್ವಾಲೆಯಾರದು ಸುರರಿಗಾದೊಡೆಯು ||
ಸವೆದುದಾರಿಂಗವರೆ ನಿತ್ಯೋ-|
ತ್ಸವರು! ಪರಮೇಶ್ವರರು! ಸುರ ದಾ-|
ನವ ಮುಖಾಖಿಲ ಪೂಜ್ಯಪಾದರು ಪೂರ್ಣಕಾಮನರು || ೩೫ ||

---

ನಾಗಿರುವನಲ್ಲದೆ, ವಿಮುಲಪಾದನು, ಸರ್ವಪಾಪಗಳನ್ನು ತೊಲಗಿಸುವ ಜ್ಞಾನಾಮೃತಶರೀರನೂ ಆಗಿರುವನು. ಮತ್ತು ಪ್ರಮಾಣಗಳಿಗೆಲ್ಲ ಹಿನ್ನೆಲೆಯಾಗಿರುವ ತಾನು ಚರಮ ಪ್ರಮಾಣನೂ ಆಗಿ, ಭೂಮ್ಯಾಕಾಶಗಳನ್ನೆ ತನ್ನ ಶರೀರದ ಅವಯುವಗಳಾಗಿರುವ ಅವನು ಅನುಪಮನೂ, ತನಗೆ ಒಳ ಹೊರಗುಗಳಿಲ್ಲದವನೂ ಆಗಿರುತ್ತ ಉದಯಾಸ್ತಗಳಿಲ್ಲದೆ ಮೆರೆಯುತ್ತಿರುವನು!

೩೪ ಜನರಿಗುಂಟಾಗಿದ್ದ ಬಿಸಿಲಿನ ತಾಪವನ್ನು ಶಮನಪಡಿಸಿ, ಹೃದಯಾಹ್ಲಾದಕರವಾಗಿ ಕಂಗೊಳಿಸುತ್ತಿರುವ ಪೂರ್ಣ ತಿಂಗಳಬೆಳಕಿನಂತೆ, ಸಿದ್ಧಾಂತ ಅಥವಾ ವಿಚಾರಪ್ರಧಾನವಾಗಿರುವ ಈ ಕಾವ್ಯವೆಂಬ ಚಂದ್ರನ—ವಿಚಾರರೂಪವಾದ ಆಹ್ಲಾದಕರವಾಗಿರುವ ಬೆಳುದಿಂಗಳಿನ ಕಿರಣಾವೃತದ ಸೊಬಗಿನಿಂದೊಡಗೂಡಿರುವ ಜ್ಞಾನಿಯು, ತಾನು—ಮುಕ್ತಿಯೆಂಬ ಪರಮ ಸುಂದರಿಯೊಡನೆ ಸಮರಸ ಸುಖವನ್ನು ಪಡೆದವನಾಗಿ, ತನಗೆ ಮತ್ತೊಬ್ಬರೆಣೆಯಿಲ್ಲದಂತೆ ಪೂರ್ಣ ಸುಖಶೀಲನಾಗಿರುತ್ತ ವಿರಾಜಿಸುತ್ತಿರುವನು! ಆ ಜಗನ್ಮಂಗಲ ಸ್ವರೂಪನ ಬಾಳಿನ ಮುಂದೆ ಬ್ರಹ್ಮೇಂದ್ರಾದಿ ದಿವಿಜರ ದಿವ್ಯ ಭೋಗ ಸಂಪತ್ತುಗಳೆಲ್ಲವೂ ಸಮುದ್ರಜಲದ ತುಂತುರುವಿನ ಕಣಗಳಂತೆ ಉಪೇಕ್ಷಣೀಯವಾಗಿರುವವು!

೩೫ ದೇವತೆಗಳಲ್ಲಿಯೂ ಕೊನೆಗಾಣುವದಕ್ಕಿಲ್ಲದ ಭೋಗೇಚ್ಛೆಯ ತನ್ನ ಉರಿಯ ಜ್ವಾಲೆಗಳು—ಪ್ರಪಂಚದ ಭೋಗಗಳೆಂಬ ಕಟ್ಟಿಗೆಗಳನ್ನೆಲ್ಲ ಸುಟ್ಟರ—ಅನುಭವಿಸಿ ಅವನ್ನೆಲ್ಲ ತಾನು ಕೊನೆಗಂಡಿದ್ದರು ಜನರಲ್ಲಿ ಆ ಉರಿನಾಲಿಗೆಯು ತನ್ನ ತುದಿಯನ್ನು ಮಾತ್ರ ಮುಂದುಮುಂದಕ್ಕೇ ಚಾಚುತ್ತಲಿರುವದನ್ನು ಕಂಡರೂ ಜ್ಞಾನಿಗಳಲ್ಲಿ ಮಾತ್ರ ಅದು ಹಿಂದಕ್ಕೇ ನಿಂತು ತಾನೇ ಸವೆದಿರುವದರಿಂದ ಅವರು ನಿತ್ಯಾನಂದರು! ಸಮರ್ಥರಾದ ದೇವಶ್ರೇಷ್ಠರಿಗೂ ಒಡೆಯರು ಪರಮೇಶ್ವರರು

ಭಂಗದಲಿ ನೀಚೋಚ್ಚತೆಯು ಸಮ-।
ಯಂಗಳಿಂದಂಬುಧಿಗೆ ಮರ್ಯಾ-।
ದಾಂಗಣದೊಳಿರುತಿರಲಿ; ಯಾವ ಮಹಾತ್ಮರಲ್ಲಿರದು-॥
ಲಿಂಗದೇಹದಲೀ ಗೃಧತ್ವಮ-।
ನಂಗಹರನ ಕಲಾಂಶರವರವ-।
ರಿಂಗೊಡರ್ಚಿದ ಸತ್ಕೃತಿಯು ಸಕಲ ಕ್ರಿಯಾಸಾರಂ ॥ ೩೬ ॥

ಅವನೆ ದೇವನುಮವನೆ ವಿತರಣ-।
ನವನೆ ಯಜ್ವನುಪಾಸಕನು ತಾ-।
ನವನೆ ಫಿತೃದೇವನು ಸನಾತನನವನೆ ಕೃತಕೃತ್ಯಂ! ॥
ಅವತರಿಸಿತಪರೋಕ್ಷಮಾದನು-।
ಭವಮೆ ತನ್ನೊಳಗಾರಿಗಾ ಪ್ರಾ-।
ಭವ ಚರಿತ್ರನನಿಂತೆನುತ್ತುಸುರುವರು ಬಲ್ಲವರು ॥ ೩೭ ॥

ಹರಿಣ ಜಾತ್ಯಖಿಲಾವಳಿಗೆ ಕೇ-।
ಸರಿಯ ಪಾಂಗಿನಲಮರರಂತಃ-।
ಕರಣ ದೋಷ ನಿಮಿತ್ತದಿಂ ನಿಗ್ರಹಿಸಿಯಾಳಿದೊಡಂ ॥

---

ಅಲ್ಲದೆ, ಸುರ ನರ ದಾನವ, ಮುಖ—ಮೊದಲಾದ ಎಲ್ಲರಿಗೂ ಅವರು ಪೂಜ್ಯಪಾದರು! ಬ್ರಹ್ಮ ಲೋಕದವರೆಗಿನ ಕಾಮಗಳಿಂದ ತೃಪ್ತರಾದ ಅವರು ಆಪ್ತಕಾಮರು.

೩೬ ಆಕಾಶವನ್ನು ಮುಟ್ಟುವ ಅಲೆಗಳಿಂದ ಸಮುದ್ರವು ತನ್ನ ಕರೆಯನ್ನು ದಾಟದಿದ್ದರೂ ಇರಲಿ, ತನ್ನ ಈ ಸ್ಥೂಲಶರೀರದ ಎಲ್ಲ ಸೂತ್ರಗಳಿಗೂ ಸಿವಿಡಿನಂತಿರುವ ಸೂಕ್ಷ್ಮಶರೀರವನ್ನೆ ಇನ್ನಿಲ್ಲವೆಂಬಷ್ಟು ವಿಕಾರಪಡಿಸಿ, ಅದನ್ನು ಕಡೆದುಬಿಡುತ್ತ ಎಲ್ಲಕ್ಕು ಮಿಗಿಲೆನಿಸಿದ ಧೃತಿಯನ್ನೆ ಕರಗಿಸಿ ನೀರಾಗಿಸುವ ಮತ್ತು ಕಲಿವೀರರನ್ನು ಸಹ ಕಡುದೀನರನ್ನಾಗಿಸುವ ಲಿಂಗಶರೀರದ ಮಹಾ ವ್ಯಾಧಿಯಾದ ಗೃಧತ್ವಂ–ಕಾಮವು ಬಯಕೆಗಳು ಸಂಪೂರ್ಣ ತೊಲಗಿಸಿಕೊಂಡವರೇ ಜ್ಞಾನಿಗಳು. ಅನಂಗಹರನ—ಅವರು ಸಾಕ್ಷಾತ್ಪರಮಶಿವನ ಕಲಾಸ್ವರೂಪರೇ ಎಂಬುದರಲ್ಲಿ ಸಂಶಯವಿಲ್ಲ. ಅವರಿಂಗೆ+ಒಡರ್ಚಿದ—ಭಕ್ತಿ ವಿಶ್ವಾಸಗಳಿಂದ ಮಾಡಿದ ಪೂಜೋಪಚಾರಾದಿ ಸೇವೆಗಳು ಸಕಲ ವೇದೋಕ್ತ ಪುಣ್ಯಕ್ರಿಯೆಗಳ ಸಾರತಮವೆಂಬುದಕ್ಕೆರಡಿಲ್ಲವು.

೩೭ ವಿತರಣಂ–ಉದಾರ ದಾನಿಯು, ತನ್ನದೆಂಬುದನ್ನು ಸಂಪೂರ್ಣ ಬಿಟ್ಟವನು; ಯಜ್ವಸು—ಯಜ್ಞಗಳನ್ನೆಲ್ಲ ಮಾಡಿದವನು, ಉಪಾಸಕನು–ದೇವತೆಗಳನ್ನೆಲ್ಲ ಸೇವಿಸಿದವನು, ಅಗ್ನಿಷ್ವಾತ್ತಾದಿಯಾದ ಪಿತೃದೇವತೆಗಳ ರೂಪನು, ಸನಾತನನು—ಪುರಾತನನು, ಕೃತಕೃತ್ಯಂ—ಎಲ್ಲವನ್ನು ಮಾಡಿ ತಾನು ಮುಗಿಸಿಕೊಂಡವನು, ಅವತರಿಸಿತು—ಹುಟ್ಟಿತು, ತನ್ನೊಳಗೆ+ಆರಿಗೆ+ಆ ಪ್ರಾಭವ—ಆ ಪುಣ್ಯಚರಿತನನ್ನು, ಕುರಿತು+ಇಂತೆನುತ್ತ+ಉಸುರುವರು.

೩೮ ಮೃಗಗಳಲ್ಲೆಲ್ಲ ಮೃಗರಾಜನಾದ ಸಿಂಹನಂತೆ ಸರ್ವ ದೇವತೆಗಳಲ್ಲಿಯೂ ಶಿವನು ಪೂಜ್ಯತಮನಾಗಿರುವನು, ಅಂತಃಕರಣದ ಕಾಮದೋಷ ನಿಮಿತ್ತದಿಂದ ಹಲವುಬಾರಿ ನಿಗ್ರಹಿಸಿ,

ಮರಳಿ ದೈತ್ಯರ ಘಾತಿಯಿಂ ಬೇ-।
ಸರಗೊಳುವರಂ, ತ್ಯಕ್ತ ಸರ್ವ-।
ಸ್ವರನನುಗ್ರಹಿಸಿದ ವೃಷಧ್ವಜನೀಗೆ ಶಿವಪದಮಂ　॥ ೩೮ ॥

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೋಳ್ ಜೀವನ್ಮುಕ್ತ ಪೂಜಾ ಫಲಮಂ ಪೇಳಿದ ಹದಿನೇಳನೆಯ ಸಂಧಿ ಸಂಪೂರ್ಣಂ (ಪದ ೯೫೩)

## ವಸ್ತುನಮಸ್ಕೃತಿ ನಿರ್ಣಯ—ಹದಿನೆಂಟನೆಯ ಸಂಧಿಯು

ಸೂ॥ ಕವಿಯಲಪರೋಕ್ಷಾನುಭವದಾ-।
ರ್ಢ್ಯವು, ಕಥಾಪರಿಪೂರ್ತಿ ಮಾಂಗ-।
ಲ್ಯವನು ನೋಡಲ್ಕಿಲ್ಲಿ ವಸ್ತು ನಮಸ್ಕೃತಿಯು ಪೇಳ್ಗುಂ　॥ ಪ ॥

ಜ್ಞಾನಲಿಂಗಗಳಾವವೆಂದೊಡ-।
ಮಾನಮಾಸ್ತಿಕ್ಯಾರ್ಜವಂ ವಿ-।
ಜ್ಞಾನಿ ಸೇವಾಪಾಟವಂ, ವಿಪದಭ್ಯುದಯಗಳಲಿ-॥
ಹೀನಮಾಗದೆ ಪೇರ್ಚದಿರುತಿಹ-।
ಮಾನಸದ ಧೃತಿಯೆಂಬ ಸದನು-।
ಷ್ಠಾನ ತತ್ಪರರಿಂಗೆ ಪೇಳುವುದೀ ಕಥಾಶ್ರುತಿಯ　॥ ೧ ॥

ಸಾನುನಯಮೆಂತುಟು ಗುರುಪ್ರಣಿ-।
ಧಾನಮಯ ಮಂಗಲವನಂತುಟ-।
ನೂನಮಾಗಾದಿಯಲಿ ಪೇಳಲ್ಪಟ್ಟುದಂತ್ಯದಲೀ॥

---

ಆ ದೇವತೆಗಳನ್ನು ತಾನು ಕಾಪಾಡಿದ್ದರೂ ದೈತ್ಯರು ಕಿರುಕುಳದಿಂದ ಪುನಃ ಬೇಸರಪಡುತ್ತ ತಮ್ಮ ಸರ್ವಸ್ವವನ್ನು ಕಳೆದುಕೊಂಡು ಪರಿತಪಿಸುತ್ತಿರುವ ಅವರನ್ನು ಕಂಡು, ಶಿವನು ಆ ವಿಪತ್ತಿನಿಂದಲೂ ಮತ್ತು ತ್ರಿಪುರರಿಂದಲೂ ಹಾಲಾಹಲ ವಿಷದ ಮಹಾ ಉರಿಬೇಗೆಯಿಂದಲೂ ಮತ್ತೆ ಮತ್ತೆ ಆ ದೇವತೆಗಳನ್ನು ಬಿಡದಂತೆ ಕಾಪಾಡಿದ ಆ ನಂದಿವಾಹನನು ಸಂಸಾರ ದುಃಖದಿಂದ ನಮ್ಮನ್ನು ರಕ್ಷಿಸಲಿ.

ಸೂ॥ ಸ್ಥಿರವಾದಾತ್ಮಾನುಭವವು ಬಂದು ತನ್ನನ್ನು ಕವಿಯಲು ಅಲ್ಲಿಗೆ,ಕಥಾ ಅತ್ಮ ವಿಚಾರವು.

೧ ....ಲಿಂಗ—ಕುರುಹಿನ ಜ್ಞಾನಸಾಧನಗಳು, ಆವವು + ಎಂದೊಡೆ + ಅಮಾನಂ+ ಆಸ್ತಿಕ್ಯ+ಆರ್ಜವಂ+ವಿಜ್ಞಾನಿ+ತತ್ತ್ವವನ್ನು ಬಲ್ಲ ಸದ್ಗುರುವಿನ, ಪಾಟವಂ—ಪ್ರಮಾದವಿಲ್ಲದೆ ಇಂಗಿತಜ್ಞನಾಗಿ ಮಾಡುವ ಚತುರ್ವಿಧ ಸೇವೆಯು, ವಿಪತ್+ಅಭ್ಯು....ಳಲಿ+ಹೀನ....ರ್ಚದೆ— ಬರುವ ಹೆಚ್ಚು ಕುಂದುಗಳಿಲ್ಲದ ಮನಸ್ಸಿನ ಧೈರ್ಯವು.

೨ ಸಾನುನಯಂ+ಎಂತುಟು—ತಾನು ವಿನೀತನಾಗಿ ವೃದ್ಧಾನುಕ್ರಮವನ್ನನುಸರಿಸಿ, ಗುರು ....ಮಯ—ಗುರುವಿಗೆ ನಮಸ್ಕಾರರೂಪ, ಅಂತುಟು (ಹಾಗೆಯೆ)+ಅನೂನಂ—ಅತಿಶಯದಿಂದ; ಆದಿ—ಈ ಗ್ರಂಥಾರಂಭದ ಅರನೆಯ ಸಂಧಿಯಲ್ಲಿಯೆ, ಸದ....ಮಯ(—ತನ್ನ ಸದಾತ್ಮಸ್ವರೂಪ

ಜ್ಞಾನ ದಾರ್ಢ್ಯಾರ್ಥಂ ಸದನು ಸಂ-।
ಧಾನಮಯ ಮಂಗಲವನಿಲ್ಲಿ ನಿ-।
ಧಾನದಿಂ ವ್ಯಾಸೋಕ್ತಿಯಂತಾತುಮನ ವಿವರಿಸುಗುಂ ॥ ೨ ॥

ಯಾವುದನು ಬಿಟ್ಟಿಲ್ಲ ಜಗತೀ ।
ಭಾವವಿಾ ಜಗಮಾವ ಸತ್ತ್ಯಾ-।
ಜೀವಿತಂ ತದ್ವಸ್ತುವಿಗೆ ಸಚರಾಚರಂ ಭುವನಂ-॥
ಯಾವ ಭಾವದೊಳೆಸವುದದರಿಂ ।
ಭಾವಿಸಿದೊಡಿರದಾ ನಿಜಕೆ ಸಂ-।
ಸೇವಿಸಿಯೆ ಸತ್ಪ್ರಾಣಿಸಿರುತಿರ್ಪುದು ಜಗಂ ಸುಖಮಂ ॥ ೩ ॥

ಯಾವುದರ ಮನಮುಡಗಿದಲ್ಲಿ ಕ-।
ಲಾ ವಿಶೇಷಂ ತೋರ್ಪುದಡಗದೆ ।
ಯಾವುದಾ ತತ್ತ್ವಕ್ಕೆ ಕಾಷ್ಠಾ ದೇಶಕಾಲಗಳಿಂ ॥
ಯಾವುದವಿಭಿನ್ನತ್ವಮಾಗಿ ನಿ-।
ರಾವರಣಮಾಗಿರ್ಪುದಾ ತ್ರಿಗು-।
ಣಾವಲಂಬಕೆ ತಾಮಸೀ ನಿಲಯಕ್ಕೆ ಸಹಜಕೆ ॥ ೪ ॥

---

ವನ್ನನುಸರಿಸಿ ಕ್ರಮದಿಂದ ತಾನು ಚಿಂತನೆಯನ್ನು ಮಾಡುವ)+ಮಂಗಲವನು+ಇಲ್ಲಿ ನಿಧಾನ—ವಿಸ್ತಾರವಾಗಿ, ವ್ಯಾಸರ+ಉಕ್ತಿ—ವಾಕ್ಯದಂತೆ.

೩ ಯಾವ ಪರಮಾತ್ಮನ ಸತ್ತೆಯಿಂದಲೇ ಈ ಭವನಂ—ಜಡಚೇತನರೂಪದ ಈ ಜಗತ್ತಿನ ಜೀವರೆಲ್ಲರೂ ಜಗತ್ತೂ ಸಹ ಜೀವಿಸಿಕೊಂಡಿರುವದೊ ಆ ಆತ್ಮವಸ್ತುವಿಗೆ ನಮಸ್ಕಾರವು. ಜಡಚೇತನ ರೂಪಾದ ಈ ಜಗತ್ತೆಲ್ಲವೂ ಇರವು ಅರಿವು ಸುಖರೂಪನಾದ ಆತ್ಮನನ್ನಾಶ್ರಯಿಸಿಕೊಂಡೇ ಇರುವದಲ್ಲವೆ, ತಾನು ಸ್ವತಂತ್ರವಾಗಿ ಜೀವಿಸಿಕೊಂಡಿರುವದಿಲ್ಲವೊ ಆ ತನ್ನ ನಿಜವಾದ ಆತ್ಮದೇವನಿಗೆ ನಮಸ್ಕಾರವು.

೪ ಮನಸ್ಸಿನ ವೃತ್ತಿಗಳಿಲ್ಲದಿದ್ದಲ್ಲಿ ತಾನಿಲ್ಲವೆನಿಸಿಕೊಂಡು ಅಡಗದೆ, ತನ್ನ ನಿರ್ವಿಕಾರ ಚೈತನ್ಯದರಿವಿನ ರೂಪದಿಂದ ಯಾವಾಗಲೂ ಮೇಲೆದ್ದು ತೋರಿಕೊಳ್ಳುತ್ತಲಿರುವದೊ, ಆ ಆತ್ಮತತ್ತ್ವಕ್ಕೆ ದೇಶ ಕಾಲಗಳಿಂದ ಕಾಷ್ಠಾ—ಕೊನೆ—ಪರಿಚ್ಛೇದವೆಂಬುದು ಇರುವದೇಇಲ್ಲ. ವಿಪರೀತವಾಗಿ ಆ ದೇಶ ಕಾಲಗಳಿಗೆ ಅವನೇ ಕಾಷ್ಠಾ ಎಂದರೆ ಪರಮಗತಿಯಾಗಿರುವನು ಎಂಬುದಿಷ್ಟೇ ಏಕೆ? ಆ ದೇಶ ಕಾಲ ವಸ್ತುಗಳನ್ನೆಲ್ಲ ಒಳಗೊಂಡಿರುವ ನಮ್ಮ ಎಚ್ಚರಾದಿ ಅವಸ್ಥೆಗಳಿಗೂ ತಾನೇ ದಿಕ್ಕಾಗಿರುವನಲ್ಲದೆ, ತಾನೆ ಆಗಿರುವ, . ಆ ಅವಸ್ಥೆಗಳಲ್ಲಿಯೂ ಕಡಿವಡೆಯದಂತಿದ್ದುಕೊಂಡಿರುವ ಅವಿಭಿನ್ನವಾದ ಆ ತತ್ತ್ವಕ್ಕೆ ತೆರೆಮರೆಗಳೇನೂ ಇರುವದಿಲ್ಲ. ಅದು ತ್ರಿಗುಣಗಳಿಗೆ ಇಂಬೆನಿಸಿರುವದಲ್ಲದೆ, ಅಜ್ಞಾನವು ತನ್ನಿಂದಲೆ ಸಿದ್ಧವಾಗಬೇಕಾಗಿರುವದರಿಂದ ಆ ತಮಸ್ಸನ್ನೂ ಕಡೆಗೊತ್ತಿರುವ ಸಹಜವಾದ ಆ ಸ್ವಯಂಜ್ಯೋತಿಗೆ ನಮಸ್ಕಾರವು.

ಯಾವ ನಿಷ್ಕಲ ವಸ್ತುವಿನ ಸಂ-।
ಭಾವಮರಿಯದೆ ಯೋಗ ಸಾಂಖ್ಯಗ-।
ಳಾವರಿಸೆ ಪಟ್ಟುವು ಕಲುಷದಿಂ ಶಬ್ದನಯಮಂತೆ-॥
ವ್ಯಾವಹಾರಿಕ ಗೌತಮಿಯು, ಕ-।
ರ್ಮಾವಲಂಬಕ ಜೈಮಿನೀಯುಂ।
ಈ ವಿಶೇಷ ವಿಚಿತ್ರ ಭಿತ್ತಿಗೆ ವಿತ್ತಿಗೆಣಿಸಲ್ಕೆ ॥ ೫ ॥

ಯಾವ ತತ್ತ್ವವ ತಿಳಿಯಲೊಡನೆ ಕ-।
ಳೇವರವ ನಿಂದ್ರಿಯಗಳಂ ಪ್ರಾ-।
ಣಾವಳಿಯ ಮನಮಂ ಮನೀಷೆಯನಂತರಂಗವನು-॥
ದೇವರೆಂದೇ ಬಗೆವರಾಯಾ-।
ಭಾವಸಾಕ್ಷಿಕವಾಗಿ ತತ್ತ-।
ದ್ಭಾವ ನಿಲಯಮೆನಿಪ್ಪ ಪರಮಾತ್ಮ ಸ್ವರೂಪಕ್ಕೆ ॥ ೬ ॥

ಎಲ್ಲಿ ಜಾಗ್ರತ್ಸ್ವಪ್ನ ಸುಪ್ತಿ ಸ-।
ಮುಲ್ಲಸತ್ಕಾರ್ಯಂಗಳೆಸೆವವು, ।
ನಿಲ್ಲುವವು ತತ್ತದ್ಭ್ರಮಾಧಿಷ್ಠಾನ ಮಾಗಿರುತ॥
ಅಲ್ಲಿಯಲ್ಲಾ ಯಾ ಪದಾರ್ಥಗ-।
ಳಲ್ಲದಂಟದವಕ್ಕೆ ತನ್ನಿಂ-।
ದುಳ್ಳುದೆನಿಸುತ್ತಿರುವ ಪರಮಾದ್ವೈತಮಹ ಪದಕೆ ॥ ೭ ॥

---

೫ ಚಿತ್ರಪಟದಂತೆ ಈ ಜಗಚ್ಚಿತ್ರಕ್ಕೆ ಆಧಾರವಾಗಿರುವ ತತ್ತ್ವವನ್ನು ಕಾಣವೆ ಹೋಗಿ ಸಾಂಖ್ಯಯೋಗಾದಿ ದರ್ಶನಗಳೆಲ್ಲ ಅಪರಿಹಾರ್ಯವಾಗಿರುವ ಕಲುಷದಿಂದ ಆವರಿಸಲ್ಪಟ್ಟು, ತಮ್ಮಲ್ಲಿ ಬರಿಯ ಶಬ್ದಶರೀರಗಳಾಗಿ ಉಳಿದುಕೊಂಡಿರುವವೊ, ಈ ಜಗಚ್ಚಿತ್ರಕ್ಕೆ ವಿಚಿತ್ರವಾದ ಆಧಾರವಾಗಿ, ಭಿತ್ತಿಗೆ—ಗೋಡೆಯಂತಿರುವ, ವಿತ್ತಿಗೆ—ಆ ಚೈತನ್ಯಕ್ಕೆ ನಮಸ್ಕಾರವು.

೬ ಯಾವದನ್ನು ತಿಳಿದುಕೊಂಡಿದ್ದರೆ ಕಲೇವರ—ಶರೀರವು, ಇಂದ್ರಿಯಗಳ, ಪಂಚಪ್ರಾಣಗಳ, ಆವಳಿ—ವರ್ಗವು ಮತ್ತು ಮನಸ್ಸು, ಮನೀಷೆ—ಬುದ್ಧಿಯು, ಉಳಿದ ಚಿತ್ತಾಹಂಕಾರಗಳು ಈ ಎಲ್ಲವನ್ನೂ ತನ್ನಾತ್ಮದೇವನೆಂದೆ ಬಗೆಯುವರೋ, ಅಲ್ಲದೆ, ಆಯಾಯ, ಭಾವ–ವೃತ್ತಿ ವಿಕಾರಗಳನ್ನು ಸಾಕ್ಷಿಯ ರೂಪದಿಂದ ತಾನು ಬೆಳಗುತ್ತ, ತತ್+ತತ್—ಆಯಾಯ, ಭಾವನಿಲಯಂ—ಗೋಚರಿಸುವ ವಸ್ತುಗಳಲ್ಲಿರುವ ಆ ತತ್ತ್ವಕ್ಕೆ ನಮಸ್ಕಾರ.

೭ ಸಮುಲ್ಲಸತ್—ಬರಡು—ನಿಸ್ಸಾರವಾದ ಎಚ್ಚರಾದಿ ಅವಸ್ಥೆಗಳು ಆತ್ಮನಲ್ಲಿ ನಿಷ್ಪ್ರಯೋಜನವಾಗಿಯೆ ಕಾಣುತ್ತಿದ್ದರೂ ಅದು—ಆ ಆತ್ಮನೇನೊ ಆ ಹುಸಿತೋರಿಕೆಯ ಅವಸ್ಥೆಗಳ ಭ್ರಮೆಗೆ ಅಡಿಗಲ್ಲಿನಂತೆ ಅಧಾರವಾಗಿರುವನು. ಅಲ್ಲಿ+ಅಲ್ಲಿಯ—ಆಯಾಯ ಅವಸ್ಥೆಯ ದೃಶ್ಯಗಳನ್ನು ತಾನು ಸೋಂಕದಿರುವನಲ್ಲದೆ, ಅವಕ್ಕೂ ಮತ್ತು ಎಚ್ಚರಾದಿ ಅವಸ್ಥೆಗಳಿಗೂ ತನ್ನಿಂದಲೇ ಇರವೆಂದೆನಿಸಿಕೊಳ್ಳುತ್ತಿರುವ, ....ಪದಕೆ ನಮಸ್ಕಾರವು.

ಆದಿಮಧ್ಯಾಂತಂಗಳಲ್ಲಿ ವಿ-।
ಭೇದವೈದದೆ ಇರ್ದು, ಭೂತದ- ।
ಭೇದದಿಂ ಜೀವೇಶ್ವರಾದ್ಯಭಿಧಾನವಾಂತೊಡೆಯುಂ, ॥
ಭೇದವೆಂಬುದು ಮಾಯೆಗಲ್ಲದ-।
ನಾದಿ ನಿರ್ಮಲ ಚಿತ್ತೆನಿಪ ತನ-।
ಗೇ ದೆಶೆಯೊಳಂಟದ ನಿರಾಕುಲವಾದ ಶಿವಪದಕೆ ॥ ೮ ॥

ಯಾವುದಿದವರ್ಥಕ್ಕಗವ್ಯಂ ।
ಯಾವುದಹ ಮರ್ಥಂ, ಭವಾಂಬುಧಿ-।
ಗಾವುದುತ್ತಾರಕಮಗೋಚರ ಮಾವುದದ್ವಂದ್ವಂ ॥
ಆವುದಾವುದು ಕುರುಹಿಡಲ್ಬಹು-।
ದಾ ವಿವಿಧ ವಸ್ತುಗಳ ವಾಸ್ತವ-।
ಮೇ ವಿಭುವಿನಿರುತಿರ್ಪ್ಪ ಮದಕೆ ನಮೋಸ್ತುಮರಮರಳ! ॥ ೯ ॥

ಮತ್ತಮದಕೆ ನಮೋಸ್ತು ಯಾವುದ-।
ನುತ್ತಮವು ಸರ್ವಾತ್ಮಕವು ತ-।
ನ್ನತ್ತಣಿಂ ಪೊರಗಿಲ್ಲ ವಿಶ್ವಮಶೇಷಮದಕೆ ಪರಂ ॥
ಮತ್ತೆ ದೃಶ್ಯ ದ್ರಷ್ಟೃಗಳ ಪ್ರತಿ-।
ಪತ್ತಿಯಿಂ ಪೊಳೆದಲುಗದಿಹ ಸುಖ-।
ಮೆತ್ತಲಾಯಾತ್ಮಸ್ಥಮದುವೆ ನಮಸ್ಕ್ರಿಯಾ ಸ್ಥಾನಂ ॥ ೧೦ ॥

---

೮ ವಿಭೇದಂ+ಐದದೆ—ತನ್ನಲ್ಲಿ ಭೇದಗಂಧವೂ ಇಲ್ಲದಿರುವ, ಭೂತದ ಭೇದದಿಂ—ಕಾರ್ಯಗಳಾದ ಶರೀರೇಂದ್ರಿಯಗಳ ವ್ಯಷ್ಟಿ ಸಮಷ್ಟಿಯೆಂಬ ಉಪಾಧಿಗಳ ಭೇದದಿಂದ, ಜೀವ+ಈಶ್ವರಾದಿ+ಅಭಿಧಾನಂ—ಹೆಸರನ್ನು, ಆಂತೊಡೆಯುಂ—ತಾನು ಹೊಂದಿದ್ದರು ಕೂಡ ಆ ಭೇದವು ತನ್ನ ಸ್ವರೂಪವನ್ನುಮಾತ್ರ ಎಂದಿಗೂ ಸೋಕಿಯೆ ಇರುವದಿಲ್ಲ. ಏತಕ್ಕೆಂದರೆ ಅದು ....ಮಾಯೆಗೆ—ಇಂದ್ರಿಯಗಳ ಬಿಡಿಯರಿವಿನಲ್ಲಿ ತಾನು ಹುಟ್ಟುಗಟ್ಟಿದ್ದಲ್ಲದೆ, ನಿರಾಕುಲ—ವ್ಯಾಕುಲ—ವ್ಯಥೆ ಇಲ್ಲದ ಆತ್ಮನಾಗಿರುವ, ತನಗೆ+ಏದೇಶಯೊಳು-ಎಂದೂ ಅಂಟದ ಆ ಶಿವಪದಕ್ಕೆ ನಮಸ್ಕಾರವು.

೯ 'ಇದು' ಎಂದೆನಿಸಿಕೊಳ್ಳದ, 'ನಾನು' ಎಂಬುದರ ಅರ್ಥವಾಗಿರುವದು. ಈ ಭವ ಸಾಗರದ ಉತ್ತಾರಕರವು ಮತ್ತು ಇಂದ್ರಿಯಾಗೋಚರವೂ ಆಗಿ, ತನಗೆರಡನೆಯದಿಲ್ಲದ್ದಾಗಿರುವದು. ಮತ್ತು ನಾವು ಮನ ಇಂದ್ರಿಯಾದಿ ಕರಣಗಳಿಂದ ಗುರ್ತಿಸಬಹುದಾದ್ದೆಲ್ಲದರ ವಾಸ್ತವದ ಸ್ವರೂಪವೂ ಆಗಿರುವದು. ಅದೇ, ಆ ವಿಭುವಿನ—ಎಲ್ಲವನ್ನು ಒಳಹೊಕ್ಕಿ ವ್ಯಾಪಿಸಿಕೊಂಡಿರುವ ನಮ್ಮಾತ್ಮದೇವನ ಪರಮಾರ್ಥವು ಅದಕ್ಕೆ ನಮಸ್ಕಾರವು.

೧೦ ಅದೇ ಎಲ್ಲಕ್ಕೂ ಉತ್ತಮಗತಿಯು, ಈ ಅಶೇಷವಿಶ್ವವೆಂಬುದು ಆತನನ್ನು ಬಿಟ್ಟು ಹೊರಗಿರುವದಿಲ್ಲ—ಎಂಬುದಿಷ್ಟೆಯಲ್ಲ, ಜ್ಞಾನ ಜ್ಞೇಯ ಜ್ಞಾತೃ ಎಂಬ ಈ ಪ್ರತಿಪತ್ತಿಯಿಂ—ಬೇರೊಂದು ರೂಪುಗಳಿಂದ ಹೊರಗಡೆಯಲ್ಲಿ, ಪೊಳೆದು—ಹೊಳೆದು ಅದು ಚಲಿಸುವಂತೆ ಕಂಡು

ನೋಟಕನ ನೋಡಿಸಿಕೊಳುವದಂ ।
ನೋಟವನಹಂಕಾರದಿಂ ಕಾ-।
ಲಾಟದಿಂದ್ರಿಯ ಯುಗದ ವೃತ್ತಿಜ್ಞಾನ ವಿಷಯಗಳಿಂ-॥
ಪಾಟಿಸದೆ ಚಿನ್ಮಾತ್ರ ವೊಂದೇ-।
ಪಾಟವದಿ ತಾನೆಸಿಪುದಾ ವರ-।
ಕೋಟಿಕಕ್ಕೆ ನಮೋಸ್ತು ಮರಳಿ ನಮೋಸ್ತು ಪರಿವಿಡಿಯಿಂ ॥ ೧೧ ॥

ಉಳ್ಳ ತನದಿಂದಿರ್ಕೆ ರೂಪವ-।
ನೊಲ್ಲದಿಹ ತನದಿಂದೆ ಶೂನ್ಯಂ, ।
ಭುಲ್ಲವಿಸೆ ಚಿನ್ಮಾತ್ರದಿಂ ಪಕ್ಷದ್ವಯದೆ ತೋರಿ ॥
ಎಲ್ಲ ಭಾಸಕಗಳಿಗೆ ರುಚಿ ತ-।
ನ್ನಲ್ಲಿಯೇ ಘಟಿಸಿತ್ತೆನುವ ಬಳಿ-।
ಯಲ್ಲಿ ಆಯಾತ್ಮಂಗೆ ಪ್ರಣಮನಮೊಂದುಗನಿವಾರ್ಯಂ ॥ ೧೨ ॥

ಸುರ ನರಾದಿಗಳಲ್ಲಿ ಅಂತಃ-।
ಕರಣ ಮೂರ್ತಿಯನಾಂತು ಹಂಸಾ-।
ಕ್ಷರವನುಚ್ಚರಿಸುತ್ತಲಸುವಿಂದಾವುದಿರುತಿಹುದು-॥

---

ಬಂದರೂ ತನ್ನಲ್ಲಿ ಮಾತ್ರ ಅದರಿಂದ, ಅಲುಗದಿಹ—ಅಲುಗಾಟವಿಲ್ಲದೆ ನಿರ್ವಿಕಾರವಾಗಿರುವ ಆ ಯಾತ್ಮಸುಖವು, ಎತ್ತ—ಯಾವ, ಆತ್ಮಸ್ಥಂ—ಆತ್ಮನಲ್ಲಿ ನಿತ್ಯವೂ ತನ್ನ ಸ್ವರೂಪವಾಗಿರುವದೊ ಆ ಸುಖವೇ ನಮಸ್ಕಾರಕ್ಕೆ ತಕ್ಕ ಸ್ಥಾನವಾಗಿರುವದು.

೧೧ ನೋಟವುಂ + ಅಹಂಕಾರದಿಂ—'ನಾನು' ಎಂಬ ವಿಕಾರದಿಂದಲೂ ಉಭಯ ವಿಂದ್ರಿಯವರ್ಗವು ಮತ್ತು ಅವುಗಳ ವಿಷಯಗಳು ಇವುಗಳಿಂದಲೂ ಒಂದು ವಿಕಾರವನ್ನಾದರು, ತನಗೆ ಬಂದು, ಪಾಟಿಸದೆ—ಅಡ್ಡಿಯೆನಿಸದೆ, ತಾನು ನಿರ್ವಿಕಾರ ಚಿನ್ಮಾತ್ರವೊಂದೇ ತನ್ನ ಹುಟ್ಟು, ಪಾಟವದಿ—ಸ್ವಭಾವವೆನಿಸಿಕೊಂಡಿರುವ ತನ್ನ ಪರಮಾರ್ಥವೆನಿಸಿರುವದು. ಅಲ್ಲದೆ, 'ನಾನು' 'ಇದು' ಎಂಬ ಎರಡು ಕೋಟಿಗಳಿಗೂ ಅದು, ವರ—ಮಿಗಿಲೆನಿಸಿ ಅದಕ್ಕೆ ಸಿಗದಿರುವ ಆ ತನ್ನ ಪರಮಾರ್ಥ ಸ್ವರೂಪಕ್ಕೆ ನಮಸ್ಕಾರವು.

೧೨ ಉಳ್ಳತನದಿಂದ+ಇರ್ಕೆ—ಇರುವ ಸ್ವರೂಪದಿಂದ ತಾನು—ಸತ್ತೆಂತಲೂ, ತನ್ನಲ್ಲಿ ರೂಪಿಲ್ಲದ್ದರಿಂದ ಶೂನ್ಯವೆಂತಲೂ ಹೀಗೆ ಒಂದು ತತ್ತ್ವವೇ ಇಬ್ಬಗೆಯಿಂದ, ಭುಲ್ಲವಿಸೆ—ಸಂತೋಷ ದಿಂದ ತನ್ನಲ್ಲಿ ಉಬ್ಬಿ ಸತ್ಪಕ್ಷ ಮತ್ತು ಅಸತ್ಪಕ್ಷ ಎರಡರಲ್ಲಿಯೂ ತೋರಿಕೊಳ್ಳುತ್ತಿರುವ ಅದು ಸೂರ್ಯಾದಿ ನಿಖಿಲ ಭಾಸಕಗಳಿಗೂ ತನ್ನಿಂದಲೇ ರುಚಿ—ಕಾಂತಿ—ಪ್ರಕಾಶವೇದೆನಿಸಿಕೊಳ್ಳುತ್ತಿರುವದೊ ಅದಕ್ಕೆ ಎಡೆಬಿಡದಂತೆ ನಮಸ್ಕಾರ.

೧೩ ಬಿಡದಂತೆ ಸುರನರಾದಿ ಎಲ್ಲರಲ್ಲಿಯೂ ಅಂತಃಕರಣದ ಕಟ್ಟಿನಿಂದ ತಾನು ಜೀವನಾಗಿ ಹೊಳೆಯುತ್ತ, ಪ್ರಾಣವ್ಯಾಪಾರದಿಂದ ಅಜಪ ಮಂತ್ರದ ಹಂಸಾಕ್ಷರವನ್ನು ನಿತ್ಯವೂ ತಾನು ಉಚ್ಚರಿಸುತ್ತಿರುವನೋ ಆ ಪರಮ ತತ್ತ್ವಕ್ಕೆ, ಚೈತ್ಯ—ಅಜ್ಞಾನಿಗಳಿಗೆ ತಮ್ಮ ಪಾಪದ ಮನೆಯೆಂತಿ

ಪರಮ ತತ್ತ್ವಮದಕ್ಕೆ ಚೈತ್ಯಾ-।
ವರಣಮುಂಟೇ ಪುಸಿ! ತದರ್ಥಂ-।
ಸ್ಫುರಿಸಲೀಯುಪ ಲಕ್ಷಣಂ ಸಂಭಾವ್ಯಮದಕೆ ಪರಂ ॥ ೧೩ ॥

ಪ್ರೋದಿತ ಪರಾಮೃಷ್ಟ ಲಬ್ಧಾ-।
ಸಾದಿತೋದ್ಧೃತಮಾವುದದಕೆ ಸ-।
ದಾದರಂ ಮಿಗೆ, ನಾನೆ ನೀಂ ನೀಂ ನಾನೆಯೆಂಬಲ್ಲಿ-॥
ಭೇದಮೇ ಬಳಿಯಲ್ಲಿ ತೋರದ-।
ನಾದಿ ನಿತ್ಯಾದ್ವೈತಮದಕೆ ಪ್ರ-।
ಮೋದದನೆಂತಂತಕ್ಕೆ ಕರಣತ್ರಯ ನಮಸ್ಕ್ರಿಯೆಯು ॥ ೧೪ ॥

ಈ ಪರಿಯ ಲಕ್ಷಣದಿ ಲಕ್ಷಿತ ।
ರೂಪನಾದಾತ್ಮನ ಕುರಿತು, ಭ-।
ಕ್ತ್ಯುಪಚಾರಿಕ ಮೆಸೆಯಲಾಗಿ ನಮಃ ಪದತೆಯಿಂದ ॥
ಈ ಪದವ ಸದುಪಾಸ್ತಿಯಿಂದನು-।
ಲಾಪಮಾನರೆ ತತ್ತ್ವವಿದರೆನ-।
ಲೀ ಪದಾರ್ಥಸ್ಥಲದೆ ಕೌಶಲಮುಂಟು ತಿಳಿವಲ್ಲಿ ॥ ೧ ॥

ಶಿವಪದಕ್ಕೇ ನುಮಪದಕೆ ಸಂ-।
ಭವಿಸಿದಾಯ ವಿಭಕ್ತಿ ತತ್ತ್ವಮ-।
ಸಿ ವರವಾಕ್ಯಂ ಸಾಮ್ಯಮಿದರ ಪದಗಳ ವಿಭಜಿಸಲು-॥

---

ರುವ ಸುತ್ತುಗಟ್ಟಿನ ಆವರಣವೆಂಬುದುಂಟೆ? ಎಂದಿಗೂ ಇರುವದಿಲ್ಲ ಎಂಬುದನ್ನು ಕೂಡ ಯಾವದರಿಂದಲೇ ತಿಳಿಯಬೇಕಾಗಿರುವದೊ? ಆವರಣವಿಲ್ಲದ ಆ ಸರ್ವಸಾಕ್ಷಿಗೆ ನಮಸ್ಕಾರವು.

೧೪ ಶ್ರೀಸದ್ಗುರುಗಳಲ್ಲಿ ಕ್ರಮವರಿತು ತಾನು ಮಾಡಿದ ವಿಚಾರದಿಂದ ಉಂಟಾಗುವ ಜ್ಞಾನದಿಂದ ಮೇಲೆದ್ದು ತೋರುವ ತನ್ನ ಬ್ರಹ್ಮಾತ್ಮ ಭಾವಕ್ಕೆ ನಮಸ್ಕಾರವು, ಮತ್ತು 'ನಾನೆ ನೀನು' 'ನೀನೆ ನಾನು' ಎಂದು 'ಸೋಹಂ' ಭಾವದಿಂದ ಜೀವೇಶ್ವರರ ತತ್ತ್ವದಲ್ಲಿ ಸಮರಸವನ್ನು ಹೊಂದಿರುವದಾಗಿಯೂ ಮತ್ತು ಅವಿದ್ಯೆಯಿಂದ ತೋರುವ ಭೇದಕ್ಕೆ ತಾನು ಹೊರಚ್ಚಾಗಿಯೂ ಇರುವ ಅನಾದಿ ನಿತ್ಯಾದ್ವೈತಸ್ವರೂಪನಾದ ಆಯಾತ್ಮನಿಗೆ ತ್ರಿಕರಣಪೂರ್ವಕವಾದ ನಮಸ್ಕಾರ ಹೊಂದಲಿ.

೧೫ ಈ ರೀತಿಯಿಂದ ತತ್ತ್ವವಿದರಾದವರು ತಮ್ಮಾತ್ಮನಿಗೆ ಭಕ್ತಿಪೂರ್ವಕ ನಮಸ್ಕಾರರೂಪ ಸೇವೆಯನ್ನು ಮಾಡುತ್ತಿರುವರು. ಅರಿವಿಲ್ಲದಿದ್ದರೂ ಅಹಂಗ್ರಹ ಧ್ಯಾನದಿಂದಲೇ ಆಯಾತ್ಮನನ್ನು ಉಪಾಸನೆಯಿಂದ ತಮ್ಮ ಹೃದಯಾಕಾಶದಲ್ಲಿ ತಂದುಕೊಳ್ಳುವದಕ್ಕೆ ಯತ್ನೀಕರಿಸುವವರೂ ಉಂಟು. ಅಲ್ಲದೆ—

೧೬ 'ನಮಃಶಿವಾಯ' ಎಂಬ ಮಂತ್ರವು, ನಮಃ + ಶಿವ—ಈ ಪದಗಳಿಂದ 'ತತ್ತ್ವಮಸಿ' ವಾಕ್ಯದಂತೆ ಜೀವಬ್ರಹ್ಮರ ಐಕ್ಯವನ್ನೇ ಶಿವಪುರಾಣಗಳಲ್ಲಿ ತಿಳಿಸುತ್ತಿರುವದು.

ಆವಕೆ ಕ್ರಮದಿಂದರ್ಥ ಸಾಧ್ಯ-।
ಶ್ಯವನು ಸಾರುವದೆಂದು ನೈಗಮ-।
ಶಿವಪುರಾಣ ಸ್ಮೃತಿಗಳೈಕ್ಯಂ ಘೋಷಿಸುತ್ತಿಹುದು ॥ ೧೬ ॥

ಆಪ್ತ ಕಾಮ ಪ್ರಣತಿ ದೃಶ್ಯೋ-।
ಪಾತ್ತವಾಗದು, ತನಗೆ ತಾನಿದ-।
ನೆತ್ತಣಿಂದಾಚರಿಪನೆನೆ, ತನುವಿರುವ ಪರಿಯಂತಂ-॥
ಚಿತ್ತ ಮಿಪ್ಪುದದಕ್ಕೆ ಬಾಹ್ಯದೊ-।
ಳೊತ್ತರಿಪುದೇ ತೈಜಸ ಶಿಲಾ ।
ವೃತ್ತಲಾವಾಹಿತ ಸುರೇಂದ್ರ ಸ್ಮೃತಿಯಲುರು ಗಣ್ಯಂ ॥ ೧೭ ॥

ಭಾವನಾ ಭಾವಿತ ಸಮೃತ್ಸ್ನಾ-।
ಗ್ರಾವ ಜಲವಹ್ನ್ಯರ್ಕರಲ್ಲೇ ।
ದೇವರಿನೆ ಮೂಢರ್ಗೆ, ವಿಬುಧರ್ಗಿರನೆ ತನುವಿನಲಿ!॥
ಜೀವರೂಪದಿ ಸಕಲ ಕರಣ ಗು-।
ಣಾವಳಿಯ ಬೆಳಗುತ್ತಿರುವ ಚಿ-।
ದ್ಭಾವನೆ ಮಹಾದೇವನಾಗಿರಲೇನು ಸಂದೇಹಂ! ॥ ೧೮ ॥

ಪಿರಿಯರಾದವರೆಲ್ಲ ಸಾಕ್ಷಾ-।
ತ್ಪರಮ ಪುರುಷಾರ್ಚನೆಯ ನೆನಹಿಂ-।
ವಿರಚಿಸುತ್ತಿಹರಲ್ಲದಾಚರಿಸುವರೆ ಬೇರೊಂದ! ॥

---

೧೭ ಕಲ್ಲು, ಮಣ್ಣು, ಮರ ಮತ್ತು ಸುವರ್ಣಾದಿ ತೈಜಸ ಲೋಹ ಇವುಗಳಲ್ಲಿ ಮಾಡಿರುವ ದೇವರ ಕುರುಹಿನ ಹೊರಗಡೆಯು ವಿಗ್ರಹಗಳಲ್ಲಿ ದೃಶ್ಯವನ್ನು ಕುರಿತಿಲ್ಲದ ಆ ಜ್ಞಾನಿಯ ಚಿತ್ತವು ದೇವರೆಂಬ ಬುದ್ಧಿಯಿಂದ ಚಲಿಸುವಂತಿಲ್ಲ. ಮತ್ತು ತನ್ನನ್ನೇ ತಾನು ನಮಸ್ಕರಿಸಿಕೊಳ್ಳುದು, ಹೊಂದುವದೂ ಇಲ್ಲ. ಆದ್ದರಿಂದ ನಮಸ್ಕರಿಸುವದು ಎಂಬುದು ಜ್ಞಾನಿಗೆ ಸರಿಹೊಂದುವದಿಲ್ಲ ವಲ್ಲ? ಎಂದು ಇಲ್ಲಿ ಶಿಷ್ಯನ ಪ್ರಶ್ನೆಯು.

೧೮ ಕಲ್ಲು ಮಣ್ಣು ಮರ ಮತ್ತು ಬೆಂಕಿ ನೀರು ಸೂರ್ಯ (ಭಾಗ....೧೧-೧೧-೪೨) ಮುಂತಾದವುಗಳಲ್ಲಿ ಮೂಢರಿಗೆ ಭಾವನೆಯಿಂದ ದೇವರಿದ್ದರೆ, ಜ್ಞಾನಿಗಳಿಗೆ ತಮ್ಮ ಶರೀರದಲ್ಲಿರುವದೆಂಬಲ್ಲಿ ತಪ್ಪೇನೂ ಇಲ್ಲವಷ್ಟೆ? ಮೊದಲನೆಯದಾಗಿ ಬ್ರಹ್ಮವು ಜೀವರೂಪದಿಂದ ಸರ್ವರಲ್ಲಿಯೂ ಇರುವದು. ಕಾರ್ಯ ಕರಣಗಳ ವಿಕಾರಗಳನ್ನೆಲ್ಲವನ್ನೂ ಬೆಳಗುತ್ತಿರುವ ಚಿದ್ಭಾವನೇ ಮಹಾದೇವನೆಂಬಲ್ಲಿ ಸಂಶಯವಿಸ್ಸಿರುವದಿಲ್ಲ. ಆದ್ದರಿಂದ ಶರೀರವಿರುವವರೆಗೆ ಜ್ಞಾನಿಯ ಚಿತ್ತವು ತನ್ನಾತ್ಮದೇವನನ್ನೆ ನಮಸ್ಕಾರದಿಂದ ಸೇವಿಸುವದೆಂಬುದರಲ್ಲಿ ಅಸಮಂಜಸವೊಂದೂ ಕಾಣುವದಿಲ್ಲ.

೧೯ ಪರಮಾತ್ಮಂಗೆ—ಜ್ಞಾನಿಗಳಿಗೆ, ಇರಿಣ—ಅಸತ್, ಜಡ ದುಃಖ ಇವುಗಳನ್ನೆ ತನ್ನ ಮೇಲ್ಹೊದಿಕೆಯಾಗಿರುವ ಹೊರಗಿನ ದೃಶ್ಯ ಪದಾರ್ಥಗಳಲ್ಲಿ ಹೆಚ್ಚಿನ ದೈವಬುದ್ಧಿಯುಂಟಾಗುದು ಬರುವದಕ್ಕಿಲ್ಲ. ಆದ್ದರಿಂದ ತಮ್ಮ ಹೃದಯದಲ್ಲಿಯೇ ಇರುವ ಅವ್ಯಭಿಚರಿತ ಸ್ವರೂಪನಾದ ಪರಮಾತ್ಮನನ್ನೆ ಅವರ ಚಿತ್ತವು ಆರಾಧಿಸುತ್ತಿರುವದು.

ಇರಿಣ ಜಡದುಃಖಂಗಳಂ ಮೇ-|
ಲಿರಿಸಿಕೊಂಡಿಹ ದೃಶ್ಯದಲಿ ಭಾ-|
ಸುರ ಸುರತ್ವಂ ದೋರ್ಪುದೇ ಪರಮಾತ್ಮರಿಂಗವರ್ಗೆ! || ೧೯ ||

ತನ್ನ ಬಿಟ್ಟನ್ಯವನು ಭಜಿಸಿದ-|
ಕುನ್ನಿಯಂಗೈಯೋಗರದ ರಸ-|
ವನ್ನು ಮೊಳಗೈಯಲ್ಲಿ ಬರಲಾಸ್ವಾದಿಸಿದ ಗಾಪಂ! ||
ಇನ್ನಿದಕೆ ಸಂದೇಹವಿಲ್ಲೆಂ-|
ದುನ್ನತಾಶಯರಾದ ತವಸಿಗ-|
ಳನ್ನು ಕುರಿತುಸುರ್ದಂ ವಿರಾಗಿ ಕುಲಧ್ವಜಂ ಸೂತಂ || ೨೦ ||

ಯಾರಿಗಂಹೋ ವಾಸನೆಯ ವಿ-|
ಸ್ತಾರ ದೃಢ ಪರಿಣಾಮಮಿರ್ಪುದ-|
ವಾರಿತಂ ಪಡೆದವರ್ಗುಪಾಸ್ತಿಯೆ ಕಾರ್ಯಮೆಂತೆಂದು ||
ಗೌರಿಗೊರೆದಂ ಸ್ಕಾಂದದಲಿ ಕ-|
ರ್ಪೂರ ಗೌರಂ ಶಂಭುವದನೆ ವಿ-|
ಚಾರಿಸಿಯೆ ಗುರು ಚರಣರೀ ಷಣ್ಮತವ ನಡೆಸಿದಡು || ೨೧ ||

ಅನಧಿಕಾರಿ ನಿಷೇವ್ಯವಲ್ಲದೆ,|
ತನಗೆ ಪೆರತೆಂದೆನಿಪ ವಸ್ತುವಿ-|
ನನುಸರಣೆ, ವಿಜ್ಞಾನಿಗಳ ಮತವಲ್ಲ ವೆಂಬಲ್ಲಿ-||
ಜನಕ ರಾಘವ ಧರ್ಮನಂದನ |
ಸನಕ ನಾರದ ಭೃಗು ವಶಿಷ್ಠಾ-|
ದ್ಯನಘರಾಚರಿತಂಗಳಲ್ಲಿ ನಿದರ್ಶನಂಗಳಿಹವು || ೨೨ ||

ಹೆರೆದೆಗೆಯೆ ಘನ ಮಾಲೆ ಶೀತಲ-|
ಕರನ ಬಿಂಬಂ ಸ್ವಪ್ರಭಾ ವಿ-|
ಸ್ಫುರಣೆಯಿಂ ತೋರ್ಪಂತೆ, ಸಹಜಸ್ಥಿತಿಯನೈದುತಿರೆ-||

---

೨೦ ಭಜಿಸಿದ—ಸೇವಿಸಿದ, ಕುನ್ನಿ—ನಾಯಿ;, ರಸವತ್ತಾದ ತನ್ನ ಅಂಗೈ ತುತ್ತನ್ನು ಹೊರಕ್ಕೆ ಬಿಸುಟ, ಮೊಳಗೈಯಲ್ಲಿ ಹರಿದುಬಂದ ಓಗರದ—ಆ ಕವಳದ ರಸವನ್ನು ಸವಿಯಲು ಆ ಮೊಳಗೈಯನ್ನು ನೆಕ್ಕುವ, ಗಾಪಂ—ಹೆಡ್ಡನಂತೆ! ಉನ್ನತ—ವಿಶಾಲ, ತವಸಿ—ತಪಸ್ವಿಗಳನ್ನು ಕುರಿತು, ಉಸುರ್ದಂ—ಹೇಳಿದನು.

೨೧ ಅಂಹಃ—ಪಾಪ-ಭೋಗವಾಸನೆಗಳು ತನಗೆ ತೊಲಗಿಸಿಕೊಳ್ಳುವವಕ್ಕಿಲ್ಲದಂತೆ ಬಲವಾಗಿರುವ ಜನರಿಗಾಗಿ ಹಿರಿಯರು ಆರು ಮತಗಳನ್ನು ಸ್ಥಾಪಿಸಿ ಉಪಾಸನೆಯನ್ನು ವಿಧಿಸಿರುವರು.

೨೨ ....ನಿಷೇವ್ಯ-ಮಾಡತಕ್ಕದ್ದೆ ಹೊರತು,ತನಗೆ....ರಣೆ-ಭಿನ್ನ ಭಾವನೆಯ ಉಪಾಸನೆಯು

೨೩ ಹೆರೆದೆಗೆಯೆ—ಮರೆಯು ಅಳಿಸಿಹೋಗಲು, ಘನಮಾಲೆ—ಮೋಡಗಳ ಸಾಲು,

ಕರಣ ತನು ಚಿತ್ತಾದಿಗಳ್ಮಂ-।
ಬರಿವ ಸುಖಮಾವುದರಿದದು ನಿ-।
ರ್ಭರ ಚಿದಾವೃತ ಭುವನಮಾದ ಪರಾಜಿತಂ ತತ್ತ್ವಂ ॥ ೨೩ ॥

ಇಂತು ನಿಜಮಂ ತಿಳಿದು, ಗುರುಜನ-।
ರಂತರಂಗಕ್ಕಾನುಕೂಲ್ಯ-।
ಸ್ವಾಂತನಾದವನೇ ಕೃತಾರ್ಥನು, ಪರಮಪುರುಷನವ-॥
ಶಾಂತಿಕೋಶದ ನಿದನ, ವಿಜ್ಞಾ-।
ನಾಂತರಾಲಿಕ ಸಾರಮಂ ದೋ-।
ರ್ಪಂತೆ ಭಾವಿಸಿದವರೆ ನರಸಾರ್ವ್ಯರ್ಗೆ ಸುಪ್ರಿಯರು ॥ ೨೪ ॥

ಜಡವೆ ತನುವಾಗಿರುತಿರುವ ಹೆ-।
ಗ್ಗಡಜ ಪುಳುವಂ ತಂದು ತನ್ನವೊ-।
ಲೊಡಲದಕೆ ಕೈಗಟ್ಟಬಹುದಂತಾರ್ಯರಾದವರು-॥
ಪಿಡಿದು ಕೈಯ ಮುಮುಕ್ಷುಗಳ ವಿಂ-।
ಗಡಿಸುವರೆ ತಾವ್ನೆದಿದರ್ಥದೊ-।
ಳಡಸಿದಾತ್ಮ ವ್ಯಕ್ತಿಯಂ ಸ್ಥಾಪಿಪುದವರ ಕೃತ್ಯಂ ॥ ೨೫ ॥

---

ಸೀತಲ....ರ್ಪಂತೆ—ಆಗ ತನ್ನ ತಿಂಗಳ ಬೆಳಕಿನಿಂದ ಚಂದ್ರನು ಹೊರಗೆದ್ದು ತೋರಿಕೊಳ್ಳುವಂತೆ ಕರಣ ...ಗಳ್—ಒಳಹೊರಗಣ ವೃತ್ತಿಗಳೆಲ್ಲ, ಸಹಜ....—ತನ್ನಾತ್ಮನನ್ನೆ ಹೊಂದಿ ಅವು ಉಪಶಾಂತವಾಗಲು, ಆಗ ಮುಂಬರಿವ....—ಮೈದೋರುವ ಆತ್ಮನ ಚಿದ್ರೂಪವಾದ ಸುಖದಿಂದಲೇ ಈ ಭುವನವೆಲ್ಲವೂ ಸಂಪೂರ್ಣವಾಗಿ ತಾನು ಹೊದಿಯಲ್ಪಡುವದೋ, ಅದೇ ಅದ್ವಿತೀಯವಾದ ತನ್ನಾತ್ಮತತ್ತ್ವವು ಹೀಗಿದ್ದರೂ ಯಾವ ಕರಣಾದಿಗಳಿಂದಲೂ ಆದನ್ನು ಹೀಗೆಯೇ ಸರಿಯೆಂದು ಗೊತ್ತುಮಾಡುವದಕ್ಕೆ ಅರಿದು (—ಆಸಾಧ್ಯವು)+ಅದು+ನಿರ್ಭರ—ಎಲ್ಲಕ್ಕೂ ಅಧಿಕವು, ಪರಾಜಿತಂ—ಯಾರೊಬ್ಬರ ಕೈಗೂ ಎಟುಕದೆ ಇದ್ದರೂ ಅದು ಎಲ್ಲರ ಹೃದಯಗುಹೆಯಲ್ಲಿಯೂ ಗೂಢವಾಗಿ ತಾನು ಆವಿತುಕೊಂಡಿರುವದು. ಅಲ್ಲದೆ, ತತ್ತ್ವಂ—ಪ್ರತಿಯೊಬ್ಬರ ಪರಮಾರ್ಥವೂ ಆಗಿರುವದು.

೨೪ ಗುರುವಿನ ಅಂತರಂಗಕ್ಕೆ ಒಪ್ಪಾಗಿ ನಡೆಯುವ, ಸ್ವಾಂತನು—ಮನಸ್ಸಿನವನೇ, ಶಾಂತಿ ....ನಿದನ-ನಿದಾನ-ಒಕ್ಕಡೆ ಸಂಗ್ರಹಿಸಿರುವ ಶಾಂತಿಯ ಅವಸಾನ—ಕೊನೆಯನ್ನು ಮುಟ್ಟಿದವನು, ಅಥವಾ ಶಾಂತಿಯೆಂಬ, ಕೋಶ—ನಿಧಿಯನ್ನೆಲ್ಲವನ್ನು ಒಕ್ಕಡೆ ತಂದು ಕೂಡಿಹಿಟ್ಟಿರುವ ಸಂಗ್ರಹದ ನಿಧನ—ನಿವಾಸಸ್ಥಾನನು; ವಿಜ್ಞಾನಾಂ....ರ್ಪಂತೆ—ಜ್ಞಾನದ ಮರ್ಮವನ್ನೆಲ್ಲ ತನ್ನ ಹೃದ್ಗತವನ್ನಾಗಿ ಮಾಡಿಕೊಂಡವರೇ ಈ ಗ್ರಂಥದ ಒಡಲೊಳು ಒಳಹೊಕ್ಕ ಮರ್ಮಜ್ಞರು !

೨೫ ಕಣಜದ ಕೀಟವೆಂಬ ಹೆಗ್ಗಡಜವು—ತುಂಬಿಯು ತಾನು ತಂದ ಒಂದು ಹುಳುವನ್ನೆ, ತನ್ನ+ಒಲು+ಒಡಲು—ತನ್ನಂತೆ ಅದಕ್ಕೂ ಮೈಗಟ್ಟಬಹುದು ಎಂದಮೇಲೆ, ಆರ್ಯರು—ಪೂಜ್ಯರಾದ ಗುರುಗಳ ವಿಷಯವಿನ್ನು ಹೇಳುವದೇನು? ತಾವು+ಐ(ಹೊಂ)ದಿದ+ಅರ್ಥದೊಳು

ವಿಹಿತ ನಿಗಮಾರ್ಥಾದಿಗಳನೇ ।
ಗ್ರಹಿಸಿ ನರಸಾರ್ಯರ್ಗೆ ಪೇಳ್ದ-।
ರ್ವಿಹಿತ ದಯೆಯಿಂದಂ ತ್ರಿಯಂಬಕ ಗುರುಗಳದರಲ್ಲಿ-॥
ಗ್ರಹಿಸಿ ಸಾರವನನುಭವವ ನು-।
ದ್ವಹಿಸಿ ಪೇಳ್ದಜ್ಞಾನ ಸರ್ವ-।
ಸ್ವ ಹಿತವಸ್ತುವಿಗಿಲ್ಲಿ ಸಂಗ್ರಹಮಾಗಿ ತೋರುವಿನಂ ॥ ೨೬ ॥

ಜ್ಞಾನ ಸರ್ವಸ್ವ ಗ್ರಹಣಮಭಿ-।
ಧಾನದಿಂದಿದುವೆಂದು ಪೆಸರಿ-।
ಟ್ಟೀ ನಿರೂಪಿಸಿದರ್ಥವರ್ಥವ ಕನ್ನಡವ ಮಾಡು ॥
ನೀನೆನುತ ನಿರವಿಸಿದರವರಾ-।
ಜ್ಞಾನಿಬದ್ಧಂ ಪೇಳ್ದೆನಿದನ-।
ನ್ನ್ಯೂನ ಕರ್ನಾಟಾಖ್ಯ ಭಾಷೆಯುಲಿದನು ಸುಜನರ್ಗೆ- ॥ ೨೭ ॥

ಬಂಧಮೋಕ್ಷಂ ಘಟಿಸಲೆಂದು ಪ್ರ-।
ಬಂಧಮಿದ ನಿರ್ಮಿಸಿದೆನಿದರಲಿ-।
ಸಂಧಿಕಾರ್ಯವ ಪದವಿಚಾರವ ನರ್ಥಸಂಗತಿಯ ॥
ಗಂಧದಿಂದಾರ್ಯೆಯದಿರಿ ಕವಿ-।
ಬಂಧುಗಳು ನೀವಿತರ ಕಾವ್ಯ ದು-।
ರಂಧರರು! ಹಿತಮಾವುದಾತ್ಮಜ್ಞಾನ ಫಲಮೊಂದೆ! ॥ ೨೮ ॥

ಭೂತ ಧಾತ್ರೀಧರ ವರೇಭ ವಿ-।
ಧಾತೃ ಮುಖ ಸಂಜ್ಞಾಬ್ದಗಳ್ಪ-।
ದ್ಯೋತ ಚಂದ್ರರ ಮಾನದಿಂ ಕಲಿಯೋಳ್ಕಡೆಗೆ ಸಾರೆ ॥

---

+ಅಡಸಿದ—ಗಾಢಪ್ರವೇಶ ಮಾಡಿದ್ದರಿಂದ ತಮಗೆ ಪ್ರಾಪ್ತವಾಗಿರುವ ಬ್ರಹ್ಮಾತ್ಮಭಾವದ, ಆತ್ಮ ವ್ಯಕ್ತಿಯಂ—ತಮ್ಮ ಶರೀರದ ಸೂಚನೆಯನ್ನು ಸ್ಥಾಪಿಸಿಕೊಟ್ಟು ಶಿಷ್ಯರಿಗೂ ಮೈಗಟ್ಟುವರೆ ಹೊರತು, ಎಂದಿಗೂ ಅವರನ್ನು ತಾವು ವಿಂಗಡಿಸಿ ವಂಚನೆಯನ್ನು ಮಾಡುವದಿಲ್ಲ.

೨೬ ವಿಹಿತ—ಬೋಧಿಸುವ, ವಿಹಿತ—ಮಾಡಿದ ದಯೆಯಿಂದ, ಉದ್ವಹಿಸಿ—ಸಂತೋಷ ದಿಂದ, ಹಿತ—ಜ್ಞಾನಯೋಗ್ಯ ವಸ್ತುವನ್ನರಿಯುವದಕ್ಕೆ ಬೇಕಾಗಿರುವ ಪ್ರಕ್ರಿಯೆಗಳನ್ನೆಲ್ಲವನ್ನು ಮೇಲೆದ್ದು ತೋರುವಂತೆ ಸಂಗ್ರಹಿಸಿಟ್ಟು 'ಜ್ಞಾನಸರ್ವಸ್ವ ಸಂಗ್ರಹ'ವೆಂಬ ಸಂಸ್ಕೃತ ಗ್ರಂಥ ವನ್ನು ನರಸಾರ್ಯರು ಬರೆದರು.

೨೭....೨೯- ....ಹಣಂ(—ಎಂಬ)+ಅಭಿಧಾನ—ಹೆಸರಿನಿಂದ, ನಿರವಿಸಿದರು—ನಿರೂಪಿ ಸಿದರು, ಅವರ+ಆಜ್ಞಾನಿಬದ್ಧಂ—ಆಜ್ಞೆಯನ್ನು ಶಿರಸಾವಹಿಸಿ; ೨೮-ಪ್ರಬಂಧಂ+ಇದ—ಈ ಕಾವ್ಯವನ್ನು, ಗಂಧದಿಂದ+ಆರ್ಯೆಯದಿರಿ—ಕವಿತೆಯ ವೃಷ್ಟಿಯಿಂದ ಇದನ್ನು ವಿಚಾರಮಾಡ ಬೇಡಿ, ಹಿತಂ+ಆವುದು—ನರಜನ್ಮವೆತ್ತಿದ ಸರ್ವರಿಗೂ ತನ್ನಾತ್ಮಜ್ಞಾನವೊಂದೇ ಸಫಲವಾದ

ಧಾತು ಸಂವತ್ಸರದೆ ಕೃಷ್ಣಧ-।
ರಾ ತಲೇಂದ್ರನ ಮುಖದೊಳೊಗೆದುದ-।
ಪೇತ ಪಾಶವೆನಿಪ 'ವಿವೇಕಾಭರಣ' ಕಾವ್ಯಮಿದು ॥ ೨೯ ॥

ನವರಸಂ ಮಿಗೆ ತಾರ್ಕ್ಷ್ಯಧರ ವೈ-।
ಭವವನಾಂಧ್ರಗೆ ಸಂಸ್ಕೃತದೆ ಶತ-।
ಕವನು ಬಾಣಾಂಕವನು ಶರಲಿಂಗವನು ಶಿವನುತಿಯ, ॥
ಕವಿಕುಲಸ್ಮಯ ಭೇದಿ ಹರಿ ಬಂ।
ಧವೆ ಮುಖಮೆನಲ್ರಾಜಿಸುವ ಶಾಂ-।
ಭವ ಧರೆಯೊಳೀ ಚಿತ್ರಬಂಧ ಗ್ರಂಥವನು ಮೇಲೆ ॥ ೩೦ ॥

ಶಿವಫಲದ ನಿಜದೀಪಿಕಾ ರ-।
ತ್ನವನು, ಮೇಣಧ್ಯಾತ್ಮ ರಘುವುಂ-।
ಗವ ಕಥೋತ್ತರಕಾಂಡಮಂ, ಪಕ್ಷಪ್ರದೋಷವನು-॥
ವಿವರಿಸುವ ವ್ರತಚರ್ಯೆಯುಂ, ರಾ-।
ಜ್ಯವನು ಪರದೋಳ್ಮೋಕ್ಷಮಂ ನನು-।
ಭವಿಸಿಯೊಪ್ಪಿದ ಧರ್ಮಗುಪ್ತನ ಚರಿತ್ರಮುಸ್ಮಿದನು ॥ ೩೧ ॥

ಏನಿದಕ್ಕೆಣೆ ಧರೆಯೊಳೆಂದು ನಿ-।
ಧಾನಿಸಲ್ಬುಧಗಣ್ಯ ಮಹ ವಿ-।
ಜ್ಞಾನ ಕುಸುಮಕರಮಿದೇ ನಿರ್ಣಯ ಶಿಖಾಮಣಿಯು ॥
ಮಾನವರಿಗೆಂದೆಣಿಸಲಪ್ಪುದ-।
ನೂನವಿಲ್ಲದ ಬಾಹಟದ ಸಂ-।
ಜ್ಞಾ ನಿಬಂಧನ ಟೀಕೆಯನು ಕರ್ನಾಟ ಭಾಷೆಯಲಿ ॥ ೩೨ ॥

---

ಪರಮಹಿತವಲ್ಲದೆ, ಮತ್ತೊಂದಿರುವದಿಲ್ಲವು; ೨೯–ಸಂಸಾರ ಬಂಧನರೂಪವಾದ ಮಹಾಪಾಶವನ್ನು ತನ್ನ ವಿಚಾರದಿಂದ, ಅಪೇತ—ಕಳೆದುಬಿಡುವ ಈ 'ವಿವೇಕಾಭರಣ'ವೆಂಬ ಗ್ರಂಥವು, ....ದೊಳು + ಒಗೆದುದು—ಹೊರಕ್ಕೆ ಬಂದಿತು.

೩೨ ಬ.ಧಗಣ್ಯಂ + ಅಹ—ಆತ್ಮಜ್ಞಾನಿಗಳಿಗೊಪ್ಪಾಗಿರುವ ಮತ್ತು ವಿಜ್ಞಾನ—ಅನುಭವವೆಂಬ ಕುಸುಮಗಳನ್ನು ಬಿಡುವದರಲ್ಲಿ ತಾನು, ಆಕರ—ಉತ್ಪತ್ತಿಯ ಮೂಲಸ್ಥಾನದಂತಿರುವ ಈ ವಿವೇಕಾಭರಣವು ತನಗೆ ಮತ್ತೊಂದೆಣೆಯಿಲ್ಲದಿರುವದಲ್ಲದೆ, ತಾನು ಪುಣ್ಯಕಲ್ಪವೃಕ್ಷವೂ ಆಗಿರುವದು! ಏಕೆಂದರೆ ಹೀಗೆಯೇ ಸರಿಯೆಂದು ಗೊತ್ತುಪಡಿಸಿ ವೇದಾಂತಾರ್ಥವನ್ನೆಲ್ಲ ತನ್ನಲ್ಲಿ ನಿರ್ಣಯಿಸಿ, ಆ ನಿಶ್ಚಯದಲ್ಲಿ ಜಿಜ್ಞಾಸುಗಳನ್ನು ನೆಲೆನಿಲ್ಲಿಸುವದರಲ್ಲಿ ಇದು "ವೇದಾಂತಾರ್ಥನಿರ್ಣಯ ಶಿಖಾಮಣಿ"ಯೂ ಆಗಿರುವದು.

ಪ್ರಾಣಪದ ಪೂರ್ವೇಶ ಶತಕವ-|
ಸಾನುಭವಿಕರ್ಮೆಚ್ಚುವೊಲ್ಗುಣ-|
ಮಾನಮುಳ್ಳ ಸದಾಶಿವಾಂಕ ಶತಕವ ರಸಿಕರ್ಗೆ ||
ಸ್ಥಾಣು ಪರಮಾಗನುಲತರ ಗೀ-|
ರ್ವಾಣದಿಂದಲಲಂಕೃತಿಯ ಸ-|
ನ್ಮಾನಿಸಲ್ಕೋವಿದರು ಸೂತ್ರಕ್ಕಾಚಿತಿಯಿದೆಂದು || ೩೩ ||

ಒಂದು ಪದವೆರಡಾ ಕೃತಿಯ ಚ-|
ನ್ನೊಂದಿರಲ್ವೈಭಾಷಿಕಾಖ್ಯದಿ |
ವಿಂದರನುಮತಿವಡೆದದಕೆ ವ್ಯಾಖ್ಯಾನಮಂ ಕೂಡೆ-||
ಹೊಂದಿಹುದು, ಕಲಿಯೊಳಗೆ ಬರಬರ-|
ಲಂದ ವಡೆಯದು ಶಾಸ್ತ್ರ ಪರಿಚಿತಿ-|
ಯೆಂದು ಭಾಷ್ಯಾದ್ಯಖಿಲ ಗ್ರಂಥಾ ಲೋಕನಂ ಗೈದು || ೩೪ ||

ಧಾತು ಮಾಲೆಯನೆಂಟು ಸಾವಿರ |
ಮಾತಿರಲ್ಲೋಕದ ಗಣನೆಯಲಿ. |
ಭೂತಲದೆ ಷಟ್ಪ್ರತ್ಯಯಂಗಳು ವೃತ್ತದೊಳಗಿರ್ದು ||
ಸಾತಿಶಯ ಕಲೆಯಿಂದರದೆ ಯಿರ-|
ಲೋತು ತಲ್ಲಕ್ಷಣವ ಭರತದೆ |
ನೀತಿ ಪರರಹುದೆನಲು ವಿಂಶತಿಯೊಳಗೆ ಯೊಂದುಳಿದ- || ೩೫ ||

ಪ್ರತ್ಯಯದ ಮುಂಡಲವ ಚಂಪೂ-|
ರೀತ್ಯುದಗ್ರಮೆನಿಸುವ ರಾಜರೊ-|
ಳತ್ಯಧಿಕ ಗುಣನಾ ಯಯಾತಿಯ ಕಾವ್ಯಮಂ, ಬಳಿಕ ||
ಮತ್ಯುದಾರ ವಿದರ್ಭ ರಾಜ್ಯ-|
ಕ್ಷಿತ್ಯಧಿಪ ಭೋಜಪ್ರಬಂಧ |
ಪ್ರತ್ಯಯಕ್ಕಿದಿರಾದ ನವನಾಟಕವನಾ ಮೇಲೆ || ೩೬ ||

ಅಕ್ಷರಾದಿ ನಿಘಂಟುವನತಿ-|
ಪ್ರೇಕ್ಷರಹುದೆನಲುಂ, ಬಳಿಕ ನಿಟಿ-|
ಲಾಕ್ಷ ಪರಭಕ್ತಿಯಲಿ ಪರಮಾತ್ಮಪದವಿತ್ತಿಯಲಿ ||

---

೩೭ ಅಕ್ಷರಾದಿ ನಿಘಂಟನ್ನಲ್ಲದೆ, ಮೋಕ್ಷಲಕ್ಷ್ಮಿಯ ಮಂದಿರವಾದ ಭಕ್ತಿಮಾರ್ಗ ಮತ್ತು ಜ್ಞಾನಮಾರ್ಗ-ಸರೋವರ ಕೀರ್ತನಗಳನ್ನು ಪರರ ಶ್ರೇಯೋಭಿಲಾಷೆಯಿಂದ ನಾನು ರಚಿಸಿರುವೆನು

ದಕ್ಷವಾಗಿಹ ರಾಗ ರೂಪದ ।
ಮೋಕ್ಷ ಲಕ್ಷ್ಮೀ ಮಂದಿರವ ನೀ-।
ಗ ಕ್ಷಿತಿಯೊಳಾಂ ರಚಿಸಿದೆಂ ಪರಹಿತಮತಿ ಸ್ಥಿತಿಯಿಂ ॥ ೩೭ ॥

ಖ್ಯಾತಿ ಲಾಭಕ್ಕಾಗಿ ನಾನೀ ।
ಭೂತಲದೆ ರಚಿಸಿದವನಲ್ಲ, ವಿ-।
ನೀತರೊಪ್ಪಿದರೆನ್ನ ಜನ್ಮಕ್ಕಹುದು ಸಾಫಲ್ಯಂ! ॥
ಭೂತನಾಥನ ನಾಮಕೀರ್ತನ-।
ರೀತಿ ಚಾರಿತ್ರಂಗಳೊಳಗಿನಿ-।
ತಾತ ಕೊಂಡರೆ ಮರ್ತ್ಯರಪ್ಪರೆನುತ್ತನುಸಿಮಿಷರು ॥ ೩೮ ॥

ವಿರಚಿಸಿದೆ, ಸತ್ಯಕ್ಕೆ ನಾಶಂ ।
ಬರುವದಾಗಿರೆ ತೆರುವದಲ್ಲದೆ ।
ಹರಣವಂ ಕೈಕೊಳದ ಬದ್ಧವ್ರತವ ಪಾಲಿಸುವ ॥
ಹರ ಪದಾಂ಼ಋಜಾತ ಭಕ್ತಿ-।
ಸ್ಫುರಿತಮಾನಸನಾದ ಕೃಷ್ಣೇ-।
ಶ್ವರನ ಕೃತಿಯಿದ ನಲ್ಮೆಯಿಂ ನೋಡಿದ ಮಹಾತ್ಮರಿಗೆ ॥ ೩೯ ॥

ವೇದಪಾಠದ ಫಲ ವಾರಣಾ-।
ಸ್ಯಾದಿ ಯಾತ್ರಾಫಲ ತುಲಾಪುರು-।
ಷಾದಿ ನಾನಾ ದಾನ ಫಲ ಯಜ್ಞಾದಿ ಕರ್ಮಫಲಂ ॥
ವೈದಿಕಾನುಷ್ಠಾನ ಫಲ ಸಂ-।
ಖ್ಯಾದಿ ವಿಬುಧಾರಾಧನಾ ಸಂ-।
ಪಾದಿತ ಫಲ ಭಯಾರ್ಥಿತ ಪ್ರಾಣ್ಯವನಜಾತ ಫಲಂ- ॥ ೪೦ ॥

---

೩೮ ವಿನೀತರು—ಜ್ಞಾನವೆಂಬ ವಿನಯಶೀಲರಾದ ಜ್ಞಾನಿಗಳು, ಇನಿತು—ಒಂದಿಷ್ಟು ಶಿವನ ಚಾತ್ರಿಗಳಲ್ಲಿ ಸೇರಿಕೊಂಡು ತಾನು, ಆತು—ಹರಡಿಕೊಂಡರೆ ಅದರಿಂದ ಮರಣ ಧರ್ಮಶೀಲರಾದ ನರರೂ, ಅನಿಮಿಷರು—ತಾವು ದೇವತೆಗಳಾಗಿಬಿಡುವರೆಂದು ಇದನ್ನು ಮಾಡಿರುವೆನು.

೩೯ ಸತ್ಯಕ್ಕಾಗಿ ತನ್ನ, ಹರಣವಂ—ಪ್ರಾಣವನ್ನಾದರೂ ಬಿಡುವದಕ್ಕೆ ಸಿದ್ಧನಾಗಿರುವ; ಹರ....ಜಾತ –ಶಿವನ ಪಾದಕಮಲಗಳಲ್ಲುಂಟಾದ ಭಕ್ತಿಯಿಂದೊಡಗೂಡಿದ ಮನಸ್ಸುಳ್ಳ, ನಲ್ಮೆ—ಅಧಿಕವಾದ ಪ್ರೀತಿಯಿಂದ,

೪೦ ಕಾಶಿಯೇ ಮುಂತಾದ ಪುಣ್ಯಕ್ಷೇತ್ರ ಯಾತ್ರೆಗಳ ಫಲಗಳು, ೧೦೦ ಪಲ–೩೦೦ತೊಲೆಗಳಷ್ಟನ್ನು ದಾನ ಕೊಡುವ ತುಲಾಪುರುಷದಾನ ಮುಃತಾದ ಫಲಗಳು, ವೇದೋಕ್ತ ಸಕಲ ಕರ್ಮಾನುಷ್ಠಾನ ಫಲಗಳು, ಧ್ಯಾನೋಪಾಸನಾದಿ ಸಕಲ ದೇವತಾರಾಧನೆಗಳ ಫಲಗಳು, ಪ್ರಾಣ ಭಯದಿಂದ ತನ್ನನ್ನು ಮೊರೆಹೊಕ್ಕವನಿಗೆ ಪ್ರಾಣದಾನ ಮಾಡಿದ ಫಲ–ಈ ಫಲಗಳೆಲ್ಲ ಸಿದ್ಧಿಸುವವು.

ಅಪ್ರಯಾಸದಿ ದೊರಕುವದು ವೇ-।
ದ ಪ್ರಮಾಣವಿದೆಂದು ಮೃದು ಭಾ-।
ಷಾ ಪ್ರಬಂಧಂ ಜ್ಞಾನ ಸಂಬಂಧ್ಯಾದಿ ಪೌರ್ವಿಕರು-॥
ಸುಪ್ರಸನ್ನಾಶಯದಿ ಪೇಳ್ದ ರು-।
ರು ಪ್ರಮೆಯು ಮೇಣಾರಿಗಿಲ್ಲಿಹು-।
ದಪ್ರತರ್ಕ್ಯವುವರ್ಕಳ ಫಲಂ ಪದ್ಮಜಾಗಣ್ಯಂ! ॥ ೪೧ ॥

ಉಂಟು ನಾನಾ ಕೃತಿಗಳರ್ಥದೆ-।
ಕಂಟಕಿತಮಾಗಮಲ ಶಬ್ದಗ-।
ಳುಂಟೆನಿಸದೇ ಶೀಕ್ಷಿತರ ಮತಿಗಹ್ರ್ಯಮಂ ತಾಳ್ದು-॥
ಎಂಟು ದಿಕ್ಕುಗಳಲ್ಲೆಣಿಸಲಿದ-।
ನಂಟಿರದು ಶದ್ಬಾರ್ಥದೋಷ ಮ ।
ಕಂಟಕ ಫಲಾಲಾಭದೋಷಂ ವಿಬುಧರಾದವರು ॥ ೪೨ ॥

ಇಂಗಡಲ ನಿಷ್ಕೃಷ್ಟ ರಸಮೆ ಭ-।
ಯಂಗೆಡಿಪ ಪೀಯೂಷಮಲ್ಲದ-।
ಮಂಗಲ ಕ್ಷಾರಮೆ! **ಮಹಾ ಪುರುಷೋಕ್ತಮಾಗಿರ್ಪ-॥**
**ತುಂಗ ಕೃತಿಯಿಂದೊಗೆದು ಭಾಷಾ-।**
**ಭಂಗರೂಪವನಾಂತುದಲ್ತೆ! ಶು-।**
**ಭಾಂಗಮಿದರಿಂ ಪೆರತಿನೊಳಗಿಹುದೇಂ ವಿಚಿತ್ರಶತಂ! ॥ ೪೩ ॥**

---

೪೧ ಜ್ಞಾನಶಾಸ್ತ್ರಕ್ಕಿರಬೇಕಾದ ಅನುಬಂಧಚತುಷ್ಟಯವುಳ್ಳ ಈ ಗ್ರಂಥವನ್ನು ಗುರುಗಳಿಂದ ತಾನುಪದೇಶ ಹೊಂದಬೇಕು. ಅದರಿಂದ ತನಗೆ ಮತ್ತೊಂದನ್ನು ಸರಿಗಟ್ಟುವದಕ್ಕಿಲ್ಲದೆ ಪರಮಜ್ಞೇಯವಾಗಿರುವ ತನ್ನ ಬ್ರಹ್ಮಾತ್ಮಭಾವವು ದೊರೆಯುವದು. ಅದರ ಪುಣ್ಯಫಲಗಳನ್ನು ಇಂತಿಷ್ಟೇ ಸರಿಯೆಂದು, ಪದ್ಮಜ+ಅಗಣ್ಯಂ—ಚತುರ್ಮುಖನಿಂದಲೂ ಎಣಿಸುವದಕ್ಕಿಲ್ಲ!

೪೨ ಆಧ್ಯಾತ್ಮಗ್ರಂಥಗಳಿದ್ದರು ನಿಸ್ಸಂಶಯದಿಂದ ತನ್ನರ್ಥವನ್ನು ತಿಳಿಯುವದಕ್ಕಿಲ್ಲದೆ, ಬಹು ತೊಡಕುಗಳಿಂದಲೂ ಲಲಿತ ಶಬ್ದಗಳಿಲ್ಲದೆಯೂ, ....ಗಹ್ರ್ಯಮಂ—ಓದುಗರ ಬುದ್ಧಿಗೆ ದುರವಗಾಹವಾಗಿಯೂ ಇರುವಂತಿದ್ದರೂ ಇದು ಮಾತ್ರ ಹಾಗಿರದೆ, ಅರ್ಥವನ್ನು ತಿಳಿಸುವದರಲ್ಲಿ ಅಕಂಟಕ—ತೊಡಕಿಲ್ಲದೆಯೂ, ತನ್ನ ಫಲವನ್ನು ದೊರೆಕಿಸಿಕೊಡುವದರಲ್ಲಿ ಸುಕರವಾಗಿಯೂ ಇರುವದನ್ನು ಬಲ್ಲ ಜ್ಞಾನಿಗಳು ಇದರ ವಿಚಾರದಿಂದ ಪರೀಕ್ಷಿಸಿ,ತಾವುತಾವೇ ನೋಡಿಕೊಳ್ಳಬಹುದು.

೪೩ ಕ್ಷೀರಸಾಗರದ ತಿಳಿಯಾದ ಅಮೃತವೊಂದೇ ಮರಣಭಯವನ್ನು ಹೋಗಲಾಡಿಸುವದು. ಉಪ್ಪುನೀರು ಅದನ್ನು ಕುರಿತು ತಾನಿಲ್ಲದಿರುವಂತೆ, ಈ ಗ್ರಂಥವು ಅಭಿಯುಕ್ತರಾದ ಪೂರ್ವಿಕರು ಬರೆದ ಪೂಜ್ಯ ಸಂಸ್ಕೃತವಾಣಿಯ ಗ್ರಂಥವೇ ಈ ರೂಪಕ್ಕೆಬಂದು ಕನ್ನಡಕ್ಕಿಳಿದಿರುವ ಅವರ ಪಡಿಯಚ್ಚಲ್ಲದೆ ಬೇರೊಂದಲ್ಲ. ಮತ್ತು ಆತ್ಮವಿಶ್ರಾಂತಿಗೆ ಬೇಕಾಗಿರುವ ಅನಿತರ ಶ್ರೇಯಸ್ಸಾಧನಗಳೂ ಇದರಲ್ಲಿಲ್ಲವೆಂಬಂತೆ ತುಂಬಿಕೊಂಡೂ ಇರುವವು.

ಶ್ರಾವಕರ ಪಾಠಕರ ಜನನಿಯ ।
ಭಾವದಿಂ ಚಿಂತಕರ ಪೊರೆವುದ-।
ದಾವ ಕೃತಿಯಿದನುಳಿದು ಧರಣೀ ತಲದೊಳಿರುತಿಹುದು! ॥
ಪಾವನಕೆ ಪಾವನವು, ಕೃತಿ ಶತ-।
ಜೀವನಕೆ ಜೀವನವಿದು ಮಹಾ-।
ದೇವನಾಣತಿಯಾದ ದೆಶೆಯಿಂ ದಕ್ಷಿಣಾತನುವ- ॥ ೪೪ ॥

ಶಂಕರನೆ ರಕ್ಷಿಸುವ ನೀ ಕೃತಿ-।
ಯಂ ಕರಂ ನೋಡುವರ ಭಕ್ತ ಶಿ-।
ವಂಕರನು ತಾನೆಂಬ ಬಿರುದಿನ ಬಾಳ್ಕೆಯಂ ಪೊರೆಯ! ॥
ಶಂಕೆಯೊತ್ತರಿಸದಿರೆ ಮತಿಯ-।
ಲ್ಲಂಕುರಿಸದಂದದಲಿ ಚಾಪ-।
ಲ್ಯಂ ಕರಣದಲಿ, ಚಂದ್ರರೇಖೋತ್ತಂ ಶಿತಶಿರಃಸ್ಕಂ! ॥ ೪೫ ॥

ಜಯ ಜಯ ನಿರಾಕಾರ! ನಿರ್ಭರ! ।
ಜಯ ಜಯ ನಿರಾಘಾತ! ಸನ್ಮತ! ।
ಜಯ ಜಯ ವಿರೂಪಾಕ್ಷ! ವಿಬುಧಾವನ ಕಲಾ ದಕ್ಷ! ॥

---

೪೪ ಅಲ್ಲದೆ, ಈ ಗ್ರಂಥದ ಒಂದು ವೈಶಿಷ್ಟ್ಯವೆಂದರೆ ಮಿಕ್ಕ ನೂರಾರು ವೇದಾಂತಗ್ರಂಥಗಳಿಗೂ ತಾನು ಜೀವಕಳೆಯನ್ನು ಕೊಡುವದು. ಅಲ್ಲದೆ, ಮಿಕ್ಕ ವೇದಾಂತ ಗ್ರಂಥಗಳ ತಿಳಿವಳಿಕೆಯನ್ನು ತಾನು ಹೊಂದುವ ಬಗ್ಗೆ ತನ್ನನ್ನು ಸಜ್ಜುಗೊಳಿಸುವದು. ಆದ್ದರಿಂದ ಈ ಭೂಮಿಯಲ್ಲಿ ಈ ವಿವೇಕಾಭರಣವು ತನಗೆ ಮತ್ತೊಂದು ವೇದಾಂತಗ್ರಂಥವನ್ನು ಸರಿಗಟ್ಟುವದಕ್ಕಿಲ್ಲದಂತಿರುವದು.

೪೫ ಈ ಗ್ರಂಥವನ್ನು ಪರಮಾದರದಿಂದ ಸೇವಿಸುವ ಗುರುಪುತ್ರರಿಗೆ ಶಂಕರನೇ ಮೋಕ್ಷವೆಂಬ ಪರಮ ಶ್ರೇಯಸ್ಸನ್ನು ಕೊಡುವನು. ಮತ್ತು ಇದರ ಅರ್ಥವನ್ನು ತಮ್ಮ ಬುದ್ಧಿಯಲ್ಲಿ ಹೊಳೆಯುವದಕ್ಕಡ್ಡಿಯಿಂತಿರುವ ಅಂತಃಕರಣದಲ್ಲಿನ ಭೋಗವಾಸನೆಗಳ ಬಗೆಬಗೆಯ ಚಾಪಲ್ಯಗಳು ಮತ್ತು ಅದರಿಂದೊತ್ತರಿಸುವ ಸಂಶಯಗಳು ಜಿಜ್ಞಾಸುಗಳ ಅಂತಃಕರಣದಲ್ಲಿರುವ ಈ ದೋಷಗಳು ಪುನಃ ತಲೆಯೆತ್ತದಂತೆ ಕೆಡಿಸಿ ಅವರನ್ನು ಆ ಶಿವನೇ ಕಾಪಾಡುತ್ತಾನೆ. ಚಂದ್ರರೇಖೆಯನ್ನೂ, ಶಿತ—ಶುಭ ವಾದ ದೇವಗಂಗೆಯನ್ನೂ, ಶಿರಃಸ್ಕಂ—ತನ್ನ ಜಟೆಯಲ್ಲಿ ಧರಿಸಿರುವ ಮತ್ತು ಭಕ್ತ ಶಿವಂಕರನು ತಾನೆಂಬ ಬಿರುದನ್ನು ಹೊಂದಿರುವ ಆ ಶಂಕರನೇ ತಾನು ಈ ಗ್ರಂಥವನ್ನು ಸರ್ವದಾ ರಕ್ಷಿಸುವನು.

೪೬ ಜೀವರು ತಮ್ಮಲ್ಲಿ ಅವಿದ್ಯೆಯಿಂದ ಹುಟ್ಟುಗಟ್ಟಿದ ಶರೀರೇಂದ್ರಿಯಂಗಳ ಆಕಾರಗಳಿಲ್ಲದ ನಿರಾಕಾರನೆ! ಪರಮಾದಾರದಿಂದೆಲ್ಲರನ್ನೂ ಪೋಷಿಸುತ್ತಿರುವ ನಿರ್ಭರನೇ ನಿನಗೆ ಜಯಜಯವಾಗುತ್ತಿರಲಿ! ಲೋಕತ್ರಯರೂಪವಾದ ಇಡಿಯ ಜಗತ್ತನ್ನೆ ತನ್ನೊಳಗೆ ಮಾಡಿಕೊಂಡಿರುವ ವಿಶ್ವಂಭರನೆ! ನಿನಗೆ ಜಯಜಯವು; ಪಂಚಭೂತವಿಕಾರಗಳಾದ ದೇಹಾದಿಗಳೇ ಸಮಸ್ತ ಘಾತಕಗಳಿಗೂ ಆಸ್ಪದಗಳಾಗಿರುವವು. ಅವಿದ್ಯಾಕಲ್ಪಿತವಾದ ಆಯಾಕಾರವಿಶೇಷಗಳು ತನ್ನಲ್ಲಿಲ್ಲದಿರುವದರಿಂದಲೇ ನೀನು

ಜಯ ಜಯ ಹತಾಪಾಯ! ನಿರ್ಭಯ! ।
ಜಯ ಜಯ ಶುಭಶ್ಲೋಕ ಭಾವಕ! ।
ಜಯ ಜಯ ವಿಧೂತಾರ್ತಿ ಶ್ರೀಗುರು ದಕ್ಷಿಣಾಮೂರ್ತಿ । ॥ ೪೬ ॥

ಇದು ಶ್ರೀಮದ್ವಿವೇಕಾಭರಣವೆಂಬ ಕಾವ್ಯದೊಳ್ವಸ್ತುನಮಸ್ಕೃತಿರೂಪ ಮಂಗಲಮಂ
ಪೇಳಿದ ಹದಿನೆಂಟನೆಯ ಸಂಧಿ ಸಂಪೂರ್ಣಂ (ಅಂತೂ ಸಂ॥ ೧೮ಕ್ಕಂ ಪದ ೯೯೯)
ಇಂತು ಶ್ರೀಮದ್ವಿವೇಕಾಭರಣವೆಂಬ ವೇದಾನ್ತಕಾವ್ಯ ಸಂಪೂರ್ಣಂ

---

ಶಸ್ತ್ರಾಸ್ತ್ರಗಳ ಅಪಘಾತ ಸೋಂಕದಿರುವ ನಿರಾಘಾತನಾಗಿರುವೆ. ಇಂಥ ನಿನಗೆ ಜಯಜಯವು! ಸನ್ಮಾರ್ಗಿಗಳು, ಸದಾವಲಂಬಿಗಳು, ಸನ್ನಿಷ್ಠರ, ಸದಾತ್ಮರು, ಸತ್ಪರಾಯಣರು ಆದವರ ಹೃದಯಕ್ಕೊಪ್ಪಾಗಿರುವಂತೆ ನಿಷ್ಕ್ರಿಯನೂ ಸರ್ವಾತ್ಮನೂ ಆಗಿರುವ ಸನ್ಮತನೆ-ಪರಮಪೂಜ್ಯನೆ ನಿನಗೆ ಜಯಜಯವು! ಮುಕ್ಕಣ್ಣನಾದ್ದರಿಂದ ಎಲ್ಲ ಲೋಕವಿಚಿತ್ರಾಕ್ಷನೆ! ನಿನಗೆ ಹುಟ್ಟುಹೊಂದುಗಳಿಲ್ಲದ ಭವವಿದೂರನೆ ಜಯಜಯವಾಗಲಿ! ಜ್ಞಾನಾಗ್ನಿಯೆಂಬ ಸರ್ವಲೋಕವಿಶೇಷವಾದ ವಿರುದ್ಧಕಣ್ಣಾಗಿರುವ ವಿರೂಪಾಕ್ಷನೆ! ನಿನಗೆ ಜಯಜಯವು. ಪಂಡಿತರ ವಾಸಸ್ಥಾನವಾದ ವಿದ್ಯೆಗಳಲ್ಲಿ ಸಂಪೂರ್ಣವಾದ ೬೪ ಕಲೆಗಳಲ್ಲಿಯೂ ಇನ್ನಿಲ್ಲವೆಂಬಷ್ಟು ದಕ್ಷನಾಗಿರುವ ಸರ್ವಕಲಾಧ್ಯಕ್ಷನೆ ಜಯಜಯವು! ಜಗತ್ತಿನ ಭೋಗಗಳಿಂದ ವಿಮುಖರಾದ ಜ್ಞಾನಿಗಳನ್ನು ತನ್ಮಾತ್ಮರೂಪದಿಂದ ಕಾಪಾಡುವ ಬ್ರಹ್ಮವಿದ್ಯೆಯಲ್ಲಿ ಪಾರಂಗತನಾಗಿರುವ ದಕ್ಷನೆ ನಿನಗೆ ಜಯಜಯವು. ದೇವತೆಗಳಲ್ಲಿಯೂ ಹೆಚ್ಚಿನಶ್ರೀಮಂತರಲ್ಲಿಯೂ ಮಿನುಗುವ ಪುಣ್ಯದ ತೇಜಸ್ಸಿನ ಕಾಂತಿಯನ್ನೆಲ್ಲವನ್ನು ಪೂರ್ಣ ವೈರಾಗ್ಯದ ಜ್ಞಾನದಿಂದ ನಿಮಿಷಮಾತ್ರದಲ್ಲಿ ಸಪ್ಪೆಯಾಗಿಸಬಲ್ಲ ಬ್ರಹ್ಮಕಲಾದಕ್ಷನೆ! ನಿನಗೆ ಜಯಜಯವು. ಎಲ್ಲಾ ಅಪಾಯಗಳೂ ಹತವಾಗುಳ್ಳ ನಿರಪಾಯನಾದ ಹತಾಪಾಯನೆ ಜಯಜಯವು. ಅಸಹ್ಯವಾದ ಮರಣಭಯವನ್ನು ಕೊಡುವ ಕಾಲಪುರುಷನು-ಅನಾತ್ಮಾಭಿಮಾನದ ಅಜ್ಞಾನನಿದ್ರೆಯಲ್ಲಿರುವ ಜಗತ್ತಿನ ಜೀವರು ತಮ್ಮ ಮರಣದುಃಖದಿಂದ ಕಳವಳಗೊಂಡು ಕನವರಿಸುತ್ತಿರುವಂತೆ ಅವರನ್ನು ಮಾಡುತ್ತಿರುವ ಆ ಉರುಕಾಲಭಯ ಹರಲೀಲನಾದ ಜಿತಕಾಲನೆ! ಭಯರಹಿತನಾದ ಅಭಯನೆ ನಿನಗೆ ಜಯಜಯವು. ಲೋಕಪಾವನಚರಿತರಾದ ಶುಭರು! ನಿರ್ಮಲವಾದ ಉದಾರಹೃದಯರಾದ ಜ್ಞಾನಿಗಳು-ತಮ್ಮ ಹೃತ್ಪುಂಡರೀಕದ ಮನೋರಂಜಿತವಾದ ಪವಿತ್ರಾಸನದಲ್ಲಿ ತಮ್ಮ ಆತ್ಮನ ರೂಪಿನಿಂದ ನಿನ್ನನ್ನು ಕುಳ್ಳಿರಿಸಿ, ಧ್ಯಾನಿಸಿ, ಸ್ಮರಿಸಿ, ಸೋಹಂಭಾವದಿಂದ ಸದಾ ಪೂಜಿಸಿ ನಮಸ್ಕರಿಸಿಕೊಳ್ಳುತ್ತ, ಅವರಿಂದ ಆರಾಧಿಸಲ್ಪಡುತ್ತಿರುವ ಶುಭಶ್ಲೋಕಭಾವಕನೆ ನಿನಗೆ ಜಯಜಯವಾಗಲಿ! ಜೀವರನ್ನು ಸಂಸಾರ ದುಃಖಪರಂಪರೆಗಳು ತಮ್ಮ ಸುತ್ತಮುತ್ತಲಿನ ಎಲ್ಲಾ ಕಡೆಯಿಂದಲೂ ಬಂದು ಆವರಿಸುತ್ತಿರುವವು. ಅವರಿಗೆ ಮರಣದುಃಖದ ಭಯವನ್ನಂತು ತಮ್ಮ ಒಳಹೊರಗುಗಳಲ್ಲೆಲ್ಲ ಸಂದು ಬಿಡದಂತೆ ಬಳಸಿ ವ್ಯಾಪಿಸಿಕೊಂಡಿರುವದು. ಜೀವರೆಲ್ಲರೂ ಅನರಿಂದ ದಿಂಗ್ಮೋಹಿತರಾಗಿರುತ್ತಿದ್ದರೂ ತನ್ಮಾತ್ಮರೂಪದಿಂದ ಜೀವರ ಪ್ರತಿಯೊಂದು ಹೃದಯದೇಶದಲ್ಲಿ ನೀನಿರುತ್ತಿದ್ದರು ಆ ನಿನಗೆ ಮಾತ್ರ ಆ ಜೀವರು ಪಡುತ್ತಿರುವ ದುಃಖವಾಗಲಿ ಭಯವಾಗಲಿ ಲೇಶವೂ ಇಲ್ಲದಂತೆ ಹೋಗಲಾಡಿಸಲ್ಪಟ್ಟಿರುವ ಸಂಸಾರದುಃಖದ ವಿಧೂತಾರ್ತಿಯೆ ಜಯಜಯವು. ನೈಷ್ಠಿಕ ಬ್ರಹ್ಮಚಾರಿಗಳೂ ಬ್ರಹ್ಮಮಾನಸಪುತ್ರರೂ ಆಗಿರುವ ಸನಕ ಸನಂದನಾದಿಗಳ ನೆವದಿಂದ ಇಡಿಯ ಜಗತ್ತಿಗೇ ಪರಮಾರ್ಥಜ್ಞಾನನನ್ನನುಗ್ರಹಿಸುತ್ತ ಸರ್ವೈಶ್ವರ್ಯವಿಭೂತಿಗಳಿಂದ ಒಪ್ಪುತ್ತಿರುವ

ಶ್ರೀ ಗುರುದಕ್ಷಿಣಾಮೂರ್ತಿಯೆ ನಿನಗೆ ನಿತ್ಯವೂ ಸರ್ವಕಡೆಗಳಿಂದಲೂ ಜಯಜಯವಾಗಲಿ. ನಿನ್ನ ಸ್ವರೂಪರಾದ ಸರ್ವಜೀವರಿಗೂ ಜಯಮಂಗಳಗಳನ್ನು ಬಿಡದೆ ನಿತ್ಯವೂ ವರ್ಷಿಸುತ್ತಿರು!

ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯರೂ ವೇದ ವೇದಾಂತ ನಿಖಿಲ ಶಾಸ್ತ್ರ ಪಾರಂಗತ ವಿದ್ವನ್ಮಣಿಗಳಿಂದ ಅನವರತ ಸೇವ್ಯ ಪಾದಾರವಿಂದರೂ, ಶ್ರೀಮನ್ಮಹಿಸೂರ ಪುರವರದ ಹೊಳೆನರಸೀಪುರ ಇತ್ಯಪರನಾಮಕ ಭಕ್ತಿವರ್ಧನ ಪುಣ್ಯಕ್ಷೇತ್ರದಲ್ಲಿ ವಿರಾಜಮಾನರೂ ಆಗಿರುವ ಶ್ರೀ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಗುರುಸ್ವಾಮಿಗಳ ಪೂಜ್ಯ ಪಾದಾರವಿಂದರಜ ಶಿರಸಾಸೇವಿಯೂ ಮತ್ತು ತತ್ಪ್ರಸಾದೈಕಲಭ್ಯ ಪ್ರಾಚೀನ ಅರ್ವಾಚೀನ ಉಭಯವೇದಾಂತಗಳಲ್ಲಿ ಲೇಶಮಾತ್ರ ಪರಿಚಿತನೂ ಆಗಿರುವ ಪಂಡಿತ್ ಬಿ. ಎಚ್. ರಾಮನಾಥಸ್ವಾಮಿ ವಿರಚಿತ ಶ್ರೀಪರಮೇಶ್ವರ ಪ್ರಾಸಾದಿಕರೂಪವಾದ ತತ್ತ್ವಾರ್ಥಸಂದರ್ಶಿನೀ ನಾಮಕ ಟೀಕೆ ಮತ್ತು ಸಾರ ಇವುಗಳು ಸಂಪೂರ್ಣಂ.

ಶ್ರೀಗುರು ಪರಮೇಶ್ವರಪಾದಾರವಿಂದಾರ್ಪಣಮಸ್ತು.

## ಈ ವಿವೇಕಾಭರಣ ಕಾವ್ಯವನ್ನು ಬರೆದ ಕಾಲಾದಿಗಳನ್ನು ಸೂಚಿಸುವ ಪದ್ಯ

ಭೂತಧಾತ್ರೀಧರ ವರೇಭ ವಿ-।
ಧಾತೃಮುಖ ಸಂಜ್ಞಾಬ್ದಗಳ್ಪ-।
ದ್ಯೋತಚಂದ್ರರ ಮಾನದಿಂ ಕಲಿಯೋಳ್ಕಡೆಗೆ ಸಾರೆ ॥
ಧಾತು ಸಂವತ್ಸರದೆ ಕೃಷ್ಣ ಧ-।
ರಾತಲೇಂದ್ರನ ಮುಖದೊಳೊಗೆದುದ-।
ಪೇತ ಪಾಶವೆನಿಪ ವಿವೇಕಾಭರಣ ಕಾವ್ಯವಿದು ॥ ೧ ॥

---

## ಶ್ರೀಮತ್ಸಚ್ಚಿದಾನಂದ ಸಹಜಾನಂದಭಾರತೀಪರಮಗುರುವರೇಣ್ಯರು

ಖ್ಯಾತಿಯಿಂ ಗಿರಿಕುಧರ ನಿಧಿಯು ವಿ-।
ಧಾತೃಮುಖ ಸಂಜ್ಞಾಬ್ದಗಳ್ಪ-।
ದ್ಯೋತ ಚಂದ್ರರ ಮಾನದಿಂ ಕಲಿಯೋಳ್ಕಡೆಗೆ ಸಾರೆ ॥
ಧಾತು ಸಂವತ್ಸರ ನಭಸ್ಯವ-।
ದಾತ ಪಕ್ಷಾಂತದ ತಿಥಿಯ ಭೃಗು-।
ಜಾತ ವಾಸರದಲ್ಲಿ ಸಹಜಾನಂದರಿದ ಬರೆದರ್ ॥ ೨ ॥

(1) **ಶ್ರೀ ಸಾಧು ಚಿಕ್ಕಲಿಂಗಣ್ಣಸ್ವಾಮಿಯವರ ಜೀವನ ಚರಿತ್ರೆ** :—ವೇದಾಂತ ವಿಚಾರದಲ್ಲಿ ಸುಪ್ರಸಿದ್ಧರಾಗಿ ನುರಿತ ಒಬ್ಬ ಪುಣ್ಯ ಪುರುಷರ ಈ ಜೀವನ ಚರಿತ್ರೆಯನ್ನು ಒಮ್ಮೆ ಓದುವದರಿಂದ ಜಿಜ್ಞಾಸುಗಳಿಗೆ ಲಾಭವುಂಟು. ಕಡಮೆ ಬೆಲೆ 1-4-0 0-12-0

(2) **ಜಿಜ್ಞಾಸುಗಳ ತೊಡಕು** :—ತತ್ತ್ವಜಿಜ್ಞಾಸುಗಳಿಗೆ ಮನನೀಯ ಗ್ರಂಥವಾದ ಇದರಲ್ಲಿ ವೇದಾಂತವನ್ನು ತಿಳಿಸುವ ಎರಡು ಪ್ರಧಾನವಾದವುಗಳನ್ನು ಕುರಿತು ತುಲನಾತ್ಮಕದೃಷ್ಟಿಯಿಂದ ವಿಮರ್ಶಿಸಿರುತ್ತದೆ. ಬೆಲೆ 0-4-0

(3) **ಸಂಧ್ಯಾವಂದನೆಯ ಕ್ರಮ** :-ಯಜುರ್ವೇದೀಯ, ಕ್ಷತ್ರಿಯ ವೈಶ್ಯರಿಗೆ 0-4-0

**ಸೂಚನೆ**—ಕೆಲವೇ ಪ್ರತಿ ಉಳಿದಿರುವ ಇವು ಪುನಃ ಪ್ರಿಂಟಾಗುವ ಸಂಭವವಿರುವದಿಲ್ಲ.

(4) **ಗುರುಪೂಜಾವಿಧಿ** :—ಗುರುಭಕ್ತರುಗಳಿಗೆ ಅವಶ್ಯಕವಾದ್ದು, ಅಚ್ಚಿನಲ್ಲಿದೆ.

ವೇದಾಂತ ಗ್ರಂಥವಾದ ಈ '**ವಿವೇಕಾಭರಣ**'ಕಾವ್ಯ ದೊರೆಯುವ ಊರು ಮತ್ತು ಸ್ಥಳಗಳು.

**ಬೆಂಗಳೂರಿನಲ್ಲಿ** :—೧. ಶ್ರೀ ಕಬೀರ್‌ನಾಥಸ್ವಾಮಿಯವರ **ಬ್ರಹ್ಮವಿದ್ಯಾಶ್ರಮ**. ೨. ಶ್ರೀ ಹರಿಹರಾನಂದಭಾರತೀಸ್ವಾಮಿಯವರು **ಅನಂತಾಶ್ರಮ**. ೩. ಶ್ರೀ ಶಾಂತಾನಂದ ಸ್ವಾಮಿಯವರು **ಶಿವ್ಪವಿಲಾಸ** ಗಾಂಧೀನಗರ. ೪. ಶ್ರೀ ಮಹಾದೇವ ಚೈತನ್ಯಸ್ವಾಮಿಯವರು **ಸಿದ್ಧಾಶ್ರಮ** ಮಲ್ಲೇಶ್ವರ. ೫. ಸಂತ ಶ್ರೀ ಗೋವಿಂದಸ್ವಾಮಿಯವರ **ಶ್ರೀ ಸಿದ್ಧಾಶ್ರಮ** ವಾಲ್ಕನೆಕ್ರಾಸ್ ಚಾಮರಾಜಪೇಟೆ. ೬. ಶ್ರೀ ಪರಮೇಶ್ವರಾನಂದ ಭಾರತೀಸ್ವಾಮಿಯವರು **ಶ್ರೀ ಸಿದ್ಧಾರೂಢಾಶ್ರಮ** ಜಯನಗರ. ೭. ಶ್ರೀ ರಂಗಪ್ಪಸ್ವಾಮಿ **ವಾನಪ್ರಸ್ಥಾಶ್ರಮ** ತಿಮ್ಮೇನಹಳ್ಳಿ ಮಾಗಡಿರೋಡು ನಾಲ್ಕನೇ ಮೈಲಿ. ೮. ಶ್ರೀ ಭಿಕ್ಷುನಾಥಸ್ವಾಮಿ **ಭಿಕ್ಷುಕಾಶ್ರಮ** ನಾಯಂಡಹಳ್ಳಿ ಕೆಂಗೇರಿ ಪೋಸ್ಟ್. ೯. **ಸತ್ಯಶೋಧನ ಪುಸ್ತಕ ಭಂಡಾರ** ಕೋಟೆ. ೧೦. ಟಿ. ಎನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್ಸ್ ಬುಕ್ ಡಿಪೋ. ಮತ್ತು ೧೧. **ವೀರಶೈವ ಸಾಹಿತ್ಯ ಭಂಡಾರ** ಕಲ್ಯಾಣಭವನ ಚಿಕ್ಕಪೇಟೆ.

**ಮೈಸೂರಿನಲ್ಲಿ** :—೧. **ಅಕ್ಕನಬಳಗ** ನ್ಯೂ ಸಯ್ಯಾಜಿರಾವ್ ರೋಡು, ಕೆ. ಆರ್. ಮೊಹಲ್ಲ. ೨. **ವೇದಾಂತಿ ಶ್ರೀ ಚಿಕ್ಕಲಿಂಗಣ್ಣಸ್ವಾಮಿಯವರ ಮನೆ** ವಾಣೀವಿಲಾಸ ರೋಡ್ ಕ್ರಾಸ್, ಜಟ್ಟಿಗಳ ಬೀದಿ. ೩. **ಶ್ರೀ ಹಾಲೂಬಾಯ್** ನಂಜುಂಡಪ್ಪ ಅಂಡ್ ಸನ್ಸ್, ಕಬೀರ್ ರೋಡ್ ಕ್ರಾಸ್, ಮಂಡಿಮೊಹಲ್ಲ.

ಶ್ರೀ ಸಂತುರಾಂಸ್ವಾಮಿ **ಆನಂದಾಶ್ರಮ** ಕಮತಂಪಲ್ಲಿ ಶ್ರೀನಿವಾಸಪುರ ತಾ|| ಕೋಲಾರ ಡಿ||

**ದಾವಣಗೆರೆ ಸಿಟಿ**:—ಶ್ರೀಮುಪ್ಪಿನಾರ್ಯ ಪರಮಹಂಸಸ್ವಾಮಿ ಮಹಾರಾಜ್ **ಐರಣಿಮಠ**.

**ಹುಬ್ಬಳ್ಳಿ** :—ವಾಗ್ವಿಲಾಸ ಬುಕ್ ಡಿಪೋ; **ಧಾರವಾಡ ಕರ್ನಾಟಕ ಸಾಹಿತ್ಯಭಂಡಾರ.**

**ಗದಗ** :—**ಶಾಬಾದಿಮಠ ಬುಕ್ ಡಿಪೋ.**

**ಸೂಚನೆ**:—ವ್ಯಾಪಾರಿಗಳಿಗೆ ಕಮೀಷನ್ ಉಂಟು, ಅಂಚೆ ಹಾಸಲು ಪ್ರತ್ಯೇಕ. ರೈಲ್ವೆದ್ವಾರಾ ಹತ್ತಕ್ಕಿಂತ ಹೆಚ್ಚಿನ ಪ್ರತಿಗಳನ್ನು ಒಮ್ಮೆಯೇ ತರಿಸಿಕೊಂಡರೆ **ಫ್ರೀ ಡಿಲವರಿ** ಕೊಡಲಾಗುತ್ತದೆ.

---

ಈ ಗ್ರಂಥದ ೧೭೨ನೆ ಪೇಜಿನವರೆಗೆ ಶ್ರೀ ಪದ್ಮನಾಭ ಪ್ರೆಸ್ಸಿನಲ್ಲೂ, ೧೭೩ನೇ ಪೇಜಿನಿಂದ ಗ್ರಂಥವು ಪೂರಾ ಶ್ರೀ ಗೀತಾಪ್ರೆಸ್‌ನಲ್ಲೂ ಮುದ್ರಿಸಲ್ಪಟ್ಟಿರುತ್ತದೆ.